ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ, 2022 : ದಶವಾರ್ಷಿಕ ವಿಶೇಷ ಸಂಚಿಕೆ



ಹಿಂದೂಧರ್ಮ ಎಂದರೇನು?

ಕೃಷಿ ಬಿಕ್ಕಟ್ಟು - ವಿವಿಧ ಆಯಾಮಗಳು

ಕನ್ನಡ-ಕರ್ನಾಟಕ ಪರಂಪರೆಯ ಇಂದಿನ ದುರಂತ ಕಥೆ

ಬೆಲೆ ರೂ.೭೫

ಚೆನ್ನವೀರ ಕಣವಿ | ಸುಬ್ರಾಯ ಚೊಕ್ಕಾಡಿ | ವೈದೇಹಿ | ವಿವೇಕ ರೈ | ಲಕ್ಷ್ಮೀಶ ತೋಳ್ಪಾಡಿ | ನಾಗೇಶ ಹೆಗಡೆ | ಜಯಂತ ಕಾಯ್ಕಿಣಿ
ರಾಜೇಂದ್ರ ಚೆನ್ನಿ | ವಿಜಯೇಂದ್ರ ಪಾಟೀಲ | ಮಿರ್ಜಾ ಬಷೀರ್ | ಟಿ.ಎನ್. ವೇಣುಗೋಪಾಲ್ | ಅಮರೇಶ ನುಗಡೋಣಿ | ಕೆ. ಪುಟ್ಟಸ್ವಾಮಿ
ಸವಿತಾ ನಾಗಭೂಷಣ | ಎಸ್. ಶ್ರೀರಾಮ್ | ಕೆ.ಜೆ. ಸಚ್ಚಿದಾನಂದ | ವಿನಯಾ ಒಕ್ಕುಂದ | ತಾರಿಣಿ ಶುಭದಾಯಿನಿ | ಸುಬ್ಬು ಹೊಲೆಯಾರ್
ಎ. ನಾರಾಯಣ | ಮಮತಾ ರೈ ಗೀತಾ ವಸಂತ | ಎನ್. ಎಸ್. ಗುಂಡೂರ | ಜ.ನಾ. ತೇಜಶ್ರೀ | ಎಂ. ರಾಘವೇಂದ್ರ | ನಿತ್ಯಾನಂದ ಬಿ. ಶೆಟ್ಟಿ
ಟಿ. ಅವಿನಾಶ್ | ಎಸ್. ಸಿರಾಜ್ ಅಹಮದ್ | ಶುಭಾ ಮರವಂತೆ | ಬಿ.ಜಿ. ಗುಜ್ಜಾರಪ್ಪ | ವಿಜಯಶ್ರೀ ಹಾಲಾಡಿ | ಎಂ. ರಾಜು | ಟಿ. ಎಲ್. ರೇಖಾಂಬ

ಪುಸ್ತಕ ಪ್ರಕಾಶನ
ನಂ. 91, 9 ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು -570 009
ಫೋನ್: 0821–2545 774

ಪುಸ್ತಕ ಪ್ರಕಾಶನ
ಬುಕ್‌ಪೋಸ್ಟ್ ಸರ್ವಿಸ್, ಪಿ.ಬಿ.ನಂ. 58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ – 577 132
ಮೊಬೈಲ್/ವ್ಯಾಟ್ಸ್‌ಆ್ಯಪ್: +91 94482 03730



ಪುಸ್ತಕ ಬೆಲೆ ಪಟ್ಟಿ – ೨೦೨೨*

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:
ಕಿರಗೂರಿನ ಗಯ್ಯಾಳಿಗಳು ...೯೦.೦೦
ಕರ್ವಾಲೊ ...೧೦೫.೦೦
ಚಿದಂಬರ ರಹಸ್ಯ ...೨೧೬.೦೦
ಸಹಜ ಕೃಷಿ ...೬೦.೦೦
ಪರಿಸರದ ಕತೆ ...೧೦೫.೦೦
ಮಿಸ್ಸಿಂಗ್ ಲಿಂಕ್ ...೯೦.೦೦
ಅಲೆಮಾರಿಯ ಅಂಡಮಾನ್ ಹಾಗೂ
ಮಹಾನದಿ ನೈಲ್ ...೧೧೪.೦೦
ಜುಗಾರಿ ಕ್ರಾಸ್ ...೨೧೬.೦೦
ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು ...೮೭.೦೦
ಫ್ಲೈಯಿಂಗ್ ಸಾಸರ್ಸ್ (೧) ...೮೭.೦೦
ಫ್ಲೈಯಿಂಗ್ ಸಾಸರ್ಸ್ (೨) ...೮೭.೦೦
ಕಾಡಿನ ಕತೆಗಳು(೧) – ಬೆಳ್ಳಂದೂರಿನ ನರಭಕ್ಷಕ ...೭೫.೦೦
ಕಾಡಿನ ಕತೆಗಳು(೨) – ಪೆದ್ದಚೆರುವಿನ ರಾಕ್ಷಸ ...೭೫.೦೦
ಕಾಡಿನ ಕತೆಗಳು(೩) – ಜಾಲಹಳ್ಳಿಯ ಕುರ್ಕ ...೭೫.೦೦
ಕಾಡಿನ ಕತೆಗಳು(೪) – ಮುನಿಶಾಮಿ ಮತ್ತು
ಮಾಗಡಿ ಚಿರತೆ ...೭೫.೦೦
ರುದ್ರಪ್ರಯಾಗದ ಭಯಾನಕ ನರಭಕ್ಷಕ ...೧೦೫.೦೦
ಕನ್ನಡನಾಡಿನ ಹಕ್ಕಿಗಳು(೧)–ಮಿಂಚುಳ್ಳಿ ...೧೦೨.೦೦
ಕನ್ನಡನಾಡಿನ ಹಕ್ಕಿಗಳು(೨)–
ಹೆಜ್ಜೆ ಮೂಡದ ಹಾದಿ ...೯೬.೦೦
ಹಕ್ಕಿ – ಪುಕ್ಕ ...೪೧೧.೦೦
ಅಣ್ಣನ ನೆನಪುಗಳು ...೨೨೫.೦೦
ಹುಲಿಯೂರಿನ ಸರಹದ್ದು ...೧೦೫.೦೦
ಅಬಚೂರಿನ ಪೋಸ್ಟಾಫೀಸು ...೯೦.೦೦
ಮಿಲೆನಿಯಮ್ (೧) – ಹುಡುಕಾಟ ...೮೭.೦೦
ಮಿಲೆನಿಯಮ್ (೨) – ಜೀವನ ಸಂಗ್ರಾಮ ...೮೭.೦೦
ಮಿಲೆನಿಯಮ್ (೩) – ಪೆಸಿಫಿಕ್ ದ್ವೀಪಗಳು ...೮೭.೦೦
ಮಿಲೆನಿಯಮ್ (೪) – ಚಂದ್ರನ ಚೂರು ...೮೭.೦೦
ಮಿಲೆನಿಯಮ್ (೫) – ನೆರೆಹೊರೆಯ ಗೆಳೆಯರು ...೮೭.೦೦
ಮಿಲೆನಿಯಮ್ (೬) – ಮಹಾಯುದ್ಧ(೧) ...೮೭.೦೦
ಮಿಲೆನಿಯಮ್ (೭) – ಮಹಾಯುದ್ಧ(೨) ...೮೭.೦೦
ಮಿಲೆನಿಯಮ್ (೮) – ಮಹಾಯುದ್ಧ(೩) ...೮೭.೦೦
ಮಿಲೆನಿಯಮ್ (೯) – ದೇಶ ವಿದೇಶ(೧) ...೮೭.೦೦
ಮಿಲೆನಿಯಮ್ (೧೦) – ದೇಶ ವಿದೇಶ(೨) ...೮೭.೦೦
ಮಿಲೆನಿಯಮ್ (೧೧) – ದೇಶ ವಿದೇಶ(೩) ...೮೭.೦೦
ಮಿಲೆನಿಯಮ್ (೧೨) – ದೇಶ ವಿದೇಶ(೪) ...೮೭.೦೦
ಮಿಲೆನಿಯಮ್ (೧೩) – ವಿಸ್ಮಯ ವಿಶ್ವ(೧) ...೮೭.೦೦
ಮಿಲೆನಿಯಮ್ (೧೪) – ಮಹಾ ಪಲಾಯನ ...೮೭.೦೦
ಮಿಲೆನಿಯಮ್ (೧೫) – ವಿಸ್ಮಯ ವಿಶ್ವ(೨) ...೮೭.೦೦
ಮಿಲೆನಿಯಮ್ (೧೬) – ಅಡ್ವೆಂಚರ್ ...೮೭.೦೦
ಮಾಯಾಲೋಕ–೧ ...೨೧೬.೦೦
ಪಾಕ ಕ್ರಾಂತಿ ಮತ್ತು ಇತರ ಕತೆಗಳು ...೮೭.೦೦
ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ ...೬೦.೦೦
ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು
ಇತರ ಕವನಗಳು ...೬೦.೦೦
ವಿಮರ್ಶೆಯ ವಿಮರ್ಶೆ ...೧೮೩.೦೦
ಮಾಯೆಯ ಮುಖಗಳು(ಚಿತ್ರ–ಲೇಖನ) ...೬೯೦.೦೦
ಹೊಸ ವಿಚಾರಗಳು ...೪೮೦.೦೦
ಕಾಡು ಮತ್ತು ಕ್ರೌರ್ಯ ...೧೨೦.೦೦

ಶ್ರೀಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:
ವಿಸ್ಮಯ(೧), (೨), (೩) ಪ್ರತಿಯೊಂದು ...೮೭.೦೦

*ಹೊಸ ಆವೃತ್ತಿ (Edition)
ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರಬಹುದು.

ಪ್ಯಾಪಿಲಾನ್(೧), (೨), (೩) ಪ್ರತಿಯೊಂದು ...೧೬೨.೦೦
ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ – ಡಾ. ವಿ.ವಿ.ಬೆಳವಾಡಿ
ನಡೆಯುವ ಕಡ್ಡಿ! ಹಾರುವ ಎಲೆ! ...೮೭.೦೦
ಶ್ರೀ ಪ್ರದೀಪ ಕೆಂಜಿಗೆ : ಬರ್ಮುಡಾ ಟ್ರ್ಯಾಂಗಲ್ ...೮೭.೦೦
ಅದ್ಭುತ ಯಾನ ...೧೦೮.೦೦
ಹೆಬ್ಬಾವಿನೊಡನೆ ಹೋರಾಟ ...೧೨೦.೦೦
ಶ್ರೀ ಎಮ್. ಶಿವಕುಮಾರ್:
ಕಂಪ್ಯೂಟರ್ ಕಲಿಯಿರಿ ...೧೪೭.೦೦
ಗಡಿಯಾರ ವಿಕಾಸದ ಹಾದಿಯಲ್ಲಿ ...೬೬.೦೦
ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ ಗೌಡರು:
ಅಚ್ಚಗನ್ನಡ ನುಡಿಕೋಶ ...೩೬೦.೦೦
ಶ್ರೀ ನರೇಂದ್ರ ರೈ ದೇರ್ಲ: ಸಾವಯವ ಕೃಷಿ ...೬೦.೦೦
ತೇಜಸ್ವಿ ಪತ್ರಗಳು ...೪೫೦.೦೦
ಶ್ರೀ ಕೃಪಾಕರ – ಸೇನಾನಿ:
ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು ...೧೦೮.೦೦
ಕೆನ್ನಾಯಿಯ ಜಾಡಿನಲ್ಲಿ ...೧೬೨.೦೦
ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ:
ತರಗತಿಗಳಲ್ಲಿ ಕುವೆಂಪು ...೧೯೮.೦೦
ಶ್ರೀ ದೇವನೂರು ಮಹಾದೇವ: ಕುಸುಮಬಾಲೆ ...೯೦.೦೦
ದ್ಯಾವನೂರು ಹಾಗೂ ಒಡಲಾಳ ...೯೬.೦೦
ಶ್ರೀಮತಿ ತಾರಿಣಿ ಚಿದಾನಂದ:
ಮಗಳು ಕಂಡ ಕುವೆಂಪು ...೩೭೦.೦೦
ಶ್ರೀಮತಿ ಪದ್ಮಾ ಶ್ರೀರಾಮ:
ಗಿಡಗಂಟೆಯಾ ಕೊರಳು ...೭೮.೦೦
ಡಾ. ಕೆ.ಚಿದಾನಂದ ಗೌಡ:
ಬದುಕು... ಬೆಳಕು... ಚುಟುಕು...! – ಭಾಗ ೧ ...೮೯.೦೦
ಬದುಕು... ಬೆಳಕು... ಚುಟುಕು...! – ಭಾಗ ೨ ...೯೦.೦೦
ಶ್ರೀಮತಿ ರಾಜೇಶ್ವರಿ ತೇಜಸ್ವಿ: ನನ್ನ ತೇಜಸ್ವಿ ...೩೬೯.೦೦
















ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ ೨೦೨೨ (ದಶವಾರ್ಷಿಕ ವಿಶೇಷಾಂಕ) ಸಂಪಾದಕ: **ಡಿ.ಎಸ್. ನಾಗಭೂಷಣ** ಸಂಪುಟ: ೧೧ ಸಂಚಿಕೆ: ೧

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೯೫೬೧೨ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,



ನಾವೀಗ ಹತ್ತು ವರ್ಷ ಪೂರೈಸಿ ಹನ್ನೊಂದನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಈ ಸಂಭ್ರಮದ ಗುರುತಾಗಿ ಹನ್ನೊಂದನೇ ವರ್ಷದ ಮೊದಲ ಸಂಚಿಕೆಯನ್ನು ನಮ್ಮ ಹತ್ತನೇ ವಾರ್ಷಿಕ ವಿಶೇಷಾಂಕವಾಗಿ ನಿಮ್ಮ ಕೈಲಿಡುತ್ತಿದ್ದೇವೆ. ಈ ವಿಶೇಷ ಸಂಪುಟ ನಮ್ಮ ಈವರೆಗಿನ ಎಲ್ಲ ವಿಶೇಷಾಂಕಗಳಂತೆಯೇ ವಿಶೇಷವಾಗಿರುವುದನ್ನು ನೀವು ಗಮನಿಸಬಹುದು: ಕಾಲದ ಎಲ್ಲ ಮೂಲೆಗಳಿಂದ ಬಂದ ಕರೆಗಳಿಗೆ ತುಡಿಯುವ ಲೇಖನಗಳು ಇಲ್ಲಿವೆ. ಅಂದರೆ ಸಾರ್ವಜನಿಕ ಜೀವನದ ಎಲ್ಲ ಆಯಾಮಗಳಿಗೆ-ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ-ಸಂಬಂಧಿಸಿದ ಬರಹಗಳೂ ಇಲ್ಲಿವೆ. ಹಾಗೇ ಕನ್ನಡದ ಅತ್ಯುತ್ತಮ ಸತ್ವವನ್ನು ಪ್ರತಿನಿಧಿಸುವ ಕಥೆ-ಕವನ-ವಿಮರ್ಶೆ- ಹಾಸ್ಯ ಬರಹಗಳಿವೆ. ಕನ್ನಡ ಚಲನಚಿತ್ರ ರಂಗದ ಒಂದು ಅಪರೂಪದ ನೆನಪಿನ ಚಿತ್ರವೂ ಇಲ್ಲಿದೆ. ಬಹುಮುಖ್ಯವಾಗಿ ನಮ್ಮ ಸಾರ್ವಜನಿಕ ಜೀವನದ ಇತ್ತೀಚಿನ ದಿನಗಳ ಅವನತಿಯನ್ನು, ಕನ್ನಡ ಬೌದ್ಧಿಕ ಲೋಕದ ಅವನತಿಯ ದುರಂತ ಕಥೆಯನ್ನು ಹೇಳುವ ಮೂಲಕ ಜಿಜ್ಞಾಸೆಗೆ ಒಳಪಡಿಸುವ ಒಂದು ಪ್ರಯತ್ನವೂ ಇಲ್ಲಿದೆ.

ಹತ್ತು ವರ್ಷಗಳ ಹಿಂದೆ ಅಂದರೆ ೨೦೧೧ರ ಆಗಸ್ಟ್‌ನಲ್ಲಿ ನಾನು ಇಂದು 'ಹೊಸ ಮನುಷ್ಯ' ಎಂದು ಕರೆಯಲಾಗುವ ಈ ಮಾಸಿಕವನ್ನು 'ನವಮಾನವ' ಎಂಬ ಹೆಸರಿನಲ್ಲಿ ಆರಂಭಿಸಿದಾಗ ಅದು ಇಷ್ಟು ವರ್ಷಗಳ ಕಾಲ ಬದುಕುಳಿಯುವುದೆಂಬ ಕಲ್ಪನೆಯೂ ನನಗಿರಲಿಲ್ಲ. ಏಕೆಂದರೆ ಇದನ್ನು ಆಗ ರಾಜಕೀಯ ದಿಗಂತದಲ್ಲಿ ಅಸ್ತಂಗತವಾಗುತ್ತಿದ್ದ ಸೂರ್ಯನಂತಿದ್ದ ಸಮಾಜವಾದದ ಹೆಸರಿನಲ್ಲಿ ಆರಂಭಿಸಿದ್ದೆ! ಆ ಹಿಂದಿನ ನಾಲ್ಕು ದಶಕಗಳ ಕಾಲ ದೇಶದ ನನ್ನಂತಹ ಕೋಟ್ಯಾಂತರ ಜನರ ಬದುಕಿನ ಅನೇಕ ರೋಮಾಂಚನಗಳ ಕ್ಷಣಗಳಿಗೆ ಕಾರಣವಾಗಿದ್ದ ಶಬ್ದವದು. ಅದನ್ನು ಅದರ ಈ ಕೊನೆಯ ಕೆಲವು ವರ್ಷಗಳಲಿ ಯಾರಾರೋ, ಯಾವುದಾವುದಕ್ಕೋ ಬಳಸಿ ವಿರೂಪಗೊಳಿಸಲಾಗಿತ್ತು; ಅಶ್ಲೀಲಗೊಳಿಸಲಾಗಿತ್ತು. ಅದನ್ನು ಮತ್ತೆ ಅದರ ಉಜ್ವಲತೆಯೊಂದಿಗೆ ಪುನರನ್ವೇಷಿಸಿಕೊಳ್ಳುವ ಪ್ರಯತ್ನ ಇದಾಗಿತ್ತು. ಹಳೆಯದನ್ನು ಮತ್ತೆ ತರುವುದಾಗಿರಲಿಲ್ಲ ಈ ಪ್ರಯತ್ನ. ಬದಲಿಗೆ, ಅದರ ದುರುಪಯೋಗದ ದುಷ್ಪತನಗಳಿಗೆ ಕಾರಣವಾದ ಅದರೊಳಗೇ ಇರಬಹುದಾದ ಅಪಾಯಗಳನ್ನು ಗುರುತಿಸಿ ಅದನ್ನು ಹೊಸ ಕಾಲದ ಸವಾಲುಗಳಿಗೆ, ಆಶೋತ್ತರಗಳಿಗೆ ಸ್ಪಂದಿಸುವಂತೆ ಮಾಡುವ ಸೃಜನಶೀಲ ಕಾಯಕವಿದಾಗಿತ್ತು. ಹಾಗಾಗಿಯೇ ಈ ಪ್ರಯತ್ನ-ಅನಿವಾರ್ಯವಾಗಿ, ಅಧಿಕೃತವಾಗಿ 'ಹೊಸ ಮನುಷ್ಯ' ಎಂದು ಹೆಸರು ಬದಲಾಯಿಸಿಕೊಂಡು-ಈ ಹತ್ತು ವರ್ಷಗಳ ಪ್ರತಿ ಸಂಚಿಕೆಯನ್ನು ರೂಪಿಸುವುದೂ ಒಂದು ಸವಾಲಿನ, ರೋಮಾಂಚನ-ತಲ್ಲಣಗಳ ಅನುಭವವಾಗಿತ್ತು. ರೋಮಾಂಚನ ಏಕೆಂದರೆ ನಮ್ಮ ಈ ಪ್ರಯತ್ನಗಳಿಗೆ ನಿಮ್ಮಂತಹ ಓದುಗರಿಂದ ಹೆಚ್ಚುತ್ತಾ ಹೋದ ಪ್ರತಿಸ್ಪಂದನ. ತಲ್ಲಣ ಏಕೆಂದರೆ, ಎಷ್ಟು ಕಾಲ ಇದೆಲ್ಲ ಈ ರೋಮಾಂಚನಗಳನ್ನು ತಡೆದುಕೊಳ್ಳುವುದು ಎಂಬ ಆತಂಕ. ಸಮಾಜವಾದ ಎಂಬ ಶಬ್ದಕ್ಕೆ, ಅದರ ಹಿಂದಿನ ಆಲೋಚನಾ ತರಂಗಗಳಿಗೆ ಈ ಕಾಲದಲ್ಲೂ ಇಷ್ಟು ವಿಸ್ತಾರವಾದ ಬಿಸುಪು ಇದೆ ಎಂಬುದು ನನಗೆ ಗೊತ್ತಿರಲಿಲ್ಲ.

ಬಹುಶಃ ಸಮಾಜವಾದವನ್ನು ನಾವು ತಡಕಲಾರಂಭಿಸಿದ ಹೊಸ ರೀತಿಯೇ ಹಾಗಿತ್ತೇನೋ! ಮುಕ್ತ ಮಾರುಕಟ್ಟೆ ಅಥವಾ ಜಾಗತೀಕರಣದ ದಾಪುಗಾಲುಗಳ ಮಹಾ ಸಪ್ಪಳ, ಆಘಾತಗಳನ್ನು ನಾವು ವಿವರಿಸತೊಡಗಿದ ರೀತಿ ಒಳ್ಳೆಯ ಆರಂಭವನ್ನು ಒದಗಿಸಿತೆಂದು ಕಾಣುತ್ತದೆ. ಈ ಸಂದರ್ಭದಲ್ಲಿ, ನಮ್ಮ ಮೊದಲ ಸಂಚಿಕೆಯ ಸಂಪಾದಕೀಯವನ್ನೊಮ್ಮೆ ಈಗ ಓದುವುದು ಉಚಿತವಾದೀತು:

ಹೊಸ ಸಮಾಜವಾದಕ್ಕಾಗಿ ಒಂದು ಪುಟ್ಟ ವೇದಿಕೆ

ಪ್ರಿಯ ಓದುಗರೇ,

ಸಮಾಜವಾದ ಎಂಬ ಶಬ್ದವೇ ನಮ್ಮ ರಾಜಕೀಯ ಚರ್ಚೆಗಳಿಂದ ಕಾಣೆಯಾಗುತ್ತಿರುವ ದಿನಗಳಲ್ಲಿ ನಾವು 'ಮಾನವ' ಪತ್ರಿಕೆಯನ್ನು ಪುನರಾರಂಭಿಸುವ ಸಾಹಸಕ್ಕೆ ಕೈಹಾಕಿದ್ದೇವೆ. ಈ 'ಮಾನವ' ಎಪ್ಪತ್ತರ ದಶಕದಲ್ಲಿ ಕ್ರಿಯಾಶೀಲವಾಗಿದ್ದ ಸಮಾಜವಾದಿ ಚಳವಳಿಯ, ವಿಶೇಷವಾಗಿ ಸಮಾಜವಾದಿ ಯುವಜನ ಸಭಾದ ಮುಖವಾಣಿಯಾಗಿತ್ತು. ಹಾಗೆ ಮುಖವಾಣಿ ಎಂದರೆ ತಪ್ಪಾಗುತ್ತದೇನೋ. ಲೋಹಿಯಾ ಅವರು ಇಂಗ್ಲಿಷ್‌ನಲ್ಲಿ ಆರಂಭಿಸಿದ್ದ 'Mankind'ನಂತೆ ಈ ಪತ್ರಿಕೆಯೂ ಮಾನವನ ಪೂರ್ಣತೆಯ ಅನ್ವೇಷಣೆಯ ಪ್ರಯತ್ನದಲ್ಲಿ, ವೈವಿಧ್ಯಮಯ ಆಸಕ್ತಿಗಳ ಬಗೆಗಿನ ಲೇಖನ-ವರದಿ-ವಿಶ್ಲೇಷಣೆಗಳನ್ನು ಒಳಗೊಂಡಿರುತ್ತಿತ್ತು. ಜೆಪಿ ಚಳುವಳಿಯ ಅಂತಿಮ ಪರಿಣಾಮವಾಗಿ ಸಮಾಜವಾದಿ ಚಳುವಳಿ ಹಿನ್ನೆಲೆಗೆ ಸರಿಯುತ್ತಿದ್ದಂತೆ, ಈ ಪತ್ರಿಕೆಯೂ ಕಣ್ಮರೆಯಾಯಿತು. ಆದರೆ ಎಪ್ಪತ್ತರ ದಶಕದ ಕೊನೆಯ ಹೊತ್ತಿಗೆ ನಾವು ಕೆಲವು ಗೆಳೆಯರು-ನಾನು, ನೆಲಮನೆ ದೇವೇಗೌಡ, ದೇವನೂರ ಮಹದೇವ ಮುಂತಾದವರು-ಈ ಪತ್ರಿಕೆಯನ್ನು ಪುನಃಶ್ಚೇತನಗೊಳಿಸುವ ಪ್ರಯತ್ನ ಮಾಡಿದ್ದೆವು. ನಾನೇ ಅದರ ಸಂಪಾದಕನಾಗಿದ್ದೆ. ಹೆಚ್ಚೂಕಡಿಮೆ ಒಂದು ವರ್ಷ ನಡೆದ ಈ ಮಾಸಿಕವನ್ನು 'ಲಂಕೇಶ್ ಪತ್ರಿಕೆ' ಆರಂಭವಾಗುತ್ತಿದ್ದಂತೆ, ಅದೇ ಸಮಾಜವಾದಿ ರಾಜಕಾರಣದ ವೈಚಾರಿಕ ವೇದಿಕೆಯಾಗಲಿದೆ ಎಂಬ ನಂಬಿಕೆಯಲ್ಲಿ ನಿಲ್ಲಿಸಲಾಯಿತು!

ಈಗ ಕಾಲ ಬದಲಾಗಿದೆ. ಸಮಾಜವಾದವೆಂಬ ಶಬ್ದವೇ ನಮ್ಮ ರಾಜಕೀಯ ಚರ್ಚೆಗಳ ಶಬ್ದಕೋಶದಿಂದ ಕಣ್ಮರೆಯಾಗತೊಡಗಿದೆ. ಇಂತಹ ಸಂದರ್ಭದಲ್ಲಿ 'ಮಾನವ'ದ ಪುನರುಜ್ಜೀವನ ಏಕೆ ಎಂಬ ಪ್ರಶ್ನೆ ಏಳಬಹುದು. ಆದರೆ ಸಮಾಜವಾದವನ್ನು ಹೀಗಳೆದು-ಅದಕ್ಕೆ ಲೋಹಿಯೋತ್ತರ ಸಮಾಜವಾದ ಮತ್ತು ಸಮಾಜವಾದಿಗಳ ಜಡತೆಯೂ ಆಸ್ಪದ ನೀಡಿತು ಎಂಬುದು ನಿಜವಾದರೂ-ಬಂದ ಮುಕ್ತ ಮಾರುಕಟ್ಟೆ ಆರ್ಥಿಕತೆ, ಕಳೆದ ಇಪ್ಪತ್ತು ವರ್ಷಗಳ ತನ್ನ ಆಟಾಟೋಪದಲ್ಲಿ ಸೃಷ್ಟಿಸಿರುವ ಜೀವನ ಕ್ರಮವನ್ನು ನೋಡಿದರೆ, ಕಾಲ ಮತ್ತೆ ಬದಲಾಗುವ; ಅಷ್ಟೇ ಅಲ್ಲ, ಬದಲಾಗಲೇ ಬೇಕಾದ ಅನಿವಾರ್ಯತೆ ಸನ್ನಿಹಿತವಾದಂತೆ ಕಾಣುತ್ತದೆ. ಈ ಮುಕ್ತ ಮಾರುಕಟ್ಟೆ ನೀತಿ, ದೇಶ ಕನಸಿನಲ್ಲಿಯೂ ನಿರೀಕ್ಷಿಸದಿದ್ದಂತಹ ಪ್ರಮಾಣ ಮತ್ತು ವೇಗದಲ್ಲಿ ಸಂಪತ್ತನ್ನು ಸೃಷ್ಟಿಸಿದೆಯಾದರೂ, ಅದರ ಗುಣಾತ್ಮಕತೆಯ ಪರಿಣಾಮಗಳನ್ನು ನಾವಿಂದು ಗಾಬರಿಯಿಂದ ನೋಡುವಂತಾಗಿದೆ.

ಬಡತನ ನೀಗುವ ಅದರ ಘೋಷಿತ ಗುರಿ, ಎಂದೂ ಮುಗಿಯಲಾರದ ಬಡತನದ ಕಲ್ಪನೆಯನ್ನು ಬಡವ-ಶ್ರೀಮಂತರೆನ್ನದೆ ಜನಸಾಮಾನ್ಯರಲ್ಲಿ ಬಿತ್ತಿ ತನ್ನ ಆಟ ಮುಂದುವರೆಸಿದೆ. ಈ ಆಟ ಅದು ಸೃಷ್ಟಿಸುತ್ತಿರುವ ಸಂಪತ್ತಿನ ಪ್ರಮಾಣದಷ್ಟೇ ಅಸಮಾನತೆ, ದಾಹ ಮತ್ತು ಇವುಗಳ ಫಲವಾಗಿ ಎಂದೂ ಕಾಣದಂತಹ ವೈವಿಧ್ಯಮಯ ಭ್ರಷ್ಟಾಚಾರ, ಹಿಂಸಾಚಾರ, ಆತ್ಮಹತ್ಯೆಗಳ ಸರಣಿಯನ್ನೇ ಸೃಷ್ಟಿಸಿ ಅಂತಿಮವಾಗಿ ಇಲ್ಲಿನ ಬದುಕಿನ ಅಧ್ಯಾತ್ಮಿಕತೆಯನ್ನೂ ವಿಕ್ಷಿಪ್ತ ಗೊಳಿಸಿಬಿಟ್ಟಿದೆ. ಈ ದೇಶ ತನ್ನ ಪಾರಂಪರಿಕ ವಿವೇಕದ ಮೂಲಕ ಕಂಡುಕೊಂಡಿದ್ದ ಮಿತಿಗಳುಳ್ಳ ಬದುಕಿನ ಮೂಲ ನಂಬಿಕೆ, ಮೌಲ್ಯ ಮತ್ತು ಆದ್ಯತೆಗಳನ್ನೇ ಬುಡಮೇಲುಗೊಳಿಸಿದೆ. ಆಧುನಿಕತೆ ಕಟ್ಟಿಕೊಟ್ಟ ಹೊಸ ಸಮಾನತೆಯ ಮತ್ತು ಘನತೆಯ ಕನಸು ಇಂದು ದುಃಸ್ವಪ್ನವಾಗಿ ಪರಿವರ್ತಿತವಾಗಿದೆ. ಇದಕ್ಕೇನು ಉತ್ತರ? Back to basics ಎಂಬುದೇ ಉತ್ತರ! ಈ ಸರಕು ಕೇಂದ್ರಿತ ಆರ್ಥಿಕತೆಗೆ ಆದಷ್ಟು ಬೇಗ ವಿದಾಯ ಹೇಳಿ, ಮನುಷ್ಯ ಕೇಂದ್ರಿತ ಆರ್ಥಿಕತೆಗೆ ಮರಳುವುದೊಂದೇ ಉತ್ತರ. ಅಂದರೆ. ವಿಶ್ವಾಸಾರ್ಹತೆ ಕಳೆದುಕೊಂಡಿರುವ ಹಳೆಯ ಸಮಾಜವಾದದ ಮೂಲಾಧಾರಗಳನ್ನು ಪುನಾರಚಿಸಿ, ಕಾಲದ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾದ ಹೊಸ ಸಮಾಜವಾದದ ಅನ್ವೇಷಣೆಯನ್ನು ನಾವಿಂದು ಮಾಡಬೇಕಿದೆ.

ಅದಕ್ಕೊಂದು ಪುಟ್ಟ ವೇದಿಕೆ ಒದಗಿಸುವ ಪ್ರಯತ್ನವಾಗಿ ಈ 'ಮಾನವ'ದ ಪುನರುಜ್ಜೀವನಕ್ಕೆ ನಾವು ಕೆಲವು ಗೆಳೆಯರು ಕೈಹಾಕಿದ್ದೇವೆ. ಹಳೆಯ ಸಮಾಜವಾದಿ ಗೆಳೆಯರು. ಹಾಗೂ ಹಲವು ಎಳೆಯ ಉತ್ಸಾಹಿ ಗೆಳೆಯರೂ ನಮ್ಮೊಂದಿಗೆ ಕೈಜೋಡಿಸಲು ಮುಂದಾಗಿದ್ದಾರೆ. ನೀವೂ ಕೈಜೋಡಿಸುವಂತಾದರೆ, ನಿಮ್ಮ ಕೈಲಾದ ಹಣಕಾಸು ಮತ್ತು ವಿಚಾರ-ಚರ್ಚೆಗಳ ರೂಪದ ನೆರವು ನೀಡುವುದಾದರೆ, ನಮ್ಮ ಈ ಪ್ರಯತ್ನ ಸಾರ್ಥಕವಾದೀತು. ಈ ಸಂಚಿಕೆಯನ್ನು, ಮಾಡಬೇಕೆನಿಸಿದ್ದನ್ನು ಕೂಡಲೇ ಮಾಡಿಬಿಡುವ

ಈ ಸಂಪಾದಕನ (ಸುಟ್ಟರೂ ಹೋಗದ)ಹುಟ್ಟು ಗುಣಕ್ಕನುಸಾರವಾಗಿ, ಹದಿನೈದು ದಿನಗಳಲ್ಲಿ ಸಿದ್ಧಪಡಿಸಲಾಗಿದೆ. ಇದಕ್ಕೆ ಪೂರಕವಾಗಿ, ಎಷ್ಟೋ ವರ್ಷಗಳ ನಂತರ ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ 'ಜಾತಿ ವಿರೋಧಿ ಸಮ್ಮೇಳನ'ದ ನಡಾವಳಿಯೂ ನೆರವಿಗೆ ಬಂದು, ಈ ಅವಸರದಲ್ಲಿಯೂ ನಮ್ಮ ಘೋಷಿತ ಉದ್ದೇಶ ಸ್ವಲ್ಪಮಟ್ಟಿಗಾದರೂ ಈಡೇರಿದೆಯೆಂದು ಭಾವಿಸುವೆ. ಜೊತೆಗೆ ಇನ್ನಷ್ಟು ವಿಷಯ ವೈವಿಧ್ಯ ನಿಮ್ಮ ಸಹಕಾರದಿಂದ ಮುಂದಿನ ಸಂಚಿಕೆಗಳಲ್ಲಿ ಕಾಣಿಸಿಕೊಳ್ಳುವುದು ಎಂದು ಆಶಿಸುವೆ. ಈ ಸಂಚಿಕೆಯಲ್ಲಿ ಚಿಂತನೆಗೆ ಮತ್ತು ಚರ್ಚೆಗೆ ಸಾಕಷ್ಟು ಆಹಾರವಿದೆ. ವಿಶೇಷವಾಗಿ ಸಾಮಾಜಿಕ ನ್ಯಾಯದ ಕಲ್ಪನೆ ಮತ್ತು ಭ್ರಷ್ಟಾಚಾರ ವಿರೋಧಿ ಆಂದೋಲನದ ಸ್ವರೂಪದ ಬಗ್ಗೆ. ನಿಮ್ಮ ಟೀಕೆ-ಟಿಪ್ಪಣಿ-ಸಲಹೆ-ಸೂಚನೆಗಳನ್ನು ಎದುರು ನೋಡುತ್ತೇನೆ.

-ಸಂಪಾದಕ

ಹೌದು, ಈ ಸಂಪಾದಕೀಯ ನಿರೂಪಿಸಿದ ಮೂರು ಮುಖ್ಯ ಸಂಗತಿಗಳು ಪತ್ರಿಕೆಯ ಮುಂದಿನ ಸಂಚಿಕೆಗಳ ಚೌಕಟ್ಟುಗಳನ್ನು ನಿರೂಪಿಸಿದವು. ಅವೆಂದರೆ, ಮೊದಲನೆಯದಾಗಿ ಮತ್ತು ಮುಂದಿನ ಎರಡಕ್ಕೆ ಹೊಸ ಆಧಾರಗಳನ್ನು ಒದಗಿಸಿದ ಮುಕ್ತ ಮಾರುಕಟ್ಟೆ ಆರ್ಥಿಕತೆ ಕೆಲವರ ಪಾಲಿಗೆ ತಂದ ಹೊಸ ಸಮೃದ್ಧಿ ಮತ್ತು ಅದೇ ವೇಳೆಯಲ್ಲಿ ಅದು ಸಮಾಜದಲ್ಲಿ ಎಬ್ಬಿಸಿದ ಹೊಸ ಅಂತರಗಳ ಅಸಮಾನತೆಗಳು ಮತ್ತು ವೈವಿಧ್ಯಮಯ ಹಿಂಸಾಚಾರ. ಎರಡನೆಯದು, ಬದಲಾದ ಸಾಮಾಜಿಕ ನ್ಯಾಯದ ಅರ್ಥ ಮತ್ತು ಅದು ಸೃಷ್ಟಿಸಿದ ಹೊಸ ರಾಜಕೀಯ ಸಮೀಕರಣಗಳು. ಮೂರು: ಅಂದು ಆಗತಾನೇ ಚಿಗುರೊಡೆಯುತ್ತಿದ್ದ ಭ್ರಷ್ಟಾಚಾರ ವಿರೋಧಿ ಆಂದೋಲನ. ಇವುಗಳಲ್ಲಿ ಮೂರನೆಯದಾದ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಪತ್ರಿಕೆ ಬೆಂಬಲ ನೀಡುತ್ತಲೇ ಬಂತೆಂಬುದು ನಿಜ. ಆದರೆ ಅದು ಆ ಮೂಲಕ ವಿರೋಧಿಸುತ್ತಿದ್ದುದು ಈ ದೊಡ್ಡ ಪ್ರಮಾಣದ ಭ್ರಷ್ಟಾಚಾರಕ್ಕೆ ಕಾರಣವಾಗುತ್ತಿದ್ದ ಮುಕ್ತ ಆರ್ಥಿಕ ನೀತಿಯನ್ನು. ನಿಜ, ಇದರಿಂದ ಎರಡು ಪರಿಣಾಮಗಳು ಉಂಟಾದವು. ಈ ಪರಿಸ್ಥಿತಿಯನ್ನು ಬಳಸಿಕೊಂಡು 'ಆಂ ಆದ್ಮಿ ಪಕ್ಷ'ವೆಂಬ ಹೊಸ ರಾಜಕೀಯ ಪರ್ಯಾಯವೊಂದು ಜನರ ಮುಂದೆ ಅಸ್ತಿತ್ವಕ್ಕೆ ಬಂತು. ಇನ್ನೊಂದು ಪರಿಣಾಮವೆಂದರೆ ಕಾಂಗ್ರೆಸ್‌ನ ಅವನತಿ ಮತ್ತು ನರೇಂದ್ರ ಮೋದಿ ನಾಯಕತ್ವದ ಹೊಸ ಭಾರತೀಯ ಜನತಾ ಪಕ್ಷ ಭದ್ರವಾಗಿ ಅಧಿಕಾರದ ಗದ್ದುಗೆ ಹಿಡಿದದ್ದು. ಈ ಎರಡೂ ಪರಿಣಾಮಗಳನ್ನು ಸಮನಾದ ಭಾವನೆಯಿಂದ ಗ್ರಹಿಸಬಲ್ಲವರು ಮಾತ್ರ ಇಂದಿನ ರಾಜಕಾರಣವನ್ನು ಅದರ ಸಂಕೀರ್ಣತೆಗಳೊಂದಿಗೆ ಮುಖಾಮುಖಿಯಾಗಬಲ್ಲರು.

ಇಂದು ನಮ್ಮ ಎಡಪಂಥಿಯ ಸೆಕ್ಯುಲರ್ ರಾಜಕೀಯ ನಾಯಕರು ಮತ್ತು ಪಂಡಿತರು ಮೋದಿಯವರ ಪ್ರಸ್ತುತ ಕೋಮುವಾದಿ ಮತ್ತು ಸರ್ವಾಧಿಕಾರಿ ರಾಜಕಾರಣದ ಆಗಮನಕ್ಕೆ ಭ್ರಷ್ಟಾಚಾರ ವಿರೋಧಿ ಆಂದೋಲನವೇ ಕಾರಣವೆಂದು ವಾದಿಸುವುದುಂಟು. ಬಿಜೆಪಿ ಅರ್ಥಾತ್ ಆರೆಸ್ಸೆಸ್ ಈ ಅಂದೋಲನವನ್ನು ತನ್ನ ರಾಜಕಾರಣಕ್ಕಾಗಿ ಬಳಸಿಕೊಂಡಿತು ಎಂಬುದು ಅವರ ವಾದ. ಇದು ನಿಜವಿರಬಹುದು. ಆದರೆ ಅದನ್ನು ತಮ್ಮ ಪರವಾಗಿ ಬಳಸಿಕೊಳ್ಳಲು ಇವರಿಗೆಲ್ಲ ಏನಾಗಿತ್ತು? ಎಂಬುದೇ ಪ್ರಶ್ನೆ. ಮುಖ್ಯವಾದ ಸಂಗತಿ ಎಂದರೆ ಎಡಪಂಥೀಯ ಅಥವಾ ಪ್ರಗತಿಪರವೆನ್ನಲಾಗುವ ಸೆಕ್ಯಲರ್ ರಾಜಕಾರಣದ ಮುಖ್ಯ ವೇದಿಕೆಯೆನಿಸಿದ್ದ ಕಾಂಗ್ರೆಸ್ ಆ ವೇಳೆಗೆ ತನ್ನೆಲ್ಲ ಸೃಜನಶಕ್ತಿಯನ್ನು -ಇಂಧನವನ್ನು ಕಳೆದುಕೊಂಡು ಸ್ಥಗಿತತೆಗೆ ಈಡಾಗಿತ್ತು. ನರಸಿಂಹರಾವ್, ಸೀತಾರಾಮ್ ಕೇಸರಿ, ಮನಮೋಹನ್‌ಸಿಂಗ್‌ರಂತಹ ಜನ ನಾಯಕರಲ್ಲದ ನಾಯಕರು ಅಲ್ಲಿ ಅನಿವಾರ್ಯವಾಗತೊಡಗಿದ್ದರು. ಪ್ರಣಬ್ ಕುಮಾರ್ ಮುಖರ್ಜಿ, ಪಿ.ಎ. ಸಂಗ್ಮಾರಂಥವರು ಬೇಡವಾಗತೊಡಗಿದ್ದರು. ಇದೇ ಕಾಂಗ್ರೆಸ್‌ನ ಅವನತಿಗೂ ಕಾರಣವಾಗಿದ್ದು, ಆ ಪಕ್ಷ ಮತ್ತು ಮತ್ತು ಅದರ ರಾಜಕೀಯ ಗೆಣೆಕಾರರು ಸಕಾಲದಲ್ಲಿ ಎಚ್ಚರಿಕೆ ವಹಿಸದಿದ್ದರಿಂದಾಗಿ ಈ ಅತಂತ್ರ ರಾಜಕೀಯ ಪರಿಸ್ಥಿತಿಗೆ ಕಾಲದ ಉತ್ತರವಾಗಿ ಮೋದಿ ಅವತರಿಸಿದ್ದಾರಷ್ಟೆ. ಇದನ್ನರಿತು ಸೆಕ್ಯುಲರ್ ಪ್ರಗತಿಪರ ಎನ್ನಲಾಗುವ ರಾಜಕಾರಣ ತನ್ನೊಳಗನ್ನೊಮ್ಮೆ ತಾನೇ ನೋಡಿಕೊಂಡು ತುಕ್ಕು ಹಿಡಿದ ತನ್ನ ರಾಜಕೀಯ ನೋಟ ಮತ್ತು ಪರಿಭಾಷೆಯನ್ನು ಪುನರ್‌ನವೀಕರಿಸಿಕೊಳ್ಳುವ ಮೂಲಕ ಸಂಘಟನೆ ಕಟ್ಟಿ ಒಂದು ಹೊಸ ಸಂದೇಶದೊಡನೆ ಜನರ ಬಳಿಗೆ ಹೋಗುವ 'ಮೈ ಬಗ್ಗಿಸುವ' ರಾಜಕಾರಣ ಮಾಡದೆ ಕೇವಲ ಮೋದಿ ದೂಷಣೆಯ ರಾಜಕಾರಣವನ್ನಷ್ಟೇ ಮುಂದುವರೆಸಿದರೆ ಅದು ಮೋದಿ ರಾಜಕಾರಣದ ಪರೋಕ್ಷ ಪೋಷಣೆ ಮಾಡಿದಂತೆಯೇ ಸರಿ. ಹಾಗೆ ನೋಡಿದರೆ ಮೋದಿ ರಾಜಕಾರಣದ ಆಗಮನ ನಮ್ಮ ಪ್ರಜಾಸತ್ತಾತ್ಮಕ ರಾಜಕಾರಣ ಸಹಜವಾಗಿ ಪುನರುಜ್ಜೀವನಗೊಳ್ಳುವ ಅವಕಾಶವನ್ನು ಸೃಷ್ಟಿಸಿದೆ ಎಂದೇ ಹೇಳಬೇಕು. ಬಹು ತಡವಾಗುವ ಮುನ್ನ ಇದನ್ನು ಪ್ರಜಾಪ್ರಭುತ್ವವಾದಿಗಳು ಬಳಸಿಕೊಳ್ಳಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು. 'ಹೊಸ ಮನುಷ್ಯ' ಇಂತಹ ಪ್ರಯತ್ನಗಳಿಗೆ ತನ್ನನ್ನು ಬದ್ಧವಿರಿಸಿಕೊಂಡೇ ಕೆಲಸ ಮಾಡಿದೆ. ಒಂದು ಕಡೆ, ಸೆಕ್ಯುಲರ್ ಮತ್ತು ಪ್ರಗತಿಪರವೆಂದು ಹೇಳಿಕೊಳ್ಳುವವರ ಜಡ ರಾಜಕಾರಣವನ್ನು ನಿಷ್ಠುರ ವಿಮರ್ಶೆಗೆ ಒಳಪಡಿಸುವ ಮೂಲಕ. ಮತ್ತೊಂದೆಡೆ ಮೋದಿ ಮಾದರಿಯ ರಾಜಕಾರಣವನ್ನು ಕಟುವಾಗಿ ವಿರೋಧಿಸುತ್ತಾ ಅದರ ಅನಾಹುತಕಾರಿ ಪರಿಣಾಮಗಳ ಬಗ್ಗೆ ಜನರನ್ನು ಎಚ್ಚರಿಸುವ ಮೂಲಕ.

ಇವರೆಡರ ಮಧ್ಯೆಯೇ ಪತ್ರಿಕೆ ಬದಲಾದ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಯನ್ನು ಪದೇ ಪದೇ ಗಾಂಧಿ, ಲೋಹಿಯಾ ಮತ್ತು ಅಂಬೇಡ್ಕರ್‌ರ ಪ್ರತಿಪಾದನೆಗಳನ್ನು ವಿವಿಧ ಸವಾಲುಗಳಿಗೆ ಮುಖಾಮುಖಿಯಾಗಿಸಿ, ಈ ಹೊಸ ಸಾಮಾಜಿಕ ನ್ಯಾಯದ ವಿಕಾಸಶೀಲತೆಗೆ ಒರೆಗಲ್ಲಾಗಿರುವ 'ಅಭಿವೃದ್ಧಿ' ಎಂಬ ಮಾಯಾಜಿಂಕೆಯ ಆಟವನ್ನು ಬಯಲು ಮಾಡುವ ಪ್ರಯತ್ನ ಮಾಡಿದೆ. ಇದರ ಭಾಗವಾಗಿ ಕಳೆದ ಒಂದು ಶತಮಾನದಿಂದ ನಮ್ಮನ್ನು ಸದಾ ದಿಕ್ಕು ತಪ್ಪಿಸುತ್ತಾ ಬಂದಿರುವ ಆಧುನಿಕತೆ ಎಂಬ ಮಾಯಾಜಾಲ ಸೃಷ್ಟಿಸಿ ನಮ್ಮನ್ನು ಆಟವಾಡಿಸುತ್ತಾ ಬಂದಿರುವ ನಮ್ಮ ಬೌದ್ಧಿಕ ಲೋಕ (ಇದರ ಪಾಲುದಾರರು ನಾವೇ!) ಇದ್ದಕ್ಕಿದ್ದಂತೆ ಎಚ್ಚರಗೊಂಡಂತೆ ಈಗ 'ಸತ್ಯೋತ್ತರ ಕಾಲ' ಆರಂಭವಾಗಿದೆ ಎಂದು ಘೋಷಿಸುತ್ತಾ ತನಗೆ ತಾನೇ ಮೋಸ ಮಾಡಿಕೊಳ್ಳತೊಡಗಿರುವುದನ್ನೂ ಪತ್ರಿಕೆ ತನ್ನ ಬಿಡಿ ಟಿಪ್ಪಣಿಗಳಲ್ಲಿ ವಾರೆನೋಟದಲ್ಲಾದರೂ ಗಮನಿಸುತ್ತಾ ಬಂದಿದೆ. ಅಂದರೆ ಒಂದು ಪತ್ರಿಕೆ ಯಾರದೇ ಮುಖವಾಣಿಯಾಗದೇ, ಏನೆಲ್ಲ ಪಾತ್ರವಹಿಸಬಲ್ಲುದೋ ಅದನ್ನೆಲ್ಲ ಪ್ರಾಮಾಣಿಕವಾಗಿ ಮಾಡುತ್ತಲೇ ಬಂದಿದೆ. ಆ ಮೂಲಕವೇ ತಾನು ಆರಂಭದಲ್ಲಿ ಘೋಷಿಸಿಕೊಂಡ ಸಮಾಜವಾದದ ಪುನರನ್ವೇಷಣೆಯ ಮೂಲಕ ಹೊಸ ಸಮಾಜವಾದದ ನಿರೂಪಣೆಯಲ್ಲಿ ತೊಡಗಿಕೊಂಡಿದೆ. ಮತ್ತು ಇದು ಓದುಗರಿಗೆ ಮೆಚ್ಚುಗೆಯಾದ ಕಾರಣಕ್ಕೇ ಪತ್ರಿಕೆ ತನ್ನ ಪ್ರಭಾವದ ವ್ಯಾಪ್ತಿಯನ್ನು ಸದಾ ಹೆಚ್ಚಿಸಿಕೊಳ್ಳುತ್ತಾ ಹೋಗಿ ಹತ್ತು ವರ್ಷಗಳನ್ನು ದಾಟಿದೆ.

ಈಗ ನೀವು ಬಹುವಾಗಿ ಇಷ್ಟಪಡದೇ ಹೋಗಬಹುದಾದ ಒಂದು ಸುದ್ದಿ. 'ಹೊಸ ಮನುಷ್ಯ' ತನ್ನ ಮುಂದಿನ (ಅಂದರೆ ಮಾರ್ಚ್, ೨೦೨೨) ಸಂಚಿಕೆಯೊಂದಿಗೆ ತನ್ನ ಪ್ರಕಟಣೆಯನ್ನು ನಿಲಿಸುತ್ತಿದೆ. ಇದಕ್ಕೆ ಹೊರಗಿನ ಕಾರಣ ಯಾವೊಂದೂ ಇಲ್ಲ. ಅಂದರೆ ಓದುಗರ ನಿರುತ್ಸಾಹವಾಗಲೀ, ಹಣಕಾಸಿನ ತೊಂದರೆಯಾಗಲೀ ಇದಕ್ಕೆ ಕಾರಣವಲ್ಲ. ಹಾಗೆ ನೋಡಿದರೆ, ಕಳೆದ ಅಕ್ಟೋಬರ್‌ನಿಂದ ಬರುವ ಮಾರ್ಚ್‌ವರೆಗಿನ ಎಲ್ಲ ಸಂಚಿಕೆಗಳನ್ನೂ ನಮ್ಮ ನಿಯಮಿತ ಓದುಗರಿಗೆ ಉಚಿತವಾಗಿ ಕೊಡುವಷ್ಟು ಹಣಕಾಸು ನಮ್ಮಲ್ಲಿ ಉಳಿದಿತ್ತು. ಪತ್ರಿಕೆ ನಿಲ್ಲಿಸಲು ಸಂಪಾದಕನಾಗಿ ನಾನು ತೆಗೆದುಕೊಂಡಿರಲು ಮುಖ್ಯ ಕಾರಣ, ನನ್ನ ಆರೋಗ್ಯ ಈ ಕೆಲಸ ಮಾಡಲು ನನ್ನನ್ನು ಬಿಡುತ್ತಿಲ್ಲ. ನನ್ನ ಕಣ್ಣು ಕಿವಿ ಕೈಕಾಲುಗಳು ವಯೋ ಸಹಜವಾಗಿ ದುರ್ಬಲವಾಗುತ್ತಿವೆ; ಅವು ಹೆಚ್ಚಿನ ಒತ್ತಡ ತಾಳಿಕೊಳ್ಳಲಾರವು. ಇದು ಮನಸ್ಸಿನ ಮೇಲೂ ಪರಿಣಾಮ ಬೀರುತ್ತಿದೆ. ಆದರೆ ನಾನು ಮಾಡಬೇಕೆಂದಿರುವ ಬರಹದ ಕೆಲಸಗಳು ಇನ್ನೂ ಸಾಕಷ್ಟಿವೆ, ಹಾಗಾಗಿ ಈ ನಿರ್ಧಾರ.

ನಂ ಟೀಮ್



ಎಂ. ರಾಜು　　ರೇಖಾಂಬ　　ವಿಜಯಶ್ರೀ ಹಾಲಾಡಿ　　ಗುಜ್ಜಾರಪ್ಪ

ಹೀಗೆ ಕ್ರಮಬದ್ಧವಾಗಿ ತಲುಪಲು ನನ್ನೊಡನೆ ಹೆಗಲೆಣೆಯಾಗಿ ನಿಂತವರ ನೆರವನ್ನು ಸ್ಮರಿಸಿಕೊಳ್ಳುವುದು. ನನ್ನ ಪತ್ನಿ ಸವಿತಾ ಅಲ್ಲದೆ, ಅಷ್ಟೇ ಶ್ರದ್ಧೆಯಿಂದ ಪತ್ರಿಕೆಗಾಗಿ ದುಡಿದವರೆಂದರೆ ಗೆಳೆಯ ಎಂ ರಾಜು ಮತ್ತು ಗೆಳತಿ ರೇಖಾಂಬ ಟಿ.ಎಲ್. ಇವರ ದುಡಿಮೆ ಯಾವ ರೂಪದ್ದೆಂದು ಪತ್ರಿಕೆ ಓದುವ ನಿಮಗೆಲ್ಲರಿಗೂ ಗೊತ್ತಿರುತ್ತದೆ. ಇನ್ನು ಪತ್ರಿಕೆಯ ಅಂದವನ್ನು ಹೆಚ್ಚಿಸಿದವರು, ಯಾವ ಶುಲ್ಕವನ್ನೂ ಕೇಳದೆ ಕಥೆ-ಕವನ ಪ್ರಬಂಧಗಳಿಗೆ ಚಿತ್ರಗಳನ್ನು ಒದಗಿಸಿದ ವಿಜಯಶ್ರೀ ಹಾಲಾಡಿ ಮತ್ತು ಪ್ರಸಿದ್ಧ ಚಿತ್ರ ಕಲಾವಿದ ಗೆಳೆಯ ಬಿ.ಜಿ. ಗುಜ್ಜಾರಪ್ಪ. ಇವರಲ್ಲದೆ ಹಲವು ಬಾರಿ ಕರಡು ತಿದ್ದಿ ನೆರವಾಗಿರುವ ಕೆ. ಶ್ರೀದೇವಿ ಮತ್ತು ಕೆ. ಪದ್ಮಾಕ್ಷಿ ಹಾಗೂ ಪ್ರತಿ ತಿಂಗಳು ಪತ್ರಿಕೆಗೆ ಅಂಚೆ ಮತ್ತು ವಿಳಾಸ ಚೀಟಿಗಳನ್ನು ಅಂಟಿಸಿ ಅವನ್ನು ಅಂಚೆಗೆ ಸಿದ್ಧಪಡಿಸಿದ ವೆಂಕಟೇಶ್, ಶೃಂಗೇಶ್, ಶೇಖರ್ ಗೌಳೇರ್, ಮಮತಾ ಮತ್ತು ವಸುಂಧರಾದೇವಿಯವರಿಗೂ ನಮ್ಮ ನಮನ ಸಲ್ಲುತ್ತವೆ.

ಈ ಮಧ್ಯೆ ಪತ್ರಿಕೆಯ ಮಹಾಭಿಮಾನಿ ಮತ್ತು ಹಿರಿಯ ಗೆಳೆಯರಾದ ಚಂದ್ರಶೇಖರ ಪಾಟೀಲರು ನಮ್ಮನ್ನಗಲಿ ಹೋಗಿದ್ದಾರೆ ಅವರಿಗೆ ನಮ್ಮ ಶ್ರದ್ಧಾಂಜಲಿಗಳು.

-ಸಂಪಾದಕ.

ಈ ಸಂಚಿಕೆ

ರಕ್ಷಾಪುಟ ವಿನ್ಯಾಸ: **ರವಿಪ್ರಸಾದ್ ಎಚ್. ಆರ್.**

ಸಂಪಾದನೆ, ಪ್ರಕಾಶನ ಮತ್ತು ಪುಟ ವಿನ್ಯಾಸ:

ಡಿ.ಎಸ್, ನಾಗಭೂಷಣ

ನೆರವು: **ರೇಖಾಂಬ ಟಿ. ಎಲ್. ಮತ್ತು ಸವಿತಾ ನಾಗಭೂಷಣ**

ಮುದ್ರಣ: **ರಿಪ್ಲಿಕ ಆಫ್‌ಸೆಟ್**, ಬೆಂಗಳೂರು-೪೪

ಪತ್ರಿಕೆಗೆ ಹತ್ತು ವರ್ಷ-ಓದುಗರ ನೋಟ



'ಹೊಸ ಮನುಷ್ಯ' ಕಳೆದ ಸಂಚಿಕೆಯೊಂದಿಗೆ ಹತ್ತು ವರ್ಷಗಳನ್ನು ಪೂರೈಸಿ, ಈ ಸಂಚಿಕೆಯೊಂದಿಗೆ ತನ್ನ ಹನ್ನೊಂದನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ನಮ್ಮ ಕೆಲ ಆಯ್ದ ಓದುಗರು ಪತ್ರಿಕೆ ನಡೆದ ಬಂದ ಹಾದಿ, ಅದರ ಸಾಧನೆ-ಶಕ್ತಿ-ದೌರ್ಬಲ್ಯಗಳು, ಪತ್ರಿಕೆಯಿಂದ ತಾವು ಪಡೆದದ್ದೇನು ಎಂಬುದರ ವಿಶ್ಲೇಷಣೆಯನ್ನು ಇಲ್ಲಿಮಾಡಿದ್ದಾರೆ-ಸಂ.

ಶೂನ್ಯ ತುಂಬಿದ ಪತ್ರಿಕೆ

ಅನೇಕ ಆತಂಕಗಳ ನಡುವೆ 'ಹೊಸ ಮನುಷ್ಯ' ಹತ್ತು ವರ್ಷ ಪೂರೈಸುತ್ತಿರುವುದು ಸಂತಸದಾಯಕ ಸಂಗತಿ. ಇದಕ್ಕೆ ಮುಖ್ಯ ಕಾರಣ ಸಂಪಾದಕರ ಜಿಗುಟುತನ, ಪ್ರಚಲಿತ ವಿದ್ಯಮಾನಗಳ ಕುರಿತು ಅವರ ತುಡಿತ ಮತ್ತು ಪತ್ರಿಕೆ ಕುರಿತು ಅವರ ಬದ್ಧತೆ; ಹಾಗೂ ಓದುಗರ ಒತ್ತಾಸೆ ಕೂಡ. 'ಹೊಸ ಮನುಷ್ಯ'ನನ್ನು ನಾನು ನೋಡುವುದು ಮತ್ತು ಗ್ರಹಿಸುತ್ತ ಬಂದಿರುವುದು 'ಲಂಕೇಶ ಪತ್ರಿಕೆ'ಯ ನಂತರ ಉಂಟಾಗಿದ್ದ ಶೂನ್ಯವನ್ನು ತುಂಬಿದ ಭಾಗವಾಗಿ. ಈ ಮಾತು ಸಂಪಾದಕರಿಗೆ ಅಪಥ್ಯವೆನಿಸಬಹುದು. ಇದು ಲಂಕೇಶರೊಂದಿಗೆ ಒಡನಾಡಿದ ಅನುಭವದ ಪರಿಣಾಮವಿರಬಹುದು. ಆದರೆ ಲಂಕೇಶರನ್ನು ಅವರ ಪತ್ರಿಕೆ ಮತ್ತು ಅವರ ಸಾಹಿತ್ಯದ ಮೂಲಕ ಮಾತ್ರ ನೋಡುತ್ತ ಬಂದಿರುವ ನಮಗೆ, ಅವರ ಮರಣದ ನಂತರ ಒಂದು ಬಗೆಯ ಶೂನ್ಯ ಆವರಿಸಿದಂತಾಗಿತ್ತು. ಅಷ್ಟೊಂದು ಪ್ರಭಾವ ಆ ಪತ್ರಿಕೆ ನಮ್ಮ ಪೀಳಿಗೆಯ ಮೇಲೆ ಬೀರಿತ್ತು. ಆಮೇಲೆ ಒಂದು ದಶಕದ ನಂತರ ಆರಂಭಗೊಂಡ 'ಹೊಸಮನುಷ್ಯ' ಅಷ್ಟು ವ್ಯಾಪಕವಾಗಿ ಅಲ್ಲದಿದ್ದರೂ ಆ ಶೂನ್ಯವನ್ನು ಪರೋಕ್ಷವಾಗಿಯಾದರು ತುಂಬಿದೆ ಎಂದು ನಾವು ಭಾವಿಸಿದ್ದೇವೆ. ಆ ಪತ್ರಿಕೆಯ ಹರವು, ಹೊಸಮನುಷ್ಯದ ಹರವು, ಆಶಯಗಳು ಬೇರೆ ಆದರೂ ಎರಡೂ ಪತ್ರಿಕೆಗಳ ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ತುಡಿತಗಳು ಒಂದೇ ಎಂದು ನಾನು ಭಾವಿಸುತ್ತ ಬಂದಿದ್ದೇನೆ. ಲಂಕೇಶರ ವೈಯಕ್ತಿಕ ದೌರ್ಬಲ್ಯಗಳೇನೆ ಇದ್ದರೂ ಅವರು ಮತ್ತು ಅವರ ಪತ್ರಿಕೆ ನಮ್ಮ ತಲೆಮಾರಿನ ಓದುಗರು, ಜನಸಾಮಾನ್ಯರ ಮೇಲೆ ಬೀರಿದ ಪ್ರಭಾವವನ್ನು ಅಲ್ಲಗಳೆಯಲಾಗದು. ನಮ್ಮ ವೈಯಕ್ತಿಕ, ಸಾಮಾಜಿಕ ಆತ್ಮಸಾಕ್ಷಿಯನ್ನು ಬಹುಮಟ್ಟಿಗೆ ಜಾಗೃತವಾಗಿಟ್ಟದ್ದ ಪತ್ರಿಕೆ ಅದು. ಅದೇ ಕೆಲಸವನ್ನು ಇನ್ನೂ ಹೆಚ್ಚು ಅರ್ಥವತ್ತಾಗಿ 'ಹೊಸಮನುಷ್ಯ' ಮಾಡಿದೆ.

'ಹೊಸಮನುಷ್ಯ' ಬರುವಷ್ಟರಲ್ಲಿ ಬಹಳಷ್ಟು ಬದಲಾವಣೆಗಳು ಸಾಮಾಜಿಕ, ರಾಜಕೀಯ ವಲಯದಲ್ಲಿ, ಮತ್ತೂ ಮುಖ್ಯವಾಗಿ ಮಾಧ್ಯಮ ಲೋಕದಲ್ಲಿ ಆದವು. ಮೌಲ್ಯಗಳು ಪಲ್ಲಟಗೊಂಡವು. ಓದುಗ ವರ್ಗದ ಒಂದು ತಲೆಮಾರು ಕೂಡ ಸರಿಯಿತು. ಯುವ ಓದುಗರ ಅಭಿರುಚಿಗಳು ಬದಲಾದವು. ಅದರಲ್ಲೂ ಕಳೆದ ಒಂದು ದಶಕದಲ್ಲಿ ದೇಶದ ಚಿತ್ರಣವೇ ತೀವ್ರಗತಿಯಲ್ಲಿ ಬದಲಾಯಿತು. ಈ ಹಿನ್ನೆಲೆಯಲ್ಲಿ ಸಮಾಜವಾದದ, ಗಾಂಧಿವಾದದ ಆಶಯಗಳನ್ನು ಹೊತ್ತು ಅಸ್ತಿತ್ವಕ್ಕೆ ಬಂದ 'ಹೊಸಮನುಷ್ಯ' ಬದಲಾದ ಪರಿಸ್ಥಿತಿಗೆ ತೀವ್ರವಾಗಿ ಸ್ಪಂದಿಸುತ್ತ, ಪ್ರತಿಕ್ರಿಯಿಸುತ್ತ ಸಮಾನ ಮನಸ್ಕ, ಸಮಾನ ಚಿಂತನೆಯ ಓದುಗರನ್ನು ಆಕರ್ಷಿಸುವಲ್ಲಿ ಮತ್ತು ಪ್ರಭಾವಿಸುವಲ್ಲಿ ಯಶಸ್ಸು ಕಂಡಿತು. ಸಂಪಾದಕರ ನಿಷ್ಠೂರ ನಡೆ, ನಿಲುವುಗಳು, ಸಾಮಾಜಿಕ ಕಳಕಳಿಗಳಿಂದಾಗಿ ಪತ್ರಿಕೆ ಓದುಗರ ಮೇಲೆ ತನ್ನದೇ ಆದ ಛಾಪು ಮೂಡಿಸಿತು.

ಪ್ರಚಲಿತ ವಿದ್ಯಮಾನಗಳ ಕುರಿತು ಖಚಿತ ನಿಲುವು, ರಾಷ್ಟ್ರೀಯ, ಅಂತರರಾಷ್ಟ್ರೀಯ ಬೆಳವಣಿಗೆಗಳ ಕುರಿತು ಲೇಖನಗಳು, ವಾಸ್ತವ ನೆಲೆಯ ಸಂಪಾದಕೀಯ, ಮಹತ್ವದ ವಿಷಯಗಳ ಕುರಿತು ಅನುವಾದಿತ ಲೇಖನಗಳು, ಪರಿಸರ, ಹವಾಮಾನ ಬದಲಾವಣೆ ಕುರಿತು ತಜ್ಞರ ಬರಹಗಳು, ಅನೇಕ ಜ್ವಲಂತ ವಿಷಯಗಳ ಕುರಿತು ಚರ್ಚೆ, ಪ್ರತಿಕ್ರಿಯೆಗಳು, ಕೋಮುವಾದದ ವಿರುದ್ಧ ಸ್ಪಷ್ಟ ನಿಲುವು, ಹೀಗೆ ಸಮಷ್ಟಿ ಪ್ರಜ್ಞೆಯಿಂದ ಹೊಸಮನುಷ್ಯ ಪ್ರಕಟಗೊಳ್ಳುತ್ತ ಬಂದಿದೆ. ಸೃಜನಶೀಲ ಕಥೆ, ಕವನಗಳಿಗೂ ಇಂಬು ನೀಡಿದೆ. ಭೋಗ ಜೀವನದಲ್ಲಿ ಮೈ ಮರೆತಿರುವ ಮಧ್ಯಮ ವರ್ಗಕ್ಕೆ ಸರಳ ಸಹಜ ಜೀವನ ಕುರಿತು ಎಚ್ಚರಿಕೆ ನೀಡುತ್ತ, ಲೋಹಿಯಾವಾದ, ಸಮಾಜವಾದ, ಗಾಂಧೀವಾದದ ಚಿಂತನೆಗಳ ಮುಂದುವರಿಕೆಯಾಗಿ ಪತ್ರಿಕೆ ಗಮನ ಸೆಳೆದಿದೆ.

ತಮ್ಮ ಟೀಕೆ ಟಿಪ್ಪಣಿಗಳ ಮೂಲಕ ಸಂಪಾದಕರು ಸಾಕಷ್ಟು ಜನರನ್ನು ಕುಟುಕಿದ್ದಾರೆ, ಅವರ ಕಟು ವಿಮರ್ಶೆಗಳಿಂದಾಗಿ ಹಲವು ಲೇಖಕರು, ವ್ಯಕ್ತಿಗಳು ಅಧೀರಗೊಂಡಿರಬಹುದು. ಕೆಲವು ಲೇಖಕರು ದೂರ ಸರಿದಿರಬಹುದು. ಆದರೂ ನಮ್ಮ ಪ್ರಜ್ಞೆಯನ್ನು ಕೆಣಕಲು, ಜಾಗೃತವಾಗಿಡಲು 'ಹೊಸಮನುಷ್ಯ' ಬೇಕೇಬೇಕು.



-ವೆಂಕಟೇಶ ಮಾಚಕನೂರ, ನಿವೃತ್ತ ಶಿಕ್ಷಣ ಆಯುಕ್ತರು, ಲೇಖಕರು, ಧಾರವಾಡ.

ಸಿದ್ಧಾಂತದಿಂದ ಪರ್ಯಾಯ ಸಾಧ್ಯತೆಯತ್ತ

'ಹೊಸ ಮನುಷ್ಯ' ಸಮಾಜವಾದಿ ಸಿದ್ಧಾಂತದ ನೆಲೆಯಲ್ಲಿ ಸಮಾಜವನ್ನು ಕಟ್ಟುವ, ನೋಡುವ ಉದ್ದೇಶವನ್ನು ಇಟ್ಟುಕೊಂಡು ಹುಟ್ಟಿತು. ಆದರೆ, ತನ್ನ ಹತ್ತು ವರ್ಷದ ಪಯಣದಲ್ಲಿ ಹಿಂದೆಂದೂ ಕಾಣದ ಹಲವು ಸವಾಲುಗಳನ್ನು ಎದುರುಗೊಳ್ಳುತ್ತಾ ಹೋದಂತೆ, ಈ ಸವಾಲುಗಳನ್ನು ಎದುರಿಸುವ ಬಗೆಯನ್ನು ಚಿಂತಿಸುತ್ತಲೇ ಪರ್ಯಾಯ ಸಾಧ್ಯತೆಯ ಕಾಳಜಿಯನ್ನು ಮುನ್ನೆಲೆಗೆ ತಂದುಕೊಂಡಿದ್ದನ್ನು ಗಮನಿಸಬಹುದು. ಇದು ಇಂದಿನ ಎಲ್ಲರ ಅನಿವಾರ್ಯ. ಹತ್ತು ವರ್ಷದ ಹಿಂದಿನ ತನಕವೂ ಈ ದೇಶದಲ್ಲಿ ಹುಟ್ಟಿಬೆಳೆದ ಮಹಾನ್ ಚಿಂತಕರ ಆಶಯಗಳನ್ನು ಹೇಗೋ ಮೆಲ್ಲುಸಿರಿನಲ್ಲಾದರೂ ಮುನ್ನೆಲೆಗೆ ತರುವ ಆಶಯದ, ತೀರಾ ದೊಡ್ಡದಲ್ಲವಾದರೂ ತಕ್ಕಮಟ್ಟಿಗಿನ ಸಮೂಹವೊಂದು ಲವಲವಿಕೆಯಲ್ಲಿತ್ತು. ಆದರೆ ಈಗ ಅವೆಲ್ಲವೂ ಸೊರಗಿ ಹೋಗುವ, ಗಾಂಧಿ ಹಂತಕರು ನೇರಾ ನೇರಾ ಅನ್ಯಕೋಮಿನ ಜನರನ್ನು ಸಾಮೂಹಿಕ ಹತ್ಯೆಗೈಯುವಂತೆ ಕರೆಕೊಡುವಷ್ಟು ನಿರ್ಭಿಡೆಯ ವಾತಾವರಣವು ಎಗ್ಗಿಲ್ಲದೆ ಪ್ರಕಾಶಿಸುತ್ತಿದೆ. ಅಂದರೆ, ಸವಾಲು ಮೊದಲೇ ಇದ್ದರೂ ಸವಾಲಿನ ಸ್ವರೂಪ ಬದಲಾಗಿದೆ.

'ಹೊಸ ಮನುಷ್ಯ' ಸೀಮಿತ ಓದುಗರ ವಲಯದಲ್ಲಿ, ಸಮಾನ ಮನಸ್ಕರ ನಡುವೆ ನಮ್ಮನ್ನು ನಾವು ಎಚ್ಚರದಲ್ಲಿ ಇಟ್ಟುಕೊಳ್ಳಲು, ನಮ್ಮೊಳಗೆ ಒಂದು ಚರ್ಚೆ ಹುಟ್ಟಿಹಾಕಿಕೊಳ್ಳಲು, ನಮ್ಮ ಚಿಂತನೆಗಳನ್ನು ಪರಿಶೀಲಿಸಿಕೊಳ್ಳಲು ಅನುವು ಮಾಡಿಕೊಟ್ಟ ಪತ್ರಿಕೆ. ನಾಗಭೂಷಣ ಮತ್ತು ಸವಿತಾರ ಬದ್ಧತೆ, ಕ್ರಿಯಾಶೀಲತೆ ಮತ್ತು ಹಟ ಅಲ್ಲದೇ ಹೋಗಿದ್ದಲ್ಲಿ ಇದು ಇಷ್ಟು ವರ್ಷಗಳ ಕಾಲ ನಡೆಯಲು ಸಾಧ್ಯವಿರಲಿಲ್ಲ. ಇವರೊಂದಿಗೆ ಕೈಜೋಡಿಸಿದ ಗೆಳೆಯರ ಗುಂಪು ಇವರಿಗೆ ಒತ್ತಾಸೆಯಾಗದಿದ್ದಲ್ಲೂ ಇದು ಸಾಧ್ಯವಿರಲಿಲ್ಲ. ಹಲವು ಬರಹಗಾರರಿಂದ ಬರೆಸಿ ಇದನ್ನು ಜೀವಂತವಾಗಿಡುವುದು ಸಾಹಸದ ಕೆಲಸವೇ ಸರಿ. ಈ ಹತ್ತು ವರ್ಷಗಳಲ್ಲಿ ಈ ಪತ್ರಿಕೆಯಲ್ಲಿ ಹಲವು ಹೊಸಬರು ಬರೆದಿದ್ದಾರೆ. ಹಲವು ವಲಯದ ಎಲೆಮರೆಕಾಯಿಗಳ ಪರಿಚಯ ಆಗಿದೆ. ನನಗೆ ವೈಯಕ್ತಿಕವಾಗಿ ಹೊಸಮನುಷ್ಯ ಮುಖ್ಯವೆನಿಸಿದ್ದು, ಅದರಲ್ಲಿ ಬರುತ್ತಿದ್ದ ಸಮಕಾಲೀನ ಚರ್ಚೆ ಮತ್ತು ಅನುವಾದಿತ ಲೇಖನಗಳು ನೀಡುತ್ತಿದ್ದ ಹೊಳಹುಗಳು. ನಾನೇನೂ ಪತ್ರಿಕೆ ಬಂದ ತಕ್ಷಣವೇ ಎಲ್ಲವನ್ನೂ ಓದಿ ಮುಗಿಸುತ್ತಿದ್ದೆ ಎಂದು ಹೇಳಲಾರೆ. ಅದನ್ನು ಇನ್ಯಾವಾಗಲೋ ಓದುತ್ತಿದ್ದೆ. ಹಾಗೆಯೇ ವಿಶೇಷಾಂಕಗಳಿಗಾಗಿ ಬರೆಸುತ್ತಿದ್ದ ಲೇಖನಗಳೂ ಬಹು ಅಮೂಲ್ಯವಾದವು.

ಹಾಗೆಯೇ ಸಮಕಾಲೀನ ಸಂಗತಿಗಳ ಬಗೆಗೆ ಸಂಪಾದಕರ ಟಿಪ್ಪಣಿಗಳ ಸೂಜಿಮೊನೆಯಂತಹ ಬರಹಗಳು, ಬಿಡಿ ಟಿಪ್ಪಣಿಗಳ ವ್ಯಂಗ್ಯಗಳು ಪತ್ರಿಕೆಯ ರಾಜಕೀಯ ನೋಟದ ಪ್ರತೀಕಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನೆಲ್ಲಾ ಪತ್ರಿಕೆಗಳು ಸಾಹಿತ್ಯವನ್ನು ಮೂಲೆಗುಂಪುಗೊಳಿಸಿವೆ. ಒಂದು ಕಾಲದಲ್ಲಿ ಪುಸ್ತಕ ವಿಮರ್ಶೆ ಎಂಬುದು ಗಂಭೀರವಾಗಿ ಓದುಗರನ್ನು ಸೆಳೆಯುವುದು ಮಾತ್ರವಲ್ಲ, ಓದಿನ ಅಭಿರುಚಿಯನ್ನು ಬೆಳೆಸುವ ಕೆಲಸವನ್ನೂ ಮಾಡುತ್ತಿದ್ದವು. ಆದರೆ ಈಗ ಇದು ಪತ್ರಿಕೆಗಳಿಗೆ ಮಾರಾಟದ ಸರಕಲ್ಲ ಅನ್ನಿಸಿರುವುದರಿಂದ ಕೇವಲ ನಾಮಕಾವಸ್ಥೆಯಾಗಿ ಉಳಿದಿವೆ. ಆದರೆ, ಹೊಸ ಮನುಷ್ಯ ಕತೆ, ಕವನಗಳ ಪ್ರಕಟಣೆಯೊಂದಿಗೆ ಕ್ರಮೇಣ ಪುಸ್ತಕ ವಿಮರ್ಶೆಗಳನ್ನು ಹೆಚ್ಚಿಸುತ್ತಾ ಹೋಗಿ ಅದನ್ನು ಗಂಭೀರವಾಗಿ ಪರಿಗಣಿಸಿದ್ದು ಸಾಹಿತ್ಯ, ಸಂಸ್ಕೃತಿ, ರಾಜಕೀಯ ನಿಲುವುಗಳೆಲ್ಲದರ ರುಚಿ ಮತ್ತು ಅಭಿರುಚಿಯ ಪ್ರತೀಕಗಳಂತೆ ಕಾಣಿಸುತ್ತದೆ.

ಹೊಸ ಮನುಷ್ಯದ ಮುಖ್ಯ ಕಾಳಜಿ ಕಾಣುತ್ತಿದ್ದುದು ಮನುಷ್ಯನ ಜೀವನ ಶೈಲಿಯ ಕುರಿತಾಗಿ. ಆಧುನಿಕತೆಯ ಅಪಾಯಗಳನ್ನು ಗ್ರಹಿಸುತ್ತಾ, ಅದು ಅನಿವಾರ್ಯ ಎಂಬಂತೆ ಬಿಂಬಿತವಾದ ಬದುಕಿನ ಕ್ರಮಗಳಿಂದ ಪಾರಾಗದೆ, ನಾವು ಏನನ್ನೂ ಮಾಡಲಾರೆವು ಎಂಬೊಂದು ಎಚ್ಚರಿಕೆಯಲ್ಲಿ ಬದುಕಿನ ಹಲವು ವಲಯ ಮತ್ತು ಲಯಗಳನ್ನು ಇಲ್ಲಿ ಪರಿಶೀಲಿಸಲಾಗುತ್ತಿತ್ತು. ನಮ್ಮ ನುಡಿ, ನಮ್ಮ ಬೇಸಾಯ, ನಮ್ಮ ಆರ್ಥಿಕತೆಗಳನ್ನು ನಾವು ಕಾಪಿಟ್ಟುಕೊಳ್ಳಬೇಕಾದ ಕ್ರಮದ ಚರ್ಚೆ ಇಲ್ಲಿ ನಡೆದಿದೆ. ಇದಕ್ಕೆ ಪೂರಕವೆಂಬಂತೆ ಕುಪ್ಪಳಿಯಲ್ಲಿ ಈ ವರ್ಷ ನಡೆದ "ಪರ್ಯಾಯ ಜೀವನ ಪದ್ಧತಿ" ಎಂಬ ಶಿಬಿರದಲ್ಲಿ ಹೀಗೆ ಬದುಕಿದವರನ್ನೇ ಕರೆಸಿ ನಡೆಸಿದ ಚರ್ಚೆಯ ವರದಿಯು ಹೊಸ ಮನುಷ್ಯ ಪತ್ರಿಕೆಯ ಅಂತಿಮ ಗಮ್ಯ ಯಾವುದು ಎಂಬುದರ ಸೂಚನೆಯನ್ನು ನೀಡುತ್ತಿದೆ. ಇನ್ನಿತರರಂತೆ ಕನ್ನಡ ನುಡಿಯ ಬಗೆಗಿನ ಚಿಂತನೆಯಲ್ಲೂ ಹೀಗೆ ಚಿಂತಿಸಿ ಬದುಕುತ್ತಿರುವ ಡಿ.ಎನ್. ಶಂಕರಬಟ್ಟ ಮೊದಲಾದವರ ಬಗೆಗೆ ಪತ್ರಿಕೆ ಅಷ್ಟೇನೂ ತೆರೆದುಕೊಂಡಿರಲಿಲ್ಲ. ಅದೂ ಆಗಬೇಕಿತ್ತು ಅನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ.

ಹೊಸ ಮನುಷ್ಯದಲ್ಲಿ ನನ್ನಿಂದ ಹಲವು ಬಾರಿ ಸಂಪಾದಕರು ಬರೆಸಿದ್ದಾರೆ. ಅದು ನನಗೆ ಸಂತೋಷದ ಸಂಗತಿಯೂ ಹೌದು. ನಾನಾಗಿ ಬರೆಯುವ ಅಭ್ಯಾಸ ಅಷ್ಟಿಲ್ಲದ ನನ್ನಿಂದ ಹೀಗೆ ಬರೆಸಿದ್ದರಿಂದ ನಾನೂ ಪತ್ರಿಕೆಯ ಲೇಖಕಿ ಅನ್ನಿಸಿಕೊಳ್ಳುವ ಅವಕಾಶ ಸಿಕ್ಕಿದೆ. ಹಲವು ಹೊಸತನ್ನು ಓದುವ ಅವಕಾಶವೂ ನನ್ನದಾಗಿದೆ. ಈ ಆಪ್ತ ಸಂಗತಿಗಾಗಿ ಪತ್ರಿಕೆಯ ಬಳಗಕ್ಕೆ ನನ್ನಿಗಳು.



-ಸಬಿತಾ ಬನ್ನಾಡಿ, ಲೇಖಕಿ ಮತ್ತು ಪ್ರಾಂಶುಪಾಲರು, ಸ.ಪ್ರ.ದ.ಕಾಲೇಜು, ತರೀಕೆರೆ

ನಾಡಿನ ಹಲವು ಧೀಮಂತರ ದನಿಗೆ ವೇದಿಕೆ


ಪ್ರಜಾಪ್ರಭುತ್ವದ ಆಧಾರಸ್ತಂಭಗಳಲ್ಲಿ ನಾಲ್ಕನೆಯದು ಪತ್ರಿಕೆಯೆಂಬ ಮಾಧ್ಯಮ ಎಂದು ಹೇಳಲಾಗಿದೆ. ನಿಜವಾಗಿ ಅದು ವಿಮರ್ಶೆಯ ಹಾಗೂ ಎಚ್ಚರಿಸುವ ಕೆಲಸ ಮಾಡುತ್ತ ಮೊದಲ ಸ್ಥಾನದಲ್ಲಿದ್ದರೆ ಗಣತಂತ್ರ ಸುಸೂತ್ರವಾಗಿ ನಡೆಯಬಹುದು ಉಳಿಯಬಹುದು. ಆದರೆ ಇಂದು ಎಲ್ಲ ವಿಪರೀತವಾಗಿಬಿಟ್ಟಿದೆ, ದಾರಿ ತಪ್ಪಿದೆ, ನಡೆ ಎಡವಿದೆ. ಪತ್ರಿಕೆಯ ಜಾಗದಲ್ಲಿ ದೂರದರ್ಶನ ಎಂಬ ಸಾಮಾಜಿಕ ಮಾಧ್ಯಮ ಬಂದಾಗಲೆ ಅದು ಆಳುವ ಕೈಯನ್ನು ಬಲಪಡಿಸುವ ಸೊತ್ತಾಗಿತ್ತು. ಖಾಸಗಿ ಚಾನಲುಗಳ ದರ್ಬಾರು ಶುರುವಾದಾಗ ಅವು ಬಹುತೇಕ ಪ್ರಭುತ್ವದ ಸಮರ್ಥನೆಗೆ ನಿಂತವು. ಸಾಮಾಜಿಕ ಜಾಲತಾಣಗಳ ಹಾವಳಿ ಹೆಚ್ಚಿದ ನಂತರ ಈ ನಾಲ್ಕನೆಯದು ಸ್ವಂತಿಕೆ ಮತ್ತು ಅರ್ಥ ಎರಡನ್ನೂ ಕಳೆದುಕೊಂಡುಬಿಟ್ಟಿತು. ಬಹುಪಾಲು ಎಲ್ಲ ಬಗೆಯ ಮಾಧ್ಯಮಗಳೂ ಕೇವಲ ಭಟ್ಟಂಗಿಗಳಾಗಿಬಿಟ್ಟವು. ಎಲ್ಲವೂ ಭ್ರಷ್ಟವಾದವು, ಜನರ ಮನಸ್ಸನ್ನು ಭ್ರಷ್ಟಗೊಳಿಸುವಲ್ಲಿ ತಲ್ಲೀನವಾದವು.

ಇಂತಹ ಸಂದರ್ಭದಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಹತ್ತು ವರ್ಷಗಳ ಹಿಂದೆ ಮೂಡಿಬಂದ ಜನರ ನಿಜದನಿ ಹೊಸಮನುಷ್ಯ. ಪ್ರಖರ ಸಮಾಜವಾದಿ ಚಿಂತಕ ಶ್ರೀ ಡಿ. ಎಸ್. ನಾಗಭೂಷಣ ಅವರು ತಮ್ಮ ನಡು ಮತ್ತು ಇಳಿ ವಯಸ್ಸಿನ ಪೂರ್ಣ ಸಮಯವನ್ನು ಈ ಪತ್ರಿಕೆಗಾಗಿ ಮೀಸಲಿಟ್ಟವರಂತೆ ಛಲತೊಟ್ಟು ಇದನ್ನ ಮುನ್ನಡೆಸುತ್ತಿದ್ದಾರೆ. ಶ್ರೀಮತಿ ಸವಿತಾ ನಾಗಭೂಷಣ ಅವರು ಇವರಿಗೆ ಹೆಗಲೆಣೆಯಾಗಿ ಸಾಥ್ ನೀಡಿದ್ದಾರೆ. ಅವರ ಅವಿರತ ಶ್ರಮಕ್ಕೆ ಮೊದಲು ಶರಣು ಎನ್ನುತ್ತೇನೆ. ಸದ್ಯ ಇದೊಂದೇ ಕನ್ನಡದಲ್ಲಿ ಇರುವ ಈ ಬಗೆಯ ನಿಷ್ಠುರ ಜೀವಂತ ಪತ್ರಿಕೆ.

ಹೊಸ ಮನುಷ್ಯದ ಹತ್ತು ವರ್ಷಗಳ ಹೆಜ್ಜೆ ಗುರುತುಗಳು ಪ್ರಖರವಾಗಿವೆ. ನನ್ನಂತಹ ಹಲವು ಮಂದಿ ಓದುಗರ ಮನಸ್ಸಿನಲ್ಲಿ ಭರವಸೆಯ ಹಸುರನ್ನು ಬಿತ್ತಿ ಬೆಳೆಸಿದೆ. ಈ ಹತ್ತು ವರ್ಷಗಳಲ್ಲಿ ನಾಡಿನ ಸಮಕಾಲೀನ ಸಮಸ್ಯೆಗಳನ್ನು ವಿವಿಧ ಮಗ್ಗುಲುಗಳಲ್ಲಿ ಬಿಡಿಸಿ ತೋರಿಸಿದೆ, ವರ್ತಮಾನದ ತಲ್ಲಣಗಳಿಗೆ ದನಿಯಾಗಿದೆ. ರಾಜಕೀಯ ಸಾಮಾಜಿಕ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಹರಿತವಾಗಿ ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದೆ. ಜಾಗತೀಕರಣದ ಬೆಡಗಿನ ಹಿಂದಿರುವ ಕಟು ವಾಸ್ತವವನ್ನು ತೆರೆದು ತೋರಿಸಿದೆ. ರಾಜಕಾರಣಿಗಳ ಮೋಸದಾಟಗಳನ್ನು ಪಕ್ಷಭೇದವಿಲ್ಲದೆ ಮತ್ತು ಯಾವುದೇ ಹಿಂಜರಿಕೆ ಮರೆ ಮುಲಾಜಿಲ್ಲದೆ ವಿಮರ್ಶಿಸಿ ಬಯಲುಗೊಳಿಸಿದೆ. ದೇಶವನ್ನು ಅಧೋಗತಿಗೆ ತಂದಿರಿಸಿದ ಹಿಂದುತ್ವ ರಾಜಕಾರಣದ ಅಸಲು ಸಂಗತಿಗಳನ್ನು ಧೈರ್ಯದಿಂದ ಎಳೆಯೆಳೆಯಾಗಿ ಬಿತ್ತರಿಸಿದೆ.

ನಿರ್ಭಿಡೆಯ ಬರವಣಿಗೆಯ ಸಂಪಾದಕೀಯ, ರಾಜಕೀಯ ಆರ್ಥಿಕ ಸಾಮಾಜಿಕ ಹಾಗೂ ಪರಿಸರ ಸಂಬಂಧೀ ವಿಶ್ಲೇಷಣೆಗಳು, ಮರೆತ ಹಲವು ಮಂದಿ ಸಮಾಜವಾದಿ ಹೋರಾಟಗಾರರ ಪರಿಚಯ, ಸಹಸ್ಪಂದನೆಯ ಕತೆ ಕವಿತೆಗಳು, ಹೊಸ ಪುಸ್ತಕಗಳ ವಿಮರ್ಶೆ, ಆಯಾ ಸಂದರ್ಭಗಳಲ್ಲಿ ಘಟಿಸಿದ ಸಾಂಸ್ಕೃತಿಕ ಸಂಗತಿಗಳ ವಿಮರ್ಶಾತ್ಮಕ ನೋಟ ಹೀಗೆ ಹಲವು ಮಗ್ಗಲುಗಳಲ್ಲಿ ಹೊಸ ಮನುಷ್ಯ ತೆರೆದುಕೊಂಡಿದೆ. ನಮ್ಮ ಸಂವಿಧಾನ, ಸೆಕ್ಯೂಲರಿಸಮ್, ಅಯೋಧ್ಯೆಯ ತೀರ್ಪು, ರಾಷ್ಟ್ರೀಯತೆ, ಹಾಗೂ ಗಾಂಧಿ ಅಂಬೇಡ್ಕರ್ ಲೋಹಿಯಾ ಚಿಂತನೆಗಳು ಮುಂತಾದ ವಿಷಯಗಳ ಕುರಿತು ಈ ಪತ್ರಿಕೆ ನಡೆಸಿದ ಸಂವಾದಗಳು, ಪ್ರಕಟಿಸಿದ ಹಲವು ಮಂದಿ ಧೀಮಂತರ ಬರಹಗಳು ಬಹಳ ಮೌಲಿಕವಾಗಿದ್ದವು, ಓದುಗರನ್ನು ಚಿಂತನೆಗೆ ಹಚ್ಚುತ್ತಿದ್ದವು. ಇವೆಲ್ಲಕ್ಕೂ ಶಿಖರಪ್ರಾಯವಾಗಿ ನನಗೆ ಹೆಚ್ಚು ಇಷ್ಟವಾದ ಬರವಣಿಗೆ ಎಂದರೆ ನಾಗಭೂಷಣರ ಸಂಪಾದಕೀಯ ಬರಹಗಳು. ಒಬ್ಬ ನಿರ್ಭೀತ ಹಾಗೂ ಪ್ರಾಮಾಣಿಕ ಪತ್ರಕರ್ತ ಹೇಗೆ ದೇಶದ ಆಗುಹೋಗುಗಳ ಕುರಿತು ಸ್ಪಂದನಶೀಲತೆಯಿಂದ ಪ್ರತಿಕ್ರಿಯೆ ವ್ಯಕ್ತಪಡಿಸಬಹುದು ವಿಮರ್ಶೆಯ ನೋಟದಿಂದ ಹೇಗೆ ಓದುಗರ ಕಣ್ಣು ತೆರೆಯಿಸಬಹುದು ಎನ್ನುವುದಕ್ಕೆ ಇವು ಅನನ್ಯ ಉದಾಹರಣೆಗಳು.

ಈ ಎಲ್ಲ ಬಗೆಯ ಬರಹಗಳ ಜೊತೆಗೆ ಆಗಾಗ ಹಲವು ನಾಟಕ ಹಾಗೂ ರಂಗಪ್ರಯೋಗಗಳ ವಸ್ತುನಿಷ್ಠ ವಿಮರ್ಶೆಯನ್ನು ಕೂಡ ಈ ಪತ್ರಿಕೆ ಪ್ರಕಟಿಸುತ್ತಾ ಬಂದಿದೆ. ಶಿವಮೊಗ್ಗ ಸುತ್ತಮುತ್ತ, ವಿಶೇಷವಾಗಿ ಶಿವಮೊಗ್ಗದ 'ರಂಗಾಯಣ' ಮತ್ತು ಹೆಗ್ಗೋಡಿನಲ್ಲಿ ನಡೆಯುವ ನೀನಾಸಂ ವಾರ್ಷಿಕ ಸಂಸ್ಕೃತಿ ಶಿಬಿರ ಮತ್ತು ಹಲವು ರಂಗಪ್ರದರ್ಶನಗಳ ಬಗೆಗೆ ಮುಲಾಜಿಲ್ಲದ ಮೌಲಿಕ ಟಿಪ್ಪಣಿಗಳನ್ನು ಮಾಡಿದೆ.



'ಹೊಸ ಮನುಷ್ಯ' ಇನ್ನೂ ಹಲವು ಕಾಲ ಹೀಗೆಯೆ ನಮ್ಮ ಕಣ್ಣು ಹಾದಿ ತಪ್ಪದಂತೆ ತನ್ನ ಕಾಯಕ ಮುನ್ನಡೆಸಲಿ ಮತ್ತು ಹೀಗೆ ನಡೆಸುವ ಆಯುರಾರೋಗ್ಯ ಶ್ರೀ ನಾಗಭೂಷಣ ದಂಪತಿಗಳಿಗೆ ಲಭಿಸಲಿ ಎಂದು ನನ್ನ ಪ್ರೀತಿಯ ಹಾರೈಕೆ.


–ಬಿ.ಆರ್. ವೆಂಕಟರಮಣ ಐತಾಳ, ಹಿರಿಯ ರಂಗಕರ್ಮಿ

ಸರಳ ಸಹಜ ಪತ್ರಿಕೋದ್ಯಮದ ಮಾದರಿ

ಪ್ರೌಢಶಾಲೆಯಲ್ಲಿದ್ದಾಗ ವಿವಿಧ ನುಡಿಗಳ ಐದಾರು ದಿನಪತ್ರಿಕೆಗಳನ್ನು ಹಾಗೂ ನಾಲ್ಕೈದು ನಿಯತಕಾಲಿಕಗಳನ್ನು ಓದುತ್ತಿದ್ದೆ. ಪದವಿ ಮುಗಿಯುತ್ತಿದ್ದಂತೆ ಪತ್ರಿಕಾಮಾಧ್ಯಮದ ಸೆಳೆತದಿಂದಾಗಿ ಪತ್ರಿಕೆಯೊಂದರ ಅರೆಕಾಲಿಕ ಸುದ್ದಿಸಂಗ್ರಾಹಕನಾಗಿ ನೇಮಕಗೊಂಡೆ. ಒಂದೆರೆಡು ವರುಷಗಳು ಉದರನಿಮಿತ್ತ ಅನೇಕಾನೇಕ ಇತರ ಕೆಲಸಗಳೊಂದಿಗೆ ವರದಿಗಾರಿಕೆಯನ್ನು ಅಷ್ಟಿಷ್ಟು ನಿಭಾಯಿಸುತ್ತಿರುವಾಗಲೇ ನೌಕರಿ ಸಿಕ್ಕಿದ್ದರಿಂದ ಊರು ಬಿಡಬೇಕಾಯಿತು. ಅದರೊಂದಿಗೆ ವರದಿಗಾರಿಕೆಯನ್ನು ಬಿಟ್ಟೆ.

ಮುಂದೆ ಬದಲಾದ ಜೀವನಕ್ರಮದಿಂದಾಗಿ ಒಂದೇ ಪತ್ರಿಕೆಯನ್ನು ಓದುತ್ತಿದ್ದೆ. ನಿಯತಕಾಲಿಕಗಳ ಗೊಡವೆಗೆ ಹೋಗಲಿಲ್ಲ. ಜಾಗತೀಕರಣದ ಪ್ರಭಾವದಿಂದಾಗಿ ದೃಶ್ಯಮಾಧ್ಯಮದ ಜಡಿಮಳೆ ಸುರಿಯಲಾರಂಭಿಸಿದಾಗ ಆ ಬೆರಗಿಗೆ ನಾನೂ ಒಳಗಾದೆ. ಮುಂದೆ ಸಾಮಾಜಿಕ ಮಾಧ್ಯಮಗಳ ಸುಳಿಯಲ್ಲಿ ಸಿಕ್ಕು ಸುತ್ತುತ್ತಿರುವ ಸಮಯದಲ್ಲಿ ಸ್ವಾತಂತ್ರ್ಯಸಂಗ್ರಾಮದ ಮುಖ್ಯಭೂಮಿಕೆಯಲ್ಲಿದ್ದ ಗಾಂಧೀಜಿ ಹಾಗೂ ನೆಹರೂರವರ ಕುರಿತು ಸುದ್ದಿಗಳ ಮಹಾಪೂರವೇ ಹರಿಯಲಾರಂಭಿಸಿತು. ಇದು ನಾನು ತಿಳಿದಿದ್ದ ಚರಿತ್ರೆಗಿಂತ ಬಹುಭಿನ್ನವಾಗಿತ್ತು. ಆ ಸುದ್ದಿಗಳಲ್ಲಿ ಬಹುತೇಕವು ಅರ್ಧಸತ್ಯ ಹಾಗೂ ಪಕ್ಷ ರಾಜಕಾರಣದ ಕುತಂತ್ರಗಾರಿಕೆಯ ಭಾಗಗಳೆಂದು ತಿಳಿದಿದ್ದರೂ, ಸ್ಪಷ್ಟಪಡಿಸಿಕೊಳ್ಳಲು ಈ ಮೊದಲು ಓದಿರುವ ಬಿಡಿ ಲೇಖನಗಳನ್ನೇ ನಾನು ನೆನಪಿಸಿಕೊಳ್ಳಬೇಕಾಗಿತ್ತು. ವರ್ತಮಾನದ ಪತ್ರಿಕೆಗಳಲ್ಲಿ ಯಾವುದನ್ನು ನೆಚ್ಚಲಿ ಎನ್ನುವ ಸಂಕಷ್ಟ ಎದುರಾಗಿತ್ತು. ಸುಳ್ಳುಸುದ್ದಿಗಳ ಆರ್ಭಟದ ಸಂಕಟದ ಸಮಯದಲ್ಲೇ 'ಗಾಂಧಿ ಕಥನ' ಕೃತಿ ಬಿಡುಗಡೆಯಾದದ್ದನ್ನು ತಿಳಿದು, ಅದನ್ನು ಓದಿ ನನ್ನಲ್ಲಿರುವ ಚಿಂತನೆಗಳಿಗೆ ಸ್ಪಷ್ಟತೆ ಬೆಳೆಸಿಕೊಂಡೆ. ಆಗಲೇ ನನಗೆ 'ಹೊಸ ಮನುಷ್ಯ' ಪತ್ರಿಕೆ ಪರಿಚಯವಾದದ್ದು. 'ಹೊ.ಮ' ಮಾಸಿಕದ ಪುಟಗಳನ್ನು ತಿರುವಿದಂತೆ ಪತ್ರಿಕೆಯ ಮೌಲ್ಯ ಗೊತ್ತಾಗಿ ತಕ್ಷಣ ಚಂದಾದಾರನಾದೆ. 'ಗಾಂಧಿ ಕಥನ'ದ ದೆಸೆಯಿಂದ 'ಹೊ.ಮ' ನನ್ನು ಓದಲು ಪ್ರಾರಂಭಿಸಿದೆ. ಪತ್ರಿಕೆಯ ಆಪ್ತ ಗೆಳೆತನವನ್ನು ಗಾಂಧೀಜಿಯೇ ಮಾಡಿಸಿರುವುದೆಂದು ನಾನು ನಂಬಿ ಮುನ್ನಡೆದೆ.

'ಹೊ.ಮ' ನಲ್ಲಿ ಪ್ರಕಟಗೊಳ್ಳುತ್ತಿದ್ದ ವಸ್ತುನಿಷ್ಠ ಸಕಾಲಿಕ ಲೇಖನಗಳನ್ನು ಓದಿ ನನ್ನ ನಿಲುವುಗಳು ಮತ್ತಷ್ಟು ಭದ್ರವಾದವು. ಕೋಮುವಾದಿ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳನ್ನು ಒಪ್ಪದ ಎದುರುಬದುರಿನ ಪಂಥಗಳು ಹೇಗೆ ಭಯಬಿತ್ತುವ ಸಂಕಥನಗಳನ್ನು ಸೃಷ್ಟಿಸುತ್ತವೆ ಹಾಗೂ ಹಿಂಬದಿಯಿಂದ ಒಂದಕ್ಕೊಂದು ಹೇಗೆ ಕೈಜೋಡಿಸಿವೆ ಎಂಬುವುದರ ಹೊಳಹುಗಳು ನನಗೆ ದೊರೆಯಲಾರಂಭಿಸಿದವು. ನಮ್ಮ ನೆಲಕ್ಕೆ ಒಗ್ಗುವ ಹಾಗೂ ಎಲ್ಲರನ್ನೂ ಒಳಗೊಳ್ಳುವ ಸಮಾಜವಾದವು ಹೇಗಿರಬೇಕೆನ್ನುವ ಅರಿವು ನನಗಾಯಿತು. ಒಳಕಾರ್ಯಸೂಚಿಗಳಿಲ್ಲದ ಖುಲ್ಲಂಖುಲ್ಲಾ ಸತ್ಯದ ದಾರಿಯಲ್ಲಿ ಹೇಳುವ ಎದೆಗಾರಿಕೆಯುಳ್ಳ ಪಾರದರ್ಶಕ ಸಂಪಾದಕೀಯಗಳು ಪತ್ರಿಕೆಗೆ ಮುಕುಟಪ್ರಾಯವಾಗಿದ್ದವು. ವಿಶ್ವ ಹಾಗೂ ರಾಷ್ಟ್ರಮಟ್ಟದ ಮೌಲ್ಯಭರಿತ ವಿಶ್ಲೇಷಣಾತ್ಮಕ ಲೇಖನಗಳ ಸಮರ್ಪಕ ಕನ್ನಡಾನುವಾದ, ಕಥೆ, ಕವನಗಳಿಗೆ ಚಿತ್ರಿಸಿದ್ದ ಅರ್ಥಪೂರ್ಣ ರೇಖಾಚಿತ್ರಗಳು, ಸೃಜನಶೀಲ ಸಾಹಿತ್ಯದ ಪುಸ್ತಕಗಳ ಪರಿಚಯ/ವಿಮರ್ಶೆ, ಬಿಡಿ ಟಿಪ್ಪಣಿಯ ಚುಟುಕು ಕುಟುಕುಗಳು ಹಾಗೂ ಹಣ್ಣೋಟಕ್ಕೆ ಸಿಕ್ಕ ಮನ್ನಣೆ ಪತ್ರಿಕೆಗೆ ಮೆರಗನ್ನು ತಂದಿದ್ದವು. ಆಯಾ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿರುವವರ ಸ್ವಾಯತ್ತ ಲೇಖನಗಳು ಬಹಳಷ್ಟು ಹಿಡಿಸಿದವು. ಎರಡು ವರುಷಗಳಕಾಲದ ಪತ್ರಿಕೆಯೊಂದಿಗಿನ ಸಂಬಂಧ ಅವಿನಾಭಾವದ್ದಾಗಿತ್ತು. ಬಣ್ಣಗಳಿಂದ ವಂಚಿಸಿ ವಿನಾಕಾರಣ ಹೊಸಹೊಸ ಪುಟ ವಿನ್ಯಾಸಗಳಿಂದ ಓದುಗರನ್ನು ಸೆಳೆಯುವ ಯಾವ ಪ್ರಯತ್ನವನ್ನು ಮಾಡದಿರುವುದು ಹಾಗೂ ಜಾಹೀರಾತುದಾರರ ಹಂಗಿಗೆ ಒಳಗಾಗದೆಯಿರುವ ಸರಳ ಸಹಜತೆಯ ಗುಣಗಳು ಪತ್ರಿಕೋದ್ಯಮಕ್ಕೆ ಮಾದರಿಯಾಗಿವೆ. ಹೆಸರಿಗೆ ತಕ್ಕಂತೆ ಸದಾ ಹೊಸತನ್ನು ಹಾಗೂ ಭಿನ್ನತೆ ಕೊಡುವ ಪತ್ರಿಕೆಯ ಶ್ರಮ ನನಗೆ ಹಿಡಿಸಿತು. ಕೃಷಿ, ಪರಿಸರ, ಸಹಜ ಜೀವನ ಕ್ರಮ, ಸಾಮಾಜಿಕ ನ್ಯಾಯ, ಅಂಬೇಡ್ಕರ್, ಜಾಗತೀಕರಣ, ಶಿಕ್ಷಣ ಹೀಗೆ ಎಲ್ಲವನ್ನು ಒಳಗೊಂಡ ಲೇಖನಗಳ ಭರಪೂರ ವಿಶ್ಲೇಷಣೆಗಳನ್ನು ಓದಿದೆ. ರೈತ ನಾಯಕರು ಬರೆದ ಲೇಖನಗಳಲ್ಲಿ ಅವರಿನ್ನೂ ಕೃಷಿಕನ ಸಂಕಷ್ಟಗಳ ಮೂಲ ತೊಡಕನ್ನು ಕಂಡುಕೊಂಡಿಲ್ಲದ್ದು ವ್ಯಕ್ತವಾಗಿತ್ತು. ರೈತ ನಾಯಕರು ಬರೀ ಸರಕಾರಗಳ ವಿರುದ್ಧ ಬೊಟ್ಟುಮಾಡುವತ್ತ ತಮ್ಮ ಚಿತ್ತ ನೆಟ್ಟು ಸ್ವತಃ ರೈತರು ತಾವು ಏನು ಮಾಡಬೇಕು? ಎಂಬ ಆತ್ಮವಿಮರ್ಶೆ ಎಲ್ಲಿಯೂ ಕಾಣಲಿಲ್ಲ. ಪತ್ರಿಕೆಯಲ್ಲಿ ಪ್ರಕಟಗೊಂಡ ವರ್ತಮಾನದ ವಸ್ತುನಿಷ್ಠ ಅಭಿಮತಗಳು ಸಮಕಾಲಿನ ಚರಿತ್ರೆಯ ದಾಖಲೆಗಳನ್ನಾಗಿ ನಾವು ಕಾಯ್ದಿಡಲು ಯೋಗ್ಯವಾಗಿವೆ. ಪತ್ರಿಕೆಯ ಯಶಸ್ಸಿಗೆ ಬರೀ ಸಂಪಾದಕರೇ ಕಾರಣರಾಗರು. ಹಿಂದೆ ಸಮಾನಮನಸ್ಕ ಪ್ರತಿಭೆಗಳಿರುತ್ತವೆ. ಹಾಗೆಯೇ ಓದುಗರ ಪ್ರತಿಕ್ರಿಯೆಗಳು ಪತ್ರಿಕೆಯು ತನ್ನ ಸ್ಪಷ್ಟ ಗುರಿ ಹಾಗೂ ನಿಖರವಾದ ದಾರಿಯಲ್ಲಿ ಸಾಗುತ್ತಿದೆಯೆ ಎಂಬುದನ್ನು ನಿರ್ಧರಿಸಿಕೊಳ್ಳುವ ದಿಕ್ಸೂಚಿಯಾಗಿದೆ. ಪ್ರತಿಕ್ರಿಯೆಗಳ ನೇರ ಮೌಲ್ಯಮಾಪನದ ಸಂವಹನಗಳ ಹುರುಪು ಪತ್ರಿಕೆಯನ್ನು ಮತ್ತಷ್ಟು ಬೆಳೆಸಿತೆನ್ನಬಹುದು.



–ಮಹಾಂತೇಶ ಗಂಗಯ್ಯ ಓಶಿಮಠ, ಲೇಖಕರು, ಕೈಗಾ (ಉ.ಕ.)

ಅರಿವು ಮತ್ತು ಸ್ನೇಹ ಸಂಬಂಧಗಳ ವಿಸ್ತರಣೆ

'ಹೊಸ ಮನುಷ್ಯ' ಪತ್ರಿಕೆ ಶುರುವಾದಾಗಿನಿಂದ ಈವರೆವಿಗೂ ಓದುತ್ತಾ ಬಂದಿರುವೆ. ಪ್ರತಿ ಸಂಚಿಕೆಯೂ ಸಂಗ್ರಹಯೋಗ್ಯವಾಗಿದೆ.

ಪತ್ರಿಕೆ ಬಂದ ಕೂಡಲೇ ನಾನು ಮೊದಲು ಓದುವುದು ಸಂಪಾದಕರ ಟಿಪ್ಪಣಿ ಮತ್ತು ನವಿಲು ಗರಿಯ ಕವಿತೆಗಳನ್ನು. ಕವಿತೆಗಳ ಜೊತೆಗಿನ ಚಿತ್ರಗಳಂತೂ ಬಲು ಚೆಂದ. ಅನವಶ್ಯಕವಾಗಿ ಯಾರನ್ನೂ ಮೆಚ್ಚುವ, ಮೆಚ್ಚಿಸುವ ಗೋಜಿಗೆ ಹೋಗದ ನೀವು, ಸಂಪಾದಕರ ಟಿಪ್ಪಣಿಯಲ್ಲಿ ಹೇಳಬೇಕಾದ್ದನ್ನು ನಿಖರವಾಗಿ ಹೇಳುವಿರಿ. ಅದು ಪ್ರಸಕ್ತ ರಾಜಕಾರಣ ಇರಲಿ, ಪ್ರಸ್ತುತ ಬೇರೆ ಯಾವುವೇ ವಿದ್ಯಾಮಾನಗಳಿರಲಿ, ಇಷ್ಟೂ ವರ್ಷಗಳಲ್ಲಿ ನಿಮ್ಮ ಸಂಪಾದಕರ ಟಿಪ್ಪಣಿಯ ಬರವಣಿಗೆಯ ಮೊನಚು ಮೊಂಡಾಗಿಲ್ಲ. ಆದರೆ ಸಂಪಾದಕರ ಟಿಪ್ಪಣಿಯಡಿ ಬೀಸಿದ ಚಾಟಿ ಏಟಿಗೆ ನಂತರ ನವಿಲುಗರಿಯ ನವಿರು ಸ್ಪರ್ಶ!

ವರ್ತಮಾನದ ತಲ್ಲಣಗಳಿಗೆ ಪತ್ರಿಕೆ ಸ್ಪಂದಿಸುವ ರೀತಿ ಅನನ್ಯವಾಗಿದೆ, ಮಾನವೀಯವಾಗಿದೆ. ನಾಡು, ನುಡಿ, ಸಂಸ್ಕೃತಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ ಬೇರೆ ಭಾಗಗಳ ಆಯ್ದ ಲೇಖಕರಿಗೆ ಪ್ರಶ್ನೆಗಳ ಕೊಟ್ಟು ಅಭಿಪ್ರಾಯಗಳನ್ನು ತರಿಸಿಕೊಂಡು ಚರ್ಚೆಯ ರೂಪದಲ್ಲಿ ಪ್ರಕಟಿಸುತ್ತಾ ಬಂದಿರುವುದು ಮೆಚ್ಚುವಂತಹದು. ಸಾಹಿತ್ಯ ,ಸಂಸ್ಕೃತಿ ಮತ್ತು ವೈಚಾರಿಕ ಟಿಪ್ಪಣಿಗಳು, ಪುಸ್ತಕ ವಿಮರ್ಶೆ ಹೀಗೆ ಪತ್ರಿಕೆಯಲ್ಲಿನ ಯಾವುದೇ ಬರಹಗಳಲ್ಲಿ ಯಾವ ಪಕ್ಷಪಾತ ಇರದೇ ಸಮಚಿತ್ತದ ವಿಶ್ಲೇಷಣೆ ಇರುತ್ತದೆ.

ಗಾಂಧಿ ಮತ್ತು ಅಂಬೇಡ್ಕರ್‌ರವರ ಚಿಂತನೆಗಳನ್ನು ಒಟ್ಟೊಟ್ಟಿಗೆ ಕೊಂಡೊಯ್ಯುವ ಅಗತ್ಯವನ್ನೂ, ಲೋಹಿಯಾ, ಕುವೆಂಪುರವರ ವಿಚಾರಗಳನ್ನು ನಮ್ಮ ಹಾದಿಗೆ ಬೆಳಕಾಗಿಸಿಕೊಳ್ಳಬೇಕಾದ ಬಗೆಯನ್ನು, ಸರಳ ಸುಂದರ ಬದುಕನ್ನು ರೂಪಿಸಿಕೊಂಡು ಪ್ರಕೃತಿಯ ಜೊತೆಗೆ ನಡೆಯಬೇಕಾದ ಅನಿವಾರ್ಯತೆಯನ್ನು ಪತ್ರಿಕೆ ಕಲಿಸುತ್ತದೆ.

ಇಷ್ಟು ವರ್ಷದ 'ಹೊಸಮನುಷ್ಯ' ಪತ್ರಿಕೆಯ ಓದು ನನಗೆ ಕೊಟ್ಟದ್ದೇನು? ಎಂದು ಕೇಳಿದರೆ ನನ್ನ ಉತ್ತರ, ಅರಿವು ಮತ್ತು ಸ್ನೇಹ ಸಂಬಂಧಗಳ ವಿಸ್ತರಣೆ.



ಪತ್ರಿಕೆಯ ಪ್ರಕಟಣೆ ನಿಲ್ಲಿಸುವುದಾಗಿ ಹೇಳುತ್ತಿರುವಿರಿ. ನಿಮ್ಮ ಅನಾರೋಗ್ಯದ ನಡುವೆಯೂ, ಒಂದು ದಶಕದಿಂದ ಪತ್ರಿಕೆ ತಂದ ನಿಮ್ಮ ಶ್ರಮಕ್ಕೆ ನಮನಗಳು. ಒಂದು ಕಾಲಘಟ್ಟದ ಮನಸುಗಳನ್ನು, ಸಮಾಜವಾದಿ ಚಿಂತನೆಯ ಹಿನ್ನೆಲೆಯಲ್ಲಿ, ಮಾನವೀಯವಾಗಿ ರೂಪಿಸುತ್ತಿರುವ ಪತ್ರಿಕೆ ನಿಲ್ಲುವುದು ಬೇಡ. ಯಾವ ರೂಪದಲ್ಲಾದರೂ ಅದು ಬರಲಿ.


–ಮಲ್ಲಿಕಾ ಬಸವರಾಜು, ಲೇಖಕಿ, ತುಮಕೂರು

ಕಾಂಗ್ರೆಸ್ ಪುನರುಜ್ಜೀವನ ಏಕೆ? ಹೇಗೆ?

ಪ್ರಸ್ತುತ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿ, ಗಾಂಧೀಜಿಯವರ ತ್ಯಾಗ, ಮುಂತಾದುವುಗಳನ್ನು ಇಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡದೇ ಯಾವುದೇ ರಚನಾತ್ಮಕ ಕಾರ್ಯಕ್ರಮಗಳಿಲ್ಲದೆ ಅಧಿಕಾರಕ್ಕಾಗಿ ರಾಜಕಾರಣ ಮಾಡಿದ ನಾಯಕರ ತಪ್ಪು ನಡೆಗಳಿಂದಾಗಿ ಇಂದು ಬೌದ್ಧಿಕ ದಾರಿದ್ರ್ಯತೆಯಿಂದ ಬಳಲುತ್ತಿರುವ ಕಾಂಗ್ರೆಸ್ ಶೋಚನೀಯ ಹಂತ ತಲುಪಿದೆ. ಇಂದು ಜನತೆಯಿಂದ ಅಧಿಕಾರ ಪಡೆದ ಆಳುವ ಪಕ್ಷ ಯಾವುದೇ ನಿಜವಾದ ರಚನಾತ್ಮಕ ಕಾರ್ಯಗಳ ಮೂಲಕ ತಾನು ಭಿನ್ನವೆಂದು ತೋರಿಸದೆ ಕಾಂಗ್ರೆಸ್(ಗಾಂಧಿ) ಮುಕ್ತ ಭಾರತಕ್ಕಾಗಿ ತಹತಹಿಸುತ್ತಿದೆ. ಅದಕ್ಕೆ ಕಾರಣ ಅದು ಗಾಂಧಿ ಎಂಬ ಎರಡು ಅಕ್ಷರಗಳಿಗೆ ಭಯಪೀಡಿತವಾಗಿರುವುದು.

ನಿಜ, ಗಾಂಧಿಗೆ ಸಂಬಂಧವೇ ಇಲ್ಲದ ಬೇರೋರ್ವ ಗಾಂಧಿಯ ಕೌಟುಂಬಿಕ ಹಿನ್ನೆಲೆಯಿಂದ ಗಾಂಧಿ ಹೆಸರು ಪಡೆದ ವ್ಯಕ್ತಿಗಳು ಕಾಂಗ್ರೆಸ್ ಸಾರಥ್ಯ ವಹಿಸಿರುವುದು ಆಡಳಿತ ಪಕ್ಷಕ್ಕೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದರ ಮುಖ್ಯ ಗುರಿ ಗಾಂಧಿಮುಕ್ತ ಭಾರತವೆಂಬುದನ್ನು ಮರೆಯಲಾಗದು. ಭಾರತದಲ್ಲಿ ಇದು ಎಂದಿಗೂ ಸಾಧ್ಯವಾಗಲಾರದು ಎಂಬುದಕ್ಕೆ ಗಾಂಧೀಜಿಯವರ ಗುರಿ ಮತ್ತು ದಾರಿ ನ್ಯಾಯಯುತವಾಗಿದ್ದು ಇದನ್ನು ಅನುಸರಿಸಿ ನಡೆದ ರೈತ ಚಳುವಳಿ ತನ್ನ ಸಂಕಲ್ಪ ಸಾಧಿಸಿದ್ದು ನಮ್ಮೆದುರಿಗಿದೆ. ಇಲ್ಲಿ ವ್ಯಕ್ತಿಗಳು ಅಥವಾ ನಾಯಕರು ಮುಖ್ಯವಾಗಲಿಲ್ಲ ಎಂಬುದನ್ನು ಗಮನಿಸಬೇಕು.

ಕಾಂಗ್ರೆಸ್ ಪಕ್ಷವು ಪ್ರಸ್ತುತ ಸಂದರ್ಭದಲ್ಲಿ ಅಲ್ಪಸಂಖ್ಯಾತ ಮತಧರ್ಮಗಳ ಓಲೈಕೆ ತೊರೆದು ದೇಶದ ಬಹುಸಂಖ್ಯಾತ ಜನತೆಯ ಹಿಂದೂ ಧರ್ಮದ ಮೈದಾನವನ್ನು ಅನ್ಯರಿಗೆ ಬಿಟ್ಟುಕೊಡದೇ ಗಾಂಧಿ ಮಾರ್ಗದಲ್ಲಿ ಎಂತವೇ ಟೀಕೆಗಳು ಬಂದರೂ, ಗಾಂಧೀಜಿಯವರು ನಾನೊಬ್ಬ ಹೆಮ್ಮೆಯ ಹಿಂದೂ ಎನ್ನುತ್ತಿದ್ದರು ಎಂಬುದನ್ನು ಗಮನಿಸಿ ಮುನ್ನಡೆಯಬೇಕಾಗಿದೆ. ಗಾಂಧೀಜಿಯವರ ರಕ್ತ–ಮಾಂಸಗಳನ್ನು ಗೊಬ್ಬರವಾಗಿ ಪಡೆದ ಕಾಂಗ್ರೆಸ್ ಮರ ತನ್ನ ನಾಯಕ ಗಣದ ತಪ್ಪುಗಳಿಂದಾಗಿ ಇಂದು ಬಾಡಿರಬಹುದು. ಆದರೆ 'ಅಸ್ತಂಗತವಾಗದು–ಆಗಲಾರದು'. ಇದು ಭಾರತೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ದೃಷ್ಟಿಯಿಂದ ಅತೀ ಮುಖ್ಯ.



–ಅಜ್ಜಪ್ಪ ಬಿರಡಿ, ರೈತರು, ಗೋಕಾಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಯಶಸ್ವಿಯಾಗಿ ಹತ್ತನೇ ವರ್ಷ ಪೂರೈಸಿದ ಜನವರಿ ತಿಂಗಳ 'ಹೊಸ ಮನುಷ್ಯ' ಸಂಚಿಕೆ ನಮ್ಮಂಥವರ ಮನಸ್ಸಿನ ಮಾತುಗಳನ್ನು ಅಕ್ಷರ ರೂಪದಲ್ಲಿ ದಾಖಲಿಸಿದೆ. ಪತ್ರಕರ್ತ ಶೇಖರ್ ಗುಪ್ತರನ್ನು ಕೇಂದ್ರವಾಗಿಟ್ಟುಕೊಂಡು ಮಾಧ್ಯಮ ಲೋಕದ ಇತ್ತೀಚಿನ ಪ್ರವೃತ್ತಿಯ ಬಗ್ಗೆ ನೀವು ಬರೆದಿರುವ ಲೇಖನ ಬಹಳ ಇಷ್ಟವಾಯಿತು. ಹಿರಿಯ ರಾಜಕಾರಣಿ ರಮೇಶ್ ಕುಮಾರ್ ಅವರು ಸದನದಲ್ಲಿ ಮಹಿಳೆಯರ ಬಗ್ಗೆ ಮಾತನಾಡಿದ್ದನ್ನು ಪ್ರಸ್ತಾಪಿಸುತ್ತಾ ಇವತ್ತಿನ ಸಮಾಜ ಮಹಿಳೆಯನ್ನು ನೋಡುತ್ತಿರುವ ಪರಿಯನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿದ್ದೀರಿ. ಇತ್ತೀಚಿಗೆ ನಿಧನರಾದ ರಾಜೇಶ್ವರಿಯವರ ನೆನಪುಗಳ ಚಿತ್ರಣ ಆಪ್ತವಾಗಿದೆ. ಒಟ್ಟಾರೆ ಸಂಚಿಕೆಯ ಪ್ರತಿ ಲೇಖನವೂ ಮನ ಮುಟ್ಟುವಂತಿದೆ. ಫೆಬ್ರವರಿ ತಿಂಗಳ ವಿಶೇಷ ಸಂಚಿಕೆಯನ್ನು ಕುತೂಹಲದಿಂದ ಕಾಯುತ್ತಿದ್ದೇವೆ.

–ಎನ್. ಆರ್. ವಿಶುಕುಮಾರ್, ಬೆಂಗಳೂರು

ಜನವರಿ ಸಂಚಿಕೆಯಲ್ಲಿ 'ಪರ್ಯಾಯ ಜೀವನ ಪದ್ಧತಿ' ವಿಷಯವಾಗಿ ಲೋಹಿಯಾ ಜನ್ಮಶತಾಬ್ದೀ ಪ್ರತಿಷ್ಠಾನವು ಕುಪ್ಪಳಿಯಲ್ಲಿ ಏರ್ಪಡಿಸಿದ್ದ ಅಧ್ಯಯನ ಶಿಬಿರದ ಎರಡು ಉಪನ್ಯಾಸಗಳನ್ನು ವಿವರವಾಗಿ ಪ್ರಕಟಿಸಿರುವುದು ತುಂಬಾ ಉಪಯುಕ್ತವಾಗಿದೆ. ಹಾಗೇ ಶಿಕ್ಷಣದ ಏಕರೂಪೀಕರಣದ ಅಪಾಯಗಳ ಬಗ್ಗೆ ಪ್ರಭಾತ್ ಪಟ್ನಾಯಕ್ ಅವರ ಲೇಖನದ ಕನ್ನಡ ಅನುವಾದ ಈ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವಂತಿದೆ. ರಮೇಶ್‌ಕುಮಾರ್ ಅವರು ಮಹಿಳೆಯರ ಮೇಲಿನ ಅತ್ಯಾಚಾರಕ್ಕೆ ಸಂಬಂಧಿಸುದಂತೆ ಅಚಾನಕ್ಕಾಗಿ ಆಡಿದ ದುರಭಿರುಚಿಯ ಮಾತು ಕೇವಲ ಅವರ ಮಾತಾಗಿರದೆ ಇಂದಿನ ಜಾಗತೀಕರಣ ಹುಟ್ಟಿಸುತ್ತಿರುವ ದುರಭಿರುಚಿಯ ಪರಿಣಾಮವಾಗಿರುವುದರ ಬಗೆಗಿನ ನಿಮ್ಮ ಸೂಕ್ಷ್ಮ ವಿಶ್ಲೇಷಣೆಯೂ ಗಮನಾರ್ಹವಾಗಿದೆ. ರಾಜೇಶ್ವರಿ ತೇಜಸ್ವಿಯವರ ನಿಧನದ ಸಂದರ್ಭದಲ್ಲಿ ತಾವು ಬರೆದಿರುವ ಟಿಪ್ಪಣಿ ಕೂಡ ಅವರು ತೇಜಸ್ವಿ ಹಿಂದಿನ ಶಕ್ತಿ ಮಾತ್ರವಾಗಿರದೆ ಹೇಗೆ ಒಂದು ಸ್ವತಂತ್ರ ವ್ಯಕ್ತಿತ್ವ ಉಳ್ಳವರೂ ಆಗಿದ್ದರು ಎಂಬುದನ್ನು ಸೂಚಿಸುತ್ತಾ ವಿಶೇಷವೆನಿಸುತ್ತದೆ. ಆದರೆ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಪ್ರಬಂಧದಲ್ಲಿ ಅಂತಹ ವಿನೋದವೇನೂ ಇಲ್ಲದೆ ನಿರಾಶೆ ಹುಟ್ಟಿಸಿತು.

– ಆರ್. ವಿಜಯಲಕ್ಷ್ಮಿ, ಮಾನಸಗಂಗೋತ್ರಿ, ಮೈಸೂರು

ಹತ್ತು ವರ್ಷ ಪೂರೈಸಿದ ಅತ್ಯಂತ ಪರಿಣಾಮಕಾರಿ, ತೀಕ್ಷ್ಣ ಬರಹಗಳಿಂದ ಕೂಡಿದ ಕನ್ನಡದ ಏಕೈಕ ಪತ್ರಿಕೆ 'ಹೊಸ ಮನುಷ್ಯ'ಕ್ಕೆ ಹಾರ್ದಿಕ ಶುಭಾಶಯಗಳು. ಸತ್ಯ, ನೇರ, ದಿಟ್ಟ ಮತ್ತು ನಿಷ್ಠುರ ಸತ್ಯಗಳೊಂದಿಗೆ ಪ್ರಕಟವಾಗುವ ಲೇಖನಗಳು ಬೇರೆಲ್ಲೂ ಯಾವ ಪತ್ರಿಕೆಯಲ್ಲೂ ಪ್ರಕಟವಾಗುವುದಿಲ್ಲ ಎಂದೇ ನನ್ನ ಅಭಿಪ್ರಾಯ. ಇತ್ತೀಚಿನ ಉದಾಹರಣೆ, ಇದೇ ಜನವರಿ, ೨೦೨೨ರ ಸಂಚಿಕೆಯಲ್ಲಿನ ಶೇಖರ್ ಗುಪ್ತಾರನ್ನು ಕುರಿತ ಸಂಪಾದಕೀಯ ಬರಹವೇ ಸಾಕ್ಷಿ. ಮತ್ತೆ ಇದೇ ಸಂಚಿಕೆಯಲ್ಲಿನ ಕಾಂಗ್ರೆಸ್ ಪಕ್ಷದ ಅವನತಿ ಮತ್ತು ಪುನರುಜ್ಜೀವನ ಸಾಧ್ಯತೆಗಳನ್ನು ಕುರಿತ ಓದುಗರ ಅಭಿಪ್ರಾಯ ಸಂಗ್ರಹ ಆ ಪಕ್ಷದವರ ಕಣ್ತೆರೆಸುವಂತಿದೆ.

ಇದೇ ಸಂದರ್ಭದಲ್ಲಿ ನನ್ನದೊಂದು ಕೋರಿಕೆ: ತಮ್ಮ 'ಗಾಂಧಿ ಕಥನ' ಗ್ರಂಥಕ್ಕೆ ೨೦೨೧ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ನೀಡಿರುವ ಸಂದರ್ಭದಲ್ಲಿ 'ಪ್ರಜಾವಾಣಿ'ಯ ಜನವರಿ ೨ರ 'ಮುಕ್ತಛಂದ' ಸಂಚಿಕೆಯಲ್ಲಿ ಪ್ರಕಟವಾಗಿರುವ ನಿಮ್ಮ ಸಂದರ್ಶನದಲ್ಲಿ ನೀವು ಹೇಳಿರುವ ಕೆಲವು ಮಾತುಗಳು ಎಲ್ಲರೂ ಮನನ ಮಾಡಿಕೊಳ್ಳಬೇಕಾದಂತವು. ಆದ್ದರಿಂದ ಆ ಸಂದರ್ಶನದ ಮುಖ್ಯ ಭಾಗವನ್ನಾದರೂ ಹೊಸ ಮನುಷ್ಯದಲ್ಲಿ ಪ್ರಕಟಿಸಬೇಕೆಂಬುದು ನನ್ನ ವಿಶೇಷ ಕೋರಿಕೆ.

–ಕೆ.ಟಿ. ಮೋಹನ್, ವಕೀಲರು, ಬೆಂಗಳೂರು


(ಕ್ಷಮಿಸಿ, ನನ್ನದೇ ಸಂಪಾದಕತ್ವದ ಪತ್ರಿಕೆಯಲ್ಲಿ ನನ್ನದೇ ಸಂದರ್ಶನದ ಭಾಗಗಳನ್ನು ಪ್ರಕಟಿಸುವುದು ಉಚಿತವಲ್ಲವೆಂದು ನನ್ನ ಭಾವನೆ.–ಸಂ.)

ಇಂದಿನ ಪೂರಾ ವಾಣಿಜ್ಯಮಯವಾದ ಕಾಲದಲ್ಲಿ ಸಮಾಜವಾದಿ ಆಶಯಗಳನ್ನಿಟ್ಟುಕೊಂಡ 'ಹೊಸ ಮನುಷ್ಯ'ದಂತಹ ಸಣ್ಣ ಪತ್ರಿಕೆ ಹತ್ತು ವರ್ಷಗಳನ್ನು ಪೂರೈಸುವುದೇನೂ ಸಾಮಾನ್ಯ ಸಾಧನೆಯಲ್ಲ. ಅದೂ ನೀವು ಬರೆಯುವ, ಮುಲಾಜಿಲ್ಲದ ಸಂಪಾದಕೀಯ ಬರಹಗಳು ಮತ್ತು ಪ್ರತಿ ಸಂಚಿಕೆಯಲ್ಲೂ ಪ್ರಕಟವಾಗುವ ವಸ್ತುನಿಷ್ಠ ರಾಜಕೀಯ–ಸಾಮಾಜಿಕ–ಆರ್ಥಿಕ ವಿಶ್ಲೇಷಣಗಳನ್ನೊಳಗೊಂಡ ಪತ್ರಿಕೆಯೊಂದು ಓದುಗರ ಮನ ಗೆಲ್ಲುವುದು ಅಷ್ಟು ಸುಲಭವಲ್ಲ. ಲೋಹಿಯಾ ಸಮಾಜವಾದದ ಬನಿಯನ್ನು ಚೆನ್ನಾಗಿ ಬಲ್ಲ ತಾವು ಪತ್ರಿಕೆಯಲ್ಲಿ ಸಾಹಿತ್ಯಿಕ–ಸಾಂಸ್ಕೃತಿಕ ವಿಷಯಗಳಿಗೂ ಸಾಕಷ್ಟು ಅವಕಾಶ ಕಲ್ಪಿಸಿ ರಾಜ್ಯದ ಎಲ್ಲ ಭಾಗಗಳ ಹೊಸ ಮತ್ತು ಯೋಗ್ಯ ಬರಹಗಾರರನ್ನು ಗುರುತಿಸಿ ಪ್ರೋತ್ಸಾಹಿಸಿರುವುದೂ ಇದಕ್ಕೆ ಕಾರಣವಿರಬಹುದು. ನಿಮಗೆ ಅಭಿನಂದನೆಗಳು.

–ವಿಟ್ಠಲ ಕುಲಕರ್ಣಿ, ಯಾದಗಿರ

'ಹೊಸ ಮನುಷ್ಯ': ಹತ್ತು ವರ್ಷಗಳ ಪಯಣದ ಹೆಜ್ಜೆ ಗುರುತುಗಳು

–ಟಿ. ಅವಿನಾಶ್



೨೦೧೧ರ ಆಗಸ್ಟ್‌ನಲ್ಲಿ ಪತ್ರಿಕೆ 'ನವ ಮಾನವ' ಹೆಸರಿನೊಂದಿಗೆ ಬಿಡುಗಡೆ, ದೇವನೂರ ಮಹಾದೇವ ಅವರಿಂದ. ಚಿತ್ರದಲ್ಲಿ ಸಂಪಾದಕ ಡಿ.ಎಸ್. ನಾಗಭೂಷಣ ಮತ್ತು ಹಿರಿಯ ಪತ್ರಕರ್ತ ರಾಜಶೇಖರ ಕೋಟಿ

ಬದಲಾಗಲೇಬೇಕು ಆದರೆ ಯುವ ಸಮುದಾಯವನ್ನು ಅಭಿವೃದ್ಧಿಯ ಮಹಾರಥ ತನ್ನ ತೆಕ್ಕೆಗೆ ತೆಗೆದುಕೊಂಡಿದೆ ಎಂದು ತಿಳಿಸಿ ಅಭಿವೃದ್ಧಿಯ ಮೀಮಾಂಸೆ ಹೇಗೆ ಜನರನ್ನು ಸುಲಭವಾಗಿ ಆಕರ್ಷಿಸುತ್ತದೆ ಎಂದು ತಿಳಿಸಿಕೊಟ್ಟಿದ್ದಾರೆ. 'ಗ್ರಾಮೋದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಿದರೆ ಈ ಅನಾಹುತಕಾರಿ ಅಭಿವೃದ್ಧಿಯ ವೇಗವನ್ನು ತಗ್ಗಿಸಬಹುದು' ಎನ್ನುವ ಎನ್.ಎಮ್ ಕುಲಕರ್ಣಿ, 'ಇದು ಏಕಾಂಗಿಯಾಗಿ ಮಾಡುವ ಕೆಲಸವಲ್ಲ' ಎನ್ನುವ ರಾಜೇಂದ್ರ ಚೆನ್ನಿ, 'ಅಭಿವೃದ್ಧಿಯು ನಮ್ಮ ಮನೆಯೊಳಗೆ ಅನಗತ್ಯ ಸರಕುಗಳನ್ನು ತುರಕಿದೆ' ಎನ್ನುವ ಗೀತಾ ವಸಂತ, 'ಇದು ಪ್ರಗತಿಯಲ್ಲ, ಪ್ರಳಯ' ಎಂದು ಅಭಿಪ್ರಾಯಿಸುವ ಎಚ್.ಎಸ್ ರಾಘವೇಂದ್ರ ರಾವ್, ಹೀಗೆ ನಾನಾ ಹಿನ್ನೆಲೆಯ, ನಾನಾ ತಾತ್ವಿಕ ಹಿನ್ನೆಲೆಯ ಜನರು ಈ ಚರ್ಚೆಯಲ್ಲಿ ಅರ್ಥಪೂರ್ಣವಾಗಿ ಪಾಲ್ಗೊಂಡಿದ್ದಾರೆ. ಒಟ್ಟಾರೆ ನೋಡುವುದಾದರೆ ಪತ್ರಿಕೆಯು ಅಭಿವೃದ್ಧಿಗಿರುವ ಆಕ್ರಮಣದ ಮತ್ತು ವಿನಾಶದ ಆಯಾಮವನ್ನು ಬಹಳ ಖಚಿತವಾಗಿ ಗುರುತಿಸಿ, ಇದಕ್ಕೆ ಪರ್ಯಾಯ ಮಾರ್ಗಗಳನ್ನು ಅರಸಲು ಪ್ರಯತ್ನಿಸಿದೆ. ಈ ಚರ್ಚೆಗೆ ಕೇವಲ ಕನ್ನಡ ನೆಲದ್ದು ಮಾತ್ರವಲ್ಲ ಇದಕ್ಕೆ ಅಖಿಲ ಭಾರತದ ವಿಶಾಲ ಆಯಾಮವಿದೆ. ಸಮಕಾಲೀನ ರಾಜಕಾರಣದ ಬಿಕ್ಕಟ್ಟುಗಳು, ಬೃಹತ್ ಬಂಡವಾಳ ಮತ್ತು ಕಾರ್ಪೊರೇಟ್ ಕ್ಷೇತ್ರದ ಪಾರಮ್ಯಗಳು ನಮ್ಮ ಪರಿಸರದ ಮೇಲೆ ಹೇಗೆ ನಿಯಂತ್ರಣ ಸಾಧಿಸಿ ಅದನ್ನು ಬಗೆದು ಶೋಷಿಸುತ್ತವೆ ಎಂಬುದನ್ನು ತಿಳಿಸಿಕೊಡುವ ಅನೇಕ ಲೇಖನಗಳು ಇಲ್ಲಿ ದಾಖಲಾಗಿವೆ.

ಈ ಚರ್ಚೆಯ ಮತ್ತೊಂದು ಆಯಾಮ ಎಂದರೆ ಕೋವಿಡ್–19 ವೈರಾಣು ತಂದ ಕುತ್ತು ಮತ್ತು ಅದರಿಂದಾದ ಪರಿಣಾಮಗಳನ್ನು ಪತ್ರಿಕೆ ಗಣನೆಗೆ ತೆಗೆದುಕೊಂಡು ಆಧುನಿಕ ಜೀವನ ಶೈಲಿಗೂ ಮತ್ತು ಅಭಿವೃದ್ಧಿಯ ಮಾದರಿಗೂ ಇರುವ ಸಂಬಂಧವನ್ನು ಗುರುತಿಸಿ ವ್ಯಾಖ್ಯಾನಿಸಿದೆ. ಸಂಪಾದಕರೆ ಹೇಳುವಂತೆ ಮನುಷ್ಯನ ಮಿತಿ ಇಲ್ಲದ ಐಷಾರಾಮಿ ಬದುಕಿನ ಹಿಂದೆ ಇರುವ ಅನೈತಿಕತೆ ಎಂದರೆ ಅದು ಅತೀ ದಾಹದ ಅಭಿವೃದ್ಧಿ. ಈ ಬಗೆಯ ಅಭಿವೃದ್ಧಿ ಅರಣ್ಯ ನಾಶ, ಗಣಿಗಾರಿಕೆ, ರಸಾಯನಿಕ ಕೃಷಿ, ಗ್ರಾಹಕ ಸಂಸ್ಕೃತಿ, ಕೈಗಾರಿಕೀಕರಣ ಮೊದಲಾದವುಗಳಿಗೆ ಕಾರಣವಾಗಿ ಜೀವ ಪರಿಸರದ ಅವನತಿಗೆ ಕಾರಣವಾಗಿದೆ. ಆದ್ದರಿಂದ ಇಂತಹ ಹಳಿ ತಪ್ಪಿದ ಜೀವನ ಕ್ರಮ ಹಲವು ಬಗೆಯ ಸಾಂಕ್ರಾಮಿಕ ವೈರಾಣುಗಳ ಅಪಾಯವನ್ನು ತನಗೆ ತಾನೇ ಆಹ್ವಾನಿಸಿಕೊಂಡಿರುವುದು. ಹೀಗಾಗಿ ಕೋವಿಡ್–19 ವೈರಾಣು ಸಮಸ್ಯೆಯನ್ನು ಕೇವಲ ಆರೋಗ್ಯ ಅಥವಾ ಭೌತಿಕ ಚೌಕಟ್ಟಿನಲ್ಲಿ ಮಾತ್ರ ನೋಡದೆ ಅದನ್ನು ವಿಶಾಲವಾದ ಸಾಮಾಜಿಕ ಪರಿಸರದ ಆವರಣದಲ್ಲಿಟ್ಟು ಸಮಸ್ಯೆಯ ಮೂಲವನ್ನು ಪತ್ರಿಕೆ ಚರ್ಚಿಸಿದೆ. ಕನ್ನಡದ ಯಾವುದೇ ಪತ್ರಿಕೆ ಈ ದೃಷ್ಟಿಕೋನದಿಂದ ಕೋವಿಡ್ ಸಮಸ್ಯೆಯನ್ನು ನೋಡಿಲ್ಲ. ಜಾಗತಿಕವಾಗಿ ಕಾಡಿದ ವೈರಾಣು ಸಮಸ್ಯೆಗೆ ಮೂಲ ಮನುಷ್ಯನ ಮಿತಿ ಮೀರಿದ ದಾಹ ಮತ್ತು ಭೋಗ ಕೇಂದ್ರಿತ ಜೀವನ ಶೈಲಿ ಎಂಬುದು ಸಂಪಾದಕೀಯದ ನಿಲುವಾಗಿದೆ.

ಸಮಸಮಾಜದ ಆಶಯ ಹೊಂದಿರುವ ಪತ್ರಿಕೆ ಗತಕಾಲದ ವಿದ್ಯಮಾನಗಳನ್ನು ವರ್ತಮಾನದ ಬೆಳಕಿನಲ್ಲಿ ನೋಡಲು ಪ್ರಯತ್ನಿಸಿದೆ. ಹೆಚ್ಚು ಕಡಿಮೆ ಮರೆತೇ ಹೋಗಿರುವ ಸಮಾಜವಾದಿ ಚಳುವಳಿಯ ಮುಖ್ಯ ಘಟ್ಟಗಳು ಮತ್ತು ನಮ್ಮ ನಾಡಿನ ಸಮಾಜವಾದಿ ಚಿಂತಕರುಗಳನ್ನು ಓದುಗರಿಗೆ ಪರಿಣಾಮಕಾರಿಯಾಗಿ ಪರಿಚಯಿಸಿದೆ. ತೀರ್ಥಹಳ್ಳಿಯ ಮಿಣುಕಮ್ಮರಿಂದ ಮೊದಲಾಗಿ ಸದಾಶಿವರಾಯರು, ಕಿಶನ್ ಪಟ್ನಾಯಕ್, ಕೋಣಂದೂರು ಲಿಂಗಪ್ಪ, ರಾಚಪ್ಪ ಬೆಟ್ಟಸೂಗೂರು, ಜಿ.ಆರ್.ಜಿ ನಗರ್, ನೀಲಗಂಗಯ್ಯ ಪೂಜಾರ, ಶಾಂತವೇರಿ ಗೋಪಾಲಗೌಡರು, ಎಸ್. ವೆಂಕಟರಾಮ್ ಹೀಗೆ ಸಾಲು ಸಾಲು ಈಗಿನ ತಲೆಮಾರು ಮರೆತಿರುವ ಸಮಾಜವಾದಿಗಳ ಜೀವನ ಮತ್ತು ಚಿಂತನೆಗಳನ್ನು ನಿರೂಪಿಸಿದೆ. ಈ ವ್ಯಕ್ತಿ ಚಿತ್ರಗಳು ಕೇವಲ ಏಕಮುಖಿ ವ್ಯಕ್ತಿತ್ವಗಳ ವಿಜೃಂಭಣೆಗಳಾಗದೆ ಅಲ್ಲಲ್ಲಿ ಅವರ ವ್ಯಕ್ತಿತ್ವದ ದೌರ್ಬಲ್ಯಗಳನ್ನು ಸಹ ಎತ್ತಿ ತೋರಿಸಲಾಗಿದೆ. ಈ ಕಾಲದಲ್ಲಿ ನಿಂತು ಆ ದಶಕವನ್ನು ಅವಲೋಕಿಸಿದಾಗ ಸಿಗುವ 'ಸತ್ಯದರ್ಶನ' ಇಲ್ಲಿದೆ. ಪತ್ರಿಕೆಯ ಮೊದಲ ದಿನಗಳಲ್ಲಿ ಅಂದರೆ 2011–14 ರ ಅವಧಿಯಲ್ಲಿ ಸಮಾಜವಾದಿ ಚಳುವಳಿ ಮತ್ತು ಅದರ ರಾಜಕಾರಣವನ್ನು ಚರ್ಚಿಸುವ ಲೇಖನಗಳ ಮಹಾಪೂರವನ್ನೇ ಇಲ್ಲಿ ಕಾಣಬಹುದು. ಯೋಗೇಂದ್ರ ಯಾದವ್, ಶಿವರಾಮ ಕಾಡನಕುಪ್ಪೆ, ಡಿ.ಎಸ್. ನಾಗಭೂಷಣ ಮತ್ತು ಇತರರು ಅಧಿಕಾರದ ರಾಜಕಾರಣ, ಈ ಮಹತ್ವಾಕಾಂಕ್ಷಿ ಚಳುವಳಿಯನ್ನು ಹೇಗೆ ನಾಶಪಡಿಸಿತು ಎಂಬುದನ್ನು ಚರ್ಚಿಸಿದ್ದಾರೆ. ಸಂಪಾದಕರು ವಾಸ್ತವ ರಾಜಕಾರಣದಲ್ಲಿ ಸಮಾಜವಾದ ಸೋತರೂ, ಅದರ ಆಶಯಗಳನ್ನು ಜೀವಂತವಾಗಿಡುವ ಮತ್ತು ವಿಸ್ತರಿಸುವ ಸಾಧ್ಯತೆಯತ್ತ ನಮ್ಮ ಗಮನ ಸೆಳೆದಿದ್ದಾರೆ. ಪತ್ರಿಕೆಯು ಸಮಾಜವಾದಿಗಳ ಶಿವಮೊಗ್ಗದ ನಂಟನ್ನು ಸಹ ಇಲ್ಲಿ ದಾಖಲಿಸಿದೆ. ಕಿಶನ್ ಪಟ್ನಾಯಕ್ ಶಿವಮೊಗ್ಗಕ್ಕೆ ಬಂದು ಮಾಡಿದ ಭಾಷಣ, ಎಂ.ಡಿ. ನಂಜುಂಡಸ್ವಾಮಿ, ರಾಮದಾಸ್, ಪೂರ್ಣಚಂದ್ರ ತೇಜಸ್ವಿಯವರ ಮೈಸೂರು ನೆನಪುಗಳು, ಲೋಹಿಯಾ ನೆನಪುಗಳು ಹೀಗೆ ಪ್ರಧಾನಧಾರೆ ಚರಿತ್ರೆಯು ತನ್ನ ಚಾರಿತ್ರಿಕ ಪರಂಪರೆಯಲ್ಲಿ ದಾಖಲಿಸದ ಅತ್ಯಮೂಲ್ಯ ಕ್ಷಣಗಳನ್ನು ಪತ್ರಿಕೆ ದಾಖಲಿಸಿದೆ. ನಾನು ಮೊದಲೇ ಹೇಳಿದಂತೆ ಈ ಕಿರು ಪತ್ರಿಕೆಗೆ ಇರುವ ಪರ್ಯಾಯ ದೃಷ್ಟಿಕೋನವನ್ನೂ ಸಹ ನಾವು ಇಲ್ಲಿ ಕಾಣಬಹುದು. ವಿರಾಟ್ ಕಥನಗಳನ್ನು ಬಿಟ್ಟುಕೊಟ್ಟು ಕಿರು ಕಥನಗಳನ್ನು ನಿರೂಪಿಸುವ ಮಾದರಿಯನ್ನು ಇಲ್ಲಿ ಗಮನಿಸಬಹುದು.

ಸಮಾಜವಾದಿಗಳ ದೌರ್ಬಲ್ಯಗಳೇನೇ ಇರಲಿ ಅವರ ಸಾಹಸಮಯ ಜೀವನವನ್ನು ಓದಿದರೆ ಇಂದಿನ ತಲೆಮಾರಿನ ಜನರಿಗೆ ರೋಮಾಂಚನವಾಗುವುದಂತು ಖಚಿತ. ಪತ್ರಿಕೆಯು ಇವರುಗಳ ದಾಖಲಾರ್ಹ ಬದುಕಿನ ಕೆಲ ಅಮೂಲ್ಯ ಕ್ಷಣಗಳನ್ನು ಬಹಳ ಪ್ರಬುದ್ಧತೆಯಿಂದ ದಾಖಲಿಸಿದೆ.


ಈ ಸಮಕಾಲೀನ ಚರ್ಚೆಯ ಚಾವಡಿಯಲ್ಲಿ ವರ್ತಮಾನದ ಹಲವಾರು ಸಮಸ್ಯೆಗಳು, ಬಿಕ್ಕಟ್ಟುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಲಾಗಿದೆ. ಇಲ್ಲಿ ಚರ್ಚಿಸಲಾಗಿರುವ ಕೆಲ ವಿಷಯಗಳನ್ನು ಗಮನಿಸಿ: ಕನ್ನಡ ಮಾಧ್ಯಮ ಮತ್ತು ಭಾಷೆಗೆ ಬಂದಿರುವ ಕುತ್ತು, ಮಹಿಳಾ ದೌರ್ಜನ್ಯದ ನೆಲೆಗಳು, ವಾಸ್ತವ ರಾಜಕಾರಣದ ಅನೈತಿಕತೆ, ಪರಿಸರದ ಮೇಲಾಗುತ್ತಿರುವ ದೌರ್ಜನ್ಯ ಮತ್ತು ಪರಿಣಾಮಗಳು, ಅಂಬೇಡ್ಕರ್–ಗಾಂಧೀ ವಾಗ್ವಾದದ ನೆಲೆಗಳು, ಬೇಸಾಯದ ಬಿಕ್ಕಟ್ಟುಗಳು ಮಾಧ್ಯಮಗಳ ಹುಸಿ ನಿರೂಪಣೆಗಳು, ದೇಶೀ ಶಿಕ್ಷಣದ ಸಾಧ್ಯತೆಗಳು, ಒಕ್ಕೂಟ ಮತ್ತು ಏಕಾತ್ಮಕ ರಾಷ್ಟ್ರದ ಪ್ರಶ್ನೆಗಳು, ನಮ್ಮ ಸಂವಿಧಾನದ ಮರುನೋಟ, ಸುಸ್ಥಿರ ಬದುಕು ಹೀಗೆ ಸಾಲು ಸಾಲು ವಿಷಯಗಳನ್ನು ಮುನ್ನೆಲೆಗೆ ತಂದು ಗಂಭೀರವಾಗಿ ಚರ್ಚಿಸಲಾಗಿದೆ. ಇದು ಪತ್ರಿಕೆಗೆ ಗಟ್ಟಿಯಾದ ತಾತ್ವಿಕ ನೆಲೆಗಟ್ಟನ್ನು ಒದಗಿಸಿದೆ. ಇಲ್ಲಿನ ಲೇಖನಗಳು ಹಲವು ದೃಷ್ಟಿಕೋನಗಳ ಮೂಲಕ ಚರ್ಚೆ–ವಾಗ್ವಾದಕ್ಕೆ ಅನುವು ಮಾಡಿಕೊಟ್ಟಿವೆ. ಉದಾ:– ಸವಿತಾ ನಾಗಭೂಷಣ ಅವರು ಕನ್ನಡದ ಲೇಖಕಿಯರ ಬಗ್ಗೆ ಏಕೆ ಕನ್ನಡ ವಿಮರ್ಶೆ ಮರೆತಿದೆ ಎಂಬ ಚರ್ಚೆಯನ್ನು ಪುನಃ ಮುನ್ನೆಲೆಗೆ ತಂದಿದ್ದಾರೆ. ಯಾವ ಚರ್ಚೆಯೂ ಮೇಲ್‌ಸ್ತರದಲ್ಲಿರದೆ ವಿಷಯದ ಆಳಕ್ಕಿಳಿದು ವ್ಯಾಖ್ಯಾನಿಸಿವೆ. ಆದ್ದರಿಂದ ಪತ್ರಿಕೆಗೆ ಬಹುಶ್ರುತತೆ ಮತ್ತು ಸೈದ್ಧಾಂತಿಕ ನೆಲೆಗಳು ಸಹಜವಾಗಿಯೇ ದಕ್ಕಿದೆ. ವರ್ತಮಾನದ ತುರ್ತು ಮತ್ತು ಗತವನ್ನು ಯಾವ ವಿಜೃಂಭಣೆಯು ಇಲ್ಲದೆ ಪರೀಕ್ಷಿಸುವ ನೆಲೆಗಳನ್ನು ಪತ್ರಿಕೆ ಹೊಂದಿದೆ.




ಗಾಂಧಿ ಮತ್ತು ಅಂಬೇಡ್ಕರ್ ನಡುವಿನ ಭಿನ್ನಾಭಿಪ್ರಾಯ ಭಾರತೀಯ ಸಮಾಜದ ಪ್ರಮುಖ ಚರ್ಚೆಗಳಲ್ಲೊಂದು. ಗಾಂಧಿವಾದದ ಬಗ್ಗೆ ಅಧಿಕ ಒಲವಿರುವ ಪತ್ರಿಕೆ ಈ












ಚರ್ಚೆಯನ್ನು ಸಹ ತನ್ನ ಪರಿಧಿಗೆ ತೆಗೆದುಕೊಂಡು ವಿಶಾಲ ನೆಲೆಗಟ್ಟಿನಲ್ಲಿ ಚರ್ಚಿಸಿದೆ. ಚಿಂತಕಿ ಅರುಂಧತಿ ರಾಯ್ ಗಾಂಧಿಯನ್ನು ಕುರಿತು ಮಾಡಿರುವ ತೀವ್ರ ಟೀಕೆಗೆ ತಕ್ಕ ಉತ್ತರವನ್ನು ನೀಡಿದೆ. ಮುಖ್ಯವಾಗಿ ಗಾಂಧಿ ಮತ್ತು ಅಂಬೇಡ್ಕರರನ್ನು ಪರಸ್ಪರ ಎದುರಾಳಿಗಳಂತೆ ನೋಡದೆ, ಅವರ ಚಿಂತನೆಗಳನ್ನು ಸಮನ್ವಯಗೊಳಿಸುವ ಕೆಲಸವನ್ನು ಸಹ ಪತ್ರಿಕೆ ಮಾಡಿದೆ.

ಯಾವುದೇ ಪತ್ರಿಕೆಗೆ ಅದರ ಸಂಪಾದಕೀಯ ಎಂಬುದು ಆ ಪತ್ರಿಕೆಯ ತಾತ್ವಿಕ ನೆಲೆಗಟ್ಟನ್ನು ಸೂಚಿಸುತ್ತಿರುತ್ತದೆ. ಇತ್ತೀಚಿನ ವರ್ಷಗಳ ಒಂದು ಕೆಟ್ಟ ಬೆಳವಣಿಗೆ ಎಂದರೆ ನಮ್ಮ ಪ್ರಧಾನ ಧಾರೆ ಪತ್ರಿಕೆಗಳಲ್ಲಿ ಸಂಪಾದಕೀಯಕ್ಕೆ ಯಾವುದೆ ಬೆಲೆ ಇಲ್ಲದಿರುವುದು ಮತ್ತು ಕಾರ್ಪೊರೇಟ್ ಬಂಡವಾಳದ ತೆಕ್ಕೆಯಲ್ಲಿರುವ ಪತ್ರಿಕೆಗಳು ಸಂಪಾದಕನ ಪಾತ್ರವನ್ನೇ ಸಂಪೂರ್ಣ ಗೌಣಗೊಳಿಸಿರುವುದು. ಖ್ಯಾತ ಪತ್ರಕರ್ತ ಔಟ್‌ಲುಕ್ ಪತ್ರಿಕೆಯ ಸಂಪಾದಕರಾಗಿದ್ದ ವಿನೋದ್ ಮೆಹ್ತಾ ಹೇಗೆ ತಾನು ತನ್ನ ಸಂಪಾದಕನ ಸ್ವತಂತ್ರ ವ್ಯಕ್ತಿತ್ವವನ್ನು ಕಾರ್ಪೊರೇಟ್ ಬಂಡವಾಳದ ಯುಗದಲ್ಲಿ ಬಹಳ ಕಷ್ಟದಿಂದ ಕೊನೆಯವರೆಗೂ ಕಾಪಾಡಿಕೊಂಡೆ ಎಂಬುದನ್ನು ಪರಿಣಾಮಕಾರಿಯಾಗಿ ತನ್ನ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ಇದೇ ಸಂಪಾದಕೀಯ ನೀತಿಯನ್ನು ಪ್ರತಿಪಾದಿಸುವ 'ಹೊಸ ಮನುಷ್ಯ' ಪತ್ರಿಕೆಯ ಚಹರೆ ಎಂದರೆ ಹರಿತವಾದ ಮತ್ತು ಖಚಿತವಾದ ಸಂಪಾದಕೀಯ. ಅನೇಕ ಓದುಗರು ಸಹ ತಮ್ಮ ಪತ್ರಗಳಲ್ಲಿ ಈ ವಿಶಿಷ್ಟ ಸಂಪಾದಕೀಯದ ನಿಲುವುಗಳಿಗೆ ತಮ್ಮ ಅಪಾರ ಮೆಚ್ಚುಗೆ ಸೂಚಿಸಿದ್ದಾರೆ. ಕೆಲವು ಭಿನ್ನಾಭಿಪ್ರಾಯವೂ ಸಹ ದಾಖಲಾಗಿವೆ. ಯಾವುದೇ ಒಂದು ನಿರ್ದಿಷ್ಟ ಪಂಥಕ್ಕೆ ಜೋತು ಬಿದ್ದಿರದ ಇಲ್ಲಿನ ಸಂಪಾದಕೀಯವು ಬಲ ಪಂಥ ಮತ್ತು ಎಡ ಪಂಥಗಳ ದೌರ್ಬಲ್ಯಗಳನ್ನು ವಿಶ್ಲೇಷಿಸುತ್ತದೆ. ಕುಸಿದು ಬೀಳುತ್ತಿರುವ ನೈತಿಕ ಮೌಲ್ಯಗಳು ಮತ್ತು ತಾತ್ವಿಕ ನೆಲೆಗಟ್ಟಿಲ್ಲದ ರಾಜಕಾರಣವನ್ನು ಖಚಿತವಾದ ನೆಲೆಯಲ್ಲಿ ವಿಶ್ಲೇಷಿಸಿದೆ. ವರ್ತಮಾನದ ಅನೇಕ ಬಿಕ್ಕಟ್ಟುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ವ್ಯಂಗ್ಯದ ಜೊತೆಗೆ ವಿಷಾದದ ಧ್ವನಿಯನ್ನು ಸಹ ನಾವು ಇಲ್ಲಿ ಗಮನಿಸಬಹುದಾಗಿದೆ. ವಿಶಾಲಾರ್ಥದಲ್ಲಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಇತರ ಲೇಖನಗಳು ಸಂಪಾದಕೀಯದ ನಿಲುವನ್ನು ವಿಸ್ತರಿಸುವ ನೆಲೆಗಟ್ಟಿನದ್ದೆ ಆಗಿವೆ. ಉದಾಹರಣೆಗೆ ಇಲ್ಲಿನ ಅನೇಕ ಸಂಪಾದಕೀಯಗಳಲ್ಲಿ ಅಭಿವೃದ್ಧಿಯ ಹಪಾಹಪಿತನ ಪ್ರಸ್ತಾಪಿತಗೊಂಡಿದ್ದರೆ, ಪತ್ರಿಕೆಯ ಬೇರೆ ಲೇಖನಗಳು ಅಭಿವೃದ್ಧಿಯ ಮೀಮಾಂಸೆಯನ್ನು ಬಹುದೃಷ್ಟಿಕೋನದಿಂದ ಚರ್ಚಿಸುತ್ತವೆ.



ಪತ್ರಿಕೆಯು ಸಮಾಜವಾದಿ ಸಿದ್ಧಾಂತದ ಚೌಕಟ್ಟನ್ನು ಹೊಂದಿದ್ದರೂ, ಅದು ಕೇವಲ ಸಿದ್ಧಾಂತದ ಪ್ರತಿಪಾದನೆಗೆ ಮಾತ್ರ ಜೋತು ಬಿದ್ದಿಲ್ಲ. ಸಾಹಿತ್ಯ, ರಾಜಕೀಯ, ಸಂಸ್ಕೃತಿ, ಕಲೆ, ಅಧ್ಯಾತ್ಮ, ರಂಗಭೂಮಿ, ಚಲನಚಿತ್ರ, ಪುಸ್ತಕ ವಿಮರ್ಶೆ, ಕಾವ್ಯ ಹೀಗೆ ನಮ್ಮ ಸಾಂಸ್ಕೃತಿಕ ಜೀವನಕ್ಕೆ ಅತ್ಯಗತ್ಯವಾಗಿರುವ ಹಲವು ಪ್ರಕಾರಗಳ ಅಭಿವ್ಯಕ್ತಿಗೆ ವೇದಿಕೆಯನ್ನು ಒದಗಿಸಿದೆ. ಅನೇಕ ಸಂಚಿಕೆಗಳಲ್ಲಿ ಹಾಸ್ಯಕೇಂದ್ರಿತ ಲಘು ಬರಹಗಳನ್ನು, ಲಲಿತ ಪ್ರಬಂಧಗಳನ್ನು ಪ್ರಕಟಿಸಿದೆ. ಎಂ.ಬಿ ನಟರಾಜ ಅವರು ನಾಯಿಯನ್ನು ವಸ್ತುವಾಗಿಟ್ಟುಕೊಂಡು ಸಮಕಾಲೀನ ಸಮಾಜದ ಓರೆಕೋರೆಗಳನ್ನು ವಿಡಂಬನೆ ಮಾಡಿರುವುದು ಬಹುಕಾಲ ನೆನಪಿನಲ್ಲಿ ಉಳಿಯುವ ಒಂದು ಲಲಿತ ಪ್ರಬಂಧವಾಗಿದೆ. ನವ್ಯ ಸಾಹಿತ್ಯ ಉತ್ತುಂಗದಲ್ಲಿದ್ದಾಗ ಈ ಬಗೆಯ ಲಲಿತ ಪ್ರಬಂಧಗಳ ಪ್ರಕಾರಗಳೇ ಉಪೇಕ್ಷೆಗೆ ಒಳಗಾಗಿದ್ದವು. ಆದರೆ ಪತ್ರಿಕೆ ಗಂಭೀರ ಲೇಖನಗಳ ಜೊತೆಗೆ ಲಘು ಬರಹಗಳಿಗೂ ವೇದಿಕೆ ಒದಗಿಸುವುದು ಸ್ವಾಗತಾರ್ಹ. ಪುಸ್ತಕ ವಿಮರ್ಶೆ ಪತ್ರಿಕೆಯ ಧನಾತ್ಮಕ ಅಂಶಗಳಲ್ಲೊಂದು. ನಾಡಿನ ಬಹುತೇಕ ಪತ್ರಿಕೆಗಳು ಪುಸ್ತಕ ವಿಮರ್ಶೆಯನ್ನು ಸಂಪೂರ್ಣವಾಗಿ ಕಡೆಗಣಿಸಿ, ಕಾಟಾಚಾರದ ಅವಲೋಕನ/ಸಾರಾಂಶದ ಮಾದರಿಗೆ ಜೋತು ಬಿದ್ದಿದ್ದರೆ, ಇಲ್ಲಿ ಪುಸ್ತಕ ವಿಮರ್ಶೆ ಅದರ ನಿಜಾರ್ಥದಲ್ಲಿ ಬಹಳ ಅರ್ಥಪೂರ್ಣವಾಗಿ ಅನಾವರಣಗೊಂಡಿದೆ. ಸಂಪಾದಕರ ಆಯ್ಕೆಯ ಪುಸ್ತಕಗಳನ್ನು ಹಲವು ಪರಿಚಿತ ಮತ್ತು ಮುಖ್ಯವಾಗಿ 'ಅಪರಿಚಿತ' ಚಿಂತಕರು / ಓದುಗರು ಆಳವಾಗಿ ವ್ಯಾಖ್ಯಾನಿಸಿದ್ದಾರೆ. ಕೆಲವು ಕಥಾಸಂಕಲನ/ಕಾವ್ಯದ ಸಂಕಲನಗಳು ತೀವ್ರ ಟೀಕೆಗೂ ಒಳಗಾಗಿವೆ. ಅಂದರೆ ಯಾವುದೇ ಮುಜುಗರವಿಲ್ಲದ ಮುಕ್ತ ವಿಮರ್ಶೆಗೆ ಪತ್ರಿಕೆ ವೇದಿಕೆ ಒದಗಿಸಿದೆ. ಕಳೆದ ೧೦ ವರ್ಷದ ಪತ್ರಿಕೆಯ ಪ್ರತಿ ಸಂಪುಟದಲ್ಲೂ ಕಾವ್ಯ ಪ್ರಕಾರ ಹುಲುಸಾಗಿ ಅನಾವರಣಗೊಂಡಿದೆ. ಹೆಚ್.ಎಸ್ ಶಿವಪ್ರಕಾಶ್, ಎಸ್. ಮಂಜುನಾಥರಂಥಹ ಖ್ಯಾತನಾಮರಿಂದ ಮೊದಲಾಗಿ, ಕಾವ್ಯ ಕಡಮೆ, ಪ್ರಕಾಶ್ ಮರ್ಗನಳ್ಳಿ, ಸ್ವಯಂಪ್ರಭಾ ಮುಂತಾದ ಕಿರಿಯರಿಗೂ ಪತ್ರಿಕೆ ವೇದಿಕೆಯಾಗಿದೆ. ಸಂಪಾದಕರ ಕಾವ್ಯ ಪ್ರೀತಿಯ ಜೊತೆಗೆ, ಸ್ವತಃ ಕನ್ನಡದ ಪ್ರಮುಖ ಕವಿಯಾಗಿರುವ ಸವಿತಾ ನಾಗಭೂಷಣ ಅವರು ಪತ್ರಿಕೆಯನ್ನು ರೂಪಿಸುತ್ತಿರುವುದೂ ಸಮೃದ್ಧ ಕಾವ್ಯ ಅಭಿವ್ಯಕ್ತಿಗೆ ಕಾರಣವಾಗಿದೆ ಎಂದೆನಿಸುತ್ತದೆ.


ಪತ್ರಿಕೆಯ ಇನ್ನೊಂದು ವಿಶಿಷ್ಟ ಕಾಲಂ ಎಂದರೆ ಸಂಪಾದಕರೆ ವ್ಯಂಗ್ಯ, ಹಾಸ್ಯದಿಂದ ಬರೆಯುವ ಸಾಹಿತ್ಯ-ಸಂಸ್ಕೃತಿ-ನಾಟಕ ಇತ್ಯಾದಿ ಶೀರ್ಷಿಕೆ. ಇಲ್ಲಿ ಅನೇಕ ಖ್ಯಾತನಾಮರುಗಳು, ಪ್ರಶಸ್ತಿ ಪಡೆದವರು, ರಾಜಕೀಯ ಮುಖಂಡರುಗಳು, ಜ್ಞಾನಪೀಠಕ್ಕೆ ವಶೀಲಿ ಮಾಡಿದವರು, ಮಠಾಧಿಪತಿಗಳು, ವ್ಯಂಗ್ಯ, ಗೇಲಿಗೆ ಒಳಗಾಗಿದ್ದಾರೆ. ಹಿಂದೆ 'ಲಂಕೇಶ್ ಪತ್ರಿಕೆಯಲ್ಲಿ' ಲಂಕೇಶರು ವ್ಯಂಗ್ಯ ಗೇಲಿಯ ಮುಖಾಂತರವೇ ನಾವು 'ಮುಖ್ಯ'ರೆಂದು ಭಾವಿಸುವ ವ್ಯಕ್ತಿಗಳ ಮತ್ತೊಂದು ಮುಖವನ್ನು ಅನಾವರಣ ಮಾಡುತ್ತಿದ್ದರು. ಇಲ್ಲಿ ಅನಂತಮೂರ್ತಿ, ಚಂಪಾ, ದೇವನೂರು ಮಹಾದೇವ ಮುಂತಾದ ವ್ಯಕ್ತಿತ್ವಗಳೂ ವಿಮರ್ಶೆಗೆ, ಗೇಲಿಗೆ ಒಳಗಾಗಿದ್ದಾರೆ ಎಂಬುದು ತೀರಾ ಕುತೂಹಲಕಾರಿಯಾಗಿದೆ. ಇದರರ್ಥ ಸಂಪಾದಕರಿಗೆ ಇವರ ಕುರಿತು ದ್ವೇಷ ಇದೆ ಎಂದಲ್ಲ. ಬದಲಾಗಿ ಇದು ಅವರ ಮೂರ್ತಿಭಂಜಕ ಪ್ರವೃತ್ತಿಗೆ ಒಂದು ಉದಾಹರಣೆಯಾಗಿದೆ. ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಕ್ಷುದ್ರ ರಾಜಕಾರಣ ಈ ಕಾಲಂನಲ್ಲಿ ಗೇಲಿಗೆ ಒಳಗಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಎಂಬ ಸಂಸ್ಥೆಯ ಅಸಾಹಿತ್ಯಿಕ ನಿಲುವುಗಳು ಮತ್ತು ಅದರ ಕಾರ್ಯಕ್ರಮಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಕಾಲಂ ಒಂದರಲ್ಲಿ ಸಂಪಾದಕರು ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ಕೊಡುವುದನ್ನು ರೆವಿನ್ಯೂ ವಿಭಾಗದ ಚಟುವಟಿಕೆಗೆ ಹೋಲಿಸಿ ಗೇಲಿ ಮಾಡಿದ್ದಾರೆ!

'ಸಮಕಾಲೀನ' ಎಂಬ ಹೆಸರಿನಲ್ಲಿ ಅನೇಕ ವಿಷಯಗಳನ್ನು ಆಮೂಲಾಗ್ರವಾಗಿ ಚರ್ಚಿಸಲಾಗಿದೆ. ಮಲೆನಾಡಿನ ಪರಿಸರ, ಕಾಶ್ಮೀರ ಸಮಸ್ಯೆ, ರಾಮ ಮನೋಹರ ಲೋಹಿಯಾ ನೆನಪು, ತಾಯ್ನುಡಿಯ ಶಿಕ್ಷಣ, ಸಿದ್ಧರಾಮಯ್ಯನವರ ಸರ್ಕಾರ ಎತ್ತ ಸಾಗಿದೆ ಎಂಬ ಚರ್ಚೆ, ಬದಲಾಗುತ್ತಿರುವ ಮಹಿಳಾ ಲೋಕ, ಬುದ್ಧ ನನಗೆ ಕಂಡಂತೆ, ಆಧುನಿಕತೆ ಮತು ಹಿಂಸೆ, ಧರ್ಮ ಮತ್ತು ರಾಜಕಾರಣ .... ಹೀಗೆ ಸಮಕಾಲೀನ ವಿಷಯಗಳು ಆಳವಾದ ವಿಶ್ಲೇಷಣೆಗೆ-ಚರ್ಚೆಗೆ ಒಳಗಾಗಿವೆ. ಈ ಎಲ್ಲಾ ಚರ್ಚೆಗಳನ್ನು ವರ್ತಮಾನದೊಂದಿಗಿನ ಮುಖಾಮುಖಿ ಎಂದು ನಾವು ತಿಳಿಯಬಹುದು.


ಪತ್ರಿಕೆ ಗತಕಾಲದ ಕೆಲ ಅಮೂಲ್ಯ ಘಳಿಗೆಗಳನ್ನು, ಘಟನೆಗಳನ್ನು ವಿಸ್ತೃತವಾಗಿ ದಾಖಲಿಸಿದೆ. ಅದರಲ್ಲಿ ಒಂದು ಎಂದರೆ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಬಿ.ಕೃಷ್ಣಪ್ಪನವರ ಚಳುವಳಿಯ ದಿನಗಳನ್ನು ಅವರ ಪತ್ನಿ ಇಂದಿರಾ ಅವರು ನಿರೂಪಿಸುವುದು. ಈ ನಿರೂಪಣೆಯು ಏಕಕಾಲಕ್ಕೆ ವೈಯಕ್ತಿಕವೂ, ಸಾರ್ವಜನಿಕವೂ ಆಗಿದ್ದು ಇದಕ್ಕೆ









ಸಾಮಾಜಿಕ-ಸಾಂಸ್ಕೃತಿಕ ಮಹತ್ವವಿದೆ. ಪ್ರಧಾನಧಾರೆ ಇತಿಹಾಸವು ಮರೆತಿರುವ ಘಳಿಗೆಗಳು ಜೀವಂತವಾಗಿ ನಮ್ಮ ಮುಂದೆ ದಾಖಲಾಗಿವೆ. ಇತಿಹಾಸ ಅಂದರೆ ಅದು ಪ್ರತಿಷ್ಠಿತರ ಇತಿಹಾಸವಲ್ಲ, ಬದಲಾಗಿ ಸಮಾಜದಲ್ಲಿ ಅವಗಣನೆಗೆ ಒಳಗಾದವರ ಇತಿಹಾಸ ಎಂದು ಸಬಾಲ್ಟರ್ನ್ ಇತಿಹಾಸ ಪ್ರತಿಪಾದಿಸುತ್ತದೆ. ಬಿ. ಕೃಷ್ಣಪ್ಪನವರ ನೆನಪು ಈ ಬಗೆಯ ಒಂದು ನಿರೂಪಣೆಯಾಗಿದೆ. ದಲಿತ ಚಳುವಳಿಯ ಹಲವು ಮಹತ್ವದ ಹೆಜ್ಜೆಗಳನ್ನು ಈ ಪತ್ಯವು ದಾಖಲಿಸುತ್ತದೆ. ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸಕ್ಕೆ ನಿರ್ಣಾಯಕ ತಿರುವು ಕೊಟ್ಟ ಬಿ ಕೃಷ್ಣಪ್ಪನವರ ವ್ಯಕ್ತಿತ್ವದ ಅನಾವರಣ ಇಲ್ಲಾಗಿರುವುದು ಸ್ವಾಗತಾರ್ಹವಾಗಿದೆ.

'ಹೊಸ ಮನುಷ್ಯ' ಪತ್ರಿಕೆಯು ವೈಚಾರಿಕ ನಿಲುವನ್ನು ತೀವ್ರವಾಗಿ ಪ್ರತಿಪಾದಿಸುತ್ತದೆ. ಆದರೆ ಅದೇ ಹೊತ್ತಿಗೆ ಬಹಳ ಕುತೂಹಲದ ಸಂಗತಿ ಎಂದರೆ ಅಧ್ಯಾತ್ಮಕ್ಕೆ ಸಂಬಂಧಿಸಿದ ಅನೇಕ ಲೇಖನಗಳಿಗೂ ಪತ್ರಿಕೆಯಲ್ಲಿ ಜಾಗವಿದೆ. ಉದಾ: ವಿವೇಕಾನಂದ, ರಮಣ ಮಹರ್ಷಿ, ರಾಮಕೃಷ್ಣ ಪರಮಹಂಸರಂತಹ ಆಧ್ಯಾತ್ಮಿಕ ಗುರುಗಳ ಬಗೆಗೆ ವೈವಿಧ್ಯಮಯವಾದ ಬರಹಗಳನ್ನು ಪತ್ರಿಕೆ ಪ್ರಕಟಿಸುತ್ತಲೇ ಬಂದಿದೆ. ಇಲ್ಲಿ ವೈಚಾರಿಕತೆ ಮತ್ತು ಅಧ್ಯಾತ್ಮಗಳ ಸಮ್ಮಿಲನವನ್ನು ಗುರುತಿಸಬಹುದು.

ಪತ್ರಿಕೆಯ ಸೋದರ ಸಂಸ್ಥೆ 'ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ'ವು ಪ್ರತಿವರ್ಷ ಆಯ್ದ ವಿಷಯಗಳ ಕುರಿತು ವಾರ್ಷಿಕ ಶಿಬಿರವನ್ನು ಏರ್ಪಡಿಸುತ್ತ ಬಂದಿದ್ದು, ಈ ಶಿಬಿರಗಳ ವರದಿ ಮತ್ತು ಸಂಪನ್ಮೂಲ ವ್ಯಕ್ತಿಗಳ ಮಾತುಗಳನ್ನು ಇಲ್ಲಿ ದಾಖಲಿಸಲಾಗುತ್ತಿದ್ದು; ಅದು ಕೂಡಾ ಪತ್ರಿಕೆಯ ನಿಲುವನ್ನು ವಿಸ್ತರಿಸುತ್ತಿವೆ. ಇಲ್ಲಿ ಪ್ರಕಟಿಸಿದ ಶ್ರದ್ಧಾಂಜಲಿ ಕಾಲಂ ಕೂಡಾ ವ್ಯಕ್ತಿ ಹೊಗಳಿಕೆಯಾಗದೆ, ಅಗಲಿದವರ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತವೆ. ಹಲವು ಬಾರಿ ಲೇಖಕರ ಮತ್ತು ಸಂಪಾದಕರ ನಡುವಿನ ಭಿನ್ನಾಭಿಪ್ರಾಯಗಳು ಕೂಡಾ ಇಲ್ಲಿ ದಾಖಲಾಗಿವೆ. ಈ ಬಗೆಯ ತಾತ್ವಿಕ ಭಿನ್ನಾಭಿಪ್ರಾಯಗಳಿಗೆ ವೇದಿಕೆ ಒದಗಿಸಿರುವುದು ಸ್ವಾಗತಾರ್ಹ. ಉದಾ.- ಸಂಪಾದಕರಿಗೆ ಕೇಜ್ರಿವಾಲ್ ರಾಜಕಾರಣ ಮತ್ತು ಆದರ್ಶದ ಬಗೆಗೆ ವ್ಯಾಮೋಹ ಇದೆ. ಆದ್ದರಿಂದ ಬೇರೆಯವರನ್ನು ಕಟುವಾಗಿ ವಿಮರ್ಶಿಸಿದಂತೆ ಕೇಜ್ರಿವಾಲರನ್ನು ವಿಮರ್ಶಿಸಿಲ್ಲ ಎಂದು ಒಬ್ಬ ಓದುಗರು ಅಸಮಾಧಾನ ದಾಖಲಿಸಿದ್ದನ್ನು ಪತ್ರಿಕೆ ಪ್ರಕಟಿಸಿದೆ. ಲೇಖಕ ರಾಜಾರಾಮ ತೋಳ್ಪಾಡಿಯವರು ತಮ್ಮ ಲೇಖನವನ್ನು ಸಂಕ್ಷಿಪ್ತಗೊಳಿಸಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಸಂಪಾದಕರು ಬೇರೆ ಬೇರೆ ಕಾಲಂ ಹೆಸರಿನಲ್ಲಿ ಲೇಖನ ಬರೆಯುವುದಕ್ಕೆ ಆಕ್ಷೇಪಿಸಿ, 'ಸಂಪಾದಕರು ಓದುಗರೆ' ಎಂದು ಕೆ ಸತ್ಯನಾರಾಯಣ ಬರೆದಿರುವುದನ್ನು ಪತ್ರಿಕೆ ಪ್ರಕಟಿಸಿದೆ. ಕೆ ಪಿ ನಟರಾಜ ಮತ್ತು ಕೆ ಬಿ ಸಿದ್ಧಯ್ಯನವರು 'ಎದೆಗೆ ಬಿದ್ದ ಅಕ್ಷರ' (ದೇವನೂರ ಮಹಾದೇವ) ದ ಕುರಿತಾಗಿ ತಮ್ಮ ಭಿನ್ನಾಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಈ ಬಗೆಯ ವಾದ, ವಾಗ್ವಾದ, ಭಿನ್ನಾಭಿಪ್ರಾಯ, ಚರ್ಚೆಗಳು ಪ್ರಜಾಪ್ರಭುತ್ವದ ಮೂಲ ಲಕ್ಷಣಗಳಾಗಿದ್ದು, ಪತ್ರಿಕೆ ಈ ಬಗೆಯ ಮೌಲ್ಯಗಳನ್ನು ಎತ್ತಿ ಹಿಡಿದಿದೆ.

ಪತ್ರಿಕೆಯ ಮತ್ತೊಂದು ಹೈಲೈಟ್ ಎಂದರೆ ಭಾಷಾಂತರ ಲೇಖನಗಳ ಮಹಾಪೂರ. ಪರಿಸರ, ಜಾಗತಿಕ ತಾಪಮಾನ, ಅಭಿವೃದ್ಧಿ ಮೀಮಾಂಸೆ, ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದ ಮಹತ್ವದ ವಿಷಯ/ವ್ಯಕ್ತಿಗಳ ಕುರಿತಾಗಿ ಭಾಷಾಂತರ ಲೇಖನಗಳು ಕಳೆದ ಹತ್ತು ವರುಷಗಳಲ್ಲಿ ವಿಪುಲವಾಗಿ ಪ್ರಕಟವಾಗಿವೆ. ಇದು ಮತ್ತೊಂದು ಸಂಸ್ಕೃತಿಯ ಸಂವೇದನೆಯನ್ನು ಕನ್ನಡದ ಜೊತೆಗೆ ಸೇರಿಸುವ ಮತ್ತು ವಿಸ್ತರಿಸುವ ಮಹತ್ವದ ಹೆಜ್ಜೆ ಎಂದು ತಿಳಿಯಬಹುದು. ನಮ್ಮನ್ನೇ ನಾವು ಪುನಃ ನೋಡಿಕೊಳ್ಳುವ ಅಥವಾ ಪರೀಕ್ಷಿಸಿಕೊಳ್ಳುವ ಆಶಯವನ್ನು ಭಾಷಾಂತರ ಲೇಖನಗಳ ಪ್ರಕಟಣೆ ತೋರಿಸಿಕೊಡುತ್ತದೆ.

ಇಷ್ಟು ಸಮೃದ್ಧಿಯಾಗಿರುವ ಪತ್ರಿಕೆಯಲ್ಲಿ ಕೆಲವೊಂದು ಗಮನೀಯ ಕೊರತೆಗಳು ಕಂಡು ಬಂದಿವೆ. ಪತ್ರಿಕೆಯಲ್ಲಿ ಬರೆಯುವ ಲೇಖಕರ ಬಳಗ ಸೀಮಿತವಾಗಿದ್ದು, ಆಯಾ ಲೇಖಕರೆ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತಿದ್ದು; ಹೊಸ ಲೇಖಕರ ದೃಷ್ಟಿಕೋನದ ಅನಾವರಣ ಕಡಿಮೆ ಸಂಖ್ಯೆಯಲ್ಲಿದೆ. ಬಹುಸಂಸ್ಕೃತಿ ಇರುವ ಸಮಾಜದ ಬೇರೆ ದೃಷ್ಟಿಕೋನಗಳ ಕೊರತೆ ಇಲ್ಲಿ ಕಾಣುತ್ತದೆ. ಅದೇನೆ ಇದ್ದರೂ ಕಳೆದ ಹತ್ತು ವರುಷಗಳಲ್ಲಿ ಪತ್ರಿಕೆಯ ಪ್ರಖರತೆ, ತೀವ್ರತೆ , ವಾಗ್ವಾದವನ್ನು ನಿಭಾಯಿಸಿದ ರೀತಿ, ಬೌದ್ಧಿಕ ಚರ್ಚೆ 'ಹೊಸ ಮನುಷ್ಯ' ಪತ್ರಿಕೆಯನ್ನು ಜನಮನದಲ್ಲಿ ನೆಲೆಗೊಳಿಸಿದೆ.



(ಲೇಖಕರು ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥರು ಮತ್ತು ಸಾಹಿತ್ಯ ವಿಮರ್ಶಕರು ಹಾಗೂ ಕ್ರೀಡಾ ಸಮೀಕ್ಷಕರು)





ಹೊಸ ಮನುಷ್ಯದ ದಶವಾರ್ಷಿಕ ವಿಶೇಷ ಸಂಚಿಕೆ-೨೦೨೨ರ ಎಲ್ಲ ಓದುಗರಿಗೂ ಶುಭಾಶಯಗಳು



ನಿಜವಾಗಿಯೂ ಕಷ್ಟದಿಂದ ಲಾಭವೇ ಇದೆ
-ಖುರಾನ್

ಕೆ.ಜಿ. ಶ್ರೀನಿವಾಸ್
ಸಪ್ತಗಿರಿ ಟ್ರೇಡರ್ಸ್
ಬೆಂಗಳೂರು

ಹೊಸ ಮನುಷ್ಯದ ದಶವಾರ್ಷಿಕ ವಿಶೇಷ ಸಂಚಿಕೆ–2022ರ ಎಲ್ಲ ಓದುಗರಿಗೂ ಶುಭಾಶಯಗಳು

ಪ್ರತಿ ಅಲೆಯ ಹಿಂದೆಯೂ ಸಮುದ್ರವೇ ಇರುತ್ತದೆ
–ಸ್ವಾಮಿ ವಿವೇಕಾನಂದ




ರವಿ ಸಸಿತೋಟ
ಮತ್ತು ಕುಟುಂಬ,
ಶಿವಮೊಗ್ಗ

ಒಂದು ವಿವೇಚನೆ

ಹಿಂಧೂ ಧರ್ಮ ಎಂದರೇನು?

-ಲಕ್ಷ್ಮೀಶ ತೋಳ್ಪಾಡಿ



ಜಗತ್ತಿನ ಅತ್ಯಂತ ಪ್ರಾಚೀನ ಧರ್ಮವೆಂದು ಹೇಳಲಾಗುವ 'ಹಿಂದೂ ಧರ್ಮ'ದ ಹಿಂದು ಎಂಬ ಶಬ್ದ ಒಂದು ನದಿಯನ್ನು(ಸಿಂಧೂ) ಅದರ ಆಸುಪಾಸಿನ ಪ್ರದೇಶವನ್ನು ಸೂಚಿಸುವಂಥದು. ಹಾಗಾಗಿ ಹಿಂದೂ ಧರ್ಮವೆಂಬುದು ಜಗತ್ತಿನ ಬಹುತೇಕ ಧರ್ಮಗಳಂತೆ ಯಾವುದೇ ಮಹಾಪುರುಷನಿಂದ ಸಂಸ್ಥಾಪಿತವಾದುದೆಂದು ಹೇಳಿಕೊಳ್ಳುವುದಿಲ್ಲ. ಹಾಗೇ ಒಂದು ನಿರ್ದಿಷ್ಟ ಧರ್ಮಗ್ರಂಥದಿಂದ ನಿರ್ದೇಶನಗಳನ್ನು ಪಡೆಯುವುದಿಲ್ಲ. ಆದರೂ ಈ ಧರ್ಮ ಸಾವಿರಾರು ವರ್ಷಗಳಿಂದ ಟೀಕೆ-ವಿಮರ್ಶೆಗಳಿಗೆ ಒಳಗಾಗುತ್ತಲೇ ಬಾಳಿ ಬೆಳೆದಿದೆ. ಹಾಗೆಂದೇ ಈ ಧರ್ಮವನ್ನು ನಮ್ಮ ಸರ್ವೋಚ್ಚ ನ್ಯಾಯಾಲಯವೂ 'ಒಂದು ಜೀವನ ರೀತಿ' ಎಂದು ವರ್ಣಿಸಿ ಕೈಬಿಟ್ಟಿದೆ. ಬಹುಶಃ ಇದೇ ಈ ಧರ್ಮದ ಶಕ್ತಿಯೂ ಇರಬಹುದು. ಇದರ ಒಂದು ವಿಶ್ಲೇಷಣೆ ಇಲ್ಲಿದೆ.-ಸಂ.

ಹಿಂದೂಧರ್ಮ ಎಂದರೇನು ಎಂದು ಸಂಪಾದಕರು ಕೇಳಿದ್ದಾರೆ. ಈ ಪ್ರಶ್ನೆಯೇ ಮಹಾಭಾರತದ ಮಾತೊಂದನ್ನು ನನಗೆ ನೆನಪಿಸಿತು. "ಸತ್ಯವನ್ನು ಹೇಳಬೇಕೆನ್ನುವುದರಲ್ಲಿ ವಿವಾದವಿಲ್ಲ. ಧರ್ಮವನ್ನು ಆಚರಿಸಬೇಕು ಎನ್ನುವುದರಲ್ಲಿ ವಿವಾದವಿಲ್ಲ. ಆದರೆ ಯಾವುದು ಸತ್ಯ, ಯಾವುದು ಧರ್ಮ ಎನ್ನುವುದರಲ್ಲಿ ಮಾತ್ರ ವಿವಾದ ತಪ್ಪಿಲ್ಲ" - ಎಂಬ ಮಾತು ಅದು. ಅಂದರೆ ವಿಚಾರ ಮಾಡುತ್ತ ಹೋದಂತೆ ಸತ್ಯ, ಧರ್ಮಗಳೆಂದರೆ ಹೀಗೇ ಇರುತ್ತವೆ ಎಂದು ಇದಮಿತ್ಥಂ ಎಂಬ ಖಚಿತ ಸ್ವರೂಪದಲ್ಲಿ ಕಾಣಿಸುವುದಕ್ಕಿಂತ ಹೆಚ್ಚಾಗಿ ನೀನು ಹೇಗೆ ನೋಡುತ್ತೀಯೋ ಅದು ಹಾಗೆ ಕಾಣಿಸುತ್ತದೆ ಎಂಬ ಸ್ವರೂಪದ್ದಾಗಿಯೇ ಕಾಣಿಸುವುದು ಹೆಚ್ಚು ಸಂಭಾವ್ಯವಾಗಿದೆ ಎಂಬರ್ಥವನ್ನು ಸೂಚಿಸುವ ಮಾತು. ಈ ನೆಲೆಯಲ್ಲಿ ನಾನು ಕೆಲವು ವಿಷಯಗಳನ್ನು ನಮ್ರತೆಯಿಂದ ಮಂಡಿಸುವೆ.

'ನೂತನ' ಎಂಬುದು ಅತ್ಯಂತ ಪ್ರಾಚೀನವಾದ ಪದ: ವೇದಗಳು ಪ್ರಾಚೀನವಾದ ವಾಙ್ಮಯ ಎಂದು ಪ್ರಸಿದ್ಧವೇ ಇದೆ. ವೇದಗಳಿಗೆ 'ಪಳನುಡಿ' ಎಂದೇ ಹೆಸರು ಹಳೆಗನ್ನಡದಲ್ಲಿ. ವೇದಗಳಲ್ಲೇ ಋಗ್ವೇದವು ಅತ್ಯಂತ ಪ್ರಾಚೀನ ಎಂಬುದೂ ಪ್ರಸಿದ್ಧವೇ. ಋಗ್ವೇದದ ಎರಡನೆಯ ನುಡಿಯಲ್ಲಿಯೇ ಎರಡು ಪದಗಳು ಕಾಣಿಸಿಕೊಂಡಿವೆ. ಅವೆಂದರೆ 'ಪೂರ್ವಿಕ' ಮತ್ತು 'ನೂತನ' ಎಂಬೆರಡು ಪದಗಳು! "ಅಗ್ನಿಃ ಪೂರ್ವೇಭಿಃ ಋಷಿಭಿಃ ಈಡ್ಯಃ ನೂತನೈಃ ಉತ" ಅಗ್ನಿಯು ಪೂರ್ವಿಕರಾದ ಋಷಿಗಳಿಂದ ಹೇಗೆ ಸ್ತುತ್ಯನೋ ಹಾಗೆ ನೂತನ ಋಷಿಗಳಿಂದಲೂ ಸ್ತುತ್ಯನಾಗಿರುವನು ಎಂದು ಈ ಮಾತಿನ ಅರ್ಥ. ಪೂರ್ವಿಕರನ್ನು ಋಷಿಗಳೆಂದು ಕರೆದಂತೆ ನೂತನರನ್ನೂ ಋಷಿಗಳೆಂದು ಕರೆದದ್ದು; ಋಷಿಗಳೆಂದು ಕರೆದೂ ನೂತನರೆಂದೂ ಕರೆದದ್ದು, ಹೊಸ ಕಾಲದ ಋಷಿಗಳೆಂಬ ಮಾತು ಹೊಸ ಕಾಲಕ್ಕೇ ಕೊಟ್ಟ ಗೌರವದಂತೆ ಕೇಳಿಸುವುದೂ ಕಾಲ ಕಾಲಕ್ಕೆ ಹೊಸದಾಗಬೇಕಾದ ಅಗತ್ಯವನ್ನು ಮನಗಂಡ ಕಾಣ್ಕೆಯಾಗಿದೆ. ಎಂದೂ ಹಳತಾಗದ ಅತ್ಯಂತ ಹಳೆಯ ಪದವಿದು ಈ 'ನೂತನ' ಎಂಬುದು. ನಮ್ಮ ಈ ಆಧುನಿಕ ಕಾಲದಲ್ಲಿ ಶ್ರೀ ರಾಮಕೃಷ್ಣ, ವಿವೇಕಾನಂದ, ಗಾಂಧೀಜಿ, ರಮಣ, ಅರವಿಂದೋ, ಮುಂತಾದವರನ್ನು - ಇನ್ನೂ ಅನೇಕರಿರಬಹುದು - ಹೊಸ ಕಾಲದ ಋಷಿಗಳೆಂದು ನಾವು ಕರೆದರೆ ನಮಗೆ ಅರಿವಿಲ್ಲದೇ ನಾವು ವೇದಕಾಲದ ನುಡಿಗಟ್ಟನ್ನೇ ಬಳಸುತ್ತಿದ್ದೇವೆ ಎಂಬುದು ರೋಮಾಂಚಕವಾದ ಸಂಗತಿಯಾಗಿದೆ. ಜಗತ್ತಿನ ಎಲ್ಲೆಡೆ ಪ್ರಾಚೀನವಾದ ಧರ್ಮ - ಸಂಸ್ಕೃತಿಗಳು ನಾಶವಾಗಿ ಹೋದರೂ ಈ ದೇಶದ ಭೂಭಾಗದಲ್ಲಿ ಅದು ಇನ್ನೂ ಉಳಿದುಬಂದಿದೆ ಎನ್ನುತ್ತಾರೆ. ಇದನ್ನು ನಾನು ಒಪ್ಪುವೆ. ವೇದ ಕಾಲದ ಕಾಣ್ಕೆಯೇ ಹಾಗಿತ್ತು. ಇದನ್ನು ಕಾಲದ ಜೊತೆಗೆ ಗೆಳೆತನ ಎನ್ನಬಹುದು. ಹಿಂದೂ ಧರ್ಮಕ್ಕೆ ವೇದಕಾಲದ ದಾಯವಿದೆ.

ಸುಡದ ಬೆಂಕಿ: ಚರಿತ್ರೆಯಲ್ಲಿ ಮನುಷ್ಯರು ಬೆಂಕಿಯನ್ನು ಕಂಡುಕೊಂಡ ಕ್ಷಣವೆಂದರೆ ಅದೊಂದು ಕ್ರಾಂತಿಕಾರಕವಾದ ಕ್ಷಣ. ಬೇಯಿಸಿದ ವಸ್ತುವಿನ ಹೊಸರುಚಿಯೊಂದು ಮನುಷ್ಯರ ನಾಲಗೆಗೆ ಮೊದಲಬಾರಿಗೆ ಸಿಕ್ಕಿತು. ಈ ರುಚಿ ದೇವತೆಗಳೂ ಸವಿಯಬೇಕಾದ್ದು, ನಾವು ಮಾತ್ರ ಸವಿಯುವುದಲ್ಲ ಅನ್ನಿಸಿತು. ಬೆಂಕಿಯ ಮೂಲಕ ದೇವತೆಗಳೇ ನಮಗೆ ಈ ರುಚಿಯನ್ನು ಉಣ್ಣಿಸುತ್ತಿದ್ದಾರೆ ಅನ್ನಿಸಿತು. ಆದುದರಿಂದ ಮರಳಿ ಅಗ್ನಿಗೆ ಆಹುತಿಕೊಡುವ ಪದ್ಧತಿ ಮೊದಲಾಯಿತು. ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬ ಕಾಣ್ಕೆಗಿಂತ ಮೊದಲು, 'ಅಗ್ನಿಯಿಂದ ಬಂದದ್ದು, ಅಗ್ನಿಗೇ ಅರ್ಪಿತವಾಗಲಿ' ಎಂಬ ಕಾಣ್ಕೆ ಮೂಡಿತು. ಪಾಕವಾಗುವುದು ಎಂಬ ಮಾತಿಗೆ ವ್ಯಕ್ತಿತ್ವವೇ ಪಕ್ವಗೊಳ್ಳುವ ಹೊಸ ಅರ್ಥ ಒದಗಿ ಬಂತು. ಹೊಸ ಅರ್ಥವು ಹೊಸ ಪದಪುಂಜಗಳನ್ನೇ ಸೃಷ್ಟಿಸಿತು. ವೇದ ಪರಂಪರೆಯಲ್ಲಿ ಅಗ್ನಿ ಎಂದರೆ ವಾಕ್, ಭಾಷೆ ಎಂಬ ಅರ್ಥವೇ ಸೃಷ್ಟಿಯಾಯಿತು. ಮಾತೆಂಬುದು ಜ್ಯೋತಿರ್ಲಿಂಗ ಎಂಬ ಕಾಣ್ಕೆ ಈ ನೆಲೆಯಿಂದಲೇ ಮೂಡಿದ್ದು. ಎರಡು ಮರದ ತುಂಡುಗಳನ್ನು ಪರಸ್ಪರ ತಿಕ್ಕಿ ಬೆಂಕಿಯನ್ನು ಹೊಮ್ಮಿಸುವ ಕರ್ಮಕಾಂಡದ ಕ್ರಿಯೆಯು ಪ್ರಕಟವಾದರೆ, ಮರಗಳನ್ನೇ ಸುಡುವ ಬೆಂಕಿಯು ಪ್ರಕಟವಾಗದೆ ಇದ್ದಾಗ ಅದೇ ಮರಗಳ ಒಳಗೆ ಸುಡದೆ ತಣ್ಣಗೆ ಇದ್ದು ಮರದ ಜೀವಂತಿಕೆಗೇ ಕಾರಣವಾಗುವ ಅಚ್ಚರಿಯನ್ನು ಮೂಡಿಸಿ, ಆ ಸುಡದ ಬೆಂಕಿಯ ಧ್ಯಾನದಿಂದ ಮಾನವ ಮನಸ್ಸು ಅಂತರ್ಮುಖವಾಗುವ ಪ್ರಕ್ರಿಯೆ ಮೊದಲಾಯಿತು. ಸುಡದ ಬೆಂಕಿಯ ಅಚ್ಚರಿಯನ್ನು ಹಿಂದೂ ಧರ್ಮ ಇನ್ನೂ ಪೂರ್ತಿಯಾಗಿ ಕಳೆದುಕೊಂಡಿಲ್ಲ.

ಎರಡು ಬಗೆಯ ಓದು: ತನ್ನನ್ನು ಎರಡು ರೀತಿಗಳಲ್ಲಿ ಎರಡು ದೃಷ್ಟಿಕೋನಗಳಿಂದ ಓದುವುದು ಸಾಧ್ಯ ಮತ್ತು ಆ ಎರಡು ರೀತಿಗಳಲ್ಲೂ ಓದಬೇಕು ಎಂದು ವೇದವೇ ಹೇಳುತ್ತದೆ! ಒಂದು ಲೌಕಿಕವಾದ ಓದು. ಇನ್ನೊಂದು ಆಧ್ಯಾತ್ಮಿಕವಾದ ಓದು. ಲೋಕದ ಪ್ರಭಾವಕ್ಕೆ ಒಳಗಾಗಿ ನಾವು ಧರ್ಮಗ್ರಂಥಗಳನ್ನು ಇನ್ನೊಂದು ದೃಷ್ಟಿಯಿಂದ ಓದುವುದು ಬೇರೆ. ಧರ್ಮಗ್ರಂಥವೇ ತನ್ನನ್ನು ಲೌಕಿಕವಾಗಿಯೂ ಓದಬೇಕು ಎಂದು ಹೇಳುವುದು ಬೇರೆ. ಬೇರೆಡೆ ಎಲ್ಲಿ ಹೀಗೆ ಇದೆಯೋ ನಾನು ತಿಳಿದಿಲ್ಲ. ಈ ಎರಡು ರೀತಿಗಳಿಗೆ ಪರಾ ಮತ್ತು ಅಪರಾ ವಿದ್ಯೆಗಳು ಎಂದು ವೇದದ ಪರಿಭಾಷೆ. ವೇದ, ವೇದಾಂಗ, ಇತಿಹಾಸ ಪುರಾಣಗಳೇ ಈ ಎರಡು ವಿದ್ಯೆಗಳಿಗೂ ಪ್ರಮಾಣಗ್ರಂಥಗಳು! ಬೇರೆ ಬೇರೆ ಪ್ರಮಾಣಗ್ರಂಥಗಳಿಲ್ಲ. ಅಂದರೆ ನಾವು ಹೇಗೆ ನೋಡುತ್ತೇವೋ ಹಾಗೆ ಕಾಣುತ್ತದೆ; ಹಾಗೆ ಒದಗಿಬರುತ್ತದೆ; ಆಯ್ಕೆ ನಮ್ಮದು ಎನ್ನುವುದೇ ಇಲ್ಲಿನ ಇಂಗಿತ. ವೇದಗಳ ಈ ಮಾತನ್ನೇ ಭಗವದ್ಗೀತೆಯಲ್ಲಿ ಕೃಷ್ಣ ತನ್ನ ಮಾತಾಗಿ ಹೇಳಿದ್ದಾನೆ. "ನನ್ನನ್ನು ಹೇಗೆ ನೋಡುತ್ತೀರೋ, ಪೂಜಿಸುತ್ತೀರೋ ಹಾಗೆ ನಾನು ಒದಗುತ್ತೇನೆ"ಎಂದಿದ್ದಾನೆ. ಅದಿರಲಿ; ನಿನ್ನ ಉಪದೇಶವೇನು ಎಂದು ಕೇಳಿದರೆ "ಮತ್ತೆ ಮತ್ತೆ ಸುತ್ತಿದಲ್ಲೇ ಸುಳಿಯುವ ಸಂಸಾರಚಕ್ರದಿಂದ ಪಾರಾಗುವುದೇ ಬುದ್ಧಿವಂತನ ದಾರಿ" ಎನ್ನುತ್ತಾನೆ. ಆದರೆ ಎಲ್ಲೂ ಬಲಾತ್ಕಾರವಿಲ್ಲ. ಲೌಕಿಕ ಮತ್ತು ಆಧ್ಯಾತ್ಮಿಕವಾದ ಓದುಗಳು ಪರಸ್ಪರ ಹೊಕ್ಕಾಡಿ ಸೃಷ್ಟಿಶೀಲತೆಯ ಹೊಸಮಜಲುಗಳನ್ನು ಕಂಡುಕೊಂಡ ವಿದ್ಯಮಾನಗಳು ಈ ಧರ್ಮದ ಚರಿತ್ರೆಯುದ್ದಕ್ಕೆ ಕಂಡು ಬರುತ್ತವೆ.

ಮಹಾಭಾರತವನ್ನೇ ನೋಡಿ. ಶಾಂತಿಪರ್ವದಲ್ಲಿ ಒಂದು ಮಾರ್ಮಿಕವಾದ ಹೇಳಿಕೆ ಇದೆ-ಒಂದು ಕಾಲವಿತ್ತು. ಆಗ 'ರಾಜ್ಯ' ಎನ್ನುವ ಕಲ್ಪನೆಯೇ ಇರಲಿಲ್ಲ. ರಾಜನೂ ಇರಲಿಲ್ಲ. ಶಿಕ್ಷೆ, ಶಿಕ್ಷಿಸುವವನು; ಶಿಕ್ಷೆಗೆ ಒಳಗಾಗುವವನು ಈ ವಿದ್ಯಮಾನಗಳೇ ಇರಲಿಲ್ಲ. ಆದರೆ 'ಧರ್ಮ' ಇತ್ತು. ಜನತೆ ಪರಸ್ಪರ ರಕ್ಷಿಸಿಕೊಳ್ಳುತ್ತಿತ್ತು. ಇಂಥ ಒಳ್ಳೆಯ ಕಾಲ ಕೆಡುತ್ತ ಹೋಯಿತು-ಎಂಬ ಹೇಳಿಕೆ.

ರಾಜನಿರಲಿಲ್ಲ, ರಾಜ್ಯವಿರಲಿಲ್ಲ ಎಂದರೆ ಅದರರ್ಥ-ಕ್ಷತ್ರಿಯ ವರ್ಣವೇ ಇರಲಿಲ್ಲ ಎಂದಾಗುತ್ತದೆ. ಒಂದು ವರ್ಣ ಇರಲಿಲ್ಲ ಎಂದರೆ ನಾಲ್ಕು ವರ್ಣಗಳೂ ಇರಲಿಲ್ಲ ಎಂದೇ ಅರ್ಥ. ಧರ್ಮ ಇತ್ತು ನಿಜ. ಆದರೆ ಅದು ವರ್ಣ ಧರ್ಮವಾಗಿರಲಿಲ್ಲ. ವರ್ಣಾತೀತ ಧರ್ಮವಾಗಿತ್ತು! ಈ ಧರ್ಮವು ಕೆಡುತ್ತ ವರ್ಣಧರ್ಮವಾಗಿ ಬೆಳೆಯಿತು!

ಮಹಾಭಾರತದ ಈ ಮಾತಿಗೆ ವಿರುದ್ಧವಾದ ಮಾಹಿತಿ ವೇದಗಳಲ್ಲಿದೆ. ಪುರುಷಸೂಕ್ತ ವೇದದಲ್ಲಿ ಬರುವ ಪ್ರಸಿದ್ಧವಾದ ಸೂಕ್ತ. ಅದು ಸೃಷ್ಟಿಪ್ರಕ್ರಿಯೆಯನ್ನು ಬಣ್ಣಿಸುವ ಸೂಕ್ತ. ಅದರಲ್ಲಿ ವಿರಾಟ್‌ಪುರುಷನ ಅಂಗಾಂಗಗಳಿಂದ ನಾಲ್ಕು ವರ್ಣಗಳ ಸೃಷ್ಟಿಯಾಯಿತು ಎಂದು ಉಲ್ಲೇಖವಿದೆ. ಅಂದರೆ ಯಾವುದೋ ಒಂದು ಕಾಲಘಟ್ಟದಲ್ಲಿ ವರ್ಣಗಳ ಸೃಷಿಯಾದುದಲ್ಲ; ಪ್ರಪಂಚ ಸೃಷ್ಟಿಯೊಂದಿಗೇ ವರ್ಣ ಸೃಷ್ಟಿಯಾಗಿದೆ ಎಂಬ ಉಲ್ಲೇಖ!

ಇವೆರಡರಲ್ಲಿ ಯಾವುದು ಸರಿ? ಇದು ಸರಿ-ತಪ್ಪುಗಳ ಪ್ರಶ್ನೆಯೇ ಅಲ್ಲ. ಹೇಗೆ ನೋಡಿದರೆ ಹಾಗೆ ಕಾಣುತ್ತದೆ ಎಂಬುದೂ ಅಲ್ಲ. ನಮ್ಮ ಆಯ್ಕೆಯ ಪ್ರಶ್ನೆ ಇಲ್ಲಿದೆ. ಈ ಆಯ್ಕೆ ಮಾಡುವಲ್ಲಿ ಹೊಸಕಾಲದ ಋಷಿಗಳು ನಮಗೆ ನೆರವಾಗುವರು.

ಏಕೆಂದರೆ ಇವರೆಲ್ಲರೂ ರಾಜ್ಯ ವ್ಯವಸ್ಥೆಯ ಅಗತ್ಯವಿಲ್ಲದೆ ಮನುಷ್ಯ ಚೆನ್ನಾಗಿ ಬದುಕಬಲ್ಲ ಕಾಲವನ್ನೇ ಹಂಬಲಿಸುತ್ತಿದ್ದವರು. ಶಿಕ್ಷೆಯ ಭಯದಿಂದ ಮನುಷ್ಯ ಸಜ್ಜನನಾಗಿರುವುದು ನಿಜವಾದ ಸಜ್ಜನಿಕೆಯಲ್ಲ, ನಿಜವಾದ ಸಜ್ಜನಿಕೆಯು ಧರ್ಮದ ಅರಿವಿನಿಂದ ಅರಳಿಕೊಳ್ಳುವಂಥದು ಎಂದು ಬಲ್ಲವರು. ವ್ಯವಸ್ಥೆಯನ್ನಲ್ಲ; ವ್ಯಕ್ತಿಯನ್ನು ಎತ್ತಿ ಹಿಡಿದವರು. ವಿವೇಕಾನಂದರು ಯಾವುದೇ ವರ್ಣದ ಹೆಸರೆತ್ತದೆ "Man making is my mission" ಎಂದರು. ಗಾಂಧೀಜಿ "ಸ್ವ-ರಾಜ್ಯ" ಎಂದರು. ರಮಣರು 'ನಾನು' ಎನ್ನುವ ಸರ್ವನಾಮದ ಗುರುತು, ನಾಮ ರೂಪಗಳಿಗೆ ಅತೀತವಾದುದಕ್ಕೆ

ಅನ್ವಯವಾಗುವಂಥದು ಎನ್ನುತ್ತಿದ್ದರು. ಅರವಿಂದರು 'ನವಮಾನವನ ಪ್ರಾದುರ್ಭಾವ' ಎಂದರು. ಇವೆಲ್ಲವೂ ದಂಡನೀತಿ ಪ್ರಧಾನವಾದ ರಾಜ್ಯ ವ್ಯವಸ್ಥೆಯನ್ನು ಮೀರುವ ಕನಸುಗಳೇ. ಧರ್ಮವನ್ನು ರಾಜ್ಯವ್ಯವಸ್ಥೆಯಾಗಿಸುವ ಕನಸುಗಳಲ್ಲ! ರಾಜ್ಯವ್ಯವಸ್ಥೆಯನ್ನು ಎಷ್ಟು ಕೀರ್ತಿಸಿದರೂ ಈ ಕನಸು ವೇದಕಾಲದಿಂದ, ಮಹಾಭಾರತ ಕಾಲದಿಂದ ಹರಿದು ಬರುತ್ತಿದೆ!

"ನಿನಗೆ ಉಂಟಾಗುವ ತೀವ್ರ ವಿಷಾದವೇ ನನಗೆ ಉದ್ದೀಪನ": ಇದೊಂದು ಆಖ್ಯಾಯಿಕೆ. ಕೃಷ್ಣ ಮತ್ತು ಅರ್ಜುನ ಮಾತುಕತೆಯಾಡುತ್ತಿದ್ದಾರೆ. ನಿರಾಳವಾಗಿವಾಗಿದ್ದಾರೆ. ಏಕೆಂದರೆ ಯುದ್ಧ ಮುಗಿದಿದೆ. ಶತ್ರುನಾಶವಾಗಿದೆ. ಅಣ್ಣ ಧರ್ಮರಾಜನು ಗದ್ದುಗೆ ಏರಿದ್ದಾನೆ. ಈಗ ಅರ್ಜುನ ಕೇಳುತ್ತಾನೆ: ಓ ಕೃಷ್ಣ, ಕುರುಕ್ಷೇತ್ರ ಯುದ್ಧದ ಮೊದಲ ದಿನ ನನಗೆ ವಿಷಾದ ಕವಿದಿತ್ತಲ್ಲ. ಆ ಸಂದರ್ಭದಲ್ಲಿ ನೀನು ಅದ್ಭುತವಾದ ವಿಚಾರ ಸರಣಿಯನ್ನು ಮಂಡಿಸಿದೆ. ನನ್ನ ದುಃಖವನ್ನೆಲ್ಲ ಕಳೆದುಬಿಟ್ಟೆ, ನಿಜ. ಆದರೆ, ಈಗ ಅದಾವುದೂ ನನಗೆ ನೆನಪಾಗಲೊಲ್ಲದು. ಮರೆತುಬಿಟ್ಟಿದ್ದೇನೆ. ಮರೆಯಬಾರದಿತ್ತು ನಿಜ. ಮನ್ನಿಸು. ಈಗ ಎಲ್ಲ ನಿರಾಳವಾಗಿದೆ. ಇಚ್ಛೆಗಳೆಲ್ಲ ನೆರವೇರಿದೆ. ಈ ವಿರಾಮದಲ್ಲಿ ಈಗ ಇನ್ನೊಮ್ಮೆ ನಿನ್ನ ಗೀತೆಯನ್ನು ನನಗೆ ಕೇಳಿಸು.

ಈ ಮಾತು ಕೇಳಿ ಕೃಷ್ಣನಿಗೆ ಸಿಟ್ಟೇರಿತು. ಬುದ್ಧಿಗೇಡಿ ಎಂದು ಗೆಳೆಯನನ್ನು ಹಳಿದನು. ಮರೆಯಬಾರದಿತ್ತು. ಅದು ಮೊದಲ ತಪ್ಪು. ಈಗ ಇನ್ನೊಮ್ಮೆ ಹೇಳು ಎನ್ನುತ್ತಿರುವೆ. ಇದು ಎರಡನೆಯ ತಪ್ಪು. ಏಕೆಂದರೆ ಈಗ ನನಗೆ ಆ ಸ್ಫೂರ್ತಿಯೇ ಬರಲೊಲ್ಲದು. ಸ್ಪಂದನವೇ ಉಂಟಾಗಲೊಲ್ಲದು. ಪ್ರಚೋದನೆಯೇ ಇಲ್ಲ. ಏಕೆನ್ನುವಿಯೋ – ಈಗ ನಿನಗೆ ವಿಷಾದವೇ ಇಲ್ಲ. ನೀನು ನಿಜವಾಗಿ ವಿಷಾದದಲ್ಲಿ ಮುಳುಗಿದ್ದಾಗ ನನ್ನೊಳಗೆ ಎಚ್ಚರವುಂಟಾಗುವುದು! ಅದು ತತ್‌ಕ್ಷಣದ ಸ್ಪಂದನ. ಅಷ್ಟು ಸಹಜ. ಕೃತಕವಲ್ಲ. ಕೃತಕವಾಗಿ ಉಂಟುಮಾಡಿಕೊಳ್ಳಲಾಗದಷ್ಟು ಸಹಜ! ಈಗ ವಿಷಾದವಿಲ್ಲವಾಗಿ ಪ್ರಸಾದವೂ ಇಲ್ಲ!

ಈ ಆಖ್ಯಾಯಿಕೆಯೊಂದು ಅದ್ಭುತ! ಬದುಕಿನ ಅರ್ಥಹೀನತೆಯ ಕುರಿತು ಆಳವಾದ ವ್ಯಾಕುಲತೆಯ ಒಳಗಿನಿಂದಲೇ ಬದುಕಿನ ಅರ್ಥಪೂರ್ಣತೆಯ ಹೊಳಹು ಉಂಟಾಗುವುದು ಸಾಧ್ಯ. ಇವೆರಡೂ ಅಷ್ಟು ಪರಸ್ಪರ ಸಂಬಂಧಿಗಳು. ಒಂದಿಲ್ಲದೆ ಇನ್ನೊಂದಿಲ್ಲ. ನರನಾರಾಯಣ ಸಂಬಂಧದಂತೆ. ಈ ಸಂಬಂಧವೇ ಬದುಕಿನ ನಿಜವಾದ ವೈಭವ! ದುಃಖದ ಕಂಬನಿಯಿಂದಲೇ ಹೃದಯದ ಹೂವು ಅರಳಿಕೊಳ್ಳುವುದು! ದೇವರು ಮನುಷ್ಯನೊಡನೆ ನೀನು ನನ್ನನ್ನು ಉದ್ದೀಪಿಸಬಲ್ಲೆ; ಉದ್ದೀಪಿಸಲಾರೆಯಾ ಎಂದು ಕೇಳಿಕೊಳ್ಳುತ್ತಿದ್ದಾನೆ. ನಿಜವಾದ ದುಃಖವನ್ನು ಅನುಭವಿಸುವುದು ನರಮನುಷ್ಯರ ದೊಡ್ಡ ಯೋಗ್ಯತೆ ಎಂದು ಸೂಚಿಸುತ್ತಿದ್ದಾನೆ. ಬುದ್ಧ ಬೆಟ್ಟಿಟ್ಟು ತೋರಿಸಿದ್ದು ಈ ಸತ್ಯವನ್ನೇ. ದುಃಖಿಸಲೂ ಆರೆವು ಎಂದರೆ ಮನುಷ್ಯರ ಪಾಡು ಎಲ್ಲಿಗೆ ಬಂತು! ಗೀತೆಯನ್ನು ಅಧ್ಯಯನ ಮಾಡುವಾಗ ಕೃಷ್ಣನ ಗಹನವಾದ ಮಾತುಗಳು ಅರ್ಥವಾಗದೆ ಇದ್ದರೂ ಅರ್ಜುನನ ವ್ಯಾಕುಲತೆಯಾದರೂ ನಮ್ಮನ್ನು ಮುಟ್ಟಿದರೆ ಸಾಕು. ಹೃದಯದ ನೋವಿನಲ್ಲಿ ಬದುಕಿನ ರಹಸ್ಯಗಳೆಲ್ಲ ಅಡಗಿವೆ; ಸುಖದಲ್ಲಿ ಅಲ್ಲ ಎನ್ನುವುದೇ ಧರ್ಮದ ಕಾಣ್ಕೆಯಾಗಿದೆ!

ದೇವರು ನಮ್ಮ ನಡುವೆ ಅವತರಿಸಿ ಬರುತ್ತಾನೆ ಎಂದು ಹಿಂದೂಧರ್ಮ ನಂಬುತ್ತದೆ. ಹಾಗೆ ದೇವರು ಅವತರಿಸುವುದು ಈ ಲೋಕದ ಕಷ್ಟ–ಸಂಕಟಗಳಿಗೆ ಸ್ಪಂದಿಸುವುದರಿಂದ ಎನ್ನುತ್ತದೆ. ಅಂದರೆ ದೇವರ ಶಕ್ತಿ ಎಂದರೆ ಅದು ನೋಯಬಲ್ಲ ಶಕ್ತಿ! ತನಗಾಗಿ ಅಲ್ಲ; ಲೋಕಕ್ಕಾಗಿ ನೋಯಬಲ್ಲ ಶಕ್ತಿ! ತನಗಾಗಿ ನೋವೇ ಇಲ್ಲದ್ದಕ್ಕೆ ಲೋಕದ ನೋವೇ ತನ್ನ ನೋವಾಗಬಲ್ಲುದು! ಈ ನೋವಿನಿಂದಾಗಿಯೇ ತಾನು ಮಾಡಬೇಕಾದುದೇನು ತನ್ನ ಕರ್ತವ್ಯವೇನು ಎಂದು ತಿಳಿದುಕೊಂಡದ್ದು. ಇದು ಮನುಷ್ಯರ ನೋವಿಗಿಂತ ಭಿನ್ನ. ಮನುಷ್ಯರಲ್ಲಿ ನೋವು–ದುಃಖ ಸಾಮಾನ್ಯವಾಗಿ ವೈಯಕ್ತಿಕ. ತನಗೆ ಹೀಗಾಯಿತಲ್ಲ, ತನಗೇ ಏಕೆ ಹೀಗಾಗಬೇಕು ಎಂಬ ಸ್ವರೂಪದ್ದು. ತನ್ನಂತೆಯೇ ಇನ್ನೊಬ್ಬರಿಗೂ ಆದರೆ, ಅದು ದುಃಖವೇ ಅಲ್ಲ, ಅದು ತನ್ನ ದುಃಖಕ್ಕೆ ಶಮನ! ಅಥವಾ ಸ್ವಲ್ಪ ವಿಸ್ತರಿಸಿದರೆ–ತನ್ನ ಪಂಗಡ; ತನ್ನ ಸಮುದಾಯಕ್ಕೆ ಸೀಮಿತವಾದದ್ದು. ಆಗ ತನ್ನ ಸಮುದಾಯಕ್ಕೆ ಶತ್ರು ಸಮುದಾಯವೊಂದಿರುತ್ತದೆ. ಅವರೂ ನಮ್ಮಂಥವರೇ. ಅಥವಾ ಎಲ್ಲರಿಗೂ ದುಃಖ ಬಂದೊದಗಿದರೆ ಅದು ದುಃಖವೇ ಅಲ್ಲ. ಇರುವುದೇ ಹೀಗೆ ಎಂಬ ಸಮಾಧಾನ. ಇದು ಮನುಷ್ಯರ ದುಃಖದ ರೀತಿಯಾದರೆ, ದೇವರು ನೋಯುವ ಪರಿಯೇ ಬೇರೆ.

ಇಷ್ಟು ದುಃಖ ತುಂಬಿದ್ದರೂ ಈ ಲೋಕ ಇನ್ನೂ ಸ್ವ–ಮಗ್ನವಾಗಿಯೇ ಇದೆಯಲ್ಲ! ಸ್ವಮಗ್ನತೆಯೇ ದುಃಖವಲ್ಲವೆ? ಸ್ವಮಗ್ನತೆಯೇ ದುಃಖವೆಂದು ಲೋಕ ತಿಳಿಯುವುದು ಯಾವಾಗ? ತಮ್ಮ ದುಃಖವೇ ದೊಡ್ಡದೆಂದುಕೊಳ್ಳುವುದು ಸ್ವ–ಮಗ್ನತೆಯ ಲಕ್ಷಣವಲ್ಲವೆ? ಹಾಗೆಯೇ ನಮ್ಮ ನಂಬಿಕೆಯೇ ಸತ್ಯವೆಂದುಕೊಳ್ಳುವುದು ಕೂಡ. ಅದು ತಮ್ಮ ನಂಬಿಕೆಯಾದುದರಿಂದ ಸತ್ಯ ಎಂದು. ಒತ್ತು ಇರುವುದು ಸತ್ಯದ ಮೇಲೆ ಅಲ್ಲ. ತಾವು ಹಾಗೆಂದು ನಂಬಿರುವೆವು ಎಂಬುದರ ಮೇಲೆ. ಇವೆಲ್ಲ ಸ್ವ–ಮಗ್ನತೆಯ ಪರಿಣಾಮ ಎಂದು ಲೋಕಕ್ಕೆ ತಿಳಿಸುವುದು ಹೇಗೆ! ಮನುಷ್ಯಜೀವ ತನ್ನನ್ನು ತಾನೇ ಶೋಧಿಸುವಂತೆ ಮಾಡುವುದು ಹೇಗೆ? ಇದು ದೇವರ ಚಿಂತೆ. ಅಂದರೆ ಧರ್ಮದ ಚಿಂತೆ.

'ವೈಷ್ಣವ'ನೆಂದರೆ ಯಾರು?: ದೊಡ್ಡ ವೃತ್ತದ ಒಳಗಿನ ಅನೇಕಾನೇಕ ಸಣ್ಣ ವೃತ್ತಗಳಿದ್ದಂತೆ ಎಂದು ಹಿಂದೂಧರ್ಮವನ್ನು ವಿದ್ವಾಂಸರೊಬ್ಬರು ಬಣ್ಣಿಸಿದ್ದಾರೆ. ಪ್ರತಿಯೊಂದು ವೃತ್ತವೂ ಸ್ವಯಂ ಪೂರ್ಣವೇ. ಆದರೂ ಅದು ದೊಡ್ಡ ವೃತ್ತವೊಂದರ ಒಳಗಡೆ ಇರುವ ಒಳವೃತ್ತವಾಗಿದೆ. ಒಳವೃತ್ತಾಂತವಾಗಿದೆ! ಒಳಗಡೆ ಎನ್ನುವಲ್ಲಿ ಒಂದು ಆಪ್ತಭಾವವೂ ಇದೆ. ನಿಮ್ಮದೇ ಒಂದು ವೃತ್ತವನ್ನು ನೀವು ಆವಿಷ್ಕರಿಸಿಕೊಳ್ಳುವ ಸಾಧ್ಯತೆ ಕೂಡ ಇದೆ. ಅಂದರೆ, ನಮ್ಮ ನಮ್ಮ ಹಿಂದೂಧರ್ಮವನ್ನು ನಾವೇ ಆವಿಷ್ಕರಿಸಿಕೊಳ್ಳುವ ಸಾಧ್ಯತೆ! ಈ ಸಾಧ್ಯತೆಯೇ ಹಿಂದೂ ಧರ್ಮ. ಆದುದರಿಂದಲೇ ವೈಷ್ಣವ ಧರ್ಮವು ಪ್ರಚುರವಾಗಿ ಎಷ್ಟೋ ಕಾಲ ಕಳೆದ ಮೇಲೂ ವೈಷ್ಣವನೆಂದರೆ ಯಾರು ಎಂಬ ಪ್ರಶ್ನೆ ಏಳುವುದು. ಕಾಲಕಾಲಕ್ಕೆ ಇಂಥ ಪ್ರಶ್ನೆಗಳು ಏಳುವವು. ಈ ಪ್ರಶ್ನೆಗೆ, ಪರರ ನೋವನ್ನು ತಿಳಿದು ಆ ನೋವಿಗೆ ಸ್ಪಂದಿಸುವುದು ಯಾರಿಗೆ ಸಾಧ್ಯವಾಗುವುದೋ ಅವನು ನಿಜವಾದ ವೈಷ್ಣವ ಎಂದು ಗುಜರಾತಿನ ಸಂತಕವಿ ನರಸೀಮೇಥಾ ಹೇಳಿದ. "ವೈಷ್ಣವ ಜನತೋ ತೇನೇ ಕಹಿಯೇ......" ಗಾಂಧೀಜಿಯವರಿಗೆ ಪ್ರಿಯವಾದ ಪ್ರಾರ್ಥನೆ ಇದು. ನರಸೀಮೇಥಾನಿಗೆ ಗೊತ್ತಾಗಿ ಬಿಟ್ಟಿತ್ತು – ವೈಷ್ಣವನೆನ್ನುವಾಗ ತೋರಿಕೆಯ ಅರ್ಥ ಒಂದಿದ್ದರೆ, ನಿಜವಾದ ಅರ್ಥ ಬೇರೆಯೇ ಇರುತ್ತದೆ. ತೋರಿಕೆಯ ಯಾವ ಲಕ್ಷಣಗಳೂ ಇರದಿದ್ದರೂ ನೈಜ ವಿಷ್ಣು ಭಕ್ತನಾಗಿರುವುದು ಸಾಧ್ಯ ಎಂಬ ತಥ್ಯ.

'ವಿಷ್ಣು' ಎಂದರೆ ಎಲ್ಲೆಡೆ ವ್ಯಾಪಿಸಿರುವ ತತ್ವ ಎಂದರ್ಥ. ಎಲ್ಲೆಡೆ ವ್ಯಾಪಿಸಿದೆ; ಆದರೆ ಅದು ಪ್ರಕಟವಾಗಿ ಕಾಣುವುದಿಲ್ಲ; ಅದು ಜೀವಜಾತದಲ್ಲೆಲ್ಲ ಅಡಗಿದೆ. ಅದು ಪ್ರಕಟವಾದರೆ ಉಳಿದ ಯಾವುದೂ ಕಾಣದೆ ಹೋಗಬಹುದು. ಆಗ ಅದು ಆಕ್ರಮಣಶೀಲತೆಯಾಯಿತು. ಆಕ್ರಮಣಶೀಲತೆಗಿಂತ ಪೂರ್ತಿ ಭಿನ್ನವಾದ ಸ್ಥಿತಿಯೊಂದಿದೆ. ಅದನ್ನು ಅಂತರ್ಯಾಮಿಯಾದ ಸ್ಥಿತಿ ಎನ್ನುವರು. ಒಳಗಡೆ ವ್ಯಾಪಿಸಿರುವ ಸ್ಥಿತಿ. ಒಳಗಡೆ ವ್ಯಾಪಿಸಿದ್ದರೂ ತನ್ನ ಸುಳಿವನ್ನೇ ಬಿಟ್ಟುಕೊಡದು. ಜೀವಜಾತದ ಬದುಕಿಗೆ ತಾನು ಅನಿವಾರ್ಯವಾದರೂ ಆ ಸೂಚನೆಯನ್ನೇ ನೀಡದು. ಆ ಮೂಲಕ ನಮ್ಮ ಬದುಕಿಗೆ ಇದು ಅನಿವಾರ್ಯವಲ್ಲ ಎಂಬ ಭಾವನೆಯನ್ನೇ ಪೋಷಿಸುತ್ತದೆ. ತನ್ನನ್ನೇ ತಾನು ನಿರಾಕರಿಸಿಕೊಂಡಂತೆ ಇರುತ್ತದೆ; ಇನಿತೂ ಆಕ್ರಮಣಶೀಲವಲ್ಲದ ವ್ಯಾಪಕತೆಗೆ ಈ ಬಗೆಯ ಇರುವಿಕೆಯೇ ಸಹಜವೆಂಬಂತೆ!

ವೈಷ್ಣವ ತತ್ವ ಹೀಗಿರುವುದರಿಂದಲೇ ಇನ್ನೊಂದು ಜೀವದ ನೋವಿಗೆ ನಾವು ನಿಜವಾಗಿ ಸ್ಪಂದಿಸಿದಾಗ ಆ ಸ್ಪಂದನವು ತನ್ನನ್ನು ಕುರಿತೇ ಸ್ಪಂದಿಸಿದಂತೆ ವೈಷ್ಣವ ತತ್ವಕ್ಕೇ ಅನ್ನಿಸುವುದು. ಬರಿಯ ಅನಿಸಿಕೆಯಲ್ಲ. ಅದರ ಅನುಭವವೇ ಹಾಗಿರುವುದು. ಸರ್ವವ್ಯಾಪಿಯಾದ ಅದಕ್ಕೆ ತನ್ನನ್ನೇ ಗುರುತಿಸಿದಂತಾಗುವುದು. ಸರ್ವವ್ಯಾಪಿಯನ್ನು ಗುರುತಿಸಲು ಬೇರೆ ದಾರಿಗಳಿಲ್ಲ. ಮನುಷ್ಯ ಮಾತ್ರರಾದ ನಾವು ಬೇರೆ ದಾರಿಗಳನ್ನು ಹುಡುಕಬೇಕಾಗಿಯೂ ಇಲ್ಲ. ವ್ಯಾಪಕತೆ ಎನ್ನುವ ಪರಿಕಲ್ಪನೆಯ ಅರ್ಥವಿದು.

ಇನ್ನೂ ಕೆಲವು ಸೂಕ್ಷ್ಮಗಳಿವೆ. ಅವೆಂದರೆ–ಇನ್ನೊಂದು ಜೀವದ ನೋವಿಗೆ ಸ್ಪಂದಿಸುವವನು ತಾನು ವಿಷ್ಣುವಿನ ಹೆಸರನ್ನೇ ಕೇಳಿರದಿದ್ದರೂ, ಆ ಕುರಿತು ಏನೂ ತಿಳಿದವನಾಗಿರದಿದ್ದರೂ ಅವನು ವೈಷ್ಣವನೇ. ಲೋಕರೂಢಿಯಲ್ಲಿ ಬೇರೆಯೇ ಧರ್ಮಕ್ಕೆ ಸೇರಿದವನಾಗಿದ್ದರೂ, ಬೇರೆಯೇ ಜನಾಂಗಕ್ಕೆ ಸೇರಿದವನಾಗಿದ್ದರೂ, ಆಗಿದ್ದೂ ಅವನು ವೈಷ್ಣವನೇ. ಏಕೆಂದರೆ ಎಲ್ಲವನ್ನೂ ಒಳಗೊಳ್ಳಬಲ್ಲ ವ್ಯಾಪನಶೀಲತೆಗೆ ಯಾವ ಅಡೆತಡೆಗಳೂ ಇಲ್ಲ.


ಸೂತ್ರರೂಪದಲ್ಲಿ ಒಂದು ಮಾತು ಹೇಳಬಹುದಾದರೆ 'ಅನ್ಯ'ಕ್ಕೆ ಸ್ಪಂದಿಸಲಾಗುವುದೇ 'ಸ್ವ'ದ ಸಾಧ್ಯತೆಯಾಗಿದೆ. ಈ ಸಾಧ್ಯತೆಯು 'ಸ್ವ'ದ ಅನನ್ಯತೆಯಾಗಿದೆ. ಈ ಸಾಧ್ಯತೆಯ ಸಾಕ್ಷಾತ್ಕಾರಕ್ಕಾಗಿಯೇ ದೇವರನ್ನು ನಾವು ತಿಳಿದ ಎಲ್ಲರಿಂದ 'ಅನ್ಯ', 'ಇತರ' ಎಂದು ಕರೆದಿರುವುದಾಗಿದೆ.

ಕುರುಡರ ಸಂತೆಯನ್ನು ಸಾವಿರಕಣ್ಣುಗಳಿಂದ ನೋಡುತ್ತಿರುವ ದೇವರು:

ಕಾಣುತ್ತಿರುವುದರ ಹಿಂದೆ ಕಾಣದ ರಹಸ್ಯಗಳಿವೆ ಎಂಬ ವಿಪರ್ಯಾಸದ ಅರಿವಿನಿಂದ ಧರ್ಮದ ಚರಿತ್ರೆ ಮೊದಲಾಯಿತು. ಆದರೆ ಧರ್ಮದಲ್ಲಿಯೇ ವಿಪರ್ಯಾಸಗಳು ಕಾಣಿಸಿಕೊಂಡಿವೆ. ಭಾಗವತ ಗ್ರಂಥದ ಈ ಮಾತು ಕೇಳಿ. "ತೀರ್ಥಕ್ಷೇತ್ರಗಳು ಘೋರಕರ್ಮದಲ್ಲಿ ನಿರತರಾದ ನಾಸ್ತಿಕರ ನೆಲೆಯಾಗಿಬಿಟ್ಟಿವೆ. ತಪಸ್ವಿಗಳೆಂದು ತೋರಿಸಿಕೊಳ್ಳುವವರು "ಕಾಮ ಕ್ರೋಧ' ಮಹಾಲೋಭ' ತೃಷ್ಣಾ ವ್ಯಾಕುಲಚೇತಸ"ರಾಗಿದ್ದಾರೆ. ಪಂಡಿತರೆಂಬವರು ಕೊಬ್ಬಿದ ಕೋಣಗಳೇ ಸರಿ."

ಭಾಗವತವು ಇತಿಹಾಸ ಕಾಲದ ಗ್ರಂಥ. ಇತಿಹಾಸಪೂರ್ವಕಾಲದ ಉಪನಿಷತ್ತನ್ನು ನೋಡೋಣವೆಂದರೆ–ತಾವೇ ಎಲ್ಲ ತಿಳಿದವರೆಂದು ಅಹಂಕಾರದಿಂದ ಕುರುಡರಾದ ಮಾರ್ಗದರ್ಶಕರೆಂಬವರ ಹಿಂದೆ ಜನತೆ–ಕುರುಡನನ್ನೇ ಅನುಸರಿಸುವ ಕುರುಡರಂತೆ ಸಾಗುತ್ತಿರುವುದು ಕಾಣಿಸುತ್ತಿದೆ. "ಅಂಧೇನೈವ ನೀಯಮಾನಾಃ ಯಥಾಂಧಾಃ" ಎನ್ನುತ್ತಿದೆ!

ಕುರುಡರ ಸಂತೆಯನ್ನು ಸಾವಿರ ಕಣ್ಣುಗಳಿಂದ ಎವೆ ಮುಚ್ಚದೆ ನೋಡುತ್ತಿರುವ ದೇವರು! ಇದು ಹಿಂದೂ ಧರ್ಮವೂ ಸೇರಿದಂತೆ ಎಲ್ಲೆಡೆ ಕಾಣಿಸುತ್ತಿರುವ ಚಿತ್ರ.




(ಪುತ್ತೂರಿನವರಾದ ಲೇಖಕರು ನಮ್ಮ ನಡುವಿನ ಹಿರಿಯ ಧಾರ್ಮಿಕ ವಿದ್ವಾಂಸರು ಮತ್ತು ಚಿಂತಕರು)

ವಿಶ್ಲೇಷಣೆ-೧

‘ಮೋದಿ ಅರ್ಥಶಾಸ್ತ್ರ’ ಎಂಬೊಂದು ಮಾದರಿ ಇದೆಯೇ?

-ಎ. ನಾರಾಯಣ

ಮೋದಿಯವರು ಅಧಿಕಾರಕ್ಕೆ ಬಂದಂದಿನಿಂದ ದೇಶದ ಆರ್ಥಿಕತೆಯ ಸ್ವರೂಪವೇ ಬದಲಾಗಿದೆ ಎಂದು ಹೇಳಲಾಗುತ್ತಿದೆ. ಯೋಜನಾ ಆಯೋಗದ ರದ್ದತಿ ಮತ್ತು ನೀತಿ ಆಯೋಗದ ರಚನೆಯೊಂದಿಗೆ ಆರಂಭವಾದ ಹೊಸ ಆರ್ಥಿಕ ಆಡಳಿತ ಶೈಲಿ ಅನೇಕ ಎಡರು ತಿಡರುಗಳ ನಡುವೆಯೂ ರಾಜಕೀಯ ಸವಾಲಿಲ್ಲದೆ ಮುಂದುವರೆದೇ ಇದೆ. ಇವರ ಅಧಿಕಾರಾವಧಿಯಲ್ಲಿ ರಿಸರ್ವ್ ಬ್ಯಾಂಕಿನ ಇಬ್ಬರು ಗವರ್ನರ್‌ಗಳ ಹಾಗೂ ಇಬ್ಬರು ಆರ್ಥಿಕ ಸಲಹಾಗಾರರ ನಿರ್ಗಮನದಂತಹ ಮಹಾ ಘಟನೆಗಳು ನಡೆದಿದ್ದರೂ, ಮೋದಿಯವರ ವೈಯಕ್ತಿಕ ಹಟದಿಂದೆಂಬಂತೆ ಜಾರಿಯಾದ ನೋಟುಗಳ ಅಮಾನ್ಯೀಕರಣ ಮತ್ತು ಜಿಎಸ್‌ಟಿ ವ್ಯವಸ್ಥೆ ಪ್ರತಿಕೂಲ ಪರಿಣಾಮಗಳನ್ನುಂಟು ಮಾಡಿದ್ದರೂ, ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಆರ್ಥಿಕತೆಯ ಪ್ರಗತಿ ದರ ಹಿಂದೆಂದೂ ಇಲ್ಲದಷ್ಟು ಕುಸಿದು ನಿರುದ್ಯೋಗ ಸಮಸ್ಯೆ ಸ್ಫೋಟಕ ಹಂತ ತಲುಪಿದ್ದರೂ ಯಾವ ಭರವಸೆಯ ಮೇಲೆ ಅವರು ಈವರೆಗಿನ ಯಾವ ಅರ್ಥಶಾಸ್ತ್ರೀಯ ಮಾದರಿಯನ್ನೂ ಹೋಲದ ತಮ್ಮ ಈ ಆರ್ಥಿಕ ‘ನೀತಿ’ಯನ್ನು ಮುಂದುರೆಸಿಕೊಂಡು ಹೋಗುತ್ತಿದ್ದಾರೆ? ಈ ಕುತೂಹಲದ ಪ್ರಶ್ನೆಗೆ ಇಲ್ಲಿ ಉತ್ತರ ಹುಡುಕುವ ಒಂದು ಪ್ರಯತ್ನ ಮಾಡಲಾಗಿದೆ.-ಸಂ.



ಮೋದಿನೊಮಿಕ್ಸ್ (Modinomics) ಎನ್ನುವ ಒಂದು ಪದವನ್ನು ಕೆಲವರು ಬಳಸುತ್ತಾರೆ. ಹಿಂದೆ ಮನಮೋಹನೊಮಿಕ್ಸ್ ಎನ್ನುವ ಪದ ಪ್ರಯೋಗವಿತ್ತಲ್ಲಾ ಹಾಗೆ.

ಇದನ್ನು ಅವಸರದಲ್ಲಿ ಕನ್ನಡೀಕರಿಸುವಾಗ ಮೋದ್ಯರ್ಥಶಾಸ್ತ್ರ ಅಂತ ಬರೆದುಬಿಡಬಹುದು. ಆದರೆ ವಾಸ್ತವದಲ್ಲಿ ‘ಶಾಸ್ತ್ರ’ ಎನ್ನುವ ಪದಕ್ಕಿಂತ ‘ನೀತಿ’ ಎನ್ನುವ ಪದ ಬಳಸಿ ಮೋದ್ಯರ್ಥನೀತಿ ಅಂತ ಹೇಳಿದರೆ ಹೆಚ್ಚು ಸೂಕ್ತವಾಗುತ್ತದೆ. ಯಾಕೆಂದರೆ, ‘ಮೋದಿನೋಮಿಕ್ಸ್’ ಆಗಲಿ ‘ಮನಮೋಹನೊಮಿಕ್ಸ್’ ಆಗಲಿ ಅದರಲ್ಲಿ ‘ಶಾಸ್ತ್ರ’ ಎನ್ನುವುದು ಏನೂ ಇಲ್ಲ. ಅಂದರೆ, ಅರ್ಥಶಾಸ್ತ್ರ ಸ್ವೀಕರಿಸುವ ವೈಜ್ಞಾನಿಕ ವಿಧಿವಿಧಾನಗಳನ್ನು ಬಳಸಿ ಶೋಧಿಸಿದ ಸಿದ್ಧಾಂತ, ಪ್ರಮೇಯ, ತತ್ವ ಇತ್ಯಾದಿಗಳೇನನ್ನೂ ಈ ಪದ ಸೂಚಿಸುವುದಿಲ್ಲ. ಬದಲಾಗಿ ನರೇಂದ್ರ ಮೋದಿ ಪ್ರಧಾನ ಮಂತ್ರಿ ಆದ ನಂತರ ಭಾರತ ಅನುಸರಿಸಿದ ಎಲ್ಲ ಆರ್ಥಿಕ ನೀತಿಗಳನ್ನು ಒತ್ತಟ್ಟಿಗಿಟ್ಟು ಅದರಲ್ಲೇನೋ ಒಂದು ಚೌಕಟ್ಟು ಒಂದು ಮಾದರಿ ಹುಡುಕುವ ಪ್ರಯತ್ನದ ಫಲವಾಗಿ ಮೋದಿನೋಮಿಕ್ಸ್ ಅನ್ನುವ ಪದ ಬಳಕೆಗೆ ಬಂದದ್ದು. ಮನಮೋಹನೊಮಿಕ್ಸ್ ಎನ್ನುವಲ್ಲೂ ಇದೇ ರೀತಿಯ ಅರ್ಥವೇ ಇರುವುದು. ಅಮೇರಿಕಾದಲ್ಲಿ ಒಂದು ಕಾಲದಲ್ಲಿ ಬಹಳಷ್ಟು ಚಾಲ್ತಿ ಪಡೆದಿದ್ದ ರೇಗೊನೊಮಿಕ್ಸ್‌ನ ಅರ್ಥವೂ ಹೀಗೆಯೇ ಇದೆ. ಅಧ್ಯಕ್ಷ ರೊನಾಲ್ಡ್ ರೇಗನ್ ಜಾರಿಗೆ ತಂದ ಅರ್ಥನೀತಿಗಳು ಎಂಬುದಾಗಿ.

ಮೋದಿನೋಮಿಕ್ಸ್‌ನ ಆಳ-ಅಗಲ-ಅಂತಾರಾಳದ ವಿಚಾರಕ್ಕೆ ಹೊರಳುವ ಮುನ್ನ ಒಂದು ವತ್ಯಾಸವನ್ನೂ ಹೇಳಿಬಿಡಬೇಕು. ಅಮೇರಿಕಾದಲ್ಲಿ ರೇಗೊನೊಮಿಕ್ಸ್ ಎನ್ನುವ ಪದ ಬಳಕೆಗೆ ಬರುವಲ್ಲಿ ಅಥವಾ ಭಾರತದಲ್ಲಿ ಮನಮೋಹನೊಮಿಕ್ಸ್ ಎನ್ನುವ ಪದ ಬಳಕೆಗೆ ಬರುವಲ್ಲಿ ಅವುಗಳ ಹಿಂದಿರುವ ಕಾರಣ ಬಹಳ ಸ್ಪಷ್ಟವಾಗಿದೆ. ಅಮೇರಿಕಾ ಹೇಳಿಕೇಳಿ ಮೊದಲೇ ಖಾಸಗಿ ರಂಗವನ್ನೇ ಪ್ರಧಾನವಾಗಿ ನಂಬಿದ ಅರ್ಥವ್ಯವಸ್ಥೆ. ರೇಗನ್ ಅಧಿಕಾರ ವಹಿಸಿಕೊಳ್ಳುವವರೆಗೆ ಈ ಖಾಸಗೀ ರಂಗ ಕೇಂದ್ರಿತ ಅರ್ಥವ್ಯವಸ್ಥೆಯಲ್ಲೂ ಸರಕಾರ ಒಂದು ಮಟ್ಟದ ನಿಯಂತ್ರಣವನ್ನು ಮತ್ತು ಒಂದು ಮಟ್ಟದ ಕಲ್ಯಾಣ ರಾಜ್ಯದ ಕಲ್ಪನೆಯನ್ನು ಹೊಂದಿತ್ತು. ರೇಗನ್ ಸರಕಾರ ನಿಯಂತ್ರಣಗಳನ್ನು ಮತ್ತಷ್ಟೂ ಸಡಿಲಿಸಿ, ಕಲ್ಯಾಣ ಕಾರ್ಯಕ್ರಮಗಳ ಮೇಲೆ ಸರಕಾರದ ವೆಚ್ಚ ವಿಪರೀತ ಕಡಿತಗೊಳಿಸಿ ಇಡೀ ವ್ಯವಸ್ಥೆಯನ್ನು ಮುರಿದುಕಟ್ಟಿದ ಹಿನ್ನೆಲೆಯಲ್ಲಿ ರೇಗೊನೊಮಿಕ್ಸ್ ಎನ್ನುವ ಪದಪ್ರಯೋಗ ಜಾರಿಗೆ ಬಂತು. ಮನಮೋಹನ್ ಸಿಂಗ್ ಅವರ ವಿಚಾರವೂ ಅಷ್ಟೇ. ಭಾರತ ೧೯೯೧ರ ನಂತರ ತನ್ನ ಅರ್ಥನೀತಿಯ ದಿಕ್ಕುಬದಲಾಯಿಸುವಂತಹ ರೀತಿಯ ಎಲ್ಲಾ ಕ್ರಮಗಳು ಮನಮೋಹನ್ ಸಿಂಗ್ ಅವರ ಕಾಲದಲ್ಲಿ ಸಾಕ್ಷಾತ್ಕಾರಗೊಂಡ ಕಾರಣ ಮನಮೋಹನೊಮಿಕ್ಸ್ ಎನ್ನುವ ಪರಿಕಲ್ಪನೆಯೊಂದು ಚಾಲ್ತಿಗೆ ಬಂತು. ಈಗ ಪ್ರಶ್ನೆ ಇರುವುದು ಮೋದಿಯ ಕಾಲದಲ್ಲಿ ಇಡೀ ಅರ್ಥವ್ಯವಸ್ಥೆಗೆ ಒಂದು ತಿರುವು ನೀಡುವಂತಹ ರೀತಿಯ ಯೋಜನೆ-ಯೋಚನೆ-ಕಾರ್ಯನೀತಿ ಏನಾದರೂ ಆಗಿದೆಯೇ ಎನ್ನುವುದು. ಮೋದಿ ಸರಕಾರದ ಆಡಳಿತ ಬಂದು ಎಂಟು ವರ್ಷಗಳಾಗುತ್ತಾ ಬಂದವು. ಈ ಅವಧಿಯಲ್ಲಿ ಕಾರ್ಯಗತಗೊಂಡ ಅರ್ಥ-ನಿರ್ಧಾರಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಎಷ್ಟು ಪರಿಶೀಲಿಸಿದರೂ ಯಾವುದೇ ನಿರ್ಧಿಷ್ಟ ದಿಕ್ಕು-ದೆಸೆ ಏನೂ ತೋರುವುದಿಲ್ಲ. ಹಾಗಂತ ಮಹತ್ವದ ನಿರ್ಧಾರಗಳಾಗಿಯೇ ಇಲ್ಲ ಅಂತಲೂ ಅಲ್ಲ. ಆದ ನಿರ್ಧಾರಗಳು ಏನನ್ನು ಸೂಚಿಸುತ್ತಿವೆ? ಅರ್ಥವ್ಯವಸ್ಥೆಯನ್ನು ಎತ್ತ ಒಯ್ಯಲಿವೆ? ಇದು ಮುಕ್ತ ಅರ್ಥ ನೀತಿಯ ಇನ್ನೊಂದು ಸ್ವರೂಪವೇ? ಇದು ಖಾಸಗೀಕರಣದ ಅಪರಾವತಾರವೇ? ಇದು ಕ್ರೋನಿ ಕ್ಯಾಪಿಟಲಿಸಂ (ಆಯ್ದ ಕೆಲವೇ ಉದ್ಯಮಿಗಳು ಇಡೀ ಅರ್ಥವ್ಯವಸ್ಥೆಯನ್ನು ನಿಯಂತ್ರಿಸುವ ಸ್ಥಿತಿ)ನ ಅಟ್ಟಹಾಸವೇ? ಒಂದು ಕಡೆ ಅಂತಾರಾಷ್ಟ್ರೀಯ ಮುಕ್ತ ಅರ್ಥವ್ಯವಸ್ಥೆಯ ಲಾಭ ಪಡೆಯಬೇಕೆನ್ನುವ ನೀತಿಗಳನ್ನು ನಿರೂಪಿಸುತ್ತಲೇ ಇನ್ನೊಂದೆಡೆ ‘ಆತ್ಮನಿರ್ಭರ್’(ಸ್ವಾವಲಂಬನೆ) ಎನ್ನುವ ಮಂತ್ರ ಪಠಿಸುವುದರ ಮರ್ಮವಾದರೂ ಏನು? ಈ ಎಲ್ಲ ಪಶ್ನೆಗಳು ಇನ್ನೂ ಮುಕ್ತವಾಗಿಯೇ ಇವೆ.

ಹಾಗೆ ನೋಡಿದರೆ ಮೋದಿನೊಮಿಕ್ಸ್ ಎನ್ನುವ ಪದ ಚಾಲ್ತಿಗೆ ಬರುವ ಮುನ್ನವೇ ಮೋದಿ ಎನ್ನುವ ವ್ಯಕ್ತಿ ಓರ್ವ ಆರ್ಥಿಕ ಮೋಡಿಗಾರ ಎನ್ನುವ ರೀತಿಯ ಜನಪದವೊಂದು ಭಾರತದ ರಾಜಕೀಯ ಚರ್ಚೆಯಲ್ಲಿ ಹುಟ್ಟಿಕೊಂಡಿತ್ತು. ಮೋದಿ ಗುಜಾರಾತ್ ರಾಜ್ಯದ ಮುಖ್ಯಮಂತ್ರಿ ಆದ ನಂತರ ಆ ರಾಜ್ಯದಲ್ಲೊಂದು ಅರ್ಥ ಕ್ರಾಂತಿ ನಡೆಯಿತು ಅಂತಲೂ, ಅದು ‘ಗುಜರಾತ್ ಮಾಡೆಲ್’ ಅಂತಲೂ, ಅದು ಮುಂದೆ ದೇಶವ್ಯಾಪೀ ಅನುಷ್ಠಾನಕ್ಕೆ ಬರುವ ಮೂಲಕ ಭಾರತ ಪ್ರಪಂಚದ ಶ್ರೀಮಂತ ರಾಷ್ಟ್ರಗಳ ಸಾಲಿನಲ್ಲಿ ರಾರಾಜಿಸಲಿದೆ ಅಂತಲೂ ವ್ಯಾಪಕ ಕನಸುಗಳನ್ನು ಮೋದಿ ೨೦೧೪ರ ವೇಳೆಗೆ ದೇಶದ ಪ್ರಧಾನ ಮಂತ್ರಿಯಾಗಿ ಪ್ರತಿಷ್ಠಾಪನೆಗೊಳ್ಳುವ ವೇಳೆಗೆ ಹರಡಲಾಗಿತ್ತು. ಸಹಜವಾಗಿಯೇ ದೇಶದಲ್ಲಿ ಯಾವ ರೀತಿಯ ಮೋಡಿ ನಡೆಯಲಿದೆ ಎನ್ನುವ ಬಗ್ಗೆ ದೇಶವಾಸಿಗಳಿಗೆ ಮಾತ್ರವಲ್ಲ ಪ್ರಪಂಚಕ್ಕೆಲ್ಲ ಕುತೂಹಲವೂ ಇತ್ತು.

** ** **

‘ಮೋದಿನೋಮಿಕ್ಸ್’ನ ಮೊದಲ ಅಧ್ಯಾಯದಲ್ಲಿ ಕಂಡು ಬರುವುದು ಆವೇಶ. ಈ ಮಾತನ್ನು ಹೇಳಲು ಕಾರಣವಿದೆ. ಆ ತನಕ ಏನೂ ಆಗಿಲ್ಲ. ಈಗ ಎಲ್ಲವನ್ನೂ ಮಾಡಿ ಮುಗಿಸಬೇಕು ಎನ್ನುವ ರಾಜಕೀಯ ಯೋಚನೆಯ ರೀತಿಯಲ್ಲೇ ಮೋದಿ ಸರಕಾರದ ಅರ್ಥ ನೀತಿಯೂ ಒಮ್ಮಿಂದೊಮ್ಮೆಲೆ ಎಲ್ಲವನ್ನೂ ಮಾಡಿ ಮುಗಿಸುವ ಆವೇಶ ಹೊಂದಿದಂತೆ ಕಾಣಿಸುತಿತ್ತು. ಅದರಲ್ಲೂ ಮುಖ್ಯವಾಗಿ ಕಾಣಿಸುವುದು ದೇಶದ ಔದ್ಯಮಿಕ ವಾತಾವರಣವನ್ನು ಉತ್ತೇಜಿಸುವ ಮೂಲಕ ಬಂಡವಾಳದ ಮಹಾಪೂರವೇ ದೇಶದಲ್ಲಿ ಬರುವಂತೆ ಮಾಡಬೇಕು ಎನ್ನುವ ದಾವಂತ.

ಭಾರತದ ಅರ್ಥವ್ಯವಸ್ಥೆಯ ವಿಕಾಸದಲ್ಲಿ ಒಂದು ಕೊರತೆ ಎನ್ನಬಹುದಾದ ಚಾರಿತ್ರಿಕ ಭಿನ್ನತೆ ಇದೆ. ಆರ್ಥಿಕವಾಗಿ ಬೆಳೆಯುವ ಹಂತದಲ್ಲಿ ಒಂದು ದೇಶದ ಅರ್ಥ ವ್ಯವಸ್ಥೆ ಕೃಷಿ ಪ್ರಧಾನವಾಗಿದ್ದದ್ದು ಕೈಗಾರಿಕಾ ಉತ್ಪಾದನೆಯಲ್ಲಿ ಮೇಲುಗೈ ಸಾಧಿಸಿ ಆ ನಂತರ ಸೇವಾ ಕ್ಷೇತ್ರದಲ್ಲಿ ಪ್ರಾಬಲ್ಯ ಸ್ಥಾಪಿಸುವುದು ರೂಢಿ. ಆದರೆ ಭಾರತ ಕೃಷಿ ಪ್ರಧಾನ ವ್ಯವಸ್ಥೆಯಿಂದ ನೇರವಾಗಿ ಸೇವಾ ಕ್ಷೇತ್ರದ ಪ್ರಾಬಲ್ಯದತ್ತ ಹೊರಳಿತು. ಕೃಷಿ ಕ್ಷೇತ್ರದ ಕೊಡುಗೆ ದೇಶದ ಒಟ್ಟು ವರಮಾನದಲ್ಲಿ ಕಡಿಮೆಯಾಗುತ್ತಾ ಬಂದರೂ ಅದಿನ್ನೂ ದೇಶದ ಶೇಕಡಾ ೫೦ಕ್ಕಿಂತಲೂ ಹೆಚ್ಚು ಜನರಿಗೆ ಉದ್ಯೋಗ ಒದಗಿಸುತ್ತದೆ. ದೇಶದ ವರಮಾನಕ್ಕೆ ದೊಡ್ಡ ಕೊಡುಗೆ ನೀಡುವ ಸೇವಾ ಕ್ಷೇತ್ರ ಸೀಮಿತ ಸಂಖ್ಯೆಯ ಜನರಿಗಷ್ಟೇ ಉದ್ಯೋಗ ಒದಗಿಸುತ್ತದೆ. ಬೆಳವಣಿಗೆಯ ಜತೆ ಉದ್ಯೋಗಾವಕಾಶಗಳನ್ನೂ ಹೆಚ್ಚಿಸಬಲ್ಲ ಉತ್ಪಾದನಾ ರಂಗ ಭಾರತದಲ್ಲಿ ಬೆಳೆಯಲೇ ಇಲ್ಲ. ಇದನ್ನು ಸರಿಪಡಿಸಬೇಕು ಎಂಬ ಮೋದಿನೋಮಿಕ್ಸ್‌ನ ಆದ್ಯತೆ ಸರಿಯಾಗಿಯೇ ಇತ್ತು. ಅದರ ಫಲವಾಗಿಯೇ ‘ಮೇಕ್ ಇನ್ ಇಂಡಿಯಾ’, ‘ಒನ್ ಡಿಸ್ಟ್ರಿಕ್ಟ್ ಒನ್ ಪ್ರಾಡಕ್ಟ್’, ‘ಸ್ಕಿಲ್ ಡೆವಲಪ್ಮೆಂಟ್ ಕೌನ್ಸಿಲ್’ ಇತ್ಯಾದಿ ಚಟುವಟಿಕೆಗಳು ಗರಿಗೆದರಿದ್ದು. ದೇಶದ ವರಮಾನಕ್ಕೆ ಉತ್ಪಾದನಾ ರಂಗದ ಕೊಡುಗೆಯನ್ನು ಶೇಕಡಾ ೨೫ಕ್ಕೆ ೨೦೨೦ರ ವೇಳೆಗೆ ಹೆಚ್ಚಿಸಬೇಕು ಎನ್ನುವುದು ಗುರಿಯಾಗಿತ್ತು. ಇದಕ್ಕೆ ಪೂರಕ ಎಂಬಂತೆ ವಿಶ್ವಬ್ಯಾಂಕ್ ಪ್ರತೀ ವರ್ಷ ನೀಡುತಿದ್ದ ‘ಈಸ್ ಆಫ್ ಡುಯಿಂಗ್ ಬಿಸಿನೆಸ್’(ವ್ಯಾಪಾರ ವಹಿವಾಟನ್ನು ನಡೆಸುವ ಪೂರಕ

ವಾತಾವರಣ) ಸೂಚ್ಯಂಕ ಆಧಾರಿತ ರ್‍ಯಾಂಕ್ ಪಟ್ಟಿಯಲ್ಲಿ ನೂರಕ್ಕೂ ಮೇಲಿದ್ದ ಭಾರತದ ಸ್ಥಾನವನ್ನು ಐವತ್ತರ ಕೆಳಗೆ ತರಬೇಕೆಂದು ತರಹೇವಾರಿ ಸರ್ಕಸ್ ನಡೆಯಿತು. ಕೊನೆಗೂ ಎರಡು ಹಂತದಲ್ಲಿ ಭಾರತದ ಸ್ಥಾನ ಸುಧಾರಿಸಿದ ಬಗ್ಗೆ ವರದಿಗಳು ಬಂದವು.

ಇಷ್ಟೆಲ್ಲಾ ಆದ ನಂತರ ಎರಡು ವಿಷಯಗಳನ್ನು ಗಮನಿಸಬೇಕು. ಈಗಲೂ ಉತ್ಪಾದನಾ ರಂಗದ ಕೊಡುಗೆ ಶೇಕಡಾ ೧೭ರಷ್ಟೇ ಇದೆ. ಇದು ಸುಮಾರು ಹತ್ತುವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಕೇವಲ ಶೇಕಡಾ ೨ರಷ್ಟು ಅಷ್ಟೇ ಹೆಚ್ಚಾಗಿದ್ದು. ಇನ್ನೊಂದೆಡೆ ಯಾವಾಗ ವಿಶ್ವಬ್ಯಾಂಕ್ 'ಈಸ್ ಆಫ್ ಡುಯಿಂಗ್ ಬಿಸಿನೆಸ್' ಸೂಚ್ಯಂಕದಲ್ಲಿ ಭಾರತದ ಸ್ಥಾನ ಸುಧಾರಿಸಿತು ಅಂತ ವರದಿ ನೀಡಿತೋ ಅದೇ ವರ್ಷ ಆ ಸೂಚ್ಯಂಕದ ವಿಶ್ವಾಸಾರ್ಹತೆಯ ಬಗ್ಗೆಯೇ ದೊಡ್ಡ ಗುಮಾನಿ ಎದ್ದು ಈ ಸೂಚ್ಯಂಕ ಪ್ರಕಟಿಸುವ ಪರಿಪಾಠವನ್ನೇ ವಿಶ್ವಬ್ಯಾಂಕು ನಿಲ್ಲಿಸಿಬಿಟ್ಟಿತು. ಭಾರತದ ವಿಚಾರದಲ್ಲಿ ಅಕ್ರಮವೇನೂ ನಡೆದಿಲ್ಲ ಎಂಬ ಸಮಜಾಯಿಸಿ ಬಂದರೂ ಭಾರತದ ಸ್ಥಾನ ಏರಿದ್ದು ಮತ್ತು ಎಂದೂ ಇಲ್ಲದ ಬೆಳವಣಿಗೆಯಲ್ಲಿ, ಅಂತಾರಾಷ್ಟ್ರೀಯ ಸಂಸ್ಥೆಯೊಂದು ನೀಡುತ್ತಿದ್ದ ವಾರ್ಷಿಕ ದಾಖಲೆಯೊಂದರ ವಿಶ್ವಾಸಾರ್ಹತೆಯೇ ಕುಸಿದು ಪಾತಾಳ ತಲುಪಿದ್ದು ತೀರಾ ಕಾಕತಾಳೀಯವೇ ಸರಿ.

ಎಂಟು ವರ್ಷಗಳ ಮೋದ್ಯರ್ಥನೀತಿಗಳನ್ನು ಹೀಗೆ ಪರಿಶೀಲಿಸುತ್ತಾ ಹೋದಾಗ ಒಂದೆಡೆ ಮೇಲೆ ವಿವರಿಸಿದ ರೀತಿಯ ಅರ್ಥಶಾಸ್ತ್ರೀಯವಾಗಿ ತರ್ಕಬದ್ಧವಾದ ಹಲವಾರು ಯೋಜನೆಗಳು ಜಾರಿಯಾದದ್ದನ್ನು ಕಾಣುತ್ತೇವೆ. ಅವುಗಳು ಯಶಸ್ವಿಯಾದವೋ ಅಥವಾ ಬರೀ ಭಾಷಣ ಅಥವಾ ಕಡತಗಳಿಗೆ ವಸ್ತುವಾದವೂ ಎನ್ನುವ ಕತೆ ಬೇರೆ. ಬಹು ಚರ್ಚಿತ ಮತ್ತು ವಿವಾದಕ್ಕೆ ಎಡೆ ಮಾಡಿಕೊಟ್ಟಿರುವ ಸರಕು ಮತ್ತು ಸೇವಾ ತೆರಿಗೆ (GST) ಯ ವಿಚಾರವೂ ಅಷ್ಟೇ. ಇದರ ಅನುಷ್ಠಾನದ ಕುರಿತಾದ ಲೋಪಗಳೇನೇ ಇದ್ದರೂ ಅದರ ಜಾರಿಯ ಹಿಂದೆ ಇರುವ ಸುಧಾರಣಾವಾದವನ್ನು ಕಡೆಗಣಿಸಲಾಗದು. ಆದರೆ ಈ ಅವಧಿಯಲ್ಲಿ ಆಗಿ ಹೋಗಿರುವ ಆರ್ಥಿಕ ವಿದ್ಯಾಮಾನಗಳೆಲ್ಲಾ ಇದೇ ರೀತಿಯವು ಎನ್ನುವ ಹಾಗಿಲ್ಲ. ಈ ರೀತಿಯ ತರ್ಕಕ್ಕೆ ನಿಲುಕುವ ನೀತಿಗಳಿಗಿಂತ ಹೆಚ್ಚಾಗಿ ಯಾವುದೇ ರೀತಿಯ ಸಮರ್ಥನೆಯನ್ನು ಒದಗಿಸಲಾಗದ ಅಥವಾ ಅರ್ಥಶಾಸ್ತ್ರೀಯವಾಗಿ ಅರ್ಥ ಮಾಡಿಕೊಳ್ಳಲು ಕಷ್ಟವಾಗುವ ಹಲವಾರು ನೀತಿಗಳು ಈ ಅವಧಿಯಲ್ಲಿ ದೊಡ್ಡದಾಗಿ ಸುದ್ದಿ ಮಾಡಿವೆ. ವಾಸ್ತವದಲ್ಲಿ ಇಂತಹ ತರ್ಕಕ್ಕೆ ನಿಲುಕದ ಆರ್ಥಿಕ ನೀತಿಗಳಿಗೆ *ಮೋದಿನೋಮಿಕ್ಸ್* ಚರಿತ್ರೆಯಲ್ಲಿ ಸ್ಥಾನ ಪಡೆಯುವ ಎಲ್ಲಾ ಸಾಧ್ಯತೆಗಳೂ ನಿಚ್ಚಳವಾಗಿ ಗೋಚರಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಅಗತ್ಯವಾಗಿ ಪರಿಗಣಿಸಲೇ ಬೇಕಿರುವುದು ಮೋದಿ ಸರಕಾರ ೨೦೧೬ರಲ್ಲಿ ಜಾರಿಗೆ ತಂದ ನೋಟು ಅಮಾನ್ಯೀಕರಣದ ನಿರ್ಧಾರವನ್ನು. ಅದ್ಯಾರ ಸಲಹೆನೋ, ಅದ್ಯಾರ ಯೋಚನೆನೋ – ಎಲ್ಲವೂ ಇನ್ನೂ ನಿಗೂಢವಾಗಿಯೇ ಇದೆ. ಅಧಿಕಾರವೊಂದು ಇದ್ದರೆ ಏನನ್ನಾದರೂ ಮಾಡಿ ದಕ್ಕಿಸಿಕೊಳ್ಳಬಹುದು ಎಂಬ ರಾಜಕೀಯ ಪಾಠದ ಹೊರತಾಗಿ ಅದರಿಂದಾಗಿ ಆದ ಸಾಧನೆ ಏನು ಎನ್ನುವುದನ್ನು ಬಿಜೆಪಿಯ ಆಸ್ಥಾನ ಅರ್ಥಶಾಸ್ತ್ರಜ್ಞರಿಗೆ ಬಿಟ್ಟರೆ ಉಳಿದವರಿಗೆ ಊಹಿಸುವುದು ಕೂಡಾ ಕಷ್ಟ. ಅಕ್ಷರಶಃ ತುಘಲಕ್ ನೀತಿಯನ್ನು ನೆನಪಿಗೆ ತಂದ ನೋಟು ಅಮಾನ್ಯೀಕರಣದ ಸಮರ್ಥನೆಗೆ ಈಗ ಸರಕಾರ ನೀಡುವ ಒಂದೇ ಒಂದು ಕಾರಣ ಎಂದರೆ ಇದರಿಂದಾಗಿ ಭಾರತದ ಆರ್ಥಿಕತೆ ಹೆಚ್ಚು ಔಪಚಾರಿಕತೆಯತ್ತ ಹೊರಳುತ್ತಿದೆ ಎಂದು. ಇದೇನೋ ಸರಿ ಇರಬಹುದು. ಆದರೆ ಇದಕ್ಕಾಗಿ ಶೇಕಡಾ ೮೦ರಷ್ಟು ಚಲಾವಣೆಯಲ್ಲಿದ್ದ ನೋಟುಗಳನ್ನು ಅಮಾನ್ಯಗೊಳಿಸಿ ಜನ ಪಡಬಾರದ ಕಷ್ಟಗಳನ್ನೆಲ್ಲಾ ಈಗಲೂ ಪಡುವ ಹಾಗೆ ಮಾಡಬೇಕಿತ್ತೇ? ಬೇರೆ ಯಾವುದೇ ಸುಲಭ ಮಾರ್ಗಗಳಿರಲಿಲ್ಲವೇ? ಈ ಪ್ರಶ್ನೆಗಳನ್ನು ಯಾರೂ ಎತ್ತುವುದಿಲ್ಲ. ಎತ್ತಿದರೂ ಯಾರೂ ಉತ್ತರ ನೀಡುವ ಗೋಜಿಗೆ ಹೋಗುವುದಿಲ್ಲ.

ಮೋದಿಯ ಅವಧಿಯಲ್ಲಿ ಭಾರತದಲ್ಲಿ 'ಕ್ರೋನಿ ಕ್ಯಾಪಿಟಲಿಸಂ' ಎಲ್ಲಿಲ್ಲದಂತೆ ಬೆಳೆಯಿತು. ಮೋದಿಗೆ ಆಪ್ತರಾಗಿರುವ ಉದ್ಯಮಪತಿಗಳಾದ ಅದಾನಿ–ಅಂಬಾನಿಗಳು ಸಾಧಿಸಿದ ಪ್ರಗತಿ ಹೇಗೆ ಲೆಕ್ಕ ಹಾಕಿದರೂ ಊಹೆಗೆ ನಿಲುಕದ್ದು. ಅಂಬಾನಿ ಮೊಬೈಲ್ ಟೆಲಿಫೋನ್ ಜಾಲದ ಏಕಸ್ವಾಮ್ಯ ಸಾಧಿಸಿದರೆ, ಅತ್ತ ಅದಾನಿ ಭೂಮಿ ನೀರು ಆಕಾಶ ಯಾವುದನ್ನೂ ಬಿಡದೆ ಆಕ್ರಮಿಸಿಕೊಳ್ಳುವ ಹಾಗಿದೆ. ದೇಶದ ಎಲ್ಲಾ ವಿಮಾನ ನಿಲ್ದಾಣಗಳೂ ಅದಾನಿಯ ಕೈಯ್ಯಲ್ಲಿ. ದೇಶದ ತೈಲ ನಿಕ್ಷೇಪಗಳೆಲ್ಲಾ ಅಂಬಾನಿ ಕೈಯ್ಯಲ್ಲಿ. ಅದಾನಿಯ ಸಂಪತ್ತು ಮೇ ೨೦೧೪ರ ನಂತರ ೩೪೦ ಪಟ್ಟು ಹೆಚ್ಚಿ ಸುಮಾರು ೩೪ ಶತಕೋಟಿ ಅಮೆರಿಕನ್ ಡಾಲರ್‌ನಷ್ಟು ಆಗಿದ್ದು ಕೇವಲ ಕಾಕತಾಳೀಯವಾಗಿರಲಾರದು. ಇಂದು ಅದೊಂದೇ ಉದ್ಯಮ ಸಮೂಹ ದೇಶದ ಬಹುತೇಕ ವಿಮಾನ ನಿಲ್ದಾಣಗಳನ್ನು ಮತ್ತು ಇಂಧನ ನಿಕ್ಷೇಪಗಳನ್ನು ತನ್ನ ಒಡೆತನಕ್ಕೆ ಪಡೆದುಕೊಳ್ಳಲು ಸಾಧ್ಯವಾಗಿದ್ದು ಕ್ರೋನಿ ಕ್ಯಾಪಿಟಲಿಸಂನ ಆಪಾದನೆಗಳನ್ನು ಬಲಗೊಳಿಸುತ್ತವೆ. ದೇಶದಲ್ಲಿ ನಷ್ಟದಲ್ಲಿರುವ ಉದ್ಯಮಗಳನ್ನು ಇಂತಹ ಕೆಲವೇ ಕೆಲವು ಉದ್ಯಮ ಸಮೂಹಗಳಷ್ಟೇ ಖರೀದಿಸಲು ಅನುವಾಗುವಂತೆ ನಿಬಂಧನೆಗಳನ್ನು ಮತ್ತು ನಿರ್ಬಂಧಗಳನ್ನು ಬೇಕಾದ ಹಾಗೆ ಬಿಗಿ ಮಾಡಿಕೊಂಡು ಬೇಡದಾಗ ಸಡಿಲಿಸಿಕೊಂಡು ವ್ಯವಹಾರಗಳು ಹೇಗೆ ನಡೆಯುತ್ತವೆ ಎನ್ನುವುದನ್ನು ರಿಸರ್ವ್ ಬ್ಯಾಂಕ್‌ನ ಓರ್ವ ಮಾಜಿ ಗವರ್ನರ್ ಮತ್ತು ಓರ್ವ ಮಾಜಿ ಡೆಪ್ಯುಟಿ ಗವರ್ನರ್ ಬರೆದ ಪುಸ್ತಕಗಳಲ್ಲಿ ದಾಖಲಿಸಲಾಗಿದೆ. ಹಾಗೆಯೇ ದೇಶದ ಡಿಜಿಟಲ್ ಉದ್ಯಮಗಳಲ್ಲಿ ಆಗುತ್ತಿರುವ ಹೂಡಿಕೆಯಲ್ಲಿ ಸುಮಾರು ಅರ್ಧದಷ್ಟು ಭಾಗ ಅಂಬಾನಿ ನೇತೃತ್ವದ ಕಂಪೆನಿಗಳಲ್ಲೇ ಆಗುತ್ತದೆ. ಆದ ಕಾರಣವೇ ೨೦೨೦–೨೧ರ ಸಾಲಿನಲ್ಲಿ ದೇಶದ ಒಟ್ಟು ಆರ್ಥಿಕ ಬೆಳವಣಿಗೆ ಸುಮಾರು ಶೇಕಡಾ ೮ರಷ್ಟು ಕುಸಿದರೂ ಈ ಎರಡು ಉದ್ಯಮ ಸಮೂಹಗಳು ಸೇರಿದಂತೆ ಬೆರಳೆಣಿಕೆಯ ಕೆಲ ಉದ್ಯಮ ಸಮೂಹಗಳ ಸಂಪತ್ತು ಅಗಾಧ ಪ್ರಮಾಣದ ಹೆಚ್ಚಳ ಕಂಡಿತು. ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಆರಂಭದ ಕೆಲವು ವರ್ಷ ಉಳಿದ ಉದ್ಯಮಿಗಳು ಅವರನ್ನು ಹೆಚ್ಚೇನೂ ಹಚ್ಚಿಕೊಂಡಿರಲಿಲ್ಲ. ಆಗ ಅದಾನಿ ಮತ್ತು ಅಂಬಾನಿ ಅವರ ಜತೆಗೆ ನಿಂತದ್ದು ಆ ನಂತರ ದೇಶದ ಬಹುದೊಡ್ಡ ಉದ್ಯಮ–ರಾಜಕೀಯ ಸಂಬಂಧವಾಗಿ ಬೆಳೆದು ಈಗ ಇಡೀ ಅರ್ಥವ್ಯವಸ್ಥೆಯನ್ನೇ ಈ ಸಂಬಂಧ ರೂಪಿಸುವ ಹಂತಕ್ಕೆ ಬಂದು ನಿಂತಿದೆ.

ಹೀಗೆ ಕೆಲವೇ ಕೆಲವು ಉದ್ಯಮ ಸಮೂಹಗಳನ್ನು ವಿಪರೀತ ಬೆಳೆಯಗೊಟ್ಟದ್ದು ಮತ್ತು ಅದಕ್ಕೆ ಅನುಗುಣವಾಗುವಂತೆ ಹಲವಾರು ಸರಕಾರೀ ಸ್ವಾಮ್ಯದ ಉದ್ಯಮಗಳನ್ನು ಖಾಸಗೀಕರಣಗೊಳಿಸಿದ್ದನ್ನು ಸರಕಾರೀ ಬಂಡವಾಳಶಾಹೀ (ಸ್ಟೇಟ್ ಕ್ಯಾಪಿಟಲಿಸಂ) ಮಾದರಿ ಎನ್ನುತ್ತಾರೆ. ಹೆಚ್ಚು ಕಡಿಮೆ ಒಂದು ಕಾಲದ ಪೂರ್ವ ಏಷ್ಯಾ ರಾಷ್ಟ್ರಗಳ ಈ ಮಾದರಿಯಲ್ಲಿ ಅಮೇರಿಕಾ ಮತ್ತು ಯುರೋಪ್‌ನಲ್ಲಿರುವ ಹಾಗೆ ಮುಕ್ತ ಮಾರುಕಟ್ಟೆ ಮತ್ತು ಮುಕ್ತ ಪೈಪೋಟಿಗೆ ಅವಕಾಶವಿಲ್ಲ. ಕೆಲವೇ ಕೆಲವು ಉದ್ಯಮ ಸಮೂಹಗಳು ಆಗಾಧವಾಗಿ ಬೆಳೆದಾಗ ಅದರಿಂದಾಗಿ ಒಟ್ಟು ಆರ್ಥಿಕತೆ ಬೆಳೆಯಲು ಸಾಧ್ಯವಾಗುತ್ತದೆ ಮತ್ತು ಹಾಗಾಗಿ ಇದರ ಒಟ್ಟು ಪ್ರಯೋಜನ ಇದರಿಂದಾಗಿ ಆಗಬಹುದಾದ ನಷ್ಟಕ್ಕಿಂತ (ಸಣ್ಣ ಉದ್ಯಮಗಳ ಮುಚ್ಚುವಿಕೆ, ಸರಕಾರೀ ಸ್ವಾಮ್ಯದ ಉದ್ದಿಮೆಗಳ ಖಾಸಗೀಕರಣ ಇತ್ಯಾದಿಗಳಿಂದ ಆಗುವ ನಷ್ಟ) ಹೆಚ್ಚು ಇರುತ್ತದೆ ಎನ್ನುವುದು ಲೆಕ್ಕಾಚಾರ. ಕೆಲವೇ ಉದ್ಯಮಪತಿಗಳನ್ನು ಪೋಷಿಸುವುದು ಅಧಿಕಾರಸ್ಥ ಪಕ್ಷಕ್ಕೆ ಬೇಕಾದ ರಾಜಕೀಯ ಬಂಡವಾಳವನ್ನು ಕೂಡ ಸುಲಭವಾಗಿ ಸಿಗುವ ಹಾಗೆ ಮಾಡಿ ಮಾಮೂಲಿ ಸರಕಾರೀ ಭ್ರಷ್ಟಾಚಾರವನ್ನು ಸ್ವಲ್ಪ ಕಡಿತಗೊಳಿಸಲೂ ಸಾಧ್ಯವಾಗುತ್ತದೆ. ಆ ಮೂಲಕ ಶುದ್ಧ ಮತ್ತು ಕಳಂಕರಹಿತ ಆಡಳಿತ ನೀಡಿದ್ದೇವೆ ಅಂತ ಹೇಳಿಕೊಳ್ಳಲೂ ಬರುತ್ತದೆ. ಆದರೆ ಒಳಗಿನ ಒಳಸುಳಿಗಳೆಲ್ಲಾ ಬೇರೆಯೇ ಇರುತ್ತವೆ.

ಒಂದು ಕಾಲದಲ್ಲಿ ಬಿಜೆಪಿಯ ಚಿಂತಕರ ಚಾವಡಿ 'ಸ್ವದೇಶೀ' 'ಸ್ವದೇಶೀ' ಎಂದು ಬೊಬ್ಬಿಡುತ್ತಿತ್ತು. ಆ ಕಾಲ ಹೋಗಿ ವಾಜಪೇಯಿಯವರ ಕಾಲಕ್ಕೇನೇ ಬಿಜೆಪಿ ಮನಮೋಹನ್ ಸಿಂಗ್ ಪ್ರಾರಂಭಿಸಿದ ಉದಾರೀಕೃತ ಅರ್ಥ ನೀತಿಯ ವಾರಸುದಾರರಾಗಿದ್ದು ಈಗ ಇತಿಹಾಸ. ಮೋದಿಯ ಕಾಲಕ್ಕಂತೂ ಯಾವುದನ್ನೂ ಬಿಡದೆ ಖಾಸಗೀಕರಣಗೊಳಿಸುವ ಕೆಲಸ ನಡೆಯುತ್ತಿದೆ. ಲಾಭದಲ್ಲಿರುವ, ನಷ್ಟದಲ್ಲಿರುವ ಎಲ್ಲಾ ಉದ್ಯಮಗಳು ಒಂದಾದ ನಂತರ ಒಂದರಂತೆ ಖಾಸಗಿಯವರ ಪಾಲಾಗುತ್ತಿದೆ. ಅಷ್ಟೇ ಅಲ್ಲ. 'ಮೊನೆಟೈಸೇಷನ್'(ನಗದೀಕರಣ: ಒಟ್ಟು ಆಸ್ತಿಪಾಸ್ತಿಗಳ ಮೌಲ್ಯದ ಅಂದಾಜೂ) ಎನ್ನುವ ಹೊಸ ಯೋಜನೆಯಡಿ ಸರಕಾರದ ಸುಪರ್ದಿಯಲ್ಲಿರುವ ಪ್ರತಿಯೊಂದು ಆಸ್ತಿಯನ್ನೂ ಖಾಸಗಿಯವರಿಗೆ ಗುತ್ತಿಗೆ ನೀಡಿ ಹಣಮಾಡುವ ಸನ್ನಾಹ ನಡೆಯುತ್ತಿದೆ. ಜತೆಗೆ ಖಾಸಗಿ ರಂಗಕ್ಕೆ ನೀಡುತಿದ್ದ ಹಳೆಯ ರೀತಿಯ ಉತ್ತೇಜನಗಳೆಲ್ಲಾ ಮುಂದುವರಿದಿವೆ. ಕೊರೋನ ಕಾಲದ ಅಸಹಾಯಕತೆಯನ್ನೇ ಬಂಡವಾಳವಾಗಿಸಿಕೊಂಡು ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಲಾಯಿತು. ಪರಿಸರ ಸಂಬಂಧೀ ನಿರ್ಬಂಧಗಳನ್ನು ಕಿತ್ತುಹಾಕಲಾಯಿತು. ಕೃಷಿಯನ್ನು ಖಾಸಗೀ ಬಂಡವಾಳದ ಸುಪರ್ದಿಗೆ ತರಲು ನಡೆಸಿದ ಯತ್ನ ಚಾರಿತ್ರಿಕ ರೈತ ಚಳವಳಿಯ ಕಾರಣದಿಂದ ಸ್ವಲ್ಪ ಹಿನ್ನಡೆ ಕಂಡಿತು ಎನ್ನುವುದನ್ನು ಬಿಟ್ಟರೆ ಖಾಸಗೀಕರಣದ ನಾಗಾಲೋಟಕ್ಕೆ ಯಾವುದೇ ಅಡೆತಡೆಗಳು ಕಾಣಿಸುತ್ತಿಲ್ಲ. ಸಮತೆ–ಸುಸ್ಥಿರತೆ ಇತ್ಯಾದಿ ಯಾವುದರ ಬಗೆಗೂ ಯಾವ ಗೊಡವೆಯೂ ಇಲ್ಲದೆ ಒಟ್ಟು ಆರ್ಥಿಕ ಯಂತ್ರದ ಗಾಲಿಗಳು ತಿರುಗುತಿದ್ದರೆ ಸಾಕು ಎನ್ನುವ ನೋಟದ ಅರ್ಥಶಾಸ್ತ್ರವೇ ಮೋದಿನೋಮಿಕ್ಸ್ ಎನ್ನುವಂತೆ ತೋರುತ್ತಿದೆ.

ಅದೇನೇ ಮಾಡಿದರೂ ಅಭಿವೃದ್ಧಿ ದರವಂತೂ ಮೇಲೇಳಲಿಲ್ಲ. ಅಭಿವೃದ್ಧಿ ದರದ ಕುಸಿತ ಕೊರೋನಾ ಪೂರ್ವದಲ್ಲೇ ಪ್ರಾರಂಭ ಆಗಿದ್ದು ಇನ್ನೂ ಮುಂದುವರಿಯುತ್ತಿದೆ. ಅಭಿವೃದ್ಧಿ ದರ ಮೇಲೇಳಲಿಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ಅಭಿವೃದ್ಧಿ ದರವನ್ನು ಲೆಕ್ಕ ಹಾಕಲು ಬಳಸುವ ವಿಧಾನ ಮತ್ತು ಅಂಕಿ ಅಂಶಗಳ ವಿಶ್ವಾಸಾರ್ಹತೆ ಕೂಡಾ ಕುಸಿಯಿತು. ಮೋದಿನೋಮಿಕ್ಸ್ ಏನಿದ್ದರೂ ಭವಿಷ್ಯದತ್ತ ದೃಷ್ಟಿ ನೆಟ್ಟಿರುವ ಆರ್ಥಿಕ ತಂತ್ರ, ದೀರ್ಘಾವಧಿಯಲ್ಲಿ ಎಲ್ಲವೂ ಸರಿಯಾಗಲಿದೆ ಎನ್ನುವುದು ಆಸ್ಥಾನ ಅರ್ಥಶಾಸ್ತ್ರಜ್ಞರ ಅಭಿಮತ. ಮುಂದಿನ ವರ್ಷಕ್ಕೆ ಅಭಿವೃದ್ಧಿಯ ದರ ಎಗ್ಗಾಬಿಗ್ಗಿ ಏರಲಿದೆ ಎನ್ನುವುದು ಈಗ ಅಧಿಕೃತ ಲೆಕ್ಕಾಚಾರ. ಈ ಕುರಿತಂತೆ ಇದೇ ಸರಕಾರದ ಆರ್ಥಿಕ ಸಲಹೆಗಾರಾಗಿದ್ದ ಅರವಿಂದ ಬಾಲಸುಬ್ರಹ್ಮಣ್ಯಂ ಒಂದು ಪ್ರಶ್ನೆ ಎತ್ತಿದ್ದಾರೆ. ಆರ್ಥಿಕತೆ ಪ್ರತಿಯೊಂದು ಕ್ಷೇತ್ರದಲ್ಲೂ ಹಿನ್ನೆಡೆ ಅನುಭವಿಸುತ್ತಿರುವಾಗ ಅಭಿವೃದ್ಧಿ ದರ ಮಾತ್ರ ಮೇಲೇರುತ್ತದೆ ಅಂತ ಹೇಗಾದರೂ ನಂಬುವುದು ಎನ್ನುವುದು ಅವರ ಪ್ರಶ್ನೆ. ಒಟ್ಟು ಮೂರು ರೀತಿಯ ವಿರೋಧಾಭಾಸಗಳು 'ಮೋದಿನೋಮಿಕ್ಸ್' ನ ಪ್ರಮುಖ ಲಕ್ಷಣಗಳಾಗಿ ಗುರುತಿಸಬಹುದು. ಒಂದು, ಎಲ್ಲವೂ ಕುಸಿಯುತ್ತಿರುವಾಗ ಅಭಿವೃದ್ಧಿ ದರ ಮಾತ್ರ ಹೆಚ್ಚಾಗಲಿದೆ ಎನ್ನುವ ಅಧಿಕೃತ ಲೆಕ್ಕಾಚಾರ. ಎರಡು, ಎಲ್ಲವೂ ಕುಸಿಯುತ್ತಿರುವಾಗ

(೨೧ನೇ ಪುಟಕ್ಕೆ

ಕೃಷಿಯ ಬಿಕ್ಕಟ್ಟಿನ ನಾಲ್ಕು ಆಯಾಮಗಳು

-ಎಂ.ಎಸ್. ಶ್ರೀರಾಮ್

ನಮ್ಮ ದೇಶದ ರೈತನ ಬಗ್ಗೆ, ಆ ಸಮುದಾಯದ ಸಂಕಷ್ಟಗಳ ಬಗ್ಗೆ ಈಗ ಬರೆಯುವುದು, ಮಾತಾಡುವುದು ಕ್ಲೀಷೆ ಎನಿಸಿಬಿಟ್ಟಿದೆ. ದೇಶದಲ್ಲಿ ಜನಕ್ಕೆ ಹೆಚ್ಚಿನ ಉದ್ಯೋಗ ಒದಗಿಸಿರುವುದು, ಕೈಗಾರಿಕೀಕರಣದ ಹಲವು ಹಂತಗಳ ನಂತರವೂ ಕೃಷಿಯೇ. ಈ ಕೃಷಿ ಕ್ಷೇತ್ರದ ಸುಧಾರಣೆಗೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರೂ, ದೇಶದ ಆರ್ಥಿಕತೆಗೆ ಅದು ತನ್ನ ಕೊಡುಗೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಇಲ್ಲ. ಅವನ ಸ್ಥಿತಿಯೂ ಸಮಾಧಾನಕರವಾಗಿ ಸುಧಾರಿಸಿಲ್ಲ. ಕೃಷಿ ಕ್ಷೇತ್ರದ ಉತ್ಪಾದಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಿ ಅದನ್ನೊಂದು ಸ್ಪರ್ಧಾತ್ಮಕ ಲಾಭೋದ್ಯಮವನ್ನಾಗಿ ಮಾಡತ್ತದೆಂದು ಹೇಳಲಾದ ನಾಲ್ಕು ಕಾಯ್ದೆಗಳನ್ನು ಸರ್ಕಾರ ಜಾರಿಗೆ ತಂದುದರ ವಿರುದ್ಧ ನಡೆದ ಐತಿಹಾಸಿಕ ಚಳುವಳಿಯ ಕಾರಣದಿಂದಾಗಿ ಅದು ಅವನ್ನು ಹಿಂತೆಗೆದುಕೊಳ್ಳಬೇಕಾದ ಸಂದರ್ಭವನ್ನು ನಾವು ನೋಡಿದ್ದೇವೆ. ಈ ಸಂದರ್ಭ ನಮ್ಮ ಕೃಷಿ ಬಿಕ್ಕಟ್ಟನ್ನು ಇನ್ನಷ್ಟು ಆಳವಾಗಿ, ಇನ್ನಷ್ಟು ಆಯಾಮಗಳನ್ನು ಪರಿಗಣಿಸಿ ಅರ್ಥ ಮಾಡಿಕೊಳ್ಳುವ ಒಂದು ಅವಕಾಶ ಮತ್ತು ಸಾಧ್ಯತೆಯನ್ನು ಸೃಷ್ಟಿಸಿದೆ. ಅಂತಹ ಒಂದು ಪ್ರಯತ್ನ ಇದು-ಸಂ.



ಕೃಷಿಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ನಾಲ್ಕು ಆಯಾಮಗಳನ್ನು ಪರಿಶೀಲಿಸಬೇಕು. ಮೊದಲನೆಯದು ಉತ್ಪಾದಕ, ಉತ್ಪಾದಕತೆ, ರೈತರ ಆದಾಯಕ್ಕೆ ಸಂಬಂಧಿಸಿದ್ದು. ಎರಡನೇ ಆಯಾಮ ಗ್ರಾಹಕ, ಬೆಲೆಗಳು, ಬೆಲೆಯೇರಿಕೆ, ಆಹಾರ ಭದ್ರತೆಗೆ ಸಂಬಂಧಿಸಿದ್ದು. ಅತ್ಯಂತ ಜಟಿಲವಾದ, ವಿರೋಧಾಭಾಸದಿಂದ ಕೂಡಿರುವ ಮೂರನೇ ಆಯಾಮ ಸರ್ಕಾರದ ನೀತಿಯದ್ದು. ಸರ್ಕಾರ ಮಾರುಕಟ್ಟೆ ಪರವಾಗಿರಬೇಕೆ, ರೈತಪರವಾಗಿರಬೇಕೆ, ಗ್ರಾಹಕ ಪರವಾಗಿರಬೇಕೆ ಎನ್ನುವ ತೀವ್ರ ದ್ವಂದ್ವದಲ್ಲಿ ಸಿಲುಕಿದೆ. ನಾಲ್ಕನೆಯ, ಅತ್ಯಂತ ಮಹತ್ವದ ಆಯಾಮ ಪರಿಸರ, ಸುಸ್ಥಿರತೆಯದ್ದು.

ಹಸಿರು ಕ್ರಾಂತಿಯಲ್ಲಿ ಮೂರು ಆಯಾಮಗಳ ಯಶಸ್ಸಿದೆ. ನಾಲ್ಕನೇ ಆಯಾಮದ ಚರ್ಚೆ ಈಚೆಗಷ್ಟೇ ಪ್ರಾರಂಭಿಸಿ, ಅದರ ಪದರಗಳನ್ನು ಬಿಡಿಸಲು ಹೆಣಗುತ್ತಿದ್ದೇವೆ. ಇದರ ವಿರೋಧಾಭಾಸಗಳಿಂದಾಗಿ ಸಮಸ್ಯೆಯ ಪರಿಹಾರದ ನೀತಿ ಪರಿಪೂರ್ಣವಾಗಿರುವುದಿಲ್ಲ, ಸಮಾಧಾನದತ್ತ ಸಾಗುವುದಿಲ್ಲ.

ಮೊದಲನೇ ಆಯಾಮ: ಉತ್ಪಾದನೆ, ಉತ್ಪಾದಕತೆ, ರೈತರ ಆದಾಯ

ಹಸಿರು ಕ್ರಾಂತಿಯ ನಂತರ ಉತ್ಪಾದಕತೆಯಲ್ಲಿ ಕ್ರಾಂತಿಕಾರಿ ಹೆಚ್ಚಳವಾಗಿಲ್ಲ. ತಳಿ ಮಾರ್ಪಡಿಯಿಂದ(Genetic Modification) ಉತ್ಪಾದಕತೆಯಲ್ಲಿ ವೃದ್ಧಿ ಆಗಬಹುದಿತ್ತಾದರೂ, ಆ ತಂತ್ರಜ್ಞಾನವೇ ವಿವಾದಕ್ಕೊಳಗಾಗಿರುವುದರಿಂದ ಅದು ವ್ಯಾಪಕವಾಗಿ ಹಬ್ಬಿಲ್ಲ. ಜಗತ್ತಿನ ಉತ್ಪಾದಕತೆಯ ಮಾಪನದಲ್ಲಿ ನಮ್ಮ ಉತ್ಪಾದಕತೆ ಕಡಿಮೆ ಮಟ್ಟದಲ್ಲಿದೆ. ಆದರೆ ಉತ್ಪಾದಕತೆ ಹೆಚ್ಚಿದರೆ ಆದಾಯ ಹೆಚ್ಚುತ್ತದೆಯೇ?

ಉತ್ಪಾದಕತೆಯ ವಿಚಾರಗಳು:

ತಂತ್ರಜ್ಞಾನ ಉತ್ಪಾದನೆಯ ಖರ್ಚುಗಳನ್ನು ಹೆಚ್ಚಿಸುತ್ತವೆ. ಬೀಜ, ರಸಗೊಬ್ಬರ, ನೀರು, ವಿದ್ಯುತ್ತು-ಡೀಸಲ್, ಕೀಟನಾಶಕ... ಎಲ್ಲ ದರಗಳೂ ಹೆಚ್ಚಿವೆ. ಉತ್ಪಾದಕತೆಯಿಂದಾದ ವೃದ್ಧಿಯನ್ನು, ಖರ್ಚುಗಳು ಕ್ಯಾನ್ಸಲ್ ಮಾಡುತ್ತವೆ. ರೈತರ ತಲಾ ಆದಾಯ ಕುಗ್ಗುತ್ತಿರುವುದಕ್ಕೆ ಕುಟುಂಬದ ಗಾತ್ರ, ಪ್ರತಿ ಕುಟುಂಬದ ಕೈಲಿರುವ ಸರಾಸರಿ ಭೂಹಿಡುವಳಿಯ ವಿಸ್ತೀರ್ಣಗಳೆಲ್ಲವೂ ಕಾರಣವಾಗಿವೆ.

ಕಾಲಾಂತರದಲ್ಲಿ ದೊಡ್ಡ ಭೂವಿಸ್ತೀರ್ಣದ ಹಿಡುವಳಿಯಿಂದ ಸಣ್ಣ ಮತ್ತು ಅತಿಸಣ್ಣ ಹಿಡುವಳಿಯತ್ತ ಕೃಷಿ ವಾಲುತ್ತಿದೆ. ೧೯೯೫-೯೬ರಲ್ಲಿ ಕೃಷಿ ಭೂಮಿಯ ವಿಸ್ತೀರ್ಣದಲ್ಲಿ ಶೇಕಡಾ ೪೦ರಷ್ಟು, ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಬಳಿಯಿತ್ತು. ೨೦೧೫-೧೬ರ ವೇಳೆಗೆ ಆ ವಿಸ್ತೀರ್ಣ ಕೇವಲ ಶೇಕಡಾ ೧೮ಕ್ಕೆ ಇಳಿದಿದ್ದು, ಅದೇ ಸಮಯದಲ್ಲಿ ಅತಿ ಸಣ್ಣ ಮತ್ತು ಸಣ್ಣ ಹಿಡವಳಿಯ ವಿಸ್ತೀರ್ಣ ಶೇಕಡಾ ೩೬ರಿಂದ ಶೇಕಡಾ ೬೩ಕ್ಕೆ ಏರಿದೆ. ನಮ್ಮ ಕೃಷಿಭೂಮಿ ಛಿದ್ರಗೊಂಡಿದೆ. ತಲಾ ಅತಿ ಸಣ್ಣ ವಿಸ್ತೀರ್ಣದ ಜಾಗದಲ್ಲಿ ಶೇಕಡಾ ೯೩ರಷ್ಟು ರೈತರು ಕೃಷಿಯನ್ನು ಕೈಗೊಳ್ಳುತ್ತಿದ್ದಾರೆ.

ಉತ್ಪಾದಕತೆಯನ್ನು ಹೆಚ್ಚಿಸಲು, ಆಧುನಿಕತೆ/ಯಂತ್ರೀಕರಣದತ್ತ ವಾಲಿದರೆ ವಿಸ್ತೀರ್ಣದ ಸವಾಲನ್ನು ಎದುರಿಸಬೇಕು. ಕೃಷಿಯಿಂದ ಆಗಿರುವ ಬಡತನ ಮತ್ತು ದಾರಿದ್ರ್ಯಕ್ಕೆ ಸಮಾಧಾನವನ್ನು ಉತ್ಪಾದಕತೆಯಲ್ಲಿ ಹುಡುಕಬೇಕೇ? ಕೃಷಿ ಭೂಮಿ ಇನ್ನು ಛಿದ್ರವಾಗದಂತಹ ಮಟ್ಟ ತಲುಪಿ, ಕುಟುಂಬಗಳೇ ಛಿದ್ರವಾಗುತ್ತಿವೆ. ಕುಟುಂಬದ ಕೆಲ ಸದಸ್ಯರು ಗುಳೆ ಹೋಗುತ್ತಾರೆ. ಒಂದು ಕುಟುಂಬದ ಸಂತಾನದಲ್ಲಿ ಒಬ್ಬರು ಕೃಷಿ ಕೈಗೊಂಡರೆ, ಮಿಕ್ಕವರು ನಗರಕ್ಕೆ ಹೋಗಿ, ಕೂಲಿ, ಕ್ಯಾಬ್ ಡ್ರೈವರು ಹೀಗೆ ನಗರೀಕರಣದ ನೌಕರಿ ಮಾಡಿ, ಹಣ ಪಾವತಿ ಮಾಡುತ್ತಿದ್ದಾರೆ. ಬಿತ್ತನೆ ಮತ್ತು ಕಟಾವಿನ ಸಮಯಕ್ಕೆ ಈ ಮಕ್ಕಳು ಮನೆಗೆ ವಾಪಸ್ಸಾಗಿ, ಕುಟುಂಬಕ್ಕೆ ಸಹಾಯಹಸ್ತವನ್ನು ಕೊಟ್ಟು ತಮ್ಮ ಪಾಲಿನ ಧಾನ್ಯವನ್ನು ನಗರಕ್ಕೆ ಒಯ್ಯುತ್ತಾರೆ.

ಇತ್ತೀಚೆಗೆ ಜಾರಿ ಮಾಡಿ ವಾಪಸ್ಸು ಪಡೆದ ಕೃಷಿ ಕಾನೂನುಗಳಲ್ಲಿ ಮೂರನೆಯದು ಕೃಷಿ ಜಮೀನಿನ ಕ್ರೋಢೀಕರಣದಿಂದ ಆಗುವ ಯಂತ್ರೀಕರಣ, ಅದರಿಂದಾಗುವ ದಕ್ಷತೆ, ಹೆಚ್ಚಿನ ಇಳುವರಿಯತ್ತ ಕೃಷಿಯನ್ನು ಒಯ್ಯುವ ಒಲವು ತೋರಿತ್ತು. ಕಾನೂನನ್ನು ಸಮರ್ಥಿಸುವವರು ಈ ಗುಣವನ್ನು ತೋರಿಸಿದರು. ಕೃಷಿಯ ಉತ್ಪಾದಕತೆ ಬೆಳೆಯುವುದಕ್ಕೆ, ನಷ್ಟ ಅನುಭವಿಸುತ್ತಿರುವ ರೈತ ಕುಟುಂಬಗಳಿಗೆ, ಹೂಡಿಕೆ- ಶ್ರಮವಿಲ್ಲದೇ ಬಾಡಿಗೆ ಪಡೆದು, ಬಿಕ್ಕಟ್ಟನ್ನೆದುರಿಸದೇ ಮುಂದುವರೆವ ಸಾಧ್ಯತೆಯನ್ನು ಇದು ತೋರಿಸುತ್ತದೆನ್ನುವುದು ವಾದ. ಆದರಿದು ಭೂಸುಧಾರಣೆಯಲ್ಲಿ ಉಳುವವರಿಗೆ ಭೂಮಿ ಕೊಟ್ಟದ್ದನ್ನು ನಕಾರಗೊಳಿಸುವ ಉಪಕ್ರಮವಾಗಿದೆ. ತಮ್ಮ ಭೂಮಿಯನ್ನು ಕಳೆದುಕೊಂಡು ಕೂಲಿಗಳಾಗಬೇಕಾದ, ಅಥವಾ ಆ ಕೆಲಸವೂ ಸಿಗದ ಸಾಧ್ಯತೆ ಕಂಡ ರೈತರು ಇದನ್ನು ಸಹಜವಾಗಿಯೇ ವಿರೋಧಿಸಿದ್ದಾರೆ. ಇದು ನಮ್ಮ ಕೃಷಿಯ ರಚನಾತ್ಮಕ ಇಮಾರತಿಗೆ ಧಕ್ಕೆ ಮಾಡುತ್ತದೆ.


ಕೃಷಿಯ ಸಮಸ್ಯೆಗೆ ಕೃಷಿಯ ಹೊರಗೆ ಪರಿಹಾರವಿದೆಯೇ? ಭೂಸುಧಾರಣೆಯನ್ನು ಅಲ್ಲಗಳೆಯುವುದೇ ದಾರಿಯಾ? ಕೃಷಿಯ ಆರ್ಥಿಕತೆ ಬೆಳೆಯಲು ಯಂತ್ರೀಕರಣ ದಕ್ಷತೆಯ ವೃದ್ಧಿ, ಕೃಷಿ ಕುಟುಂಬಗಳನ್ನು ಇತರೆ ಆದಾಯದತ್ತ ಒಯ್ಯಬೇಕೆನ್ನುವ ವಾದವಿದೆ. ನವ-ಉದಾರೀಕರಣ, ಮಾರುಕಟ್ಟೆ ಪರವಾದ ಈ ವಾದದಲ್ಲಿ ಉತ್ಪಾದಕತೆಯ ದಕ್ಷತೆಯಲ್ಲೇ ಕೃಷಿಯ ಉದ್ಧಾರವಿದೆಯೆನ್ನುವ ಆಶಯವಿದೆ. ಆದರೆ ವೃದ್ಧಿಯಾದ ಉತ್ಪಾದನೆಗೆ ಅಧಿಕ ಬೆಲೆ ಬಂದರೆ ಮಾತ್ರ ಆದಾಯ ಹೆಚ್ಚುತ್ತದೆ. ಅಧಿಕಬೆಲೆ ಒಂದು ಮರೀಚಿಕೆಯಾಗಿ ಉಳಿದರೆ?

ಮಾರುಕಟ್ಟೆಯ ವಿಚಾರಗಳು

ರೈತರ ಆದಾಯ ಹೆಚ್ಚಾಗಲು ದಕ್ಷತೆ ಮತ್ತು ಉತ್ಪಾದಕತೆಯೇ ಬೀಜಮಂತ್ರವಲ್ಲ. ವೃದ್ಧಿಯಾದ ಇಳುವರಿಗೆ ಎಷ್ಟು ಬೆಲೆ ಸಿಗುತ್ತದೆನ್ನುವುದೂ ಮುಖ್ಯ. ಮಾರುಕಟ್ಟೆಗಳನ್ನು ನಿರಾಕರಿಸಿ ಕೃಷಿಯನ್ನು ಕೈಗೊಳ್ಳುವದು ಅಸಾಧ್ಯವಾದ ಮಾತು. ಹೀಗಾಗಿಯೇ ಮಾರುಕಟ್ಟೆಗಳು ಕೃಷಿಗೆ ಹೇಗೆ ಉಪಯುಕ್ತವಾಗಬಹುದು ಎನ್ನುವುದನ್ನು ನಾವು ಯೋಚಿಸಬೇಕು. ಕೃಷಿಯ ವಿಷಯದಲ್ಲಿ ಮಾರುಕಟ್ಟೆ ಅಂದಕೂಡಲೇ ಮಾತು ಕ್ರೋಢೀಕರಣ ಮತ್ತು ಕೇಂದ್ರೀಕರಣದತ್ತ ಸಾಗುತ್ತದೆ. ಈ ಎರಡಕ್ಕೂ ಹೂಡಿಕೆಯ ಅವಶ್ಯಕತೆಯಿದೆ. ಹೂಡಿಕೆಯ ಮಾತು ಬಂದ ಕೂಡಲೇ ರೈತ ಸೋಲುತ್ತಾನೆ. ಇದಕ್ಕೆ ಸಮತಾವಾದದ ಸೂತ್ರದಲ್ಲಿ ಪರಿಹಾರ ಕಂಡುಕೊಂಡು ಮಾರುಕಟ್ಟೆಗಳನ್ನು ನಿರ್ವಹಿಸುತ್ತಲೇ ರೈತಪರವಾಗಿರಬೇಕೆಂದರೆ, ಸಹಕಾರ ವ್ಯವಸ್ಥೆಯೆ ಸಮರ್ಪಕವಾದ ಮಾರ್ಗ. ಅದು ಕಠಿಣವಾದ ಮಾರ್ಗ.

ಆದರೆ ಕ್ರೋಢೀಕರಣ ಬೇಕೇ ಎನ್ನುವ ಮೂಲಭೂತ ಪ್ರಶ್ನೆಯೂ ಇದೆ. ಕ್ರೋಢೀಕರಣದಿಂದ ಉತ್ಪಾದಕತೆ ಹೆಚ್ಚಿ ಅವಶ್ಯಕತೆಗಿಂತ ಹೆಚ್ಚಿನ ಆಹಾರವನ್ನು ಬೆಳೆದು ದಾಸ್ತಾನಿನಲ್ಲಿ ಇಡಬಹುದು. ಹಿಂದೆ ಪಾಶ್ಚಾತ್ಯ ದೇಶಗಳಲ್ಲಿ ಹೀಗಾದಾಗ, ದಾಸ್ತಾನು ಮಾಡಲೂ ಸಾಧ್ಯವಾಗದ ಪರಿಸ್ಥಿತಿಯಿತ್ತು. ಆಗ ಇತರೆ ದೇಶಗಳಿಗೆ ದೇಣಿಗೆಯಾಗಿ ಆಹಾರವನ್ನು ಆ ದೇಶಗಳು ನೀಡಿದ್ದುವು. ದಕ್ಷತೆ-ಉತ್ಪಾದಕತೆಯ ಮರೀಚಿಕೆಯ ಬೆನ್ನೇರಿ, ಕಡೆಗೆ ಸಾಧಿಸಿದ್ದೇನು?

ರೈತರ ಆದಾಯವನ್ನು ಹೆಚ್ಚಿಸಲು ಸ್ಥಳೀಯವಾಗಿಯೇ ಕೃಷಿಯೇತರ ಚಟುವಟಿಕೆಗಳನ್ನು ಹೆಚ್ಚಿಸಬಹುದೇ? ಕೇಂದ್ರೀಕೃತ ಯೋಜನೆಗಳು ತಮ್ಮ ತೊಡಕುಗಳೊಂದಿಗೆ ಬರುತ್ತವೆ. ಕೆಲ ಪ್ರಾಂತದಲ್ಲಿ ಕೈಗೊಳ್ಳಲಾಗಿರುವ ಲಕಪತಿ ಕಿಸಾನ್ ಯೋಜನೆ, ಗ್ರಾಮದಲ್ಲಿ ಪ್ರತಿ ರೈತ ಕುಟುಂಬಕ್ಕೂ ವರ್ಷಕ್ಕೆ ಕನಿಷ್ಠ ಒಂದು ಲಕ್ಷ



ರೂಪಾಯಿಯ ಆದಾಯ ಬರುವಂತೆ ನೋಡಿಕೊಳ್ಳುವ ಯೋಜನೆಯನ್ನು ಹಿಡಿದು ಹೊರಟಿದೆ. ಸಾಧಿಸಬೇಕಾದ ಗುರಿ ಸ್ಪಷ್ಟವಿದೆ. ಕೌಟುಂಬಿಕ ಆದಾಯ ಗುರಿಯಾದಾಗ, ಕುಟುಂಬ ಸಂಪನ್ಮೂಲಗಳನ್ನು ಬಳಸಿ ಗುರಿಯನ್ನು ಸಾಧಿಸುವ ಯೋಜನೆ ತಯಾರಾಗುತ್ತದೆ. ಇದು ಕುಟುಂಬದ ಮಟ್ಟದ ವಿಕೇಂದ್ರೀಕೃತ ಯೋಜನೆ. ಇರುವ ಭೂಮಿ, ಜನ, ಹೈನು, ನೀರು, ವಿದ್ಯುತ್ತು, ಮಾರುಕಟ್ಟೆ ಎಲ್ಲವನ್ನೂ ಪರಿಗಣಿಸಿ, ಕುಟುಂಬಕ್ಕೆ ಸಮರ್ಪಕವಾದ ಚಟುವಟಿಕೆಗಳಿಂದ ಆದಾಯದ ಗುರಿಯನ್ನು ತಲುಪುತ್ತಿದೆ. ಇದು ವಿಕೇಂದ್ರೀಕೃತವಾದ ಉಪಕ್ರಮ. ಇದು ಮಾರುಕಟ್ಟೆಯನ್ನು ಅವಶ್ಯಕವೆಂದು ಪರಿಗಣಿಸುತ್ತದೆಯೇ ಹೊರತು ಕೇಂದ್ರೀಕೃತ ಕ್ರೋಢೀಕರಣವೇ ಸರಿ ಎನ್ನುವ ವಾದವನ್ನು ಹಿಡಿಯುವುದಿಲ್ಲ.

ಎರಡನೇ ಆಯಾಮ: ಗ್ರಾಹಕ, ಬೆಲೆಗಳು, ಬೆಲೆಯೇರಿಕೆ–ಹಣದುಬ್ಬರ, ಆಹಾರ ಭದ್ರತೆ

ಕೃಷಿಯ ಬಿಕ್ಕಟ್ಟಿಗೆ ಮತ್ತೊಂದು ಕಾರಣ ರಾಷ್ಟ್ರೀಯ ನೀತಿ, ದಾಸ್ತಾನು, ಆಹಾರ ಭದ್ರತೆ ಮತ್ತು ಹಣದುಬ್ಬರದಲ್ಲಿ ಅಡಕವಾಗಿದೆ. ನಮ್ಮ ಉತ್ಪಾದಕರು ಬೆಳೆಯುವುದು ನಮಗೆ ಅತ್ಯವಶ್ಯಕವಾದ ಆಹಾರ ಪದಾರ್ಥಗಳನ್ನು. ಇವನ್ನು ಸೇವಿಸದೇ ಹಸಿವಿನಿಂದ ಇರುವುದು ಅಸಾಧ್ಯವಾದ್ದರಿಂದ ಮುಫತ್ತು ಆಹಾರ ಧಾನ್ಯ, ಪಡಿತರ ವ್ಯವಸ್ಥೆಯಲ್ಲಿ ಒದಗಿಸುವ ಆಹಾರ ಪದಾರ್ಥಗಳ ಮೂಲಕ ಕೌಟಂಬಿಕ ಆಹಾರ ಭದ್ರತೆಯನ್ನು ಸರ್ಕಾರ ಒದಗಿಸುತ್ತದೆ. ಈ ನಿಟ್ಟಿನಲ್ಲಿ, (ಅವಶ್ಯಕ) ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಕೊಟ್ಟು ಸರ್ಕಾರ ಧಾನ್ಯವನ್ನು ಸಂಗ್ರಹಿಸಿದರೆ ಸರ್ಕಾರದ ಖರ್ಚು ಹೆಚ್ಚಾಗುತ್ತದೆ. ಆಹಾರದ ಬೆಲೆ ಹೆಚ್ಚಾದಷ್ಟೂ ಹಣದುಬ್ಬರವೂ ಹೆಚ್ಚುತ್ತದೆ. ಹೀಗಾಗಿ ಕೃಷಿ ಉತ್ಪನ್ನಗಳ ದರಗಳನ್ನು ಹದ್ದುಬಸ್ತಿನಲ್ಲಿಡಲು ಕಾಪಿಟ್ಟ ದಾಸ್ತಾನನ್ನು ಮಾರುಕಟ್ಟೆಗಿಳಿಸಿ, ಆಮದು ಸರಳಗೊಳಿಸಿ ಸರಬರಾಜು–ಬೇಡಿಕೆಯ ಸಮತೋಲನವನ್ನು ಕಾಪಾಡುವ ಯತ್ನವಾಗುತ್ತದೆ. ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಹೆಚ್ಚಾದರೂ ಅದರ ಲಾಭ ರೈತರಿಗೆ ತಲುಪುವ ಮೊದಲೇ ಸರ್ಕಾರಗಳು ದಖಲಂದಾಜು ಮಾಡುತ್ತವೆ.

ಆಹಾರ ಭದ್ರತೆಗಾಗಿ ರೈತರಿಂದ ಸಂಗ್ರಹಿಸುವ ಧಾನ್ಯ ಕಡಿಮೆ ಬೆಲೆಗೆ, ಅವಶ್ಯವಿದ್ದಷ್ಟು ಮಾತ್ರ ಕೊಳ್ಳುವುದರಲ್ಲಿ ಸರ್ಕಾರದ ಹಿತವಿದೆ. ಆರ್ಥಿಕ ಖೋತಾವನ್ನು ಹದ್ದುಬಸ್ತಿನಲ್ಲಿಡುವುದೂ ಒಂದು ಉದ್ದೇಶವೇ. ಹೀಗಾಗಿ ಉತ್ಪಾದಕತೆಯಲ್ಲಿ ರೈತ ಗೆದ್ದರೂ ಬೆಲೆಗಳಲ್ಲಿ ರೈತರಿಗೆ ನಿರಾಸೆಯಿದೆ.

ಕೇಂದ್ರ ಸರ್ಕಾರ ಜಾರಿ ಮಾಡಿ ವಾಪಸ್ಸು ಪಡೆದ ಕೃಷಿ ಕಾನೂನುಗಳನ್ನು ಪರೀಕ್ಷಿಸಿದಾಗ –ರೈತಪರ ಎನ್ನಿಸಬಹುದಾದ ಈ ಕಾನೂನು ಜನವಿರೋಧಿಯಾಗಿ ಕಾಣುತ್ತದೆ. ಮಾರುಕಟ್ಟೆ ಸುಧಾರಣಾ ಕಾನೂನು ರೈತೋತ್ಪನ್ನಗಳನ್ನು ಎಲ್ಲಿಯಾದರೂ ಮಾರುವ, ವ್ಯಾಪಾರಿಗಳಿಗೆ ಉತ್ಪನ್ನಗಳನ್ನು ಎಲ್ಲಿಯಾದರೂ ಕೊಳ್ಳುವ, ಮಾಲನ್ನು ಎಲ್ಲಿಗಾದರೂ ಸಾಗಿಸುವ ಮುಕ್ತ ವಾತಾವರಣವನ್ನು ಒದಗಿಸುವ ಉದ್ದೇಶವನ್ನು ಹೊಂದಿತ್ತು. ಮುಕ್ತ ಮಾರುಕಟ್ಟೆ ದಕ್ಷತೆಯ ಪರವಾದ್ದರಿಂದ ಇದು ಉತ್ತಮ ವ್ಯವಸ್ಥೆಯೆನ್ನುತ್ತಾರೆ. ಎರಡನೇ ಕಾನೂನು ಮಾಲನ್ನು ಎಲ್ಲಾದರೂ, ಎಷ್ಟಾದರೂ ದಾಸ್ತಾನು ಮಾಡುವ ಹಕ್ಕನ್ನು ಕೊಡುತ್ತದೆ. ಇದರಿಂದಲೂ ಮುಕ್ತ ಮಾರುಕಟ್ಟೆಯ ದಕ್ಷತೆಯತ್ತ ನಮ್ಮ ಕೃಷಿ ಹೊರಟಿದೆ ಎಂದು ವಾದವಿದೆ.

ಈಗಾಗಲೇ ರೈತರು ಉತ್ಪಾದಕತೆಯ ಏರುಪೇರಿಗೆ ತಮ್ಮ ನಿಯಂತ್ರಣದಲ್ಲಿ ಇಲ್ಲದ ತಾಪಮಾನ, ಮಳೆ, ಕೀಟೋಪದ್ರವಗಳಿಂದ ತ್ರಸ್ತರಾಗಿದ್ದಾರೆ. ಕನಿಷ್ಠ ಬೆಂಬಲ ದರವಿಲ್ಲದೇ ಮಾರುಕಟ್ಟೆಯ ಪಾಲಾಗುವ ರೈತರಿಗೆ ಸರಿಯಾದ ಬೆಲೆಯ ಖಾತ್ರಿಯಿಲ್ಲ. ವ್ಯಾಪಾರಿಗಳಿಗೆ ಇರಬಹುದಾದ ಆರ್ಥಿಕ ಮತ್ತಿತರ ಸವಲತ್ತುಗಳು ರೈತರಿಗಿಲ್ಲ. ಇದು ಎರಡು ಸಮಾನ ಶಕ್ತಿಯ ಪ್ರತಿರೂಪದ ನಡುವಿನ ವ್ಯವಹಾರವಲ್ಲ. ಇಲ್ಲಿ ರೈತರೇ ಸೋಲುತ್ತಾರೆ. ಅನಿಯಮಿತ ದಾಸ್ತಾನಿನ ಸವಲತ್ತು ಮಾರುಕಟ್ಟೆಯ ದರಗಳನ್ನು ಪ್ರಭಾವಿಸುತ್ತವೆ. ಅಂಚಿನಲ್ಲಿರುವ ರೈತರಿಗೆ ದಾಸ್ತಾನಿನ ವ್ಯವಸ್ಥೆ ಇಲ್ಲ. ಸಾಮಾನ್ಯವಾಗಿ ಮಾರುಕಟ್ಟೆ ದಕ್ಷತೆ ತೋರಿಸುತ್ತದೆಂದು ನಂಬಬಹುದಾದರೂ, ಇಲ್ಲಿ ಮಾರುಕಟ್ಟೆಯನ್ನು ಅನುಮಾನದಿಂದ ನೋಡಬೇಕು.

ಮಾರುಕಟ್ಟೆಯ ಸಮಸ್ಯೆ ಬೆಲೆ, ಹಕ್ಕುಗಳು, ಮತ್ತು ಹಣಕಾಸಿಗೆ ಸಂಬಂಧಿಸಿದ ಬಹುಪದರಗಳ ಸಮಸ್ಯೆ. ಇಲ್ಲಿ ರೈತರ ಹಿತಾಸಕ್ತಿಯ ವಿರುದ್ಧವಾಗಿ ಗ್ರಾಹಕರ ಹಿತಾಸಕ್ತಿಯಿದೆ. ಸರ್ಕಾರ ಇಲ್ಲಿ ಕೇವಲ ಕಾನೂನು–ಕಾಯಿದೆ–ನಿಯಮ–ನಿಯಮಾವಳಿಗಳನ್ನು ಪಾಲಿಸುವುದಲ್ಲದೇ ಆಹಾರ ಭದ್ರತೆಯ ದೃಷ್ಟಿಯಿಂದ ಮಾರುಕಟ್ಟೆಯಲ್ಲಿ ಸಕ್ರಿಯ ಪಾಲನ್ನು ನಿರ್ವಹಿಸಬೇಕು.

ಮೂರನೇ ಆಯಾಮ: ಸರ್ಕಾರದ ನೀತಿನಿರೂಪಣೆ ಮತ್ತು ಪಾತ್ರ

ಈ ಜಟಿಲ ಸಮಸ್ಯೆಯನ್ನು ಸಾರ್ವಜನಿಕ ನೀತಿಯಲ್ಲಿ 'ದುಷ್ಟ ಸಮಸ್ಯೆ' ಎನ್ನಲಾಗುತ್ತದೆ. ದುಷ್ಟ ಸಮಸ್ಯೆಯ ಲಕ್ಷಣಗಳಲ್ಲಿ ಮುಖ್ಯವಾದದ್ದು –ಆ ಸಮಸ್ಯೆಯ ಪರಿಹಾರವೇ ಮತ್ತೊಂದು ಸಮಸ್ಯೆಯಾಗುವುದು.

ಭಾರತದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ದೇಣಿಗೆ ಶೇಕಡಾ ೧೭ರಷ್ಟಿದೆ. ಕೃಷಿ ಕ್ಷೇತ್ರದಲ್ಲಿರುವ ಶ್ರಮಿಕ ವರ್ಗ ಶೇಕಡಾ ೫೨ರಷ್ಟು, ಈ ಬಹುಸಂಖ್ಯೆಯ ಜನರ ಸರಾಸರಿ ಆದಾಯ ಅರ್ಥವ್ಯವಸ್ಥೆಯಲ್ಲಿರುವ ಮಿಕ್ಕವರಿಗಿಂತ ಕಡಿಮೆಯಿದೆ. ಅರ್ಥವ್ಯವಸ್ಥೆಯ ಭಿನ್ನ ಅಂಗಗಳಲ್ಲಿ ತೊಡಗಿರುವ ಜನ, ಮತ್ತು ಅದರಿಂದ ಬರುವ ದೇಣಿಗೆಯ ಸಮತೋಲನ ಕಾಪಾಡಿಕೊಂಡರೆ ಅಸಮಾನತೆಯ ಒಂದು ಅಂಶವನ್ನು ನಿಭಾಯಿಸಬಹುದು. ಈ ಅಂಶಕ್ಕೆ ಸರ್ಕಾರ ಏನು ಮಾಡಬಹುದು? ಪರಿಹಾರದಲ್ಲೇ ಮತ್ತಷ್ಟು ಪ್ರಶ್ನೆಗಳಿವೆ.

ಅರ್ಥವ್ಯವಸ್ಥೆಯಲ್ಲಿ ಕೃಷಿಯ ಉತ್ಪಾದನೆ ಹೆಚ್ಚಿಸಲು ಯಾವ ನೀತಿ ಸರಿ? ಗಂಗಾನದಿ ಹರಿವ ದೇಶದ ಪೂರ್ವಭಾಗದಲ್ಲಿ (ಉತ್ತರ ಪ್ರದೇಶ, ಬಿಹಾರ) ನವೀನ ಹಸಿರು ಕ್ರಾಂತಿಯಾಗಬೇಕೆಂದು ಸರ್ಕಾರ ಹೇಳಿ ಸ್ವಾವಲಂಬನೆ ಮತ್ತು ಉತ್ಪಾದಕತೆಯ ಮೇಲೆ ಒತ್ತು ನೀಡಿದೆ. ಉತ್ಪಾದಕತೆ ಹೆಚ್ಚಿದರೆ ಆದಾಯ ಹೆಚ್ಚುವುದೆನ್ನುವ ಖಾತರಿಯಿದೆಯೇ? ನಮ್ಮ ದೇಶದ ಒಟ್ಟಾರೆ ಕೃಷಿ ಉತ್ಪಾದನೆ ನಮ್ಮ ಅವಶ್ಯಕತೆ ಮತ್ತು ದಾಸ್ತಾನಿಗೆ ಹೊಂದುತ್ತದೆ. ಕೆಲವು ಪದಾರ್ಥಗಳನ್ನು ನಾವು ಆಮದು ಕೆಲವನ್ನು ರಫ್ತು ಮಾಡಿದರೂ, ಒಟ್ಟಾರೆ ಸ್ವಯಂಪೂರ್ಣವಾಗಿದ್ದೇವೆ. ಉತ್ಪಾದಕತೆಯ ಮೂಲಕ ಆದಾಯ ಹೆಚ್ಚಬೇಕಾದರೆ ನಮ್ಮ ಉತ್ಪಾದನೆಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಿದ್ದು, ರಫ್ತಿನಿಂದ ಸಂಪಾದನೆಯಾಗಬೇಕು. ಅದಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸೆಣೆಸುವ ಸಾಮರ್ಥ್ಯ ಬೇಕು. ಕೆಲವು ವಿಶೇಷ ಕ್ಷೇತ್ರಗಳನ್ನು ಬಿಟ್ಟರೆ, ನಮ್ಮ ಕೃಷಿ ಕ್ಷೇತ್ರದ ಕಾಯಕಲ್ಪವನ್ನು ರಫ್ತಿನ ಮೇಲೆ ಕಟ್ಟಿಕೊಳ್ಳುವುದು ಸಾಧ್ಯವಿಲ್ಲ. ಈ ದಿಕ್ಕಿನಲ್ಲಿ ನಾವು ಮುಂದುವರೆಯಲು ಸಂಶೋಧನೆ, ತಳಿ ಮಾರ್ಪಡಿಯಿಂದ, ಉತ್ತಮ ತಳಿಗಳ ಆವಿಷ್ಕಾರ, ಭೂಮಿಯ ಕ್ರೋಢೀಕರಣ, ತಂತ್ರಜ್ಞಾನದ ಅಧಿಕ ಬಳಕೆ ಎಲ್ಲವೂ ಬೇಕು. ಕ್ರೋಢೀಕರಣ–ಸಣ್ಣ ರೈತರನ್ನು ಕೂಲಿಗಳನ್ನಾಗಿಸುತ್ತದೆ. ತಂತ್ರಜ್ಞಾನ ಕೂಲಿಗಳನ್ನು ನಿರುದ್ಯೋಗಿಗಳನ್ನಾಗಿಸುತ್ತದೆ.

ಉತ್ಪಾದಕತೆಯನ್ನು ಹೆಚ್ಚಿಸಿ, ಉತ್ಪಾದನೆಯನ್ನು ಸ್ಥಿರವಾಗಿರಿಸುವ ನೀತಿಯನ್ನು ಅನುಸರಿಸಬಹುದು. ಕೃಷಿಗೆ ಉಪಯೋಗಿಸುವ ಭೂಮಿಯ ವಿಸ್ತೀರ್ಣ ಕುಗ್ಗಿಸಿ, ಅಧಿಕ ಉತ್ಪಾದಕತೆಯ ತಂತ್ರಜ್ಞಾನದಿಂದ ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳಬಹುದು. ಹೀಗಾದಲ್ಲಿ ಕೃಷಿಯಲ್ಲಿರುವವರಿಗೆ ಬೇರೆ ಉಪಾಧಿಯನ್ನು ಒದಗಿಸಬೇಕು. ಕೃಷಿಮುಕ್ತವಾದ ಭೂಮಿಯನ್ನು ಬೇರೆ ಬಳಕೆಗೆ ಹೂಡಬೇಕು. ಇದರಿಂದ ಪರಿಸರ ಮತ್ತು ಸುಸ್ಥಿರತೆಗೆ ಪೆಟ್ಟು ಬೀಳುತ್ತದೆ. ಸರ್ಕಾರಗಳು ಇಂಥ ನೀತಿಯನ್ನು ಯೋಚಿಸುವ ಮೊದಲೇ ವ್ಯಾಪಕವಾದ ವಿರೋಧವನ್ನು ಎದುರಿಸಬೇಕಾದ್ದರಿಂದ ಇದು ಆಗುವ ಮಾತಲ್ಲ.

ಕೃಷಿ ಕ್ಷೇತ್ರದ ದೇಣಿಗೆ ಹೆಚ್ಚಾಗಬಹುದಾದ ಎರಡನೇ ವಿಧಾನ, ಈಗಿನ ಉತ್ಪಾದಕತೆಗೆ ಅಧಿಕ ಬೆಲೆ ಗಿಟ್ಟುವಂತೆ ನೀತಿ ರೂಪಿಸುವುದು. ಇದೂ ಜಟಿಲವೇ. ಕೃಷಿಯ ಉತ್ಪನ್ನಗಳ ಬೆಲೆ ಅಧಿಕವಾದರೆ ಅದು ನೇರವಾಗಿ ಹಣದುಬ್ಬರಕ್ಕೆ ದಾರಿಮಾಡಿಕೊಡುತ್ತದೆ. ಅತ್ಯವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ಊಹಿಸಿ. ಅದು ಬಡವರ ಹೊಟ್ಟೆಗೇ ಪೆಟ್ಟಾಗುತ್ತದೆ. ಹೀಗಾಗಿ ಕೃಷಿ ಉತ್ಪಾದನೆಗೆ ಅಧಿಕ ಬೆಲೆ ಕೊಟ್ಟು ತನ್ಮೂಲಕ ಕೃಷಿಯ ದೇಣಿಗೆಯನ್ನು ಅರ್ಥವ್ಯವಸ್ಥೆಯಲ್ಲಿ ಹೆಚ್ಚಿಸುವುದೂ ಕಷ್ಟದ ಮಾತೇ.

ಕೃಷಿಯಲ್ಲಿ ದಕ್ಷತೆಯಿದ್ದು, ಉತ್ಪಾದನೆಯ ಖರ್ಚು ಕಡಿಮೆಯಾಗಬೇಕಾದರೆ ಅದಕ್ಕಿರುವ ಮಾರ್ಗ ತಂತ್ರಜ್ಞಾನ ಮತ್ತು ಕ್ರೋಢೀಕರಣದ್ದು. ದೊಡ್ಡ ಹಿಡುವಳಿಗಳಲ್ಲಿ ಕೃಷಿ ಮಾಡಿ ತಕ್ಕ ಯಂತ್ರೋಪಕರಣ, ತಾಂತ್ರಿಕತೆಯನ್ನು ಬಳಸಿ, ತಕ್ಕ ವಿಮೆಯನ್ನು ಮಾಡಿಸಬಲ್ಲ ಕಾರ್ಪೊರೇಟ್ ವ್ಯವಸ್ಥೆ ಸಫಲವಾದರೆ, ಒಟ್ಟಾರೆ ಕೃಷಿಯಲ್ಲಿ ತೊಡಗಿರುವ ಜನಸಂಖ್ಯೆ ನಮ್ಮ ಇಡೀ ಜನಸಂಖ್ಯೆಯ ಶೇಕಡಾ ೮ ರಿಂದ ೧೦ರ ಮಟ್ಟಿಗೆ ಇಳಿಯಬೇಕಾಗುತ್ತೆ. ಕೃಷಿಯಿಂದ ಹೊರಬೀಳುವ ನಮ್ಮ ಜನಸಂಖ್ಯೆಯ ಶೇಕಡಾ ೫೦ರಷ್ಟು ಜನರನ್ನು ಕೃಷಿಯೇತರ ಅಭಿವೃದ್ಧಿ, ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಕೌಶಲ್ಯವನ್ನು ಬೆಳಸುವ ಏರ್ಪಾಟಾಗಬೇಕು. ಇದು ಸ್ವ–ಉದ್ಯೋಗದಲ್ಲಿ ತೊಡಗಿರುವ, ಸಣ್ಣರೈತರನ್ನು ಜೀತಕ್ಕಿಳಿಸುವ –ರೈತವಿರೋಧಿ ಮಾರ್ಗ. ಸಣ್ಣರೈತವಿರೋಧಿ ಸೂತ್ರವಾದ್ದರಿಂದ ಇದನ್ನು ಸರ್ಕಾರಗಳು ನೇರವಾಗಿ ಮಾಡಲು ಹೇಸುತ್ತವೆ. ಆದರೆ ನಮ್ಮೆಲ್ಲ 'ಸುಧಾರಣೆಗಳು' ಈ ದಿಕ್ಕಿನಲ್ಲೇ ಇವೆ. ದಕ್ಷತೆ–ಉತ್ಪಾದಕತೆಯ ವಾದದಲ್ಲಿರುವುದು ಒಂದೇ ಪರಿಹಾರ– ಕ್ರೋಢೀಕರಣ. ಕ್ರೋಢೀಕರಣದ ದಾರಿ ಹಿಡಿದು ದೊಡ್ಡ ಗಾತ್ರದ ಇಂಡಸ್ಟ್ರಿಯಲ್ ಫಾರ್ಮಿಂಗ್‌ನತ್ತ ಸಾಗಿದಾಗ ನಮಗೆ ಹೆಚ್ಚು ಉತ್ಪಾದಕತೆ ಸಿಗಬಹುದಾದರೂ, ಹೆಚ್ಚು ಉದ್ಯೋಗಾವಕಾಶ ಉಂಟಾಗುವುದಿಲ್ಲ. ಜಮೀನನ್ನು ಹೀಗೆ ಕ್ರೋಢೀಕರಿಸಿ, ಕೇಂದ್ರೀಕರಣದತ್ತ ಸಾಗಿದಾಗ, ಹೆಚ್ಚಿನ ಉತ್ಪಾದಕತೆ, ಬಂದರೂ

(೨೧ನೇ ಪುಟಕ್ಕೆ

'ಪರ್ಯಾಯ ಜೀವನ ಪದ್ಧತಿ: ಕುಪ್ಪಳಿ ಅಧ್ಯಯನ ಶಿಬಿರದ ಉಪನ್ಯಾಸ–೩

ಕೈಮಗ್ಗದ ಉಡುಪಿ ಸೀರೆ ಪುನಶ್ಚೇತನದ ದಾರಿಯಲ್ಲಿ...

ಆಧುನಿಕತೆಯ ಆಡಂಬರದ ಹಾದಿಯಲ್ಲಿ ದೇಶಿ ಸೌಂದರ್ಯದ ಪುಳಕವನ್ನೇ ಕಳೆದುಕೊಂಡು ನಮ್ಮ ಸ್ಥಳೀಯ ಕುಶಲಕರ್ಮಿಗಳನ್ನು ಹಾದಿ ಬದಿಗೆ ತಳ್ಳಿ ಮುನ್ನಡೆದಿದ್ದ ಈ ದುಷ್ಕಾಲದಲ್ಲಿ ಇತ್ತೀಚಿನವರೆಗೂ ಬಹುಬೇಡಿಕೆಯಲ್ಲಿದ್ದು ಈಗ ಹೆಚ್ಚೂ ಕಡಿಮೆ ಕಣ್ಮರೆಯಾಗಿದ್ದ ಉಡುಪಿ ಕೈಮಗ್ಗದ ಸೀರೆ ಉತ್ಪಾದನೆಗೆ ಟೊಂಕಕಟ್ಟಿ ನಿಂತು ಯಶಸ್ವಿಯಾದ ತಮ್ಮ ಸಾಹಸದ ಕಥೆಯನ್ನು ಲೇಖಕಿ ಇಲ್ಲಿ ಸವಿವರವಾಗಿ ನಿರೂಪಿಸಿದ್ದಾರೆ.-ಸಂ.

ನಮ್ಮ ಜೀವನ ಶೈಲಿ ಪರಿಸರದ ಮೇಲೆ ಉಂಟು ಮಾಡುವ ಒತ್ತಡದ ಅರಿವು ನನ್ನ ಕುಟುಂಬಕ್ಕೆ ಸರಳ ಜೀವನ ನಡೆಸಲು ಪ್ರೇರಣೆ ನೀಡಿತ್ತು. ಇದನ್ನು ಪ್ರಾಯೋಗಿಕವಾಗಿ ಬದುಕಲು ೨೦೧೫ರಲ್ಲಿ ನಾವು ಮಂಗಳೂರು ಬಿಟ್ಟು ಅಭಿವೃದ್ಧಿಯ ಬಿಸಿ ಇನ್ನೂ ತಟ್ಟಿರದ ಕಾರ್ಕಳಕ್ಕೆ ಬಂದು ನೆಲೆಸಿದೆವು. ನಾನು ಅದುವರೆಗೆ ಮಾಡುತ್ತಿದ್ದ ಉಪನ್ಯಾಸಕಿ ಕೆಲಸವನ್ನು ಬಿಟ್ಟಿದ್ದೆ. ನನ್ನ ಪತಿ ಬಿ.ಸಿ ಶೆಟ್ಟಿ ಯವರು ತಮ್ಮ ಭೂ ವ್ಯವಹಾರವನ್ನು ಕಡಿಮೆ ಮಾಡಿದ್ದರು. ನಮ್ಮ ಪರಿಸರ ಸ್ನೇಹಿ ಜೀವನ ಶೈಲಿಗೆ ಪೂರಕವಾಗಿ ನಾವು ಹೆಚ್ಚಾಗಿ ಕೈಮಗ್ಗ, ಖಾದಿ ಬಟ್ಟೆಗಳನ್ನು ತೊಡುತ್ತಿದ್ದೆವು. ಕೈ ತೋಟ, ಕಾಂಪೋಸ್ಟ್ ತಯಾರಿ, ನೀರು, ಇಂಧನಗಳ ಉಳಿತಾಯ, ಕಾಡು ಗಿಡ – ಉತ್ಪನ್ನಗಳ ಬಳಕೆ, ಸಿದ್ಧ ಆಹಾರ ಉತ್ಪನ್ನಗಳು – ಪ್ಲಾಸ್ಟಿಕ್ ಇತ್ಯಾದಿಗಳ ಬಳಕೆ ಕಡಿಮೆ ಮಾಡುವುದು, ಪರಿಸರ ಸ್ನೇಹಿ ಉತ್ಪನ್ನಗಳ ಬಳಕೆ ಹೀಗೆ ನಮ್ಮ ಪ್ರಯತ್ನಗಳು ಪ್ರಯೋಗಗಳು ಸಾಗಿದ್ದವು. ನಾನು ಸ್ಮಾರ್ಟ್ ಫೋನ್ ಬಳಕೆಯನ್ನೇ ಬಿಟ್ಟಿದ್ದೆ.

ಇದೇ ಸಂದರ್ಭದಲ್ಲಿ ಕೈಮಗ್ಗದ ಮೇಲಿನ ನಮ್ಮ ಆಸಕ್ತಿಯಿಂದ ಪ್ರಸನ್ನ ಹೆಗ್ಗೋಡು ಅವರ ಪರಿಚಯ ಆಯಿತು. ಪ್ರಸನ್ನರ ಸೂಚನೆಯಂತೆ ಉಡುಪಿ ಸೀರೆ ಪುನಶ್ಚೇತನದ ಕೆಲಸಕ್ಕೆ ನಾವಿಬ್ಬರೂ ತೊಡಗಿಕೊಂಡೆವು. ನಮ್ಮ ಕೆಲಸಕ್ಕೆ ಸಾಂಸ್ಥಿಕ ರೂಪ ಕೊಡಲು ಸಮಾನ ಮನಸ್ಕ ಸ್ನೇಹಿತರೊಂದಿಗೆ ೨೦೧೮ ರಲ್ಲಿ ಕದಿಕೆ ಟ್ರಸ್ಟ್ ಎಂಬ ಲಾಭ ರಹಿತ ಸಂಸ್ಥೆ ಕಟ್ಟಿದೆವು. ಟ್ರಸ್ಟ್ ಮೂಲಕ ಸುಸ್ಥಿರ ಕೃಷಿ ಮತ್ತು ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ಹಾಗೂ ನೆಲ ಮೂಲ ಜ್ಞಾನಗಳ ಸಂರಕ್ಷಣೆ – ದಾಖಲಾತಿ ನಮ್ಮ ಉದ್ದೇಶ. ಟ್ರಸ್ಟ್‌ನ ಮೊದಲ ಯೋಜನೆಯೇ ಉಡುಪಿ ಸೀರೆ ನೇಕಾರಿಕೆಯ ಪುನಶ್ಚೇತನ.

ಉಡುಪಿ ಸೀರೆ – ದ. ಕ ಮತ್ತು ಉಡುಪಿ ಜಿಲ್ಲೆಯ ನೇಕಾರರು ನೇಯುವ, ಪ್ರಾದೇಶಿಕ ವಿಶೇಷತೆ (GI) ಮಾನ್ಯತೆ ಪಡೆದ ಸೀರೆ. ಈ ಸೀರೆಯನ್ನು ಬಾಸೆಲ್ ಮಿಷನ್ ಪರಿಚಯಿಸಿದ ಮಲಬಾರ್ ಫ್ರೇಮ್ ಮಗ್ಗದಲ್ಲಿ ಚೌಕುಳಿ ಅಥವಾ ಸಾದಾ ವಿನ್ಯಾಸದಲ್ಲಿ ಒಂದೆಳೆಯ ಹತ್ತಿಯ ನೂಲನ್ನು ಬಳಸಿ ನೇಯಲಾಗುತ್ತದೆ. ಸೀರೆಯ ಸೆರಗು ಮತ್ತು ಅಂಚು ಗಾಢ ಬಣ್ಣದಲ್ಲಿದ್ದು ಸೀರೆಯ ಮೈ ಬಣ್ಣ ತಿಳಿಯಾಗಿರುತ್ತದೆ. ಕೈಯಿಂದ ಅಡ್ಡ ನೂಲು ಹಾಯಿಸಿ ಬುಟ್ಟಾವನ್ನು ನೇಯುತ್ತಾರೆ. ಸೆರಗಿಗೆ ಗಾಢ ಬಣ್ಣ ಬರುವ ಹಾಗೆ ಹಾಸಿನ ನೂಲಿನ ಎಲ್ಲಾ (ಒಂದು ಹಾಸಿನಲ್ಲಿ ೩೦–೩೫ ಸೀರೆಗಳನ್ನು ತಯಾರಿಸಬಹುದು) ಸೆರಗಿನ ಭಾಗಗಳನ್ನು ಮಾತ್ರ ಕಟ್ಟಿ ಬಣ್ಣದಲ್ಲಿ ಮುಳುಗಿಸುತ್ತಾರೆ. ಈ ರೀತಿ ಬಣ್ಣ ಹಾಕಿದ ಹಾಸನ್ನು ಮಗ್ಗಕ್ಕೆ ಜೋಡಿಸಿ ನಂತರ ಸೀರೆಗಳನ್ನು ನೇಯಲಾಗುತ್ತದೆ. ನೇಯುವ ಸಂದರ್ಭದಲ್ಲಿ ಬಗಿನೆ ಮರದ ಹಣ್ಣಿನ ಗೊಂಚಲಿನಿಂದ ಮಾಡಿದ ವಿಶೇಷ ಬ್ರಶ್ ಬಳಸಿ ಮಗ್ಗದ ಮೇಲೆ ನೇಯಲಿರುವ ನೂಲಿಗೆ ಗಂಜಿಯನ್ನು ಹಾಕಲಾಗುತ್ತದೆ. ಹೀಗೆ ಅನೇಕ ವಿಶಿಷ್ಟ ತಂತ್ರಗಳನ್ನು ಬಳಸಿ ನೇಯಲ್ಪಡುವ ಉಡುಪಿ ಸೀರೆ ನೇಕಾರಿಕೆ ಒಂದು ಕಾಲದಲ್ಲಿ ಸುಮಾರು ೫೦೦೦ ಕ್ಕಿಂತಲೂ ಹೆಚ್ಚು ಕುಟುಂಬಗಳಿಗೆ ಆಸರೆ ನೀಡಿತ್ತು. ಆದರೆ ನಾನಾ ಕಾರಣಗಳಿಂದ ಕಳೆದ ಎರಡು ದಶಕಗಳಿಂದೀಚೆಗೆ ಅಳಿವಿನಂಚಿಗೆ ತಲುಪಿತ್ತು.

ಉಡುಪಿ ಸೀರೆಯ ಹಾಸು ಹೊಕ್ಕುಗಳ ಬಗ್ಗೆ ಅರಿಯಲು ನಾವಿಬ್ಬರು ದ.ಕ. ಮತ್ತು ಉಡುಪಿ ಜಿಲ್ಲೆಯ ಅನೇಕ ನೇಕಾರರ ಮನೆಗೆ ಮತ್ತು ನೇಕಾರರ ಸಂಘಗಳಿಗೆ ಭೇಟಿ ನೀಡಿದೆವು. ಯಾರಿಗೂ ಒಟ್ಟು ನೇಕಾರರ ಸಂಖ್ಯೆ ಮತ್ತು ನೇಕಾರಿಕೆಯ ನಿಖರ ಮಾಹಿತಿ ಇರಲಿಲ್ಲ. ಕೊನೆಗೂ ಸಂಗ್ರಹಿಸಿದ ಮಾಹಿತಿಗಳಿಂದ ತಿಳಿದ ವಿಚಾರ ತುಂಬಾ ಅಘಾತಕಾರಿಯಾಗಿತ್ತು. ೨೦೧೮ ರಲ್ಲಿ ಎರಡು ಜಿಲ್ಲೆಗಳಲ್ಲಿ ಕೇವಲ ೪೫ (ಉಡುಪಿ ಸೀರೆ ನೇಯುವವರು – ೪೨) ವಯಸ್ಸಾದ ನೇಕಾರರು ನೇಕಾರಿಕೆಯಲ್ಲಿ ಉಳಿದಿದ್ದರು. ಐವತ್ತರ ವಯಸ್ಸಿನ ಕೆಳಗಿನ ಒಬ್ಬ ನೇಕಾರರೂ ಇರಲಿಲ್ಲ. ಈ ಹಿರಿಯರು ಕೇವಲ ತಮ್ಮ ವೃತ್ತಿಯ ಮೇಲಿನ ಪ್ರೀತಿಯಿಂದ ಕಾಯಕದಲ್ಲಿ ಉಳಿದಿದ್ದರೆ ಅವರ ಮಕ್ಕಳಾರೂ ನೇಕಾರಿಕೆ ಕಲಿತಿರಲಿಲ್ಲ. ಅನೇಕ ಕುಶಲ ನೇಕಾರರು ನೇಕಾರಿಕೆ ಬಿಟ್ಟು ಬೇರೆ ಕೆಲಸದಲ್ಲಿ ತೊಡಗಿದ್ದರು. ಮಹಾತ್ಮ ಗಾಂಧೀಜಿಯವರ ಸಹಕಾರ ಚಳುವಳಿಯಿಂದ ಪ್ರೇರಿತರಾಗಿ ದ.ಕ. ಮತ್ತು ಉಡುಪಿ ಜಿಲ್ಲೆಗಳ ನೇಕಾರರು ತಮ್ಮದೇ ನೇಕಾರರ ಸಂಘಗಳನ್ನು ಸ್ಥಾಪಿಸಿ (೧೯೩೮ ? ೧೯೫೦ ರ ಅವಧಿಯಲ್ಲಿ) ಅದರ ಸದಸ್ಯರಾಗಿ ಕೆಲಸ ಮಾಡುತ್ತಿದ್ದರು. ಹೀಗೆ ಸ್ಥಾಪಿಸಿದ ಒಟ್ಟು ಎಂಟು ನೇಕಾರರ ಸಂಘಗಳಲ್ಲಿ ಕೇವಲ ೫ ನೇಕಾರರ ಸಂಘಗಳು ಮಾತ್ರ ಉಳಿದಿತ್ತು. ಕೆಲವರು ಕರ್ನಾಟಕ ಕೈಮಗ್ಗ ನಿಗಮ(KHDC) ಜೊತೆಗೆ ಕೆಲಸ ಮಾಡುತ್ತಿದ್ದರು. ನೇಕಾರರಿಗೆ ನೇಕಾರರ ಸಂಘಗಳು ನೂಲನ್ನು ಒದಗಿಸಿ ಮೀಟರ್ ಒಂದಕ್ಕೆ ೫೦–೫೫ ರೂ ನಂತೆ ಪಾವತಿಸುತ್ತಿದ್ದವು(೨೦೧೮ ರಲ್ಲಿ). ತಯಾರಾಗುತ್ತಿದ್ದ ಸ್ವಲ್ಪವೇ ಸೀರೆಗಳು ಕಡಿಮೆ ಬೆಲೆಗೆ ಮಾರಾಟ (೬೦೦ ಕ್ಕಿಂತಲೂ ಕಡಿಮೆ) ಆಗುತ್ತಿದ್ದವು.



ನೇಕಾರಿಕೆಯಲ್ಲಿ ತರಬೇತಿ ಕಾರ್ಯಕ್ರಮ

ಉಡುಪಿ ಸೀರೆ ನೇಕಾರಿಕೆ ಅನೇಕ ಕುಶಲ ಸೂಕ್ಷ್ಮ ತಂತ್ರಗಳನ್ನು ಒಳಗೊಂಡಿದೆ. ಇನ್ನೂ ಹಿರಿಯ ನೇಕಾರರು ಕೆಲಸ ಮಾಡುತ್ತಿರುವಾಗಲೇ ಈ ವಿಶಿಷ್ಟ ನೇಕಾರಿಕಾ ವಿಧಾನವನ್ನು ಕಿರಿಯರಿಗೆ ದಾಟಿಸುವ ತುರ್ತು ಇತ್ತು. ಇಲ್ಲದಿದ್ದರೆ ಮತ್ತೆಂದೂ ಈ ವಿಧಾನವನ್ನು ಕಲಿಯುವ ಸಾಧ್ಯತೆ ಇಲ್ಲ. ಆದರೆ ಯಾರಿಗೂ ಇಲ್ಲಿ ನೇಕಾರಿಕೆ ಮುಂದುವರಿಯುವ ಭರವಸೆ ಉಳಿದಿರಲಿಲ್ಲ. ಕೊನೆಗೆ ನಮ್ಮೊಡನೆ ಕೈಜೋಡಿಸಲು ಮುಂದೆ ಬಂದ ತಾಳಿಪಾಡಿ ನೇಕಾರರ ಸಂಘವನ್ನು ಕೇಂದ್ರವಾಗಿಟ್ಟುಕೊಂಡು ಉಡುಪಿ ಸೀರೆ ನೇಕಾರಿಕೆಯ ಉಳಿವಿಗಾಗಿ ಕೆಲಸ ಆರಂಭ ಮಾಡಿದೆವು. ಆಗ ತಾಳಿಪಾಡಿ ನೇಕಾರರ ಸಂಘದಲ್ಲಿ ಇದ್ದ ಒಟ್ಟು ನೇಕಾರರ ಸಂಖ್ಯೆ ೮. ಸ್ಥಳೀಯ ಜನರಲ್ಲಿ ಉಡುಪಿ ಸೀರೆ ಕೇವಲ ಅಜ್ಜಿಯರು ಉಡುವ ಸೀರೆ ಎನ್ನುವ ಭಾವನೆ ಇತ್ತು. ಹೆಚ್ಚಿನವರಿಗೆ ಈ ಎರಡು ಜಿಲ್ಲೆಗಳಲ್ಲಿ ಕೈಮಗ್ಗ ನೇಕಾರಿಕೆ ಇದೆ ಎನ್ನುವುದಾಗಲಿ ಅದರ ಬೆಲೆಯಾಗಲಿ ಮರೆತೇ ಹೋಗಿತ್ತು.

ಉಡುಪಿ ಸೀರೆಗೆ ಮರುಚೇತರಿಕೆ ಕೊಡುವುದು ಅತ್ಯಂತ ಸವಾಲಿನ ಕೆಲಸ ಆಗಿತ್ತು. ಇಲ್ಲಿ ನೇಕಾರಿಕೆ ಮುಂದುವರಿಯಬೇಕಾದರೆ ಇರುವ ನೇಕಾರರನ್ನು ಉಳಿಸಿಕೊಂಡು ಬಿಟ್ಟು ಹೋದ ನೇಕಾರರು ಮತ್ತು ಯುವಕರು ನೇಕಾರಿಕೆಯ ಕಡೆಗೆ ಬರುವಂತೆ ಮಾಡಬೇಕಿತ್ತು. ಕಡಿಮೆ ಬೆಲೆಗೆ ಮಾರಾಟವಾಗುತ್ತಿದ್ದ ಸೀರೆಗೆ ಯೋಗ್ಯ ಬೆಲೆಯೊಂದಿಗೆ ಒಳ್ಳೆಯ ಮಾರುಕಟ್ಟೆ ಒದಗಿಸಿ ನೇಕಾರರಿಗೆ ಉತ್ತಮ ಸಂಭಾವನೆ ದೊರಕಿಸಬೇಕಿತ್ತು. ಉಡುಪಿ ಸೀರೆಯ ಬಗ್ಗೆ ಜನರಲ್ಲಿ ಪ್ರೀತಿ, ಹಾಗೆಯೇ ನೇಕಾರಿಕಾ ವೃತ್ತಿಯ ಬಗ್ಗೆ ಗೌರವ, ನೇಕಾರರಲ್ಲಿ ಅಭಿಮಾನ ಮೂಡಿಸಬೇಕಿತ್ತು.

ಈ ಎಲ್ಲಾ ಸವಾಲಿನೊಂದಿಗೆ ಬಹು ಆಯಾಮದಲ್ಲಿ ನಮ್ಮ ಕೆಲಸ ಆರಂಭಿಸಿದೆವು.

ಮೊದಲಿಗೆ ಸಾವಯವ ಸಂತೆ, ವಸ್ತು ಪ್ರದರ್ಶನ, ಮೇಳ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉಡುಪಿ ಸೀರೆಯ ಮರು ಪರಿಚಯ ಮಾಡಿದೆವು. ಬೇರೆ ಬೇರೆ ಕಾರ್ಯಕ್ರಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಉಡುಪಿ ಸೀರೆ, ನೇಕಾರಿಕೆಯ ಮಹತ್ವದ ಬಗ್ಗೆ ಮಾಹಿತಿ ನೀಡಲು ಆರಂಭಿಸಿದೆವು. ನಾನು ಸ್ಮಾರ್ಟ್ ಫೋನ್ ಮತ್ತೆ ಬಳಸಲು ಆರಂಭಿಸಿದೆ. ಆಸಕ್ತಿ ತೋರಿಸಿದ ದೂರದೂರಿನ ಗ್ರಾಹಕರೊಂದಿಗೆ ನಿರಂತರ ಸಂವಹನ ನಡೆಸಿ ಹಾಗೆಯೇ ವಾಟ್ಸಪ್ ಗುಂಪುಗಳನ್ನು ಮಾಡಿ ನೇಕಾರರ ಸಂಘದಿಂದ ನೇರವಾಗಿ ಸೀರೆಗಳು ದೇಶದ ನಾನಾ ಭಾಗಗಳಿಗೆ ಹಾಗೇ ವಿದೇಶಗಳಿಗೂ ತಲುಪುವ ವ್ಯವಸ್ಥೆ ಮಾಡಿದೆ. ಈಗ ಆನ್ಲೈನ್ ಮೂಲಕ ತಿಂಗಳಿಗೆ ಸರಾಸರಿ ೧೦೦ ಕ್ಕಿಂತಲೂ ಹೆಚ್ಚು ಸೀರೆಗಳು ಮಾರಾಟ ಆಗುತ್ತಿದೆ (ತಾಳಿಪಾಡಿ ಸಂಘದಲ್ಲಿ ತಯಾರಾಗುವ



ನೇಕಾರ್ತಿಯರಿಂದಲೇ ಸೀರೆ ಸೌಂದರ್ಯ ಪ್ರದರ್ಶನ

೭೫%ಕ್ಕಿಂತಲೂ ಹೆಚ್ಚು ಸೀರೆಗಳು). ಆನ್ಲೈನ್ ಮಾರಾಟ ಮಾಡುವಾಗ ಸಂಘದ ಸೀರೆಗಳಿಗೆ ಒಂದಿಷ್ಟು ಬೆಲೆ ಸೇರಿಸಿ ಮಾರಾಟ ಮಾಡಲಾಗುತ್ತದೆ. ಹೀಗೆ ದೊರೆತ ಪೂರ್ತಿ ಲಾಭವನ್ನು ನೇಕಾರರಿಗೆ ಸನ್ಮಾನ –ಸಹಾಯ ಮಾಡಲು, ಪುನಶ್ಚೇತನದ ವಿವಿಧ ಕೆಲಸಗಳಿಗೆ ಬಳಸಲಾಗುತ್ತದೆ.

ಉಡುಪಿ ಸೀರೆಗೆ ಬ್ರಾಂಡ್ ಮೌಲ್ಯ ನೀಡಲು ಟ್ರಸ್ಟ್ ಮೂಲಕ ತಾಳಿಪಾಡಿ ಸಂಘದಲ್ಲಿ ತಯಾರಾಗುವ ಸೀರೆಗಳಿಗೆ ಚಂದದ ಲೋಗೋ ಮತ್ತು ಲೇಬಲ್ ಅನ್ನು ಸಚ್ಚು ಮೈಸೂರ್ ಅವರ ನೆರವಿನಿಂದ ರಚಿಸಲಾಯಿತು. ಲೇಬಲ್‌ನಲ್ಲಿ ನೇಕಾರರ ಚಿತ್ರವನ್ನು ಮುದ್ರಿಸಿ ಗ್ರಾಹಕರಿಗೆ ತಮ್ಮ ಸೀರೆಯ ಹಿಂದೆ ಇರುವ ಕೈಗಳನ್ನು ಪರಿಚಯಿಸಿದೆವು. ಇದಕ್ಕೆ ಎಲ್ಲರ ಮೆಚ್ಚುಗೆ ದೊರಕಿದೆ.

ಕದಿಕೆ ಟ್ರಸ್ಟ್‌ನ ಅಭಿಯಾನದಿಂದಾಗಿ ಈಗ ನೇಕಾರರ ಸಂಘಗಳ ಸೀರೆಗಳಿಗೆ ಉತ್ತಮ ಬೇಡಿಕೆ ಬೆಲೆ ದೊರೆತು (ರೂ.೧೨೦೦ –ರೂ.೨೦೦೦) ನೇಕಾರರ ಸಂಭಾವನೆ ಕೂಡಾ ಹೆಚ್ಚಾಗಿದೆ (ರೂ.೯೦ ರಿಂದ ರೂ.೧೧೦ ಪ್ರತಿ ಮೀಟರ್ ಬಟ್ಟೆಗೆ). ಅನೇಕ ವರುಷಗಳ ನಂತರ ಮತ್ತೆ ನೇಕಾರರಿಗೆ ಬೋನಸ್ ಕೂಡಲು ಆರಂಭಿಸಿದ್ದಾರೆ.

ಕೈಮಗ್ಗ ನೇಕಾರರು ಪರಿಸರಕ್ಕೆ ಯಾವುದೇ ಹಾನಿ ಮಾಡದೆ ಕೇವಲ ತಮ್ಮ ಶ್ರಮ ಬಳಸಿ ಸುಂದರವಾದ ಬಟ್ಟೆಗಳನ್ನು ತಯಾರು ಮಾಡುತ್ತಾರೆ. ನೇಕಾರರ ಈ ಕೊಡುಗೆಯನ್ನು ಗುರುತಿಸಲು ಎರಡೂ ಜಿಲ್ಲೆಯ ನೇಕಾರರಿಗೆ ಪ್ರಶಸ್ತಿ, ಸನ್ಮಾನ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡೆವು. ಹಾಗೆಯೇ ಅನೇಕ ಸಂಘ ಸಂಸ್ಥೆಗಳು ಉಡುಪಿ ಸೀರೆ ನೇಕಾರರನ್ನು ಗುರುತಿಸಿ ಗೌರವಿಸಲು ಶಿಫಾರಸು ಮಾಡಿದೆವು. ಒಬ್ಬ ನೇಕಾರಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ ಕೂಡಾ ಲಭಿಸಿದೆ. ಪತ್ರಿಕೆಗಳಿಗೆ ಮಾಹಿತಿ ನೀಡಿ ಉಡುಪಿ ಸೀರೆಗಳ ಬಗ್ಗೆ ನೇಕಾರರ ಕುರಿತು ಅನೇಕ ಲೇಖನಗಳು ಬರುವ ಹಾಗೇ ನೋಡಿಕೊಂಡೆವು. ಈ ಎಲ್ಲಾ ಪ್ರಯತ್ನದ ಫಲವಾಗಿ ನೇಕಾರರಿಗೆ ಸ್ಥಳೀಯ ಸಮಾಜದಲ್ಲಿ ಮಾನ್ಯತೆ ಹೆಚ್ಚಿದೆ.

ಕದಿಕೆ ಟ್ರಸ್ಟ್ ನೇಕಾರರ ಆತ್ಮೀಯ ಬಂಧುವಿನಂತೆ ಅವರ ಸಮಸ್ಯೆಗಳಿಗೆ ಸ್ಪಂದಿಸಿದೆ. ಅನೇಕ ನೇಕಾರರಿಗೆ ಸಣ್ಣ ಪುಟ್ಟ ಖಾಯಿಲೆ ಬಂದಾಗ ಹಾಗೂ ೭ ಮಂದಿಗೆ ಸರ್ಜರಿ ಸಂದರ್ಭದಲ್ಲಿ ನೆರವು ನೀಡಿದೆ. ನೇಕಾರಿಗೆ ಶೆಡ್ ನಿರ್ಮಿಸಲು ಹಾಗೆಯೇ ಕೋವಿಡ್ ಹಾಗೂ ಪರಿಸರ ವಿಕೋಪ ಸಂದರ್ಭದಲ್ಲಿ ಸಹಾಯ ಮಾಡಿದೆ. ೫೦ಕ್ಕಿಂತಲೂ ಹೆಚ್ಚು ನೇಕಾರರು ಮತ್ತು ಸಹಾಯಕರಿಗೆ ವಿಶೇಷ ಗೌರವಧನ ನೀಡಿದೆ. ೧೦ ಮಗ್ಗಗಳನ್ನು ತಾಳಿಪಾಡಿ ನೇಕಾರರ ಸಂಘಕ್ಕೆ ನೀಡಿದೆ. ನೇಕಾರರ ಪರವಾಗಿ ಬೇರೆ ಬೇರೆ ಇಲಾಖೆಗಳ ಜೊತೆಗೆ ಸಂವಹನ ನಡೆಸಿ ನೇಕಾರರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನ ಮಾಡುತ್ತಿದ್ದೇವೆ. ಈ ಉಪಕ್ರಮಗಳು ನೇಕಾರರಲ್ಲಿ ಭರವಸೆ ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಕದಿಕೆ ಟ್ರಸ್ಟ್, ತಾಳಿಪಾಡಿ ಸಂಘದ ಜೊತೆ ಸೇರಿ ಅನೇಕ ಬಿಟ್ಟು ಹೋದ ನೇಕಾರರು ಮತ್ತೆ ನೇಕಾರಿಕೆಗೆ ಬರುವಂತೆ ಮಾಡಿದೆ. ಟ್ರಸ್ಟ್, ನಬಾರ್ಡ್ ಸಂಸ್ಥೆಯ ನೆರವಿನಿಂದ ನೇಕಾರಿಕಾ ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದೆ. ೨೦೧೮ ರಲ್ಲಿ ತಾಳಿಪಾಡಿ ಸಂಘದಲ್ಲಿ ೮ ಇದ್ದ ನೇಕಾರರ ಸಂಖ್ಯೆ ಈಗ ೩೫ ಕ್ಕೆ ಏರಿದೆ. ಎರಡು ಜಿಲ್ಲೆಗಳಲ್ಲಿ ೪೫ ರಷ್ಟು ಇದ್ದ ನೇಕಾರರ ಸಂಖ್ಯೆ ೭೧ ಕ್ಕೆ ಏರಿದೆ. ಇದರಲ್ಲಿ ೧೩ ಮಂದಿ ೫೦ ವರುಷಕ್ಕಿಂತಲೂ ಕೆಳಗಿನವರು. ಅತ್ಯಂತ ಕಿರಿಯ ನೇಕಾರರ ವಯಸ್ಸು ೨೯. ಮೂರು ದಶಕಗಳ ನಂತರ ಯುವ ನೇಕಾರರು ನೇಕಾರಿಕೆಯಲ್ಲಿ ಪ್ರೀತಿಯಿಂದ ತೊಡಗಿದ್ದಾರೆ. ತರಬೇತಿ ಮುಗಿದಿದ್ದರೂ ಕದಿಕೆ ಟ್ರಸ್ಟ್ ಹೊಸ ನೇಕಾರರಿಗೆ ಬೆಂಬಲ ವೇತನ ನೀಡಿ ಅವರು ನೇಕಾರಿಕೆಯಲ್ಲಿ ಮುಂದುವರಿಯುವಂತೆ ನೋಡುತ್ತಿದೆ. ಈ ಹೊಸ ನೇಕಾರರು ಉಡುಪಿ ಸೀರೆ ನೇಕಾರಿಕೆ ಮುಂದುವರಿಸುವ ಭರವಸೆ ಮೂಡಿಸಿದ್ದಾರೆ.

ಉಡುಪಿ ಸೀರೆಗಳನ್ನು ಪರಿಸರ ಸ್ನೇಹಿಯಾಗಿಸಲು ಆರಂಭದಲ್ಲಿ ಚರಕ ಸಂಸ್ಥೆಯ ಸಹಕಾರದೊಂದಿಗೆ ಮುಂದೆ ಕಾಮನಬಿಲ್ಲು ಸಂಸ್ಥೆಯ ಮೂಲಕ ಸಹಜ ಬಣ್ಣದ ಉಡುಪಿ ಸೀರೆಯನ್ನು ತಾಳಿಪಾಡಿ ಸಂಘದಲ್ಲಿ ಪರಿಚಯಿಸಿದೆವು. ಸಹಜ ಉಡುಪಿ ಸೀರೆಗಳಿಗೆ ಗ್ರಾಹಕರಿಂದ ಒಳ್ಳೆಯ ಸ್ಪಂದನೆ ದೊರೆತಿದೆ. ಎರಡು ಸಹಜ ಬಣ್ಣದ ಕಾರ್ಯಗಾರವನ್ನು ಮತ್ತು ವಿವಿಧ ವಿಷಯದ ಮೇಲೆ ಅನೇಕ ಕಾರ್ಯಕ್ರಮಗಳನ್ನು ತಾಳಿಪಾಡಿ ಸಂಘದಲ್ಲಿ ಆಯೋಜಿಸಿದ್ದೇವೆ. ಈಗ ಸೆಲ್ಕೋ ಫೌಂಡೇಶನ್ ನೆರವಿನಿಂದ ಪೂರ್ಣ ಪ್ರಮಾಣದಲ್ಲಿ ಸೌರ ಶಕ್ತಿಯಿಂದ ನಡೆಯುವ ಸಹಜ ಬಣ್ಣದ ಘಟಕವನ್ನು ತಾಳಿಪಾಡಿ ಸಂಘದಲ್ಲಿ ಸ್ಥಾಪಿಸುತ್ತಿದ್ದೇವೆ. ಇದರೊಂದಿಗೆ ತಾಳಿಪಾಡಿ ಸಂಘ ಸಹಜ



ಅತ್ಯುತ್ತಮ ನೇಕಾರರಿಗೆ ಪ್ರಶಸ್ತಿ–ಸನ್ಮಾನ

ಬಣ್ಣ ತಯಾರಿಯಲ್ಲಿ ಸ್ವಾವಲಂಬಿ ಆಗಲಿದೆ. ಅನೇಕ ಚಂದದ ವಿನ್ಯಾಸದ ಉಡುಪಿ ಸೀರೆಗಳನ್ನು ನೇಕಾರರು ಮತ್ತೆ ಉತ್ಸಾಹದಿಂದ ನೇಯುತ್ತಿದ್ದಾರೆ. ಮುಂದೆ ಖಾದಿ ಉಡುಪಿ ಸೀರೆ ತಯಾರಿಸುವ ಯೋಜನೆ ಇದೆ.

ಕದಿಕೆ ಟ್ರಸ್ಟ್ ಯಾವುದೇ ಫಲಾಪೇಕ್ಷೆ ಇಲ್ಲದೆ ತನ್ನ ಧ್ಯೇಯೋದ್ದೇಶಗಳಲ್ಲಿ ಒಂದಾದ ಅಳಿವಿನಂಚಿನಲ್ಲಿರುವ ಪರಿಸರ ಸ್ನೇಹಿ ಗ್ರಾಮೋದ್ಯೋಗಗಳನ್ನು ಉಳಿಸುವ ಉದ್ದೇಶದಿಂದ ನೇಕಾರರಿಗೆ ಮತ್ತು ನೇಕಾರರ ಸಂಘಗಳಿಗೆ ಸಹಾಯ ಮಾಡುತ್ತಿದೆ. ಟ್ರಸ್ಟ್ ನ ಸ್ಥಾಪಕರಾಗಿ ನಾವು ನಮ್ಮ ತನು ಮನ ಧನ ಬಳಸಿ ಯಾವುದೇ ಭತ್ಯೆ ಇಲ್ಲದೆ ಈ ಕೆಲಸ ಮಾಡುತ್ತಿದ್ದೇವೆ. ನಿರಂತರ ಪ್ರಯತ್ನದ ನಂತರ ಉಡುಪಿ ಸೀರೆ ನೇಕಾರಿಕೆ ಮತ್ತೆ ಚೇತರಿಸಿಕೊಳ್ಳುವ ಭರವಸೆ ಮೂಡಿದೆ. ಈ ಪುನಶ್ಚೇತನದ ಕಾರ್ಯದಲ್ಲಿ ಅನೇಕರು ನೆರವು ನೀಡಿದ್ದಾರೆ. ಕೆಲವು ಸ್ವಯಂ ಪ್ರೇರಿತ ದಾನಿಗಳು ತಾವಾಗೆ ಮುಂದೆ ಬಂದು ಕೆಲವೊಂದು ಉದ್ದೇಶಗಳಿಗೆ ನೆರವು ನೀಡಿದ್ದಾರೆ. ಅನೇಕ ಗ್ರಾಹಕರು ಉಡುಪಿ ಸೀರೆ ಖರೀದಿಸಿ, ಉಡುಗೊರೆ ನೀಡಿ, ಸಾಮಾಜಿಕ ಜಾಲತಾಣಗಳಲ್ಲಿ ಬರೆದು ಪ್ರಚಾರ ನೀಡಿದ್ದಾರೆ. ನಬಾರ್ಡ್ ಸಂಸ್ಥೆಯಂತೂ ಕೆಲವು ಯೋಜನೆಗಳಿಗೆ ನೆರವು ನೀಡುವುದರ ಜೊತೆಗೆ ಕದಿಕೆ ಟ್ರಸ್ಟ್ ಕೈಮಗ್ಗ ಕ್ಷೇತ್ರದಲ್ಲಿ ನಡೆಸಿದ ಕೆಲಸಕ್ಕಾಗಿ ೨೦೨೧ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ನೀಡಿದೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆ ನನ್ನನ್ನು ೨೦೨೧ರ ೨೧ ಚೇಂಜ್ ಮೇಕರ್ಸ್‌ನಲ್ಲಿ ಒಬ್ಬಳೆಂದು ಗುರುತಿಸಿದೆ. ಕೆನಡಾದ ಮಾಮಿಸ್ ಸ್ಕೂಲ್ ಹೌಸ್ ಸಹಜ ಬಣ್ಣದ ಕಲಿಕೆಗೆ ನನಗೆ ಸ್ಕಾಲರ್ಷಿಪ್ ನೀಡಿದೆ. ಇಲಾಖೆಗಳಿಂದಲೂ ಈಗ ಉತ್ತಮ ಸ್ಪಂದನೆ ಸಿಗುತ್ತಿದೆ.

ಕದಿಕೆ ಟ್ರಸ್ಟ್ ಆಶಿಸಿದ ಹಾಗೇ ಉಡುಪಿ ಸೀರೆಗೆ ರಾಷ್ಟ್ರ ಮಟ್ಟದಲ್ಲಿ ಮಾನ್ಯತೆ ದೊರಕಿದೆ. ಉಡುಪಿ ಸೀರೆ ನೇಕಾರರ ಸಂಭಾವನೆ – ವೃತ್ತಿ ಗೌರವ ಹೆಚ್ಚಿದೆ. ನೇಕಾರರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಉಡುಪಿ ಸೀರೆ ಉಡುವುದು ಈಗ ಟ್ರೆಂಡ್ ಆಗಿದೆ. ಸ್ಥಳೀಯರೂ ಅಭಿಮಾನದಿಂದ ಉಡುಪಿ ಸೀರೆ ತೊಡಲು ಆರಂಭಿಸಿದ್ದಾರೆ. ಅಳಿವಿನಂಚಿನಲ್ಲಿದ್ದ ಉಡುಪಿ ಸೀರೆ ಪುನಶ್ಚೇತನದ ಕಾರ್ಯ ಯಶಸ್ವಿಯಾಗಿದೆ. ಈಗ ಇದನ್ನು ಮುಂದುವರಿಸಿಕೊಂಡು ಹೋಗುವುದು ನೇಕಾರರ ಸಂಘಗಳು, ಸರಕಾರ, ಇಲಾಖೆಗಳು ಮತ್ತು ಸಮಾಜದ ಜವಾಬ್ದಾರಿ ಆಗಿದೆ.

ನಾವಿಂದು ಹವಾಮಾನ ಬದಲಾವಣೆಯ ವಿಪರೀತ ಪರಿಣಾಮದ ಭೀತಿಗೆ ಸಿಲುಕಿದ್ದೇವೆ. ಪ್ರತಿಯೊಬ್ಬರು ತಮ್ಮ ಇಂಗಾಲದ ಹೆಜ್ಜೆ ಗುರುತುಗಳನ್ನು ಕಡಿಮೆ ಮಾಡಲೇ ಬೇಕಾಗಿದೆ. ಇದಕ್ಕಾಗಿ ಉಡುಪಿ ಸೀರೆಯಂತಹ ಕೈಯಿಂದ ತಯಾರಿಸಿದ ಉತ್ಪನ್ನಗಳನ್ನು ಹೆಚ್ಚು ಹೆಚ್ಚು ಬಳಕೆ ಮಾಡಬೇಕು. ಕೈ ಉತ್ಪನ್ನಗಳ ತಯಾರಿಯಲ್ಲಿ ತೊಡಗಿರುವ ಕುಶಲ ಕರ್ಮಿಗಳಿಗೆ ಗೌರವದ ವೇತನ ದೊರಕುವ ಹಾಗೇ ಮಾಡಿ ಅವರು ವೃತ್ತಿಯಲ್ಲಿ ಮುಂದುವರಿಯುವಂತೆ ನೋಡುವುದು ಸಮಾಜದ ಕರ್ತವ್ಯವಾಗಿದೆ. ವಿದ್ಯುತ್ ಬಳಸುವುದು ಪರಿಸರದ ದೃಷ್ಟಿಯಿಂದ ಮುಂದೆ ದುಬಾರಿ ಆಗಲಿರುವ ಕಾರಣ ಭವಿಷ್ಯದಲ್ಲಿ ಈ ರೀತಿಯ ಕೈ ಕೆಲಸಗಳ ಅನಿವಾರ್ಯತೆ ಉಂಟಾಗಲಿದೆ. ಹಾಗಾಗಿ ಈಗ ಅವಶ್ಯಕತೆ ಇಲ್ಲ ಅನ್ನಿಸಿದರೂ ಮುಂದಿನ ದಿನಗಳಿಗಾಗಿ ದೇಸಿ ಜ್ಞಾನಗಳು ಮರೆಯಾಗದಂತೆ ನೋಡಿಕೊಳ್ಳಬೇಕು.

ಈ ಆಧುನಿಕ ಕಾಲದಲ್ಲಿ ಸೀರೆ ಯಾರು ಉಡುತ್ತಾರೆ? ಕೆಲಸ ಮಾಡಲು ತೊಡಕು. ಉಡುಪಿ ಸೀರೆ ಯಾಕೆ? ಬೇರೆ ಬಟ್ಟೆ ತಯಾರಿಸಬಹುದಲ್ಲವೇ? ಇತ್ಯಾದಿ ಪ್ರಶ್ನೆಗಳನ್ನು ಕೆಲವರು ಕೇಳುತ್ತಾರೆ. ನೇಕಾರರಿಗೆ ಕಲಾವಿದರ ಕ್ಯಾನ್ವಾಸ್ ಇದ್ದ ಹಾಗೇ ತಮ್ಮ ಕಲ್ಪನೆಗೆ ಸರಿಯಾಗಿ ಸುಂದರ ವಿನ್ಯಾಸದ ಸೀರೆಗಳನ್ನು ಏಕತಾನತೆ ಇಲ್ಲದೆ ನೇಯಲು ನೇಕಾರರಿಗೆ ಉತ್ಸಾಹ ಇರುತ್ತದೆ. ಎಷ್ಟೊಂದು ವೈವಿಧ್ಯದ ಕೈಮಗ್ಗ ಸೀರೆಗಳು ಭಾರತದಲ್ಲಿ ತಯಾರಾಗುತ್ತಿದೆ. ಇದರ ಹಿಂದೆ ಎಷ್ಟೊಂದು ಸುಂದರ ನೆನಪುಗಳು ಇವೆ. ಸೀರೆ ನೇಯ್ಗೆಯಿಂದಾಗಿ ನೇಕಾರಿಕೆಯ ಅನೇಕ ವಿಶಿಷ್ಟ ತಂತ್ರಗಳು ಇನ್ನೂ ಉಳಿದುಕೊಂಡಿದೆ. ಸೀರೆ ನೇಯಬಲ್ಲ ನೇಕಾರರು ಯಾವ ಬಟ್ಟೆಯನ್ನು ಕೂಡಾ ಅಗತ್ಯ ಬಂದಾಗ ನೇಯಬಲ್ಲರು. ಸೀರೆ ಒಂದು ಪರಿಪೂರ್ಣ ವಸ್ತ್ರ. ಮಗ್ಗದಿಂದ ತಯಾರಾಗಿ ಬಂದ

(ಮುಂದಿನ ಪುಟಕ್ಕೆ

'ಪರ್ಯಾಯ ಜೀವನ ಪದ್ಧತಿ: ಕುಪ್ಪಳಿ ಅಧ್ಯಯನ ಶಿಬಿರದ ಉಪನ್ಯಾಸ-೪

ನನಗೆ ಹುಚ್ಚು ಹಿಡಿಸಿರುವ ಚರಕ

ಕೆ.ಜಿ. ಸಚ್ಚಿದಾನಂದ

"ಎರಡೂವರೆ ವರ್ಷಗಳಲ್ಲಿ ಚರಕ ನನ್ನಿಂದ ಏನೆಲ್ಲಾ ಮಾಡಿಸಿದೆ ಎಂದು ಯೋಚಿಸಿದಾಗ ನನಗೇ ನಂಬಲಾಗುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಇಂದು ನಮಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವ ಮೌನವನ್ನು ಚರಕ ಒದಗಿಸಿಕೊಟ್ಟಿತು. ಚರಕ ನನ್ನನ್ನು ನನಗೇ ಪರಿಚಯಿಸಿದ ದಿವ್ಯ ಸಾಧನ."



ಕಳೆದ ಅಕ್ಟೋಬರ್ ತಿಂಗಳ ೩೦ ಮತ್ತು ೩೧ರಂದು ಕುಪ್ಪಳ್ಳಿಯಲ್ಲಿ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಆಯೋಜಿಸಿದ್ದ ಪರ್ಯಾಯ ಜೀವನ ಪದ್ಧತಿ ಶಿಬಿರದಲ್ಲಿ ನಾನು ಚರಕದಿಂದ ನೂಲು ತೆಗೆಯುವ ಪ್ರಾತ್ಯಕ್ಷಿಕೆ ಕೊಡಬೇಕೆಂದು ಹೆಗ್ಗೋಡಿನ ಕುಲಕರ್ಣಿ ಕೇಳಿದಾಗ ಸಂತೋಷದಿಂದ ಒಪ್ಪಿಕೊಂಡು ಹೋದೆ. ಕೇವಲ ಡೆಮಾನ್ಸ್ಟ್ರೇಟ್ ಮಾಡುವುದೆಂದು ತಿಳಿದಿದ್ದ ನನಗೆ, ವೇದಿಕೆಯ ಮೇಲೆ ಕೂರಿಸಿದಾಗ ಸ್ವಲ್ಪ ದಿಗಿಲಾಯಿತು. ಪಕ್ಕದಲ್ಲಿ ಕೂತಿದ್ದ ಡಿಎಸ್ಎನ್ ಅವರು "ಚರಕದೊಂದಿಗಿನ ನಿಮ್ಮ ಜರ್ನಿ ಬಗ್ಗೆ ಎರಡು ಮಾತಾಡಿ" ಎಂದರು. ಎಂದೂ ಈ ರೀತಿಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅನುಭವವಾಗಲೀ ಧೈರ್ಯವಾಗಲೀ ಇರದ ನಾನು ಅದು ಹೇಗೆ ಆರಾಮದಲ್ಲಿ ಒಪ್ಪಿದೆ! ನನಗೇ ತಿಳಿಯದಂತೆ ಚರಕ ನನ್ನಲ್ಲಿ ತಂದಿರುವ ಬದಲಾವಣೆಯನ್ನು ಗಮನಿಸಿ ಚಕಿತನಾದೆ. ಅದನ್ನೆ ಸಭೆಯೊಂದಿಗೆ ಹಂಚಿಕೊಂಡೆ. ಅದು ನನ್ನ ಜೀವಿತದ ಮೊದಲ 'ಭಾಷಣ'. ಚರಕ ಹಾಗು ಡಿಎಸ್ಎನ್ ಅವರು ಮಾಡಿಸಿದ್ದು.


ಈಗ್ಗೆ ಎರಡು ವಾರದ ಹಿಂದೆ ಡಿಎಸ್ಎನ್ ಅವರು ಹೊಸಮನುಷ್ಯದ ವಾರ್ಷಿಕ ಸಂಚಿಕೆಗೆ ಅದೇ ವಿಷಯದ ಬಗ್ಗೆ ಒಂದು ಲೇಖನ ಬರೆದುಕೊಡಲು ಹೇಳಿದರು. ಚರಕದಿಂದ ನನ್ನಲ್ಲಾದ ಬದಲಾವಣೆ ಹಾಗು ಪಡೆದ ಆನಂದ ಮತ್ತೊಂದಿಷ್ಟು ಜನರಿಗೆ ಸಿಗಬಹುದೇನೋ ಎಂಬ ಆಸೆಯಿಂದ ಮೂಲತಃ ಚಿತ್ರಕಲಾಭ್ಯಾಸಿಯಾದ ನಾನು ಹೆಡ್ ಮಾಸ್ಟರ್ ಬಳಿ ಪೇಚಿಗೆ ಸಿಕ್ಕಿಕೊಂಡೆ. ಒಪ್ಪಿಕೊಂಡಾಗ ಬರವಣಿಗೆ ಅಷ್ಟೊಂದು ಸಲೀಸಲ್ಲದ ಸಂಗತಿ ಎಂದು ತಿಳಿದಿರಲಿಲ್ಲ. ಈ ಹತ್ತು ದಿನಗಳಲ್ಲಿ ನನಗಾದ ಉದ್ವೇಗ ಅಷ್ಟಿಷ್ಟಲ್ಲ. ಅವರಿಗೆ ನಾನು ಗಾಂಧಿಯ ಬಗ್ಗೆ ಒಂದು ಚಿತ್ರ ಬಿಡಿಸಿ ಕೊಡಿ ಎಂದು ಕೇಳಿದ್ದರೆ ಬಹುಶಃ ಅವರಿಗೂ ಹೀಗೇ ಆಗಿರುತ್ತಿತ್ತೇನೋ. ಈ ಬರಹವು ಅವರು ರಚಿಸಬಹುದಾದ ಚಿತ್ರದಂತೆ ಸುಂದರವಾಗೇ ಇರಬಹುದೆಂದು ನನ್ನ ನಂಬಿಕೆ.

ಅಂದು ಕಾರ್ಕಳದ ಚಿಕ್ಕಪ್ಪ ಶೆಟ್ಟಿ ಹಾಗು ಮಮತಾ ರೈ ಅವರನ್ನು ಕರೆದುಕೊಂದು ಮೇಲುಕೋಟೆಯ ಜನಪದ ಸೇವಾ ಟ್ರಸ್ಟಿಗೆ ಹೋಗಿದ್ದೆ. ಅವರಿಗೆ ಸಂತೋಷ್ ಕೌಲಗಿಯವರನ್ನು ಭೇಟಿ ಮಾಡುವುದಿತ್ತು. ಮಗ್ಗ, ಖಾದಿ, ನೂಲು ಇವುಗಳ ಬಗ್ಗೆ ಮಾತು ಸಾಗಿತ್ತು. ನಡುವೆ ಚರಕದ ಪ್ರಸ್ತಾಪವಾದಾಗ, "ನಿಮಗೆ ಚರಕದಿಂದ ನೂಲು ತೆಗೆಯಲು ಬರುತ್ತಾ?" ಎಂದು ಸಂತೋಷರನ್ನು ಕುತೂಹಲದಿಂದ ಕೇಳಿದೆ. ತಕ್ಷಣ ಅವರು ಒಳಗೆ ಹೋಗಿ ಬಾಕ್ಸ್ ಚರಕ ತಂದು ನೂಲು ತೆಗೆಯಲು ಆರಂಭಿಸಿದರು. ನಿಜ ಹೇಳ್ತೀನಿ, ನನ್ನ ಜೀವಿತದ ಅತ್ಯಂತ ಅದ್ಭುತ ಘಳಿಗೆ ಅದು. ಮಂತ್ರಮುಗ್ಧನಾದೆ ನಾನು. ಹುಚ್ಚು ಹಿಡಿದುಬಿಟ್ಟಿತು. ದಶಕಗಳ ಗೆಳೆತನ ನಮ್ಮಿಬ್ಬರದು. ಆದರೂ ಈ ಮುಂಚೆ ಚರಕದ ಪ್ರಸ್ತಾಪ ಇವರಲ್ಲಿ ಯಾಕೆ ಮಾಡಲಿಲ್ಲ ಎಂದು ನನ್ನನ್ನೇ ಶಪಿಸಿಕೊಂಡೆ. ಶುರುವಾಯಿತು ಚರಕದ ಒಡನಾಟ. ನನಗೆ ಚರಕ ಬೇಕೆಂದು ಹಟ ಹಿಡಿದು ಕೂತೆ. ಸಂತೋಷ್ ವಾರ್ಧಾದಿಂದ ತರಿಸಿಕೊಡುವುದಾಗಿ ಹೇಳಿದರು. ಅದು ಬರುವುದಕ್ಕೆ ಎರಡು ವಾರವಾಗಬಹುದೆಂದರು. ಅಷ್ಟು ಕಾಯುವ ಪ್ರಶ್ನೆಯೇ ಇಲ್ಲ. ನನ್ನ ಚಡಪಡಿಕೆಯನ್ನು ನೋಡಿದ ಸಂತೋಷ್, ಅವರ ಚರಕವನ್ನೇ ಹೊಸದು ಬರುವ ತನಕ ಉಪಯೋಗಿಸಲು ಕೊಟ್ಟುಬಿಟ್ಟರು. ನಂತರದ ಎರಡು ತಿಂಗಳು ಅವರಿಗೆ ನಾನು ಕೊಟ್ಟ ಕಾಟ ಅಷ್ಟಿಷ್ಟಲ್ಲ. ತಾಳ್ಮೆಯಿಂದ ನನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ ಈ ಕೌಶಲ್ಯದ ಎಲ್ಲಾ ವಿವರಗಳನ್ನು ತಿಳಿಸಿಕೊಟ್ಟರು. ಅವರಿಂದ ನನ್ನ ಬದುಕಿನ ಅಪೂರ್ವವಾದ ಕಳೆದ ಎರಡೂವರೆ ವರ್ಷಗಳಲ್ಲಿ ಚರಕ ನನ್ನಿಂದ ಏನೆಲ್ಲಾ ಮಾಡಿಸಿದೆ ಎಂದು ಯೋಚಿಸಿದಾಗ ನನಗೇ ನಂಬಲಾಗುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಇಂದು ನಮಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವ ಮೌನವನ್ನು ಚರಕ ಒದಗಿಸಿಕೊಟ್ಟಿತು. ಚರಕ ನನ್ನನ್ನು ನನಗೇ ಪರಿಚಯಿಸಿದ ದಿವ್ಯ ಸಾಧನ. ಗಾಂಧಿಯನ್ನು ತಕ್ಕಮಟ್ಟಿಗೆ ಓದಿಕೊಂಡು ಬಂದಿದ್ದರೂ, ಗಾಂಧಿ ನಾಮಪದವಲ್ಲ ಅದೊಂದು ಕ್ರಿಯಾಪದ ಎಂದು ತಿಳಿಸಿಕೊಟ್ಟಿದ್ದು ಚರಕ. ಹುಚ್ಚುಚ್ಚಾಗಿ ಬಟ್ಟೆ ಕೊಳ್ಳುತ್ತಿದ್ದ ನಾನು ಈ ಎರಡೂವರೆ ವರ್ಷದಲ್ಲಿ ಬಟ್ಟೆಯನ್ನು ಕೊಂಡಿಲ್ಲ. ನಾನು ತೆಗೆದ ನೂಲಿನಿಂದ ಮೇಲುಕೋಟೆಯ ರಾಗಿಣಿ, ಬದನವಾಳುವಿನ ನಾಗರತ್ನ, ಸೌಭಾಗ್ಯ ಇವರುಗಳು ನೇಯ್ದು ಕೊಟ್ಟ ಬಟ್ಟೆಯನ್ನಷ್ಟೇ ಹೆಮ್ಮೆಯಿಂದ ತೊಡುತ್ತಿದ್ದೇನೆ. ಚರಕ ನನ್ನ ಕೊಳ್ಳುಬಾಕುತನವನ್ನು ವಾಸಿ ಮಾಡಿತು.

ಇಂದು ಮೈಸೂರಿನಲ್ಲಿ ಚರಕದ ಉತ್ಪಾದನೆಯನ್ನು ಶುರು ಮಾಡಿದ್ದೇವೆ. ಅದಕ್ಕೆ ದೊರಕುತ್ತಿರುವ ಬೇಡಿಕೆ, ಹಲವಾರು ಊರುಗಳಿಂದ ಸ್ಪಿನ್ನಿಂಗ್ ವರ್ಕ್ ಶಾಪ್ ನಡೆಸಿಕೊಡಲು ಬರುತ್ತಿರುವ ಕರೆಗಳು ಮತ್ತು ಡಿಎಸ್ಎನ್ ಅವರ 'ಗಾಂಧಿ ಕಥನ'ವನ್ನು ಜನ ಸ್ವೀಕರಿಸಿದ ರೀತಿ ಇವನ್ನೆಲ್ಲಾ ಗಮನಿಸಿದರೆ, ಇದು ನಮ್ಮೆಲ್ಲರ ಒಳಗಿರುವ ಆ ತಾತನ ಹುನ್ನಾರವೇ ಇರಬೇಕೆನಿಸುತ್ತಿದೆ. ಐ ಸ್ಟ್ರಾಂಗ್ಲಿ ಫೀಲ್ ಇಟ್ಸ್ ಅಗೈನ್ ಹಿಸ್ ಟೈಮ್.

ಬನ್ನಿ, ನಾವೆಲ್ಲರೂ ಕೂಡಿ ಈ ಚರಕದ ಹುಚ್ಚನ್ನು ಇಂದಿನ ಮಕ್ಕಳಿಗೆ ಹಿಡಿಸೋಣ, ಅವರೊಳಗಿರುವ ಗಾಂಧಿಯನ್ನು ಅವರಿಗೇ ಪರಿಚಯಿಸೋಣ.

(ಸೂಚನೆ: ಚರಕದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ೮೨೭೭೪೯೭೮೭೮ ಸಂಪರ್ಕಿಸಿ)



(ಮೂಲತಃ ಚಿತ್ರ ಕಲಾವಿದ ಮತ್ತು ವಿನ್ಯಾಸಕಾರರಾದ ಸಚ್ಚಿ ಇತ್ತೀಚೆಗೆ ಖಾದಿ ಮತ್ತು ಕೈಮಗ್ಗದ ಕ್ಷೇತ್ರಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದಾರೆ)

ಹಿಂದಿನ ಪುಟದಿಂದ)

ಕೂಡಲೇ ಬಳಸಬಹುದು. ಇರುವ ರವಿಕೆಗಳ ಜೊತೆಗೆ ಹೊಂದಾಣಿಕೆಯ ಬಗ್ಗೆ ಚಿಂತೆ ಮಾಡದೆ ನೇರವಾಗಿ ಬಳಸಬಹುದು. ಬೇಕಾದಷ್ಟು ಬಾರಿ ಬಳಸಿದ ನಂತರ ಅಂಗಿ, ಲಂಗ, ಬೆಡ್ ಕವರ್, ಮಗುವಿಗೆ ಹೊದಿಸಲು ಮೃದು ಹೊದಿಕೆ, ಕರ್ಟನ್ ಹೀಗೆ ಇಚ್ಚೆಯಂತೆ ಉಪಯೋಗಿಸಿ ಕೊನೆಗೆ ಅಡುಗೆ ಮನೆಯಲ್ಲಿ ಉಪಯೋಗಿಸುವ ಚಿಂದಿ ಬಟ್ಟೆ, ವರಸು ಬಟ್ಟೆಯಾಗಿ ಬಳಸಿ ಅತ್ತ ಮಣ್ಣಿಗೆ ಸೇರಿಸಿದರೆ ಯಾವುದೇ ಉಳಿಕೆ ಇಲ್ಲದೆ ಮಣ್ಣಿನಲ್ಲಿ ಒಂದಾಗುತ್ತದೆ. ಮಾನಸಿಕ ತೊಡಕು ಇಲ್ಲದಿದ್ದರೆ ಸೀರೆ ತೊಟ್ಟು ಯಾವ ಕೆಲಸ ಕೂಡಾ ಮಾಡಬಹುದು. ನೇಕಾರಿಕೆಯ ವಿಶಿಷ್ಟತೆಯನ್ನು ಉಳಿಸಿಕೊಳ್ಳಲು ಮತ್ತು ಸುಂದರ ಪರಿಸರಕ್ಕಾಗಿ ನಾವು ಕೈಮಗ್ಗ ಸೀರೆಗಳನ್ನು ಹೆಚ್ಚಾಗಿ ಬಳಸಬೇಕು. ಪ್ರತಿದಿನ ಬಳಸದಿದ್ದರೂ ಪರವಾಗಿಲ್ಲ ವಿಶೇಷ ಸಂದರ್ಭಗಳಲ್ಲಿ ಪ್ರೀತಿಯಿಂದ ತೊಡಬೇಕು. ಸೀರೆಯಂತಹ ವಿಶಿಷ್ಟ ಉತ್ಪನ್ನಗಳು ಕೇವಲ ಕೈಮಗ್ಗದಲ್ಲಿ ಮಾತ್ರ ತಯಾರಾಗಬೇಕು. ಹಾಗಾದಾಗ ಸೀರೆಗೆ ಮತ್ತು ಕೈಮಗ್ಗ ನೇಕಾರಿಕೆಗೆ ಬೆಲೆ ಸಿಗುತ್ತದೆ. ಗುಡಿ ಕೈಗಾರಿಕೆಗಳಿಂದ ಪರಿಸರಕ್ಕೆ ಹಾನಿ ಮಾಡದೆ ಹೆಚ್ಚು ಜನರಿಗೆ ಸ್ಥಳೀಯವಾಗಿ ಕೆಲಸದ ಅವಕಾಶ ಸಿಕ್ಕಿ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಆಶಯ ಈಡೇರುತ್ತದೆ.



(ಗಾಂಧಿ ಪ್ರಣೀತ ಅರ್ಥಶಾಸ್ತ್ರದ ಅನುಯಾಯಿಯಾಗಿ ಲೇಖಕಿ ಪರ್ಯಾಯ ಜೀವನ ಪದ್ಧತಿಯನ್ನು ರೂಢಿಸುವ ಪ್ರಯತ್ನವಾಗಿ ಕಾರ್ಕಳದಲ್ಲಿ 'ಕದಿಕೆ ಟ್ರಸ್ಟ್' ಸ್ಥಾಪಿಸಿ ಸ್ಥಳೀಯ ಮತ್ತು ಪರಿಸರ ಸ್ನೇಹಿ ಉತ್ಪನ್ನಗಳ ಪೋಷಣೆಯ ಚಳುವಳಿಯಲ್ಲಿ ತೊಡಗಿಕೊಂಡಿದ್ದಾರೆ)

೧೭ನೇ ಪುಟದಿಂದ)

ಅದರಲ್ಲಿ ಹಿಂದೆ ಸಣ್ಣ ಜಮೀನಿನ ಭೂ ಮಾಲಿಕರಾಗಿದ್ದವರು ಇದ್ದಕ್ಕಿದ್ದಂತೆ ಉದ್ಯೋಗಿಗಳಾಗಿ,"ಮಾನವ ಸಂಪನ್ಮೂಲ"ಗಳಾಗಿಬಿಡುತ್ತಾರೆ.

ಕೃಷಿಯೇತರ ಕ್ಷೇತ್ರದಲ್ಲಿಯೂ ನಾವು ಯಂತ್ರೀಕರಣದತ್ತ ಸಾಗಿದ್ದೇವೆ. ಉತ್ಪಾದನೆಯ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಿದರೂ ಅದಕ್ಕೆ ಸರಿಹೊಂದುವ ಉದ್ಯೋಗಾವಕಾಶ ಹೆಚ್ಚುತ್ತಿಲ್ಲ. ನಮ್ಮ "ಪ್ರಗತಿ" ಮತ್ತು "ವಿಕಾಸ" ವಿಸ್ತೃತವಾದ ಉದ್ಯೋಗಾವಕಾಶ ಕಲ್ಪಿಸಲಾಗದ ದಿಕ್ಕಿನಲ್ಲಿದೆ. ಉತ್ಪಾದನಾ ಕ್ಷೇತ್ರ ಬಿಟ್ಟರೆ ಉಳಿಯುವುದು ಸೇವಾಕ್ಷೇತ್ರ. ಅಲ್ಲೂ ಎರಡು ಭಾಗಗಳಿವೆ. ಅತಿ ಕೌಶಲ್ಯವಿರುವ ಕ್ಷೇತ್ರಗಳು ಒಂದು ಮಟ್ಟದಲ್ಲಿದ್ದರೆ, ಓಲಾ-ಉಬರ್-ಕಟ್ಟಡ ಕಾರ್ಯದಂತಹ ನಗರೀಕೃತ ಬಡತನದ ಮತ್ತೊಂದು ಭಾಗವೂ ಇದೇ. ಕೃಷಿಯಿಂದ ನಿರ್ವಸಿತ ಗ್ರಾಮೀಣರು ಹೀಗೆ ನಗರೀಕೃತ ಬಡವರಾಗುತ್ತಾರೆ. ಸರ್ಕಾರ ಕೈಗೊಳ್ಳಲು ಹೊರಟಿದ್ದ ಕೃಷಿ ಮಾರುಕಟ್ಟೆಯ ನಿಯಮಾವಳಿಯ ಬದಲಾವಣೆ, ರಫ್ತು ಉದ್ದೇಶಿತ ನೀತಿಗಳೆಲ್ಲವೂ ನಮ್ಮನ್ನು ಹೆಚ್ಚು ಜಾಗತಿಕ ಮಾರುಕಟ್ಟೆ ಮತ್ತು ಕಾರ್ಪರೇಟೀಕರಣದತ್ತ ಮತ್ತು ಸಣ್ಣ ರೈತರ ಹಿತಾಸಕ್ತಿಯ ವಿರುದ್ಧ ಒಯ್ಯುತ್ತದೆ.

ನಾಲ್ಕನೆಯ ಆಯಾಮ: ಪರಿಸರ ಮತ್ತು ಸುಸ್ಥಿರತೆ


ಉತ್ಪಾದಕತೆ, ಕಾರ್ಪರೇಟ್ ಕೃಷಿ, ಕೃಷಿಯಲ್ಲಿ ದಕ್ಷತೆ, ಏನಾದರೂ ಪರಿಸರ ಮತ್ತು ಸುಸ್ಥಿರತೆಗೆ ಸವಾಲೇ. ಹಸಿರು ಕ್ರಾಂತಿಯನ್ನು ದೇಶದ ಆಹಾರ ಭದ್ರತೆಯ ದಿಕ್ಕಿನ ಸಾಫಲ್ಯವೆಂದು ಪರಿಗಣಿಸಿದರೂ, ಇದೇ ಸುಸ್ಥಿರತೆಗೆ ಸವಾಲಾಗಿದೆ. ಹೆಚ್ಚಿನ ಇಳುವರಿ ಕೊಡುವ ಕಸಿ ತಳಿಗಳ ವೈಜ್ಞಾನಿಕ ಕೃಷಿಯ ಯಶಸ್ಸಿಗೆ ದೊಡ್ಡ ಅಣೆಕಟ್ಟುಗಳು, ಅದರಿಂದ ಬಂದ ನೀರಾವರಿ, ನೀರನ್ನು ಹರಿಸಲು ವಿದ್ಯುತ್ತಿನ ಮೋಟರು ಅಥವಾ ಡೀಸಲ್ ಪಂಪು, ಅಣೆಕಟ್ಟಿನಿಂದ ಉಂಟಾಗುವ ನಿರ್ವಸತಿ ಎಲ್ಲವೂ ಪರಿಸರದ ಅಸಮತೋಲನವನ್ನು ಉಂಟುಮಾಡಿವೆ.

ಉತ್ತಮ ಇಳುವರಿಗೆ ನೀರು, ಭೂಗರ್ಭದಿಂದ ತೈಲೋತ್ಪನ್ನದ ರಸಗೊಬ್ಬರ, ವಿಷಾಂಶಗಳಿಂದ ಆರೋಗ್ಯವನ್ನು ಹಾಳುಮಾಡುವ ಕೀಟನಾಶಕಗಳನ್ನು ಬಳಸಬೇಕು. ಭೂಮಿಯನ್ನು ಆಧುನಿಕ ಕೃಷಿಗಾಗಿ ಯಂತ್ರದಿಂದ ಉತ್ತಾಗ ಉತ್ಪನ್ನವಾಗುವ ಇಂಗಾಲಾಮ್ಲವೂ ಪರಿಸರಕ್ಕೆ ಧಕ್ಕೆ ಮಾಡುತ್ತದೆ. ಒಟ್ಟಾರೆ ಆಧುನಿಕ ಕೃಷಿ ಪರಿಸರ ವಿರೋಧಿಯೇ ಆಗಿದೆ.

ಕೃಷಿ, ಮತ್ತು ಕೃಷಿ ಉತ್ಪನ್ನಗಳು ನಮ್ಮ ಆಹಾರಕ್ಕೆ ಸಂಬಂಧಿಸಿದ್ದರಿಂದ ಪರಿಸರ ಮತ್ತು ಸುಸ್ಥಿರತೆಗೆ ಉಂಟಾಗುವ ಧಕ್ಕೆಯ ಬಗ್ಗೆ ನಾವು ಮಾತಾಡುವುದಿಲ್ಲ. ಆದರೆ ಹಸಿರು ಕ್ರಾಂತಿಯ ಕರಾಳ ಪ್ರಭಾವ ಪಂಜಾಬಿನ ಮೇಲೆ ಹೇಗಾಗಿದೆ ಎಂದು ಈಚೆಗೆ ಚರ್ಚೆಯಾಗುತ್ತಿದೆ. ವಿರೋಧಾಭಾಸವೆಂದರೆ ಆ ಚರ್ಚೆಯನ್ನು ಮಾಡುತ್ತಿರುವವರು ಮಾರುಕಟ್ಟೆಯ ಆರಾಧಕರೇ. ನೀರನ್ನು ಹೀರುವ ಅಕ್ಕಿ ಗೋಧಿ, ಕಬ್ಬಿನಂತ ಕೃಷಿ ಉತ್ಪನ್ನಗಳ ಅತ್ಯುತ್ಪಾದನೆಯನ್ನು ತಡೆಯಲು ಮುಕ್ತ ಮಾರುಕಟ್ಟೆಯೇ ಸರಿಯಾದ ಚೌಕಟ್ಟು ಎನ್ನುವುದು ವಾದ. ಪರಿಸರನಾಶವನ್ನು ಗಮನಿಸುತ್ತಲೇ ಮುಕ್ತಮಾರುಕಟ್ಟೆಯ ವಾದವನ್ನು ವಿರೋಧಿಸಬೇಕಾದ ಪರಿಸ್ಥಿತಿಯಲ್ಲಿ ರೈತ ಹಿತೈಷಿಗಳಿದ್ದಾರೆ.

ಸರ್ಕಾರದ ಹಸ್ತಕ್ಷೇಪವಿಲ್ಲದೆ ಮುಕ್ತ ಮಾರುಕಟ್ಟೆಗೇ ಬಿಟ್ಟರೆ, ಅತ್ಯುತ್ಪಾದನೆಯಿಂದಾಗಿ ಬೆಲೆಗಳು ತೀವ್ರವಾಗಿ ಬೀಳುತ್ತವೆ. ಆಗ ರೈತರು ಇತರೆ ಕೃಷಿಯತ್ತ ವಾಲುತ್ತಾರೆ. ಮಾರುಕಟ್ಟೆ ಕಂಡುಕೊಳ್ಳುವ ಬೇಡಿಕೆ-ಸರಬರಾಜಿನ ಸಮತೌಲ್ಯದ ದರವೇ (ಪ್ರೈಸ್ ಡಿಸ್ಕವರಿ) ಇದಕ್ಕೆ ಪರಿಹಾರ ಎನ್ನುವ ವಾದವಿದೆ. ಇಲ್ಲಿರುವ ಅಪಾಯವೆಂದರೆ, ಮಾರುಕಟ್ಟೆಯ ಏರುಪೇರುಗಳನ್ನು ಭರಿಸಿ ಹೊಸ ಸಮತೋಲನವನ್ನು ಕಂಡುಕೊಳ್ಳಲು ನಾಲ್ಕೈದು ವರ್ಷಗಳ ಕಾಲ ಬೇಕು. ಅಲ್ಲಿಯವರೆಗೂ ಏರುಪೇರನ್ನು ತಡೆದುಕೊಳ್ಳುವ ಶಕ್ತಿ ರೈತ ಸಮುದಾಯದಲ್ಲಿದೆಯೇ....

ಮುಕ್ತ ಮಾರುಕಟ್ಟೆ ತುರ್ತಿನದ್ದು. ಲಾಭಾರ್ಜನೆಯೇ ಧ್ಯೇಯವಾದಾಗ, ಅದನ್ನು ವಾರ್ಷಿಕ ಕಾಲಮಾನದಲ್ಲಿ ಲೆಕ್ಕಕಟ್ಟುವ ಆಧುನಿಕ ಕಾರ್ಪರೇಟುಗಳು ತಾಳ್ಮೆಯ ಪರಿಸರ ಸ್ನೇಹಿ ತಂತ್ರಗಳತ್ತ ಒಲವು ತೋರುವುದಿಲ್ಲ. ಲಗಾಮಿಲ್ಲದ ಮಾರುಕಟ್ಟೆ ತಂತ್ರಗಳು ಪರಿಸರ ವಿರೋಧಿಯೇ. ಪ್ರಶ್ನೆಗಳು ಅನೇಕ. ಉತ್ತರಗಳು ಕಠಿಣ. ಅದಕ್ಕೇ ಈ ಸಮಸ್ಯೆಗಳ ಬಗ್ಗೆ ತುಂಬಾ ವ್ಯಾಪಕವಾಗಿ ಚರ್ಚೆಯಾಗಬೇಕಾಗಿದೆ.



(ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯನೇಜ್‌ಮೆಂಟ್‌ನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಲೇಖಕರು ಕನ್ನಡದ ಖ್ಯಾತ ಕಥೆಗಾರರೂ ಹೌದು)

೧೫ನೇ ಪುಟದಿಂದ)

ಅದಾನಿ-ಅಂಬಾನಿ ಸೇರಿದಂತೆ ಕೆಲವೇ ಕೆಲವು ಉದ್ಯಮಪತಿಗಳ ಸಂಪತ್ತಲ್ಲಿ ಕಂಡುಕೇಳದ ಹೆಚ್ಚಳ. ಮೂರು, ಎಲ್ಲವೂ ಕುಸಿಯುತ್ತಿರುವ ಕಾಲಕ್ಕೆ ದೇಶದ ಷೇರು ಮಾರುಕಟ್ಟೆಯ ಸೂಚ್ಯಂಕ ಸಿಕ್ಕಾಪಟ್ಟೆ ಹೆಚ್ಚಳ ದಾಖಲಿಸುತ್ತಿರುವುದು.



.(ಬೆಂಗಳೂರಿನ ಅಜೀಂಪ್ರೇಂಜಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಲೇಖಕರು ಖ್ಯಾತ ಅಂಕಣಕಾರರು ಕೂಡ)

"ಹಾಡೆನ್ನ ದೈವತವು, ಹಾಡೆನ್ನ ಜೀವಿತವು..."

ನಾಡೋಜ ಡಾ. ಚೆನ್ನವೀರ ಕಣವಿಯವರೊಂದಿಗೆ ಒಂದು ಸಂದರ್ಶನ

ಸಂದರ್ಶಕರು : ವಿನಯಾ ಒಕ್ಕುಂದ

ಶುಭ್ರ ಮುಂಜಾವಿನ ಎಳೇ ಬಿಸಿಲಿನಲ್ಲಿ ಹಸಿರು ಮಕಮಲ್ ಗರಿಕೆಯ ಮೇಲೆ ಕೂತ ಇಬ್ಬನಿಯ ಮಣಿಗಳಂತೆ ಮೆಲುದನಿಯಲ್ಲಿ ಕನ್ನಡದ ಶಬ್ದಗಳನ್ನು ಜೋಡಿಸುತ್ತಾ ಲೋಕದ ಸೌಂದರ್ಯವನ್ನು ಕಟ್ಟಿಕೊಟ್ಟಿರುವ ಮತ್ತು ಬಹತೇಕ ಕಾವ್ಯಕ್ಕೇ ತಮ್ಮ ಸಾಹಿತ್ಯ ಜೀವನವನ್ನು ಮುಡಿಪಾಗಿಟ್ಟಿರುವ ಧಾರವಾಡದ ಕವಿ ಚೆನ್ನವೀರ ಕಣವಿಯವರನ್ನು ಇಲ್ಲಿ 'ಹೊಸ ಮನುಷ್ಯ'ದ ದಶವಾರ್ಷಿಕ ವಿಶೇಷ ಸಂಚಿಕೆಗಾಗಿ ಮಾತನಾಡಿಸಿರುವವರು ಧಾರವಾಡದವರೇ ಆದ ಕವಯತ್ರಿ ಮತ್ತು ಕಥೆಗಾರ್ತಿ ವಿನಯಾ ಒಕ್ಕುಂದ ಅವರು-ಸಂ.



ನಮಸ್ಕಾರ ಸರ್, ಕನ್ನಡ ಕಾವ್ಯಲೋಕವನ್ನು ನಿಮ್ಮ ಕವಿತೆಗಳ ಚೆನ್ ಬೆಳಕಿನಿಂದ ಕಾಂತಿಯುತವಾಗಿಸಿದ್ದೀರಿ. ಏಳು ದಶಕಗಳನ್ನು ಮಿಕ್ಕಿ ಮೀರಿದ ಕಾವ್ಯಾನುಸಂಧಾನದ ತಪ ನಿಮ್ಮದು. ಏನಾದರೂ ಇರಲಿ ಹಾಡ ನಿಲ್ಲಿಸಬೇಡ- ಎಂಬ ಧ್ಯೇಯದಲ್ಲಿ ಜೀವಕ್ಕೂ-ಕಲೆಗೂ ಇರುವ ಅನನ್ಯತೆಯನ್ನು ದರ್ಶಿಸಿದ್ದೀರಿ. ಕವಿತೆ ನಿಮ್ಮ ಭಾಷೆ. ಕವಿತೆಯಿಂದ ಬಾಳು, ಬಾಳಿನಿಂದ ಕವಿತೆ ಪರಸ್ಪರ ಹೊಳಪುಗೊಂಡಿದ್ದನ್ನು ನಮ್ಮ ತಲೆಮಾರು ಬಲು ಬೆರಗಿನಿಂದ, ಗೌರವದಿಂದ ನೋಡಿದೆ.

ವೈಯಕ್ತಿಕವಾಗಿ ನಾನು, ನಿಮ್ಮ-ಶಾಂತಾದೇವಿಯವರ ಮಮತೆಯ ರುಚಿ ಉಂಡವಳು. ಈಗ... ಬದುಕಿನ ಇಳಿಸಂಜೆಯ ಏಕಾಂತದಲ್ಲಿ ಕಾವ್ಯದುಸಿರಿನ 'ತುಂಬಿದ ಕೊಡ'ದಂತಿರುವ ನಿಮ್ಮೊಂದಿಗೆ, 'ಹೊಸ ಮನುಷ್ಯ' ಪತ್ರಿಕೆಗಾಗಿ ಮಾತನಾಡುತ್ತಿರುವುದು ನನ್ನ ಬಾಳಿನ ಪುಣ್ಯ ಎಂದುಕೊಂಡಿದ್ದೇನೆ. ಇವು ಪ್ರಶ್ನೆಗಳಲ್ಲ, ಮಾತಿಗೆ ನೆಪಗಳು...

ಚೆನ್ನವೀರ ಕಣವಿ: 'ಏನಾದರೂ ಇರಲಿ, ಹಾಡ ನಿಲ್ಲಿಸಬೇಡ
ದೀಪ ಪಟ್ಟನೆ ಆರಿ ಹೋಗಬಹುದು
ನನ್ನೆದೆಯ ಕತ್ತಲೆಯ ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗೆ ಹೋಗಿ ಹಾಯಬಹುದು'

ಈ ಸಾಲು 'ಮತ್ತೊಂದು ಪುಟ್ಟ ಹಕ್ಕಿಗೆ' ಕವನದಲ್ಲಿಯದು. ಒಂದು ನಿರಾಶೆಯ ಮನೋಸ್ಥಿತಿಯಲ್ಲಿ ಈ ಪದ್ಯವನ್ನು ಬರೆದದ್ದು.

'ಹಾಡೆನ್ನ ದೈವತವು ಹಾಡೆನ್ನ ಜೀವಿತವು
ಮತ್ತೆ ಮತ್ತುಳಿದವರ ಮಾತು ಬೇಡ'

ಎಂದು ಅಂತ್ಯವಾಗುತ್ತದೆ. ನನ್ನ ಇಡೀ ಜೀವನ ಹಾಡಿಗೆ ತೆರೆದುಕೊಂಡಿದ್ದು. ' ಮತ್ತೆ ಮತ್ತುಳಿದವರ ಮಾತು ಬೇಡ' ಎಂಬ ಆಸಕ್ತಿಯಲ್ಲಿ ಬರೆದದ್ದು. 'ಅದೇ ನನ್ನ ಧ್ಯೇಯದಲ್ಲಿ ಜೀವನಕ್ಕೂ ಕಲೆಗೂ ಇರುವ ಅನನ್ಯತೆಯನ್ನು ದರ್ಶಿಸಿದ್ದೀರಿ' ಎಂದು ನೀವು ಅರ್ಥೈಸಿದ್ದೀರಿ. 'ನಿಮ್ಮ ಭಾಷೆ ಕವಿತೆಯಂತೆ ಬಾಳು ಕವಿತೆ ಪರಸ್ಪರ ಹೊಳಪುಗೊಂಡಿದ್ದನ್ನು ನಮ್ಮ ತಲೆಮಾರು ಬಲು ಬೆರಗಿನಿಂದ ಗೌರವದಿಂದ ನೋಡಿದೆ ಎಂದು ಅರ್ಥಪೂರ್ಣವಾಗಿ ಅರ್ಥೈಸಿದ್ದೀರಿ'. ಅದು ನಿಮ್ಮ ವಿಮರ್ಶೆಯ ಹರಿತವನ್ನು ತೋರಿಸುತ್ತದೆ. ಶಾಂತಾದೇವಿಯವರ ಮಮತೆಯ ರುಚಿ ಉಂಡವರು ನೀವು. ನೀವು 'ಹೊಸ ಮನುಷ್ಯ' ಪತ್ರಿಕೆಗಾಗಿ ಸಂದರ್ಶನ ಮಾಡುತ್ತಿರುವುದು ಹೇಗೆ ನಿಮ್ಮ ಬಾಳಿನ ಪುಣ್ಯವೋ ಹಾಗೇ ನನ್ನ ಬಾಳಿನ ಪುಣ್ಯವೂ ಹೌದು.

ಆ ಪತ್ರಿಕೆ ನಿಲ್ಲಲಿದೆ ಎಂದು ಕೇಳಿದೆ. ಅದು ನಿಲ್ಲಬಾರದು.. ಅದು ಸಮಾಜವಾದಿ ಮಾಸಪತ್ರಿಕೆ. ಅನೇಕರು ಲೇಖನಗಳನ್ನು ಅದಕ್ಕೆ ಬರೆಯುವುದೇ ಹೆಮ್ಮೆ ಎಂದುಕೊಂಡವರು.

ಸರ್, ಕಾವ್ಯವನ್ನು ಇಷ್ಟು ಹಚ್ಚಿಕೊಂಡಿರಿ. ಅದು ನಿಮಗೆ ಅಷ್ಟು ಒಲಿಯಿತು. ಈ ಗಾಢತೆಗೆ ನೀವು ಬೆಳೆದು ಬಂದ ಪರಿಸರ ಕಾರಣವೇ?

ನಾನು ಹೊಂಬಳದಲ್ಲಿ (ಧಾರವಾಡ ಜಿಲ್ಲೆ) ಹುಟ್ಟಿದರೂ ನನ್ನ ಬಾಲ್ಯವನ್ನು ಕಳೆದುದು ಶಿರುಂದದಲ್ಲಿ(ಆಗ ಗದಗ ತಾಲೂಕ ಸ್ಥಳ, ಈಗ ಜಿಲ್ಲೆ). ಈ ಗಾಢತೆಗೆ ನಾನು ಬೆಳೆದು ಬಂದ ಗ್ರಾಮೀಣ ಪರಿಸರ ಕಾರಣ.



ಅದು ಏಕೋಪಾಧ್ಯಾಯ ಶಾಲೆ. ಒಂದನೇ ಇಯತ್ತೆಯಿಂದ ನಾಲ್ಕನೆಯ ಇಯತ್ತೆಯವರೆಗೆ ಮಾತ್ರ ಅದು ಇತ್ತು. ಎಲ್ಲ ವಿಷಯಗಳನ್ನು ನಮ್ಮ ತಂದೆ ಜಾಣ್ಮೆಯಿಂದ ಕಲಿಸುತ್ತಿದ್ದರು. ಇದು ಈಗಲೂ ಆಶ್ಚರ್ಯದ ವಿಷಯ. ನಮ್ಮ ಶಾಲೆಯನ್ನು 'ಸಾಲಿಗುಡಿ' ಎಂದು ಕರೆಯುತ್ತಿದ್ದರು. ಅಂದ ಹಾಗೆ, ಹಣಮಂತ ದೇವರ ಗುಡಿಯಲ್ಲಿಯೇ ನಮ್ಮ ಶಾಲೆ ಪ್ರಾರಂಭವಾಯಿತು. ಮುಂದೆ ಬೇರೆ ಕಟ್ಟಡಕ್ಕೆ ಹೋದರೂ 'ಸಾಲಿಗುಡಿ' ಎಂದೇ ಪ್ರಸಿದ್ಧವಾಯಿತು. ಜನರೂ ಅದನ್ನು ಬಳಸುತ್ತಿದ್ದರು.

ನಮ್ಮ ಶಾಲೆಯ ಎದುರಿಗೆ ಲೋಕೋಪಯೋಗಿ ಇಲಾಖೆ ಬಾವಿಯನ್ನು ಕಟ್ಟಿಸಿದ್ದರು. ಅಲ್ಲಿ ಕಟ್ಟೆಯ ಕೆಳಗೆ ಸುತ್ತಲೂ ಹೊಲೆಯರು/ಮಾದರು ಒಂದೇ ಸಮನೆ ಬೇಡಿ ನೀರು ಹಾಕಿಸಿಕೊಳ್ಳುವ ಸ್ಥಿತಿ ಅವರದಾಗಿತ್ತು. ಯಾರು ಬಿಡುವು ದೊರೆತರೂ ತಲಾ ಒಂದು ಬಿಂದಿಗೆ ಸುರಿಯತೊಡಗಲು ಹೊಲೆಯರು ಅಷ್ಟಕ್ಕೆ ತೃಪ್ತಿ ಪಡೆಯುತ್ತಿದ್ದರು.

ಇದರ ಪ್ರಭಾವವೋ ಏನೋ ಮುಂದೆ ನನ್ನ 'ಭಾವಜೀವಿ' ಖಂಡಕಾವ್ಯದಲ್ಲಿ.

**'ಕೆರವು ಹೊಲಿಯುವ ದೀನ ದಲಿತ ಮಾದರ ದುರುಗ
ಮುಟ್ಟಬೇಡಿರಿ ತಂದೆ ಎಂಬ ನುಡಿಗೆ
ನನ್ನೆದೆಯ ಕಸಿವಿಸಿಯ ಹೇಳತೀರದು ಆಗ
ಬಾಲಕರಿಗೆಲ್ಲಿಯದು ಮಡಿಮೈಲಿಗೆ?"** ಎಂಬ ಸಾಲು ಬಂದಿರಬೇಕು.

ನಮ್ಮೂರಲ್ಲಿ ಒಕ್ಕಲಿಗರೇ ಹೆಚ್ಚಿದ್ದರೂ ಅವರ ಜೊತೆಗೆ ಕಮ್ಮಾರ, ಬಡಿಗೇರ, ಪತ್ತಾರ ಎಲ್ಲರೂ ಇರುತ್ತಿದ್ದರು. ಒಡ್ಡರ ಓಣಿಯಲ್ಲಿ ಹೆಣ್ಣುಮಕ್ಕಳು ಕುಬುಸ ಹಾಕುತ್ತಿರಲಿಲ್ಲ. ಅವರ ಆಚೆ ಹೊಲೆಯರ/ಮಾದರ ಓಣಿ. ಒಕ್ಕಲಿಗರ ದನ ಸತ್ತರೆ ಮಾದರು ಬೇಕೇಬೇಕು. ಅವರು ಅದರ ಚರ್ಮದಿಂದ ಚಪ್ಪಲಿ ಕೆರವು ಮಾಡುತ್ತಿದ್ದರು. ಊರ ಮಂದಿ ಅವನ್ನು ಕೊಳ್ಳುತ್ತಿದ್ದರು. ಗೌಡರಿಗೆ ಪುಕ್ಕಟೆ ಕೊಡುತ್ತಿದ್ದರು. ಅವರು ಇನ್ನಾವುದೇ ರೂಪದಿಂದ ಅವರಿಗೆ ಉಪಕರಿಸುತ್ತಿದ್ದರು.

ಕಟಗೇರಮ್ಮ ನಮ್ಮ ಗ್ರಾಮದೇವತೆ. ಮಂಗಳವಾರಕ್ಕೊಮ್ಮೆ ಪಲ್ಲಕ್ಕಿ ಸೇವೆ. ಅಂದು ವೀರಗಾರರ ಪದ. ಅವರು ಬಾರಿಸುತ್ತಿದ್ದ ಡೊಳ್ಳಿನ ಜೊತೆಗೆ ಹಾಡುತ್ತಿದ್ದರು. ಅವು ವೀರಗಾರರ ಪದವೆಂದು ಪ್ರಸಿದ್ಧವಾಗಿದ್ದವು.

ನಮ್ಮೂರ ಬದಿಯ ಶಿರಹಟ್ಟಿಯ ಫಕ್ಕೀರ ಸ್ವಾಮಿಯವರ ಜಾತ್ರೆ ಬಹು ವಿಜ್ರಂಭಣೆಯಿಂದ ನಡೆಯುತ್ತಿತ್ತು. ಒಂದೆಡೆ ನಗಾರಖಾನೆಯಲ್ಲಿ ಧೂಪ ದೀಪ ಬೆಳಗುತ್ತಿದ್ದರು. ಕಾಯಿ ಒಡೆದು ಮಂಗಳಾರತಿ ಮಾಡುತ್ತಿದ್ದರೆ, ಇನ್ನೊಂದೆಡೆ ಸಕ್ಕರೆ ಓದಿಸುತ್ತಿದ್ದರು.

ಅಂದು ನಾಟಕ ಕಂಪನಿ ಬರುತ್ತಿದ್ದವು. ಅದರಲ್ಲಿ ಒಂದು ಕಂಪನಿ 'ಅಕ್ಷಯಾಂಬರ' ಆಡುತ್ತಿದ್ದರು. ಮತ್ತೊಂದು ಡಿಕಂದಗಲ್ ಹನುಮಂತರಾಯರಯರದು. ಅದು 'ಬಡತನದ ಭೂತ' ಆಡುತ್ತಿದ್ದರು. ನಾಟಕ ಮುಗಿದ ಮೇಲೆ ಅಲ್ಲೇ ಥೇಟರಿನಲ್ಲೇ ಕೆಲ ಜನ ಮಲಗುತ್ತಿದ್ದರು. ಒಟ್ಟು ರಾತ್ರಿ ಹೀಗೆ ಕಳೆಯುತ್ತಿದ್ದರು.

ಮಧ್ಯಾಹ್ನ ಬಗೆ ಬಗೆಯ ತಿಂಡಿಗಳ ಅಂಗಡಿ ತೆರೆದಿರುತ್ತಿದ್ದವು. ಅದರ ಜೊತೆಗೆ ಸೋಡಾದ ಅಂಗಡಿಗಳೂ ಇರುತ್ತಿದ್ದವು.

ಚುರುಮುರಿ, ಅದರಲ್ಲಿ ಡಾಣಿ ಹಾಕಿಸಿಕೊಂಡು ಜನ ತಿನ್ನುತ್ತಿದ್ದರು. ಬೆಂಡು ಬತ್ತಾಸ ಕೂಡ. ತೇರಿನ ಮುನ್ನಾದಿನ ಕಡುಬಿನ ಕಾಳಗ, ಫಕ್ಕೀರಸ್ವಾಮಿಗಳು ಬಿಳಿಯ ಕುದುರೆಯ ಮೇಲೆ ಕುಳಿತು ಉಂಡಿಗಡಬನ್ನು ಆಚೆಗೆ ಈಚೆಗೆ ಒಗೆಯುತ್ತಿದ್ದರು.

ಮರುದಿನ ತೇರನ್ನು ಎಳೆಯುತ್ತಿದ್ದರು. ಅದರ ಮಿಣಿಯನ್ನು ಹಿಡಿದು ಎಳೆಯಲು ನಾಮೇಲು ನೀ ಮೇಲು ಎಂದು ಜನ ಮುನ್ನುಗ್ಗುತ್ತಿದ್ದರು. ತೇರಿಗೆ ಬಾಳೆಹಣ್ಣು, ಉತ್ತತ್ತಿ ಒಗೆಯುತ್ತಿದ್ದರು. ಅದನ್ನೇ ಕೆಲವರು ಪ್ರಸಾದವೆಂದು ಭಾವಿಸುತ್ತಿದ್ದರು. ಜಾತ್ರೆ ಸುಮಾರು

ಕವಿ-ಕಲಾವಿದರು ಸಾಂಸ್ಕೃತಿಕ ವಿಮರ್ಶಕರಾಗಿರಬೇಕು. ಸಾಮಾಜಿಕ ಆರೋಗ್ಯದ ಚಿಂತಕರಾಗಿರಬೇಕು. ಅದಕ್ಕೆ ನನ್ನ ಒಪ್ಪಿಗೆಯಿದೆ. ಚರಿತ್ರೆಯನ್ನು ಯಾವತ್ತೂ ಅಲಕ್ಷಿಸಬಾರದು. ಪ್ರತಿಯೊಬ್ಬ ಸಮಕಾಲೀನ ಮಹತ್ವದ ಕವಿ 'ರಾಷ್ಟ್ರಕವಿ' ಪದವಿಗೇರಬೇಕು, ಹಾಗಾದರೆ ಎಲ್ಲವೂ ಚೆನ್ನ.

ಒಂದು ತಿಂಗಳು ಜರುಗುತ್ತಿತ್ತು. ಅದಕ್ಕೆ ಪರಿಷೆಯೆಂದು ಕರೆಯುತ್ತಿದ್ದರು.

ಊರ ಮುಂದಿನ ಹಳ್ಳದಲ್ಲಿ ಎತ್ತುಗಳ ಮೈ ತೊಳೆದು ಹೊಲಸನ್ನು ತೊಳೆಯುತ್ತಿದ್ದು ಸಾಮಾನ್ಯ ದೃಶ್ಯ.

ಒಂದು ದಿನ ಗುಳು ಗುಳು ಆಡುತ್ತಲೇ ನನ್ನ ಹಣವೇ ಖರ್ಚಾಗಿತ್ತು. ಆದಿನ ಬರಿ ಚುರುಮರಿ ತಿಂದು ನೀರು ಕುಡಿದು ಹೊಟ್ಟೆ ತುಂಬಿಸಿಕೊಂಡಿದ್ದೆ. ಆ ದಿನ ಮಳೆ ಬಹಳ ಸುರಿಯಿತು. ಊರ ಮುಂದಿನ ಹಳ್ಳ ತುಂಬಿ ಹರಿಯುತ್ತಿತ್ತು. ಅಂದು ರಾತ್ರಿ ಅಂಬಾರೆಮ್ಮನ ಗುಡಿಯಲ್ಲಿ ಮಲಗಿ ಊರಿಗೆ ಹೋದೆ. ನಮ್ಮ ತಂದೆ ಸಿಟ್ಟಿಗೆದ್ದಿದ್ದರು.

ನಮ್ಮೂರ ಶಾಲೆಯ ಮಗ್ಗಲಿಗೆ ಚಹಾದಂಗಡಿಯಿತ್ತು. ಜಾತ್ರೆಗೆ ಬರುವ ಮಂದಿಗೆ ಅದು ಆಶ್ರಯಸ್ಥಾನವಾಗಿತ್ತು. ಒಂದು ಬಿಲ್ಲಿಗೆ ಒಂದು ಕಾಗದ ಪುಡಿಕೆಯಲ್ಲಿ ಬಜಿಯನ್ನು ದಾರ ಸುತ್ತಿ ಕೊಡುತ್ತಿದ್ದರು. ಅದನ್ನು ತಿಂದು ನೀರು ಕುಡಿದರೆ ಮತ್ತೇನೂ ಬೇಕು ಅನಿಸುತ್ತಿರಲಿಲ್ಲ.

ಕಾವ್ಯ ಕಲೆಯ ಸಾಂಗತ್ಯಕ್ಕೆ ಮನಸ್ಸನ್ನು ಮಾಗಿಸುತ್ತಿದ್ದ ಆ ದಿನಗಳು ಇಂದಿನ ಮಕ್ಕಳಿಗೆ ಬೇರೆ ರೂಪದಲ್ಲಾದರೂ ಸಿಗುತ್ತಿದೆ ಅನ್ನಿಸುತ್ತಿದೆಯೇ?

ಕಾವ್ಯ-ಕಲೆಯ ಸಾಂಗತ್ಯಕ್ಕೆ ಮನಸ್ಸನ್ನು ಮಾಗಿಸುತ್ತಿದ್ದ ಆ ದಿನಗಳು ಇಂದಿನ ಮಕ್ಕಳಿಗೆ ಬೇರೆ ರೂಪದಲ್ಲಾದರೂ ಸಿಗುತ್ತಿದೆ ಎಂದು ಅನ್ನಿಸುತ್ತಿಲ್ಲ. 'ನಲಿ-ಕಲಿ' ರೂಪದಲ್ಲಿ ಸಿಕ್ಕರೂ ಸಿಗಬಹುದು.

ಸಾನೆಟ್- ನಿಮ್ಮ ಪ್ರೀತಿಯ ಅಭಿವ್ಯಕ್ತಿ ಪ್ರಕಾರ. ಆದರೆ ಸರ್, ವ್ಯಕ್ತಿಚಿತ್ರ ಮತ್ತು ಸಾನೆಟ್ ಎಂಬ ಸಂಕರ ಆ ರೂಪದ ವಿಶಿಷ್ಟತೆಯೇ? ಅಥವಾ ನೀವು ಅದನ್ನು ಮಿದ್ದಿ ಹದಗೊಳಿಸಿದ್ದೇ?

ನನ್ನ ಪ್ರಥಮ ಕವನಸಂಕಲನ 'ಕಾವ್ಯಾಕ್ಷಿ'ಯಲ್ಲಿ ೧೫ ಕ್ಕೂ ಹೆಚ್ಚು ಸಾನೆಟ್‌ಗಳು ಬಂದಿವೆ. ಹೌದು; ಸಾನೆಟ್ ನನ್ನ ಪ್ರೀತಿಯ ಅಭಿವ್ಯಕ್ತಿ ಪ್ರಕಾರ. ವ್ಯಕ್ತಿಚಿತ್ರ ಮತ್ತು ಸಾನೆಟ್ ಸಂಕರ ರೂಪವೂ ಅದರ ವೈಶಿಷ್ಟ್ಯ. ಆಮೇಲೆ ಮತ್ತೆ ಅದನ್ನು ಮಿದ್ದಿ ಹದಗೊಳಿಸಿದ್ದೂ ನಿಜ. ಭಾಷೆ ನಮ್ಮ ಬೆಂಬಲಕ್ಕಿರಬೇಕು. ಭಾಷೆಯಲ್ಲಿ ಅದನ್ನು ತಿದ್ದಿ ತೀಡಬೇಕು. ಬಳ್ಳಾರಿಯ ಲೋಹಿಯಾ ಪ್ರಕಾಶನ ನನ್ನ 'ಸುನೀತ ಸಂಪುಟ'ವನ್ನು ಪ್ರಕಟಿಸಿದೆ. ಅದರ ಎರಡನೆಯ ಮುದ್ರಣ ಹೆಚ್ಚಿನ ಸಾನೆಟ್‌ಗಳನ್ನು ಹೊಂದಿದೆ. ಶ್ರೀ ಅತ್ರಿ 'ಗಾಯಕ'ರವರು ಡಾ.ಜಿ.ಎಸ್. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನನಗೆ 'ಸುನೀತ ಸಾಮ್ರಾಟ್' ಎಂದು ಬಿರುದು ಕೊಟ್ಟುದನ್ನು ಇಲ್ಲಿ ನೆನಪಿಸಬಹುದು.

ಇದಕ್ಕೆ ಚತುರ್ದಶಿ ಪದ ಎಂದು ರಾಷ್ಟ್ರಕವಿ ಗೋವಿಂದ ಪೈಯವರು ಕರೆಯುತ್ತಿದ್ದರು. ಮಾಸ್ತಿಯವರು ಸಾನೆಟ್‌ಗೆ 'ಸುನೀತ' ಎಂದು ಕರೆದರು. ಬೇಂದ್ರೆಯವರು ಅಷ್ಟಷಟ್ಪದಿ ಎಂದು ಕರೆದರು. ಮೊದಲ ಎಂಟು ಸಾಲುಗಳಲ್ಲಿ ಭಾವ ತುಂಬಿ ಬರುತ್ತಿತ್ತು. ಉಳಿದ ಆರು ಸಾಲುಗಳಲ್ಲಿ ವೈಚಾರಿಕತೆ ಮಿನುಗುತ್ತಿತ್ತು. ಕುವೆಂಪು ಅವರು 'ಕೃತ್ತಿಕೆ' ಸಂಗ್ರಹದಲ್ಲಿ ಪ್ರಾಸಗಳನ್ನು ಕಟ್ಟುನಿಟ್ಟಾಗಿ ಬಳಸುತ್ತಿದ್ದರು. ಕೊನೆಯ ಎರಡು ಸಾಲಿನಲ್ಲಿ ಸಾರವತ್ತಾದುದನ್ನು ಹೇಳುತ್ತಿದ್ದರು.

ಇವರೆಲ್ಲರ ಪ್ರಭಾವ ನನ್ನ ಮೇಲಿದೆ. 'ವಿನಾಯಕ' ಸಾನೆಟ್ಟಿನಲ್ಲಿ 'ಅದೇನದಲ್ಲ' ಅಂತ ಒಂದು ಶಬ್ದ ಬರುತ್ತದೆ. ಅದು ವಿನಾಯಕರ mannerism ಆಗಿದೆ. ಅವರ ವ್ಯಕ್ತಿತ್ವದಲ್ಲಿಯ, ಅವರ ಮಾತುಗಾರಿಕೆಯಲ್ಲಿ ಈ ವಿಶಿಷ್ಟ ಅಂಶವನ್ನು ಬಹಳ ವಿಶಿಷ್ಟವಾದ ಮತ್ತು ಉಪಯುಕ್ತವಾದ ರೀತಿಯಲ್ಲಿ ಬಳಸಿಕೊಂಡಿದ್ದೇನೆ ಎಂದು ಅನಿಸುತ್ತದೆ. ಹಾಗೆ ಅದನ್ನು ಮಿದ್ದಿ ಹದಗೊಳಿಸಿದ್ದೇನೆ.

ಉದಾಹರಣೆಗೆ 'ತುಂಬುದಿಂಗಳು' ಸಾನೆಟ್ಟಿನಲ್ಲಿ 'ಮಿಟ್ಟು ಮಿಸುಕದೆ ಇರುವ' (ನಾನು ಅಪರಿಚಿತನೆ?)ಎಂದು ಕಂಸಿನಲ್ಲಿ ಹಾಕಿ, ಬೇರೆ ಅರ್ಥಕ್ಕೆ ಎಡೆಗೊಡುವುದುಂಟು. ಕೊನೆಯ ಎರಡು ಸಾಲುಗಳಲ್ಲಿ...

'ಹಸಿವೆಯಾದರೆ ಬಂದು ತಡೆಯಲು ಒಲ್ಲ'
ಇರಬಹುದು (ಅದು ಮಾತ್ರ ನನ್ನ ಖಾತೆಯದಲ್ಲ)

ಎಂದು ವಿನೋದದಲ್ಲಿ ಬೇರೆ ಧ್ವನಿಸುವುದುಂಟು.

'ಕಾಲಾತೀತ' ಎನ್ನುವ ಸಾನೆಟ್ಟಿನಲ್ಲಿ 'ಬಿಡುವಿಲ್ಲ ಅರ್ಜಂಟು' ಎಂದು ಪ್ರಾರಂಭಿಸಿ, ಕೊನೆಯ ಸಾಲಿನಲ್ಲಿ...

'ಅಂಥ ಮನಸ್ಸಿನ ಶಾಂತಿ ಯಾರಿಗಿಹುದೋ ಕಾಣೆ'

ಎಂದು ಮುಕ್ತಾಯಿಸುವುದು ಒಂದು ಚಮತ್ಕಾರವೇ.

ಹಳಕಟ್ಟಿಯವರ ಸಾನೆಟ್ಟಿನಲ್ಲಿ ಕೊನೆಯ ಎರಡು ಸಾಲುಗಳು;



ಎರಡು ವರ್ಷಗಳ ಹಿಂದಿನ ಚಿತ್ರ, ಡಿಎಸ್ಸೆನ್-ಸವಿತಾ ಅವರಿಗೆ ಕಣವಿಯವರ ಬಿಸಿ ಚಹಾ ಉಪಚಾರ! ಚಿತ್ರ: ಎಂ. ರಾಜು, ಶಿವಮೊಗ್ಗ

'ಗೋಳಗುಮ್ಮಟ ತಾನೆ ತಲೆಬಾಗಿಸಿತು ನಿಮಗೆ
ಏಳು ಸಲ ಕರೆದರೂ ಎಚ್ಚರಾಗದು ನಮಗೆ'

ಎಂದು ನಾಡಿನ ಸ್ಥಿತಿಯನ್ನು ಸೂಚಿಸುವುದುಂಟು.

ನೀವು ಸದಾ ಸಂವೇದನಾಶೀಲತೆಯನ್ನು ಎತ್ತರಿಸಿಕೊಳ್ಳಲು ವಿಸ್ತರಿಸಿಕೊಳ್ಳಲು ತುಡಿದವರು. ಸ್ವಾತಂತ್ರ್ಯಾನಂತರದ ಭಾರತದ ಚರಿತ್ರೆಯೊಂದಿಗಿನ ಮುಖಾಮುಖಿ ನಿಮ್ಮ ಕವಿತೆಗಳಲ್ಲಿದೆ. ಅನುವಾದ ಕವಿತೆಗಳನ್ನಂತೂ ನಿಮ್ಮದೇ ಇನ್ನೊಂದು ದನಿಯಾಗಿಸಿದಿರಿ. ಕರ್ಝುಕ್ ಕವಿತೆಗಳನ್ನು, ತಮಿಳು ಕವಿತೆಗಳನ್ನು ಹೀಗೇ ಗ್ರಹಿಸಬೇಕು ಅಲ್ಲವೇ?

ಕರ್ಝುಕ್ ಕವಿತೆಗಳನ್ನು, ತಮಿಳು ಕವಿತೆಗಳನ್ನು ಹೀಗೇ ಗ್ರಹಿಸಬಹುದು.

ಸರ್, ನೀವು 'ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ' ಎಂದವರು. ಆದರೆ ಮೃದುಮಾತು ಎಂದರೆ ಅವಕಾಶವಾದಿ ಮಾತಲ್ಲ- ಎಂದು ಬಾಳಿದಿರಿ. ಮೃದುವಚನದಲ್ಲೂ ಹಕ್ಕೊತ್ತಾಯದ ತಾಕತ್ತಿದೆ ಎಂದು ಕಾಣಿಸಿದಿರಿ. ಈ ನೆಲದ ಸೌಹಾರ್ದ ಪರಂಪರೆಗೆ, ಬಹುತ್ವಕ್ಕೆ ಧಕ್ಕೆ ಒದಗಿದಾಗಲೆಲ್ಲ ಜನಚಳುವಳಿಯೊಂದಿಗೆ ನಿಂತಿದ್ದೀರಿ. ಅತ್ಯಾಚಾರ ವಿರೋಧಿ ಹೋರಾಟ, ಕನ್ನಡ ಪರ ನಿಲುವು, ಎನ್.ಆರ್.ಸಿ. ವಿರೋಧದ ಗಟ್ಟಿ ಧ್ವನಿ ನಿಮ್ಮದಾಗಿತ್ತು ಸರ್. ಚರಿತ್ರೆ ಅಲಕ್ಷಿಸಬಾರದ ಸಂಗತಿಗಳಿವು. ಸರ್, ಕವಿ-ಕಲಾವಿದರು ಸಾಂಸ್ಕೃತಿಕ ವಿಮರ್ಶಕರಾಗಿರಬೇಕು – ಸಾಮಾಜಿಕ ಆರೋಗ್ಯದ ಚಿಂತಕರಾಗಿರಬೇಕು – ಎಂಬುದಕ್ಕೆ ನಿಮ್ಮ ಅಭಿಪ್ರಾಯ ಏನು?

'ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ' 'ಮೃದು ಮಾತು' ಎಂದರೆ ಖಂಡಿತ ಅವಕಾಶವಾದಿಯಲ್ಲ. 'ಮೃದು ವಚನದಲ್ಲೂ ಹಕ್ಕೊತ್ತಾಯದ ತಾಕತ್ತಿದೆ' ಎಂದು ನೀವು ಕಾಣಿಸಿದ್ದು ಅದನ್ನು ಚೆನ್ನಾಗಿ ಗ್ರಹಿಸಿದ್ದೀರಿ ಎನ್ನುವುದಕ್ಕೆ ಸಾಕ್ಷಿ.

ಕವಿ-ಕಲಾವಿದರು ಸಾಂಸ್ಕೃತಿಕ ವಿಮರ್ಶಕರಾಗಿರಬೇಕು. ಸಾಮಾಜಿಕ ಆರೋಗ್ಯದ ಚಿಂತಕರಾಗಿರಬೇಕು. ಅದಕ್ಕೆ ನನ್ನ ಒಪ್ಪಿಗೆಯಿದೆ. ಚರಿತ್ರೆಯನ್ನು ಯಾವತ್ತೂ ಅಲಕ್ಷಿಸಬಾರದು. ಪ್ರತಿಯೊಬ್ಬ ಸಮಕಾಲೀನ ಮಹತ್ವದ ಕವಿ 'ರಾಷ್ಟ್ರಕವಿ' ಪದವಿಗೇರಬೇಕು, ಹಾಗಾದರೆ ಎಲ್ಲವೂ ಚೆನ್ನ.

ಯಾವ ಸಂದರ್ಭ ಅಂತ ಸರಿಯಾಗಿ ನೆನಪಿಲ್ಲ. ಮಹಿಳಾ ಚರಿತ್ರೆಯ ಬಗ್ಗೆ ಮಾತನಾಡುತ್ತ, ಕಿತ್ತೂರ ಚೆನ್ನಮ್ಮನ ಕುದುರೆ ಸವಾರಿ, ಯುದ್ಧ, ಕತ್ತಿವರಸೆ ಬಗ್ಗೆ ಅನುಮಾನಿಸಿದ್ದ ಷ. ಶೆಟ್ಟರ್ ಅವರ ಬರವಣಿಗೆ; ಸರ್ಕಾರ ನೇಮಿಸಿದ ಕಮಿಟಿ, ಕಿತ್ತೂರಿನ ಮನೆಯಲ್ಲಿ ಮುದುಕಿಯೊಬ್ಬರು ಆಡಿದ ಮಾತುಗಳ ಬಗ್ಗೆ ಹೇಳಿದ್ದಿರಿ. ಆ ಮಾತು ನನ್ನೊಳಗೆ ಹೊಕ್ಕಿ ಕುಳಿತಿದೆ. ನೀವದನ್ನು ಎಲ್ಲೂ ದಾಖಲಿಸಿದಂತಿಲ್ಲ. ಆ ಬಗ್ಗೆ ಹೇಳ್ತೀರಾ ಸರ್?

ಆಗ ಕುಲಪತಿಯಾಗಿದ್ದವರು ಡಾ.ಆರ್.ಸಿ. ಹಿರೇಮಠ. ಕಿತ್ತೂರ ಚೆನ್ನಮ್ಮನ ಕುದುರೆ ಸವಾರಿ, ಯುದ್ಧ, ಕತ್ತಿವರಸೆ ಬಗ್ಗೆ ಅನುಮಾನಿಸಿದವರು ಡಾ. ಷ. ಶೆಟ್ಟರವರು. ಅದಕ್ಕೊಂದು ಸಮಿತಿಯನ್ನು ವಿಶ್ವವಿದ್ಯಾಲಯ ನೇಮಿಸಿತು. ಅದು ತನ್ನ ಅಭಿಪ್ರಾಯವನ್ನು ನೇರವಾಗಿ ವಿಶ್ವವಿದ್ಯಾಲಯಕ್ಕೆ ತಿಳಿಸಲಿಲ್ಲ. ಅದು ಅಲ್ಲಿಗೇ ಮುಚ್ಚಿಹೋಯಿತು.

ಸರ್, ನವೋದಯ ಸಾಹಿತ್ಯ ಕನಸಿದ ದಾಂಪತ್ಯ ಧರ್ಮವನ್ನು ಬಾಳಿದವರು ನೀವು. ಈಗ... ಶಾಂತಾದೇವಿಯವರ ಜೊತೆಯಿಲ್ಲ. ಈ ಸಂಕಟದ ಬಗ್ಗೆ ಹೇಳುತ್ತೀರಾ ಸರ್? ಯಾಕೆಂದರೆ, ನಮಗೆ ಭ್ರಮೆಗಳಿವೆ. ನೋವು-ವಿಷಾದ ಹೆಣ್ಣನ್ನು ಗಾಢವಾಗಿ ಕಲಕುತ್ತದೆ. ಒಂದು ವಯೋಮಾನವನ್ನು ತಾಕುತ್ತದೆ. ವ್ಯಕ್ತಿ ದೊಡ್ಡವನಾದಷ್ಟೂ ನೋವು ಸಣ್ಣದಾಗುತ್ತದಾ?... ನಿಮ್ಮ ನೋವನ್ನು ಕೆದಕಲು ಅಲ್ಲ ಸರ್, ಈ ಪ್ರಪಂಚದಲ್ಲಿ ಒಬ್ಬರಲ್ಲ ಒಬ್ಬರು ಎದುರಿಸಲೇಬೇಕಾದ ವಿಷಾದಯೋಗವಲ್ಲವೇ, ಅದಕ್ಕೆ...



ಹೌದು; ನವೋದಯ ಸಾಹಿತ್ಯ ಕನಸಿದ ದಾಂಪತ್ಯ ಧರ್ಮವನ್ನು ಬಾಳಿದವರು ನಾವು. 'ರಸವೆ ಜನನ, ವಿರಸ ಮರಣ /ಸಮರಸವೇ ಜೀವನ' ಅಂದು ಬದುಕನ್ನು ನಡೆಸಿದವರು ನಾವು. ವ್ಯಕ್ತಿ ದೊಡ್ಡವನಾದಷ್ಟೂ ನೋವು ಸಣ್ಣದಾಗುವುದಿಲ್ಲ. ಹೆಂಡತಿ ಆತ್ಮಸಂಗಾತಿ ಎಂದು ಭಾವಿಸಿದವಗೆ ಹೊಂಡುವ ವಿಷಾದಯೋಗವಿದು.

ಒಟ್ಟು ಎಲ್ಲವನ್ನೂ ನೆನಸಿದರೆ ಬಹಳ ಸಂಕಟವಾಗುತ್ತದೆ. ವೈಚಾರಿಕತೆಗೆ ಎಲ್ಲೂ ನೆಲೆಯಿಲ್ಲವೆನಿಸುತ್ತದೆ.

ಹೌದು; ನವೋದಯ ಸಾಹಿತ್ಯ ಕನಸಿದ ದಾಂಪತ್ಯ ಧರ್ಮವನ್ನು ಬಾಳಿದವರು ನಾವು.

'ರಸವೆ ಜನನ, ವಿರಸ ಮರಣ

ಸಮರಸವೇ ಜೀವನ'

ಅಂದು ಬದುಕನ್ನು ನಡೆಸಿದವರು ನಾವು. ವ್ಯಕ್ತಿ ದೊಡ್ಡವನಾದಷ್ಟೂ ನೋವು ಸಣ್ಣದಾಗುವುದಿಲ್ಲ. ಹೆಂಡತಿ ಆತ್ಮಸಂಗಾತಿ ಎಂದು ಭಾವಿಸಿದವಗೆ ಹೊಂಡುವ ವಿಷಾದಯೋಗವಿದು.

ಶಾಂತಾದೇವಿ ಕಣವಿಯವರ ಯಾವ ಗುಣ, ನಿಮ್ಮ ದೃಷ್ಟಿಯಲ್ಲಿ ತುಂಬ ದೊಡ್ಡದು ಸರ್? ಅವರೆಂದೂ ಹೇಳಿಕೊಂಡವರಲ್ಲ. ಅವರ ಬಗ್ಗೆ ಹೇಳುವ ಸಂದರ್ಭವೂ ಕಡಿಮೆಯೇ ಇತ್ತು. [ಅಮೃತಾ ಪ್ರೀತಂ ಸಂಗಾತಿ ಇಮ್ರೋಜ್ ಅವರಿಗೆ ಒಮ್ಮೆ, ಎಲ್ಲ ಹುಡುಗಿಯರಿಗೂ ನಿಮ್ಮಂತ ಸಂಗಾತಿ ದೊರೆತಿದ್ದರೆ... ಎಂದು ಕೇಳಿದರಂತೆ. ಅದಕ್ಕೆ ಇಮ್ರೋಜ್ 'ಎಲ್ಲ ಹುಡುಗಿಯರೂ ಅಮೃತಾ ಅಲ್ಲ' ಎಂದು ಉತ್ತರಿಸಿದರಂತೆ. ಅಮೃತಾ ಇಲ್ಲದ ದಿನಗಳ ಮಾತುಕತೆ ಇದಾಗಿತ್ತು] ಈ ನೆನಪಿನಿಂದ ಕೇಳಿದೆ.

ಶಾಂತಾದೇವಿ ಕಣವಿಯವರ ತಾಳ್ಮೆ ಬಹಳ ದೊಡ್ಡದು. ಅಷ್ಟಿಷ್ಟಕ್ಕೇ ಅವರು ಮಣಿಯುತ್ತಿರಲಿಲ್ಲ. ಮಕ್ಕಳೆಲ್ಲರನ್ನೂ ಅಚ್ಚುಕಟ್ಟಾಗಿ, ಶಿಸ್ತಿನಿಂದ ಬೆಳೆಸಿದರು. ಎಲ್ಲರೂ ಅವರವರ ವ್ಯಕ್ತಿತ್ವಕ್ಕೆ ತಕ್ಕಂತೆ ಚೆನ್ನಾಗಿಯೇ ಬಾಳಿದ್ದಾರೆ.

ದೊಡ್ಡ ಮಗ ಶಿವಾನಂದನ ಅಂತರ್ ಜಾತಿಯ ಮದುವೆಗೆ ಎಂದೂ ಅಡ್ಡಬರಲಿಲ್ಲ. ಸ್ವತಃ ತಮ್ಮ ಅಳಿಯ ಆನಂದ (ಅಂದು) ಅಂತರ್ ಜಾತಿಯ ಮದುವೆ ಮಾಡಿಕೊಂಡ. ಅವರ ತಮ್ಮ ಲಿಂಗರಾಜ ಅಂದೂನ ತಂಗಿಯನ್ನೇ, ಕಿನ್ನರಿಯನ್ನು ಮದುವೆಯಾದ. ಅವರ ಮಗಳಂತೂ ಅಂತರ್‌ದೇಶಿಯ ಮದುವೆಯಾಗಿ ಈಗ ಸುಖವಾಗಿದ್ದಾರೆ. ಇವೆಲ್ಲವನ್ನು ಶಾಂತಾ ಒಮ್ಮೆಯೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅಂತಹ ಸಹನೆ, ಔದಾರ್ಯ ಅವಳದು.

ಧಾರವಾಡದ ನಂಟು– ನಿಮ್ಮ ಅಂತಃಸತ್ವ, ಧಾರವಾಡದ ಬಹುತ್ವವನ್ನು ಒಪ್ಪಿ–ಅಪ್ಪಿ ನಡೆದವರು ನೀವು. ಈ ಬಗ್ಗೆ ಏನಾದರೂ...

ನಾನು ಧಾರವಾಡಕ್ಕೆ ಬಂದದ್ದು ೧೯೪೧ ನೇ ಇಸವಿ. ಈಗಾಗಲೇ ೮೦ ವರ್ಷ ಸಮೀಪಿಸಿತು. ಗರಗದಿಂದ ಮುಲ್ಕೀ ಪರೀಕ್ಷೆ ಪಾಸಾಗಿ ಬಂದವನಿಗೆ ಮುರುಘಾಮಠದಲ್ಲಿ ಸಹಜವಾಗಿಯೇ ಪ್ರವೇಶ ಸಿಕ್ಕಿತು. ಆರ್.ಎಲ್.ಎಸ್. ಹಾಯ್‌ಸ್ಕೂಲಿಗೆ ಸೇರಿದೆ. ಹೆಡ್‌ಮಾಸ್ತರ್ ವೀ.ರು. ಕೊಪ್ಪಳ ಅವರು ನನಗೆ ಬಹಳ ಪ್ರೋತ್ಸಾಹಿಸಿದರು. ಸಾಹಿತ್ಯದಲ್ಲಿ ಅಭಿರುಚಿ ಹುಟ್ಟಿಸಿದರು. ಅವರು ಸ್ವತಃ ಲೇಖಕರಾಗಿದ್ದರು. ನಮ್ಮ ಕಾಲಕ್ಕೇ ಹಾಯ್‌ಸ್ಕೂಲ್ 'ಮಿಸಲೆನಿ' ಬಂತು. ಅದರಲ್ಲಿ ನನ್ನ ಕವನಗಳು, ನಗೆಬರಹಗಳು ಪ್ರಕಟವಾದವು. ಪ್ರತಿವರ್ಷ ನನ್ನ ಕವಿತೆಗಳು ಇದ್ದೇ ಇರುತ್ತಿದ್ದವು.

ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘ

ಇಂದಿನ ಯುವಕರಿಗೆ ಬೇಗ ಪ್ರಸಿದ್ಧಿಗೆ ಬರುವ ಆತುರ ಹೆಚ್ಚಾಗಿದೆ. ಸರಿಯಾದ ಅಧ್ಯಯನ ಮಾಡುತ್ತಿಲ್ಲ. ಸಂಶೋಧನೆಯಂತೂ ನಿಲುಕದ್ದು. ಪದ್ಯ–ಗದ್ಯ ಬರೆಯುತ್ತಿದ್ದಾರೆ. ಪ್ರಾಸ, ಲಯದ ಮಾತನ್ನು ಹೇಳಬೇಕಿಲ್ಲ. ಛಂದಸ್ಸನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಎಲ್ಲ ವಿಚಾರ ಸಂಕಿರಣಗಳಿಗೆ ಪ್ರಬಂಧ ಮಂಡಿಸುವ ಆತುರ.

ಬಹಳ ಪ್ರೋತ್ಸಾಹ ನೀಡಿದವು. ಬೇಂದ್ರೆಯವರ ಸಾರ್ವಜನಿಕ ಭಾಷಣವನ್ನು ನಾನು ಮೊದಲು ವಿದ್ಯಾವರ್ಧಕ ಸಂಘದಲ್ಲಿಯೇ ಕೇಳಿದ್ದು. ಆಗ ಪ್ರತಿಯೊಂದು ಸಭೆಯಲ್ಲಿ ಕಾವ್ಯಗಾಯನ (ಈಗಿನ ಸುಗಮ ಸಂಗೀತ) ಇರುತ್ತಿತ್ತು. ಬೇಂದ್ರೆಯವರು ತಮ್ಮದೇ ಆದ ಧಾಟಿಯಲ್ಲಿ 'ಪಾತರಗಿತ್ತಿ ಪಕ್ಕಾ', 'ಶ್ರಾವ'ಣಾ' ಪದ್ಯಗಳನ್ನು ಹಾಡುತ್ತಿದ್ದರು.

ಹೀಗೆ ಧಾರವಾಡದ ನಂಟು, ಅಂತಃಸತ್ವ, ಧಾರವಾಡದ ಬಹುತ್ವ ನನ್ನನ್ನು ಬಹಳ ಪ್ರಭಾವಿಸಿತು. ಮುಂದೆ ನನ್ನ ಏಳನೆಯ ಸಂಕಲನ 'ನೆಲಮುಗಿಲು' ಸಂಕಲನಕ್ಕೆ ಬೇಂದ್ರೆಯವರಿಂದಲೇ ಮುನ್ನುಡಿ ಬರೆಸಿದೆನು. ಅದರಲ್ಲಿ ಧಾರವಾಡ ತತ್ವಕ್ಕೆ ಒತ್ತು ಹಾಕಿ ಬರೆದರು.

ಮುರುಘಾಮಠದಲ್ಲಿ ಮೊಟ್ಟ ಮೊದಲಿನ ಬಾರಿ ಪಂ.ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು ಅವರ ವಚನ ಸಂಗೀತವನ್ನು ಕೇಳಿ ಸಂತೋಷಪಟ್ಟವನು. ಇದರಿಂದ ವಚನಸಾಹಿತ್ಯದ ಬಗ್ಗೆ ಒಲವು ಬಲಿಯಲು ಕಾರಣವಾಯಿತು.

ಇಂದಿನ ಸಾಹಿತ್ಯಿಕ, ಸಾಂಸ್ಕೃತಿಕ ಸ್ಥಿತಿ–ಗತಿಯ ಬಗ್ಗೆ... ಹೇಳುತ್ತೀರಾ?

ಇಂದಿನ ಸಾಹಿತ್ಯಿಕ–ಸಾಂಸ್ಕೃತಿಕ ಸ್ಥಿತಿ–ಗತಿಯ ಬಗ್ಗೆ ಹೇಳಬೇಕೆಂದರೆ, ಇಂದು ಪತ್ರಿಕೆಗಳ ಸಂಖ್ಯೆ ಹೆಚ್ಚಾಗಿದೆ. ಎಲ್ಲವೂ ಸಾಹಿತ್ಯಿಕ ಪತ್ರಿಕೆಗಳಲ್ಲ. ರಾಜಕೀಯವೂ ಅದರಲ್ಲಿ ಸೇರಿರುತ್ತದೆ.

ಇಂದಿನ ಯುವಕರಿಗೆ ಬೇಗ ಪ್ರಸಿದ್ಧಿಗೆ ಬರುವ ಆತುರ ಹೆಚ್ಚಾಗಿದೆ.ಸರಿಯಾದ ಅಧ್ಯಯನ ಮಾಡುತ್ತಿಲ್ಲ. ಸಂಶೋಧನೆಯಂತೂ ನಿಲುಕದ್ದು. ಪದ್ಯ–ಗದ್ಯ ಬರೆಯುತ್ತಿದ್ದಾರೆ. ಪ್ರಾಸ, ಲಯದ ಮಾತನ್ನು ಹೇಳಬೇಕಿಲ್ಲ. ಛಂದಸ್ಸನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಎಲ್ಲ ವಿಚಾರ ಸಂಕಿರಣಗಳಿಗೆ ಪ್ರಬಂಧ ಮಂಡಿಸುವ ಆತುರ.

ಶುದ್ಧವಾಗಿ ಕನ್ನಡವನ್ನು ಬರೆಯಲಿಕ್ಕೂ ಬರುವುದಿಲ್ಲ. ಬೆಂಗಳೂರಿನ 'ಕಂಗ್ಲಿಷ್' ಹೆಚ್ಚಾಗಿದೆ.

ಆದರೂ ಜೀವನ ನಡೆಸುವುದಕ್ಕೆ ತೊಂದರೆಯಿಲ್ಲ. ಹೇಗೂ ಜೀವನ ಸಾಗುತ್ತದೆ. 'ಆಡಾಡ್ತ ಆಯುಷ್ಯ ನೋಡ್ ನೋಡ್ತ ದಿನಮಾನ ನಡದsದ, ನಡದsದ'

ಧನ್ಯವಾದಗಳು ಸರ್

ಹೊಸ ಮನುಷ್ಯದ ದಶವಾರ್ಷಿಕ ವಿಶೇಷ ಸಂಚಿಕೆ–೨೦೨೨ರ ಎಲ್ಲ ಓದುಗರಿಗೂ ಶುಭಾಶಯುಗಳು

ಶಿಲೆಯೊಳಗಣ ಪಾವಕದಂತೆ
ಜಲದೊಳಗಣ ಪ್ರತಿಬಿಂಬದಂತೆ
ಬೀಜದೊಳಗಿನ ವೃಕ್ಷದಂತೆ,
ಶಬ್ದದೊಳಗಿನ ನಿಶ್ಶಬ್ದದಂತೆ,
ಗುಹೇಶ್ವರ ನಿಮ್ಮ ಶರಣ ಸಂಬಂಧ...
—ಅಲ್ಲಮ ಪ್ರಭು

ಪ್ರಕೃತಿಯ ಪ್ರಜ್ಞೆ, ಮಾನವೀಯ ಅಂತಃಕರಣದ ನಿನಾದ,
ವೈಚಾರಿಕ ನೆಲೆಗಳ ಖಚಿತತೆ, ಸ್ಪಷ್ಟತೆಯೊಂದಿಗೆ
ಹತ್ತುವರ್ಷ 'ಹೊಸಮನುಷ್ಯ' ನಮ್ಮನ್ನು ಮುನ್ನಡೆಸಿದ
ಅರ್ಥಪೂರ್ಣ ಸಾರ್ಥಕ ಪಯಣ.
ಓದುಗರಿಗೆ ಶುಭಾಶಯುಗಳು

ಬಿ. ಎಸ್. ದಿವಾಕರ,
ಕಾರಿಗೆನೂರು,
ದಾವಣಗೆರೆ

ಹೊಸ ಮನುಷ್ಯದ ದಶವಾರ್ಷಿಕ ವಿಶೇಷ ಸಂಚಿಕೆ–೨೦೨೨ರ
ಎಲ್ಲ ಓದುಗರಿಗೂ ಶುಭಾಶಯಗಳು



ತಾರಿಣಿ ಶುಭದಾಯಿನಿ,
ಅನನ್ಯ ಸಿರಿ,
ಸದಾಪೂರ್ಣ,
ಚಿತ್ರದುರ್ಗ

ನವಿಲುಗರಿ

ಸಂದರ್ಭಕ್ಕೆ ತಕ್ಕ ಹಾಗೆ



ವಿಧೇಯತೆಯ ಪ್ರತಿಮೂರ್ತಿ
ನಾಯಿ-
ಬೆಕ್ಕಲ್ಲ.

ನಾಯಿಗೆ ಹೊಡೆದು ನೋಡಿ-
ಕಂಯ್ ಕುಂಯ್ ರಾಗ ಹಾಡುತ್ತಾ
ಪಾದ ನೆಕ್ಕುತ್ತದೆ
ಇಲ್ಲವೇ
ಪರಾರಿಯಾಗುತ್ತದೆ
ಬಾಲ ಮಡಿಚಿ.

ಬೆಕ್ಕು ಹಾಗಲ್ಲ,
ಮಹಾ ಸ್ವಾಭಿಮಾನಿ-
ಅದಕ್ಕೂ ಒಮ್ಮೆ ಹೊಡೆದು ನೋಡಿ-
ಹಿಂದಿರುಗಿ,
ಕೆಕ್ಕರಿಸಿ ನೋಡಿ
ಮ್ಯಾಂವ್ ಎಂದು ಕರ್ಕಶ ಸ್ವರ ಹೊರಡಿಸಿ
ರೋಮ ನಿಗುರಿಸಿ
ಗುರುಗುಟ್ಟುತ್ತದೆ.ಕೆಲವೊಮ್ಮೆ
ಹಾರಿ,ಪರಚುತ್ತದೆ
ದಯೆ ದಾಕ್ಷಿಣ್ಯವಿಲ್ಲದೆ.

ಈ ಮನುಷ್ಯ ಮಾತ್ರ ಆ
ಇಬ್ಬರ ಹಾಗೂ ಇರದೆ ಆ
ಎರಡೂ ಗುಣಗಳನ್ನು
ಮೈಗೂಡಿಸಿಕೊಂಡಿದ್ದಾನೆ:

ಸೋಲಿನ ಸಮಯ
ನಾಯಿಯಂತೆ
ಗೆಲುವಿನ ಸಮಯ
ಬೆಕ್ಕಿನಂತೆ
ಬದಲಾಗುತ್ತ
ಸಂದರ್ಭಕ್ಕೆ ತಕ್ಕ ಹಾಗೆ!

-ಸುಬ್ರಾಯ ಚೊಕ್ಕಾಡಿ




ಹವಾ ಬದಲಾಗಿದ್ದರೆ....

ಸಿಹಿನೀರ ಬಾವಿಗಳ ಮುಟ್ಟಲಿಲ್ಲ
ಸ್ನಾನ ಘಟ್ಟಗಳಲ್ಲಿ ಮೀಯಲಿಲ್ಲ
ಸೋಪಾನಗಳಲ್ಲಿ ಕೂರಲಿಲ್ಲ

ಮರಮುಟ್ಟು-ಇಟ್ಟಿಗೆ
ಮರಳು-ಕಲ್ಲು ಬಳಸಿ ಮನೆ
ಕಟ್ಟಿಕೊಳ್ಳಲೂ ಇಲ್ಲ !
ಉತ್ತಿ-ಬಿತ್ತಿ ಬೆಳೆದ
ಹೊಲ-ಗದ್ದೆಗಳು ನಮ್ಮವಲ್ಲ
ರಸ್ತೆ-ಸೇತುವೆಗಳು, ಶಾಲೆ, ಆಸ್ಪತ್ರೆ,
ಗುಡಿ-ಗುಂಡಾರಗಳ ಬಳಿ ಸುಳಿಯಲಿಲ್ಲ

ಕಾರು ರೈಲು ವಿಮಾನಗಳ ಕಂಡಿಲ್ಲ
ಕಸಕಡ್ಡಿ ಗುಡಿಸಿ ಬಳಿದು ಬಾಚಿ
ಒಪ್ಪ ಮಾಡಿರುವೆವು...
ವಿನಹ ತಂದು ಸುರಿದಿಲ್ಲ!





ಝಗಮಗಿಸುವ ರಾಜಬೀದಿಗಳನ್ನು
ನಮ್ಮ ಬೆವರಿನಿಂದಲೇ ತೊಳೆದು
ಮಡಿ ಮಾಡಿದರೂ ದೀಪವ ಕಾಣಲಿಲ್ಲ!

ಹವಾ ಬದಲಾಗಿದೆಯಂತೆ....
ತಾಪಮಾನ ಏರಿದೆಯಂತೆ !
ಅಕಾಲದಲ್ಲಿ ಮಳೆ-ಹೊಳೆ
ಬೆಳೆ-ಬದುಕು ನೀರು ಪಾಲಾಗಿದೆಯಂತೆ
ಇದಕ್ಕೆ ನಮ್ಮ ಕೊಡುಗೆಯೇನೂ ಇಲ್ಲ!



ಚಳಿಗಾಳಿ ಮಳೆ ಬಿಸಿಲ
ಹಾಸಿ ಹೊದ್ದು ಮಲಗುವ ನಮಗೆ
ಬಿರುಗಾಳಿ ಎತ್ತಿಕೊಂಡು ಹೋದರೂ
ನೆರೆಯಲ್ಲಿ ಕೊಚ್ಚಿಕೊಂಡು ಹೋದರೂ
ಹಹ್ಹಾ! ಪರವಾಗಿಲ್ಲ...

-ಸವಿತಾ ನಾಗಭೂಷಣ

ವಾರದಾಗ ಮೂರು ಸರತಿ ಬರುವವನೆ

ಕಿತ್ತುಕೊಂಡು ಓಡುವುದರಲ್ಲೇ
ಇರುತ್ತಾನೆ ಹುಬ್ಬಳ್ಳಿಯಾಂವಾ
ವಾರ ವಾರ ಬಂದರೂ
ವಾರದಾಗ ಮೂರು ಮೂರು ಬಾರಿ
ಐತಂದರೂ ಕಮ್ಮಿ

ಏನೋ ಓರೆಕೋರೆ
ಸೀರೆ ಕೊಡವಿ ಗಳದ ಮೇಲೆ ಹರವಿ
ಅವಲಕ್ಕಿ ಚೂಡಾ ಮಾಡಿ ಅಣಿಯಿಟ್ಟು
ಕಾದಿರುವುದಕ್ಕೆ ಅವನೇನು.. ..

ಕೇದಿಗೆಯ ಸುವಾಸನೆ ಮುಡಿ
ಅರೆನೆರೆತ ತುರುಬಿನ ಸುತ್ತ
ಕರಿಬಿಳಿ ಪಟ್ಟೆ
ಎಲಿಗೆ ಹಚ್ಚಿ ಮಿಕ್ಕಿದ ಸುಣ್ಣ ಸವರಿದ ಗೋಡೆ


ಸೆಖೆಗೆ ಬೆವೆತು ಸೆರಗಲಿ ಗಾಳಿ ಹಾಕಿ
ಬಾರಿಷ್‌ಗೆ ಕಾದಿದ್ದೇ ಬಂತು
ಕಾಲಬುಡ ನೆಕ್ಕುವ ಕಾಮಿ
ಹಾಲಿನ ಬಟ್ಟಲತ್ತ ನೋಡಿ ನೋಡಿ
ನಾಲಗೆ ಸವರಿ

ಬೇಸಿಗೆ ಕಳೆದರೆ

ಮಕ್ಕಳ ಸ್ಕೂಲಿನದೆ ಚಿಂತೆ
ಒಬಿಸಿ, ಅಲೆಮಾರು ಕಾಲಮ್ಮು
ಸ್ಕಾಲರ್‌ಶಿಪ್ಪಿಗೆ ಅರ್ಜಿ....

ಹಗಲು ರಾತ್ರಿ ಬಿಡದಂತೆ
ಜಗಮಗ ಜಗಮಗ ಸೀರಿಯಲ್ಲು
ಕಣ್ಣು ಕುಕ್ಕುವ ವೈಭವಕ್ಕೆ ಎವೆ ಸೋತು
ತೂಕಡಿಸಿದರೆ, ಬಾಗಿಲ ಮುಂದೆ ಕಾಲಿಂಗ್
ಬೆಲ್ಲು, ಧಡ ಧಡನೆ ಹೊರಗೋಡಿದರೆ
ಗಾಳಿಗಂಧದ ಸುಳಿವಿಲ್ಲ

ಪೆಟ್ರೋಲು ಚೆಲ್ಲಿ ಕೆಮ್ಮುತ್ತಾ ಹೋದ ಕಾರು
ರೊಯ್ಯನೆ ಸುಯ್ಯುವ ಬೈಕು.
ವಾರದಾಗೆ ಬರಬೇಕಿತ್ತಲ್ಲ
ಮೂರು ಮೂರು ಸರತಿ
ಮುದ್ದುನೀಡಿ ಹೋಗಬೇಕಿತ್ತಲ್ಲ
ಎಲ್ಲಿ ಹೋದ್ಯೊ ಗೆಣೆಯಾ?



-ಆರ್. ತಾರಿಣಿ ಶುಭದಾಯಿನಿ

ನಾನು ನಗುವುದಿಲ್ಲ



ದೇವರಂಥ ಮಗು
ದೇವಳದ ಒಳಕ್ಕೆ ಹೋಯ್ತು
ಮಗುವಿನ ದರ್ಶನ ಪಡೆದ ದೇವರು
ಕಲ್ಲಾಗಿ ಕೂತಿರಬಹುದು?

ದೇವರಿಗೆ ಬೇಡವಾದವರೂ
ದಂಡ ಕಟ್ಟಿಸಿದ್ದರೂ ಮಗುವಿಗೆ,
'ಅವಮಾನ' ಗೊತ್ತಿಲ್ಲದ ಮಗು
ಮಗುವಿನಂತೆ, ಆಟವಾಡುತಿತ್ತು.

ಕೇಳಿದ ನನ್ನಂತಹ ಮೂರ್ಖನಿಗೆ
ಸಿಟ್ಟು ಮೈಗೇರಿ ರೊಚ್ಚಿಗೇಳುವ ಮುನ್ನ
ನನ್ನ ನೋಡಿ ನಗುತಿತ್ತು ಅಸ್ಪೃಶ್ಯತೆ
ಹೀಗೆ ಇನ್ನೆಷ್ಟು ದಿನ ನರ್ತಿಸುತ್ತೀಯ
ವರ್ತಿಸುತ್ತೀಯ ಕೂಲ್ಲೂಸುತ್ತೀಯ
ತೊಲಗಾಚೆಗೆ...

ಬೇಕಾದರೆ ಪ್ರಾರ್ಥಿಸುತೇನೆ ಮಂಡಿಯೂರಿ
ಈಗ ತಾನೇ ಅರಳಿ ನಗುತಿದ್ದ ಹೂವು ಕಿತ್ತು,
ನೀನು ಎಲ್ಲೆಲ್ಲಿ ಅಲೆಯುತ್ತೀಯ, ನಲಿಯುತ್ತೀಯ,
ಕೊಳೆಯುತ್ತೀಯ, ಹೊಳೆಯುತ್ತೀಯ?
ಅವರಿಗೆಲ್ಲ ಕೊಟ್ಟು ಹೋಗು.

ಇನ್ನಷ್ಟು ಕ್ರೂರವಾಗಿ ನಕ್ಕ ಅಸ್ಪೃಶ್ಯತೆ,
ನೀನೆ ಕೊಟ್ಟ ಹೂವುಯೆಂದು ತಿಳಿದರೆ,
ಲೋಕಾರ್ಥ ತಿಳಿದವರು ಸ್ವೀಕರಿಸುವುದಿಲ್ಲವೆಂದು
ಎಸೆದುಹೋಯಿತು.....

ತಂಗಾಳಿಯಲ್ಲೂ ಕೇಳಿಸುತ್ತಿದೆ, ಈಗಲೂ,
ಪ್ರಾಜ್ಞರು, ಪಂಡಿತರು, ಮತ್ತು–
–ಎಂಥಂತವರ ದನಿಯಲ್ಲೂ
ಇನ್ನೂ ಇದೆಯ ಅಸ್ಪೃಶ್ಯತೆ? ಶುದ್ಧ ಕನ್ನಡದಲ್ಲಿ
ಆದಿಕರ್ನಾಟಕ ನಾನು
ನಗುವುದಿಲ್ಲ

–ಸುಬ್ಬು ಹೊಲೆಯಾರ್




ಕಳಚುವ ಪರಿ

ನೀನಿರದ ನೀರವ ರಾತ್ರಿಗಳಲಿ
ಎಲೆ ಕಳಚುವ ಮರ್ಮರ
ಕೇಳುತ್ತಿದೆ ಆತ್ಮದ ಮೊರೆಯಂತೆ.


ಹೊರಗೆ ಸುರಿಯುತ್ತಿದೆ ತಣ್ಣಗೆ
ಬೆಳುದಿಂಗಳು.
ಚಿತ್ತಭಿತ್ತಿಯ ಮೇಲೆ
ಸದ್ದಿಲ್ಲದೆ ಸರಿದ
ನಿನ್ನದೇ ನೆರಳು
ಸುಳಿದಾಡಿದೆ ಸುಷುಪ್ತಿಯೊಳಗೂ

ಮಧ್ಯರಾತ್ರಿ ಎದ್ದು ಹೋದವನ
ಕಳ್ಳಹೆಜ್ಜೆಗಳ ಉಲಿಯೂ
ಕಿವಿದೆರೆಗಳ ದಾಟಿ ಒಳಗಿಳಿದಿದೆ.
ತಳಮಳದ ತಳವೊಡೆದು
ನೋವಿನ ಆಲಾಪಗಳು ಹೆದ್ದೆರೆಗಳಾಗಿ
ಎದ್ದೆದ್ದು ಅಪ್ಪಳಿಸುತಿವೆ.

ಕತ್ತಲಲಿ ಕೂಡುವುದು
ಬೆಳಕಿಗೆ ಬೇರಾಗುವುದು
ದ್ವೈತ ಅದ್ವೈತಗಳ
ಪದ ಬಂಧದಾಚೆ



ಚಿತ್ರಗಳು: **ವಿಜಯಶ್ರೀ ಹಾಲಾಡಿ**



ಅರ್ಥದ ಸರಳು ದಾಟಿ
ಹಬ್ಬುತಿದೆ ಹಂಬಲದ ಹಾಡೊಂದು
ನಾಭಿಮೂಲದಲಿ ಮೊಳೆತು.

ಒಮ್ಮೆ ಝಾಡಿಸು
ಬೇರ್ಪಡುವ ವಿಹ್ವಲತೆಗೆ
ಮೈಯಾಗಬೇಕಿದೆ ನಾನು
ಕಿತ್ತುಕೊಡು ನಿನ್ನ ಬೆನ್ನಿಗಂಟಿದ
ನನ್ನ ಕಣ್ಣು
ನನ್ನದೇ ಬೆಳಕ ನಾ ನೋಡಲು.



ಯಾವ ಸ್ನಾನ
ಯಾವ ಧ್ಯಾನ
ಕಲಿಸೀತು ನಿನ್ನ ಕಳಚುವ ಪರಿಯ
ಹೇಳು ಹೇ ಕಳಚಿಕೊಂಡವನೇ
ಬೆತ್ತಲಾಗಬೇಕಿದೆ ನಾನು
ನೀನಿಲ್ಲದೆಯೂ.

–ಗೀತಾ ವಸಂತ.

ಕೆರೆಯ ದಡದ ಮೇಲೆ

ಸದ್ದಿಲ್ಲದೆ ಹುಟ್ಟುತ್ತಾನೆ ಸೂರ್ಯ

ನಿಶಬ್ದದಲಿ ಬಿಸುತ್ತದೆ ಗಾಳಿ
ಮೌನದಿ ಮುಸುಕುವುದು ಮುಸ್ಸಂಜೆ
...ಮತ್ತೀಗ ಅನಾಮತ್ತು ಆವರಿಸುತ್ತಿದೆ
ಬೇರ ಪರಿಮಳ

ಯಾವ ಪರಿಮಳ ಇದು?
ನೂರು ಹೂವು, ಸಾವಿರ ತೊಗಟೆ,
ಅಸಂಖ್ಯ ಬೇರುಗಳ
ಕಂಪು ಬೆರೆತ ದಿವ್ಯ!

ಕೆರೆ ದಡದ ಹೊಂಗೆ ತೊಂಗಲಲ್ಲಿ
ಸಂಭ್ರಮದ ಜೇನುಹುಟ್ಟು,
ಪರಮ ಸುಖದಲಿ ತೊನೆಯುತ್ತಿದೆ
ಹೂಗೊಂಚಲು,
ವಸಂತ ಈ ಭೂಮಿಯದ್ದೇ ಸ್ವತ್ತು
ಅನ್ನುವ
ಲೋಕದ ತುಂಬು ಪ್ರೀತಿ

ಪರಿಪಾಲಿಸುವ ಶಕ್ತಿ ಇದೆ ಇಲ್ಲೆಲ್ಲ
ಕೆರೆಯ ಉದ್ದಗಲ ಈಸಾಡುತ್ತಿದೆ
ಪುರಾತನ ಒರತೆ
ಬಗೆಬಗೆಯ ಬೇರುಗಳ ಸುಗಂಧವ
ಒಡಲಿಗೆ ಹಚ್ಚಿಕೊಂಡು

ಅಗೋ!
ನೀರ ಮೇಲೆ ಕೃಷ್ಣ ತುಳಸಿಯ ಕುಡಿ!
ಎಲ್ಲಿಂದ ತೇಲಿ ಬಂತದು?
ಅದು ಅಲ್ಲೇ, ತಾನಿದ್ದಲ್ಲೇ
ಉದ್ಭವಿಸಿತೊ?
ಆಡಿಸುತ್ತಿದೆ ಹೇಗೆ ಪುಟ್ಟ ತುಳಸಿ
ಚಿಗುರೊಂದು
ನೀರ ತರಂಗಗಳ!
ಅಗೋ ಅಗೋ!
ಹೇಗೆ ಸೇರಿಕೊಳ್ಳುತ್ತಿದೆ ಆ ಕುಡಿ
ಬರಹಣೆ, ಬೋಳು ಕೈಯ ಪುಟ್ಟ
ಹುಡುಗಿ
ಮೊಗೆಯುತ್ತಿರುವ ಬಿಂದಿಗೆಯೊಳಗೆ



–ಜ.ನಾ. ತೇಜಶ್ರೀ

*

ಸಣ್ಣ ಕಥೆ

ಸಬ್ಬಸಗಿ ಅವಲಕ್ಕಿ

–ಜಯಂತ ಕಾಯ್ಕಿಣಿ

ರೇಖಾ ಚಿತ್ರಗಳು: ರಾವ್‌ಬೈಲ್



ಮದುವೆಗಿನ್ನೂ ಮೂರು ತಿಂಗಳು ಇರುವಾಗಲೇ ವಿವಾಹಪೂರ್ವ ಶೂಟಿಂಗ್ (ಪ್ರಿವೆಡ್ಡಿಂಗ್ ಶೂಟ್) ಕುರಿತು ಮದುಮಕ್ಕಳಿಬ್ಬರೂ ಎಂದಿಲ್ಲದ ತುರ್ತಿನಿಂದ ಛಾಯಾಗ್ರಾಹಕ ಬಿರ್ಜು ಜೊತೆ ಮಾತುಕತೆಗೆ ತೊಡಗಿದರು. ಮದುವೆ ಮುಂಚೆ ಮದುಮಕ್ಕಳ ಒಡನಾಟದ ಸುಂದರ ಛಾಯಾಚಿತ್ರಗಳ ಚಿತ್ರೀಕರಣ ಇದು. ಮೊದಲು ಸುಂದರ ವಸ್ತ್ರವಿನ್ಯಾಸಗಳಲ್ಲಿ ಸುಂದರ ಹೊರಾಂಗಣದಲ್ಲಿ ಕೇವಲ ಛಾಯಾಚಿತ್ರದ ಕಾರ್ಯಕ್ರಮ ಇದಾಗಿತ್ತು. ಈಚಿನ ವರ್ಷಗಳಲ್ಲಿ ಜಿದ್ದಿನಿಂದ ಅದು ವಿಡಿಯೋ ಚಿತ್ರೀಕರಣಕ್ಕೆ ತೇರ್ಗಡೆ ಹೊಂದಿದೆ. ಮಳೆಗಾಲ ಮುಗಿದಿದ್ದರೂ ಎಷ್ಟೋ ಪ್ರದೇಶಗಳಲ್ಲಿ ಅಕಾಲಿಕ ಮಳೆ ಇನ್ನೂ ಬರುತ್ತಲೇ ಇದ್ದಿದ್ದರಿಂದ ಮಡಿಕೇರಿ, ಊಟಿ, ಶ್ರೀರಂಗಪಟ್ಟಣ, ಸಾಗರ, ಜೋಗ ಇತ್ಯಾದಿ ಹೊರಾಂಗಣಗಳಿಗೆ ಹೋಗುವುದು ರಿಸ್ಕಿ ಅಂತ ಬಿರ್ಜು ಹೇಳಿದರೆ.. "ಮಳೆಯಲ್ಲಿ ಹಸಿರು ಇನ್ನೂ ಚೆನ್ನಾಗಿರುತ್ತದೆ" ಎಂದು ಮದುಮಕ್ಕಳು ಪರಸ್ಪರ ನೋಡಿಕೊಂಡು ಮಾತಾಡುತ್ತಿದ್ದರು. "ನನಗೇನಿಲ್ಲ, ನೀವು ಹೇಳಿ. ಮಳೆ ಜಾಸ್ತಿ ಬಂದರೆ ಸುಮ್ಮನೆ ದುಡ್ಡು, ಯೂನಿಟ್ ಬಾಡಿಗೆ ಎಲ್ಲ ವೇಸ್ಟ್ ಆಗ್ತದೆ" – ಎಂದು ಬಿರ್ಜು ನಿರ್ವಿಕಾರವಾದ ವ್ಯಾವಹಾರಿಕ ದನಿಯಲ್ಲಿ ಹೇಳಿದಾಗ ಮದುಮಗ "ಜೀವನದಲ್ಲಿ ಒಂದೇ ಸಲ ಆಗೋದು ಇದೆಲ್ಲ" – ಎಂದ ನಸುನಗುತ್ತ. ಬಿರ್ಜು ಮನಸಲ್ಲೇ "ಮಗನೇ ನಮಗೆ ಎರಡು ದಿನಕ್ಕೊಂದು ಶೂಟಿಂಗ್ ಕಸುಬು ಇದು" – ಅಂದುಕೊಂಡ. ತನ್ನ ದೊಡ್ಡ ಟಿವಿ ತೆರೆಯಲ್ಲಿ ಈ ಮುಂಚಿನ ತನ್ನ ಬೇರೆ ಬೇರೆ ಜೋಡಿಗಳ ಬೇರೆ ಬೇರೆ ಹೊರಾಂಗಣದ ಚೂರುಗಳನ್ನು ತೋರಿಸತೊಡಗಿದ. ಆಗ್ರಾ, ಕಾಶ್ಮೀರ, ಮಹಾಬಲೇಶ್ವರ, ಜೈಪುರ, ಗಂಗಾತೀರ, ಕಲಕತ್ತಾಗಳ ದೃಶ್ಯಗಳು ರಮ್ಯ ಕನಸಿನಂತೆ ತೋರುತ್ತಿದ್ದವು. ಅದರಲ್ಲಿನ ಮದುಮಕ್ಕಳು ತಮ್ಮ ಬಣ್ಣಬಣ್ಣದ ವಿಶೇಷ ಕಾಸ್ಟ್ಯೂಮ್‌ಗಳಲ್ಲಿ ಸಿನೆಮಾ ತಾರೆಗಳಂತೆ ತೋರುತ್ತಿದ್ದರು. ಅವರ ಹಾವಭಾವಗಳೂ ಹಿನ್ನೆಲೆಯಲ್ಲಿ ಬಳಸಿದ ಚಿತ್ರಗೀತೆಗಳಿಗೆ ಅನುಗುಣವಾಗಿಯೇ ಇರುತ್ತಿದ್ದವು. ಕೆಲವರ ಆಂಗಿಕದಲ್ಲಿ ಮೊದಲ ಸಲದ ಮುಜುಗರ ಕಂಡರೆ, ಕೆಲವರ ಸುಪ್ತ ಬೆಳ್ಳಿತೆರೆಯ ಕನಸು 'ಇದೇ ಚಾನ್ಸು' ಎಂಬಂತೆ ಅಂಗೋಪಾಂಗಗಳಲ್ಲಿ ಹೊರ ಹೊಮ್ಮುತ್ತಿತ್ತು. ಮದುಮಗನು ಎರಡೂ ಕೈಗಳನ್ನು ಎನ್.ಸಿ.ಸಿ. ಕವಾಯತಿನಂತೆ ಭೂಮಿಗೆ ಸಮಾಂತರವಾಗಿ ಚಾಚಿದರೆ, ಮದುಮಗಳು ಜೊಂಪೆ ಜೊಂಪೆ ಹೂಬಿಟ್ಟ ಬಳ್ಳಿಗಳನ್ನು ಸವರುತ್ತ ಕ್ಯಾಮೆರಾದೆಡೆ ನೋಡಿ ನಸುನಗುತ್ತಿದ್ದಳು. ಅವರವರ ಆಯ್ಕೆಯ ಹಿಂದಿ ಅಥವಾ ಕನ್ನಡದ ಹಳೆ ಹೊಸ ಚಿತ್ರಗೀತೆಗಳು ಹಿನ್ನೆಲೆಯಲ್ಲಿ ನುಡಿಸಲ್ಪಟ್ಟಾಗ ಜೀವನವೇ ಸಿನೆಮಾ ಆದಂತೆ ವಿಚಿತ್ರ ಸಂಭ್ರಮದ ಭಾಸ. ಜತೆಗಿರುವುದು ಹೊಸ ಸಂಗಾತಿಯೋ ಅಥವಾ ಆ ಹಾಡಿನ ಮೂಲ ಚಿತ್ರದ ತಾರೆಯೋ ಎಂದು ಸ್ವತಃ ಮದುಮಕ್ಕಳಿಗೇ ಸುಂದರ ಭ್ರಾಂತಿ ಆಗುತ್ತಿರುವಂತೆ ತೋರುತ್ತಿತ್ತು. ಭಾವೀ ವಧು ಅಥವಾ ವರನನ್ನೇ ತಾತ್ಕಾಲಿಕವಾಗಿ ಮರೆಸುವಂಥ ಮಾಯೆ. ಸುಮಾರು ಹೊತ್ತು ಈ ಅನ್ಯ ವಿಡಿಯೋಗಳನ್ನು ನೋಡಿದ ನಂತರ ಬಿರ್ಜು – "ನೀವು ನಿರ್ಧಾರ ಮಾಡಿ ಬೇಗ ಹೇಳಿ. ಬೇಕಿದ್ದರೆ ವಿದೇಶಕ್ಕೂ ಹೋಗಬಹುದು" – ಎಂದಾಗ, ಮದುಮಕ್ಕಳಿಬ್ಬರೂ ಏಕಕಾಲಕ್ಕೆ "ಬೇಡ ಬೇಡ.. ಮದುವೆಗೇ ಲೋನ್ ತಗೊಂಡಿದೀವಿ. ಇಲ್ಲೇ ಕರಾವಳಿಗೋ ಮಲೆನಾಡಿಗೋ ಹೋಗೋಣ" ಎಂದರು. ನಂತರ ಮದುಮಗ "ಆಗುಂಬೆ ಹೇಗೆ. ಸೂರ್ಯಾಸ್ತ ಚೆನ್ನಾಗಿರತ್ತಲ್ಲ ಅಲ್ಲಿ?" ಎಂದ. ಅದಕ್ಕೆ ಮದುಮಗಳು – "ಛೆ ಛೆ ವೆಡ್ಡಿಂಗ್ ಶೂಟ್‌ಲ್ಲಿ ಸೂರ್ಯಾಸ್ತ ಚೆನ್ನಾಗಿರಲ್ಲ" ಎಂದಳು. ಅದಕ್ಕೆ ಬಿರ್ಜು "ಅದೇನೂ ಸಮಸ್ಯೆಯಿಲ್ಲ, ರಿವರ್ಸ್ ಮಾಡಿ ಅದನ್ನು ಬೇಕಾದ ಹಾಗೆ ಸೂರ್ಯೋದಯ ಮಾಡಬಹುದು ಬಿಡಿ" – ಎಂದ. ತಮ್ಮ ತಮ್ಮ ಮನೆಗೆ ಬಂದು ಈ ಭಾವೀ ಮದುಮಕ್ಕಳು ಖಾಸಗಿಯಾಗಿ ತಮ್ಮ ತಮ್ಮ ಮೊಬೈಲಿನಲ್ಲಿ ತಮ್ಮ ಇಷ್ಟದ ಬೇರೆ ಬೇರೆ ಹಾಡುಗಳನ್ನೆಲ್ಲ ನೋಡತೊಡಗಿದರು. ಈ ಒಂದು ಹೊಸ ಅಗತ್ಯದ ಸಂದರ್ಭದಿಂದಾಗಿ ಆ ಹಾಡುಗಳು ಕೊಡುವ ಅನುಭವವೇ ಭಿನ್ನವಾಗತೊಡಗಿತು. ವಧು ಹಾಡಿನ ನಾಯಕಿಯೊಂದಿಗೆ ಸಂಪೂರ್ಣ ತಾದಾತ್ಮ್ಯ ಸಾಧಿಸಿದಷ್ಟೂ ವರನಿಂದ ದೂರವಾಗತೊಡಗಿದಳು. ಇಷ್ಟೇ ಅಲ್ಲ ಅವಳಿಗೆ ಆ ಹಾಡಿನಲ್ಲಿ ತನ್ನನ್ನು ಬಿಟ್ಟರೆ ಉಳಿದಿದ್ದೆಲ್ಲವೂ ಮಾಯವಾಗತೊಡಗಿತು. ನಾಯಕಿಯ ಉಡುಪು, ಲಾಸ್ಯ, ಲಾವಣ್ಯ, ಲಯಬದ್ಧ ಹಾವಭಾವ ಎಲ್ಲದರಿಂದಲೂ ಮೂಡಿಬರುತ್ತಿದ್ದ ಒಂದು ಹೊಸ ಭೂಮಿಕೆ ಕನ್ನಡಿಯೊಳಗಿನ ಸುಗಂಧಿತ ಸ್ವಪ್ನದ ಗಂಟಿನಂತೆ ಸೆಳೆಯತೊಡಗಿತು. ಅತ್ತ ಅವನ ಖಾಸಗಿ ಮೂಲೆಯಲ್ಲಿ ಭಾವೀ ವರನಿಗೂ ಇದೇ ಆಗತೊಡಗಿತು. ಅಂದರೆ ಹಿಂದೆಲ್ಲ ಕೇವಲ ಬೆಳ್ಳಿ ತೆರೆಯ ಲೋಕದವರದೇ ಸೊತ್ತು ಅಂದುಕೊಂಡಿದ್ದ ದರ್ಶನೀಯ ಸಂತಸವೊಂದು ಈಗ ನಮ್ಮ ನಮ್ಮ ಬಜೆಟ್‌ಗೆ, ಅಂದಕ್ಕೆ, ಉಮೇದಿಗೆ ಅನುಗುಣವಾಗಿ ಲಭ್ಯವಾಗುತ್ತಿದೆಯಲ್ಲ ಎಂಬ ಅಚ್ಚರಿಯೇ ವಿಶೇಷವಾಗಿತ್ತು. ಹೀರೋ ಜಾಗದಲ್ಲಿ ಕ್ರಮೇಣ ತಾನೇ ವಿಲೀನಗೊಂಡ ಮೇಲೆ ಹೀರೋಯಿಣಿಯ ಬೆಡಗಿನ ಮುಂದೆ ತನ್ನ ಭಾವೀ ವಧುವಿನ ಬಿಂಬ ತಾಳೆಯಾಗದೆ ಸಪ್ಪೆ ಅನಿಸತೊಡಗಿತು. ಹೀರೋಯಿಣಿ ತನ್ನ ಪ್ರೀತಿಯಷ್ಟೇ ಕೋಮಲವಾದ ದಾವಣಿಯಿಂದ ಅವನ ಹಣೆಯ ಬೆವರನ್ನು ಮೃದುವಾಗಿ ಒತ್ತಿ ಒತ್ತಿ ಒರೆಸುತ್ತಿದ್ದಳು. ರೆಪ್ಪೆಗೆ ಹೂ ಮುತ್ತನಿಟ್ಟು ಕನಸಿಗೆ ಕಾವು ಕೊಡುತ್ತಿದ್ದಳು. ಇಲ್ಲಿ ಹೀಗಾದರೆ ಅಲ್ಲಿ ವಧುವಿನ ಮನೆಯಲ್ಲಿ ಹೀರೋ ಅವಳನ್ನು ಎತ್ತಿಕೊಂಡೇ ಆಕಾಶದ ನೀಲಿ ಮೆಟ್ಟಿಲುಗಳನ್ನು ಏರುತ್ತಿದ್ದನು. ಅಥವಾ ಮಂಜಿನ ಮೋಡಗಳಂತೆ ಸರೋವರದಲ್ಲಿ ತೇಲುತ್ತಿರುವ ಶಿಕಾರಾ ದೋಣಿಯಲ್ಲಿ ಅವಳನ್ನು ತೊಡೆಯ ಮೇಲೆ ಮಲಗಿಸಿ ತನ್ನ ಸ್ವೆಟರನ್ನು ಅವಳಿಗೆ ಹೊದೆಸಿ ತಟ್ಟುತ್ತ ಹಾಡುತ್ತಿದ್ದನು. ಆಗ ಅವನ ಹೊಟ್ಟೆಗೆ ಅಂಟಿದ ಅವಳ ಕಿವಿಗೆ ಗುರುಗುರು ಚುಳ್ ಸದ್ದಿನ ಬದಲಿಗೆ ಸಂತೂರಿನ ದಿವ್ಯ ಸಂಗೀತ ಕೇಳುತ್ತಿತ್ತು. ಚಳಿ ಕಾಯಿಸಲು ದೋಣಿಗಾರರು ದಂಡೆಯುದ್ದಕ್ಕೂ ಗುಂಪಾಗಿ ಅಲ್ಲಲ್ಲಿ ಕೂತು ಹಚ್ಚಿದ ಅಗ್ಗಿಷ್ಟಿಕೆಗಳು ಬೆಂಕಿಯ ಮೊಗ್ಗುಗಳಂತೆ ಧಿಗ್ಗನೆ ಅರಳುತ್ತಿದ್ದವು.

ಒಂದೇ ಸಮಯದಲ್ಲಿ ಒಂದರ ಶೂಟಿಂಗು, ಒಂದರ ಸಂಕಲನ, ಒಂದರ ಸಂಗೀತ ಜೋಡಣೆ, ಒಂದರ ಮಾತುಕತೆ ಹೀಗೆ ಮೂರ್‍ನಾಲ್ಕು ಮದುವೆಗಳ ಚಟುವಟಿಕೆ ಜಾರಿಯಲ್ಲಿ ಇರುವುದರಿಂದ ಬಿರ್ಜುಗೂ ಎಲ್ಲ ಮುಖಗಳು ಬೆರಕೆಯಾಗಿ ಬಿಡುತ್ತಿದ್ದವು. ಶೂಟಿಂಗ್‌ಗೆ ಹೊರಟಾಗ ಅರೇ ಇದ್ಯಾವ ಬೇರೆ ಹುಡುಗಿಯ ಜೊತೆ ಬಂದಿದ್ದಾನೆ ಇವನು ಎಂದೆಲ್ಲ ಗಲಿಬಿಲಿ ಆಗುತ್ತಿತ್ತು. ಆದರೂ ವೈದ್ಯನೊಬ್ಬನಿಗೆ ಇರಲೇಬೇಕಾದ ನಿರ್ಲಿಪ್ತತೆಯೇ ಈ ಕೆಲಸಕ್ಕೂ ಬೇಕಾಗಿದ್ದರಿಂದ ನಿರ್ವಿಕಾರವಾಗಿಯೇ ಕಾರ್ಯಮಗ್ನನಾಗುತ್ತಿದ್ದ. ಹೀಗಾಗಿ ವಧುವನ್ನೋ ವರನನ್ನೋ ಅವರು ಮೇಕಪ್ ಹಾಕಿಕೊಂಡು ತಯಾರಾಗಿ ಬಂದಾಗ ಏನೂ ಹೇಳದೇ, ಕ್ಯಾಮೆರಾದ ಮೂಲಕ ಅವರನ್ನು ನೋಡಿದ ಮೇಲೆಯೇ "ಆಹಾ, ಸುಪರ್ಬ್, ಚಂದ.." ಇತ್ಯಾದಿ ಉದ್ಗಾರಗಳನ್ನು ಹೊರಡಿಸುತ್ತಿದ್ದ, ಇದೊಂದು ನಮೂನೆಯ ಆರೋಗ್ಯಕರ ಹುರುಪನ್ನು ಮದುಮಕ್ಕಳಿಗೆ ಕೊಡುತ್ತಿತ್ತು. ಕ್ಯಾಮೆರಾನೇ ನಿಷ್ಪಕ್ಷಪಾತಿಯಾಗಿ ಸ್ಪಂದಿಸುತ್ತಿದೆ ಶುಭ ಕೋರುತ್ತಿದೆ.. ಎಂಬ ಭಾವನೆ ಉಂಟಾಗಿ ಆ ತನಕ ಇದ್ದಿರದ ಒಂದು ಹೊಸ ಆಂತರಿಕ ನಲಿವು ಮೂಡಿಬರುತ್ತಿತ್ತು. ಈ ಕ್ಯಾಮೆರಾ ಸಾಕ್ಷಿಯು ಮುಂದೆ ಬರಲಿರುವ ಅಗ್ನಿಸಾಕ್ಷಿಯ ಅಥವಾ ರಿಜಿಸ್ಟ್ರೇಷನ್ ಆಫೀಸ್ ಸಾಕ್ಷಿಯ ಮುನ್ಸೂಚನೆಯಂತೆ ಅನಿಸುತ್ತಿತ್ತು. ಒಂದೆರಡು ಲೈಟುಗಳನ್ನು ಹಿಡಿದು ನಿಂತಿರುವ ಹುಡುಗರು ದುಪಟ್ಟಾವನ್ನು ನೀಟಾಗಿ ಮಡಿಸಿ ಕೊಟ್ಟರೆ ಮುಜುಗರವಾಗುತ್ತಿರಲಿಲ್ಲ. ಅದೊಂದು ವಿಧ್ಯುಕ್ತ ಚಟುವಟಿಕೆಯಂತೆಯೇ ನಡೆಯುತ್ತಿತ್ತು.


ಎಲ್ಲ ಜೋಡಿಗಳೂ ಚಿತ್ರೀಕರಣಕ್ಕೆ ತಮ್ಮ ತಮ್ಮ ಇಷ್ಟದ ಉಡುಪುಗಳನ್ನು ತಾವೇ ತರುತ್ತಿದ್ದವು. ಕೆಲವು ಬಾಡಿಗೆಗೂ ತರುತ್ತಿದ್ದವು. ಈ ವಿಷಯದಲ್ಲಿ ಬಿರ್ಜು ಹೆಚ್ಚು ಸಲಹೆ ಸೂಚನೆಗಳನ್ನು ಕೊಡಲು ಹೋಗುತ್ತಿರಲಿಲ್ಲ. ಏಕೆಂದರೆ ಕೆಲವು ಮದುಮಕ್ಕಳ ಆಯ್ಕೆಗಳು ವಿಚಿತ್ರವಾಗಿರುತ್ತಿದ್ದವು. ಸಿನಿಮಾ ಮದುವೆಗಳಿಂದ ಪ್ರೇರಿತವಾದ ಜಗಮಗಿಸುವ ಕುರ್ತಾ ಚೂಡಿದಾರಗಳನ್ನು ಎಲ್ಲರೂ ಇಷ್ಟಪಡುತ್ತಿದ್ದರು. ಜೊತೆಗೆ ಬಿಗಿಯಾದ ಸೂಟುಬೂಟು. ಬಣ್ಣಬಣ್ಣದ ಜಗಮಗ ಕತ್ತು ಹಿಸುಕುವ ಬಂದ್‌ಗಲಾ ಕೋಟ್ ಹಾಕಿದ ಮದುಮಗ ಒಮ್ಮೊಮ್ಮೆ ಕಚೇರಿಯೊಂದಿಗೆ ವಾದ್ಯವನ್ನೂ ತೊರೆದು ಬಂದ ಶಾಸ್ತ್ರೀಯ ಸಂಗೀತಗಾರರಂತೆ ಕಂಡರೆ, ಮದುಮಗಳು ರಿಕ್ಷಾ ಕೆಟ್ಟು ದಾರಿಯಲ್ಲೇ ಎಲ್ಲೋ ಇಳಿಸಲ್ಪಟ್ಟು "ಅರಂಗೇಟ್ರಂ"ಗೆ ಅರ್ಧಮರ್ಧ ತಯಾರಾಗಿ ಹೊರಟಿದ್ದ, ಗೆಜ್ಜೆ ಇನ್ನೂ ಕಟ್ಟದ ಹೊಸ ನೃತ್ಯಾಂಗನೆಯಂತೆ ಕಾಣುತ್ತಿದ್ದಳು. ಮೊದಲೇ ಪ್ರೇಮಿಗಳಾಗಿದ್ದವರಲ್ಲಿ ಒಂದು ಸಹಜ ಸಲಿಗೆ ಇರುತ್ತಿತ್ತು. ಅದು ಬಿರ್ಜುಗೆ ಇಷ್ಟ. ಏಕೆಂದರೆ ಅವರು ಎಂದಿನ ಸಲಿಗೆಯಲ್ಲಿ ಒಬ್ಬರನ್ನೊಬ್ಬರು ಛೇಡಿಸಿಕೊಂಡು ಕಿಚಾಯಿಸಿಕೊಂಡು ಇದ್ದರೆ ಒಳ್ಳೊಳ್ಳೆ

ನಿದ್ದೆಗಣ್ಣಿನಲ್ಲಿ ಐಲೈನರ್ ಹಚ್ಚುವುದು ಕಷ್ಟ, ಲೊಕೇಶನ್‌ಗೆ ಹೋದ ಮೇಲೆ ಹಚ್ಚಿದರಾಯ್ತು ಎಂದುಕೊಂಡಿದ್ದ ವಧು ಕಣ್ಣುಜ್ಜಿಕೊಂಡು ನೋಡಿದಳು. ನಸುಕಿನ ಕನಸುಗಳ ಮೂಟೆಗಳಂತೆ ಹೂವು ತರಕಾರಿಗಳ ಮೂಟೆಗಳು ಉರುಳುರುಳಿ ಇಳಿಯುತ್ತಿದ್ದವು. ಎಲೆ ಕೋಸು, ಕಾಲಿಫ್ಲಾವರ್‌ಗಳ ಕಿರು ಪರ್ವತಗಳು ಏರ್ಪಡುತ್ತಿದ್ದವು. ಕ್ಷಣಾರ್ಧದಲ್ಲಿ ಪಾಲಾಗಿ ಇನ್ನೆಲ್ಲೋ ಚಲಿಸುತ್ತಿದ್ದವು. ಕಾಗದದಲ್ಲಿ ಸುತ್ತಲ್ಪಟ್ಟ ಗುಲಾಬಿ ಮೊಗ್ಗುಗಳ ಕಟ್ಟುಗಳು ನವಜಾತ ಶಿಶುಗಳಂತೆ ಕೆಂಪು ಮೂತಿಯಲ್ಲಿ ಕೈಗಳಿಂದ ಕೈಗೆ ಕಾಳಜಿಯಿಂದ ಸಾಗಿಸಲ್ಪಟ್ಟು ಧರೆಗಿಳಿಯುತ್ತಿದ್ದವು. ಕೈಲಿ ಚಾ ಗ್ಲಾಸು ಹಿಡಿದುಕೊಂಡು ಸ್ತಬ್ಧವಾಗಿ ಕನಸನ್ನು ನೋಡುವಂತೆ ಎಲ್ಲರೂ ಇದನ್ನು ನೋಡುತ್ತಿರುವಾಗಲೇ ಬಿರ್ಜುಗೆ ಮತ್ತು ಉಪಛಾಯಾಗ್ರಾಹಕನಿಗೆ ಏಕಕಾಲಕ್ಕೆ ಇಲ್ಲೇ ಯಾಕೆ ಚಿತ್ರೀಕರಣ ಮಾಡಬಾರದು ಅನಿಸಿಹೋಯಿತು.

ಲವಲವಿಕೆಯ ಸಹಜ ಚಿತ್ರಿಕೆಗಳು ಸಿಗುತ್ತಿದ್ದವು. ಅವಳು ಅವನ ನೆಕ್‌ಟೈ ಸರಿಮಾಡುವ ನೆಪದಲ್ಲಿ ಅದನ್ನು ಹಾಳು ಮಾಡುವುದು, ಅವಳು ಲಿಪ್‌ಸ್ಟಿಕ್ ಹಚ್ಚಿಕೊಳ್ಳುವಾಗ ಅವನು ಆ ಕೈಯನ್ನು ತಳ್ಳುವುದು ಇತ್ಯಾದಿ. ಹೊಸದಾಗಿ ನಿಶ್ಚಿತಾರ್ಥ ಆದ ಜೋಡಿ ಇದ್ದಾಗ ವಧುವಿನ ಜೊತೆ ಅವಳ ಅಕ್ಕನೋ ತಂಗಿಯೋ ಗೆಳತಿಯೋ ಹೀಗೆ ಯಾರಾದರೂ ದೇಖರೇಖೆಗೆ ಇರುತ್ತಿದ್ದರು. ವರನ ಜೊತೆ ಅವನ ಗೆಳೆಯರು ಒಂದಿಬ್ಬರು ಇದ್ದೇ ಇರುತ್ತಿದ್ದರು. ಅವರೆಲ್ಲ ನಿರ್ದೇಶನ ಕೊಡುವ ಅಧಿಕ ಪ್ರಸಂಗ ಮಾಡಿದಾಗೆಲ್ಲ ಬಿರ್ಜು ನಯವಾಗಿ ಅದನ್ನು ಅಲಕ್ಷ್ಯ ಮಾಡಿ ತನ್ನ ಕೆಲಸ ಮುಂದುವರೆಸುತ್ತಿದ್ದ. ಕ್ಯಾಮೆರಾದ ಕಣ್ಣು ಅವನೇ ಆಗಿರುವುದರಿಂದ ಮದುಮಕ್ಕಳು ಸಾಮಾನ್ಯವಾಗಿ ಅವನಿಗೆ ವಿಧೇಯರಾಗಿರುತ್ತಿದ್ದರು. ವಧುವಿನ ವಿಧೇಯತೆ ಒಮ್ಮೊಮ್ಮೆ ವರನಿಗೆ ಸೂಕ್ಷ್ಮವಾಗಿ ತ್ರಾಸು ಕೊಡುತ್ತಿತ್ತು. "ಯೆಸ್.. ಲವ್ಲೀ.. ಫೀಲ್ ಫ್ರೀ.. ಲುಕ್ ಅಪ್.." ಎಂದು ಬಿರ್ಜು ಹೇಳುತ್ತ ಹೋದ ಹಾಗೆ ಸೌಂದರ್ಯ ಯೋಗದಲ್ಲಿ ಪೂರ್ತಿ ತೇಲುತ್ತ ಹೋಗುತ್ತಿರುವ ವಧುವಿನ ತನ್ಮಯತೆ ನೋಡಿ ವರ ಮಹಾಶಯ, ಈಕೆ ಈಗ ತನ್ನಿಂದಲೂ ದೂರ ಹೋಗುತ್ತಿದ್ದಾಳೆ ಎಂಬ ಸರಳ ಸ್ಪಷ್ಟ ಸತ್ಯದ ಅರಿವಿನಲ್ಲಿ ಗಾಬರಿಗೊಳ್ಳುವುದೂ ಇತ್ತು. ಆದರೆ ಆ ಗಾಬರಿ ತನ್ನ ಚೆಲುವನ್ನು ಹಾಳು ಮಾಡೀತು ಎಂಬ ಗಾಬರಿಯೂ ಸೇರಿಕೊಂಡು ಅವನು ಸಂತಸ ಉತ್ಸಾಹ ಇತ್ಯಾದಿಗಳನ್ನು ಆವಾಹಿಸಿಕೊಳ್ಳುತ್ತ ಲಾಲಲಾ ಇತ್ಯಾದಿ ಹಾಡುತ್ತ ಭುಜಗಳನ್ನು ಚೂರು ಅಲ್ಲಾಡಿಸುತ್ತ ವಿಚಿತ್ರವಾಗಿ ಕಾಣುವುದೂ ಇತ್ತು.

ಅಂತೂ ಈ ನವ ಮದುಮಕ್ಕಳ ಶೂಟಿಂಗ್ ಬೆಂಗಳೂರಿಗೆ ಸಮೀಪದ ರೆಸಾರ್ಟ್ ಒಂದರಲ್ಲಿ ಮಾಡುವುದೆಂದು ನಿಗದಿಯಾಗಿ ಸೂರ್ಯೋದಯಕ್ಕೆ ಮುನ್ನವೇ ಅಲ್ಲಿರಬೇಕೆಂಬ ಇರಾದೆಯಿಂದ ಬಿರ್ಜು ತಂಡ ಮತ್ತು ವಧೂವರರ ಸಣ್ಣ ಬಳಗ ಎರಡು ಕಾರುಗಳಲ್ಲಿ ನಾಲ್ಕಕ್ಕೇ ಹೊರಟವು. ಸಿಟಿ ಮಾರ್ಕೆಟ್ ಹತ್ತಿರದ ಮೇಲ್‌ಸೇತುವೆಯ ಕೆಳಗೆ ಎರಡೂ ಕಾರುಗಳೂ ಸೇರುವುದಿತ್ತು. ಏಕೆಂದರೆ ಅಲ್ಲಿಯ ಗುಡ್‌ಲಕ್ ಗೂಡಂಗಡಿಯ ಬಿಸಿ ಚಹಾ ಕುಡಿದೇ ಹೊರಡುವುದು ಬಿರ್ಜುನ ವಾಡಿಕೆ. ಪಾವ್ ಅದ್ದಲು ಒಂದು ಮತ್ತು ಕುಡಿಯಲು ಒಂದು ಹೀಗೆ ಎರಡು 'ಗಿಲಾಸ್' ಚಾ ಬೇಕು ಅವನಿಗೆ. ಹಗಲಲ್ಲಿ ಬೇರೆ ಅವತಾರದಲ್ಲಿರುವ ಈ ನಿಬಿಡ ಪ್ರದೇಶ, ಮುಕ್ಕಾಲು ರಾತ್ರಿಯ ನಂತರದ, ಬೆಳಗಾಗುವ ತನಕದ ಈ ಜಾವದಲ್ಲಿ ಬೇರೆಯದೇ ಮಾತುಗಳನ್ನು ಆಡುತ್ತದೆ. ಏಕೆಂದರೆ ದೂರ ದೂರದಿಂದ ರೈತರ ತರಕಾರಿ ಕಾಯಿಪಲ್ಲೆ ಸೊಪ್ಪು ಹೂವು ಹಣ್ಣುಗಳ ಟೆಂಪೋ, ಲಾರಿಗಳು ಬಂದು ತಮ್ಮದೇ ಹಸಿರು ಒದ್ದೆ ಸರಭರದಲ್ಲಿ ಇಲ್ಲಿ ಖಾಲಿಯಾಗುತ್ತವೆ. ಒಂದು ಹಂತದಲ್ಲಿ ಬರೀ ತರಕಾರಿಗಳೇ ಕಂಡರೆ ಇನ್ನೊಂದು ಹಂತದಲ್ಲಿ ಬರೀ ಹೂವುಗಳೇ ಕಾಣುತ್ತವೆ. ಮಲ್ಲೇಶ್ವರಂ, ಬಸವನಗುಡಿ, ಬನಶಂಕರಿ, ಸಾರಕ್ಕಿ – ಇಂಥ ಕಡೆಗೆ ಹೋಗುವ ಸರಕುಗಳೂ ಇಲ್ಲಿಂದಲೇ ಹೋಗುತ್ತಿದ್ದವು. ಸುಮ್ಮನೇ ಈ ಪುಷ್ಪ ವಿಲೇವಾರಿ ನೋಡಲು ಬಿರ್ಜುಗೆ ಇಷ್ಟ ಆದರೆ ಅದಕ್ಕೆಂದೇ ಈ ಅಕಾಲದಲ್ಲಿ ಎದ್ದು ಬರುವುದು ಕಷ್ಟ ಹೀಗಾಗಿ ಈ ನೆಪದಲ್ಲಿ ಸಿಕ್ಕರೆ ಬಿಡುವವನಲ್ಲ ಆತ. ಮದುಮಕ್ಕಳಿಗೂ ಚಾ ಪಾವ್ ಕೊಡಿಸಿದ. "ನೋಡಿ ಹೂ ತರಕಾರಿ ಮಾರ್ಕೆಟ್. ಈ ಜಗತ್ತೇ ಬೇರೆ" ಎಂದ.

ನಿದ್ದೆಗಣ್ಣಿನಲ್ಲಿ ಐಲೈನರ್ ಹಚ್ಚುವುದು ಕಷ್ಟ, ಲೊಕೇಶನ್‌ಗೆ ಹೋದ ಮೇಲೆ ಹಚ್ಚಿದರಾಯ್ತು ಎಂದುಕೊಂಡಿದ್ದ ವಧು ಕಣ್ಣುಜ್ಜಿಕೊಂಡು ನೋಡಿದಳು. ನಸುಕಿನ ಕನಸುಗಳ ಮೂಟೆಗಳಂತೆ ಹೂವು ತರಕಾರಿಗಳ ಮೂಟೆಗಳು ಉರುಳುರುಳಿ ಇಳಿಯುತ್ತಿದ್ದವು. ಎಲೆ ಕೋಸು, ಕಾಲಿಫ್ಲಾವರ್‌ಗಳ ಕಿರು ಪರ್ವತಗಳು ಏರ್ಪಡುತ್ತಿದ್ದವು. ಕ್ಷಣಾರ್ಧದಲ್ಲಿ ಪಾಲಾಗಿ ಇನ್ನೆಲ್ಲೋ ಚಲಿಸುತ್ತಿದ್ದವು. ಕಾಗದದಲ್ಲಿ ಸುತ್ತಲ್ಪಟ್ಟ ಗುಲಾಬಿ ಮೊಗ್ಗುಗಳ ಕಟ್ಟುಗಳು ನವಜಾತ ಶಿಶುಗಳಂತೆ ಕೆಂಪು ಮೂತಿಯಲ್ಲಿ ಕೈಗಳಿಂದ ಕೈಗೆ ಕಾಳಜಿಯಿಂದ ಸಾಗಿಸಲ್ಪಟ್ಟು ಧರೆಗಿಳಿಯುತ್ತಿದ್ದವು. ಕೈಲಿ ಚಾ ಗ್ಲಾಸು ಹಿಡಿದುಕೊಂಡು ಸ್ತಬ್ಧವಾಗಿ ಕನಸನ್ನು ನೋಡುವಂತೆ ಎಲ್ಲರೂ ಇದನ್ನು ನೋಡುತ್ತಿರುವಾಗಲೇ ಬಿರ್ಜುಗೆ ಮತ್ತು ಉಪಛಾಯಾಗ್ರಾಹಕನಿಗೆ ಏಕಕಾಲಕ್ಕೆ ಇಲ್ಲೇ ಯಾಕೆ ಚಿತ್ರೀಕರಣ ಮಾಡಬಾರದು ಅನಿಸಿಹೋಯಿತು. ಅವನ ಇರಾದೆ ಇತರರಿಗೆ ಅರಿವಾಗುವ ಮೊದಲೇ ಕ್ಯಾಮೆರಾ, ಸ್ಟ್ಯಾಂಡು, ಒಂದೆರಡು ಪುಟ್ಟ ಪ್ರಖರ ಕೈದೀಪಗಳು ಕಾರಿನಿಂದ ಹೊರಬಂದುವು. ಜಗಮಗ ಉಡುಪು, ಮೇಕಪ್ ಸಾಮಗ್ರಿಯ ಬ್ಯಾಗುಗಳೆಲ್ಲ ಮದುಮಕ್ಕಳ ಕಾರಿನ ಡಿಕ್ಕಿಯಲ್ಲಿ ಇದ್ದವು. ಅದನ್ನು ತೆಗೆಯುವ ಪ್ರಮೇಯವೇ ಇರಲಿಲ್ಲ. ಬಿರ್ಜುಗೆ ಹೊಳೆದಿದ್ದೆಲ್ಲ ಅವನು ಹೇಳುವ ಮೊದಲೇ ಅವನ ಅನುಚರರಿಗೆ ತಿಳಿಯುತ್ತದೋ ಎಂಬಂತೆ ಇಬ್ಬರೂ ಕ್ಯಾಮೆರಾಗೆ ಲೆನ್ಸು ಜೋಡಿಸುತ್ತ ಒಬ್ಬನು ಮೇಲ್ ಸೇತುವೆಯ ಮೇಲೆ ಹೋದನು. ವಧುವರರಿಬ್ಬರನ್ನೂ ಜೊತೆಯಲ್ಲಿ ನಡೆಸಿಕೊಂಡು ಹೋಗಿ, ಇಬ್ಬರೂ ಒಬ್ಬೊಬ್ಬರೇ ಬೇರೆ ಬೇರೆಯಾಗಿ ನಡೆಯುತ್ತ ಬಂದು ಕೊತ್ತಂಬರಿ ಕಟ್ಟುಗಳ ಒಂದು ಮಹಾ ಪರ್ವತದ ಎದುರು ಪರಸ್ಪರ ನೋಡಿ ನಿಲ್ಲುವ ಬಗ್ಗೆ ಸೂಚನೆ ಕೊಟ್ಟು, "ಸಹಜವಾಗಿದ್ದಷ್ಟೂ ಚೆಲುವು" – ಎಂದು ಇಬ್ಬರ ಬೆನ್ನು ತಟ್ಟಿ – ಓ ಅಲ್ಲಿ ಫ್ಲೈ ಓವರ್ ಮೇಲೆ ಈಗಾಗಲೇ ತಲುಪಿ ನಿಂತಿರುವ ಸಹಛಾಯಾಗ್ರಾಹಕನನ್ನೂ ತೋರಿಸಿ, ಅವನು ಕರವಸ್ತ್ರವನ್ನು ಅಲ್ಲಾಡಿಸಿದ ಕೂಡಲೇ ಚಲಿಸಬೇಕೆಂದು ಸೂಚಿಸಿ, ಅವರನ್ನು ಹಿಂಬಾಲಿಸುತ್ತಲೇ ಬರುವ ತನ್ನ ಕಡೆ ಬಿಲ್‌ಕುಲ್ ನೋಡಬಾರದು ಎಂದು ಎಚ್ಚರಿಸಿ 'ಕಮಾನ್ ಚೀಯರ್ ಅಪ್' ಎಂದು ನಕ್ಕು.. ಶುರುವಾಗಿಯೇ ಹೋಯಿತು..



ಮೂಟೆ ಮೂಟೆ ಎತ್ತಿ ಲಾರಿಯ ಹಿಂಭಾಗದಿಂದ ಮೋಡಗಳನ್ನು ಹೊತ್ತವರಂತೆ ಹೊತ್ತುಕೊಂಡು ಏಕಾಂಗಿ ದೊಡ್ಡ ಕಂಬದ ವಿಚಿತ್ರ ಹಳದಿ ಕಾಮಾಲೆ ಬೆಳಕಲ್ಲಿ ಓಡಾಡುವ ಆಕೃತಿಗಳ ನಡುವೆ ಯಾರನ್ನೋ ಅರಸುವಂತೆ ವಧು ಮೆಲ್ಲಗೆ ಅತ್ತ ಇತ್ತ ನೋಡುತ್ತ ನಡೆಯುತ್ತಿದ್ದಳು. ಗೋಣಿ ಚೀಲಗಳ ಸಡಿಲ ಹೊಲಿಗೆಯ ಬಾಯಿಗಳಿಂದ, ಹರಕು ಭಾಗಗಳಿಂದ ತೊಂಡೆಕಾಯಿ, ಬೆಂಡೆಕಾಯಿ, ಚಪ್ಪರದವರೆಗಳು ಇಣುಕಿ ಇಣುಕಿ ಉದುರುತ್ತಿದ್ದವು. ಮೇಲ್‌ಸೇತುವೆಯನ್ನು ತಲೆಯ ಮೇಲೆ ಹೊತ್ತು ನಿಂತಿದ್ದ ಧಡೂತಿ ಕಂಬವೊಂದರ ಪಕ್ಕ ನಿಂತಿದ್ದ ವರ ಆಗಷ್ಟೇ ಪಾಕೀಟು ಕಳೆದುಕೊಂಡವನಂತೆ ಕಂಗಾಲು ನೋಟದಲ್ಲಿ ಒಮ್ಮೆ ಹಿಂದೆ ಮುಂದೆ ನೋಡಿದವನೇ ಉಪ ಛಾಯಾಗ್ರಾಹಕನ ದೂರದ ಕರವಸ್ತ್ರದ ಇಶಾರೆಗೆ ಒಮ್ಮೆಲೇ ಜೀವ ತಳೆದು, ಬಾಳ ಸಂಗಾತಿಯನ್ನು ಅರಸುವವನಂತೆ ಹೂವಿನ ಸಂತೆಯ ಕಡೆಗೆ ಚಲಿಸತೊಡಗಿದ. ಜನರಿರಬೇಕಾದ ಆಟೋದ ಸೀಟುಗಳಲ್ಲಿ, ಟ್ಯಾಕ್ಸಿಗಳ ಸೀಟುಗಳಲ್ಲಿ ಹೂಬುಟ್ಟಿಗಳಿದ್ದವು. ಎಲ್ಲಿಗೋ ಹೊರಡಬೇಕಾದವರಂತೆ ಸ್ತಬ್ಧವಾದ ಮಿಶ್ರ ಕಂಪಿನಲ್ಲಿ ಕೂತಿದ್ದವು. ಇನ್ನೇನು ಮೂಡಲಿರುವ ಹೊಸ ದಿನದಲ್ಲಿ ಎಲ್ಲೆಲ್ಲಿಗೋ ಹೋಗಿ ಅಸಂಖ್ಯ ಕುಟುಂಬಗಳಲ್ಲಿ ಬಿಕರಿಯಾಗಿ ಹರಡಿ ಹಂಚಿ ಹೋಗಲಿರುವ ಗುಟ್ಟುಗಳ ಪೊಟ್ಟಣಗಳಂತೆ ಇದ್ದವು ಎಲ್ಲ.

ಮೇಲ್‌ಸೇತುವೆಯ ಮೇಲೆ ನಿಂತು ಗುರಿಯಿಟ್ಟಿದ್ದ ಛಾಯಾಗ್ರಾಹಕನಿಗೆ ಸಿನಿಮಾಸ್ಕೋಪ್ ಆಕಾರದ ಕನಸು ಕಾಣುತ್ತಿದ್ದೇನೆ ಅನಿಸಿತು. ತಮಿಳು ಚಿತ್ರಗಳಲ್ಲಿ ರಾತ್ರೋ ರಾತ್ರಿ ತಮ್ಮ ಹಳ್ಳಿಯಿಂದ ನಗರದ ಬಸ್ಸು ಹಿಡಿದು ಓಡಿ ಬಂದ ಭೀತ ಪ್ರೇಮಿಗಳು ಇಳಿಯುವ ಕಿಕ್ಕಿರಿದ ಸಂತೆಯ ಬಸ್‌ಸ್ಟಾಂಡಿನಂತೆ ಇಡೀ ಪ್ರದೇಶ ಕಾಣುತ್ತಿತ್ತು. ಬಸ್ಸುಗಳ ಜಾಗದಲ್ಲಿ ಟ್ರಕ್ಕು, ಟೆಂಪೋಗಳು, ದೀಪ ಆರಿಸದೆ ನಿಂತಿದ್ದವು. ಆ ದೀಪಗಳೂ ನಿದ್ದೆಗಣ್ಣುಗಳಂತೆಯೇ ಇದ್ದವು. ದೊಡ್ಡ ಕಂಬದ ಕಾಮಾಲೆ ಬೆಳಕಿನ ಸಿಂಪಡಿಕೆ ಎಲ್ಲ ಕಡೆಗೂ ಪಸರಿಸಿತ್ತು. ಟ್ರಕ್ಕುಗಳನ್ನು ಟೆಂಪೋಗಳನ್ನು ಅಲ್ಲಲ್ಲಿ ಸುತ್ತರಿದು ಗುಂಪುಗಟ್ಟಿ ಪುಟ್ಟ ಆಟೋರಿಕ್ಷಾ ಟೆಂಪೋಗಳು ಗುಟ್ಟಾಗಿಯೇ ಚೌಕಾಶಿ ನಡೆಸುತ್ತಿರುವಂತೆ ಕಾಣುತ್ತಿತ್ತು. ಇಡೀ ಶಹರದ ಉದರಂಭರಣವೇ ಈ ನಿಶಾಚರಿಗಳ ಉದರಂಭರಣವಾಗಿತ್ತು. ಈ ಮಹಾಸಂಸಾರದೊಳಗೆ ಸೇರಿಕೊಳ್ಳಲು ತಯಾರಾಗುತ್ತಿರುವ ಎರಡು ಪುಟಾಣಿ ಜೀವಗಳು ಹೊಸ ರೇಖಾಚಿತ್ರವೊಂದರ ಆರಂಭದ ಬಿಂದುಗಳಂತೆ ಚಲಿಸುತ್ತಿದ್ದವು. ಹೊಸ ಇಂಕು ಪೆನ್ನಿನ ಪರೀಕ್ಷಾ ಗೀಚುಗೆರೆಯಂತೆ ಒಂದು ಬಗೆಯ ಹೀಚು ಖುಷಿಯಲ್ಲಿದ್ದವು.

ದೂರದಿಂದ ಯಾವ ಪೂರ್ವನಿಯೋಜನೆ ಇಲ್ಲದೆ ಈ ಸಂತೆಯಲ್ಲಿ ಅಲೆಯುತ್ತ ಬಂದು ಒಂದು ಬಿಂದುವಿನಲ್ಲಿ ಮುಖಾಮುಖಿ ಆಗಿ ನಿಲ್ಲುವ ಈ ನಡಿಗೆ ಹೊಸದೊಂದೆ ಧೈರ್ಯವನ್ನು ಇಬ್ಬರಿಗೂ ಕೊಡುವಂತಿತ್ತು. ದೂರದಿಂದ ಪರಸ್ಪರ ಕಣ್ಣಿಗೆ ಬೀಳುತ್ತಿದ್ದರೂ ಹಾಯುವ ವಾಹನಗಳು, ಟೆಂಪೋ ಕ್ಯಾಬಿನ್ನಿನ ಮೇಲಿದ್ದ ಸಹಸ್ರಾರು ಕಮಲದ ಮೊಗ್ಗುಗಳ ಕಟ್ಟುಗಳು, ಎಳೆ ಬಾಳೆದಿಂಡುಗಳು – ಸರಕ್ಕನೆ ಇಬ್ಬರ ನಡುವೆ ಅಡ್ಡ ಬರುತ್ತಿದ್ದವು. ಆಗೆಲ್ಲ ಅದೇನೋ ಸಣ್ಣ ಬಿಡುಗಡೆಯ ಅಸ್ಪಷ್ಟ ಮಜಾ. ಮತ್ತೆ ಹುಡುಕುವ ಆಟ. ಆದರೆ ಈ ಹುಡುಕಾಟದಲ್ಲಿ ವಿಚಿತ್ರವಾದ ಅನ್ಯವೂ ಸೆಳೆದೀತು. ಅದೋ ಆ ಕರಿಗಟ್ಟಿದ ಶಟರ್ ಹಾಕಿರುವ ಗ್ಯಾರೇಜಿನಂಥ ಜಾಗ. ವಧು ಥಟ್ಟನೆ ನಿಂತುಬಿಟ್ಟಳು. ಅಲ್ಲೇ ಅಲ್ಲವೆ ಅಪ್ಪನ ಲೂನಾದ ಹಿಂದೆ ಕೂತುಕೊಂಡು ಬಂದು ಸೀಮೆ ಎಣ್ಣೆ ಸ್ಟೋವು, ಗ್ಯಾಸ್

ಆ ಅದೊಂದು ದಿನ ಒಂಟಿ ಕಡುಗೆಂಪು ಬಣ್ಣದ ಸುಪುಷ್ಟ ತಾಜಾ ಗುಲಾಬಿಯೊಂದನ್ನು ಸಾಕಷ್ಟು ಮುಳ್ಳುಗಳಿರುವ ದೀರ್ಘ ದೇಟಿನೊಂದಿಗೆ ಅವನು ಅಳುಕುತ್ತಲೇ ಕೊಡದೇ ಹೋಗಿದ್ದರೆ ಪ್ರಕರಣ ಇಲ್ಲಿಯ ತನಕ ಬರುತ್ತಿರಲಿಲ್ಲ ಎನಿಸಿ ಅವಳಿಗೆ ನಗುವೇ ಬಂದಿತು. ಆ ಹೂವು ಈಗಲೂ ಆ ವರುಷದ ಡೈರಿ ಪುಸ್ತಕದಲ್ಲಿ ಚಪ್ಪಟೆಯಾಗಿ ಒಣಗಿ ಪಕಳೆ ಪಕಳೆ ಉದುರಿ ಪುಡಿಯಾಗಿ ಉಳಿದಿದೆ. ಈ ಪುಷ್ಪ ಕಾಶಿಯಲ್ಲಿರುವ ಪ್ರತಿ ಹೂವೂ ಹಾಗೆಯೇ ಯಾವುದೋ ಪುಸ್ತಕದ ಒಳಗೆ ಹೋಗಿ ಕೂತುಕೊಂಡಿದ್ದರೆ ಎಲ್ಲ ಹೇಗಿರುತ್ತಿತ್ತು.

ಸ್ಟೋವು ರಿಪೇರಿ ಮಾಡಿಸಿಕೊಂಡಿದ್ದು. ಪಕ್ಕದಲ್ಲೆ ಬೈಕುಗಳ ಗ್ಯಾರೇಜು, ಆಪರೇಷನ್ ಟೇಬಲ್ ಮೇಲೆ ವಿಧ ವಿಧ ಹಂತದಲ್ಲಿ ದೇಹಗಳನ್ನು ಒಡ್ಡಿ ಬಿದ್ದ ಭಗ್ನ ವಾಹನಗಳು. ಒಂದು ಬದಿಯಲ್ಲಿದ್ದ ನಾನಾ ಬಗೆಯ ನಟ್ಟು ಬೋಲ್ಟು ಸ್ಕ್ರೂ ವಾಶರುಗಳ ರಾಶಿಯಿಂದ, ಮಣ್ಣಿನಿಂದ ಚಿನ್ನ ಹೆಕ್ಕುವಂತೆ ಬಗೆದು ಬಗೆದು ಕರ್ರೆಕ್ಟಾದದ್ದನ್ನು ಎತ್ತಿ ಅಂಗೈಲಿಟ್ಟುಕೊಂಡು ಮುಂದೆ ಚಾಚುವ ಮಕ್ಕಳು. ಅವರಿಗೆ ನಿತ್ಯ ಕಪ್ಪು ಬಣ್ಣದ ಹೋಳಿ. ಅದರಲ್ಲೇ ಬಾಯಿ ತುಟಿ ಹುಡುಕಿ ಕಟಿಂಗ್ ಚಾಯ್ ತಮಗೇ ಕುಡಿಸುವುದೂ ಒಂದು ಕಲೆ. ಎಲ್ಲರಂತೆ ಬಾಳಸಂಗಾತಿಯಾಗುವವನ ಬೈಕಿನ ಹಿಂದೆ, ವಿಧೇಯ ವಾರೆ ಮುದ್ರೆಯಲ್ಲಿ ಚಿಮ್ಮುತ್ತ ಸಾಗುವ ಕನಸನ್ನು ಮುಂಚೆಯೇ ಕಂಡಿದ್ದ ಅವಳಿಗೆ – ಬೈಕುಗಳ ಆಪರೇಷನ್ ಥೇಟರಿನಂಥ ಆ ಗ್ಯಾರೇಜಿನ ನೋಟ ಹಗಲಲ್ಲಿ ಇಲ್ಲಿ ಬಂದಾಗೆಲ್ಲ ಅಸ್ವಸ್ಥತೆಯನ್ನು ಉಂಟುಮಾಡಿತ್ತು. ಆನಂತರ ಎಲ್ಲೇ ಯಾವುದೇ ಸುಸಂತೃಪ್ತ ಬೈಕ್ ದಂಪತಿಗಳನ್ನು ನೋಡಿದಾಗೆಲ್ಲ ಕಪ್ಪು ಹೋಳಿಯ ಫಳಫಳ ಕಂಗಳ ಮಕ್ಕಳು ನೆನಪಾಗುತ್ತಿದ್ದರು. ಈಗ ಇರುಳಿನ ಕೊನೆಯ ಜಾವದಲ್ಲಿ ಆ ಆಪರೇಷನ್ ಥೇಟರು ಮರೆಯಾಗಿ ಅಲ್ಲೊಂದು ಸೊಪ್ಪಿನ ಸಡಗರವಿತ್ತು. ಅದರಲ್ಲೂ ಮಕ್ಕಳಿದ್ದರು. ಅಕಾಲದಲ್ಲಿ ಎಬ್ಬಿಸಲ್ಪಟ್ಟ ಈ ಮಕ್ಕಳು, ಸೊಪ್ಪುಗಳನ್ನು ವಿಂಗಡಿಸುತ್ತಿದ್ದರು. ತಮ್ಮನ್ನು ಎಚ್ಚರವಾಗಿಟ್ಟುಕೊಳ್ಳಲೆಂದೇ ಏನೇನೋ ಕೀಟಲೆಗಳನ್ನು ದೊಡ್ಡದಾಗಿ ಆಡಿಕೊಳ್ಳುತ್ತಾ ಓಡಾಡುತ್ತಿದ್ದರು. ಹಂಸತೂಲಿಕಾತಲ್ಪದಲ್ಲಿ ಮಲಗುವಂತೆ ಸೊಪ್ಪಿನ ರಾಶಿಯಲ್ಲಿ ಹೊರಳಾಡಿ ಬೈಸಿಕೊಳ್ಳುತ್ತಿದ್ದರು. ಸೊಪ್ಪಿನ ಘಾಟೇ ಈ ಜಾವದ ನಿಜವಾಗಿತ್ತು. ಸೀನು ಬಂದೀತೋ ಎಂಬ ಕಾಳಜಿಯಿಂದ ಅವಸರದಿಂದ ಅಲ್ಲಿಂದ ಹೂಗಳ ಸೀಮೆಯ ಕಡೆ ಓಡತೊಡಗಿದಳು. ಅವಳನ್ನು ಫ್ರೇಮಿನಲ್ಲಿ ಆದಷ್ಟು ಹಿಡಿಯಲು ಯತ್ನಿಸಿ ಬಿರ್ಜು ಮರಳಿ ಕೊತ್ತಂಬರಿ ಪರ್ವತಕ್ಕೆ ಕ್ಯಾಮೆರಾ ಹೊರಳಿಸಿದ.

ಕತ್ತಲು ಮಿಶ್ರಿತ ಹಳದಿ ಲೇಪನದಿಂದಾಗಿ ಕೊತ್ತಂಬರಿ ಕಟ್ಟುಗಳ ರಾಶಿಯು, ಕ್ಲೋಸ್ ಅಪ್‌ನಲ್ಲಿ ಇನ್ನೂ ನಿಗೂಢವಾಗಿ ಬಿರುಗಾಳಿಗೆ ಕೆದರಿದ ದಟ್ಟ ಕಾಡಿನಂತೆ ತೋರಿತು. ಝೂಮ್ ಔಟ್ ಮಾಡಿದರೆ ಹನುಮಂತ ಎತ್ತಿ ತಂದಿಟ್ಟ ಸಂಜೀವಿನಿ ಪರ್ವತದಂತೆ ಕಾಣುತ್ತಿತ್ತು. ಎಲೆಗಳ ದಟ್ಟ ಪದರಗಳು. ಯಾವ ಯಾವ ಭೂಮಿಯಿಂದ, ಯಾರ ಯಾರ ಆರೋಗಣೆಯಿಂದ ಚಿಗುರಿ ಇಲ್ಲಿ ಬಂದವೋ.. ಇಲ್ಲಿಂದ ಯಾವ ಯಾವ ಬಿಡಾರಗಳಿಗೆ ಅಡುಗೆ ಮನೆಗಳಿಗೆ ಗುಂಪಾಗಿ ಅಥವಾ ಒಂಟಿಯಾಗಿ ತಲುಪುವವೋ. ಬಿರ್ಜು ಹೀಗೆ ಮೈಮರೆವ ಕ್ಷಣದಲ್ಲೇ ಜಾದುವನ್ನೇ ಮಾಡಿದಂತೆ ಹಠಾತ್ತನೆ ಫ್ರೇಮಿನ ಆಯತ ಆಕಾರದಲ್ಲಿ ಯಾರೋ ಹೇಳಿ ಪ್ರವೇಶ ಮಾಡಿಸಿದಂತೆ ವರ ಪ್ರತ್ಯಕ್ಷನಾಗಿ ಸಂಜೀವಿನಿ ಪರ್ವತವನ್ನು ನೋಡುತ್ತ ನಿಂತುಬಿಟ್ಟ. ಇಲ್ಲೇನೋ ಇನ್ನೇನೋ ಕುತೂಹಲಕಾರಿಯಾದದ್ದು ನಡೆಯಲಿದೆ ಎಂಬಂತೆ ಬಿರ್ಜು ಕ್ಯಾಮೆರಾವನ್ನು ಚಾಲೂದಲ್ಲೇ ಇಟ್ಟ.. ಆ ಸಂಜೀವಿನೀ ಪರ್ವತದ ಸಾನಿಧ್ಯ ವರನನ್ನು ವಿಚಿತ್ರವಾಗಿ ವಿಚಲಿತಗೊಳಿಸಲು ಶುರು ಮಾಡಿತ್ತು. ಬೆಳಗಾಂವದಲ್ಲಿ ಹುಟ್ಟಿ ಬೆಳೆದಿದ್ದ ಅವನ ಬಾಲ್ಯಕ್ಕೆ ಸಬ್ಬಸಗಿ ಸೊಪ್ಪಿನ ಸೊಗಡು ಮೆತ್ತಿಕೊಂಡಿತ್ತು. ಅದಕ್ಕೆ ಅಲ್ಲಿ ಶೇಪೂ ಚಿ ಭಾಜೀ ಎಂದೂ ಮರಾಠಿಯಲ್ಲಿ ಕರೆಯುತ್ತಿದ್ದರು. ಯಾಕೋ ಮರಾಠಿ ನಾಟಕ, ಸಿನೆಮಾ ಸೀರಿಯಲ್ಲುಗಳಲ್ಲಿ ಶೇಪೂಜಿ ಭಾಜಿ ಅಂದರೆ ಯಾವಾಗಲೂ ಗೇಲಿಗೆ ನಗೆಪಾಟಲಿಗೆ ಆಹಾರವಾಗುತ್ತಿತ್ತು. ಮೃಷ್ಟಾನ್ನ ಭೋಜನದ ವಿರುದ್ಧಾರ್ಥಕ ಶಬ್ದಂತೆ ಅದು ಹೀಗಳಿಕೆಗೆ ತುತ್ತಾಗುತ್ತಿತ್ತು. ಅವನ ಮನೆಯಲ್ಲಿ ಯಾವಾಗಲೂ ಸಬ್ಬಸಗಿ ಇರುತ್ತಿತ್ತು. ಅವಲಕ್ಕಿಗೆ, ಪಲ್ಲೆಗೆ, ಸಾರಿಗೆ ಹೀಗೆ ಸರ್ವಾಂತರ್ಯಾಮಿಯಾಗಿ ಅದು ಇರುತ್ತಿತ್ತು. ಆದರೆ ಅದರ ಕುರಿತು ಶಿಷ್ಟ ಲೋಕದಲ್ಲಿ ಚಾಲ್ತಿಯಲ್ಲಿದ್ದ ಲೇವಡಿಯ ದನಿ ಅವನಿಗೆ ಮೂಕ ಮುಜುಗರವನ್ನುಂಟುಮಾಡುತ್ತಿತ್ತು. ಪಕ್ಕದ ಮನೆಯವರು ಅಥವಾ ಶಾಲೆಯಲ್ಲಿ ಇತರರು ಈವತ್ತು ಏನು ಅಡಿಗೆ ಮನೆಯಲ್ಲಿ ಎಂದರೆ ಯಾವತ್ತೂ ಸಬ್ಬಸಿಗೆಯ ಬಗ್ಗೆ ಹೇಳಲಾಗದಷ್ಟು ಅವನಿಗೆ ಸಂಕೋಚವಿತ್ತು. ಅವ್ವ ಯಾವತ್ತೂ ಮುಸ್ಸಂಜೆಯಲ್ಲಿ ಸಂತೆ ಮುಗಿಯುವ ಹೊತ್ತಿಗೇ ಸೊಪ್ಪು ಕೊಳ್ಳಲು ಹೋಗುತ್ತಿದ್ದಳು. ಅಥವಾ ತರಲು ಹೇಳುತ್ತಿದ್ದಳು. ಏಕೆಂದರೆ ಸಂತೆ ಮುಗಿಯಲು ಬಂದಾಗಲೇ "ಖಾಲಿ ಮಾಡುವ ಬೆಲೆ"ಗೆ ಸೊಪ್ಪಿನ ಕಟ್ಟುಗಳು ಸಿಗುತ್ತಿದ್ದವು. ಮೊದಲೇ ಸೋವಿ ಇರುವ ಸಬ್ಬಸಗಿ ಆಗ ಇನ್ನೂ ಸೋವಿಗೆ ಸಿಗುತ್ತಿತ್ತು. ಅತ್ಯಂತ ಸೋವಿದರಕ್ಕೆ ಅವ್ವ ಯಾಕೆ ಕಾಯುತ್ತಾಳೆ ಎನ್ನುವುದು ಅಂಥ ನಿಗೂಢ ಪ್ರಶ್ನೆ ಆಗಿರಲಿಲ್ಲ. ಊಟಕ್ಕೆ ಕೂತಾಗ "ಮೂಗು ಮುರಿಬ್ಯಾಡೋ ದುನಿಯಾದಾಗ ಸಾದಾ ಮಂದಿ ಎಲ್ಲಾ ಇದನ್ನೇ ತಿಂತಾರ. ಅದಕ್ಕೇ ಇದು ಜೀವಕ್ಕೆ ಛಲೋ" ಎಂದು ಪುಸಲಾಯಿಸುತ್ತಿದ್ದಳು. ಬಾಡುವ ಬೆಳಕಲ್ಲಿ ಬೀದಿ ಬದಿ ಕಾಯಿಪಲ್ಲೆ ಬುಟ್ಟಿಗಳು ಮಾಯವಾಗುವಾಗ ಪುಟ್ಟ ಮಕ್ಕಳು ಕೈಲಿ ಸೊಪ್ಪಿನ ಕಟ್ಟು ಹಿಡಿದು ದುಂಬಾಲು ಬೀಳುತ್ತಿದ್ದರು. ಒಮ್ಮೆ ಅವ್ವನ ಜೊತೆ ಹೋಗಿದ್ದಾಗ ಒಂದಿಬ್ಬರು ತನ್ನದೇ ವಯಸ್ಸಿನ ಮಕ್ಕಳು ಅವ್ವನ ಹಿಂದೆ ದುಂಬಾಲು ಬಿದ್ದರು. ಅವ್ವ ಅದರಲ್ಲೊಬ್ಬ ಹುಡುಗಿಯಿಂದ ಐದು ಕಟ್ಟು ತೆಗೆದುಕೊಂಡು – 'ಲಗೂ ಮನಿಗ ಹೋಗವಾ.. ಅಭ್ಯಾಸ ಮಾಡು' – ಎಂದಾಗಲೇ ಗೊತ್ತಾಗಿದ್ದು ಅವಳು ತನ್ನದೇ ಸಹಪಾಠಿ ಎಂದು. ಅವಳು ಶಾಲೆ ಮುಗಿಸಿದ ನಂತರ ಏನಾದಳೋ.


ಈ ದುನಿಯಾದಲ್ಲಿ ಕೊತ್ತಂಬರಿಯ ಪರ್ವತದ ಎದುರು ಅದರ ದಟ್ಟ ಘಾಟಿನಲ್ಲೂ ಸಬ್ಬಸಿಗೆಯ ಸುಳಿವನ್ನು ಅವಟಿಕೊಂಡು ನಿಂತಿದ್ದ ವರನನ್ನೇ ನಿಟ್ಟಿಸುತ್ತಿದ್ದ ಬಿರ್ಜುನ ಕ್ಯಾಮೆರಾ ಕಣ್ಣಿಗೆ ಅವನ ಮನಸ್ಸೂ ಕಾಣುವಂತಿತ್ತು. ಅಪಘಾತ ಪ್ರದೇಶದಿಂದ ನೇರ ವರದಿ ಮಾಡಲು ಕ್ಯಾಮೆರಾದವನ ಇಶಾರೆಗೇ ಕಾಯುತ್ತ ನಿಂತ ಸುದ್ದಿಗಾರನಂತೆ ಅವನ ಉತ್ಕಂಠಿತ ಮೌನವಿತ್ತು. ಸಂಜೀವಿನಿ ಪರ್ವತದಲ್ಲಿ ಹೊರಳಾಡುತ್ತಿದ್ದ ಮಕ್ಕಳೂ ಏನೋ ಶೂಟಿಂಗಿನ ಸುಳಿವು ಹತ್ತಿದವರಂತೆ ಎದ್ದು ಓಡೋಡಿ ಬಂದು ವರನ ಸುತ್ತ ನಿಂತರು. ವರ ಎರಡೂ ಕೈಗಳನ್ನು ಚಾಚಿ ಅವರನ್ನು ತನ್ನೆಡೆ ಸೆಳೆದುಕೊಂಡನು.

ಮೇಲ್‌ಸೇತುವೆಯ ಮೇಲಿರುವ ಉಪಛಾಯಾಗ್ರಾಹಕನಿಗೆ ನಿಂತಲ್ಲೇ ಡ್ರೋನ್ ಶಾಟ್ ಸಿಗುವಂತಿತ್ತು. ರಿವರ್ಸಿನಲ್ಲಿ ಬರುವ ಟ್ರಕ್ಕುಗಳ ನಡುವೆ ಅಪ್ಪಿತಪ್ಪಿ ಬಂದು, ನಿಂತು, ಚಲಿಸುವ ಬಿಟಿಎಸ್ ಸಾರಿಗೆ ಬಸ್ಸುಗಳು, ಅದರಿಂದ ಕಿವಿಗೆ ಮಫಲರ್ ಸುತ್ತಿಕೊಂಡು ಇಳಿದು ಖಾಲಿ ಬುಟ್ಟಿ ಹಿಡಿದು ಓಡುವ ಜನಗಳು.. ನಾನಾ ಬಣ್ಣದ ಕುಂಕುಮದ ಪುಡಿಯನ್ನು ಇಡೀ ಪೇಟೆಯಲ್ಲಿ ಅಲ್ಲಲ್ಲಿ ಎರಚಿದಂತೆ ಕಾಣುವ ಹೂವಿನ ರಾಶಿಗಳು.. ಬರಲಿರುವ ಪ್ರಭಾತದ ಮುನ್ಸೂಚನೆ ಎಂಬಂತೆ ಚೆಂಡು ಹೂಗಳು ಉಜ್ವಲವಾಗಿ ಸೆಳೆಯುತ್ತಿದ್ದವು. ಟೆಂಪೋಗಳಿಂದ ಸಲಿಕೆ ಸಲಿಕೆ ಬಗೆದು ಹೂಗಳನ್ನು ದೊಡ್ಡ ಅಗಲ ವರ್ತುಲಾಕಾರದ ಬುಟ್ಟಿಗಳಿಗೆ ಸುರಿಯಲಾಗುತ್ತಿತ್ತು. ಇವೆಲ್ಲವುಗಳ ನಡುವೆ, ಅರಳಲೆಂದೇ ಹರಿದಾಡುವ ಬಳ್ಳಿಯಂತೆ ಅಲೆಯುತ್ತಿರುವ ವಧು.. ಅಲ್ಲಲ್ಲಿ ನಿಂತು ಮೈಮರೆತು ಮತ್ತೆ ಇನ್ನೆಲ್ಲೋ ನೋಡಿ ಅಲೆಯುವ ಅವಳನ್ನು ಫ್ರೇಮಿನಲ್ಲಿ ಹಿಡಿಯುವುದೇ ಒಂದು ಮೈಮರೆಯುವ ಚಟುವಟಿಕೆಯಾಯಿತು. ಎಲ್ಲವೂ ಹೂ ಮಳೆಯ ನೆಲವಾಗಿತ್ತು. ಎಷ್ಟೇ ಬೇಡವೆಂದರೂ, ಒಂದು ಕೈಲಿ ನಿರಿಗೆಯ ಲಂಗವನ್ನು ಚೂರು ಎತ್ತಿ ಎಷ್ಟೇ ನಾಜೂಕಾಗಿ ಹೆಜ್ಜೆಗಳನ್ನೂರಿದರೂ ಹೆಜ್ಜೆಯ ಅಡಿಗೆ ಸಿಗುವ ಹೂಗಳನ್ನು ತಪ್ಪಿಸಿಕೊಳ್ಳಲು ಆಗುತ್ತಿರಲೇ ಇಲ್ಲ. ಹೂವಿನ ಹಾಸಿನ ಮೇಲೇ ತಾನು ನಡೆಯುತ್ತಿದ್ದೇನೆ ಎಂಬುದನ್ನು ನಂಬಲೇ ಆಗದೆ ವಧು ನಿಂತುಬಿಟ್ಟಳು.

ಎದುರು ಜಲಪಾತದಂತೆ ಹತ್ತಾರು ಟೆಂಪೋಗಳಿಂದ ಕುಸುಮಪಾತ ನಡೆದಿತ್ತು.. ಚೆಂಡು ಹೂಗಳ ಪಾತ.. ತುಂಬಿದ ಬುಟ್ಟಿ ಬದಿಗೆ ಸರಿದು ಹೊಸ ಬುಟ್ಟಿ ಬಂದಿದ್ದೇ ತಿಳಿಯುತ್ತಿರಲಿಲ್ಲ. ಹಿಟ್ಟಿನ ಗಿರಣಿಯಲ್ಲಿ ಗೋಧಿ ಮುಗಿದಿದ್ದೆ ಜೋಳಕ್ಕೆ ಹೊಸ ಚೀಲ ಹಿಡಿದಂತೆ.. ಚೂರು ಆಚೆ ಬಸ್ ಶೆಲ್ಟರಿನಲ್ಲಿ ಹೆಂಗಸು ಗಂಡಸರ ಗುಂಪು ಕೂತು ಶರವೇಗದಲ್ಲಿ ಚೆಂಡು ಹೂಗಳ ಮುಗಿಯದ ಮಾಲೆಗಳನ್ನು ಕಟ್ಟುತ್ತಿದ್ದರು. ಕಟ್ಟುತ್ತಿದ್ದ ಹಾಗೆಯೇ ಇನ್ನೊಬ್ಬರು ಅಗಲ ಗೋಲ ಬುಟ್ಟಿಗಳಲ್ಲಿ ಅದನ್ನು ಸಿಂಬೆ ಸುತ್ತಿ ಸುತ್ತಿ, ಒಪ್ಪವಾಗಿ ಇಡುತ್ತಿದ್ದರು. ಒಂದಕ್ಕೊಂದು ಗಂಟು ಬಿದ್ದು ಜಣಕಾಗದಂತೆ ಅದೆಂತು ಕಾಪಾಡಿಕೊಳ್ಳುತ್ತಾರೋ.

ಈ ಹೂಲೋಕದಲ್ಲಿ ಯಾರಿಗೂ ಕಾಣದ ಸಿಂಡ್ರೆಲಾಳಂತೆ ನಿಂತ ವಧುಗೆ ಇದಕ್ಕಿಂತ ಮಿಗಿಲಾದ ಮಂಟಪ ಬೇರೆ ಇಲ್ಲ ಅನಿಸಿತು. ಮಾಲೆ ಕಟ್ಟುತ್ತಿರುವವರು ತದೇಕಚಿತ್ತದಲ್ಲಿ ಯಂತ್ರಗಳಂತೆ ಕಟ್ಟುತ್ತಿದ್ದರು. ಎಷ್ಟೊಂದು ಭಾಷೆಗಳಲ್ಲಿ ಮಾತನಾಡುತ್ತಿದ್ದರು. ಒಂದು ಗಂಟು ಹಿಂದೆ ಮುಂದಾಗದಂತೆ ಬೆರಳಲ್ಲಿ ನೂಲು ತಿರುಗಿಸುತ್ತ ಅಥವಾ ಸೂಜಿ ಪೋಣಿಸುತ್ತ ಕಟ್ಟುತ್ತಿದ್ದರು.. ಮುಗಿಯದ ಮಾಲೆ ಅದು.. ಹಿಡಿದು ಹೊರಟರೆ, ಇಲ್ಲಿಂದ, ಅದು ಬೆಳೆದ ಜಿಲ್ಲೆಯ ಊರಿನ ತೋಟದವರೆಗೂ ತೋರಣ ಕಟ್ಟಲು ಸಾಕಾದೀತು.. ಈ ಕಟ್ಟಾಣದಲ್ಲಿ ನಿದ್ದೆ ಇರದ ಕಣ್ಣಲ್ಲಿ ಎಣ್ಣೆ ಹಾಕಿಕೊಂಡೇ ಇರುವ ಅಜ್ಜಿಯರಿದ್ದರು, ಬಾಲಕರಿದ್ದರು, ಮಧ್ಯವಯಸ್ಕರಿದ್ದರು, ತೊಡೆ ಮೇಲೆ ಹಾಕಿಕೊಂಡ ಈ ಮಗುವಿಗೆ ಹಾಲೂಡುವ ಅಮ್ಮಂದಿರಿದ್ದರು.. ಮಾಲೆ ಮೂಡುತ್ತಲೇ ಇತ್ತು.. "ಮಿಯಾ ಚಾಯಾ ಕೊಡೋ"–ಎಂದು ಸೈಕಲ್ ಕ್ಯಾರಿಯರ್ ಮೇಲಿನ ನಳದ ಪಾತ್ರೆಯಿಂದ ಚೊರ್ ಎಂದು ಕಾಗದದ ಪುಟ್ಟ ಕಪ್ಪುಗಳಲ್ಲಿ ಸುರಿದು ಕೊಡುವ ಅಜ್ಜನನ್ನು ಕರೆದು, ಸೊಂಟದ ವೀಳ್ಯದ ಚೀಲದಿಂದ ಎಣಿಸಿ ದುಡ್ಡು ಕೊಡುತ್ತಿದ್ದರು. ವಧುಗೆ ತಾನು ಹೋಗಿ ಅವರ ಜೊತೆ ಚಕ್ಕಳಮಕ್ಕಳ ಹಾಕಿ ಕೂತುಬಿಡಬೇಕು ಅನಿಸಿತು. ಆದರೆ ತಾನು ಅವರ್‍ಯಾರಿಗೂ ಕಾಣಿಸುತ್ತಲೇ ಇಲ್ಲವಲ್ಲ ಅನಿಸಿ ಬೇಸರವಾಯಿತು. ತನ್ನ ನಿತ್ಯದ ವಹಿವಾಟಿನ ಸಲಿಗೆಯಲ್ಲಿ ಮಗ್ನವಾಗಿರುವ ಆ ಜಗತ್ತಿಗೆ, ತನಗೆ ಸಂಬಂಧ ಪಡದ ಸಂಗತಿ ಕಾಣುತ್ತಲೇ ಇರಲಿಲ್ಲ. ಚಾಯ್ ಮಿಯಾನ ಬಳಿ ಹೋಗಿ "ಎರಡು ಕಪ್" ಎಂದಳು. ಅವನಿಗೆ ಅದು ಕೇಳಿಸಲೇ ಇಲ್ಲ. ಅವನು ಅತ್ಯಂತ ಧಾರ್ಮಿಕ ವಿಧಿಯಂತೆ ಬಸ್ ಶೆಲ್ಟರಿನಲ್ಲಿ ಮಾಲೆ ಕಟ್ಟುತ್ತಿರುವ ಎಲ್ಲರಿಗೂ ಕೊಟ್ಟು ಆದ ಮೇಲೆಯೇ ತನ್ನ ಕಡೆ ನೋಡುತ್ತಾನೆ – ಎನಿಸಿ ಮುಂದೆ ನಡೆಯಲಾರಂಭಿಸಿದಳು.

ಆ ಅದೊಂದು ದಿನ ಒಂಟಿ ಕಡುಗೆಂಪು ಬಣ್ಣದ ಸುಪುಷ್ಟ ತಾಜಾ



ಗುಲಾಬಿಯೊಂದನ್ನು ಸಾಕಷ್ಟು ಮುಳ್ಳುಗಳಿರುವ ದೀರ್ಘ ದೇಟಿನೊಂದಿಗೆ ಅವನು ಅಳುಕುತ್ತಲೇ ಕೊಡದೇ ಹೋಗಿದ್ದರೆ ಪ್ರಕರಣ ಇಲ್ಲಿಯ ತನಕ ಬರುತ್ತಿರಲಿಲ್ಲ ಎನಿಸಿ ಅವಳಿಗೆ ನಗುವೇ ಬಂದಿತು. ಆ ಹೂವು ಈಗಲೂ ಆ ವರುಷದ ಡೈರಿ ಪುಸ್ತಕದಲ್ಲಿ ಚಪ್ಪಟೆಯಾಗಿ ಒಣಗಿ ಪಕಳೆ ಪಕಳೆ ಉದುರಿ ಪುಡಿಯಾಗಿ ಉಳಿದಿದೆ. ಈ ಪುಷ್ಪ ಕಾಶಿಯಲ್ಲಿರುವ ಪ್ರತಿ ಹೂವೂ ಹಾಗೆಯೇ ಯಾವುದೋ ಪುಸ್ತಕದ ಒಳಗೆ ಹೋಗಿ ಕೂತುಕೊಂಡಿದ್ದರೆ ಎಲ್ಲ ಹೇಗಿರುತ್ತಿತ್ತು. ಮೇಲಿನ ಕ್ಯಾಮೆರಾಕ್ಕೆ ಈಗ ವಧು ಕಾಣಲಿಲ್ಲ. ಎಷ್ಟು ಪ್ಯಾನ್ ಮಾಡಿದರೂ, ಝೂಮ್ ಔಟ್ ಮಾಡಿದರೂ ಸಿಗಲಿಲ್ಲ. ಅವನು ಬಿರ್ಜುಗೆ ಕರೆ ಮಾಡಿ ಹೇಳಿದ.. ಒಂದು ಕೈಲಿ ಕ್ಯಾಮೆರಾ ಇದ್ದುದರಿಂದ ಬಿರ್ಜು ಕಷ್ಟಪಟ್ಟು ಮೊಬೈಲ್ ಕಿಸೆಯಿಂದ ತೆಗೆದು ಹೆಗಲು ಮತ್ತು ಕಿವಿ ನಡುವೆ ಸಿಕ್ಕಿಸಿ.. "ಅವಳನ್ನು ಚೆಂಡು ಹೂಗಳ ಕಡೆ ಹೋಗುವಾಗ ಕಂಡೆ.. ನಾನು ಅವಳನ್ನು ಹಿಡಿಯಲು ಯತ್ನಿಸುತ್ತೇನೆ.. ನಾನು ಅವನನ್ನೂ ಈಗಷ್ಟೆ ಕಳೆದುಕೊಂಡೆ.. ಲೈಟು ಕಂಬದ ಕೆಳಗೆ ಇದ್ದ.. ನೀನು ಅವನನ್ನು ಟ್ರಾಕ್ ಮಾಡು.. ಇನ್ನು ಲೈಟ್ ಚೇಂಜ್ ಆಗ್ತದೆ.. ಅಪರ್ಚರ್ ನೋಡ್ತಾ ಇರು.." –ಎಂದು ಕ್ಯಾಮೆರಾ ಹೊರಳಿಸಿ ಎಚ್ಚರದಿಂದ ನಡೆಯತೊಡಗಿದ. ಈಗಷ್ಟೆ ಅಲ್ಲಿದ್ದಳಲ್ಲ ಈಗೆಲ್ಲಿ ಎಂದು ಕ್ಯಾಮೆರಾ ಬದಿಗಿರಿಸಿ ನಿಂತು ಅತ್ತ ಇತ್ತ, ಕಣ್ಣುಜ್ಜಿಕೊಂಡು ನೋಡಿದ. ಗೋಲಗೋಲ ಆಕೃತಿಗಳ ವಿಶಿಷ್ಟ ಮೂಲೆಯೊಂದು ಮುಂಜಾವದ ಕನಸಿನಂತೆ ಸೆಳೆಯಿತು.. ತಬ್ರೂಜ, ಕಲ್ಲಂಗಡಿ, ಹಸಿರು ಕಿತ್ತಲೆಗಳು ಉರುಳುರಳಿ ಬರುತ್ತಿದ್ದವು.. ಕಲ್ಲಂಗಡಿಯನ್ನು ಎತ್ತೆತ್ತಿ ಎಸೆಯುತ್ತಿದ್ದರು.. ಮುಳುಗುತ್ತಿರುವ ಹಡಗಿನಿಂದ ಮಕ್ಕಳನ್ನು ಪಡಾವಿನ ಕಲಾಸಿಗಳ ಸುಭದ್ರ ಕೈಗೆ ಎಸೆದಂತೆ.. ಒಂದೂ ಕೆಳಗೆ ಬೀಳದಂತೆ.. ಅದರದೇ ಒಂದು ಲಯವಿತ್ತು.. ಬೀಸಿತ್ತು. ಗೋದಿಯ ಚೀಲಗಳನ್ನು ಗೂಡ್ಸ್ ರೈಲುಗಳಿಂದ ಟ್ರಕ್ಕುಗಳಿಗೆ ಎಸೆದಂತೆ.. ಅರಿಷಿಣ ಬೆಳಕಲ್ಲಿ ಕಲ್ಲಂಗಡಿ ವಿಚಿತ್ರವಾಗಿ ಕಾಣುತ್ತಿತ್ತು. ಕೆಲ ವರುಷಗಳ ಹಿಂದೆ ಲ್ಯಾಪ್‌ಟಾಪಿನಲ್ಲೆ ಮತ್ತೆ ಮತ್ತೆ ನೋಡಿದ್ದ, ಬಿರ್ಜುಗೆ ಅತಿ ಪ್ರಿಯವಾದ "ಡೇ ಆಫ್ ದಿ ಜಾಕಲ್" ಚಿತ್ರದಲ್ಲಿ ಅದರ ನಾಯಕ ತನ್ನ ಬಂದೂಕಿನ ಗುರಿಯ ತಾಲೀಮಿಗೆ, ಇಂಥದೇ ತರಕಾರಿ ಸಂತೆಯಿಂದ ಕಲ್ಲಂಗಡಿಯೊಂದನ್ನು ಎತ್ತಿಕೊಂಡು ಊರಾಚೆ ಹೋಗಿ, ಅದನ್ನು ಒಂದು ಮರದ ಕೊಂಬೆಗೆ ತೂಗು ಹಾಕಿ, ಅದಕ್ಕೆ ಬಿಳಿಯ ಬಣ್ಣದಿಂದ ಕಣ್ಣು ಹುಬ್ಬು ಮೂಗು ಬಾಯಿ ಬಿಡಿಸಿ ಅದಕ್ಕೆ ದೂರದಿಂದ ಗುರಿಯಿಟ್ಟು ಗುಂಡು ಹಾರಿಸಿದ್ದ. ಲಾಂಗ್ ಶಾಟಿನ ಆ ದೃಶ್ಯ ಕುತೂಹಲಕಾರಿ ಇತ್ತು. ಗುರಿ ಹಿಡಿದು ನಿಂತ ಅವನ ಪಕ್ಕದಿಂದಲೇ ದೂರದ ಮರದ ಮೇಲೆ ಗುರಿ ಇಟ್ಟು ಚಿತ್ರೀಕರಣ ಮಾಡಲಾಗಿತ್ತು. ಅವನು ಗುರಿ ಹಿಡಿದಾಗ ಒಂದು ನಿಶ್ಶಬ್ದವಿತ್ತು. ದೂರದಲ್ಲಿ ಅಲ್ಲಾಡದೆ ತೂಗಿರುವ ಆ ಕಲ್ಲಂಗಡಿ ಹಣ್ಣು ನಿರುಪದ್ರವಿಯಾಗಿ ತೋರುತ್ತಿತ್ತು. ಆ ಮರದಿಂದಲೇ ಉದುರಿದ ಆದರೆ ನೆಲಕ್ಕಿನ್ನೂ ಬೀಳದೆ ಅಂತರಾಳದಲ್ಲೆ ನಿಂತ ಹಣ್ಣಿನಂತೆ ಇತ್ತು. ಯಾರೋ ಅದಕ್ಕೆ "ಸ್ಟೇಚ್ಯೂ" ಅಂದಂತೆ. ನಾಯಕ ಟ್ರಿಗರ್ ಒತ್ತಿದ್ದೇ ತಡ ಹಣ್ಣು 'ಕ್ಲೋಸ್ ಅಪ್'ನಲ್ಲಿ ಛಿದ್ರ ವಿಚ್ಛಿದ್ರವಾಯಿತು. ಆ ಸದ್ದಿಗೆ ಸುತ್ತಮುತ್ತಣ ಮರಗಳ ಹಕ್ಕಿಗಳು ಚೀರುತ್ತ ಚಲ್ಲಾಪಿಲ್ಲಿಯಾಗಿ ಹಾರಿಹೋದವು. ತನ್ನ ಕೆಂಪು ತಿರುಳಿನಿಂದಾಗಿಯೇ ಆ ಹಣ್ಣಿನ ಧ್ವಂಸ ದಾರುಣವಾಗಿತ್ತು. ಅವನು ಅದಕ್ಕೆ ಕಣ್ಣು, ಮೂಗು ಬರೆಯದೇ ಇದ್ದರೆ ಅದು ದಾರುಣವಾಗುತ್ತಿರಲಿಲ್ಲ. ಒಂದು ಆಟವಾಗುತ್ತಿತ್ತು ಅಷ್ಟೆ. ಬಿರ್ಜುಗೆ ಮತ್ತೆ ಮತ್ತೆ ಆ ದೃಶ್ಯ ಕಾಡಿದ್ದಿದೆ. ಮತ್ತು ಅದು ಮನಸಲ್ಲೇ ಬೆಳೆದಿದ್ದಿದೆ. ಅಂದರೆ ಇನ್ನೊಮ್ಮೆ ಅದನ್ನು ನೋಡಿದಾಗ ಅರೆ ಹಕ್ಕಿಗಳ ಧ್ವನಿ ತಾನು ಅಂದುಕೊಂಡಷ್ಟು ಇರಲಿಲ್ಲಲ್ಲಾ ಎಂದು ಅನಿಸಿದ್ದಿದೆ. ಅಥವಾ ಆ ಮುಂಚಿನ ಆ ನೀರವ ತಾನು ಅಂದುಕೊಂಡಷ್ಟು ದೀರ್ಘವೂ ಇರಲಿಲ್ಲ ಎಂದು ಅನಿಸಿದ್ದಿದೆ. ಒಂದು ಮಾತ್ರ ನಿಜ.. ಆ ನಂತರ ಕಲ್ಲಂಗಡಿ ಹಣ್ಣುಗಳೆಲ್ಲವೂ ಬೇರೆಯೇ ಆಗಿ ತೋರಿವೆ. ಟ್ರಕ್ಕಿನಿಂದ ಎಸೆಯಲ್ಪಡುತ್ತಿರುವ ಈ ನೋಟವಂತೂ ರುಂಡಗಳ ಚೆಂಡಾಟದಂತೆಯೇ ಭಾಸವಾಗುತ್ತಿದೆ. ಬಿರ್ಜು ಕ್ಯಾಮೆರಾದ ಹಂಗಿಲ್ಲದೆ.. ಟಬ್ರೂಜಗಳನ್ನು ನೋಡಿದ.. ಅವು ಅತ್ಯಂತ ಸಮಾಧಾನಕರವಾದ ವಿಲಕ್ಷಣ ಶಾಂತಿಯನ್ನು ಸೂಸುತ್ತಿದ್ದವು.. ಇಷ್ಟೊಂದು ಸರಭರದ ನಡುವೆಯೂ ತಪಸ್ಸಿಗೆ ಕೂತವಂತೆ ಕಾಣುತ್ತಿದ್ದವು.. ಸಾರಿಗೆಯಲ್ಲಿ ತುಸು ಜಜ್ಜಿದಂತಾದ ತಬ್ರೂಜಗಳನ್ನು ಆಳುಗಳು ಕೆಲಸದ ನಡುವೆಯೆ ನಾಜೂಕಾಗಿ ಚೂರಿಯಿಂದ ಹಾಳಾದ ಭಾಗವನ್ನಷ್ಟೆ ತೆಗೆದು ಉಳಿದ ಭಾಗವನ್ನು ನೀಟಾಗಿ ಕತ್ತರಿಸಿ ಪರಸ್ಪರ ಕೊಟ್ಟು ತಿನ್ನುತ್ತಿದ್ದರು.. ಅಕ್ಕಪಕ್ಕ ಹಾಯುವವರಿಗೆಲ್ಲ ಕೊಟ್ಟು ತಿನ್ನುತ್ತಿದ್ದರು.. ಅಲ್ಲೇ ಇದ್ದ ಬಿರ್ಜುಗೆ ತನಗೂ ಸಿಗಬಹುದು ಒಂದು ಹೋಳು ಎಂದು ಅನಿಸಿತು.. ತಕ್ಷಣ ಅವರೆಲ್ಲರ ವರಸೆ ನೋಡಿ ಭಯವಾಯಿತು.. ಏಕೆಂದರೆ ಅವರು ಇವನೊಬ್ಬನನ್ನು ಬಿಟ್ಟು ಉಳಿದೆಲ್ಲರಿಗೂ ಹೋಳು ಕೊಡುತ್ತಿದ್ದರು.. ಇವರಿಗೆ ತಾನು ಕಾಣಿಸುತ್ತಲೇ ಇಲ್ಲವೆ..

ಮೇಲ್‌ಸೇತುವೆಯ ಮೇಲೆ ಇಬ್ಬರನ್ನೂ ಕಳೆದುಕೊಂಡು ನಿಂತಿದ್ದ ತುಸು ಗಲಿಬಿಲಿಗೊಂಡ ಉಪಛಾಯಾಗ್ರಾಹಕ ಗಲಿಬಿಲಿಯಲ್ಲಿ ಲೆನ್ಸುಗಳ ಬ್ಯಾಗಿನಿಂದ ಹುಡುಕಿ ತೆಗೆದು ಬೇರೆ ಬೇರೆ ಲೆನ್ಸು ಜೋಡಿಸತೊಡಗಿದ.. ಎದುರಿನ ವಿಶಾಲ ಸಗಟು ಜಗತ್ತು ಅದ್ವಿತೀಯ ಅಪರಿಚಿತತೆಯಲ್ಲೆ ಅತೀವ ಸುರಕ್ಷೆಯನ್ನು ಹೊಮ್ಮಿಸುತ್ತಿತ್ತು. ಕ್ಲೋಸ್ ಅಪ್‌ಗೆ ಹೋದರೆ ಕಾಣುವ ಲೋಕ ಒಂದು, ಝೂಮ್ ಇನ್‌ನಲ್ಲಿ ಆಕಾರ ಪಡೆಯುವ ಆಕೃತಿಗಳು ಒಂದು, ವಿಶಾಲ ವೈಡ್ ಕೋನದಲ್ಲಿ ಆವರಿಸುವ ವೈಶಾಲ್ಯವೊಂದು, ತೀರ ಹೈಪರ್ ಝೂಮ್ ಮಾಡಿದಾಗ ಎದುರಿಗಿದ್ದ ಆಕೃತಿ ಅಥವಾ ವ್ಯಕ್ತಿಯೇ ಪಾರದರ್ಶಕವಾಗುತ್ತ, ಹಠಾತ್ತನೆ ಪ್ರತ್ಯಕ್ಷವಾಗುವ ಆ ತನಕ ಅವನಿಂದಲೇ ಮರೆಯಾಗಿದ್ದ ಹಿನ್ನೆಲೆಯ ಉಪನಗರ ಒಂದು.. ಯಾವುದನ್ನು ಹಿಡಿಯಬಲ್ಲೆ, ಯಾವುದನ್ನು ಹಿಡಿಯಲಾರೆ –ಗೊತ್ತಾಗದೆ ಸುಮ್ಮನೆ ಕಣ್ಣಿಗಿಟ್ಟು ನೋಡಿದಾಗಲೆಲ್ಲ ಒಂದರೊಳು ಒಂದು ಪದರ ಪದರವಾಗಿ ಬೆರೆತು ಹೂವು, ಹಣ್ಣು, ಪಲ್ಲೆ ಎಲ್ಲವನ್ನೂ ಒಳಗೊಂಡ ಸಂಯುಕ್ತ ಸಂಸಾರದ ಜನ ಅರಣ್ಯವೊಂದು ಹಠಾತ್ತನೆ ಹೊಸ ಮೆಹಂದಿಯ ಕಾಂತಿಯಲ್ಲಿ ನಳನಳಿಸತೊಡಗಿತು. ಸುಮ್ಮನೆ ಹೊರಳಿ ಆಕಾಶದತ್ತ ನೋಡಿದವನೇ ಆಗಷ್ಟೆ ಹೊತ್ತಿಕೊಳ್ಳಲು ತೊಡಗಿದ ಮೂಡಣದ ಒಲೆಯನ್ನು ನೋಡಿ ಬೆಚ್ಚಿ ಬಿದ್ದ.. ಕೆಳಗಿನ ಸಮಸ್ತ ಜೀವ ಲೋಕಕ್ಕೂ "ನೋಡಿರೋ" ಎಂದು ಕೂಗಿ ಕೂಗಿ ತೋರಿಸಬೇಕೆನಿಸಿದರೂ ಬಾಯಿಗೆ ಏನೂ ಬರಲಿಲ್ಲ..



(ಲೇಖಕರು ಕನ್ನಡದ ಖ್ಯಾತ ಕತೆಗಾರರು, ಕವಿ ಮತ್ತು ಚಿತ್ರಸಾಹಿತಿಯೂ ಆಗಿರುವರು.)

ಒಂದು ಶುದ್ಧ ಹರಟೆ!

ಮೀಶ್ಯಾ ವಾಸ್ಯಂ ಇದಂ ಸರ್ವಂ...

-ವಿಜಯೇಂದ್ರ ಪಾಟೀಲ



ಚಿತ್ರ: ಗುಜ್ಜಾರ್

ಕೇವಲ ಅಂಬಿಕಾ ಆಗಿದ್ದವರು ವರ್ಷವೆಲ್ಲಾ ದಿನಕ್ಕೊಂದರಂತೆ ಫೇಸ್‌ಬುಕ್ ಲಲಿತಪ್ರಬಂಧ ಬರೆದು ಲಲಿತಾಂಬಿಕಾ ಎನಿಸಿದರಲ್ಲ, ಅವರೇ ನನ್ನ ಲಲಿತಪ್ರಬಂಧ ಸಂಕಲನದ ಬಿಡುಗಡೆಗೆ ಬಂದಿದ್ದವರು. ಪ್ರಸ್ತಾವನೆಯಲ್ಲಿ ನನ್ನ ಜೀವದ ಗೆಳೆಯ ಸಂಗಣ್ಣ ಅವರ ಸಾಧನೆ ಹೇಳುತ್ತ, "ಪಸರಿಸಿದ ವಿಷಯಗಳೆಂಬುದರ ಎಲ್ಲಾ ಹಸುರನು ಮೇದ ಹಸು..." ಎಂದು ಪ್ರಾಸ ಸಾಧಿಸಿದ್ದಲ್ಲದೆ "ಅನ್ಯರಿಗೆ ವಿಷಯದ ಬರ ಸೃಷ್ಟಿಸುವಷ್ಟು ಸಾಹಿತ್ಯ ರಚಿಸಿಬಿಟ್ಟಿದ್ದಾರೆ" ಎಂದೂ ಹೊಗಳಿದ. ಆ ಮಾತಿನಲ್ಲಿ ಲಲಿತಾಂಬಾ ಅವರಿಗೆ "ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ" ಎಂಬ ಅನ್ಯಸತ್ಯ ಕಂಡಿತೇನೋ, ಎಲ್ಲಾ ಎಡವಟ್ಟಾಗಿ ಹೋಯಿತು. ತಾನು ಗಂಡಸರ ಹರಿದ ಪ್ಯಾಂಟು-ಶರ್ಟ್-ಪಂಚೆಗಳ ಬಗ್ಗೆ ಬರೆದಿಲ್ಲ. ಅವರ ಹತ್ತಾರು ವ್ಯಸನಗಳ ಕುರಿತಂತೆ ಬರೆದಿಲ್ಲ. ಅವರ ಗಡ್ಡ ಮೀಸೆಗೆ ಕೈ ಹಚ್ಚಿಲ್ಲ. ಗಂಡಸಾಗಿ ಇಂತಹ ಪುಲ್ಲ ಕುಸುಮಗಳ ಬಗ್ಗೆ ಬರೆಯದೆ 'ಸತ್ಯವೆಂಬ ಮಣ್ಣು ಮಸಿ', 'ಹೃದಯವೆಂಬ ಪಾತಾಳ', ಇತ್ಯಾದಿ ಬರೆಯುವ ಅಗತ್ಯ ಏನಿತ್ತು ಎಂದು ಸಂಗಣ್ಣನ ಮೇಲಿನ ಸಿಟ್ಟನ್ನು ನನ್ನ ಬರೆಹಗಳ ಮುಖಕ್ಕೆ ಎರಚಿದರು. ಮದುವೆಗೆ ಬಂದವರನ್ನು ಬಿಟ್ಟು 'ರಾಜು ಬರಲಿಲ್ಲವೆ? ರಶ್ಮಿ ಬರಲಿಲ್ಲವೇ?' ಎಂದು ಬಾರದವರನ್ನು ವಿಚಾರಿಸುವಂತೆ ನನ್ನ ಪ್ರಕಟಿತ ಪ್ರಬಂಧಗಳನ್ನು ಬಿಟ್ಟು ಬರೆಯದ ಮೀಸೆ-ಗಡ್ಡಗಳನ್ನು ಎಳೆದು ತಂದರು......

ಕಾರ್ಯಕ್ರಮ ಮುಗಿಸಿ, ಪತಿದೇವರ ಸಂಜೆಯ ಖರ್ಚು ಮತ್ತು ತಮ್ಮ ಅಪ್ಪಟ ರೇಶ್ಮೆ ಸೀರೆಯ ಮೊತ್ತ ಪಡೆದು, ಕಾರು ಏರುವಾಗ ಲಲಿತ ಪ್ರಬಂಧಕಾರರಂತೆ ಕೊಂಚ ಮುಖ ಅರಳಿಸಿದ ಲಲಿತಾಂಬಾ, 'ಮೀಸೆಯ ಬಗ್ಗೆ ಇನ್ನಾದರು ಬರೆದು ಗಂಡಸರಿಗೆ ನ್ಯಾಯ ಒದಗಿಸಿದರೆ ಮುಂದಿನ ಪುಸ್ತಕದ ಬಿಡುಗಡೆಗೆ ತಾನೇ ಬರುವುದಾಗಿ' ಸಣ್ಣ ಉಃಶಾಪ ರೂಪದ ಸಲಹೆ ನೀಡಿದರು. ಅವರು ಹೋದ ದಿಕ್ಕಿಗೆ ನಮಸ್ಕರಿಸಿದ ನಾನು 'ಮೀಸೆಯ ಬಗ್ಗೆ ಎಂದೆಂದೂ ಬರೆಯಲಾರೆ' ಎಂದು ಒಳಗೊಳಗೆಯೇ ಧಿಃಕಾರ ಕೂಗಿ ವೇದಿಕೆಯ ಖುರ್ಚಿ-ಟೇಬಲ್ಲು, ಬ್ಯಾನರು ತೆಗೆಯಲು ಒಳಗೆ ಹೋದೆ.

ಆದರೆ ದಾರಿಯಲ್ಲಿ ಹೊಲಸು ನೋಡಿ ಅಸಹ್ಯವಾದರೂ ಬಾಯಲ್ಲಿ ನಿಯಂತ್ರಣ ಮೀರಿ ನೀರು ಉಕ್ಕಿ ಮತ್ತಷ್ಟು ಅಸಹ್ಯವಾಗುವಂತೆ ಬರೆಯಬಾರದೆಂದುಕೊಂಡ ಈ ಮೀಸೆ ಬೆಳೆದು ಕಿಡಿಗೇಡಿತನಕ್ಕಿಳಿಯಿತು. ಇದು ದೆವ್ವದ ಭಯದ ಮಕ್ಕಳು ಅದರ ಕತೆಯನ್ನೇ ಇಷ್ಟ ಪಡುವಂತಹ ಮಾತು! ಚಿಕ್ಕವನಿದ್ದಾಗ ನಮ್ಮ ಮೀಸೇ ಮಾವ ಬಂದಾಗಲೆಲ್ಲ ನನ್ನನ್ನು ಎತ್ತಿಕೊಂಡವನೇ ಮುಖಕ್ಕೆಲ್ಲ ಜೊಲ್ಲು ಮೆತ್ತಿ ಮೀಸೆಯಿಂದ ಚುಚ್ಚುತ್ತಿದ್ದ. ಅದು ಅವನ ಪ್ರೀತಿಯ ರೀತಿ! ಅದೇ ಮೀಸೆಯ ಮೇಲಿನ ನನ್ನ ಮೊದಲ ರೋಷ....! ಮುಂದೆ, ದೇವರ ದಾಸಿಮಯ್ಯಾದಿಗಳು ಹೇಳಿದ ಗಡ್ಡ ಮೀಸೆಯವ ಗಂಡು; ಮತ್ತು ಇದರ ಜೊತೆ ಬರುವ ಮನ ಸೆಳೆಯುವ ಸಾಲು ಹೆಣ್ಣು ಎಂಬುದನ್ನು, ಹೆಣ್ಣು ಗಂಡುಗಳ ನಡುವೆ ಸುಳಿದು ವ್ಯೆಯಾರ ಮಾಡುತ್ತಿದ್ದ ನನ್ನ ಆತ್ಮ ಅರಿತುಕೊಂಡಿತು. ಆದರೆ ಗೆರೆಮಾತ್ರ ಮೀಸೆ ಮೂಡಿ ಒಂಚೂರೂ ಗಡ್ಡಬಾರದ ನನ್ನ ಗೆಳೆಯನ ಆತ್ಮದ ನುಲಿಯುವಿಕೆಯೇನೂ ಕಿರಿದಾಗಿರಲಿಲ್ಲ. ಹೀಗಾಗಿ ಮೀಸೆಯನ್ನು ಗಂಡಸ್ತನಕ್ಕೆ ಸಮೀಕರಿಸುವುದು ನನಗೆ ಸರಿ ಕಂಡಿರಲಿಲ್ಲ. ಮೂಲತಃ ಮೀಸೆಯ ಮೂಡುವಿಕೆಯೇ ನಾಚಿಕೆ ಪಡುವ ಸಂಗತಿಯಾಗಿತ್ತು. ಹಾರ್ಮೋನಿನ ನೆಪದಲ್ಲಿ ನಮ್ಮ ಮೂಗಿನ ನೇರದಲ್ಲೇ ನಡೆಯುವ ಈ ಅತಿಕ್ರಮಣ ನೆಲ ಒದ್ದು ಜಲ ತೆಗೆಯುವ ತಾಕತ್ತಿನವರ ಅಸಹಾಯಕತೆಯನ್ನು ಸಾರುವಂತಿತ್ತು. ಹೀಗಾಗಿ ನಾನು ಗಂಡಸಾಗಿಯೂ ಮೀಸೆಯ ಬಾಲ ಬೆಳೆಯಗೊಟ್ಟಿರಲಿಲ್ಲ. ನನ್ನ ಸ್ತ್ರೀವಾದಿ ಗೆಳತಿಯ ಸಭೆಗೆ ಹೋಗುವಾಗಲಂತೂ ಗಂಡಸ್ತನ ಕಡಿಮೆ ತೋರಿಸಲು ಬ್ಲೇಡಿನಿಂದ ಗಡ್ಡ, ಮೀಸೆಗಳ ಬೇರುಗಳನ್ನೂ ನಾಶ ಮಾಡಿಬಿಡುತ್ತಿದ್ದೆ.....ಹೀಗೇ ಏನೇನೋ ನೆನಪುಗಳು ಲಲಿತಾಂಬಾ ಅವರ ಮೀಸೆಯ ಆಸಕ್ತಿಯ ದೆಸೆಯಿಂದ ಬೇಡವಾಗಿಯೂ ಚಿಗುರತೊಡಗಿದವು.

ಈ ಮೀಸೆಯಾದರೂ ಏನು? ಮೂಗಿನ ಕೆಳಗಿನ ಭೂಮಿ, ಮೂಗಿನೊಳಗಿನ ಗೊಬ್ಬರ ಮತ್ತು ಬಾಯೊಳಗಿನ ಜೊಲ್ಲುಗಳೆಲ್ಲ ಪುಕ್ಕಟೆ ಒದಗಿದ್ದಕ್ಕೆ ಬೆಳೆದ ಮಾರ್ದವತಾವಿಹೀನ ಜೊಂಡಿನ ಗುಂಪು. ತಲೆಗೂದಲನ್ನಾದರೆ ತಂದೆ-ತಾಯಿ; ಗಂಡ-ಹೆಂಡತಿ; ಪ್ರೇಯಸಿ-ಪ್ರಿಯಕರ ಯಾರೂ ಬಲು ಅಕ್ಕರೆ-ಪ್ರೀತಿಯೊಂದಿಗೆ ಬಾಚಿಯಾರು, ನೇವರಿಸಿಯಾರು. ಆದರೆ ಮೀಸೆಯ ವಿಷಯಕ್ಕೆ ಬಂದರೆ ಇದೆಲ್ಲ ಉಹೂಂ. ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುವಂತೆ ತನ್ನ ಮೀಸೆಯನ್ನು ತಾನೇ ತಿರುವಿಕೊಳ್ಳಬೇಕು. ಉದ್ದ, ದಪ್ಪ, ಚಿತ್ರ-ವಿಚಿತ್ರ ಮೀಸೆಗಳನ್ನು ನೋಡಿದವರು ಮೀಸೆಯ ಮರೆಯಲ್ಲಿ ಅಥವಾ ಮುಖ ಮುಚ್ಚಿ ನಕ್ಕಾರೇ ಹೊರತು ಮೆಚ್ಚಿ ನಗಲಾರರು. ಇದೇನು ಸಾಮಾಜಿಕ ಕಾಡೇ? ಚಿತ್ರ ಪ್ರದರ್ಶನವೇ? ಕಾವ್ಯ ಗಾಯನವೇ? ಹೆಚ್ಚೆಂದರೆ ವ್ಯರ್ಥ ಸರ್ಕಸ್‌ನ ಕಸರತ್ತು. ಜೊತೆಗೆ, ನನಗೆ ನನ್ನದೇ ಆದ ದರ್ಶನ, ಮೀಮಾಂಸೆ ಕೂಡ ಇತ್ತು....

ಮೀಸೆಯ ಬಗ್ಗೆ ಲಲಿತಾಂಬಾಗೇಕಿಷ್ಟು ಆಸಕ್ತಿ? ತಾವೇ ಬರೆಯಬಹುದಲ್ಲವೇ ಎಂದೂ ಅನಿಸಿತು. 'ಅನುಭವಿಸದ್ದನ್ನು ಬರೆಯಬಾರದು' ಎಂಬ ಸಾಹಿತ್ಯದ ಹೊಸ ಕಾನೂನು ನೆನಪಾಯಿತು. ಪರೋಕ್ಷ ಅನುಭವವೂ ಅನುಭವವೇ ಎಂಬ ವಾದ ಹುಟ್ಟಿ ವಿನಾಕಾರಣ ಅವರ ಗಂಡನ ಮುಖ ಮುಂದೆ ಬಂತು. ಅದರಲ್ಲಿ 'ಕಾಂಬವರಿಗೆ ಮಾತ್ರ ದೇವರು' ಎಂಬುದನ್ನು ನಿರೂಪಿಸುವಂತಹ ಇದ್ದೂ ಇಲ್ಲದ ಅವರ ಮೀಸೆಯ ನೆರಳಿತ್ತು. ಬೇರೆಡೆಗಾದರು ಇವುಗಳನ್ನು ಹುಲುಸಾಗಿ ಕಾಣುವ ಆಸ್ತಿಕತೆ ಲಲಿತಾಂಬಾ ಅವರಲ್ಲಿ ಮೂಡಿರಬಹುದೇ? ಶಂಕೆ ಮೂಡಿತು. ಅದೇನೇ ಇರಲಿ, ನಾನು ಮಾತ್ರ ಯಾರೂ ಹೇಳುತ್ತಾರೆಂದು ಮೀಸೆಯಂಥ ಅಪ್ರಯೋಜಕ ಸಂಗತಿಯನ್ನು ಮನಸ್ಸಿನ ಮುಖದಲ್ಲಿ ಬೆಳೆಯಿಸಲೇಬಾರದು ಎಂದು ನಿರ್ಧರಿಸಿಬಿಟ್ಟೆ. ಆದರೆ ಬಿಟ್ಟೇನೆಂದರು ಅದು ಬಿಡಬೇಕಲ್ಲ! ಬೋಳಿಸಿದಷ್ಟೂ ಬೆಳೆಯುವ ಜಾತಿಯದದು.!

ಈ ಮೀಸೆಯಾದರೂ ಏನು? ಮೂಗಿನ ಕೆಳಗಿನ ಭೂಮಿ, ಮೂಗಿನೊಳಗಿನ ಗೊಬ್ಬರ ಮತ್ತು ಬಾಯೊಳಗಿನ ಜೊಲ್ಲುಗಳೆಲ್ಲ ಪುಕ್ಕಟೆ ಒದಗಿದ್ದಕ್ಕೆ ಬೆಳೆದ ಮಾರ್ದವತಾವಿಹೀನ ಜೊಂಡಿನ ಗುಂಪು. ತಲೆಗೂದಲನ್ನಾದರೆ ತಂದೆ-ತಾಯಿ; ಗಂಡ-ಹೆಂಡತಿ; ಪ್ರೇಯಸಿ-ಪ್ರಿಯಕರ ಯಾರೂ ಬಲು ಅಕ್ಕರೆ-ಪ್ರೀತಿಯೊಂದಿಗೆ ಬಾಚಿಯಾರು, ನೇವರಿಸಿಯಾರು. ಆದರೆ ಮೀಸೆಯ ವಿಷಯಕ್ಕೆ ಬಂದರೆ ಇದೆಲ್ಲ ಉಹೂಂ. ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುವಂತೆ ತನ್ನ ಮೀಸೆಯನ್ನು ತಾನೇ ತಿರುವಿಕೊಳ್ಳಬೇಕು. ಉದ್ದ, ದಪ್ಪ, ಚಿತ್ರ-ವಿಚಿತ್ರ ಮೀಸೆಗಳನ್ನು ನೋಡಿದವರು ಮೀಸೆಯ ಮರೆಯಲ್ಲಿ ಅಥವಾ ಮುಖ ಮುಚ್ಚಿ, ನಕ್ಕಾರೇ ಹೊರತು ಮೆಚ್ಚಿ ನಗಲಾರರು. ಇದೇನು ಸಾಮಾಜಿಕ ಕಾಡೇ? ಚಿತ್ರ ಪ್ರದರ್ಶನವೇ? ಕಾವ್ಯ ಗಾಯನವೇ? ಹೆಚ್ಚೆಂದರೆ ವ್ಯರ್ಥ ಸರ್ಕಸ್‌ನ ಕಸರತ್ತು. ಜೊತೆಗೆ, ನನಗೆ ನನ್ನದೇ ಆದ ದರ್ಶನ, ಮೀಮಾಂಸೆ ಕೂಡ ಇತ್ತು....

ಅನಿಯಂತ್ರಿತ ಗಡ್ಡ ಸನ್ಯಾಸಿಗಳದು, ಮೀಸೆಯ ಸ್ವಾಮ್ಯ ಭವಿಗಳದು ಎಂದು ವಿಭಾಗಿಸಿದೆ. ಆದರೆ ಹದ್ದು ಮೀರಿ ಇವೆರಡನ್ನೂ ಜೋಡಿಸುವವರೂ ಇದ್ದಾರಲ್ಲ, ಆಗ ಈ ಲೌಕಿಕ-ಸನ್ಯಾಸ ಸೇರುವ ಪ್ರಸ್ತಭೂಮಿಯನ್ನು ಸನ್ಯಾಸ ಪೂರ್ವದ 'ವಾನಪ್ರಸ್ತ ಭೂಮಿ' ಎಂದು ಕರೆಯಬಹುದೇ? ಎಂಬ ಸಂದಿಗ್ಧ ಕಂಡಿತು. 'ಮೀಸೆ ನದಿ, ಗಡ್ಡ ಸಮುದ್ರ, ಮುಖವೇ ಭೂ ಮಂಡಲ' ಎಂಬ ಗೆಳೆಯನ ತತ್ವ ಕೂಡ ಸರಿ ಕಾಣಲಿಲ್ಲ. ಜಲ ಸಂಗಮಗಳ ಸಾನ್ನಿಧ್ಯದ ಪಾವಿತ್ರ್ಯ ಕಾಣದೆ ಇದೊಂದು ಏಕ ಜಾತಿಯ ಸಸ್ಯಗಳ ಕಾಡಾಗಿ, ಕೆಲವೊಮ್ಮೆ ಪ್ರಾಣಿ ತಾಣವಾಗಿ.....ಥೂ..! ಒಟ್ಟಾರೆ, ಇದನ್ನೆಲ್ಲ ಆಲೋಚಿಸಬೇಕಾಗಿ ಬಂದದ್ದು ನನ್ನ ಕರ್ಮವೇ ಸರಿ..! ಆದರೆ ಕರ್ಮಫಲ ಬಿಟ್ಟು ಹೋದೀತೇ?

ಮುಖವನ್ನು ಗಮನಿಸಿ ಕಮಲ ಎಂದರು. ಮಿನುಗುವ ಅದರೊಳಗಿನ ಕಣ್ಣಿಗೂ ಹಾಗೇ ಎಂದರು. ಆಡುವ, ಹಾಡುವ, ತಿನ್ನುವ ಬಾಯಿಗೂ ಕಮಲ ಎಂದರು. ತೊಂಡೇ ತುಟಿಗಳಿಗೆ ಬಹಿರಂಗದ ಮತ್ತು ಖಾಸಗಿ ಕೆಲಸ ಕೊಟ್ಟರು. 'ಮುಖ್ಯ ಪ್ರಾಣ'ನ ಪ್ರತಿನಿಧಿ ಮೂಗಿಗೆ ಸಂಪಿಗೆಯೆಂದರು. ದುಡಿಯುವ ಹಲ್ಲಿಗೆ ದಾಳಿಂಬೆ ಎಂದರು. "ಆಚಾರವಿಲ್ಲದ" ನಾಲಿಗೆಯ ಜೊತೆಗೂ ಸಾವಯವ ಸಂಬಂಧ ಉಳಿಸಿಕೊಂಡರು. ಕೇಳಿಸಿಕೊಳ್ಳುವ ಮಾತ್ರ ಅಲ್ಲ; ಕೇಳಸಿಕೊಳ್ಳಲಾಗದ ಕಿವಿಗಳೂ ಚಾಳೀಸು ಹೊತ್ತವು. ಕಣ್ಣಿನ ಮೇಲಿನ ಅರೆ ಕಾಂಪೌಂಡ್, ಹುಬ್ಬು. ಅದು ಕಾಮನಬಿಲ್ಲಾಯಿತು.... ಇಷ್ಟಾಗುವಾಗ ಉಳಿದ ನಿರುಪಯೋಗಿಯೆಂದರೆ ಮೀಸೆ ಮಾತ್ರ. ಅದು ಗಿರಿಜಾ, ನೊಣ, ಬಿಲ್ಲು, ಚಿಗುರು ಯಾವುದೇ ಆಗಿರಲಿ; ಘನ ಕರ್ತವ್ಯ-ಬಾಧ್ಯತೆ ಅದಕ್ಕಿಲ್ಲ. ಯಾರೊ ಒಬ್ಬ ಮೀಸೇವಾದಿ ಅದು ಧೂಳು ತಡೆಯುತ್ತದೆ ಎಂಬ ಭಂಡ ವಾದ ಹೂಡಿದ. 'ಹಾಗಾದರೆ ಧೂಳು ಗಂಡಿಗೆ ಮಾತ್ರವೇ?' ಎಂದಾಗ ಅದನ್ನು ಬಿಟ್ಟು 'ತಲೆ ಕೂದಲು ಕೂಡ ಯಃಕಶ್ಚಿತ. ಅದಕ್ಕೇಕೆ ಮರ್ಯಾದೆ?' ಎಂದ. 'ಅದು ಯಃಕಶ್ಚಿತವಲ್ಲ, ಶಿರೋರಕ್ಷಣೆಯ ಕಾಯಕದಲ್ಲಿದೆ. ದುಡಿದು ದುಡಿದು ಹಣ್ಣಾಗುತ್ತದೆ. ಮತ್ತು ಮಿದುಳಿನತ್ತ ಬೇರು ಬಿಟ್ಟು ಅಲೌಕಿಕ ಆಕಾಶದತ್ತ ನೋಡುತ್ತದೆ. ಆ ಧನ್ಯತಾಭಾವದಲ್ಲಿಯೇ ಉದುರಿ ಹೋಗುತ್ತದೆ. ಮೀಸೆ ಅಧೋಮುಖಿ ಸಂಚಾರಿ. ಸ್ವತಃ ಉದುರುವ ಧೈರ್ಯವಿಲ್ಲದ್ದು. ಬೀಚಿ ಕಾದಂಬರಿಯ ಇನ್ಸ್‌ಪೆಕ್ಟರ್

ಸೂರ್ಯರಾವು ಇಡೀ ದಿನ ಅದನ್ನು ಎಳೆದು ಕಚ್ಚಿ ತಿನ್ನುವುದಕ್ಕೆ ಮಾತ್ರ ಅದರ ಪ್ರಯೋಜನ' ಎಂದು ಭಂಡ ಪ್ರತಿವಾದ ಹೂಡಬೇಕಾಯಿತು....!

'ಮೀಸೆ ಬಂದಾಗ ದೇಶ ಕಾಣದು' ಎಂಬ ಮಾತಿದೆ. ಹೊಸದಾಗಿದ್ದಾಗ ಅದು ಕ್ಷಮಾರ್ಹ. ಆದರೆ ಅದು ಬಂದು ಹತ್ತಾರು ವರ್ಷಗಳ ಅನಂತರವೂ ಅದೇ ಅಂಧಃಕಾರ ಬಹುತೇಕರ ಮುಖದಲ್ಲಿ ಮುಂದುವರಿಯುತ್ತದೆ. ಮೊನ್ನೆ ಪೋಲಿಸ್ ವಸ್ತು ಪ್ರದರ್ಶನಕ್ಕೆ ಹೋಗಿದ್ದೆ. ಆ ಜಮಾನಾದಿಂದ ಇಂದಿನವರೆಗು ಇಲಾಖೆ ಬಳಸಿದ, ಬಳಸುತ್ತಿರುವ ಹಲವಾರು ವಸ್ತುಗಳನ್ನು ಅಲ್ಲಿ ಇರಿಸಿದ್ದರು. ದಿರಿಸು, ಆಯುಧ, ಲಾಠಿ, ಟೋಪಿ, ಪ್ರಶಸ್ತಿ, ಬಂದೂಕು ಮುಂತಾದವುಗಳು... ಆದರೆ ಅವೆಲ್ಲವುಗಳನ್ನು ಮೀರಿ ಅಲ್ಲಿ ಸೆಳೆದದ್ದು ಭಾರಿ ಮೀಸೆ ಹೊತ್ತ ಪೋಲಿಸ್ ಸಿಬ್ಬಂದಿ.... 'ಪೋಲಿಸ್ ಎಂದರೆ ಮೀಸೆ, ಮೀಸೆ ಎಂದರೆ ಪೋಲಿಸ್' ಎಂದು ಬರೆದಿರಲಿಲ್ಲ, ಆದರೆ ಸಾರುತ್ತಿದ್ದರು. ಪೋಲಿಸ್ ಮಹಿಳೆಯರು ಮೀಸೆಯ ಮುಂದೆ ಕಾಣದಂತಿದ್ದರು. ಮುಂಭಾಗದ ಜಯ-ವಿಜಯರ ತರ ನಿಂತಿದ್ದವರ ಮುಖವನ್ನು ಮೀಸೆ ನುಂಗಿಹಾಕಿತ್ತು. ಲಿಂಬೇಹಣ್ಣು ಹೊತ್ತ, ತುಪ್ಪ ಸವರಿದ ಭರ್ಜರಿ ಮೀಸೆಯ ಹಿಂದೆ ಎಣ್ಣೆ ಕೂಡ ಕಾಣದ ಒಣಕಲು ಮುಖಗಳು! 'ಚಹಾದಕಿಂತ ಕಿಟ್ಲಿಯೇ ಬಿಸಿ' ಎಂಬ ಮಾತು ಇದ್ದಕ್ಕಿದ್ದಂತೆ ನೆನಪಾಯಿತು. ಮುಖ, ತಾನು ತಿಂದು ಮೀಸೆ ಬೆಳೆಸಿದ್ದರೆ ಅದಕ್ಕೆ ಸಾಮಾಜಿಕ ನ್ಯಾಯ ಎನ್ನಬಹುದು. ಆದರೆ ಇಲ್ಲಿ ತುಪ್ಪವನ್ನು ನೇರವಾಗಿ ಮೀಸೆಯೇ ಕಬಳಿಸುತ್ತಿತ್ತು. ಇದು ಬಲಶಾಲಿಗಳ, ಲಾಠಿಖೋರರ ಮತ್ತು ಹಲವು ಆಡಳಿತಗಳಿಗೆ ಬರೆದ ಭಾಷ್ಯದಂತಿತ್ತು.....ಅಲ್ಲೊಂದು ದೇಣಿಗೆ ಪೆಟ್ಟಿಗೆ ಕೂಡ ಇತ್ತು. ಬಹುಶಃ ಅದು ಮೀಸೆಯ ತುಪ್ಪದ ಮೀಸಲಿನದೇ ಎನ್ನಿಸಿ ದುಡ್ಡು ಹಾಕಲಿಲ್ಲ. ನಮ್ಮ ಅನ್ನಿಸಿಕೆಗಳನ್ನು ದಾಖಲಿಸಲು ಅಲ್ಲೊಂದು ಪುಸ್ತಕ ಇತ್ತು. ನಾನು ಅಲ್ಲಿದ್ದವರ ಬಳಿ ಹೋಗಿ "ಸಂಸ್ಕೃತದಲ್ಲಿ ಬರೆಯಬಹುದೇ?" ಎಂದು ಕೇಳಿದೆ. ಅವರು ಖುಷಿಯಿಂದ "ಹಿಂದಿ ಅಥವಾ ಸಂಸ್ಕೃತ ಯಾವುದೂ ಆಗುತ್ತದೆ" ಎಂದರು. ಸುತ್ತಲಿನ ಮೀಸೆಯ ವಾತಾವರಣ ಪ್ರಭಾವ ಬೀರಿ ನನ್ನಿಂದ ಹೀಗೆ ಬರೆಸಿತು....

"ಮೀಶ್ಯಾ ವಾಸ್ಯಂ ಇದಂ ಸರ್ವಂ
ಕಿಂಚಿತ್ ಖೇದ ಹೈ.....
ಮಹಾ ವಿಷಾದ ಹೈ...."

****

'ನಮ್ಮೆಲ್ಲರ ಸೊಕ್ಕು ಮುರಿಯಲು ದೇವರು ನಮ್ಮವೇ ಮಕ್ಕಳನ್ನು ನಿರ್ಮಿಸುತ್ತಾನೆಂದು' ನಮ್ಮ ತಂದೆ ಅವರಿಗೆ ಬೇಡವಾದ ಹುಡುಗಿಯನ್ನು ನಾನು ಮದುವೆಯಾಗುವಾಗ ಹೇಳಿಕೊಂಡಿದ್ದರು. ನಾವು ಅಂದುಕೊಂಡು, ನಂಬಿಕೊಂಡು ಸಾಗುವುದೆಲ್ಲ ನಿಜವಿರಲಿಕ್ಕಿಲ್ಲ; ವಿಭಿನ್ನ, ತದ್ವಿರುದ್ಧ ಮುಖಗಳು ಕೂಡ ಅದಕ್ಕೆ ಇರಬಹುದೆಂದು ಜೊತೆಯಲ್ಲಿ ಗುಂಡು ಹಾಕುವಾಗಲೆಲ್ಲ ಗುರುಗಳೊಬ್ಬರು ಹೆದರಿಸುತ್ತಲೇ ಇದ್ದರು. ನನ್ನ ಪುಣ್ಯ ಏನೆಂದರೆ ನನ್ನ ಏಕೈಕ ಮಗಳು ತನ್ನ ಮದುವೆಯ ಸಂಪೂರ್ಣ ಜವಾಬ್ದಾರಿಯನ್ನು ನನಗೇ ವಹಿಸಿದ್ದರಿಂದ ನನ್ನ ತಂದೆಯಂತೆ ಸ್ವಗತ ಹೇಳಿಕೊಳ್ಳುವ ಪ್ರಸಂಗ ಬಂದಿರಲಿಲ್ಲ. ಜವಾಬ್ದಾರಿಯ ಅಂಗವಾಗಿ ಅವಳ ಜಾತಕ, ಫೋಟೋಗಳನ್ನು ಹಿಡಿದುಕೊಂಡು ವಧು-ವರ ಕೇಂದ್ರದತ್ತ ಸಾಗಿದೆ. ಸಾಲಿನಲ್ಲಿ ನನ್ನ ಮುಂದಿದ್ದ, ತಕ್ಕಮಟ್ಟಿಗಿನ ಮೀಸೆಯ ಹುಡುಗನೊಬ್ಬ '.....ಮೀಸೆ ಹೊತ್ತ ಗಂಡಸಿಗೆ ಡಿಮಾಂಡಪ್ಪೊ ಡಿಮಾಂಡು....' ಎಂದು ಗುನುಗುತ್ತ ತನ್ನ ಜಾತಕಾದಿಗಳನ್ನು ಒಳಗೆ ತಳ್ಳಿದ. ಅವನ ಬಿ ಎಸ್ ಸಿ ಯೋಗ್ಯತೆಯನ್ನು ಗುರುತಿಸಿದ ಒಳಗಿನವರು ಬೆರಳ ಮೂಲಕ ಒಂದು ನೋಟೀಸು ತೋರಿಸಿದರು. ನಾನೂ ನೋಡಿದೆ. "ಬಿಎ, ಬಿಕಾಮ್, ಬಿಎಸ್ಸಿ ಆದ ವರಗಳ ಹೆಸರನ್ನು ನೋಂದಾಯಿಸಿಕೊಳ್ಳುವುದಿಲ್ಲ" ಎಂದು ಬರೆದಿತ್ತು. ಮೀಸೆ ಹೊತ್ತ ಹುಡುಗ ಸಾಲು ತೊರೆದ. ನನ್ನ ಪಾಳಿ ಬಂತು. ನಾನು ಕಾಗದ ಪತ್ರಗಳನ್ನು ಕೊಡುತ್ತ "ಅದೇನು ನೋಟೀಸು?" ಎಂದು ಕೇಳಿದೆ. "ಬರಿ ಬಿಎ-ಗಿಯೆ ಆದವರಿಗೆ ಯಾರು ಹೆಣ್ಣು ಕೊಡುತ್ತಾರೆ ಹೇಳಿ? ನೀವೇ ಕೊಡುತ್ತೀರಾ?...ಅದಕ್ಕೇ ಆ ನೋಟೀಸು" ಎನ್ನುತ್ತ ಬಿಎ ಮಾತ್ರ ಆಗಿದ್ದ ಮಗಳ ಹೆಸರನ್ನು ಆಸ್ಥೆಯಿಂದ ಬರೆದುಕೊಂಡರು. ಗಂಡಿಗೆ ಬರಿ ಮೀಸೆ ಇದ್ದರೆ ಸಾಕಾಗುವುದಿಲ್ಲ. ಇಲ್ಲದಿದ್ದರೂ ಸಾಕಾಗುವುದಿಲ್ಲ, ಬಿಇ ಬೇಕು, ಎಂದುಕೊಳ್ಳುತ್ತ ಮನೆಗೆ ಬಂದೆ.

ಮಗಳು ಮೀಸೆ ಇರದ ಹೀರೋಗಳ ಹೊಸ ಸಿನಿಮಾ ನೋಡುತ್ತಿದ್ದುದು ನನಗೆ ಅವಳ ಅಭಿರುಚಿಯ ಸೂಚನೆಯಾಗಿ ಕಾಣುತ್ತಿತ್ತು. ಪಾಪ, ಲಲಿತಾಂಬಾ! ಮೀಸೆ ಕಾಲದವರು...ಎಂದುಕೊಂಡೆ.

ವಧು-ವರ ಕೇಂದ್ರದವರು ನನ್ನ ಕೋರಿಕೆಯಂತೆ ಮೀಸೆ ಇರದ ಹುಡುಗರ ಮಾಹಿತಿ ಕಳಿಸುತ್ತಲೇ ಇದ್ದರು. ಮಗಳು ಆರಾಮಾಗಿದ್ದಳು. ಸಿನಿಮಾ ನೋಡಿ ನಗುತ್ತಿದ್ದಳು. ಹುಡುಗರ ಫೋಟೋ ನೋಡಿಯೂ ನಗುತ್ತಿದ್ದಳು. ಆದರೆ ಅವರನ್ನು ಒಪ್ಪುತ್ತಿರಲಿಲ್ಲ. ಕೆಲವು ದಿನಗಳ ಅನಂತರ ತಾಯಿ ಹಾಗು ಮಗಳು ನನ್ನನ್ನು ಬದಿಗೆ ಸರಿಸಿ ತಾವೇ ನೇರವಾಗಿ ಮೈದಾನಕ್ಕೆ ಇಳಿದರು. ಮತ್ತು ಬಹು ಬೇಗ ಒಬ್ಬನನ್ನು ಔಟ್ ಮಾಡಿದರು. ಒಂದು ದಿನ ಅವರೆಲ್ಲ ಬಂದರು. ಹುಡುಗ ಬರಿ ಬಿ ಕಾಮ್. ಮಧ್ಯಮ ನೌಕರಿ. ಸಾಲದ್ದಕ್ಕೆ ನನ್ನ ದೃಷ್ಟಿಯ ಚಿಗುರು ಮೀಸೆಯ ಅನರ್ಹತೆ ಬೇರೆ....

"ಏನು ಮರುಳಾದೆಮ್ಮ ಎಲೆ ಭಾರತಿ
ವಾನರ ನಿಕರದೊಳು ಶ್ರೇಷ್ಠನಾದವಗೆ"

ಎಂಬ ದಾಸರ ಪದ ಹಾಡಿಕೊಂಡೆ. ವ್ಯಸನವಾಯಿತು. "ಮೀಸೆಯಿರದ ಹೀರೋಗಳ ಸಿನಿಮಾ ನೋಡತಾ ಇದ್ದೆಯಲ್ಲಮ್ಮಾ?" ಎಂದು ಸೂಚ್ಯವಾಗಿ ಕೇಳಿದೆ. "ದೇವರಿಗೆ ಮೀಸೆ ಇರತ್ತಾ? ಆ ಸಿನಿಮಾ ಕೂಡ ನೋಡತಾ ಇರಲಿಲ್ಲ, ಅಪ್ಪಾ...." ಈ ಸೂಚನೆಯನ್ನು ನಾನು ಗಮನಿಸಿರಲೇ ಇಲ್ಲ.... !

ನನ್ನ ಚೂರುಪಾರು ತಕರಾರು ಒಂಚೂರೂ ನಿಲ್ಲಲಿಲ್ಲ. ಮದುವೆ ಆಗಿಯೇ ಹೋಯ್ತು! ಅಳಿಯನ ಹಿಂದೆ ಮಗಳು ಹೋದಳು. ಎರಡು ದಿನ ಕಳೆದು, ಎರಡು ದಿನಕ್ಕಾಗಿ ಇಬ್ಬರೂ ಬಂದರು ಕೂಡ. ಮಗಳು ತಾಯಿಯ ಕಿವಿಯಲ್ಲಿ ಯಾವುದೊ ಸಿನಿಮಾ ಹಾಡಿನಂಥದನ್ನು ಗುನುಗುತ್ತಲೇ ಇದ್ದಳು... ತಾಯಿ "ಛೀ.. ಹೋಗೇ..ನಾಚಿಕೆಗೆಟ್ಟವಳು..". ಎಂದು ಕಣ್ಣರಳಿಸಿ ಮುನಿಸಿನ ನಾಟಕ ಮಾಡುತ್ತಿದ್ದಳು...ನನಗೆ ಕುತೂಹಲ ಕೆರಳಿ ಆ ಹಾಡನ್ನು ಕೇಳಿಸಿಕೊಳ್ಳಲೇಬೇಕೆಂಬ ಹಟ ಹೊಕ್ಕಿತು.....ತಡೆದು ತಡೆದು "ಯಾವ ಹಾಡಮ್ಮಾ ಅದು..? ನನಗೂ ಕೇಳಿಸು" ಎಂದು ಅಂತಃಕರಣದಿಂದ ಕೇಳಿದೆ. ಅರೆಕ್ಷಣ ಸಂಕೋಚ/ನಾಚಿಕೆಯ ಭಾವ ತೋರಿಸಿದಳು. ಎತ್ತಿ ಆಡಿಸಿದ ಅಪ್ಪನಲ್ಲವೇ? ಹಾಡಿಯೇ ಬಿಟ್ಟಳು...

"ಮೀಸೆಯಲ್ಲಿ ಇರೊ ಸುಖ ಗೊತ್ತೇ ಇರ್ಲಿಲ್ಲ
ಹೂಂ ಅಂತಿಯಾ? ಉಹೂಂ ಅಂತೀಯಾ?"

ನಾನೇನೆನ್ನಲಿ? ....ಮಕ್ಕಳ ಮೋಹ ಕೆಟ್ಟದ್ದು. ಅದರಲ್ಲೂ ಹೆಣ್ಣು ಮಕ್ಕಳದು.... "ಹೂಂ ನೇ ಅಂತೀನಮ್ಮ..." ಎಂದು ಸಣ್ಣ ದನಿಯಲ್ಲಿ ಹೇಳಿದೆ. ಅಂದಿನಿಂದ "ನಮ್ಮ ಸೊಕ್ಕು ನಮ್ಮ ಮಕ್ಕಳೇ ಮುರಿಯುತ್ತಾರೆ" ಎಂಬ ತಂದೆಯವರ ಸ್ವಗತದ ಮಾತು ನನ್ನದೂ ಆಗಿಹೋಯಿತು.....!



(ಪ್ರಸ್ತುತ ಧಾರವಾಡದಲ್ಲಿ ನೆಲೆಸಿರುವ ಲೇಖಕರು, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಹಾಗೂ ನಮ್ಮ ನಡುವಿನ ಮುಖ್ಯ ಲಲಿತಪ್ರಬಂಧಕಾರರೂ ಆಗಿರುವರು.)


ಜಿಜ್ಞಾಸೆ

ಕನ್ನಡ-ಕರ್ನಾಟಕ ವೈಚಾರಿಕ ಪರಂಪರೆಯ ಇಂದಿನ ದುರಂತ

-ರಾಜೇಂದ್ರ ಚೆನ್ನಿ

ವಚನಕಾರರು, ಕುವೆಂಪು ಕಾರಂತರಂತಹ ವೈಚಾರಿಕತೆಯ, ಕಾಗೋಡು ಸತ್ಯಾಗ್ರಹ, ದೇವರಾಜ ಅರಸು ಅವರ ಸಾಮಾಜಿಕ ನ್ಯಾಯದ ಪ್ರಗತಿಪರ ರಾಜಕಾರಣ, ರೈತ ಮತ್ತು ದಲಿತ ಚಳುವಳಿಗಳ ಹೋರಾಟಗಳ ವಾರಸುದಾರಿಕೆ ಪಡೆದಿರುವ ಮತ್ತು ಗಾಂಧಿ-ಅಂಬೇಡ್ಕರರ ದಟ್ಟ ಪ್ರಭಾವದ ಛಾಪಿರುವ ಕರ್ನಾಟಕವೇಕೆ ಇಂದು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹೀಗೆ ಎಲ್ಲ ಸ್ತರಗಳಲ್ಲಿ ದಿವಾಳಿಗೆ ಸಿಲುಕಿ ಅದರ ಪ್ರಜಾಪ್ರಭುತ್ವದ ಚೌಕಟ್ಟೇ ಭ್ರಷ್ಟಾಚಾರ, ಕೋಮುವಾದ ಮತ್ತು ಜಾತೀಯತೆಗಳಿಂದ ಗೆದ್ದಲು ಹಿಡಿದು ಕುಸಿದುಬೀಳುವಂತಾಗಿದೆ? ಅದು ಹೊಸ ಕಾಲದ ಹೊಸ ಸವಾಲುಗಳೊಂದಿಗೆ ಪರಿಣಾಮಕಾರಿಯಾಗಿ ಅನುಸಂಧಾನ ಮಾಡಲು ಅದರ ವಾರಸುದಾರಿಕೆ ಸಾಲದೇ ಹೋಯಿತೆ? ಈ ಕುರಿತ ಒಂದು ನಿಷ್ಠುರ ಜಿಜ್ಞಾಸೆ ಇಲ್ಲಿದೆ.-ಸಂ

ಆಧುನಿಕ ಕರ್ನಾಟಕದಲ್ಲಿ ಅಂದರೆ ೧೯ನೇ ಶತಮಾನದ ಮಧ್ಯಭಾಗದಿಂದ ಈವರೆಗೆ ಗಟ್ಟಿಯಾದ ವೈಚಾರಿಕ ಪರಂಪರೆಗಳು ಬೆಳೆದು ಬಂದವು ಎಂದು ನನಗೆ ಮನವರಿಕೆಯಾಗಿಲ್ಲ. ಏಕೆಂದರೆ ಈ ಕಾಲಮಾನದಲ್ಲಿ ದಕ್ಷಿಣ ಭಾರತದಲ್ಲಿ ನಡೆದ ಬ್ರಾಹ್ಮಣೇತರ ಚಳುವಳಿಗಳು, ಜೋತಿಬಾ ಫುಲೆ ಮಾದರಿಯ ಶೂದ್ರ ಚಿಂತನೆ ಹಾಗೂ ಪ್ರತಿರೋಧಗಳು ಕರ್ನಾಟಕದಲ್ಲಿ ಪ್ರಬಲವಾಗಿರಲಿಲ್ಲ. ಇಂದಿನ ಉತ್ತರ ಕರ್ನಾಟಕದ ಬಹುಭಾಗವು ಅಂದಿನ ಬಾಂಬೆ ಪ್ರೆಸಿಡೆನ್ಸಿಯ ಭಾಗವಾಗಿದ್ದರೂ ಈ ಪ್ರಾಂತದ ಮೇಲ್ಜಾತಿ, ಉಚ್ಚ ಮಧ್ಯಮವರ್ಗದವರಿಗೆ ಪುಣೆ ಹಾಗೂ ಮಹಾರಾಷ್ಟ್ರದ ಇತರ ಕಡೆಗಿನ ಶಿಕ್ಷಣ ಸಂಸ್ಥೆಗಳು ಉನ್ನತ ಶಿಕ್ಷಣ ಸಂಸ್ಥೆಗಳ ಏಕಮಾತ್ರ ತಾಣಗಳಾಗಿದ್ದು ಉತ್ತರ ಕರ್ನಾಟಕದ ಧೀಮಂತ ವರ್ಗವು ಅಲ್ಲಿಯೆ ತನ್ನ ಸಂವೇದನೆಯನ್ನು ರೂಢಿಸಿಕೊಂಡಿದ್ದರೂ ಈ ಚಿಂತನೆ, ಚಳುವಳಿಗಳ ಪ್ರಭಾವವು ಗೌಣವಾಗಿತ್ತು. ಬದಲಾಗಿ ತಿಲಕ ಮಾದರಿಯ ಸಾಂಪ್ರದಾಯಿಕ ಮೃದು ಹಿಂದುತ್ವದ ಪ್ರಭಾವವು ಹೆಚ್ಚು ಗಾಢವಾಗಿತ್ತು. ಅನೇಕ ಕಾಂಗ್ರೆಸ್ ಮುಂದಾಳುಗಳು ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕದಿಂದ ಮುಂಚೂಣಿಗೆ ಬಂದರು. ಆಲೂರು ವೆಂಕಟರಾಯರಿಗೆ ಸಾವರ್ಕರ್ ಅವರು ಹಾಸ್ಟೆಲ್ ಸಂಗಾತಿಯಾಗಿದ್ದರು. ಚಿಪಳೂಣ್‌ಕರ್ ಅವರ ಶಿಷ್ಯರಾಗಿದ್ದ ವೆಂಕಟ ರಂಗೊ ಕಟ್ಟಿ ಧಾರವಾಡಕ್ಕೆ ಬಂದ ಮೇಲೆ ಬಾಲ ವಿಧವೆಯರ ಕೇಶಮುಂಡನ ಹಾಗೂ ಅವರ ಸ್ಥಿತಿಗಳ ಬಗ್ಗೆ ಕ್ರಿಯಾಶೀಲರಾಗಿದ್ದರು. ೧೯೨೦ರ ಹೊತ್ತಿಗೆ ಆರಂಭವಾಗಿ ಪ್ರಭಾವಿಯಾಗಿ ಬೆಳೆದ ಅಂಬೇಡ್ಕರ್ ನೇತೃತ್ವದ ದಲಿತ ಚಳುವಳಿಯ ಪರಿಣಾಮವೂ ಕಂಡುಬರುವುದಿಲ್ಲ. ಹೀಗಾಗಿ ಆ ಯುಗದ ಎರಡು ಪ್ರಮುಖ ವೈಚಾರಿಕ ಚಿಂತನಾಕ್ರಮಗಳಾದ ಶೂದ್ರ ಮತ್ತು ದಲಿತ ಕೇಂದ್ರಿತ ವೈಚಾರಿಕತೆಗಳೊಂದಿಗೆ ಕರ್ನಾಟಕದ ಬಾಂಧವ್ಯವು ಹೆಚ್ಚಾಗಿ ಇರಲಿಲ್ಲ. ಮೈಸೂರಿನ ಅರಸೊತ್ತಿಗೆಯ ಆಳ್ವಿಕೆಯಲ್ಲಿ radical ಎಂದು ಕರೆಯಲಾಗದಿದ್ದರೂ ಚಾರಿತ್ರಿಕವಾಗಿ ಮಹತ್ವಪೂರ್ಣವಾದ ಮೀಸಲಾತಿ, ಶೂದ್ರ ಹಾಗೂ ಸ್ತ್ರೀಯರ ಶಿಕ್ಷಣ, ಬ್ರಾಹ್ಮಣೇತರ ಹಿಂದುಳಿದ ಜಾತಿಗಳಿಗೆ ಬೆಂಬಲ ಇವೇ ಮುಂತಾದ ವಿದ್ಯಮಾನಗಳು ನಡೆದವು. ಮಹಾರಾಷ್ಟ್ರದಲ್ಲಿ ತಾರಾಬಾಯಿ ಶಿಂಧೆ, ಪಂಡಿತಾ ರಮಾಬಾಯಿ ಇವರಿಂದಾಗಿ ಆರಂಭವಾದ ಸ್ತ್ರೀಪರವಾದ ವೈಚಾರಿಕ ಚಿಂತನೆಯೂ ಪ್ರಭಾವಿಯಾಗಿರಲಿಲ್ಲ. ಕಮಲಾದೇವಿ ಚಟ್ಟೋಪಾಧ್ಯಾಯ, ಬೆಂಗಳೂರು ನಾಗರತ್ನಮ್ಮ, ಆರ್. ಕಲ್ಯಾಣಮ್ಮ ಇವರ ಬರಹ ಹಾಗೂ ಕ್ರಿಯಾಶೀಲತೆಗಳು ಶುರುವಾತನ್ನು ಒದಗಿಸಿಕೊಟ್ಟರೂ ಬಹಳ ನಿಧಾನವಾಗಿ ಈ ಥರದ ಚಿಂತನೆ ಬೆಳೆಯಿತು. ಇದರಲ್ಲಿ ಸಹಭಾಗಿಗಳಾದ ಉತ್ತರ ಕರ್ನಾಟಕದ ಕೆಲವು ಬರಹಗಾರ್ತಿಯರು ಅನೇಕ ದಶಕಗಳ ಕಾಲ 'ಕಣ್ಮರೆ'ಯಾಗಿ ಆನಂತರ ವಿಜಯಾ ದಬ್ಬೆ, ಬಿ.ಎನ್. ಸುಮಿತ್ರಾಬಾಯಿ ಇವರುಗಳಿಂದ ಮರು ಆವಿಷ್ಕಾರಗೊಂಡರು. ಗಾಂಧಿವಾದವು ಮತ್ತು ಗಾಂಧಿವಾದಿ ಸ್ವಾತಂತ್ರ್ಯ ಚಳುವಳಿಯು ಕರ್ನಾಟಕದಲ್ಲಿ ಅತ್ಯಂತ ವ್ಯಾಪಕವಾಗಿ ಪ್ರಭಾವ ಬೀರಿದವು. ಆದರೆ ಗಾಂಧಿವಾದದ ವೈಚಾರಿಕ ಚೌಕಟ್ಟುಗಳೊಂದಿಗೆ ವಿಮರ್ಶಾತ್ಮಕವಾದ negotiationಗಳು ನಡೆಯಲಿಲ್ಲ. ಗಾಂಧಿಯವರು ಭಾಗಿಯಾಗಿದ್ದ ಗುರುವಾಯೂರು ದೇವಾಲಯ ಪ್ರವೇಶ ವಿವಾದ, ಅಯ್ಯಂಕಾಲಿಯವರೊಂದಿಗೆ ನಡೆದ ಅವರ ಸಂವಾದ, ನಾರಾಯಣಗುರು ಅವರೊಂದಿಗೆ ನಡೆದ ಸಂವಾದ ಇವೆಲ್ಲವು ನೆರೆರಾಜ್ಯಗಳಲ್ಲಿ ನಡೆದವು. ಕರ್ನಾಟಕದಲ್ಲಿ ಗಾಂಧಿ, ಗಾಂಧಿವಾದದೊಂದಿಗೆ ಇಂಥ ಸಂವಾದಗಳು ನಡೆಯಲಿಲ್ಲ. ಗಾಂಧಿ ಪ್ರೇರಿತ ರಾಷ್ಟ್ರವಾದಿ ಚಳುವಳಿಗಳ ಉದ್ದಕ್ಕೂ ಗಾಂಧಿಯವರನ್ನು ಪ್ರಶ್ನಿಸಿದ, ವಿರೋಧಿಸಿದ ಅವರೊಂದಿಗೆ ಸಂವಾದಿಸಿದ ಅದ್ಭುತವಾದ ಉದಾಹರಣೆಗಳಿವೆ. ಇವು ಗಾಂಧಿಯವರಿಗೆ ಮತ್ತು ಎಲ್ಲಾ ಸಹಭಾಗಿಗಳಿಗೆ ಗೌರವ ತರುವಂಥ ವಿಶ್ವಮಟ್ಟದ ವೈಚಾರಿಕ ಘಟನೆಗಳಾಗಿದ್ದವು. ಕರ್ನಾಟಕದ ಅಂದಿನ ಯಾವ ಚಿಂತಕರೂ ಅಥವಾ ಧುರೀಣರು ಇವುಗಳಲ್ಲಿ ಪಾತ್ರವಹಿಸಲಿಲ್ಲ. ಕಾಂಗ್ರೆಸ್ ರಾಜಕೀಯದ ಬಗ್ಗೆ ಕೂಡ ವಿಧೇಯತೆ ಹಾಗೂ ಸಹಕಾರವನ್ನು ಬಿಟ್ಟರೆ ಇನ್ನಾವ ನೆಲೆಯ ಸಂಬಂಧಗಳೂ ಕಂಡುಬರುವುದಿಲ್ಲ. ಹೀಗಾಗಿ ವಸಾಹತುಶಾಹಿ ಆಧುನಿಕತೆಯಿಂದ ಪ್ರೇರಿತವಾದ ಬಹು ಅರ್ಥಪೂರ್ಣವಾದ ವೈಚಾರಿಕ ಚಳುವಳಿಗಳಲ್ಲಿ ಕರ್ನಾಟಕದ ಭಾಗವಹಿಸುವಿಕೆ ಅಲ್ಪ ಪ್ರಮಾಣದ್ದು. ಇದನ್ನು ಆ ಕಾಲದ ಮುಖ್ಯ ಸಾಹಿತ್ಯ ಕೃತಿಗಳಿಗೆ ಹೋಲಿಸಿದರೆ ಈ



ಹೇಳಿಕೆ ಸ್ಪಷ್ಟವಾಗುತ್ತದೆ. ೧೯೩೦ರ ದಶಕದಿಂದಾಚೆಗೆ ಶಿವರಾಮ ಕಾರಂತರು, ಕುವೆಂಪು, ಗೊರೂರು, ಬೇಂದ್ರೆ ಹೀಗೆ ಅನೇಕರು ತಮ್ಮ ವಿಶಿಷ್ಟ ರೀತಿಯಲ್ಲಿ ಗಾಂಧಿ ಚಿಂತನೆಯನ್ನು ತಮ್ಮ ಸೃಜನಶೀಲ ಬರಹಗಳಲ್ಲಿ ಶೋಧಿಸಿದ್ದಾರೆ. ವಿಶೇಷವೆಂದರೆ ಗಾಂಧಿ ಹಾಗೂ ಗಾಂಧಿ ಚಳುವಳಿಗಳ ನೇರ ಪ್ರಸ್ತಾಪದ ಗೈರು ಹಾಜರಿಯಲ್ಲಿ ಇದನ್ನು ನೆರವೇರಿಸಿದ್ದಾರೆ. ಕಾರಂತರ ನಂಬಿಕೆಗಳಾದ ಸಮಾಜದ ಋಣ, ವೈಯಕ್ತಿಕ ಶೀಲ ಹಾಗೂ ಚಾರಿತ್ರ್ಯ, ಆಧುನಿಕತೆಯ ಬಗೆಗಿನ ಅಪನಂಬಿಕೆ ಇವೆಲ್ಲವುಗಳ ಹಿಂದೆ ಗಾಂಧಿ ಚಿಂತನೆ ಇದೆ. ಚೋಮನದುಡಿ ಬಗ್ಗೆ ಏನೇ ಆಕ್ಷೇಪಣೆಗಳಿದ್ದರೂ ಗಾಂಧಿ ಭಾರತೀಯ ಸೃಜನಶೀಲ imaginationನಲ್ಲಿ ದಲಿತ ಬದುಕನ್ನು ತಂದು ಕೂರಿಸಿದ್ದರ ಫಲವಾದ ಕೃತಿಯಾಗಿದೆ. ಕುವೆಂಪು ಅವರ ಕಾದಂಬರಿಗಳು ವರ್ಣ ಹಾಗೂ ಜಾತಿಗಳನ್ನು ಕನ್ನಡ ಬರಹ, ಚಿಂತನೆಗಳ ನಡು ಮಧ್ಯಕ್ಕೆ ತರುತ್ತವೆ. ಹಾಗೆಯೆ ವಿವೇಕಾನಂದ ಮಾದರಿಯ ವೈಚಾರಿಕ ಚೌಕಟ್ಟಿನೊಳಗೆ ಧರ್ಮ, ಸಾಮಾಜಿಕ ನ್ಯಾಯ, ಮತಾಂತರ ಹಾಗೂ ಆಧುನಿಕತೆಯ ಅಂದಿನ ಕಾಲದ ಪ್ರಮುಖ ಪ್ರಶ್ನೆಗಳನ್ನು ಕೇಂದ್ರವಾಗಿಸಿಕೊಳ್ಳುತ್ತವೆ. ಅವುಗಳನ್ನು ಆಳವಾಗಿ ವಿಶ್ಲೇಷಿಸುತ್ತಾ ಹೋದಂತೆ ವಸಾಹತುಶಾಹಿಯ ನೆರಳಲ್ಲಿ ಹುಟ್ಟಿಕೊಂಡ ಹಿಂದೂ ಧರ್ಮ ಸುಧಾರಣಾ ಚಳುವಳಿಗಳು, ಓರಿಯಂಟಲಿಸಂನ ಪ್ರಭಾವ, ಉಪನಿಷತ್ತು ಪರಂಪರೆಗಳ ಅನುಭಾವಿ ನೆಲೆಗಳನ್ನು ಸ್ವೀಕರಿಸುವ; ಆದರೆ ಪುರೋಹಿತಶಾಹಿ ಹಾಗೂ ಸಾಂಸ್ಥಿಕ ಧರ್ಮವನ್ನು ತಿರಸ್ಕರಿಸುವ ಪ್ರಯತ್ನ ಇವೆಲ್ಲವನ್ನೂ ಕಾಣಬಹುದು. ಕಾರಂತ, ಕುವೆಂಪು ಅವರ ಕಾದಂಬರಿಗಳಲ್ಲಿ ಪ್ರಾಯಶಃ ಮೊದಲಬಾರಿಗೆ ಪ್ರೀತಿ, ಕಾಮ, ಸ್ವಾತಂತ್ರ್ಯ ಇವುಗಳ ಪರಿಭಾಷೆಯಲ್ಲಿ ತಮ್ಮನ್ನು ತಾವೇ ವ್ಯಾಖ್ಯಾನಿಸಿಕೊಳ್ಳುವ ಮನುಷ್ಯ ಜೀವಿಗಳನ್ನು ಕಾಣುತ್ತೇವೆ. ಯೂರೋಪಿನ ವ್ಯಕ್ತಿವಾದಕ್ಕಿಂತ ತೀರಾ ಭಿನ್ನವಾದ ವೈಯಕ್ತಿಕ ಅಸ್ಮಿತೆಯ ಆವಿಷ್ಕಾರವು ಭಾರತೀಯ ಸಂಪ್ರದಾಯದಲ್ಲಿಯೆ ಹೊಸದಾಗಿತ್ತು. ಮಾಸ್ತಿಯವರ ವಸಾಹತುಶಾಹಿಯ ಬಗೆಗಿನ ಕತೆಗಳಲ್ಲಿ ದೇಶೀ ಸಂಸ್ಕೃತಿಯ ಬಗೆಗಿನ ಅಭಿಮಾನ, ಭಾರತೀಯ ಜೀವನ ಪದ್ಧತಿ, ಮೌಲ್ಯಗಳ ಬಗೆಗಿನ ತೀವ್ರ ನಿಷ್ಠೆ ಹಾಗೂ ಶ್ರದ್ಧೆ ಇವುಗಳನ್ನು ಕಾಣಬಹುದು. ಕಾದಂಬರಿಗಳಲ್ಲಿ ವಸಾಹತುಶಾಹಿಯ ವಿಶ್ಲೇಷಣೆಯ ಜೊತೆಗೆ ಸ್ಥಳೀಯ ಸಮಾಜ ಹಾಗೂ ರಾಜಕೀಯಗಳ ನಿಷ್ಠುರವಾದ ವಿಶ್ಲೇಷಣೆಯೂ ಇರುವುದರಿಂದ ಅವು ಸಂಕೀರ್ಣವಾಗಿವೆ.

ಮತ್ತೆ ಅದೇ ಪ್ರಶ್ನೆಗೆ ಮರಳುವುದಾದರೆ ಸೃಜನಶೀಲ ಸಾಹಿತ್ಯದಲ್ಲಿ ಇಂಥ ತೀವ್ರತೆ ಮತ್ತು ಆಳದೊಂದಿಗೆ ಆ ಯುಗದ ಮುಖ್ಯ ಸಂಕಥನಗಳನ್ನು ಎದುರು ಹಾಕಿಕೊಳ್ಳುವುದು ಸಾಧ್ಯವಾದರೆ ಅದರಾಚೆಗೆ ಇದೇ ಆಧಾರದ ಮೇಲೆ ಗಟ್ಟಿಯಾದ ತಾತ್ವಿಕ ವೈಚಾರಿಕ ಪರಂಪರೆಗಳನ್ನು ರಚಿಸುವುದು ಯಾಕೆ ಸಾಧ್ಯವಾಗಲಿಲ್ಲ? ಕನ್ನಡ ಚಿಂತನೆಯು ಸೃಜನಶೀಲ ಸಾಹಿತ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆಯುವುದೇ ಅದರ ಸ್ವಭಾವವಾದ್ದರಿಂದ ಅದನ್ನೇ ನೈಜ ವೈಚಾರಿಕ ಪರಂಪರೆಯೆಂದು ಗುರುತಿಸಬಹುದು ಎನ್ನುವುದು ಸುಲಭ ವಾದವಾಗಿದೆ. ಆದರೆ ಇದು ಅಷ್ಟು ಸರಳವಾಗಿಲ್ಲ. ಆಧುನಿಕ ಸಮಾಜವೊಂದರಲ್ಲಿ ಅಧಿಕಾರದ ವಿನ್ಯಾಸ(ರಚನೆ), ಸಂಸ್ಥೆಗಳು, ನಾಗರೀಕ ಸಮುದಾಯ, ಸಾರ್ವಜನಿಕವಾದ ಸಾಮುದಾಯಿಕ ಸಂವಾದಗಳು ಇವೆಲ್ಲವು ಬಹುಮುಖ್ಯವಾಗಿವೆ.





ಎಲ್ಲಕ್ಕಿಂತ ಮುಖ್ಯವಾಗಿ ಆಧುನಿಕ ಸಮಾಜಗಳು ರಾಷ್ಟ್ರಪ್ರಭುತ್ವ(state), ಪ್ರಜಾಪ್ರಭುತ್ವದ ಪ್ರಕ್ರಿಯೆಗಳು ಮತ್ತು ಅದರ ಸಂಸ್ಥೆಗಳು ಹಾಗೂ ಪ್ರಭುತ್ವದ ಸೈದ್ಧಾಂತಿಕ apparatuses ಇವುಗಳ ಮೂಲಕವೆ ತಮ್ಮ ರಾಜಕೀಯವನ್ನು ರಚಿಸಿಕೊಳ್ಳುತ್ತವೆ. ಹಾಗೂ ರಾಜಕೀಯವು ಅಧುನಿಕ ಯುಗದಲ್ಲಿ ಅಧಿಕಾರ (ಅಥಾರಿಟಿ)ದ ಮೂರ್ತ ಹಾಗೂ ಅಮೂರ್ತ ಸ್ವರೂಪವಾಗಿದೆ. ಆತ್ಯಂತಿಕವಾಗಿ ಮನುಷ್ಯರ ಬದುಕನ್ನು ನಿಯಂತ್ರಿಸುತ್ತದೆ. ಆದ್ದರಿಂದ ಈ ರಾಜಕೀಯವನ್ನು ರೂಪಿಸಬಲ್ಲ, ಪ್ರಭಾವಿಸಬಲ್ಲ ವೈಚಾರಿಕ ಸಂಪ್ರದಾಯಗಳು ಅತ್ಯಂತ ಮುಖ್ಯವಾಗಿರುತ್ತವೆ. ತನ್ನ ಅಧಿಕಾರವನ್ನು ಗೋಚರವಾಗಿ ಹಾಗೂ ಅಗೋಚರವಾಗಿ ಪ್ರಯೋಗಿಸುವುದಕ್ಕಾಗಿ ರಾಜಕೀಯವು ಕಟ್ಟಿಕೊಡುವ ಸಂಕಥನಗಳನ್ನು ಪ್ರಶ್ನಿಸುವುದು, ಮಾರ್ಪಡಿಸುವುದು ಬದಲಾಯಿಸುವುದು ಇವೆಲ್ಲ ಕ್ರಿಯೆಗಳಲ್ಲಿ ವೈಚಾರಿಕ ಪರಂಪರೆಗಳ ಪಾತ್ರವಿರುತ್ತದೆ. ನಾನು ಇಲ್ಲಿ ಕೇವಲ ಬೌದ್ಧಿಕವಾದ ವೈಚಾರಿಕ ಪರಂಪರೆಗಳ ಬಗ್ಗೆ ಮಾತನಾಡುತ್ತಿಲ್ಲ. ಮನುಷ್ಯರ ವಾಸ್ತವಿಕ, ಲೌಕಿಕ, ಸಾಮಾಜಿಕ ಬದುಕನ್ನು ಅದರೊಳಗೆ ಮಿಳಿತಗೊಂಡು ನಿಯಂತ್ರಿಸುವ ವೈಚಾರಿಕತೆಯ ಬಗ್ಗೆ ಮಾತನಾಡುತ್ತಿದ್ದೇನೆ. ಈ ಪರಂಪರೆಗಳು ಬರಹ, ಸಾಮುದಾಯಿಕ ಕ್ರಿಯೆಗಳು, ಆಯ್ಕೆಗಳು, ಆಚರಣೆ ಇವೆಲ್ಲವುಗಳ ಮೂಲಕ ಸಂಕೀರ್ಣವಾದ ಅಭಿವ್ಯಕ್ತಿಯನ್ನು ಪಡೆಯುತ್ತವೆ. ಅವುಗಳ ವ್ಯಾಪ್ತಿಯು ಈ ಪ್ರಮಾಣದಲ್ಲಿ ಇದ್ದರೂ ನಾಗರೀಕ ಸಮುದಾಯದಲ್ಲಿ ಪ್ರಜ್ಞಾಪೂರ್ವಕವಾಗಿ ಚರ್ಚೆಯಾಗುವ, ಹರಡುವ, ವೈಚಾರಿಕತೆಯು ಆಧುನಿಕ ಸಮಾಜದಲ್ಲಿ ಮುಖ್ಯವಾಗಿದೆ. ಪ್ರಜಾಪ್ರಭುತ್ವವಾದಿ ಸಂಸ್ಕೃತಿಯ ಬಗ್ಗೆ ಆಳವಾಗಿ ಚಿಂತಿಸಿದ ಅಂಬೇಡ್ಕರ್ ಹಾಗೂ ನಾಗರೀಕ ಸಮುದಾಯ, ಸಾರ್ವಜನಿಕ ವಲಯಗಳ ಬಗ್ಗೆ ಚಿಂತಿಸಿದ ನಮ್ಮ ಕಾಲದ ಮುಖ್ಯ ಚಿಂತಕನಾದ ಹಾಬರ್‌ಮಾಸ್ ಇವರಿಬ್ಬರೂ ಈ ವೈಚಾರಿಕತೆಯನ್ನೇ ವಿಶ್ಲೇಷಿಸಿದ್ದಾರೆ. ಈ ದೃಷ್ಟಿಯಲ್ಲಿ ಕರ್ನಾಟಕದ ವೈಚಾರಿಕ ಪರಂಪರೆಗಳು ದುರ್ಬಲವೆಂದು ನಾನು ಹೇಳಿದ್ದು. ಅತ್ಯಂತ ಚಲನಶೀಲವಾದ, ಪ್ರಕ್ಷುಬ್ಧವಾದ ಹಾಗೂ ಚಾರಿತ್ರಿಕ ಮಹಾತಿರುವಿನ ಯುಗದಲ್ಲಿ ಕರ್ನಾಟಕದ ವೈಚಾರಿಕತೆ ಅದರೊಂದಿಗೆ ಸಂಕೀರ್ಣವಾಗಿ ಅನುಸಂಧಾನ ಮಾಡಿಕೊಳ್ಳಲಿಲ್ಲ.

ಸಾಹಿತ್ಯಿಕ ವಲಯವನ್ನೇ ಕೇಂದ್ರವಾಗಿರಿಸಿಕೊಂಡರೂ ಕುವೆಂಪು ಹೆಚ್ಚು ವಿಸ್ತಾರವಾದ ಸಾಂಸ್ಕೃತಿಕ ವಲಯದಲ್ಲಿ ವೈಚಾರಿಕವಾದ ಸಂವಾದಗಳನ್ನು ಜೀವಂತವಾಗಿರಿಸಿದರು. ಅವರ ಕಾವ್ಯ ಹಾಗೂ ವೈಚಾರಿಕ ಬರಹಗಳು ಮೇಲ್ನೋಟಕ್ಕೆ ಪಶ್ಚಿಮದ್ದು ಎನ್ನಬಹುದಾದ reason ಮತ್ತು rationality ಎನ್ನುವ ಪರಿಕಲ್ಪನೆಗಳನ್ನು 'ಮತಿ' ಎನ್ನುವ ಹೆಸರಿನ ಮೂಲಕ ಕನ್ನಡ ವೈಚಾರಿಕತೆಯ ಕೇಂದ್ರಕ್ಕೆ ತಂದರು. ಇದನ್ನು ಅವರು 'ವಿಜ್ಞಾನ ದೀವಿಗೆ'ಯೆನ್ನುವ ರೂಪಕದಲ್ಲಿಯೂ ಗ್ರಹಿಸಿದ್ದರಿಂದ ಅವರಿಗೆ rationality ಎನ್ನುವುದು ಆಧುನಿಕ ವಿಜ್ಞಾನದ ಬುನಾದಿಯಾಗಿ ಕಂಡಿತ್ತು. ಮತಿಗೆ ನಿಕಷವಾಗಿ ಅವರು ವ್ಯಾಖ್ಯಾನಿಸಿದ್ದು 'ಮತ'ವೆನ್ನುವುದನ್ನು. ಅದು ಅತಾರ್ಕಿಕವಾದುದು, ಅವಿವೇಕದಿಂದ ಕೂಡಿದ್ದು, ನಿರಂಕುಶ ಮತಿಗೆ ಶತ್ರುವಾಗಿರುವಂಥದು ಮತ್ತು ಸಾಂಸ್ಥಿಕ ಧರ್ಮ ಹಾಗೂ ಜಾತಿ, ವರ್ಣ ವ್ಯವಸ್ಥೆಗಳಿಗೆ ಬೆಂಬಲವಾಗಿರುವಂಥದು. ಕುವೆಂಪು 'ಮತಭ್ರಾಂತಿ' ಎನ್ನುವ ಪದದಿಂದ ಅದರ ಪರಿಣಾಮವನ್ನು ಗುರುತಿಸುತ್ತಾರೆ. ಅವರ ಕಾದಂಬರಿಗಳಲ್ಲಿ ನೋಡುವ ಹಾಗೆ ಮತ ಮೌಢ್ಯ ಮತ್ತು ಮತಿ ಮೌಢ್ಯಗಳು ಬ್ರಾಹ್ಮಣ ಪುರೋಹಿತಶಾಹಿ ಮತ್ತು ಶೂದ್ರ ಜನಾಂಗಗಳ ಪರಾವಲಂಬನೆಗಳಿಂದ ಪ್ರಬಲಗೊಂಡಿವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕುವೆಂಪು ನೇರ ಪ್ರವೇಶ ಮಾಡಿ ಹೇಳುವಂತೆ ದಲಿತ ಜನಾಂಗಗಳನ್ನು ಅಸ್ಪೃಶ್ಯತೆಯಿಂದ ನರಕದಲ್ಲಿಟ್ಟ ಮತ್ತು ಶೂದ್ರ ಜನಾಂಗದವರನ್ನು ಮೌಢ್ಯದಲ್ಲಿಟ್ಟ ಮಠಗಳಿಂದಾಗಿ, ಸಾಂಸ್ಥಿಕ ಧರ್ಮಗಳಿಂದಾಗಿ ಕ್ರಿಶ್ಚಿಯನ್ ಮಿಶನರಿಗಳಿಗೆ ಮತಾಂತರದ ಬಲೆಯನ್ನು ಒಡ್ಡುವುದು ಸುಲಭವಾಯಿತು. ಸ್ವತಃ ಕುವೆಂಪು ಉಪನಿಷತ್ತುಗಳ ಜಿಜ್ಞಾಸೆ ಮತ್ತು ಪ್ರಕೃತಿಯ ದೈವೀಕರಣದ ಮೂಲಕ ತಮ್ಮದೆ ಆದ 'ಸೆಕ್ಯೂಲರ್ ಧರ್ಮ'ವೊಂದನ್ನು ಕಟ್ಟಿಕೊಂಡರು. ಕುವೆಂಪು ಟೀಕಿಸುವ ಮತಭ್ರಾಂತಿ, ಮತಿಭ್ರಾಂತಿಗಳು ಯಾವ ಪ್ರಮಾಣದಲ್ಲಿದ್ದವು ಎನ್ನುವುದನ್ನು ವಸಾಹತು ಕಾಲದ ಭಾರತದ ಚರಿತ್ರೆಯು ವಿವರಿಸಬಲ್ಲದು. ಈಗ ೨೦೨೨ರಲ್ಲಿ ಭಾರತೀಯ ನಾಗರೀಕತೆಯ ಅಂತಿಮ ಅವಸಾನದ ಕಾಲದಲ್ಲಿ ಕಾಣುತ್ತಿರುವ ಮೌಢ್ಯದ ಮೂಲಗಳು ಅಲ್ಲಿವೆ. ಕನ್ನಡ ಪರಂಪರೆಯಲ್ಲಿ ಬಸವಣ್ಣ ಮತ್ತು ವಚನಕಾರರು ಮಾತ್ರ ಈ ಮೌಢ್ಯಗಳನ್ನು ಪ್ರಶ್ನಿಸಿದ್ದರು. ಕುವೆಂಪು ಚಿಂತನೆಯ ಎಳೆಗಳು ತೇಜಸ್ವಿ ಹಾಗೂ ಲಂಕೇಶರಲ್ಲಿ ಸಮಕಾಲೀನ ರೂಪವನ್ನು ಪಡೆಯುತ್ತವೆ. ಆಶ್ಚರ್ಯಕರವೆಂದರೆ ಕಳೆದ ಕೆಲವು ದಶಕಗಳಲ್ಲಿ ಕರ್ನಾಟಕವು ಈ ವೈಚಾರಿಕ ಪರಂಪರೆಯನ್ನು ಸಂಪೂರ್ಣವಾಗಿ ಅಂಚಿಗೆ ತಳ್ಳಿದೆ. ನಮ್ಮ ಬರಹಗಾರರು ಜಾಣ ಮೌನದಿಂದ ಇರುವುದಕ್ಕೆ ಕಾರಣವೆಂದರೆ ಈಗ ಮೌಢ್ಯವನ್ನು ಪ್ರಶ್ನಿಸುವುದೆಂದರೆ ಆಕ್ರಮಣಕಾರಿ ಹಾಗೂ ಹಿಂಸಾಪರವಾದ ರಾಜಕೀಯವನ್ನು ಎದುರು ಹಾಕಿಕೊಂಡಂತೆ. ಹೀಗೆ ಮಾಡುವುದಕ್ಕಾಗಿ ಕಟ್ಟಿಕೊಂಡ self-defense ಏನೆಂದರೆ reason, rationalityಗಳ ಸೀಮಿತತೆ, ನಮ್ಮ ಭಕ್ತಿ ಅನುಭಾವ ಪರಂಪರೆಗಳ ದೇಶೀಯ ಪರ್ಯಾಯಗಳು, ಆಧುನಿಕ rationalityಯ ವಿನಾಶಕಾರಿ ಪರಿಣಾಮಗಳು ಇತ್ಯಾದಿ ಆಕರ್ಷಕವಾದ ವಾದಗಳ ಸರಣಿ. ಸರಳ ಭಾಷೆಯಲ್ಲಿ ಇದು ಬೌದ್ಧಿಕ ಪಲಾಯನವಾಗಿದೆ.

ಈ ಕಾರಣದಿಂದಾಗಿಯೇ ನಮ್ಮ ವಿದ್ವಾಂಸರು ಬುದ್ಧ ಹಾಗೂ ಅಲ್ಲಮರನ್ನು reasonನ ಶತ್ರುಗಳೆಂದು ವ್ಯಾಖ್ಯಾನಿಸಿದ್ದಾರೆ. ದೇಶೀಯ ವೈಚಾರಿಕ ಪರಂಪರೆಗಳೆಂದರೆ ಕೇವಲ ಭಕ್ತಿ, ಅನುಭಾವಿ ಪರಂಪರೆಗಳೆಂದು ಅಪವ್ಯಾಖ್ಯಾನ ಮಾಡಿದ್ದಾರೆ. ದೇಶೀಯವೆನ್ನಲಾಗುವ ಪರಂಪರೆಗಳು, ಸಂಕರ ಪರಂಪರೆಗಳು, ಸಹಬಾಳ್ವೆ, ಸಹಿಷ್ಣುತೆಗಳ ಮಾದರಿಗಳು ಮತ್ತು ಅವು ಇಂದಿಗೂ ಸಾಮಾನ್ಯ ಜನರ ನಿತ್ಯಜೀವನದಲ್ಲಿ ಜೀವಂತವಾಗಿವೆಯೆನ್ನುವುದಾದರೆ ಯಾಕೆ ಈ ಜನರೆಲ್ಲ ಅತ್ಯಂತ ದುಷ್ಟವೂ ಹಿಂಸಾಪರವೂ ಆದ ರಾಜಕೀಯಕ್ಕೆ ತಮ್ಮ ಸಮ್ಮತಿ ನೀಡುತ್ತಾರೆ ಎನ್ನುವ ಪ್ರಶ್ನೆಯನ್ನು ಈ ವಿದ್ವತ್ತು ಕೇಳುವುದಿಲ್ಲ. ದೇಶೀಯ ಪರಂಪರೆಗಳ ಅವಿಮರ್ಶಾತ್ಮಕವಾದ, ಅಚಾರಿತ್ರಿಕವಾದ ವೈಭವೀಕರಣವು ಕನ್ನಡ ವಿದ್ವತ್ ಪರಂಪರೆಗಳ ಆಳದಲ್ಲಿದೆ. ಕರ್ನಾಟಕವು ಮಾನವಪರವಾದ, ಉದಾರ ಹಾಗೂ ಆಧುನಿಕ ಪರಂಪರೆಗಳ ರಾಜ್ಯವೆನ್ನುವುದು ಯಾವ ಕಾಲಕ್ಕೂ ಒಂದು ಪುರಾಣ ಪ್ರತಿಮೆಯೇ ಆಗಿದ್ದರೂ ಇಲ್ಲಿಯ ನಾಗರೀಕ ಸಮುದಾಯವು ಅತಿಯಾದ ಅತಾರ್ಕಿಕತೆ ಹಾಗೂ ಮೌಢ್ಯಗಳಿಂದ ಕೊಂಚ ದೂರವನ್ನು ಇಟ್ಟುಕೊಂಡಿತ್ತು. ಈಗ ವೈಚಾರಿಕವಾಗಿ ಕರ್ನಾಟಕವು ಅನುಮಾನಾಸ್ಪದವೆನ್ನಿಸುವ ರಾಜ್ಯವಾಗಿದೆ? ಎಂಬತ್ತರ ಮತ್ತು ತೊಂಬತ್ತರ ದಶಕಗಳಲ್ಲಿ ಗಾಂಧಿ, ಲೋಹಿಯಾ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳ ಪ್ರಭಾವದಲ್ಲಿ ಕ್ರಿಯಾಶೀಲವಾದ ಸಮಾಜವಾದಿ, ರೈತ ಹಾಗೂ ದಲಿತ ಸಂಘಟನೆಗಳು ಜಾತಿ ವ್ಯವಸ್ಥೆಯ ರಚನೆ, ಸಾಂಸ್ಕೃತಿಕ ರಾಜಕಾರಣ ಹಾಗೂ ಸಿದ್ಧಾಂತಗಳ ತೀವ್ರವಾದ ಪರಾಮರ್ಶೆಯಲ್ಲಿ ತೊಡಗಿಸಿಕೊಂಡವು. ಜಾತಿ ಸಂಕಥನಗಳ ವಿಮರ್ಶೆಯೂ ಇದರ ಭಾಗವಾಗಿತ್ತು. ಈ ವೈಚಾರಿಕತೆಯ ಹಿಂದೆ ಕರ್ನಾಟಕ ಸಮಾಜದಲ್ಲಿ ಕಾಗೋಡು ಸತ್ಯಾಗ್ರಹ, ದೇವರಾಜ್ ಅರಸು ಅವರ ರಾಜಕೀಯ, ಭೂಸುಧಾರಣಾ ಕಾನೂನುಗಳು, ದಲಿತ ಸಂಘರ್ಷ ಸಮಿತಿಯ ಕ್ರಿಯಾಶೀಲತೆ ಇವುಗಳ ಪ್ರಭಾವದಿಂದ ಚುರುಕುಗೊಂಡ ಸಾಮಾಜಿಕ ಚಲನಶೀಲತೆಯು ಇತ್ತು. ಸ್ಥೂಲವಾಗಿ ಇದನ್ನು ಬ್ರಾಹ್ಮಣ್ಯದ ಯಾಜಮಾನ್ಯದಿಂದ ಶೂದ್ರ-ದಲಿತ ಹಕ್ಕು ಮಂಡನೆಗಳ ಕಡೆಗೆ ನಡೆದ ಪಲ್ಲಟವೆಂದು ಗುರುತಿಸಬಹುದಾಗಿದೆ. ತೇಜಸ್ವಿಯವರ 'ವಿಮರ್ಶೆಯ ವಿಮರ್ಶೆ' ಕೃತಿಯಲ್ಲಿರುವ ಲೇಖನಗಳು ಈ ಪಲ್ಲಟವನ್ನು ವ್ಯಾಖ್ಯಾನಿಸುತ್ತವೆ. ಒಟ್ಟಾರೆ ಕರ್ನಾಟಕದ ಚಿಂತನಾ ಪರಂಪರೆಯಲ್ಲಿ ಇದೊಂದು paradigm shift ಆಗಿತ್ತು. ಅಲ್ಲಿಂದಾಚೆಗೆ ಇನ್ನೊಂದು ತಿರುವು ನಮ್ಮ ಚಿಂತನೆಯಲ್ಲಿ ಕಂಡುಬಂದಿಲ್ಲವೆಂದು ನನ್ನ ಅನಿಸಿಕೆ. ಇದರಿಂದಾಗಿ ಸಮಾನತೆ, ಸಾಮಾಜಿಕ ನ್ಯಾಯ ಮುಂತಾದ ಪರಿಕಲ್ಪನೆಗಳು ಮರು ವ್ಯಾಖ್ಯಾನಗೊಂಡವು. ಈ ಪ್ರಕ್ರಿಯೆಗೆ ಎದುರಾದ ಎರಡು ಅಪಾಯಗಳೆಂದರೆ ಸ್ವ-ವಿಮರ್ಶೆಯ ಕೊರತೆಯಿಂದಾಗಿ ಈ ಚಿಂತನೆಯು ತಾತ್ವಿಕವಾಗಿ ತುಂಬಾ ತೆಳುವಾಗಿಬಿಟ್ಟಿತು. Politically correct ಆಗುವುದು ಸುಲಭವಾಗಿಬಿಟ್ಟಿತು. ಸಾಹಿತ್ಯ ವಿಮರ್ಶೆಯು ಜಾತಿ ಜನಗಣತಿಯ ಪ್ರಾಥಮಿಕ ವರದಿಯ ಮಟ್ಟಕ್ಕೆ ಇಳಿಯಿತು. ತನ್ನೊಳಗೆ ಇರಬಹುದಾದ ಅಂತರ್ ವೈರುಧ್ಯಗಳನ್ನು ಎದುರಿಸಲಾಗದ ವೈಚಾರಿಕ ಮಾದರಿಗಳು ತಮ್ಮ ಮೂಲ ಅಪೇಕ್ಷೆಗಳಿಗೆ ವಿರುದ್ಧವಾದ ನಿಲುವುಗಳ ಸಮರ್ಥನೆಗೆ ತೊಡಗುತ್ತವೆ. ರೈತ ಚಳುವಳಿಯ ನಾಯಕರು ಹಾಗೂ ಶ್ರೇಷ್ಠ ಚಿಂತಕರೂ ಆಗಿದ್ದ ಎಂ.ಡಿ. ನಂಜುಂಡಸ್ವಾಮಿ ಒಂದು ಸಂದರ್ಶನದಲ್ಲಿ ದೇವನೂರ ಮಹಾದೇವರು ರೈತ ಚಳುವಳಿಯ ರಾಚನಿಕ ವೈರುಧ್ಯದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವನ್ನು ನೀಡಲೇ ಇಲ್ಲ. ರೈತ ಚಳುವಳಿಯು ಭೂರಹಿತ ಕಾರ್ಮಿಕರಾದ ದಲಿತರ ಬಗ್ಗೆ, ಗ್ರಾಮ ಸಮಾಜಗಳಲ್ಲಿ ದಲಿತರ ಶೋಷಕರಾಗಿರುವ ಜಮೀನ್ದಾರಿ ವರ್ಗಗಳೇ ರೈತ ಚಳುವಳಿಯ ಮುಂದಾಳತ್ವ ವಹಿಸಿರುವ ದ್ವಂದ್ವದ ಬಗ್ಗೆ ಮಹಾದೇವ ಎತ್ತಿದ ಪ್ರಶ್ನೆಗೆ ಇಂದಿಗೂ ರೈತ ಚಳುವಳಿಯು ಉತ್ತರ ನೀಡಲಾಗಿಲ್ಲ. ನವ ಬಂಡವಾಳಶಾಹಿಯ ಆರ್ಥಿಕ ಸ್ವರೂಪವಾದ ಜಾಗತೀಕರಣವು ರೈತರ ಕೃಷಿ ಸ್ವಾಮ್ಯತೆಯನ್ನು ನಾಶ ಮಾಡುತ್ತದೆಯೆಂದು ಪ್ರಬಲವಾಗಿ ಮಂಡಿಸಿ ಅದಕ್ಕೆ ಪೂರಕವಾದ ಕ್ರಿಯಾ

ಬಹು ಕರಾಳವಾದ ಕಾಲವೊಂದರಲ್ಲಿ ನಾವು ಬದುಕುತ್ತಿದ್ದೇವೆ. ಈ ಕಾಲದ ಎರಡು ಮುಖ್ಯ ಲಕ್ಷಣಗಳೆಂದರೆ ಪ್ರಜಾಪ್ರಭುತ್ವದ ಸಂಸ್ಥೆಗಳ ವಿನಾಶ ಮತ್ತು ನಾಗರೀಕ ಸಮಾಜದ ಸಾಮುದಾಯಿಕ ಚಿಂತನೆಯಲ್ಲಿ ಕಾಣುತ್ತಿರುವ ನಾಚಿಕೆ ಹುಟ್ಟಿಸುವ ಕಳಪೆತನ. ವೈಚಾರಿಕ ಕಳಪೆತನವು ದುಷ್ಟ ಹಾಗೂ ಅವಿವೇಕಿಯಾದ ಪ್ರಭುತ್ವದ ಕಾಲದಲ್ಲಿ ಅಪಾಯಕಾರಿಯಾಗಬಲ್ಲದು. ಆಧುನಿಕ ಕಾಲದಲ್ಲಿ ಸರ್ವಾಧಿಕಾರವು ದೀರ್ಘಾಯುಷಿಯಾಗಿರುತ್ತದೆ ಮತ್ತು ಪ್ರಜಾಪ್ರಭುತ್ವ ಹಾಗೂ ಸಮಾನತೆಗಳು ದುರ್ಬಲವಾಗಿರುತ್ತವೆ ಎನ್ನುವುದು ಇಪ್ಪತ್ತನೆಯ ಶತಮಾನದ ಪಾಠವಾಗಿದೆ. ೨೦ನೇ ಶತಮಾನವನ್ನು ಮೀರಿದ ಹಿಂಸೆ ಹಾಗೂ ಅಸ್ವಾತಂತ್ರ್ಯದ ಕಾಲವನ್ನು ನಾವು ಪ್ರವೇಶಿಸಿದ್ದೇವೆ. ಈ ಪರಿಸ್ಥಿತಿಯಲ್ಲಿ ತಾಳಿಕೆಯುಳ್ಳ ಪ್ರತಿರೋಧವು ಆತ್ಮವಿಮರ್ಶೆಯಿಂದ ಕೂಡಿದ ಮತ್ತು ದಿನನಿತ್ಯದ ಜೀವನಕ್ರಮದಲ್ಲಿ ಬದಲಾವಣೆ ಬಯಸುವ ಸಾಮುದಾಯಿಕವಾದ ಚಿಂತನೆಯಿಂದ ಮಾತ್ರ ಸಾಧ್ಯ. ಈ ಚಿಂತನೆಯನ್ನು ನಿರ್ಮಿಸಬೇಕಾದ ಸಮಾಜವಿಜ್ಞಾನಗಳು ನಮ್ಮಲ್ಲಿ ಬೆಳೆಯಲೇ ಇಲ್ಲ. ಅವುಗಳ ಪಶ್ಚಿಮದ ವಿದ್ವತ್ತಿಗೆ ಹೋಲಿಸಿದರೆ **mediocre** ಆಗಿವೆ ಮತ್ತು ಇನ್ನೊಂದು ಕಡೆಗೆ ನಿರ್ವಸಾಹತೀಕರಣಗೊಳ್ಳದೆ ಅಸಂಗತವಾದ ಪಶ್ಚಿಮದ ನಕಲುಗಳಾಗಿವೆ. ಆರೋಗ್ಯಕರವಾಗಿ ಬೆಳೆಯುತ್ತಿದ್ದ ವಸಾಹತೋತ್ತರ ಚಿಂತನೆಯು **elite** ಹಾಗೂ ಮಹಾನಗರ ಕೇಂದ್ರಿತ ವಿಶ್ವವಿದ್ಯಾಲಯಗಳಲ್ಲಿ ಅತಿ ಬೌದ್ಧಿಕತೆಯ ಕ್ಲಿಷ್ಟ ಭಾಷೆಯ ಪ್ರದರ್ಶನವಾಗಿ ಬಿಟ್ಟಿತು

ಯೋಜನೆಗಳ ಮೂಲಕ ಪ್ರತಿಭಟನೆ ಆರಂಭಿಸಿದ ನಂಜುಂಡಸ್ವಾಮಿಯವರ ಜಾಗತೀಕರಣ–ವಿರೋಧಿ ಚಿಂತನೆಯು ನಂತರದ ದಿನಗಳಲ್ಲಿ ರೈತ ಚಳುವಳಿಯ ಮುಖ್ಯ ಕಾಳಜಿಯಾಗಲಿಲ್ಲ. ಆದ್ದರಿಂದಲೇ ಜಾಗತೀಕರಣ ವಿರೋಧಿ ರೈತ ಚಿಂತನೆಯ ಮಾದರಿಯಾಗಿ ವಿಶ್ವದ ಗಮನ ಸೆಳೆದ ಕರ್ನಾಟಕದ ರೈತ ಚಳುವಳಿ ವೈಚಾರಿಕವಾಗಿ ಸ್ಥಗಿತಗೊಂಡುಬಿಟ್ಟಿತು. ಇತ್ತೀಚೆಗೆ ನಡೆದ ಭಾರತೀಯ ರೈತರ ಚಳುವಳಿಗೆ ಅದರ ಬೌದ್ಧಿಕ ಕೊಡುಗೆ ಇರಲೇ ಇಲ್ಲ. ಡಿ. ಎಸ್. ನಾಗಭೂಷಣರು ಎಚ್ಚರಿಸಿದ ಹಾಗೆ ರೈತ ವಿರೋಧಿ ಕಾನೂನುಗಳನ್ನು ಸರಕಾರವು ಹಿಂತೆಗೆದುಕೊಂಡ ಮೇಲೆ ಇರುವ ಗಂಭೀರ ಪ್ರಶ್ನೆಯೆಂದರೆ ಮುಂದೇನು ಎನ್ನುವುದು. ಜಾಗತೀಕರಣ, ಖಾಸಗೀಕರಣದ ಗಂಭೀರ ಅಪಾಯಗಳನ್ನು ಎದುರಿಸಲು ರೈತ ಚಳುವಳಿಯು ಸೈದ್ಧಾಂತಿಕವಾಗಿ ಸಿದ್ಧವಾಗಿದೆಯೇ ಎನ್ನುವುದು ಮುಖ್ಯ ಪ್ರಶ್ನೆ. ಜಾಗತೀಕರಣವನ್ನು ಮೂಲಭೂತವಾಗಿ ಪ್ರಶ್ನಿಸುವ ಒಂದು ಚಿಂತನೆ ಕರ್ನಾಟಕದಲ್ಲಿ ಆರಂಭವಾಗಿತ್ತು. ಅದು ಹಿನ್ನೆಲೆಗೆ ಸರಿದಿದೆ. ತೇಜಸ್ವಿಯವರಂಥ ಶಕ್ತಿಶಾಲಿ ಚಿಂತಕರು ಜಾಗತೀಕರಣದ ಬಗ್ಗೆ ಭೋಳೆತನದ ಅಪಗ್ರಹಿಕೆಗಳನ್ನು ಹೊಂದಿದ್ದು ಚರ್ಚೆಯಾಗಲೇ ಇಲ್ಲ. ಈಗಂತೂ ತೇಜಸ್ವಿ ಹೊಸ ಜನಾಂಗಕ್ಕೆ ಒಂದು Weekend Tourist Spot ಆಗಿ ಬಿಟ್ಟಿದ್ದಾರೆ.

ಭಾರತದ ವಿಶಿಷ್ಟ ಸನ್ನಿವೇಶದಲ್ಲಿ ನವ ಬಂಡವಾಳಶಾಹಿಯ ಜಾಗತೀಕರಣ ಹಾಗೂ ಅತ್ಯಂತ primitive ಆದ ವೈಚಾರಿಕತೆಯ ಬಲಪಂಥೀಯ ಕೋಮುವಾದಗಳ ಆತ್ಮೀಯ ಸಖ್ಯವು ನಮ್ಮ ಚಿಂತನೆಗೆ ವಸ್ತುವಾಗಿಲ್ಲ. ಪ್ರಜಾಪ್ರಭುತ್ವದ ಅವಹೇಳನ, ಹಿಂಸಾಪರವಾದ ಹಿಂದುತ್ವವಾದ ಹಾಗೂ ಜಾಗತಿಕ ಬಂಡಾಳಶಾಹಿಯ ಸಮರ್ಥನೆ ಇವು ಮೂರೂ ಪರಸ್ಪರ ಪೋಷಕವಾಗಿ ಅಗಾಧ ಶಕ್ತಿಯನ್ನು ಪಡೆಯುತ್ತಿವೆ. ಕರ್ನಾಟಕದ ಚಿಂತನೆ ಕೇಳಬೇಕಾದ ಪ್ರಶ್ನೆಗಳೆಂದರೆ ಏಕೀಕರಣದ ಕಾಲದಿಂದಲೇ ಲಿಂಗಾಯತ–ಒಕ್ಕಲಿಗ ಈ ಎರಡು ಬಲಿಷ್ಠ ಜಾತಿಗಳು ಕರ್ನಾಟಕದ ರಾಜಕೀಯವನ್ನು ಜಾತೀಕರಣಗೊಳಿಸಲು ಆರಂಭಿಸಿದ ಪ್ರಕ್ರಿಯೆ, ಇಂದು ಸಂಪೂರ್ಣ ಯಶಸ್ಸು ಪಡೆದು ಕರ್ನಾಟಕ ಸಮಾಜವು ಜಾತಿ ಸಮಾಜವಾಗಿ ಪರಿವರ್ತನೆಯಾಗಿದೆ. ಈ ಜಾತೀಕರಣವು ಅದೆಷ್ಟು ಪ್ರಬಲವಾಗಿದೆಯೆಂದರೆ ಇತರ ಜಾತಿಗಳು, ದಲಿತ ಜಾತಿಗಳು ಜಾತಿ ಕೇಂದ್ರಿತ ಸಂಘಟನೆ ಹಾಗೂ ಅವಿಮರ್ಶಾತ್ಮಕವಾದ ಜಾತೀಯತೆಯಿಂದ ಹೊರಬರಲಾಗದಂಥ ಸ್ಥಿತಿಯು ನಿರ್ಮಾಣವಾಗಿದೆ. ಸರಕಾರದಿಂದ ಸವಲತ್ತುಗಳನ್ನು ಪಡೆಯುವುದರಿಂದ ಆರಂಭವಾಗಿ ಚುನಾವಣಾ ರಾಜಕೀಯದವರೆಗೆ ಜಾತಿಕೇಂದ್ರಿತ ಸಂಘಟನೆ ಹಾಗೂ ಕ್ರಿಯೆಗಳಿಗೆ ಪರ್ಯಾಯವೇ ಇಲ್ಲವೆನ್ನುವ ಸ್ಥಿತಿಯು ಈಗ ನಮ್ಮೆದುರಿಗಿದೆ. ಭೂ ಸುಧಾರಣೆ ಹಾಗೂ ಅರಸು ರಾಜಕೀಯದಿಂದಾಗಿ ರಾಜಕೀಯ ಅಸ್ಮಿತೆ ಹಾಗೂ ಆತ್ಮವಿಶ್ವಾಸವನ್ನು ಪಡೆದಿದ್ದ ಶೂದ್ರ, ಹಿಂದುಳಿದ ವರ್ಗ–ಜಾತಿಗಳು ಈಗ ಶುದ್ಧ ರಾಜಕೀಯ ಸಂಘಟನೆಗಳಾಗಿವೆ. ಕರ್ನಾಟಕದ ದಲಿತ ರಾಜಕೀಯವು ಇದಕ್ಕಿಂತ ಭಿನ್ನವಾಗಿಲ್ಲ. ಲೋಹಿಯಾ ಅವರು ಕಲ್ಪಿಸಿದ್ದ ಹಿಂದುಳಿದ ಜಾತಿಗಳ ರಾಜಕೀಯವು ಇಲ್ಲವಾಗಿ ಇಂದು ಕರ್ನಾಟಕದಲ್ಲಿ ಉಗ್ರ, ಹಿಂಸಾಪರ ಕೋಮುವಾದದ ಅತ್ಯಂತ ಪ್ರಬಲ ಸಮರ್ಥನೆಯು ಲಿಂಗಾಯತ, ಒಕ್ಕಲಿಗ, ಬಂಟ ಮುಂತಾದ ಶೂದ್ರ ಜಾತಿಗಳಿಂದ ದೊರೆಯುತ್ತಿದೆ. ಒಂದು ಕಾಲದಲ್ಲಿ ಹಿಂದುಳಿದ ಜಾತಿಗಳ ರಾಜಕೀಯವು ಭಾರತೀಯ ಸಮಾಜಕ್ಕೆ ಚಲನಶೀಲತೆ ತಂದುಕೊಡುತ್ತದೆ ಎಂದುಕೊಂಡಿದ್ದ ಭ್ರಮೆ ಕಳಚಿ ಹೋಗಿ ಕರ್ನಾಟಕದ ಹಿಂದುಳಿದ ಜಾತಿಗಳು ಹಿಂದುತ್ವದ ಪುಕ್ಕಟೆ ಗುಲಾಮರಾಗಿ ಕಾಣುತ್ತಿವೆ. ಜಾತಿವಿನಾಶವೆನ್ನುವ ಅಂಬೇಡ್ಕರ್‌ರ ಪರಿಕಲ್ಪನೆಯನ್ನು ಇಂದು ಅಂತಿಮವಾಗಿ ಕರ್ನಾಟಕದಿಂದ ದೇಶಭ್ರಷ್ಟಗೊಳಿಸಲಾಗಿದೆ. ಪ್ರಶ್ನೆಯೆಂದರೆ ಈ ಬೆಳವಣಿಗೆಗಳನ್ನು ಕರ್ನಾಟಕದ ವೈಚಾರಿಕ ಪರಂಪರೆಗಳು ಕಲ್ಪಿಸಿಕೊಂಡೇ ಇರಲಿಲ್ಲವೆ? ಸಾಮಾಜಿಕ ಬದಲಾವಣೆಗಳು ಸಂಕೀರ್ಣವಾಗಿರುತ್ತವೆ ಮತ್ತು ಕ್ರಮೇಣವಾಗಿರುತ್ತವೆ. ಇದನ್ನು reasonable surmise ಮೂಲಕ ಗ್ರಹಿಸುವುದೇ ವೈಚಾರಿಕ ಚಿಂತನೆಯ ಕರ್ತವ್ಯವಾಗಿರುತ್ತದೆ. ಈಗ ಹಠಾತ್ತನೆ ಎಲ್ಲವನ್ನೂ ಮೋದಿ ನೇತೃತ್ವದ ಬಲಪಂಥೀಯ ರಾಜಕೀಯ ಚಿಂತನೆಗೆ ಆರೋಪಿಸುವ ವೈಚಾರಿಕತೆಯನ್ನು ಗಂಭೀರವಾಗಿ ಪರಿಗಣಿಸಲಾಗದು. ನನಗೆ ತುಂಬಾ ಆತಂಕದ ವಿಷಯವೆಂದರೆ ಆಕ್ರಮಣಕಾರಿ ಬಲಪಂಥೀಯ ಚಿಂತನೆಯ ಪ್ರತಿರೋಧವಾಗಿ ಅಂಬೇಡ್ಕರ್–ಕೇಂದ್ರಿತ ವಿಶ್ಲೇಷಣೆಗಳು ಕರ್ನಾಟಕದಲ್ಲಿ ಕುಂಠಿತವಾಗಿಬಿಟ್ಟಿವೆ ಎನ್ನುವುದು. ಅಂಬೇಡ್ಕರ್ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿ ದೆಸೆಯಲ್ಲಿ ಜಾತಿಯನ್ನು ಕುರಿತು ಬರೆದ ಪ್ರಬಂಧದಿಂದ ಆರಂಭಿಸಿ ತಮ್ಮ ಜೀವನದ ಕೊನೆಯವರೆಗು ಜಾತಿವ್ಯವಸ್ಥೆ, ಪುರೋಹಿತಶಾಹಿ ಪ್ರತಿಕ್ರಾಂತಿ ಇವುಗಳನ್ನು ಕುರಿತು ಬರೆದರು. ಹಿಂದೂ ಸಮಾಜ ರಚನೆ ಮತ್ತು ತನ್ನ ಅಸಮಾನತೆಯ ಸಿದ್ಧಾಂತಗಳಿಗಾಗಿ ಅದು ಬಳಸಿಕೊಂಡ ಶಾಸ್ತ್ರಗಳು, ಧರ್ಮಗ್ರಂಥಗಳು ಹಾಗೂ ಪುರಾಣಗಳನ್ನು ಕಟುವಾದ ವಿಮರ್ಶೆಗೆ ಒಳಪಡಿಸಿದರು. ಅಲ್ಲದೆ ಒಬ್ಬ ಸಮಾಜ ವಿಜ್ಞಾನಿಯ ಹಾಗೆ ಜಾತಿ ಮತ್ತು ಕೋಮು ಹಿಂಸೆಗಳ ವಿವರವಾದ ದಾಖಲೆಗಳನ್ನು ಅಧಿಕೃತವಾಗಿ ಈ ಬರಹಗಳಲ್ಲಿ ದಾಖಲಿಸಿದರು. ಅವುಗಳನ್ನು ಓದಿದರೆ ಆಧುನಿಕ ಭಾರತದಲ್ಲಿ ಜಾತಿ ಹಿಂಸೆ ಹಾಗೂ ಕೋಮುವಾದಗಳು ನಾಗರೀಕ ಸಮಾಜ ಹಾಗೂ ರಾಷ್ಟ್ರೀಯ ಪ್ರಭುತ್ವ ಇವೆರಡನ್ನೂ ಕ್ರಮೇಣವಾಗಿ ಆವರಿಸಿಕೊಂಡಿದ್ದರ ಚಾರಿತ್ರಿಕ ವ್ಯಾಖ್ಯಾನವು ದೊರೆಯುತ್ತದೆ. ಈ ನೋಟಕ್ರಮದಲ್ಲಿ ಸ್ವಾತಂತ್ರ್ಯಾನಂತರ ಆಗಿರುವ ಬೆಳವಣಿಗೆಗಳು ಅನಿರೀಕ್ಷಿತವೂ ಅಲ್ಲ, ಅಚ್ಚರಿಯೂ ಅಲ್ಲ, ನಮ್ಮ ವೈಚಾರಿಕತೆಯು ಕುರುಡಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ಇದನ್ನು ಆಧುನಿಕ ಕರ್ನಾಟಕದ ಚರಿತ್ರೆಗೆ ಅನ್ವಯಿಸಿ ನೋಡಿದರೆ ನಮ್ಮ ಸೈದ್ಧಾಂತಿಕ, ವೈಚಾರಿಕ ಚೌಕಟ್ಟುಗಳೇ ಸಮಂಜಸವಾಗಿರಲಿಲ್ಲವೆಂದು ತೋರುತ್ತದೆ. ಮೊದಲನೆಯ ಕೊರತೆಯೆಂದರೆ ಅವುಗಳ ಅಚಾರಿತ್ರಿಕತೆ. ಕನ್ನಡ ಪರಂಪರೆ, ಕನ್ನಡದ ಸತ್ವ, ಕರ್ನಾಟಕದ ಬಹುತ್ವ ಉದಾರ ಮಾನವತಾವಾದಿ ಪರಂಪರೆ ಇವೇ ಮುಂತಾದ ಪರಿಕಲ್ಪನೆಗಳು ಅಚಾರಿತ್ರಿಕವಾದವುಗಳು. ಅಲ್ಲದೆ ತಾತ್ವಿಕ ಪರಿಭಾಷೆಯಲ್ಲಿ essentialist ಮಾದರಿಯವು. ಈ ಪರಿಕಲ್ಪನೆಗಳಿಂದಾಗಿ ನಾವು ಕರ್ನಾಟಕ ಸಮಾಜವು ಈ ಸಾತತ್ಯತೆಗಳ ಆಧಾರದ ಮೇಲೆ ವಿವೇಕಪೂರ್ಣವಾಗಿ rational ಆಗಿಯೇ ಇರುತ್ತದೆ ಎಂದು ನಂಬಿದೆವು. ಇಲ್ಲಿಯ ಸಾಮಾಜಿಕ ವಾಸ್ತವಗಳು ಮತ್ತು ಚರಿತ್ರೆಯ ದೊಡ್ಡ ಕಂದರಗಳು ಮತ್ತು ಕೊರಕಲುಗಳು ನಮಗೆ ಕಾಣಲಿಲ್ಲ. ಏಕೀಕರಣ ಚಳುವಳಿಯ ಕಾಲದಲ್ಲಿ ಕನ್ನಡ ರಾಷ್ಟ್ರೀಯತೆಯ ವೈರುಧ್ಯಗಳ ಬಗ್ಗೆ ಎಚ್ಚರವಾಗಿರಲಿಲ್ಲ. ಡಿ.ಆರ್. ನಾಗರಾಜ್ ವಿಶ್ಲೇಷಿಸಿದಂತೆ 'ಆತಂಕಿತ ರಾಷ್ಟ್ರವಾದ' ಮತ್ತು ಆತ್ಮವಿಶ್ವಾಸದ ರಾಷ್ಟ್ರವಾದ ಇವೆರಡೂ ಏಕೀಕರಣದ ಹಿಂದೆ ಇದ್ದವು. ಅಲ್ಲದೆ ಏಕೀಕರಣದ ಮೂಲಕ ಅನುಷ್ಠಾನವಾಗುವ ಕರ್ನಾಟಕವು ರಾಜಕೀಯ ಹಾಗೂ ಆರ್ಥಿಕ ಸಮಾನತೆಯನ್ನು ತರುವುದಕ್ಕೆ ಇರುವ ಸಮಸ್ಯೆಗಳ ಬಗ್ಗೆ ಚಿಂತಿಸಲಿಲ್ಲ. ಇಂಡಿಯಾ ಎನ್ನುವ ರಾಜಕೀಯ ಒಕ್ಕೂಟದಲ್ಲಿ ರಾಜ್ಯ ಮತ್ತು ಕೇಂದ್ರಗಳ ಸಂಬಂಧಗಳಲ್ಲಿ ಬರಬಹುದಾದ ಅಸಮಾನತೆ, ಅಧಿಕಾರದ ಕೇಂದ್ರೀಕರಣದ ಬಗ್ಗೆ ಗಮನಕೊಡಲಿಲ್ಲ. ಹೀಗಾಗಿ ಚಹರೆ ಇಲ್ಲದ, ವ್ಯಕ್ತಿತ್ವ ಇಲ್ಲದ ಕರ್ನಾಟಕ ರಾಜಕೀಯವು ಕೇವಲ ಜಾತಿ ಹಾಗೂ ಕೇಂದ್ರದ ಅಧಿಕಾರವನ್ನು ಅವಲಂಬಿಸುವಂತಾಯಿತು. ಇಂದಿನ ಎಲ್ಲಾ ಸಮೀಕ್ಷೆಗಳ ಪ್ರಕಾರ ಕರ್ನಾಟಕವು ಭಾರತದ ಅತ್ಯಂತ ಭ್ರಷ್ಟ ರಾಜ್ಯವಾಗಿ ಬೆಳೆಯಿತು. ಈ ವಿದ್ಯಮಾನಗಳಿಗೂ ನಮ್ಮ ವೈಚಾರಿಕ ಸಂಪ್ರದಾಯಗಳಿಗೂ ಏನು ಸಂಬಂಧಗಳಿವೆ? ಕೊನೆಯದಾಗಿ ಒಂದು ಮಾತು. ನಮ್ಮ ವೈಚಾರಿಕ ಪರಂಪರೆಗಳು ಆಯಾ ಕಾಲದ ರಾಜಕೀಯ, ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಸಮಗ್ರವಾಗಿ, ಸಮಂಜಸವಾಗಿ ಎದುರಿಸಲಿಲ್ಲವೆಂದು ನನ್ನ ಭಾವನೆ. ಆದರೂ ಸೃಜನಶೀಲ ಸಾಹಿತ್ಯದಲ್ಲಿ ಚಳುವಳಿಗಳಲ್ಲಿ ಅನೇಕ ಪ್ರಮುಖವಾದ ಪ್ರಸ್ಥಾನಗಳು ಚರ್ಚೆಗೆ ಬಂದವು. ಪ್ರಜಾಪ್ರಭುತ್ವವೊಂದರ ನಾಗರೀಕ ಸಮಾಜದಲ್ಲಿ ವಹಿಸಬಹುದಾದ ಪಾತ್ರಕ್ಕೆ ತಕ್ಕುದಾದ ಸ್ವರೂಪವನ್ನು ಅವು ಪಡೆಯಲಿಲ್ಲ. ಸದ್ಯದ ಸ್ಥಿತಿಯಲ್ಲಿ ವೈಚಾರಿಕ ಪರಂಪರೆ ಬಗ್ಗೆ ಮಾತನಾಡುವುದೇ ಒಂದು ಆಭಾಸ. ಗಾಂಧಿವಾದ, ಲೋಹಿಯಾವಾದ, ಮಾರ್ಕ್ಸ್‌ವಾದ ಇವೆಲ್ಲವೂ ವಿಚಿತ್ರವಾದ ವಿಘಟಿತವಾದ ಸ್ಥಿತಿಯಲ್ಲಿವೆ. ವಾಸ್ತವ ರಾಜಕೀಯವು ಸರ್ವಾಧಿಕಾರ ಹಾಗೂ ಫ್ಯಾಸಿಸಂನ ಹಿಡಿತದಲ್ಲಿದ್ದು ಹಿಂಸಾಪರವಾಗಿದೆ. ಪ್ರತಿಭಟನೆ, ಸ್ವತಂತ್ರ ಚಿಂತನೆಗಳು ಅಪಾಯಕಾರಿ ದೇಶದ್ರೋಹದ ಹಾಗೆ ಪ್ರಭುತ್ವಕ್ಕೆ ಕಾಣುತ್ತಿವೆ. ಈ ನಿರಾಶೆಯ ಕಾಲದಲ್ಲಿಯೇ ವೈಚಾರಿಕ ಚಿಂತನೆಯ ಅವಶ್ಯಕತೆ ಇದೆ.

ಬಹು ಕರಾಳವಾದ ಕಾಲವೊಂದರಲ್ಲಿ ನಾವು ಬದುಕುತ್ತಿದ್ದೇವೆ. ಈ ಕಾಲದ ಎರಡು ಮುಖ್ಯ ಲಕ್ಷಣಗಳೆಂದರೆ ಪ್ರಜಾಪ್ರಭುತ್ವದ ಸಂಸ್ಥೆಗಳ ವಿನಾಶ ಮತ್ತು ನಾಗರೀಕ ಸಮಾಜದ ಸಾಮುದಾಯಿಕ ಚಿಂತನೆಯಲ್ಲಿ ಕಾಣುತ್ತಿರುವ ನಾಚಿಕೆ ಹುಟ್ಟಿಸುವ ಕಳಪೆತನ. ವೈಚಾರಿಕ ಕಳಪೆತನವು ದುಷ್ಟ ಹಾಗೂ ಅವಿವೇಕಿಯಾದ ಪ್ರಭುತ್ವದ ಕಾಲದಲ್ಲಿ ಅಪಾಯಕಾರಿಯಾಗಬಲ್ಲದು. ಆಧುನಿಕ ಕಾಲದಲ್ಲಿ ಸರ್ವಾಧಿಕಾರವು

ದೀರ್ಘಾಯುಷಿಯಾಗಿರುತ್ತದೆ ಮತ್ತು ಪ್ರಜಾಪ್ರಭುತ್ವ ಹಾಗೂ ಸಮಾನತೆಗಳು ದುರ್ಬಲವಾಗಿರುತ್ತವೆ ಎನ್ನುವುದು ಇಪ್ಪತ್ತನೆಯ ಶತಮಾನದ ಪಾಠವಾಗಿದೆ. ೨೦ನೇ ಶತಮಾನವನ್ನು ಮೀರಿದ ಹಿಂಸೆ ಹಾಗೂ ಅಸ್ವಾತಂತ್ರ್ಯದ ಕಾಲವನ್ನು ನಾವು ಪ್ರವೇಶಿಸಿದ್ದೇವೆ. ಈ ಪರಿಸ್ಥಿತಿಯಲ್ಲಿ ತಾಳಿಕೆಯುಳ್ಳ ಪ್ರತಿರೋಧವು ಆತ್ಮವಿಮರ್ಶೆಯಿಂದ ಕೂಡಿದ ಮತ್ತು ದಿನನಿತ್ಯದ ಜೀವನಕ್ರಮದಲ್ಲಿ ಬದಲಾವಣೆ ಬಯಸುವ ಸಾಮುದಾಯಿಕವಾದ ಚಿಂತನೆಯಿಂದ ಮಾತ್ರ ಸಾಧ್ಯ. ಈ ಚಿಂತನೆಯನ್ನು ನಿರ್ಮಿಸಬೇಕಾದ ಸಮಾಜವಿಜ್ಞಾನಗಳು ನಮ್ಮಲ್ಲಿ ಬೆಳೆಯಲೇ ಇಲ್ಲ. ಅವುಗಳ ಪಶ್ಚಿಮದ ವಿದ್ವತ್ತಿಗೆ ಹೋಲಿಸಿದರೆ mediocre ಆಗಿವೆ ಮತ್ತು ಇನ್ನೊಂದು ಕಡೆಗೆ ನಿರ್ವಸಾಹತೀಕರಣಗೊಳ್ಳದೆ ಅಸಂಗತವಾದ ಪಶ್ಚಿಮದ ನಕಲುಗಳಾಗಿವೆ. ಆರೋಗ್ಯಕರವಾಗಿ ಬೆಳೆಯುತ್ತಿದ್ದ ವಸಾಹತೋತ್ತರ ಚಿಂತನೆಯು elite ಹಾಗೂ ಮಹಾನಗರ ಕೇಂದ್ರಿತ ವಿಶ್ವವಿದ್ಯಾಲಯಗಳಲ್ಲಿ ಅತಿ ಬೌದ್ಧಿಕತೆಯ ಕ್ಲಿಷ್ಟ ಭಾಷೆಯ ಪ್ರದರ್ಶನವಾಗಿ ಬಿಟ್ಟಿತು. ಇಂದು ಭಾರತೀಯ ವಲಸಿಗ ವಿದ್ವಾಂಸರು ಅಮೇರಿಕಾ ಹಾಗೂ ಕೆಲವು ಯೂರೋಪಿನ ದೇಶಗಳಲ್ಲಿ ಈ ಮಾದರಿಯ ಸಂಶೋಧನೆಯನ್ನು ಭಾರತಕ್ಕೆ ಅನ್ವಯಿಸುತ್ತಾ ವಿಶ್ವಮಟ್ಟದ ಪ್ರಸಿದ್ಧಿಯನ್ನು ಪಡೆದು ಭಾರತದ ಬಗೆಗಿನ ಅಧಿಕೃತ ವಕ್ತಾರರಾಗಿದ್ದಾರೆ. ಈ ದೌರ್ಬಲ್ಯವನ್ನು ಬಳಸಿಕೊಂಡು ಹಿಂದುತ್ವವಾದಕ್ಕೆ ವೈಚಾರಿಕ ಸಮರ್ಥನೆ ನೀಡುವ ವಿದ್ವತ್ತಿನ ಸೃಷ್ಟಿಯಾಗುತ್ತಿದ್ದು ಅದರ ವಿಸ್ತಾರ ಹಾಗೂ ಚಲಾವಣೆಯು ಗಾಬರಿ ಹುಟ್ಟಿಸುವಂತಿದೆ. ಬಾಲಗಂಗಾಧರರಿಂದ ಆರಂಭವಾದ ವೈಚಾರಿಕ ಪರಂಪರೆಯೊಂದು ಓರಿಯಂಟಲಿಸಂ ಮತ್ತು ವಸಾಹತುಶಾಹಿಗಳ ವಿರುದ್ಧ ವಾದಗಳನ್ನು ಮಂಡಿಸುವ ನೆಪದಲ್ಲಿ ಭಾರತೀಯ ನಾಗರೀಕತೆಯ ಅಸಹ್ಯವಾದ ಅಂಶಗಳಾದ ಜಾತಿವ್ಯವಸ್ಥೆ ಹಾಗೂ ಅಸಮಾನತೆಗಳನ್ನು ಸಮರ್ಥಿಸುವ ವಿದ್ವತ್ತನ್ನು ಸೃಷ್ಟಿಸುತ್ತದೆ. ಇದರ ತೆಳುವಾದ ಹಾಗೂ ಜನಪ್ರಿಯವಾದ ಆವೃತ್ತಿಗಳನ್ನು 'ಸಂವಾದ'ದಂಥ ವಾಹಿನಿಗಳು ಹಾಗೂ web ತಾಣಗಳು ಪರಿಚಿತ ಬುದ್ಧಿಜೀವಿಗಳ ಮೂಲಕ ಮಾಡುತ್ತಿರುವ ಬಗೆಯನ್ನೂ ನಾವು ಗಮನಿಸಿಲ್ಲ. ಇವುಗಳನ್ನು ನಿಂದಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಗಟ್ಟಿಯಾದ ವಿದ್ವತ್ತು ಹಾಗೂ ವೈಚಾರಿಕ ಪರಂಪರೆಗಳ ಮೂಲಕ ಮಾತ್ರ ಪ್ರತಿರೋಧವು ಸಾಧ್ಯವಿದೆ. ಈ ಪ್ರತಿರೋಧವು ಪತ್ರಿಕೋದ್ಯಮದ ಮಟ್ಟವನ್ನು ಮೀರಬೇಕೆಂದರೆ ಗಾಢವಾದ ಆತ್ಮವಿಮರ್ಶೆ ಹಾಗೂ ಆಳವಾದ ನೈತಿಕ ಕಾಳಜಿಗಳ ಅವಶ್ಯಕತೆ ಇದೆ. ವಸಾಹತುಶಾಹಿ ವಿರೋಧಿ ರಾಜಕೀಯಕ್ಕೆ ಭದ್ರವಾದ ಬುನಾದಿಯನ್ನು ಒದಗಿಸಿದ್ದು ಗಾಂಧಿಯವರ 'ಹಿಂದ್‌ಸ್ವರಾಜ್' ಕೃತಿ. ಭಾರತೀಯ ಸಮಾಜದ ಪರಿವರ್ತನೆಗೆ ಆಚಾರ್ಯ ಕೃತಿಯಾಗಿದ್ದು ಅಂಬೇಡ್ಕರ್ ಅವರ 'ಜಾತಿವಿನಾಶ' ಕೃತಿ. ಈ ಕೃತಿಗಳ ವೈಚಾರಿಕ ಬುನಾದಿಯ ಮೇಲೆ ಇವರಿಬ್ಬರೂ ಒಂದು ಗಹನವಾದ ವಿಮರ್ಶೆ(critique)ಯನ್ನು ಕಟ್ಟಿದರು ಮತ್ತು elite ಅಲ್ಲದ ಜನರ ಭಾಗವಹಿಸುವಿಕೆಯ ರಾಜಕೀಯ ಕ್ರಿಯೆಯನ್ನು ರೂಪಿಸಿದರು. ಗಾಂಧಿಯವರ ಕೃತಿಯು ಪಶ್ಚಿಮ ನಾಗರೀಕತೆಗೆ ಪರ್ಯಾಯವನ್ನು ಹುಡುಕಿದರೆ ಅಂಬೇಡ್ಕರ್ ಕೃತಿ ಹಿಂದುತ್ವ ಸಮಾಜಕ್ಕೆ ಪರ್ಯಾಯವನ್ನು ಹುಡುಕಿತು. ಈಗ ಪ್ರಜಾಪ್ರಭುತ್ವ ಹಾಗೂ ಸಮಾನತೆಗಳೆರಡೂ ಏಕಕಾಲಕ್ಕೆ ಅವಸಾನ ಹೊಂದಬಹುದಾದ ಕಾಲವು ನಮ್ಮೆದುರಿಗಿದೆ. ಈ ಸಂದರ್ಭಕ್ಕೆ ಅವಶ್ಯಕವಾದ ಚಿಂತನೆಯ ಎಳೆಗಳು ಚದುರಿದಂತೆ ಕನ್ನಡದಲ್ಲಿ, ಕರ್ನಾಟಕದಲ್ಲಿ ಪ್ರಕಟಗೊಳ್ಳುತ್ತಾ ಬಂದಿವೆ. ಇವು ಸ್ವವಿಮರ್ಶೆಯ ಮಾದರಿಯಲ್ಲಿವೆ. ನಾನು ಸರಕು ಮಾರುಕಟ್ಟೆಯ ಗ್ರಾಹಕನಾಗಿ ಜಾಗತೀಕರಣದ ವಿಮರ್ಶೆಯಲ್ಲಿ ತೊಡಗುವುದೆಂದರೇನು? ಮಿತಿಯಿಲ್ಲದ ಆಸೆ, ಭೋಗ ಇವುಗಳನ್ನು ಬಯಸುತ್ತಲೆ ಅವುಗಳಿಗೆ ಆರ್ಥಿಕ ಹಾಗೂ ರಾಜಕೀಯ ಸಾಂಸ್ಥಿಕ ಸ್ವರೂಪವನ್ನು ಕೊಡುತ್ತಿರುವ ಶಕ್ತಿಗಳನ್ನು ವಿರೋಧಿಸುವುದು ಅಸಂಗತವಲ್ಲವೆ? ಮನಸ್ಸಿನಿಂದ ಜಾತಿ, ಅಸ್ಪೃಶ್ಯತೆ ಇವುಗಳನ್ನು ತೊಡೆದು ಹಾಕಲಾಗದ ಸಮುದಾಯವು ಹಿಂದುತ್ವದ ವಿರೋಧಿಗಳೆಂದು "ಇತರ"ರನ್ನು ಕಲ್ಪಿಸಿ ಅವರ ಮೇಲೆ ದಾಳಿ ಮಾಡುವಾಗ ಯಾವ ನೈತಿಕ ಪ್ರತಿರೋಧವನ್ನು ತೋರಬಲ್ಲದು? ಬಂಡವಾಳಶಾಹಿಯು ತನ್ನ ಯಾವ ಸ್ವರೂಪದಲ್ಲಿಯೂ ಸಮಾನತೆಯನ್ನು ಬೆಂಬಲಿಸಲಾಗದು ಎಂದು ಗೊತ್ತಿರುವಾಗ ಅದರಿಂದ ಪ್ರೇರಿತವಾದ ಪ್ರಗತಿ, ಅಭಿವೃದ್ಧಿಗಳು ನಮಗೆ ಅಪ್ಯಾಯಮಾನವಾಗಿ ಕಂಡರೆ ಪರಿಹಾರವು ಎಲ್ಲಿಂದ ಬರಬೇಕು? ಜಾತೀಯತೆ ಮತ್ತು ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ನಮ್ಮ ಜನಸಾಮಾನ್ಯ ಮತದಾರರು ಚುನಾವಣಾ ರಾಜಕೀಯದ ಮೂಲಕ ಕೋಮುವಾದಿ ಸರ್ವಾಧಿಕಾರಿ ರಾಜಕೀಯಕ್ಕೆ ಪರ್ಯಾಯವನ್ನು ದೊರಕಿಸಿಕೊಡುತ್ತಾರೆ ಎನ್ನುವ ಭ್ರಮೆ ನಮಗೆ ಅನೈತಿಕವಾಗಿ ಯಾಕೆ ಕಾಣುವುದಿಲ್ಲ? ಈ ಥರದ ಆತ್ಮವಿಮರ್ಶೆಯುಳ್ಳ ಚಿಂತನೆಯ ಎಳೆಗಳನ್ನು ಹುಡುಕಿಕೊಂಡು ಮುಂದುವರೆಯಬೇಕಾಗಿದೆ.



(ಮೂಲತಃ ಧಾರವಾಡದವರಾದ ಲೇಖಕರು ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ನಮ್ಮ ಮುಖ್ಯ ಸಾಹಿತ್ಯ ಹಾಗೂ ರಾಜಕೀಯ ಚಿಂತಕರಲ್ಲೊಬ್ಬರು)

ನಾನು ಓದಿದ, ನನಗೆ ಬಹುಮುಖ್ಯವಾಗಿ ಕಂಡ ಪುಸ್ತಕ

ಇಂದಿನ ಸಮೂಹ ಮತ್ತು ಡಿಜಿಟಲ್ ಮಾಧ್ಯಮಗಳ ಆಕ್ರಮಣಕಾರಿ ಕಾಲಘಟ್ಟದಲ್ಲಿ ಮುದ್ರಿತ ಪುಸ್ತಕಗಳ ಓದಿನ ಹುಚ್ಚನ್ನು ಹತ್ತಿಸಿಕೊಂಡಿದ್ದ ಹಿಂದಿನ ಹಲವು ತಲೆಮಾರುಗಳನ್ನು ನೆನೆಯುವುದೇ ಒಂದು ಪವಿತ್ರ ಸಂದರ್ಭ ಎನಿಸಿಕೊಂಡುಬಿಟ್ಟಿದೆ. ಇವರೆಲ್ಲ ಆ ಹುಚ್ಚಿನಲ್ಲಿ ಓದಿದ ಪುಸ್ತಕಗಳ ಗುಣಮಟ್ಟ ತುಲನಾತ್ಮಕವಾಗಿ ಏನೇ ಇರಲಿ ಅದು ಹುಚ್ಚಿನ ಭಾಗವಾಗಿತ್ತು ಎಂಬುದೇ ಅವುಗಳ ಮೌಲಿಕತೆಯನ್ನು ನಿರ್ಧರಿಸಿರುವಂತಿದೆ. ಹಲವರು ಹಲವಾರು ಕಾರಣಗಳಿಗೆ ಓದುತ್ತಿದ್ದರು: ಜ್ಞಾನಾರ್ಜನೆಗಾಗಿ, ಮನರಂಜನೆಗಾಗಿ, ಮಾಹಿತಿಗಾಗಿ, ಕಾಲ ಕಳೆಯಲಿಕ್ಕಾಗಿ ಹೀಗೇ, ಅದೇನೇ ಇರಲಿ ಈ ಹವ್ಯಾಸದಿಂದ ಅವರೆಲ್ಲ ತಮ್ಮ ಬದುಕಿನಲ್ಲಿ ಏನೋ ಒಂದನ್ನು ಪಡೆಯುತ್ತಿದ್ದರು. ಹಾಗಾಗಿಯೇ ಪುಸ್ತಕಗಳು ಅವರ ನೆನಪಿನಲ್ಲಿ ಜೀವನಪರ್ಯಂತ ಅಚ್ಚೊತ್ತಿದಂತೆ ಉಳಿಯುತ್ತಿದ್ದವು. ಕೆಲವಂತೂ ಕೆಲವರ ಬದುಕಿನ ನಂಬಿಕೆಗಳ ಬುಡವನ್ನೇ ಅಲ್ಲಾಡಿಸಿ ಬದಲಾಯಿಸಿದ್ದೂ ಉಂಟು. ಇದು ಪುಸ್ತಕಗಳ ಶಕ್ತಿ.

ಇದಕ್ಕೆ ಹಲವು ರೀತಿಯ ಉದಾಹರಣೆಗಳಾಗಿ ನಮ್ಮ ಆಯ್ದ ಓದುಗರು ಇಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಹಿರಿಯ ಲೇಖಕಿ ವೈದೇಹಿಯವರ ಇಲ್ಲಿನ ಆಯ್ಕೆ ಕುತೂಹಲಕಾರಿಯಾಗಿದೆ,-ಸಂ

ಮರೆಯಲಾಗದ ಕೃತಿ:

ಪಡುಕೋಣೆ ರಮಾನಂದರಾಯರ


ಹುಚ್ಚು ಬೆಳದಿಂಗಳಿನ ಹೂ ಬಾಣಗಳು



ಪಡುಕೋಣೆ ರಮಾನಂದ ರಾಯರ 'ಹುಚ್ಚು ಬೆಳದಿಂಗಳಿನ ಹೂ ಬಾಣಗಳು' ನಾನು ಸಣ್ಣಂದಿನಲ್ಲಿ ಓದಿದ ಇನ್ನೂ ಮನದಲ್ಲಿ ಉಳಿದೇ ಇರುವ ಕೃತಿ. ಇವತ್ತಿಗೂ ಇದರಲ್ಲಿನ ಹಾಸ್ಯ ಬರಹಗಳನ್ನೂ ಚಿತ್ರಗಳನ್ನೂ ನೆನೆದೆನೆಂದರೆ ಒಳಗೊಳಗೇ ತಂಪು ನಗೆಸುರುಳಿ ಸುಳಿಯುತ್ತದೆ. ಒಟ್ಟು ಹದಿನೈದು ನಗೆ ಬರಹಗಳಿರುವ ಈ ಕೃತಿಯ ಮೂಲದಲ್ಲಿರುವುದು ಇಂಗ್ಲಿಷ್ ಬರಹಗಾರರಿಂದ ಪಡೆದ ಪ್ರೇರಣೆ ಎಂದು ಸ್ವತಃ ಲೇಖಕರೇ ಹೇಳಿದ್ದರೂ ಇವು ಕನ್ನಡದಲ್ಲೇ ಹುಟ್ಟುವ ನಗೆಗಳಾಗಿ ಮೆಚ್ಚುಗೆಯನ್ನು ಸೂರೆಗೊಂಡಿದ್ದವು. ಈ ಬರಹಗಳಲ್ಲಿ ಸೃಷ್ಟಿಯಾಗಿರುವ ಹರಿಕಮತನೆಂಬ ವ್ಯಕ್ತಿ ಅವತ್ತಿನ ಓದುಗರಲ್ಲಿ ಇಂದಿಗೂ ಚಿರಂಜೀವಿ. ಅವನ ನಾನಾ ಬಗೆಯ ಪೇಚುಗಳು, ಅವಾಂತರಗಳು, ದುಗುಡ ಸಂಶಯಗಳು, ಅವನ್ನು ರಮಾನಂದ ರಾಯರು ಹೇಳುವ ಶೈಲಿ ಅದರಲ್ಲಿ ನೆಲೆಸಿಕೊಂಡೇ ಇರುವ ಒಂದು ಆವಾಹಿತ ಮುಗ್ಧತೆ ಎಲ್ಲವೂ ರಾಯರದೇ ಎಂದರೆ ರಾಯರದೇ.

ರಮಾನಂದರ 'ತಪ್ಪು ಒಪ್ಪು' ಎಂಬ ಅಪೂರ್ವ ಮುಮ್ಮಾತುಗಳಿರುವ ಈ ಕೃತಿಯ ಕುರಿತು ನಮ್ಮ ಮನೆಯಲ್ಲಿ ಹೆಚ್ಚು ಮಾತಾಡುತಿದ್ದವ, ನಮಗೂ ಓದುವ ಉತ್ಸಾಹ ಹುಟ್ಟಿಸಿದವ ನನ್ನ ದೊಡ್ಡಣ್ಣ. ಅದರಲ್ಲಿನ 'ನನ್ನ ಭಾವ' ಎಂಬ ಬರಹದ ಕುರಿತಂತೂ ಆತನೇ ಹೇಳಬೇಕು, ನಾವು ಕೇಳಬೇಕು. ಅವನ ಉಕ್ಕುನಗೆಯಲ್ಲಿ ಮಿಂದೆದ್ದ ಆ 'ಭಾವ' ಒಂದಿಷ್ಟೂ ಮಸುಕಾಗದೆ ಇವತ್ತಿಗೂ ನಮ್ಮ ನಡುವೆ ಸಾಂದರ್ಭಿಕವಾಗಿ ಇಣುಕುವ; ನಗೆ ನಗೆ ನಗೆ ಚಿಮ್ಮಿಸುವ. ಏನೇ ಕೆಲಸ ಮಾಡುತಿದ್ದರೂ ಬಂದು ಅದನ್ನೇ ಕೇಳುವ ಮೇಲಿಂದ ಮೇಲೆ ಪ್ರಶ್ನೆಗಳ ಸುರುಸುರು ಬತ್ತಿ ನಿಲ್ಲುವ ನಿರೂಪಕನ ಪುಟ್ಟ ಭಾವನೆಂಟನವ. ಆತನ ಸರಮಾಲೆ ರಾಯರನ್ನು ಎಷ್ಟು ರೇಗಿಸುತಿತ್ತು ಎಂದರೆ ಕೊನೆಗೊಮ್ಮೆ ಆತ 'ಊಟ ಆಯಿತೇ?' ಎಂದು ಕೇಳಿದ ಪ್ರಶ್ನೆಗೆ ಕೆರಳಿ ರಾಯರು 'ಮುಂಡಾಸು ಮೂವತ್ತು ಮೊಳ' ಎಂದು ಉತ್ತರಿಸುವರು. ಅವರ ಈ ತದೇಕ ಉತ್ತರ ಈಗಲೂ ನಮ್ಮ ಮಾತುಕತೆಯಲ್ಲಿ ಚಲಾವಣೆಯಲ್ಲಿದೆ! ಯಾರಾದರೂ ಊಟ ಆಯಿತೇ ಪ್ರಶ್ನೆ ಕೇಳಿ ಪೂರ್ತಿ ಆಗಲಿಕ್ಕಿಲ್ಲ 'ಮುಂಡಾಸು ಮೂವತ್ತು ಮೊಳ' ಎಂಬ ಉತ್ತರ ಪಿರಕ್ಕನೆ ಹಾರಿ ಬರುತ್ತದೆ. ಹಿನ್ನೆಲೆ ತಿಳಿದ ನಮ್ಮಲ್ಲಿ ನಗು ಹತ್ತಿ 'ಉರಿಯುತ್ತದೆ'. ಕೊನೆಯ ಭಾಗದಲ್ಲಿ ಆತ ಕೇಳಿದ 'ಭಾವಯ್ಯಾ, ನಿಮಗೆ ಸಿಟ್ಟು ಬಂದಿದೆಯೇ?' ಪ್ರಶ್ನೆಯಂತೂ ಬರಹದ ಶಿಖರವನ್ನೇರಿ ಕುಳಿತು ಕಣ್ಣು ಮಿಟುಕಿಸುತ್ತದೆ.

ಅಂದಿನ ಸಾಹಿತ್ಯ ಲೋಕದಲ್ಲಿ ತನ್ನದೇ ಅನನುಕರಣೀಯ ಶೈಲಿಯಲ್ಲಿ ಹಾಸ್ಯದ ವಿವಿಧ ಬಗೆಗಳಲ್ಲಿ ವಿಹರಿಸಿದ ರಮಾನಂದ ರಾಯರಿಗೆ ಆ ಗುಣ ಅವರ ಹಿರಿಯರಿಂದ ಬಂದ ಬಳುವಳಿಯಂತೆ. ಅವರ ತಂದೆ ಮಾತುಮಾತಿಗೆ ನಗೆಯುಕ್ಕಿಸುವ ಚತುರ ಮಾತುಗಾರರಾಗಿದ್ದರಂತೆ.




ಈ ಕೃತಿಗೆ ಮುನ್ನುಡಿ ಬರೆದಿರುವುದು ಬೇಂದ್ರೆಯವರು. 'ನಗೆಯು ಬೆಳದಿಂಗಳಿನಂತೆ ಸೌಮ್ಯವೂ ಆಹ್ಲಾದಕರವೂ ಇದ್ದರೂ ತಲೆಗೇರಿದರೆ ಹುಚ್ಚು ಹಿಡಿಸಿಬಿಡುವುದು. ಆ ನಗೆಯ ಹುಚ್ಚು ಬೆಳದಿಂಗಳನ್ನು ಶ್ರೀ ಪ. ರಮಾನಂದರಾಯರು ಚೆನ್ನಾಗಿ ಅನುಭವಿಸಿದ್ದಾರೆ. ಅಂಥ ಹುಚ್ಚಿನಲ್ಲಿ ಹೊಳೆಯುವ ಹಾಸ್ಯೋಕ್ತಿಗಳು ಬಾಣಗಳಂತೆ ಎದೆಯಲ್ಲಿ ನಾಟಿ ನಿಂತರೂ ಹೂವಿನಂತೆ ಮೃದುಸ್ಪರ್ಶದಿಂದ ಮರುಳುಗೊಳಿಸುವವು. ಅಂಥ ಹೂಬಾಣಗಳನ್ನು ಅವರು ಅನೇಕಾನೇಕವಾಗಿ ಎಸೆದಿದ್ದಾರೆ...ಒಂದೊಂದರಲ್ಲಿಯೂ ಒಂದೊಂದು ಬಗೆಯ ಮೋದಕ, ಮಾದಕ, ಆಹ್ಲಾದಕ, ಚೋದಕ ಶಕ್ತಿಯಿದೆ' ಎಂದು ಮುನ್ನುಡಿಯಲ್ಲಿ ಹೇಳಿರುವುದಷ್ಟೇ ಅಲ್ಲ, ಕೃತಿಗೆ ಹೆಸರನ್ನು ಇಟ್ಟವರೂ ಬೇಂದ್ರೆಯವರೇ. ರಮಾನಂದರಾಯರ ಆಪ್ತರಾದ ಪಂಜೆ ಮಂಗೇಶರಾಯರಿಗೆ ಅರ್ಪಿತವಾದ ಈ ಕೃತಿ ಜಿ. ಬಿ. ಜೋಶಿಯವರ ಒತ್ತಾಸೆಯಿಂದ ಮನೋಹರ ಗ್ರಂಥಮಾಲೆಯಲ್ಲಿ ೧೯೩೮ರಲ್ಲಿ ಪ್ರಕಟವಾಯ್ತು.



ಒಳಪುಟಗಳಲ್ಲಿ ರಮಾನಂದ ರಾಯರ ನಿಕಟ ಬಂಧು ತಿರುಕನ್ನಾಡು ಮುಕುಂದರಾಯರು ಬರೆದ ಚಿತ್ರಗಳೆಂದರೆ ನಗೆಚಿಮ್ಮು ಅನುಭವಿಸುತ್ತಲೇ ಜೀವ ತಳೆದ ಅಂಥಾ ಚಿತ್ರಗಳು!

ರಮಾನಂದರಾಯರ ಪುತ್ರ ಪಡುಕೋಣೆ ಪ್ರಭಾಶಂಕರ ಅವರ ಮುನ್ನುಡಿಯೊಂದಿಗೆ ಪಡಕೋಣೆ ರಮಾನಂದರಾವ್ ಸಂಸ್ಮರಣ ಸಮಿತಿಯಿಂದ ೧೯೬೬ರಲ್ಲಿ ಇದರ ಎರಡನೇ ಆವೃತ್ತಿ ಪ್ರಕಟವಾಗಿದೆ.

ಒಂದು ಪುಟ್ಟ ಅನುಬಂಧ



ಮಾಸ್ತಿ, ಕಾರಂತ, ಮುಗಳಿ, ಬೇಂದ್ರೆ, ರಾಜರತ್ನಂ, ವೀ. ಸೀ., ಇನಾಂದಾರ್, ಗೋಕಾಕ್ ಮುಂತಾದ ಸುಮಾರಾಗಿ ಎಲ್ಲ ನವೋದಯ ಸಾಹಿತಿಗಳ ಮೆಚ್ಚುಗೆಯ ಮತ್ತು ಆತ್ಮೀಯ ಲೇಖಕ, ಪಡುಕೋಣೆ ರಮಾನಂದರಾಯರು. ಕನ್ನಡವಷ್ಟೇ ಅಲ್ಲ ಕೊಂಕಣಿ ಮತ್ತು ಇಂಗ್ಲಿಷ್‌ನಲ್ಲಿ ಅನುವಾದ, ನಾಟಕ, ರೂಪಾಂತರ, ಹಾಸ್ಯಬರಹ ಇತ್ಯಾದಿಯಾಗಿ ಸುಮಾರು ಹತ್ತೊಂಬತ್ತು ಕೃತಿಗಳನ್ನು ರಚಿಸಿದವರು. ಅವರ ಕೃತಿಗಳಲ್ಲೆಲ್ಲ ಮೆಚ್ಚುಗೆಯಲ್ಲಿ ತೋಯ್ದು ಹೋಗಿದ್ದು 'ಹುಚ್ಚು ಬೆಳದಿಂಗಳಿನ ಹೂ ಬಾಣಗಳು' ಹಾಸ್ಯ ಸಂಕಲನ.

ಕುಂದಾಪುರ ತಾಲೂಕಿನ ಉತ್ತರದಿಕ್ಕಿನಲ್ಲಿರುವ ಪುಟ್ಟ ಗ್ರಾಮ ಪಡುಕೋಣೆ. ಅಲ್ಲಿಂದ ಹೊರಟ ಪ್ರತಿಭೆಗಳ ದೊಡ್ಡ ಸಾಲೇ ಇದೆ. ರಮಾನಂದ ರಾಯರ ಪ್ರೋತ್ಸಾಹದಿಂದ ಪತ್ನಿ ಸೀತಾದೇವಿ ಪಡುಕೋಣೆ ವಿವಾಹದ ನಂತರ ಹಿಂದಿ ಮತ್ತು ಇಂಗ್ಲಿಷ್ ಕಲಿತು ಅನುವಾದ, ನಾಟಕ ಇತ್ಯಾದಿ ರಚಿಸಿದರು. ಪತಿ ಪತ್ನಿ ಇಬ್ಬರೂ ನಾಟಕಗಳಲ್ಲಿ ನಟಿಸಿದರು. ಚೆಕಾಫ್ ನ 'ಅಂಕಲ್ ವ್ಯಾನ್ಯಾ' ದ ಅನುವಾದ 'ವೇಣುಮಾವ' ಸೀತಾದೇವಿ ಅನುವಾದಿಸಿದ ಮುಖ್ಯ ಕೃತಿ. ಮಗಳಂದಿರು ಪ್ರಸಿದ್ಧ ನೃತ್ಯಕಲಾವಿದೆ ಚಂದ್ರಭಾಗಾ ದೇವಿ, ಪ್ರಸಿದ್ಧ ಗಾಯಕಿ ಜಯವಂತಿದೇವಿ ಹಿರೇಬೆಟ್. ಲೇಖಕಿ ಯಶೋಧರೆ, ಶಾಂತಿ ಮತ್ತು ಏಕ ಮಾತ್ರ ಪುತ್ರ- ಪಡುಕೋಣೆ ಪ್ರಭಾಶಂಕರ.




ವಾಸಂತಿ ಪಡುಕೋಣೆ, ಹಿಂದಿ ಚಲನಚಿತ್ರ ರಂಗದ ಸುಪ್ರಸಿದ್ಧ ನಟ-ನಿರ್ದೇಶಕ ಗುರುದತ್ತರ ತಾಯಿ ರಮಾನಂದರಾಯರ ಚಿಕ್ಕಪ್ಪನ ಹೆಂಡತಿ. ಇವರ ಕನ್ನಡ ಪುಸ್ತಕ 'ನನ್ನ ಮಗ ಗುರುದತ್ತ' ಬಹುಹಿಂದೆಯೇ ಧಾರವಾಡದ ಮನೋಹರ ಗ್ರಂಥಮಾಲಾದಿಂದ ಪ್ರಕಟವಾಗಿದೆ. ನಿರ್ದೇಶಕಿ ಕಲ್ಪನಾ ಲಾಜ್ಮಿ ವಾಸಂತಿಯವರ ಮೊಮ್ಮಗಳು, ಹೀಗೆ ಸಾಲು ಸಾಲು ಪ್ರತಿಭೆಗಳು ರಮಾನಂದರಾಯರ ಕುಟುಂಬದ ವರ್ತುಲದಲ್ಲಿವೆ.

–ವೈದೇಹಿ. ಹಿರಿಯ ಲೇಖಕಿ, ಮಣಿಪಾಲ

ಲೋಹಿಯಾ ಅವರ 'ರಾಜಕೀಯದ ಮಧ್ಯೆ ಬಿಡುವು'

ಜಗತ್ತನ್ನು ನೋಡುವ ಹೊಸ ಕಣ್ಣುಗಳು




'ರಾಜಕೀಯದ ಮಧ್ಯೆ ಬಿಡುವು' – ಕೆ ವಿ ಸುಬ್ಬಣ್ಣ ಅವರು ತಾವು ಅನುವಾದ ಮಾಡಿದ ರಾಮಮನೋಹರ ಲೋಹಿಯಾ ಅವರ ಬರಹಗಳ ಸಂಕಲನದ ಈ ಪುಸ್ತಕವನ್ನು ತಮ್ಮ ಹಸ್ತಾಕ್ಷರದಲ್ಲಿ ನನ್ನ ಹೆಸರನ್ನು ಬರೆದು ನನಗೆ ಕೊಟ್ಟದ್ದು ೧೯೮೬ರಲ್ಲಿ. ಲೋಹಿಯಾ ಸಾಹಿತ್ಯವನ್ನು ನಾನು ಮೊದಲು ಓದಿದ ಪುಸ್ತಕ ಇದು. ಲೋಹಿಯಾ ಬಗ್ಗೆ ಕೇಳಿದ್ದ ಮತ್ತು ಸ್ವಲ್ಪ ಓದಿದ್ದ ನನಗೆ ಈ ಪುಸ್ತಕ ಹೊಸ ದಿಕ್ಕನ್ನು ತೋರಿಸಿತು. ಅನುಭವ ಮತ್ತು ಪುಸ್ತಕಗಳ ಓದಿನ ಮೂಲಕವೇ ಯಾವುದೇ ಸಿದ್ಧಾಂತ ಅಥವಾ ಚಿಂತನಾಕ್ರಮವನ್ನು ಅರ್ಥೈಸಲು ತೊಡಗಬೇಕು ಎನ್ನುವ ಪಾಠವನ್ನು ಕಲಿಸಿದ ಪುಸ್ತಕ ಕೂಡಾ ಇದು. ಜೊತೆಗೆಯೇ ಅನುಭವ ಮತ್ತು ಓದು ಯಾವೆಲ್ಲ ಬಹುರೂಪಿ ಕ್ಷೇತ್ರಗಳನ್ನು ಒಳಹೊಕ್ಕು ಅರಿವಿನ ದಿಗಂತವನ್ನು ವಿಸ್ತರಿಸಬಹುದು ಎನ್ನುವ ಒಳನೋಟವನ್ನು ಪಡೆದದ್ದು ನಾನು ಈ ಪುಸ್ತಕದ ಓದಿನಿಂದ. 'ಪ್ರಪಂಚದ ಸುತ್ತು' ಎನ್ನುವ ಮೊದಲನೆಯ ಲೇಖನವೇ ಒಂದು ಅರ್ಥದಲ್ಲಿ ಈ ಪುಸ್ತಕದ ಪ್ರವೇಶಿಕೆಯೂ ಹೌದು, ತಾತ್ವಿಕ ನೆಲೆಯೂ ಹೌದು. ಅಲ್ಲಿನ ಆರಂಭದ ಒಂದು ಮಾತು ನನಗೆ ಬಹಳ ಇಷ್ಟ: "ಹುಡುಗಾಟಿಕೆ ಮತ್ತು ಗಾಂಭೀರ್ಯಗಳ ನಡುವಣ ಗೆರೆ ಗುರುತಿಸುವುದೇ ತೀರ ಕಷ್ಟವೆನ್ನಿಸಿಬಿಟ್ಟಿದೆ. ಜೀವನದಲ್ಲಿ ಯಾವುದನ್ನು ನಾವು ಗಂಭೀರ ಸಂಗತಿಗಳೆನ್ನುತ್ತೇವೋ ಅಂಥವು ಪ್ರಾಯಃ ಹುಡುಗಾಟಿಕೆಯಾಗಿಯೇ ಹುಟ್ಟಿಕೊಂಡಿರುತ್ತವೆ." ಜಗತ್ತಿನ ಒಂದು ಸುತ್ತಿನ ಪ್ರವಾಸದಲ್ಲಿ ಲೋಹಿಯಾ ತಾವು ಕಂಡ ದೇಶಗಳನ್ನು ಅಲ್ಲಿನ ಜನರನ್ನು ಅಲ್ಲಿನ ರಾಜಕೀಯವನ್ನು ಕಾಣುವ ಮತ್ತು ಭಾಷೆಯಲ್ಲಿ ಕಟ್ಟಿಕೊಡುವ ಕಿರುಕಥನಗಳು ನನ್ನ ಓದಿನ ಆಳಕ್ಕೆ ಇಳಿದಂತೆಲ್ಲಾ ಜಗತ್ತನ್ನು ನೋಡುವ ಹೊಸ ಕಣ್ಣುಗಳನ್ನು ನಾನು ಪಡೆದೆ.

೧೯೭೩-೭೪ರಲ್ಲಿ ಸಾಂಸ್ಕೃತಿಕ ಮಾನವವಿಜ್ಞಾನದ ಓದಿನಿಂದ ಸಾಂಸ್ಥಿಕ ಧರ್ಮದ ನಿರಾಕರಣೆಯನ್ನು ಸರಳವಾಗಿ ಒಪ್ಪಿಕೊಂಡಿದ್ದ ನನಗೆ ಭಾರತೀಯ ಪುರಾಣಗಳ ಮರುಓದಿಗೆ ಪ್ರೇರಣೆ ಕೊಟ್ಟ ಬರಹ 'ರಾಮ ಕೃಷ್ಣ ಶಿವ'. ಸಾಹಿತ್ಯ ವಿಮರ್ಶೆಯಲ್ಲಿ ಮಿಥಿಕಲ್ ಕ್ರಿಟಿಸಿಸಂನ್ನು ನಾನು ಓದುವ ಬಹಳ ಮೊದಲೇ ಲೋಹಿಯಾ ಅವರ ಈ ಲೇಖನ ನನಗೆ ಪುರಾಣ ಮತ್ತು ಸಾಂಸ್ಕೃತಿಕ ಭೂಗೋಳಶಾಸ್ತ್ರವನ್ನು ಒಟ್ಟಿಗೆ ನೋಡುವ ದಾರಿಯನ್ನು ತೋರಿಸಿತು. 'ಸೌಂದರ್ಯ ಮತ್ತು ಮೈಬಣ್ಣ' ಬರಹವು ಸರಳಸೂತ್ರದ ಎಳೆಯನ್ನು ಹಿಡಿದುಕೊಂಡು ವರ್ಣಭೇದ ನೀತಿ ಮತ್ತು ಜಾತಿಗಳ ತಾರತಮ್ಯದಂತಹ ಸಾಮಾಜಿಕ ರಾಜಕೀಯ ಸಮಸ್ಯೆಗಳನ್ನು ಅನಾವರಣ ಮಾಡಬಹುದು ಎನ್ನುವುದನ್ನು ತೋರಿಸಿಕೊಟ್ಟಿತು. ಧರ್ಮ, ಇತಿಹಾಸ ಮತ್ತು ರಾಜಕೀಯ ಸಂಬಂಧದ ಸೂಕ್ಷ್ಮ ಅವಲೋಕನದ ದೃಷ್ಟಿಯಿಂದ 'ಕಲ್ಲಿನ ಮಾತು' ಒಂದು ಅದ್ಭುತ ಬರಹ. ಲೇಖನದ ಕೊನೆಯಲ್ಲಿ ಲೋಹಿಯಾ ಹೇಳುವ ಮಾತು: "ಅನಾಗರಿಕ ಮೂರ್ಖರು ಮತ್ತು ನಾಜೂಕಿನ ನಪುಂಸಕರು, ನಮ್ಮ ಪೂರ್ವಜರು ನಿರ್ಮಿಸಿದ್ದನ್ನು ಕಾಪಾಡಿಕೊಳ್ಳಲು ಸಮರ್ಥರಾಗದೆ ಹೋದರು. ಹೊಸದಾಗಿ ನಿರ್ಮಿಸಲೂ ಅವರು ಅಸಮರ್ಥರೇ. ಸೃಷ್ಟಿಯೆಂದರೆ ಸ್ವತಂತ್ರವಾದ ಬದುಕು, ವೀರ್ಯವತ್ತಾದ ಬದುಕು."

ಲೋಹಿಯಾ ಲಕ್ನೋ ಜೈಲ್‌ನಲ್ಲಿ ಇದ್ದಾಗ ಜೈಲು ಮಂತ್ರಿಗಳಿಗೆ ಬರೆದ ಪತ್ರ 'ವಸಿಷ್ಠರುಗಳು ಮತ್ತು ವಾಲ್ಮೀಕಿಯರು' – ಇಬ್ಬರು ಪುರಾಣದ ಋಷಿಗಳನ್ನು ರೂಪಕವಾಗಿ ಇಟ್ಟುಕೊಂಡು ಸಮಕಾಲೀನ ರಾಜಕೀಯ ಧೋರಣೆಯನ್ನು ಕಟುವಾಗಿ, ಆದರೆ ವೈಚಾರಿಕವಾಗಿ ವಿಮರ್ಶಿಸಿದ ಅಪೂರ್ವ ಬರಹ. ಭಾರತದ ವರ್ಣವ್ಯವಸ್ಥೆಯನ್ನು, ಜಾತಿಪದ್ಧತಿಯನ್ನು ವಿಶ್ಲೇಷಿಸುವ ಲೋಹಿಯಾ ಅವರ ಈ ಬರಹದ ಧಾಟಿ ಮತ್ತು ಧೋರಣೆಯು ರಾಜಕೀಯಬರಹವೊಂದರ ಹೊಸಮಾದರಿ.

'ಪುಸ್ತಕಗಳ ಅವಲೋಕನ' ಬರಹವು ಲೋಹಿಯಾ ಓದಿನ ಒಂದು ತುಣುಕು. ಅವರು ಭಾಷೆಗಳು, ವರ್ಣಮಾಲೆ, ನದಿಗಳು, ಆಟಗಳು, ಯೋಗ, ಇಂಡಿಯಾದ ಏಕತೆ–ಇಂತಹ ವಿಷಯಗಳ ಬಗ್ಗೆ ಮತ್ತು ಅವುಗಳ ಒಳಗಿನ ರಾಜಕೀಯದ ಒಳಸುಳಿಗಳ ಬಗ್ಗೆ, ತಾರತಮ್ಯಗಳ ಒಳಪದರುಗಳ ಬಗ್ಗೆ ಇಲ್ಲಿ ಬರಹಗಳನ್ನು ಬರೆದಿದ್ದಾರೆ.



ಈ ಗ್ರಂಥದ ಓದಿನ ಬಳಿಕ ಲೋಹಿಯಾ ಸಮಗ್ರ ಸಾಹಿತ್ಯವನ್ನು ಕನ್ನಡ ಅನುವಾದದಲ್ಲಿ ಓದುವ ಅವಕಾಶ ಸಿಕ್ಕಿದೆ. ಲೋಹಿಯಾ ಬಗೆಗಿನ ಅಧ್ಯಯನದ ಗ್ರಂಥಗಳು ಕನ್ನಡದಲ್ಲಿ ಓದಲು ದೊರೆತಿವೆ. ಬಹುಶಿಸ್ತೀಯ ಪುಸ್ತಕಗಳ ಓದಿನ ಮೂಲಕವೇ ಸಮಕಾಲೀನ ಜಗತ್ತನ್ನು ಅರ್ಥೈಸಲು ತೊಡಗಬೇಕು ಎನ್ನುವ ನನ್ನ ಅರಿವಿನ ನೆಲೆಯು 'ರಾಜಕೀಯದ ಮಧ್ಯೆ ಬಿಡುವು' ಗ್ರಂಥದ 35 ವರ್ಷಗಳ ಹಿಂದಿನ ನನ್ನ ಓದಿನ ತಳಪಾಯದ ಮೇಲೆಯೇ ನಿಂತಿದೆ.

–ಬಿ.ಎ ವಿವೇಕ ರೈ, ಮಂಗಳೂರು

(ಲೇಖಕರ ಸೂಚನೆಯ ಮೇರೆಗೇ ಅವರ ಹೆಚ್ಚಿನ ಪರಿಚಯವನ್ನು ಇಲ್ಲಿ ನೀಡಿಲ್ಲ)

ನವೊಮಿ ಕ್ಲೇನ್ ಬರೆದ

'ದಿಸ್ ಚೇಂಜಸ್ ಎವೆರಿಥಿಂಗ್'

"ಪುಟದಿಂದ ಪುಟಕ್ಕೆ ಉಸಿರು ಬಿಗಿ ಹಿಡಿದು ಓದಬೇಕೆನ್ನಿಸುವ ಅವರ ನಿರೂಪಣಾ ಶೈಲಿ ನನಗೆ ತುಂಬ ಇಷ್ಟ. ತನ್ನ ಪ್ರತಿಯೊಂದು ಮಹತ್ವದ ಹೇಳಿಕೆಗೂ ಅಧಿಕೃತ ಸಾಕ್ಷ್ಯಗಳನ್ನು ಒದಗಿಸುವ ಅವರ ಬದ್ಧತೆಯೂ ಇಷ್ಟ 'ಎಲ್ಲವೂ ಮುಗಿದಿಲ್ಲ, ಈಗಲೂ ಜಗತ್ತನ್ನು ಉಳಿಸಲು ಸಾಧ್ಯವಿದೆ' ಎಂಬ ಅವರ ಆಶಾಧೋರಣೆ ಎಲ್ಲಕ್ಕಿಂತ ಇಷ್ಟ."



ಕಾಲಕಾಲಕ್ಕೆ ಹೊಸ ಹೊಸ ಪುಸ್ತಕಗಳು ನನ್ನನ್ನು ಚಿಂತನೆಗೆ ಹಚ್ಚುತ್ತವೆ, ನನ್ನ ಚಿಂತನೆಯನ್ನು ಪ್ರಭಾವಿಸುತ್ತವೆ; ಕೆಲವೊಂದು ಬಾರಿ ಬದಲಿಸುತ್ತವೆ ಕೂಡ. ಹಿಂದೊಮ್ಮೆ 'ಹಿಂದ್ ಸ್ವರಾಜ್' ಆ ಕೆಲಸವನ್ನು ಮಾಡಿತ್ತು. ಶ್ಯುಮೇಕರ್ ಅವರ 'ಸ್ಮಾಲ್ ಈಸ್ ಬ್ಯೂಟಿಫುಲ್' ಕೂಡ ತುಂಬ ಪ್ರಭಾವಿಸಿತ್ತು. ಈಗಿನ ಕಾಲಘಟ್ಟದಲ್ಲಿ ನನ್ನನ್ನು ಗಾಢವಾಗಿ ಪ್ರಭಾವಿಸಿದ್ದು ಕೆನಡಾದ ಪತ್ರಕರ್ತೆ, ಲೇಖಕಿ ನವೊಮಿ ಕ್ಲೇನ್ ಬರೆದ 'ದಿಸ್ ಚೇಂಜಸ್ ಎವೆರಿಥಿಂಗ್'(ಇದು ಎಲ್ಲವನ್ನೂ ಬದಲಿಸುತ್ತದೆ) ಹೆಸರಿನ ಪುಸ್ತಕ. ಇಲ್ಲಿ, ಇದು ಅಂದರೆ ಹವಾಗುಣ ಬದಲಾವಣೆ. ಭೂಮಿಯು ವಾತಾವರಣ ಬಿಸಿಯಾಗುತ್ತಿರುವಾಗ ನಮ್ಮ ಬದುಕಿನ ಎಲ್ಲವೂ ಬದಲಾಗಲಿದೆ, ಅದರಲ್ಲೂ ಮುಖ್ಯವಾಗಿ, ಈಗಿನ ಸಂಕಟಕ್ಕೆ ಕಾರಣವಾಗಿರುವ ಬಂಡವಾಳಶಾಹಿ ಆರ್ಥಿಕತೆಯನ್ನೇ ಅದು ಬುಡಮೇಲು ಮಾಡಲಿದೆ ಎಂದು ಲೇಖಕಿ ಹೇಳುತ್ತಾರೆ. ಪುಸ್ತಕದ ೫೬೬ ಪುಟಗಳುದ್ದಕ್ಕೂ ಅದಕ್ಕೆ ಸಾಕ್ಷ್ಯಗಳನ್ನು, ಆ ಸಾಕ್ಷ್ಯಗಳಿಗೆ ಆಧಾರಗಳನ್ನೂ ಕೊಡುತ್ತ ಹೋಗುತ್ತಾರೆ.

ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆ (ಕ್ಯಾಪಿಟಲಿಸಂ) ಹೇಗೆ ನಮಗೆಲ್ಲ ಮೋಡಿ ಮಾಡುತ್ತ, ನಮ್ಮನ್ನೆಲ್ಲ ಕೊಳ್ಳುಬಾಕರನ್ನಾಗಿ ಮಾಡುತ್ತ, ಇಡೀ ಭೂಮಿಯನ್ನೇ ದಳ್ಳುರಿಯತ್ತ ತಳ್ಳುತ್ತಿದೆ ಎಂಬುದರ ಕಥನಗಳಿವೆ. ಖನಿಜ, ಪೆಟ್ರೋಲಿಯಂ, ನೀರು, ಮಣ್ಣು, ಕಾಡು, ಸಾಗರತಳ ಎಲ್ಲವೂ ಅಕ್ಷಯ ಸಂಪತ್ತು ಎಂದು ಪರಿಗಣಿಸಿ ಅವನ್ನೆಲ್ಲ ಎಗ್ಗಿಲ್ಲದೆ ಎತ್ತಲೆಂದೇ ಹೊಸ ಹೊಸ ತಂತ್ರಜ್ಞಾನಗಳನ್ನು ರೂಪಿಸುತ್ತ ಅದಕ್ಕೆಂದೇ ಜಗತ್ತಿನಾದ್ಯಂತ ಶಾಲೆ, ಕಾಲೇಜುಗಳ ಶಿಕ್ಷಣ ವ್ಯವಸ್ಥೆಯನ್ನೂ ವೃತ್ತಿಗಳನ್ನೂ ಬದಲಿಸುತ್ತ ಹೋಗುತ್ತಿದೆ ಎಂಬುದನ್ನು ಕ್ಲೇನ್ ಪ್ರತಿಪಾದಿಸುತ್ತಾರೆ. ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತ ಹೋಗುವವರೆಲ್ಲರೂ ಮಾಲಿನ್ಯವನ್ನೂ ಅದೇ ಪ್ರಮಾಣದಲ್ಲಿ ಹೆಚ್ಚಿಸುತ್ತ ಹೋಗುತ್ತಿದ್ದಾರೆ ಎಂಬುದು ಇಲ್ಲಿ ಚಿತ್ರಿತಗೊಳ್ಳುತ್ತ ಹೋಗುತ್ತದೆ. ಎಲ್ಲರ ಹಕ್ಕೂ ಇರುವ ಸಾರ್ವಜನಿಕ ಸೊತ್ತುಗಳು ಹೇಗೆ ಕೆಲವರ ಸೊತ್ತಾಗುತ್ತ ನಿಸರ್ಗದ ಕತ್ತನ್ನು ಹಿಸುಕುತ್ತ ಹೋಗುತ್ತದೆಂದು ತಿಳಿಸಲು ಜಗತ್ತಿನ ವಿವಿಧ ದೇಶಗಳ ಉದಾಹರಣೆಗಳು ಇಲ್ಲಿ ಸಾಲುಗಟ್ಟಿ ಬಂದಿವೆ.

ಬೇರೆಬೇರೆ ಖಂಡಗಳಲ್ಲಿ ವಿಕಸಿತವಾಗುತ್ತಿರುವ ಪೃಥ್ವೀಮಿತ್ರರ ಸಂಘಟನೆಗಳ ಬಗ್ಗೆ ಹಾಗೂ ಅವರ ಮುಂದಿರುವ ಸವಾಲುಗಳ ಬಗ್ಗೆ ಮುಂದಿನ ಭಾಗದಲ್ಲಿ ಕ್ಲೇನ್ ಬರೆಯುತ್ತಾರೆ. ಭೂಜ್ವರವನ್ನು ತಗ್ಗಿಸಲು ವಿವಿಧ ಸರಕಾರಗಳು ಕೈಗೊಳ್ಳುತ್ತಿರುವ ಸೋಗಲಾಡಿ ಕ್ರಮಗಳನ್ನು ಖಾರವಾಗಿ ಟೀಕಿಸುತ್ತಾರೆ. ಪಟ್ಟಭದ್ರರಿಂದ ಅದೆಷ್ಟೇ ಭಯೋತ್ಪಾತ ಕೃತ್ಯಗಳು ನಡೆಯುತ್ತಿದ್ದರೂ ಭೂಮಿಗೆ ಮರುಚೈತನ್ಯವನ್ನು ನೀಡಬಲ್ಲ ಹೊಸ ಆರ್ಥಿಕತೆ, ಹೊಸ ರಾಜಕೀಯ ಚಿಂತನೆಗಳು ವ್ಯಾಪಕವಾಗಿ ಹಬ್ಬುತ್ತಿರುವ ಬಗ್ಗೆ ಮೂರನೆಯ ಭಾಗದಲ್ಲಿ ದಾಖಲಿಸುತ್ತಾರೆ. ಅಸಾಧ್ಯವೆನಿಸಿದ್ದನ್ನು ಸಾಧಿಸಿ ತೋರಿಸಲು ಇನ್ನು ಸ್ವಲ್ಪವೇ ಸಮಯ ಉಳಿದಿದೆ ಎಂಬ ಎಚ್ಚರಿಕೆಯೂ ಅದರಲ್ಲಿದೆ.

ನವೊಮಿ ಕ್ಲೇನ್ ಬರೆದ ನಾಲ್ಕೂ ಪುಸ್ತಕಗಳು ('ನೋ ಲೋಗೋ', 'ಶಾಕ್ ಡಾಕ್ಟ್ರಿನ್', ಇದು ಮತ್ತು ಈಚಿನ, 'ಆನ್ ಫಾಯರ್') ಬಂಡವಾಳಶಾಹಿ ವ್ಯವಸ್ಥೆಯ ತೀಕ್ಷ್ಣ ಪ್ರತಿಕ್ರಿಯೆಯೇ ಆಗಿದೆ. ಇವರ 'ಶಾಕ್ ಡಾಕ್ಟ್ರಿನ್' ಗ್ರಂಥವನ್ನು 'ಪರಿಸರ ಚಳವಳಿಗಾರರ ಬೈಬಲ್' ಎಂದೇ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಬಣ್ಣಿಸಿದೆ. ಈ ಪುಸ್ತಕ ಪ್ರಕಟವಾಗಿ ಎಂಟು ವರ್ಷಗಳ ಬಳಿಕವೂ ಅದು ಇವೊತ್ತಿನ ವಾಸ್ತವಗಳನ್ನು ಹೇಳುತ್ತಿರುವಂತೆ ಭಾಸವಾಗುತ್ತದೆ. ಪುಟದಿಂದ ಪುಟಕ್ಕೆ ಉಸಿರು ಬಿಗಿ ಹಿಡಿದು ಓದಬೇಕೆನ್ನಿಸುವ ಅವರ ನಿರೂಪಣಾ ಶೈಲಿ ನನಗೆ ತುಂಬ ಇಷ್ಟ. ತನ್ನ ಪ್ರತಿಯೊಂದು ಮಹತ್ವದ ಹೇಳಿಕೆಗೂ ಅಧಿಕೃತ ಸಾಕ್ಷ್ಯಗಳನ್ನು ಒದಗಿಸುವ ಅವರ ಬದ್ಧತೆಯೂ ಇಷ್ಟ 'ಎಲ್ಲವೂ ಮುಗಿದಿಲ್ಲ, ಈಗಲೂ ಜಗತ್ತನ್ನು ಉಳಿಸಲು ಸಾಧ್ಯವಿದೆ' ಎಂಬ ಅವರ ಆಶಾಧೋರಣೆ ಎಲ್ಲಕ್ಕಿಂತ ಇಷ್ಟ.



–ನಾಗೇಶ ಹೆಗಡೆ, ಹಿರಿಯ ವಿಜ್ಞಾನ ಲೇಖಕರು ಮತ್ತು ಖ್ಯಾತ ಅಂಕಣಕಾರರು, ಬೆಂಗಳೂರು

ಕುವೆಂಪು ಅವರ ಮಹಾ ಕಾದಂಬರಿ
'ಮಲೆಗಳಲ್ಲಿ ಮದುಮಗಳು'


ಉಳ್ಳವರ, ಬಡವರ ನಡುವಿನ ಬಾಂಧವ್ಯ, ದ್ವೇಷ, ಅಸೂಯೆ, ಹೊಡೆತಗಳ ಪೆಟ್ಟುಗಳು ಮನಕ್ಕೆ ಬಂದು ಅಪ್ಪಳಿಸುತ್ತವೆ. ಅಭಯ ನೀಡುವ ಕೈಗಳು ಕಾಣಿಸಿದಂತೆ, ಕೈಬಿಡುವ ಕೈಗಳೂ ಕಾಣಿಸುತ್ತವೆ. ಬೆಳಗಾದರೆ ಯಾರಿಗೆ ದುಃಖ, ಯಾರಿಗೆ ಯಾತನೆ ಎಲ್ಲವೂ ಗೋಚರಿಸುತ್ತವೆ. ನೆಲದ ಮೇಲಿನ ಬದುಕಿನೆಲ್ಲ ಚಹರೆಗಳು ನೆನೆಯದಿದ್ದರೂ ಮನಕ್ಕೆ ಕಾಣಿಸುತ್ತವೆ ಈ ಕೃತಿಯ ಓದಿನಿಂದ.



ಆ ಕೃತಿಯನ್ನು ಓದುತ್ತಿದ್ದಾಗ, ಓದಿದ ಮೇಲೆ ಮತ್ತು ಅದನ್ನು ನೆನೆಸಿಕೊಳ್ಳದೆ ಇದ್ದರೂ ಮನಸಿನಿಂದೆದ್ದು ಕಣ್ಣಮುಂದೆ ಸೃಜಿಸುವ ದೃಶ್ಯಗಳು ನೂರು. ಕಾಡಿನ ಗವ್ವೆನ್ನುವ ಕಗ್ಗತ್ತಲು, ತರಗೆಲೆಯಲ್ಲಿ ಮರೆಯಾಗಿರುವ ಕೀಟ, ಪ್ರಾಣಿಗಳ ರವರವ ಸದ್ದು, ಹಕ್ಕಿಗಳ ಭಿನ್ನ ಭಿನ್ನ ಸ್ವರಗಳ ಕೂಗು, ಬೀಸಿದ ಗಾಳಿಗೆ ಮರಮರ ಸದ್ದು ಮಾಡುವ ಗಿಡಮರಗಳು, ನದಿ ನೀರಿನ ಭೋರ್ಗರೆತ, ನೀರಿನ ಝರಿಗಳ ಹರಿವ ಹಾಡು, ಪ್ರಣಯಕ್ಕೆ ಕೂಗುವ ಪಶು–ಪಕ್ಷಿ ಪ್ರಾಣಿಗಳ ವಿರಹದ ಆರ್ತ ಸ್ವರ, ಗುಡುಗು, ಮಿಂಚು, ಮಳೆಯ ಭಯಾನಕ ಜೀವಧ್ವನಿ, ನೆಲದ ಬಿಸಿ ಆವಿಯ ವಾಸನೆ, ಮಳೆರಾತ್ರಿ, ಮಳೆಬೆಳಗು, ಸೂರ್ಯೋದಯ, ಚಂದ್ರೋದಯ, ಸೂರ್ಯಾಸ್ತ, ಚಂದ್ರಾಸ್ತಗಳ ಮೌನಗಳು, ಚುಕ್ಕೆಗಳ ಜಾತ್ರೆ, ರಾತ್ರಿಯೂ ಲೋಕವನ್ನು ಎಚ್ಚರಿಸುವ ಕ್ರಿಮಿಕೀಟಗಳು. ಇಲ್ಲಿಯ ಗಾಳಿಗೂ, ಬೆಳಕಿಗೂ, ನೀರಿಗೂ ಲೋಕಕ್ಕೆ ಮದ್ದು ನೀಡುವ ದೈವಿಕತೆ ಏನೆಲ್ಲ ಕಾಣುತ್ತವೆ. ಕೇಳಿಸುತ್ತವೆ. ಮನದಲ್ಲಿ ಮರುಸೃಷ್ಟಿಸುವ ಅಪಾರ ಶಕ್ತಿ ಇದಕ್ಕಿದೆ.

ಅಷ್ಟೇ ಅಲ್ಲ, ಮನುಷ್ಯ ಲೋಕಗಳು ಕುಣಿಯುತ್ತವೆ. ಉಂಡು ತೇಗುವ, ಉಂಡದ್ದು, ಕುಡಿದದ್ದು ಹೆಚ್ಚಾಗಿ ವಾಂತಿ ಮಾಡಿಕೊಳ್ಳುವ ಮನುಷ್ಯ ಲೋಕ ಇದ್ದಂತೆ. ಹಸಿದು, ಕುದಿವ ಅನ್ನಕ್ಕೆ ಬಾಯಿ ಬಿಡುವ ಹೆತ್ತವರು. ಅವರ ಕಂದಮ್ಮಗಳ ನಿಟ್ಟುಸಿರು ಬಡಿಯುತ್ತವೆ. ಮಹಿಳೆಯರ ಪ್ರಣಯ ಕಾಲದ ಮುನುಗು, ಹೆರಿಗೆ ಕಾಲದ ನೋವಿನ ಧ್ವನಿ, ಅಕ್ರಮ ಬಸಿರುಗಳನ್ನು ತೆಗೆಯುವಾಗ ಜೀವಹಿಂಡುವ ಧ್ವನಿಗಳು ಇಲ್ಲಿ ಕೇಳಿಸುತ್ತವೆ. ಉಳ್ಳವರ, ಬಡವರ ನಡುವಿನ ಬಾಂಧವ್ಯ, ದ್ವೇಷ, ಅಸೂಯೆ, ಹೊಡೆತಗಳ ಪೆಟ್ಟುಗಳು ಮನಕ್ಕೆ ಬಂದು ಅಪ್ಪಳಿಸುತ್ತವೆ. ಅಭಯ ನೀಡುವ ಕೈಗಳು ಕಾಣಿಸಿದಂತೆ, ಕೈಬಿಡುವ ಕೈಗಳೂ ಕಾಣಿಸುತ್ತವೆ. ಬೆಳಗಾದರೆ ಯಾರಿಗೆ ದುಃಖ, ಯಾರಿಗೆ ಯಾತನೆ ಎಲ್ಲವೂ ಗೋಚರಿಸುತ್ತವೆ. ನೆಲದ ಮೇಲಿನ ಬದುಕಿನೆಲ್ಲ ಚಹರೆಗಳು ನೆನೆಯದಿದ್ದರೂ ಮನಕ್ಕೆ ಕಾಣಿಸುತ್ತವೆ ಈ ಕೃತಿಯ ಓದಿನಿಂದ.


ನಾನು ಹತ್ತನೆ ತರಗತಿ ಪಾಸಾಗಿ ಕಾಲೇಜಿಗೆ ಸೇರಿಕೊಳ್ಳಲಾಗದೆ ಹೊಲ ಮನೆ ಕೆಲಸದಲ್ಲಿ ಒಲ್ಲದ ಮನಸ್ಸಿನಿಂದ ತೊಡಗಿಕೊಂಡಿರುವ ಆ ದಿನಗಳಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ನನ್ನ ಕೈಗಿತ್ತವನು ನುಗಡೋಣಿ ಬಸವನೆಂಬ ದೈವ ಎಂದು ಹೇಳಬಹುದು. ನನಗಾಗ ಹದಿನೇಳು ವರ್ಷ. ನನ್ನ ಊರು ಕೇರಿಯಲ್ಲಿ ನಾನು ಹುಟ್ಟಿ ಬೆಳೆದಿದ್ದರೂ, ಅದನ್ನು ಹೇಗೆ ನೋಡಬೇಕು ಎಂಬುದನ್ನು ಕಲಿಸಿದ ಕಾದಂಬರಿ 'ಮಲೆಗಳಲ್ಲಿ ಮದುಮಗಳು'. ಈ ಕೃತಿಯ ಓದಿನಿಂದಲೇ ಕಲಿತ ನಾನು ನನ್ನೂರಿನ ಕತೆಗಳನ್ನು ಬರೆಯುತ್ತ ಬಂದಿದ್ದೇನೆ. ಎಲ್ಲಿಯ ನನ್ನೂರು ನುಗಡೋಣಿ, ಎಲ್ಲಿಯ ಕುವೆಂಪು ಕುಪ್ಪಳ್ಳಿ? ಹಾಗೆ ನೋಡಿದರೆ ಮಲೆನಾಡಿಗೆ ವಿರುದ್ಧವಾದದ್ದು ನನ್ನೂರು. ನಮ್ಮ ಸೀಮೆಯಲ್ಲಿ ಗಿಡ ಮರಗಳು ವಿರಳ, ಗುಡ್ಡ ಬೆಟ್ಟಗಳು ವಿರಳ. ಮಳೆ ಬರುವುದನ್ನು ನಾವು ಕಾಯುತ್ತಿದ್ದೆವು. ನದಿ ಹಳ್ಳಕೊಳ್ಳಗಳು ಅಪರೂಪ. ಇಂಥಹ ಸೀಮೆಯಲ್ಲಿದ್ದ ನನಗೆ ಮಲೆನಾಡು ಪರಿಚಯವಾದದ್ದೆ ಕುವೆಂಪು ಕಾದಂಬರಿಗಳಿಂದ. ನಾನು ಹತ್ತನೆ ತರಗತಿ ಓದಲು ಹತ್ತು ಮೈಲು ದೂರದ ಊರಿಗೆ ನಿತ್ಯವೂ ಹೋಗಿಬರುತ್ತಿದ್ದೆ. ಮನೆ ಬಿಟ್ಟು ನಡೆದರೆ ನೆರಳಿರುವ ಒಂದೂ ಮರ ದಾರಿಯಲ್ಲಿ ನನಗೆ ಸಿಗುತ್ತಿರಲಿಲ್ಲ. ಬಿಸಲು ವಿಪರೀತ. ಮಳೆ ಎಂಬುದೇ ಅಪರೂಪವಾದ್ದರಿಂದ ಗಿಡ ಮರಗಳಿಗೆ ನೀರೆಲ್ಲಿ? ತಂಪಾದ ಗಾಳಿಯೆಲ್ಲಿ? ಬಿಸಿಲಿನಲ್ಲಿಯೇ ಬಾಳಿದ ನನಗೆ ಕುವೆಂಪು ಕಾದಂಬರಿಗಳಲ್ಲಿ ಕಾಣುವ ಮಲೆನಾಡು ನನಗೆ ಖುಷಿ ನೀಡಿತು. ಈ ಕಾದಂಬರಿಯನ್ನು ಓದಿದ ಮೂವತ್ತು ವರ್ಷಗಳ ನಂತರ ನಾನು ಕುಪ್ಪಳ್ಳಿಯನ್ನು, ಕವಿ ಮನೆಯನ್ನು ನೋಡಿ ಧನ್ಯನಾದೆ.



–ಅಮರೇಶ ನುಗಡೋಣಿ, ನಿವೃತ್ತ ಕನ್ನಡ ಪ್ರಾಧ್ಯಾಪಕರು ಮತ್ತು ಖ್ಯಾತ ಕಥೆಗಾರರು, ಹೊಸಪೇಟೆ

ಪಾಲ್ ಬ್ಯಾರನ್ ಅವರ *'ಪೊಲಿಟಿಕಲ್ ಎಕಾನಮಿ ಆಫ್ ಗ್ರೋಥ್'*

ಇದು ಆಗ ನಮಗೆ ಸಂಪೂರ್ಣವಾಗಿ ಅರ್ಥವಾಗದಿದ್ದರೂ ನಮಗೆ ಆಗ ಸಾಕಿತ್ತು. ನಿಜವಾದ ಅರ್ಥದಲ್ಲಿ ನನ್ನ ಅರ್ಥಶಾಸ್ತ್ರದ ಓದಿಗೆ ಅದು ಒಂದು ದಿಕ್ಕನ್ನು ಒದಗಿಸಿತ್ತು. ಹಲವು ಪ್ರಶ್ನೆಗಳನ್ನು ನನ್ನಲ್ಲಿ ಹುಟ್ಟುಹಾಕಿತ್ತು.



ಕಾಲೇಜಿನಲ್ಲಿ ಓದುತಿದ್ದ ಸಮಯ. ಪ್ರಗತಿಪರ ಚಿಂತನೆಗಳು, ಹೋರಾಟಗಳು ಸಾಕಷ್ಟು ತೀವ್ರವಾಗಿದ್ದ ಕಾಲ. ಎಡಪಂಥೀಯರು, ದಲಿತ ಚಳುವಳಿ, ಸಮಾಜವಾದಿ ಚಿಂತನೆ ಇವೆಲ್ಲಾ ಪ್ರಬಲವಾಗಿದ್ದು. ಒಂದಲ್ಲ ಒಂದು ಪ್ರಭಾವಕ್ಕೆ ವಿದ್ಯಾರ್ಥಿಗಳು ಒಳಗಾಗಿದ್ದೆವು. ನನಗೆ ಹಲವು ಎಡಪಂಥೀಯ ಗೆಳೆಯರು ಆತ್ಮೀಯರಾಗಿದ್ದರು. ಅವರೊಡಗಿನ ಒಡನಾಟದಿಂದ ನಾನೂ ಎಡಪಂಥೀಯ ಒಲವನ್ನು ಹೊಂದಿದ್ದೆ. ಇದು ಯಾವ ಓದಿನಿಂದ ಬಂದದ್ದಲ್ಲ. ಆಗ ನಾನು ಯಾವ ಪ್ರಮುಖ ಗ್ರಂಥಗಳನ್ನು ಓದಿರಲಿಲ್ಲ. ಹೆಚ್ಚೆಂದರೆ ಕೆಲವು ಸಣ್ಣ ಸಣ್ಣ ಪುಸ್ತಿಕೆಗಳನ್ನು ಓದುತ್ತಿದ್ದೆ. ಬಹುಶಃ ಯಾವ ಪುಸ್ತಕವೂ ನನ್ನನ್ನು ಮೂಲಭೂತವಾಗಿ ಬದಲಿಸಿಲ್ಲ ಅಂತಲೇ ನನ್ನ ಅನಿಸಿಕೆ. ನಂತರ ನನ್ನ ಗೆಳೆಯರ ಜೊತೆ ಚರ್ಚಿಸುವುದಕ್ಕೆ, ನನ್ನ ನಿಲುವನ್ನು ಸಮರ್ಥಿಸಿಕೊಳ್ಳುವುದಕ್ಕೆ ಬೇಕಾದ ಪುಸ್ತಕಗಳನ್ನು, ಲೇಖನಗಳನ್ನು ಹೆಕ್ಕಿ ಓದುತ್ತಿದ್ದೆ. ನನಗೆ ಒಪ್ಪಿಗೆಯಾಗದ ನಿಲುವಿನ ಪುಸ್ತಕಗಳನ್ನು ಮುಟ್ಟುತ್ತಲೂ ಇರಲಿಲ್ಲ.

ನಾನು ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದೆ, ಅದರಲ್ಲೇ ಎಂಎ ಮಾಡಬೇಕು ಅಂದುಕೊಂಡಿದ್ದೆ. ಸೀಟು ಸಿಗಲಿಲ್ಲ. ಸಂಖ್ಯಾಶಾಸ್ತ್ರ ಎಂಎಸ್ಸಿಗೆ ಸೇರಿಕೊಂಡೆ. ನನ್ನ ಗೆಳೆಯ ವಾದಿರಾಜ್ ಎಂಬವನು ಅರ್ಥಶಾಸ್ತ್ರದ ಎಂ ಎ ಸೇರಿದ್ದ. ನನಗಿಂತ ಜ್ಯೂನಿಯರ್ ಇರಬೇಕು. ಅವನೊಂದು ಸೆಮಿನಾರ್ ಮಾಡಬೇಕಿತ್ತು. ಆಗ ಮಾರ್ಕ್ಸ್‌ವಾದಿ ಬೆಳವಣಿಗೆಯ ಚಿಂತನೆಯನ್ನು ಪ್ರಶ್ನೆ ಮಾಡುವ ಹಲವು ವಾದಗಳು ಚಾಲ್ತಿಯಲ್ಲಿದ್ದವು. ಡಬ್ಲ್ಯು ಡಬ್ಲ್ಯು ರಾಸ್ಟೋ ಅವರ ಸ್ಟೇಜ್ಸ್ ಆಫ್ ಎಕನಾಮಿಕ್ ಗ್ರೋಥ್ ಪುಸ್ತಕ ತುಂಬಾ ಚರ್ಚಿತವಾಗುತ್ತಿತ್ತು. ಅದು ನಮ್ಮ ಸಿಲಬಸ್ಸಿನ ಭಾಗವೂ ಆಗಿತ್ತು. ಅದಕ್ಕೆ ಎ ನಾನ್ ಕಮ್ಯುನಿಷ್ಟ್ ಮ್ಯಾನಿಫೆಸ್ಟೋ ಎಂಬ ಉಪಶೀರ್ಷಿಕೆಯೂ ಇತ್ತು. ಅದನ್ನು ಪ್ರಶ್ನಿಸಿ ಸೆಮಿನಾರ್ ಮಾಡುವುದು ಅಂತ ನಾವಿಬ್ಬರೂ ತೀರ್ಮಾನಿಸಿಬಿಟ್ಟೆವು. ಅದರೆ ಅದಕ್ಕೆ ಪ್ರತಿಯಾಗಿ ವಾದಿಸುವುದಕ್ಕೆ ಬೇಕಾದ ತಯಾರಿ ನಮಗಿರಲಿಲ್ಲ. ಕೆಲವು ಸಮಾಜವಾದಿ ಗೆಳೆಯರು ಕೂಡ ಚೀನಾ ಹಾಗೂ ರಷ್ಯಾದಲ್ಲಿ ಕ್ರಾಂತಿಯಾದ ನಂತರ ಮಾರ್ಕ್ಸ್ ಹೇಳಿದಂತೆ ಬಂಡವಾಳಶಾಹಿ ವ್ಯವಸ್ಥೆಯ ನಂತರ ಕ್ರಾಂತಿಯಾಗುತ್ತದೆ ಎನ್ನುವ ವಾದಕ್ಕೆ ಹುರುಳಿಲ್ಲ ಎಂದು ವಾದಿಸುತ್ತಿದ್ದರು. ಆಗ ನಮಗೆ ಸಿಕ್ಕ ಪುಸ್ತಕ ಪಾಲ್ ಬ್ಯಾರನ್ ಅವರು ಬರೆದ ಪೊಲಿಟಿಕಲ್ ಎಕಾನಮಿ ಆಫ್ ಗ್ರೋಥ್. ನಮಗೆ ಸಂಪೂರ್ಣವಾಗಿ ಅರ್ಥವಾಗದಿದ್ದರೂ ನಮಗೆ ಆಗ ಸಾಕಿತ್ತು. ನಿಜವಾದ ಅರ್ಥದಲ್ಲಿ ನನ್ನ ಅರ್ಥಶಾಸ್ತ್ರದ ಓದಿಗೆ ಅದು ಒಂದು ದಿಕ್ಕನ್ನು ಒದಗಿಸಿತ್ತು. ಹಲವು ಪ್ರಶ್ನೆಗಳನ್ನು ನನ್ನಲ್ಲಿ ಹುಟ್ಟುಹಾಕಿತ್ತು. ಒಂದು ಅರ್ಥದಲ್ಲಿ ಅದು ಅರ್ಥಶಾಸ್ತ್ರದಲ್ಲಿ ಅಥವಾ ರಾಜಕೀಯ ಅರ್ಥಶಾಸ್ತ್ರದಲ್ಲಿ ನನಗೆ ಆಸಕ್ತಿಯನ್ನು ಮೂಡಿಸಿತ್ತು. ಸಾಮ್ರಾಜ್ಯಶಾಹಿ ಶಕ್ತಿಗಳು ಹಿಂದುಳಿದ ದೇಶಗಳನ್ನು ಆಕ್ರಮಿಸಿಕೊಂಡು, ಅದರ ಪ್ರಾರಂಭಿಕ ಸಾಮಾಜಿಕ ರಚನೆಯನ್ನು ನಾಶಮಾಡಿದೆ. ಮತ್ತು ಅವುಗಳ ನಂತರದ ಬೆಳವಣಿಗೆಯನ್ನು ವಿರೂಪಗೊಳಿಸಿದೆ. ಅವು ನಿರಂತರವಾಗಿ ಅವಲಂಬನೆಯ ಸ್ಥಿತಿಯಲ್ಲಿ ಇರುವಂತೆ ಮಾಡಿವೆ ಎಂದು ವಾದಿಸಿದ್ದರು. ಅವರು ಹಿಂದುಳಿದ ದೇಶಗಳು ಉಳಿದ ಬಂಡವಾಳಶಾಹಿಗಳಂತೆ ಏಕೆ ಅಭಿವೃದ್ಧಿ ಹೊಂದುತ್ತಿಲ್ಲ ಎಂದು ಪ್ರಧಾನವಾಗಿ ಚರ್ಚಿಸಿದ್ದರು. ಆಗ ಅವರ ವಾದದ ಎಲ್ಲಾ ಸಂಕೀರ್ಣತೆಗಳು ಅರ್ಥವಾಗಿರಲಿಲ್ಲ. ಆದರೆ ಈ ಪ್ರಶ್ನೆಗೆ ಅವರು ಪಾಶ್ಚಾತ್ಯ ಐರೋಪ್ಯ ಬೆಳವಣಿಗೆಯ ಸ್ವಭಾವದಲ್ಲಿ ಉತ್ತರವನ್ನು ಕಂಡುಕೊಂಡಿದ್ದು ಇಷ್ಟವಾಗಿತ್ತು. ಅವರ ವಾದಕ್ರಮ ನನ್ನ ಯೋಚನೆಯ ಕ್ರಮಕ್ಕೆ ಹತ್ತಿರ ಅನ್ನಿಸಿತ್ತು. ಅದು ಮುಂದೆ ಹಲವು ಪುಸ್ತಕಗಳ ಓದಿಗೆ ಪ್ರೇರೇಪಿಸಿತು. ನನಗೆ ಯಾವುದೇ ಪ್ರಶ್ನೆಗಳು ಬಂದರೂ ಬ್ಯಾರನ್ ಏನು ಹೇಳುತ್ತಾರೆ ಅನ್ನುವ ಕುತೂಹಲ ಇರುತ್ತಿತ್ತು. ಅವರು ಹಲವು ವಿಚಾರದಲ್ಲಿ ಸಾಂಪ್ರದಾಯಿಕ ಮಾರ್ಕ್ಸ್‌ವಾದಿ ಚರ್ಚೆಯನ್ನೂ ಪ್ರಶ್ನಿಸುತ್ತಿದ್ದರು.



ಇಷ್ಟಾದರೂ ಅದು ಮೂಲಭೂತವಾಗಿ ನನ್ನನ್ನು ಬದಲಿಸಿತು ಅಂತ ನಾನು ಹೇಳಲಾರೆ. ಆದರೆ ಅದು ನನ್ನನ್ನು ಓದಿಗೆ ಹಚ್ಚಿತು. ಪಾಲ್ ಸ್ವೀಜಿ, ಸಮೀರ್ ಅಮೀನ್ ಮೊದಲಾದ ಹಲವರನ್ನು, ಅಷ್ಟೇ ಏಕೆ ನಾನು ಮಾರ್ಕ್ಸ್‌ನ ಕೆಲವು ಪುಸ್ತಕಗಳನ್ನು ಓದಿದ್ದೂ ಬ್ಯಾರನ್ ಓದಿದ ನಂತರವೆ.

–ಟಿ.ಎಸ್. ವೇಣುಗೋಪಾಲ್, ನಿವೃತ್ತ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರು ಮತ್ತು ಲೇಖಕರು, ಮೈಸೂರು

ನನ್ನ ಬದುಕಿನ ಪಥ ಬದಲಿಸಿದ ಶಿವರಾಮ ಕಾರಂತರ *'ಬಾಳ್ವೆಯೇ ಬೆಳಕು'*

ಪುಸ್ತಕವನ್ನು ಇಡಿಯಾಗಿ ಮತ್ತೆ ಮತ್ತೆ ಓದಿದ ಮೇಲೆ ಅದು ಇನ್ನಷ್ಟು ಆಪ್ತವಾಯಿತು. ನನ್ನೊಳಗೆಲ್ಲೋ ಅನೇಕ ಕಿಟಕಿಗಳು ತೆರೆದುಕೊಂಡವು. ಅನೇಕ ಪ್ರಶ್ನೆಗಳಿಗೆ ಅಲ್ಲಿ ಉತ್ತರವಿತ್ತು.



೧೯೭೩ ರಲ್ಲಿ ಪಿ.ಯು.ಸಿ.ಗೆ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜು ಸೇರಿದ್ದೆ. ಕನ್ನಡ ಉಪನ್ಯಾಸಕರಾಗಿದ್ದ ಕ.ನಂ. ನಾಗರಾಜುರವರು ಶಾಂತ ಸಾಗರದಂತೆ ಇದ್ದು ಯಾವುದೇ ಘಳಿಗೆಯಲ್ಲಿ ಸಿಡಿದೇಳಬಹುದಾದ ಗುಣ ಹೊಂದಿದ್ದರು. ಆದುದರಿಂದ ಅವರ ತರಗತಿಗಳಲ್ಲಿ ಹುಡುಗರು ಗಲಾಟೆ ಮಾಡುತ್ತಿರಲಿಲ್ಲ. ಅವರು ಯಾವುದೇ ತರಗತಿಗೆ ಸರ್ವಸಿದ್ಧತೆಯಿಂದ ಬರುತ್ತಿದ್ದರು. ನಮ್ಮ ಕನ್ನಡ ಪಠ್ಯಪುಸ್ತಕದಲ್ಲಿ 'ನಮ್ಮ ಅಳತೆಯನ್ನು ಮೀರಲಾರದ ದೇವರು' ಎಂಬ ಪಾಠವಿತ್ತು. ಅದರ ಲೇಖಕರು ಶಿವರಾಮ ಕಾರಂತರಾಗಿದ್ದರು. ಮೇಷ್ಟ್ರಿಗೆ ಪಾಠದ ತಿರುಳಿನ ಜೊತೆ ಸಹಮತ ಇತ್ತೆಂದು ಕಾಣುತ್ತದೆ. ಆದ್ದರಿಂದ ಪಾಠವನ್ನು ಅನುಭವಿಸಿ ಹೇಳುತ್ತಿದ್ದರು.


ನಾನು ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಕಾದಂಬರಿಗಳನ್ನು ಓದುತ್ತಿದ್ದೆ. ನನ್ನ ತಂದೆಯವರು ಪ್ರೌಢಶಾಲಾ ಶಿಕ್ಷಕರಾಗಿದ್ದು, ಶಾಲಾ ಗ್ರಂಥಾಲಯದ ಪ್ರಭಾರ ವಹಿಸಿಕೊಂಡಿದ್ದರು. ಅವರಿಗೆ ಅಲ್ಪಸ್ವಲ್ಪ ಸಾಹಿತ್ಯದ ಒಲವಿದ್ದುದರಿಂದ ನಮ್ಮ ಮನೆಯಲ್ಲಿ ಅನೇಕ ಪುಸ್ತಕಗಳಿರುತ್ತಿದ್ದವು. ಉದಾಹರಣೆಗೆ ಕಂಬನಿಯ ಕುಯಿಲು, ರತ್ನನ ಪದಗಳು, ಬೆಳುವಲದ ಮಡಿಲಲ್ಲಿ ಇತ್ಯಾದಿ. ಆಗಲೇ ನಾನು ತ್ರಿವೇಣಿ, ಕೆ.ವಿ.ಅಯ್ಯರ್, ರಾಜರತ್ನಂ ಮುಂತಾದವರ ಬಗ್ಗೆ ಪ್ರೀತಿ, ಅಭಿಮಾನವನ್ನು ಬೆಳೆಸಿಕೊಂಡಿದ್ದೆ.

ಆದರೆ ಕಾರಂತರ ಪಾಠ ಇವೆಲ್ಲವುಗಳಿಗಿಂತಲೂ ಬೇರೆ ಥರದ ಓದಾಗಿತ್ತು. ಅದು ಅದುವರೆಗಿನ ನನ್ನ ತಿಳುವಳಿಕೆಯನ್ನು ಗೇಲಿ ಮಾಡುವಂತಿತ್ತು. ಪಾಠದ ಪ್ರತಿ ಪದವೂ ಪ್ರಾಮಾಣಿಕತೆಯಿಂದ ಕೂಡಿದ್ದುದಾಗಿತ್ತು. ತನ್ನ ಅನುಭವಕ್ಕೆ ಬಂದ ಸತ್ಯವನ್ನು ಮಾತ್ರ ಹೇಳುತ್ತಿತ್ತು. ನಾನು ಅದುವರೆಗೆ ತಿಳಿದುಕೊಂಡು ಬಂದ ವಿಚಾರಕ್ಕೆ ತದ್ವಿರುದ್ಧವಾದುದಾಗಿತ್ತು. ಆ ಪಾಠವನ್ನು ಓದುತ್ತೋದುತ್ತ ಒಬ್ಬ ಸತ್ಯಾನ್ವೇಷಿಯ ಎದುರು ಕುಳಿತಂತೆ ಭಾಸವಾಯಿತು. ನನ್ನೆದುರು ಲೇಖಕ ಪಟ್ಟುಹಿಡಿದು ಕೂತಿದ್ದ. ನಾನು ಅಕ್ಷರಶಃ ಮಿಸುಕಾಡದಂತೆ ಚಿತ್ತಾಗಿ ಹೋಗಿದ್ದೆ. ಮುಕ್ತ ಚಿಂತನೆಯ ಫಲವಾಗಿತ್ತು ಆ ಪಾಠ. ಜನರ ಒಳಿತೊಂದೇ ಅದರ ಉದ್ದೇಶವಾಗಿತ್ತು. ನೇರವಾಗಿಯೂ, ಸರಳವಾಗಿಯೂ ಜನರಿಗೆ ತಲುಪಿಸುವುದೊಂದೇ ಅದರ ತಂತ್ರಗಾರಿಕೆಯಾಗಿತ್ತು.

ಆ ಪಾಠ ನನ್ನನ್ನು ಪುಸ್ತಕದ ಅಂಗಡಿಗೆ ಓಡಿಸಿಕೊಂಡು ಹೋಯಿತು. ಪಾಠವನ್ನು ಆಯ್ಕೆ ಮಾಡಿದ್ದ ಶಿವರಾಮ ಕಾರಂತರ 'ಬಾಳ್ವೆಯೇ ಬೆಳಕು' ಪುಸ್ತಕವನ್ನು ಕೊಂಡು ತರಬೇಕಿತ್ತು. ಅದೇ ಪ್ರಥಮ ಬಾರಿಗೆ ನಾನೊಬ್ಬ ಅದೃಶ್ಯ ಗುರುವಿನ ಮಾಂತ್ರಿಕತೆಗೆ ಒಳಗಾಗಿದ್ದೆ.

ಆ ಪುಸ್ತಕವು ಕೇವಲ ನೂರು ಪುಟಗಳಷ್ಟಿರುವ ಸಣ್ಣ ಪುಸ್ತಕ, ಕೆಲವೇ ಗಂಟೆಗಳಲ್ಲಿ ಓದಿ ಮುಗಿಸುವಷ್ಟು! ಪುಸ್ತಕವನ್ನು ಇಡಿಯಾಗಿ ಮತ್ತೆ ಮತ್ತೆ ಓದಿದ ಮೇಲೆ ಅದು ಇನ್ನಷ್ಟು ಆಪ್ತವಾಯಿತು. ನನ್ನೊಳಗೆಲ್ಲೋ ಅನೇಕ ಕಿಟಕಿಗಳು ತೆರೆದುಕೊಂಡವು. ಅನೇಕ ಪ್ರಶ್ನೆಗಳಿಗೆ ಅಲ್ಲಿ ಉತ್ತರವಿತ್ತು. ಎಲ್ಲ ದೇವರು, ಧರ್ಮಗಳ ಬಗ್ಗೆ ಹೊಸ ಚಿಂತನೆ ತೆರೆದುಕೊಳ್ಳುತ್ತಾ ಹೋಯಿತು. ಎಲ್ಲರ ಅನುಭವ ಒಂದೇ ಆಗಿರಬೇಕಿಲ್ಲ ಎಂಬ ಸರಳ ಸತ್ಯವನ್ನು ಪುಸ್ತಕ ಹೇಳುತ್ತಿತ್ತು. ನನ್ನ ಬದುಕಲ್ಲಿ ಹೊಸ ಉತ್ಸಾಹ, ಮೂಡಿತು. ಅರಿವಿನ ಕ್ಷಿತಿಜಗಳು ಹಿಗ್ಗಿಕೊಂಡವು. ಬದುಕಿನಲ್ಲಿ ವಿಮರ್ಶಾತೀತವಾದದ್ದು ಏನೂ ಇಲ್ಲ ಎಂಬುದನ್ನು ತಿಳಿಸಿತ್ತು. ನನಗೆ ಆಪ್ತ ಬರಹಗಾರನೊಬ್ಬ ಸಿಕ್ಕಿದ್ದ.

ಅನೇಕ ಸಂಗತಿಗಳ, ಅಭಿರುಚಿಗಳ ಈ ಪ್ರಪಂಚದಲ್ಲಿ ನನ್ನಂಥ ಚಂಚಲಚಿತ್ತರು ಸಾಹಿತ್ಯಲೋಕಕ್ಕೆ ಇಲ್ಲಿಯವರೆಗೆ ಅಂಟಿಕೊಂಡಿರುವುದಕ್ಕೆ 'ಬಾಳ್ವೆಯೇ ಬೆಳಕು' ಕಾರಣವಾಯಿತು. ಆಗ 16-17 ವರ್ಷದ ನಾನು ಕಾರಂತರಿಂದ ಎಷ್ಟು ಆಕರ್ಷಿತನಾದೆನೆಂದರೆ ಪಿಯುಸಿಯಲ್ಲಿ ಓದುತ್ತಿದ್ದರೂ ಅವರ ೩೦ ಕ್ಕೂ ಹೆಚ್ಚು ಕಾದಂಬರಿಗಳನ್ನು ಅದೇ ವರ್ಷ ಓದಿ ಮುಗಿಸಿದೆ.




ಇದಾದ ನಂತರದ ಐವತ್ತು ವರ್ಷಗಳಲ್ಲಿ ಅನೇಕ ಬರಹಗಾರರ ಪುಸ್ತಕಗಳು ನನ್ನನ್ನು ಪ್ರಭಾವಿಸಿವೆ. ಆದರೆ ಮೊದಲ ಬಾರಿಗೆ ನನ್ನ ಕೈಹಿಡಿದದ್ದು ಮತ್ತು ಭದ್ರ ಬುನಾದಿ ಹಾಕಿದ್ದು 'ಬಾಳ್ವೆಯೇ ಬೆಳಕು' ಪುಸ್ತಕವೇ. ಜೀವನದ ಅನೇಕ ಬಿಕ್ಕಟ್ಟುಗಳಲ್ಲಿ ಅದು ನನ್ನ ಸಹಾಯಕ್ಕೆ ಬಂದಿದೆ, ನನ್ನ ಪ್ರಜ್ಞೆಯ ಭಾಗವಾಗಿ ಉಳಿದುಬಿಟ್ಟಿದೆ.

-ಮಿರ್ಜಾ ಬಷೀರ್, ಪಶುವೈದ್ಯಕೀಯ ಇಲಾಖೆಯ ನಿವೃತ್ತ ಅಧಿಕಾರಿ ಮತ್ತು ಖ್ಯಾತ ಕನ್ನಡ ಕಥೆಗಾರರು, ತುಮಕೂರು

ಮಾರ್ಟಿನ್ ಹಾಯ್‌ಡೆಗರ್‌ನ 'ಬಿಯಿಂಗ್ ಅಂಡ್ ಟಾಯಿಮ್'

'ಇರುವುದು' ಎಂದರೇನು? ಅಂದರೆ ಇಲ್ಲಿ ಜೀವ-ವೈವಿಧ್ಯಗಳು, ನಿರ್ಜೀವ ವಸ್ತುಗಳು 'ಅಸ್ತಿತ್ವದಲ್ಲಿ' ಇವೆ ಎನ್ನುವುದಾದರೆ, ಅವುಗಳ ಇರುವಿಕೆಯ ಸ್ವರೂಪವೆಂತದು? ಅವುಗಳಿಗೂ ನಮಗೂ ಇರುವ ಸಂಬಂಧವೇನು? ಎಂದು ಶೋಧಿಸುವ ಪ್ರಸ್ತುತ ಪುಸ್ತಕ ನನ್ನ ಆಲೋಚನಾ ಕ್ರಮವನ್ನು ರೂಪಿಸುತ್ತಿದೆ.



ನಮ್ಮನ್ನು ಅಲುಗಾಡಿಸಿದ, ನಮ್ಮಿಷ್ಟದ ಒಂದು ಪುಸ್ತಕವನ್ನು ಆರಿಸುವುದು ಕಷ್ಟದ ಕೆಲಸ. ಪುಸ್ತಕಗಳ ಜೊತೆ ನಮಗಿರುವ ಸಂಬಂಧಗಳು ಸಾರ್ವಕಾಲಿಕವಾಗಿರುವುದಿಲ್ಲ. ನಮ್ಮ ಆದ್ಯತೆ, ರುಚಿ, ತವಕ, ಬಯಕೆಗಳು ಬದಲಾಗುತ್ತಿರುತ್ತವೆ. ಆದರೂ ಈ ಸಂದರ್ಭದಲ್ಲಿ ನನಗೆ ಬೌದ್ಧಿಕವಾಗಿ ಉಪಯೋಗವಾದ ಹಲವು ಪುಸ್ತಕಗಳಲ್ಲಿ,ಒಂದನ್ನು ಆಯ್ಕೆ ಮಾಡಿಕೊಳ್ಳಲೇಬೇಕಾದರೆ ಅದು ಸದ್ಯ ಮಾರ್ಟಿನ್ ಹಾಯ್‌ಡೆಗರ್‌ನ ಬಿಯಿಂಗ್ ಅಂಡ್ ಟಾಯಿಮ್ (೧೯೨೭).

ಜರ್ಮನಿಯ ಹಾಯ್‌ಡೆಗರ್ (೧೮೮೯-೧೯೭೬) ಪಾಶ್ಚಾತ್ಯ ತತ್ವಜ್ಞಾನದ ಪರಂಪರೆಗೆ ಹೊಸ ದಿಕ್ಕನ್ನು ತೋರಿಸಿದ ಮಹಾನ್ ಚಿಂತಕ. ಜೀವಮಾನವಿಡಿ ಒಂದೇ ಒಂದು ಪ್ರಶ್ನೆಯನ್ನಿಟ್ಟುಕೊಂಡು ತನ್ನ ಲೋಕಚಿಂತನೆ ನಡೆಸಿದನು. ಆ ಪ್ರಶ್ನೆ, 'Being in the world' ಈ ಜಗತ್ತಿನಲ್ಲಿ 'ಇರುವುದು' ಎಂದರೇನು? ಅಂದರೆ ಇಲ್ಲಿ ಜೀವ-ವೈವಿಧ್ಯಗಳು, ನಿರ್ಜೀವ ವಸ್ತುಗಳು 'ಅಸ್ತಿತ್ವದಲ್ಲಿ' ಇವೆ ಎನ್ನುವುದಾದರೆ, ಅವುಗಳ ಇರುವಿಕೆಯ ಸ್ವರೂಪವೆಂತದು? ಅವುಗಳಿಗೂ ನಮಗೂ ಇರುವ ಸಂಬಂಧವೇನು? ಎಂದು ಶೋಧಿಸುವ ಪ್ರಸ್ತುತ ಪುಸ್ತಕ ನನ್ನ ಆಲೋಚನಾ ಕ್ರಮವನ್ನು ರೂಪಿಸುತ್ತಿದೆ.

ಪ್ರಪಂಚದ ಅಸ್ತಿತ್ವವನ್ನು ವಿವಿಧ ಆಯಾಮಗಳ ಮೂಲಕ ಶೋಧಿಸುವ ಈ ಮೇರು ಕೃತಿಯನ್ನು ಸುಮಾರು ಮೂರು ವರ್ಷಗಳಿಂದ ಓದುತ್ತಿರುವೆ. ಇದು ನನಗೆ ಅಷ್ಟು ದಕ್ಕಿಲ್ಲವಾದರೂ, ದಕ್ಕಿದಷ್ಟು ನನ್ನ ಪಾಠ-ಪ್ರವಚನ, ಸಂಶೋಧನೆಯ ಹಾದಿಗಳನ್ನು ಹಸನು ಮಾಡುತ್ತಿದೆ. ಈ ಪ್ರಪಂಚವನ್ನು ಮಾನವಿಕ ಅಧ್ಯಯನಗಳ ನೆಲೆಯಲ್ಲಿ ನೋಡುವುದನ್ನು ಕಲಿಸುವ ನನಗೆ ಭಾಷೆ, ಸಾಹಿತ್ಯ, ಸಂಸ್ಕೃತಿಗಳೇ ಒಂದೊಂದು ಪ್ರತ್ಯೇಕ ಜಗತ್ತುಗಳಾಗಿದ್ದವು. ಈ ಗ್ರಂಥದ ನಂಟು ಬೆಳೆದ ಮೇಲೆ ನನಗೆ ಸ್ಪಷ್ಟವಾದ ಅಂಶವೇನೆಂದರೆ ಅವೇ ಒಂದೊಂದು ಜಗತ್ತು ಅಲ್ಲ, ಅವೆಲ್ಲವೂ ಈ ಜಗತ್ತಿನಲ್ಲಿ ಇರುವ ಸಂಗತಿಗಳು; ಒಂದಕ್ಕೊಂದು ಸಂಬಂಧ ಇರುವ ವಿದ್ಯಮಾನಗಳು. ಇವುಗಳನ್ನು ಉಪಯುಕ್ತವಾಗಿ ಅಧ್ಯಯನ ಮಾಡಬೇಕಾದರೆ, ಈ ಜಗತ್ತಿನ ಅಸ್ತಿತ್ವ, ರಚನೆಯನ್ನು ಕುರಿತು ಚಿಂತಿಸುವುದು ಯೋಗ್ಯವಾದುದು ಎಂದು ಅನಿಸುತ್ತಿದೆ. ಆದುದರಿಂದ, ಜಗತ್ತಿನ ಸ್ವರೂಪ, ರಚನೆಯನ್ನು ವಿಶದೀಕರಿಸುವ ಈ ಹೊತ್ತಿಗೆ ನನಗೆ ಮುಖ್ಯವಾಗುತ್ತದೆ.

ಈ ಗ್ರಂಥದ ಪ್ರಕಾರ ಅಸ್ತಿತ್ವದಲ್ಲಿರುವ ಎಲ್ಲ 'entity'ಗಳಲ್ಲಿ ಮನುಷ್ಯನ ಅಸ್ತಿತ್ವ ಅನನ್ಯವಾದುದು. ಏಕೆಂದರೆ ಮನುಷ್ಯ ಜೀವಿ ಅಷ್ಟೇ ತನ್ನ ಅಸ್ತಿತ್ವ(ಕೇವಲ ಜೀವಂತವಾಗಿ ಬದುಕುವ ಅರ್ಥದಲ್ಲಿ ಅಲ್ಲ! ವಿಶಾಲವಾದ ಅರ್ಥದಲ್ಲಿ) ಕುರಿತು ಕಾಳಜಿ ವಹಿಸುವ ಜೀವಿ. ಅಂದರೆ (Being is an issue for the human being) ತನ್ನ ಅಸ್ತಿತ್ವಕ್ಕಾಗಿ ಪ್ರಪಂಚವನ್ನು ಸಂಕೀರ್ಣವಾಗಿ ಉಪಯೋಗಿಸುವುದು, ಉಪಭೋಗಿಸುವುದು, ರೂಪಿಸುವುದು ಮನುಷ್ಯ ಪ್ರಾಣಿ. ಹಾಗಾಗಿ, ಈ ಪ್ರಪಂಚದಲ್ಲಿ ಮನುಷ್ಯ ಜೀವಿಯ ಸ್ಥಾನ, ಅದರ ಸಂಬಂಧವನ್ನು ವಿವರಿಸುವ ಈ ಪುಸ್ತಕ ಪ್ರಪಂಚವನ್ನು ಅರಿಯುವವರಿಗೆ, ಸಂಶೋಧಕರಿಗೆ ಗಟ್ಟಿಯಾದ ನೆಲೆಯನ್ನು ಒದಗಿಸುತ್ತದೆ.

"ಈ ಜಗತ್ತು ತನ್ನ ವಾಸ್ತವವನ್ನು ತನ್ನಷ್ಟಕ್ಕೆ ತಾನೆ ಬಿಟ್ಟು ಕೊಡುವುದಿಲ್ಲ, ಅದನ್ನು ಅಧ್ಯಯನದಿಂದ ಅರಿಯಬೇಕು" ಎಂಬ ಸರಳ ತರ್ಕವನ್ನೂ ಈ ಹೊತ್ತಿಗೆ ನನಗೆ ಮನವರಿಕೆ ಮಾಡಿಕೊಟ್ಟಿದೆ. ಇಲ್ಲಿ ಕೇಳಿಕೊಳ್ಳಲಾದ ಪ್ರಶ್ನೆಗಳು, ಮಂಡಿಸಿದ ತರ್ಕಗಳು, ತಾತ್ವಿಕ ವಿವರಣೆಗಳು ನನ್ನ ಕಣ್ಣು ತೆರೆಸುತ್ತಿವೆ. ಆದರೆ ತುಲನಾತ್ಮಕವಾಗಿ ಒಂದು ಮಾತು: ಪಶ್ಚಿಮದ ಸಂಸ್ಕೃತಿ ಪ್ರಪಂಚವನ್ನು ಕುರಿತು ಹೆಚ್ಚಾಗಿ ಸಿದ್ಧಾಂತ ಮಂಡಿಸಿದರೆ, ಪೂರ್ವ ಕಲೆ, ರೂಪಕಗಳ ಮೂಲಕ ಜಗತ್ತನ್ನು ವಿವರಿಸುತ್ತದೆ. ಹಾಯ್‌ಡೆಗರ್ ವಿವರಿಸುವ ಜಗತ್ತಿನ ಸಂಬಂಧಗಳನ್ನು ಅಲ್ಲಮಪ್ರಭುವಿನ ವಚನ ರೂಪಕಾತ್ಮಕವಾಗಿ ಹಿಡಿಯುವುದನ್ನು ಗಮನಿಸಬಹುದು:

ಎತ್ತಣ ಮಾಮರ ಎತ್ತಣ ಕೋಗಿಲೆ / ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದ ಮೇಲಣ ನೆಲ್ಲಿಯ ಕಾಯಿ / ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ ?
ಗುಹೇಶ್ವರ ಲಿಂಗಕ್ಕೆಯೂ ನಮಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ!




-ಎನ್.ಎಸ್. ಗುಂಡೂರ, ಇಂಗ್ಲಿಷ್ ಪ್ರಾಧ್ಯಾಪಕ ಮತ್ತು ಲೇಖಕ, ತುಮಕೂರು

<u>ಸಿನಿಮಾ-ನೆನಪು</u>

ಮರೆತುಹೋದ ಮಹಾನ್ ನಿರ್ದೇಶಕ ಟಿ.ವಿ ಸಿಂಗ್ ಠಾಕೂರ್.

–ಕೆ. ಪುಟ್ಟಸ್ವಾಮಿ


ಟಿ.ವಿ. ಸಿಂಗ್ ಠಾಕೂರ್ ಎಂಬುದು ಕನ್ನಡ ಚಿತ್ರ ರಸಿಕರು ಇಂದು ಮರೆತೇ ಹೋಗಿರುವ ಒಂದು ಹೆಸರಾಗಿದೆ, ಆದರೆ ಕನ್ನಡ ಚಿತ್ರರಂಗದ ಆರಂಭದ ಘಟ್ಟದಲ್ಲೇ ನಿರ್ದೇಶಕರಾಗಿ ಹಲವು ಹೊಸತನಗಳಿಗೆ ಕಾರಣರಾದ ಈ ವ್ಯಕ್ತಿ ಕನ್ನಡದ ಹಲವು ರಾಷ್ಟ್ರಪ್ರಶಸ್ತಿ ಪುರಸ್ಕೃತ ಚಿತ್ರಗಳನ್ನು ಕೊಟ್ಟ ಪ್ರತಿಭಾವಂತ. ಆದರೆ ಎಂದೂ ಪ್ರಚಾರಕ್ಕೆ ಹಾತೊರೆಯದೆ ಹಿನ್ನೆಲೆಯಲ್ಲೇ ಉಳಿದು ನಮ್ಮ ನೆನಪಿನಿಂದ ಹಾರಿಹೋಗಿರುವ ನಿರ್ದೇಶಕ. ಕನ್ನಡ ಚಿತ್ರರಂಗ ಸದಾ ನೆನೆಯಬೇಕಾದ ವ್ಯಕ್ತಿತ್ವ ಇದು.-ಸಂ.



ಕನ್ನಡ ಚಲನಚಿತ್ರರಂಗ ಇಂದು ಭಾರತೀಯ ಭಾಷೆಗಳ ಚಲನಚಿತ್ರರಂಗದ ಪ್ರಮುಖ ಉದ್ಯಮಗಳಲ್ಲೊಂದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇಡೀ ಭಾರತದಲ್ಲಿ ವರ್ಷವೊಂದರಲ್ಲಿ ಅತಿಹೆಚ್ಚು ಚಿತ್ರಗಳನ್ನು ಉತ್ಪಾದಿಸಿದ ಕೀರ್ತಿಗೂ ಭಾಜನವಾಗಿದೆ. (ಸಂಖ್ಯೆ ಹೊರತುಪಡಿಸಿ ಗುಣಮಟ್ಟ, ಲಾಭಗಳಿಕೆ ಇತ್ಯಾದಿ ಅಂಶಗಳನ್ನು ಇತರೆ ಭಾಷೆಯ ಚಿತ್ರಗಳಿಗೆ ಹೋಲಿಸಬಾರದು, ಅಷ್ಟೆ) ಆದರೆ ಆರಂಭದಲ್ಲಿ ಕನ್ನಡ ಚಲನಚಿತ್ರರಂಗವನ್ನು ಉಳಿಸಿ ಅನೇಕ ಪ್ರಯೋಗಗಳ ಮೂಲಕ ಉಪೇಕ್ಷೆಗೊಳಗಾಗಿದ್ದ ಕನ್ನಡ ಚಲನಚಿತ್ರೋದ್ಯಮಕ್ಕೆ ಮನ್ನಣೆ ತಂದುಕೊಟ್ಟ ಹಲವು ಮಹನೀಯರ ದುಡಿಮೆಯಿಂದ ಕನ್ನಡ ಚಿತ್ರರಂಗ ಇಂದು ಗಟ್ಟಿಯಾಗಿ ನಿಂತಿದೆ. ಹಾಗೆ ತಮ್ಮ ವಿಶಿಷ್ಟ ಪ್ರಯೋಗಗಳಿಂದ ಕನ್ನಡ ಚಲನಚಿತ್ರರಂಗಕ್ಕೆ ಅನೇಕ ಹೊಸತುಗಳನ್ನು ನೀಡಿಯೂ ಉಪೇಕ್ಷೆಗೊಳಗಾದ ಅನೇಕ ಚಿತ್ರನಿರ್ದೇಶಕರಿದ್ದಾರೆ. ಅಂಥವರಲ್ಲಿ ನಿರ್ದೇಶಕ ಟಿ ವಿ ಸಿಂಗ್ ಠಾಕೂರ್ ಅವರು ಪ್ರಮುಖರಾದವರು. ಇಂದಿನ ತಲೆಮಾರಿನ ಬಹುತೇಕ ಕನ್ನಡ ಚಿತ್ರ ಪ್ರೇಕ್ಷಕರಿಗೆ ಟಿ.ವಿ.ಸಿಂಗ್ ಠಾಕೂರ್ ಹೆಸರು ಹೆಚ್ಚು ತಿಳಿಯದು ಎನ್ನುವುದೂ ನಿಜ.

ಟಿ.ವಿ.ಸಿಂಗ್ ಠಾಕೂರ್ ಎಂದೊಡನೆ ಅವರ ಸಾಧನೆಯ ಜೊತೆ ಹೆಣೆದುಕೊಂಡ ಅನೇಕ ದಾಖಲೆಗಳು ನೆನಪಾಗುತ್ತವೆ. ಅವರು ಐವತ್ತರ ದಶಕದ ಉತ್ತರಾರ್ಧದಲ್ಲಿ ಮುಂಚೂಣಿಗೆ ಬಂದ ಆ ಕಾಲದ ಹೊಸ ತಲೆಮಾರಿನ ನಿರ್ದೇಶಕರು. ಕನ್ನಡ ಚಿತ್ರರಂಗದಲ್ಲಿ ಪ್ರಕಟಿತ ಸಾಹಿತ್ಯ ಕೃತಿಗಳನ್ನು, ಮುಖ್ಯವಾಗಿ ಕಾದಂಬರಿಗಳನ್ನು ತೆರೆಗೆ ಅಳವಡಿಸಿ ಆ ಪರಂಪರೆಯನ್ನು ಗಟ್ಟಿಯಾಗಿ ಮುನ್ನಡೆಸಿದವರು. ತಮ್ಮ ಚಿತ್ರಗಳ ಮೂಲಕ ಅನೇಕ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿ ಅವರ ಬೆಳವಣಿಗೆಗೆ ಕಾರಣವಾದವರು. ಇತಿಹಾಸ, ಪುರಾಣ, ಸಾಮಾಜಿಕ ಸುಧಾರಣೆ, ಕೌಟುಂಬಿಕ ವಿಘಟನೆಯ ವಸ್ತುಗಳನ್ನು ಮತ್ತು ಭಕ್ತರು ಮತ್ತು ಸಂತರ ಜೀವನಕಥನವನ್ನು ಆಧರಿಸಿದ ಚಿತ್ರಗಳನ್ನು ನಿರ್ದೇಶಿಸಿದವರು. ಮುಖ್ಯವಾಗಿ ಕನ್ನಡ ಸಂಸ್ಕೃತಿಯ ಬೇರೆ ಬೇರೆ ಸ್ವರೂಪಗಳನ್ನು ಚಿತ್ರಗಳ ಮೂಲಕ ಕಟ್ಟಿಕೊಡುವ ಪರಂಪರೆಗೊಂದು ರೂಪವನ್ನು ಕೊಟ್ಟವರು. ಚಲನಚಿತ್ರಗಳಿಗೆ ಅನಿವಾರ್ಯವೆನಿಸಿದ ಚಿತ್ರ ಸಂಗೀತದಲ್ಲಿ ಹೊಸ ಪ್ರಯೋಗಗಳಿಗೆ ನಾಂದಿ ಹಾಡಿದವರು. ಕನ್ನಡದ ಕವಿಗಳ ಗೀತೆಗಳನ್ನು ಚಿತ್ರಗಳ ಮೂಲಕ ಅಜರಾಮರಗೊಳಿಸುವ ಜೊತೆಗೆ ಸಾರ್ವಕಾಲಿಕ ಜನಪ್ರಿಯ ಗೀತೆಗಳ ಸೃಷ್ಟಿಗೆ ಕಾರಣವಾದವರು. ರಾಜ್ ಅವರ ಜನಪ್ರಿಯತೆ ಅರವತ್ತರ ದಶಕದಲ್ಲಿ ಬೆಳೆಯಲು ಠಾಕೂರ್ ಅವರು ನಿರ್ದೇಶಿಸಿದ ಭಕ್ತಿ ಮತ್ತು ಸಾಮಾಜಿಕ ಚಿತ್ರಗಳ ಕಾಣಿಕೆ ದೊಡ್ಡದು. ರಾಜ್‌ಕುಮಾರ್ ಅವರ ವೃತ್ತಿಜೀವನದ ಆರಂಭದ ದಿನಗಳಲ್ಲಿ ಜೊತೆಯಾದ ಟಿ.ವಿ ಸಿಂಗ್ ಠಾಕೂರ್ ಅವರು ತಮ್ಮ ಸತತ ಒಂಬತ್ತು ಚಿತ್ರಗಳಲ್ಲಿ ಅವರ ಎಲ್ಲ ಬಗೆಯ ನಟನಾ ಪ್ರತಿಭೆಗೆ ಸಾಣೆಹಿಡಿದರು. ಅವರು ನಿರ್ದೇಶಿಸಿದ ಒಟ್ಟು ಹದಿನೇಳು ಚಿತ್ರಗಳಲ್ಲಿ ರಾಜ್ ಅವರು ಹತ್ತು ಚಿತ್ರಗಳ ನಾಯಕರಾಗಿದ್ದರು ಎಂಬ ಅಂಶ ಈ ನಿರ್ದೇಶಕ–ನಟನ ನಡುವೆ ಇದ್ದ ಗಾಢ ಸಂಬಂಧವನ್ನು ಹೊಳೆಯಿಸುತ್ತದೆ.

ಹಾಗೆ ನೋಡಿದರೆ ಟಿ.ವಿ ಸಿಂಗ್ ಠಾಕೂರ್ ನಿರ್ದೇಶಕರಾಗಲು ಕ್ರಮಬದ್ಧ ಶಿಕ್ಷಣವನ್ನೇನೂ ಪಡೆದವರಲ್ಲ. ವ್ಯವಹರಿಸಬಹುದಾದಷ್ಟು ಕನ್ನಡ ಭಾಷೆಯ ಅರಿವು ಬಿಟ್ಟರೆ ಕನ್ನಡ ಸಾಹಿತ್ಯ ಸಂಸ್ಕೃತಿಯ ಗಾಢನಂಟು ಇದ್ದವರಲ್ಲ. ಆದರೆ ಅವರು ಕನ್ನಡ ಸಾಹಿತ್ಯಕೃತಿಗಳನ್ನು ಚಲನಚಿತ್ರಕ್ಕೆ ಅಳವಡಿಸುವ ದೊಡ್ಡ ಪರಂಪರೆಯೊಂದನ್ನು ಉದ್ಘಾಟಿಸಿದವರು. ತಮ್ಮ ಬದುಕಿನ ಬಹುಪಾಲು ಸಮಯವನ್ನು ಅಂದಿನ ಮದರಾಸಿನಲ್ಲಿಯೇ ಕಳೆದ ಅವರು ಐವತ್ತು ಅರವತ್ತರ ದಶಕದಲ್ಲಿ ಕನ್ನಡ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕಿದ ನಿರ್ದೇಶಕರಲ್ಲಿ ಅಗ್ರಗಣ್ಯರೆನಿಸಿದರು. ಆದುದರಿಂದ ಠಾಕೂರ್



'ಕೈವಾರ ಮಹಾತ್ಮೆ' ಚಿತ್ರೀಕರಣದ ಆರಂಭ: ಲೀಲಾವತಿ ಮುಂತಾದವರೊಂದಿಗೆ

ಅವರ ಸಾಧನೆ ಕನ್ನಡ ಚಿತ್ರರಂಗದ ಅಪರೂಪದ ವಿದ್ಯಮಾನಗಳಲ್ಲೊಂದು.


ರಾಜಸ್ಥಾನದಿಂದ ವಲಸೆ ಬಂದು ಕರ್ನಾಟಕದ ಹಲವು ಭಾಗಗಳಲ್ಲಿ ನೆಲೆಯಾಗಿ ಕನ್ನಡದವರೇ ಆಗಿಹೋದ ಮತ್ತು ಕನ್ನಡ ಸಂಸ್ಕೃತಿಗೆ ಬಹುದೊಡ್ಡ ಕಾಣಿಕೆ ನೀಡಿದ ಹಿಂದೀ ಮನೆಮಾತಾಡುವ ಅನೇಕ ರಜಪೂತ ಕುಟುಂಬಗಳಿವೆ. ಕನ್ನಡ ಚಿತ್ರರಂಗವನ್ನು ಅದರ ಆರಂಭದ ದಿನಗಳಲ್ಲಿ ಕಟ್ಟಿ ಬೆಳೆಸಿದ ಮಹಾತ್ಮ ಪಿಕ್ಚರ್ಸ್‌ನ ಡಿ.ಶಂಕರ ಸಿಂಗ್, ರಾಜ್ಯದ ಮುಖ್ಯಮಂತ್ರಿ ಪಟ್ಟಕ್ಕೇರಿದ ಎನ್. ಧರಂಸಿಂಗ್ ಮೊದಲಾದವರು ಅಂಥ ರಜಪೂತ ಕುಟುಂಬಕ್ಕೆ ಸೇರಿದವರು. ಟಿ.ವಿ.ಸಿಂಗ್ ಠಾಕೂರ್ ಸಹ ಇಂಥ ಕುಟುಂಬದ ಕುಡಿ.

ತಿಪಟೂರು ವಿಠ್ಠಲ್ ಸಿಂಗ್ ಠಾಕೂರ್ ಅಥವಾ ಎಲ್ಲರಿಗೂ ಪರಿಚಿತ ಹೆಸರಿನ ಟಿ.ವಿ.ಸಿಂಗ್ ಠಾಕೂರ್ ಅವರು ಮೂಲ ತಿಪಟೂರಿನಲ್ಲಿ ವಾಸವಾಗಿದ್ದ ಕೇಸರ್ ಸಿಂಗ್ ಮತ್ತು ಸುಂದರಾಬಾಯಿಯವರ ಒಬ್ಬನೇ ಮಗ. ಆದರೆ ಅವರ ವಿದ್ಯಾಭ್ಯಾಸ ಮತ್ತು ಬಾಲ್ಯದ ಬಗ್ಗೆ ಖಚಿತವಾದ ಮಾಹಿತಿ ಹೆಚ್ಚು ದಾಖಲಾಗಿಲ್ಲ. ಆದರೆ ಲಭ್ಯ ಮಾಹಿತಿಯ ಪ್ರಕಾರ ಅವರು ಉದ್ಯೋಗವನ್ನರಿಸಿ ಬಹುಬೇಗನೇ ಮದರಾಸಿಗೆ ಹೋಗಿ ಜೆಮಿನಿ ಸ್ಟುಡಿಯೋಸ್‌ನಲ್ಲಿ ಸ್ಥಿರ ಛಾಯಾಗ್ರಾಹಕ ವೃತ್ತಿಯಲ್ಲಿ ನೆಲೆಯಾದರು. ಕ್ರಮೇಣ ಆಪರೇಟಿವ್ ಕ್ಯಾಮೆರಾಮನ್ ಆಗಿ ವೃತ್ತಿಜೀವನವನ್ನು ಮುಂದುವರೆಸಿದರು. ಆ ಕಾಲದಲ್ಲಿ ಮೈಸೂರಿನಲ್ಲಿ ಲಾರಿ ಮಾಲೀಕರಾಗಿ ಪ್ರಸಿದ್ಧರಾಗಿದ್ದ ನಾರಾಯಣ ಸಿಂಗ್ ಅವರ ನಾಲ್ವರು ಹೆಣ್ಣುಮಕ್ಕಳಲ್ಲಿ ಹಿರಿಯ ಮಗಳು ಸುಂದರಬಾಯಿಯವರು ಮಹಾತ್ಮ ಪಿಕ್ಚರ್ಸ್‌ನ ಶಂಕರಸಿಂಗ್ ಮದುವೆಯಾದರೆ ಎರಡನೇ ಮಗಳು ಲಲಿತಾಬಾಯಿಯವರನ್ನು ಟಿ.ವಿ.ಸಿಂಗ್ ಠಾಕೂರ್ ಕೈಹಿಡಿದರು. ಹೀಗೆ ಕಡಿದುಹೋಗಿದ್ದ ಅವರ ಕರ್ನಾಟಕದ ನಂಟು ದಾಂಪತ್ಯ ಬದುಕಿನಿಂದಾಗಿ ನವೀಕರಣಗೊಂಡಿತು. ಮದುವೆಯ ನಂತರವೂ ಮದರಾಸಿನಲ್ಲಿಯೇ ತಮ್ಮ ವೃತ್ತಿಯನ್ನು ಮುಂದುವರೆಸಿದ ಸಿಂಗ್ ಠಾಕೂರ್ ಅವರಿಗೆ ಮೈಸೂರಿನ ನೆಂಟಸ್ತಿಕೆಯಿಂದಾಗಿ ಮದರಾಸಿನಲ್ಲಿ ಕನ್ನಡ ಚಿತ್ರನಿರ್ಮಾಣದಲ್ಲಿ ತೊಡಗಿದ್ದವರ ಸಂಪರ್ಕ ಹೆಚ್ಚು ದೊರೆಯಿತು. ಜೊತೆಗೆ ಶಿಸ್ತಿನ ಮತ್ತು ಸರಳವಾದ ಜೀವನ ಹಾಗೂ ವೃತ್ತಿಯಲ್ಲಿನ ಅವರ ಶ್ರದ್ಧೆಯಿಂದ ಕನ್ನಡ ಚಿತ್ರರಂಗದವರಿಗೆ ಹೆಚ್ಚು ಪ್ರಿಯವಾದರು.

೧೯೪೭ರಲ್ಲಿ ಚಲನಚಿತ್ರ ನಿರ್ಮಾಣ ಸಂಸ್ಥೆಯಾಗಿ ಕನ್ನಡ ಚಿತ್ರೋದ್ಯಮ ನೆಲೆಯಾಗಲು ಸತತವಾಗಿ ತೊಡಗಿಸಿಕೊಂಡಿದ್ದ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಪಾಲುದಾರರು– ಡಿ.ಶಂಕರ್ ಸಿಂಗ್, ಬಿ.ವಿಠಲಾಚಾರ್ಯ, ಜಿ.ಎನ್. ವಿಶ್ವನಾಥ ಶೆಟ್ಟಿ ಮತ್ತು ಷಡಕ್ಷರಿ ಎಂಬ ಅರಸೀಕೆರೆ ಮೂಲದ ಉದ್ಯಮಿಗಳು. ಕಾರಣಾಂತರದಿಂದ ವಿಠಲಾಚಾರ್ಯ ಮತ್ತು ಜಿ.ಎನ್. ವಿಶ್ವನಾಥಶೆಟ್ಟಿ ಪಾಲುದಾರಿಕೆಯಿಂದ ಹೊರಬಂದು ಸ್ವತಂತ್ರ ನಿರ್ಮಾಣ ಸಂಸ್ಥೆಗಳನ್ನು ಹುಟ್ಟುಹಾಕಿದರು. ವಿಶ್ವನಾಥ ಶೆಟ್ಟಿ ಅವರು ಪ್ರಾರಂಭಿಸಿದ ಸಂಸ್ಥೆ 'ವಿಶ್ವಕಲಾ ಸಂಸ್ಥೆ'. ಮೈಸೂರಿನ ನಾರಾಯಣಸಿಂಗ್ ಮತ್ತು ಪಾಲುದಾರ ಶಂಕರ್



ತಮ್ಮ ನಿರ್ದೇಶನದ ಕೊನೆಯ ಚಿತ್ರ 'ಭಾರತ ರತ್ನ' ಸೆಟ್‌ನಲ್ಲಿ ಉದಯಕುಮಾರ್‌ರೊಂದಿಗೆ



'ಓಹಿಲೇಶ್ವರ' ಚಿತ್ರದ ಒಂದು ದೃಶ್ಯ

ಸಿಂಗ್ ಅವರ ಒಡನಾಟದಿಂದಾಗಿ ಪರಿಚಯವಿದ್ದ, ಚಿತ್ರನಿರ್ಮಾಣದ ಒಳ ಹೊರಗು ಬಲ್ಲ ಟಿ.ವಿ. ಸಿಂಗ್ ಠಾಕೂರ್ ಅವರನ್ನು ಚಿತ್ರ ನಿರ್ದೇಶಿಸಲು ಆಹ್ವಾನ ನೀಡಿದರು. ಕನ್ನಡ ಭಾಷೆಯ ಬಗ್ಗೆ ತಮಗೆ ಪ್ರಭುತ್ವವಿಲ್ಲವೆಂದು ಅವರು ಆಹ್ವಾನವನ್ನು ತಿರಸ್ಕರಿಸಿದರೂ ಶೆಟ್ಟರು ಬಿಡಲಿಲ್ಲ. ಬೆಂಬಲಕ್ಕೆ ಈಗಾಗಲೇ ಚಿತ್ರ ಸಾಹಿತ್ಯದಲ್ಲಿ ಪಳಗಿರುವ ಹುಣಸೂರು ಕೃಷ್ಣಮೂರ್ತಿ ಮತ್ತು ಜಿ.ವಿ.ಅಯ್ಯರ್ ಇರುವುದರಿಂದ ಆ ಬಗ್ಗೆ ಚಿಂತಿಸದಿರಲು ತಿಳಿಸಿ ಸೋದರಿ (೧೯೫೫) ಚಿತ್ರವನ್ನು ಆರಂಭಿಸಿದರು.


ತಮಿಳಿನ ಯಶಸ್ವಿ 'ನಲ್ಲ ತಂಗಾಳ್' ಚಿತ್ರದ ಕತೆಯನ್ನು ಆಧರಿಸಿದ್ದ ಸೋದರಿ ಚಿತ್ರವು ಬೇಡರಕಣ್ಣಪ್ಪದಿಂದ ಪರಿಚಿತವಾದ ರಾಜ್‌ಕುಮಾರ್ ಪಾಲಿಗೆ ಎರಡನೇ ಚಿತ್ರ. ಭೂಮಿಕೆ ಮತ್ತು ತಾಂತ್ರಿಕ ವರ್ಗದಲ್ಲಿ ಬಹುತೇಕ ಹೊಸಬರೇ ಇದ್ದ ಸೋದರಿ ಚಿತ್ರವು ಸಾಧಾರಣ ಯಶಸ್ಸು ಗಳಿಸಿತು. ಈ ಚಿತ್ರದಲ್ಲಿ ಭಾಗವಹಿಸಿದ ರಾಜ್‌ಕುಮಾರ್, ನರಸಿಂಹರಾಜು, ಬಾಲಕೃಷ್ಣ, ಜಿ.ವಿ. ಅಯ್ಯರ್, ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್, ಸಂಕಲನಕಾರ ಎನ್ ಸಿ ರಾಜನ್ ಮತ್ತು ನಿರ್ದೇಶಕ ಸಿಂಗ್ ಠಾಕೂರ್ ಅವರು ಒಂದು ತಂಡವಾಗಿ ವಿಶ್ವಕಲಾ ಸಂಸ್ಥೆಯು ನಂತರ ನಿರ್ಮಿಸಿದ ಮೂರು ಚಿತ್ರಗಳಲ್ಲಿ ಕಾರ್ಯನಿರ್ವಹಿಸಿತು. ವಿಶ್ವಕಲಾ ಅವರ ಮುಂದಿನ ಚಿತ್ರ 'ಹರಿಭಕ್ತ'(೧೯೫೬) ಚಿತ್ರವೂ ತಮಿಳಿನಲ್ಲಿ ಸತತ ಎರಡು ವರ್ಷ ಪ್ರದರ್ಶನ ಕಂಡು ದಾಖಲೆ ಮಾಡಿದ್ದ, ಎಂ.ಕೆ.ತ್ಯಾಗರಾಜ ಭಾಗವತರ್ ಅಭಿನಯದ 'ಹರಿದಾಸ' ಚಿತ್ರವನ್ನು ಆಧರಿಸಿತ್ತು. ದೈವನಿಂದಕ ಮತ್ತು ದುರ್ವರ್ತನೆಯ ಮಗನೊಬ್ಬ ಹರಿಭಕ್ತಿ ಮತ್ತು ಜನ್ಮದಾತರ ಸೇವೆಯಲ್ಲಿ ಮುಕ್ತಿಕಾಣುವ ಭಕ್ತನೊಬ್ಬನ ಪಾತ್ರದಲ್ಲಿ ರಾಜ್ ಅವರ ಅಭಿನಯ ಅಮೋಘ ಎನ್ನುವಷ್ಟು ಸೊಗಸಾಗಿತ್ತು.

ಅನಂತರ ಅದೇ ವರ್ಷ ತಯಾರಿಸಿದ್ದ ಓಹಿಲೇಶ್ವರ ಸಹ ಭಕ್ತನೊಬ್ಬನ ಜೀವನವನ್ನು ಆಧರಿಸಿದ್ದ ಚಿತ್ರ. ರಾಜ್ ಅವರು ತಮ್ಮ ಮೊದಲ ಐದು ಚಿತ್ರಗಳ ಪೈಕಿ ನಾಲ್ಕರಲ್ಲಿ ಭಕ್ತನ ಪಾತ್ರವನ್ನು ನಿರ್ವಹಿಸಿ ತಮ್ಮ ಭಕ್ತರ ಪಾತ್ರಗಳಲ್ಲಿ ಮಿಂಚಿದರು. ಅಷ್ಟೇ ಅಲ್ಲ ಠಾಕೂರ್ ಅವರೂ ಮುಂದೆ ಕನ್ನಡನಾಡಿನ ಸಂಸ್ಕೃತಿಯ ಮೇಲೆ ಗಾಢ ಪ್ರಭಾವ ಬೀರಿದ ನಿಜ ಸಂತರಾದ ಬಸವಣ್ಣ (ಜಗಜ್ಯೋತಿ ಬಸವೇಶ್ವರ-೧೯೫೯) ಕೈವಾರ ತಾತಯ್ಯ- ಅಮರ ನಾರೇಯಣ (ಕೈವಾರ ಮಹಾತ್ಮೆ- ೧೯೬೧) ಮತ್ತು ರಾಘವೇಂದ್ರ ಯತಿ (ಮಂತ್ರಾಲಯ ಮಹಾತ್ಮೆ- ೧೯೬೬)ಗಳ ಬದುಕು ಸಾಧನೆಗಳನ್ನು ತೆರೆಯ ಮೇಲೆ ತಂದರು. ಇವೆಲ್ಲವೂ ಯಶಸ್ವಿಯಾದ ಚಿತ್ರಗಳೇ!

ಕನ್ನಡದ ಭಕ್ತಿ ಚಿತ್ರಗಳಿಗೆ ಹೊಸರೂಪ ನೀಡಿದ ಟಿ.ವಿ. ಸಿಂಗ್ ಠಾಕೂರ್ ಅವರು ಅನೇಕ ಹೊಸ ಪ್ರಯೋಗಗಳಿಗೆ ತೆರೆದುಕೊಂಡವರು. ಅವುಗಳಲ್ಲಿ ಕನ್ನಡದಲ್ಲಿ ಪ್ರಕಟಿತ ಕಾದಂಬರಿಗಳನ್ನು ತೆರೆಗೆ ಅಳವಡಿಸುವ ಬಹುಮುಖ್ಯ ಪರಂಪರೆಯೊಂದನ್ನು ಆರಂಭಿಸಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ತಮಿಳು ಮೂಲದ ನಿರ್ಮಾಪಕರು ನೀಡಿದ ಕತೆಯನ್ನು ಆಧರಿಸಿ ಅವರು ನಿರ್ದೇಶಿಸಿದ 'ಕಣ್ತೆರೆದು ನೋಡು' (೧೯೬೧) ಆ ಹೊತ್ತಿಗೆ ವಿಶಿಷ್ಟ ಕತೆಯೆನಿಸಿತ್ತು. ಆಕಸ್ಮಿಕವಾಗಿ ಕುರುಡನಾದ ಯುವ ಕವಿಯು ವಂಚಕನೊಬ್ಬನ ದೆಸೆಯಿಂದ ಕಳೆದುಕೊಂಡ ತನ್ನ ರಚನೆಗಳನ್ನು ಮತ್ತೆ ಪಡೆಯುವ ಕಥಾ ಹಂದರವಿತ್ತು. ಈ ಚಿತ್ರದ ಮೂಲಕ ಎಸ್ ಕೆ. ಭಗವಾನ್ ಸಹ ನಿರ್ದೇಶಕರಾಗಿ ಠಾಕೂರ್ ಮತ್ತು ಅಯ್ಯರ್ ಅವರನ್ನು ಕೂಡಿಕೊಂಡರು. ಮುಂದಿನ ದಿನಗಳಲ್ಲಿ ಮೂವರೂ ಅನೇಕ ಪ್ರಯೋಗಗಳನ್ನು ಮಾಡಿದರು. ಹೊಸ ಕತೆಗಳ ಶೋಧನೆಯಲ್ಲಿದ್ದ ತಂಡಕ್ಕೆ ಕನ್ನಡ ಸಾಹಿತ್ಯ ಕೃತಿಗಳನ್ನೇ ಅಳವಡಿಸಬಾರದೇಕೆ ಎಂಬ ಜಿಜ್ಞಾಸೆ ಮೂಡಿತ್ತು. ಆ ವೇಳೆಗೆ ಜಿ.ವಿ.ಅಯ್ಯರ್ ಅವರು ಶಿವರಾಮ ಕಾರಂತರ ಪ್ರಸಿದ್ಧ ಕೃತಿ 'ಚೋಮನದುಡಿ' ಕಾದಂಬರಿಯ ಹಂದರವನ್ನು ವಿನೋಬಾ ಭಾವೆ ಅವರ ಭೂದಾನ ಆಂದೋಲನದ ಆಶಯದೊಡನೆ ಹೆಣೆದು 'ಭೂದಾನ'(೧೯೬೨) ಚಿತ್ರವನ್ನು ನಿರ್ಮಿಸಿದ್ದರು. (ಆದರೆ ಕಾರಂತರು ಕತೆಯ ಕ್ರೆಡಿಟ್ ಪಡೆಯಲು ಒಪ್ಪದ ಕಾರಣ ಕತೆಯ ಮೂಲ ಅಯ್ಯರ್ ಅವರ ಹೆಸರಿಗೇ ದಾಖಲಾಗಿತ್ತು.) ಅದಕ್ಕೂ ಮುನ್ನ 'ಸಂಸ' ಅವರ ಮೈಸೂರು ಸಂಸ್ಥಾನದ ರಾಜಕೀಯ ಬಿಕ್ಕಟ್ಟುಗಳನ್ನು ಕುರಿತ ಮೂರು ನಾಟಕಗಳನ್ನು ಆಧರಿಸಿ 'ರಣಧೀರ ಕಂಠೀರವ' ತಯಾರಾಗಿತ್ತು. 'ಸ್ಕೂಲ್ ಮಾಸ್ಟರ್' ಚಿತ್ರವು ಮರಾಠಿ ಕತೆ 'ವೈಷ್ಣವಿ'ಯನ್ನು ಆಧರಿಸಿತ್ತು. ಆದರೆ ಪ್ರಕಟಿತ ಕಾದಂಬರಿಯೊಂದನ್ನು ಚಲನಚಿತ್ರಕ್ಕೆ ಅಳವಡಿಸುವ ಪ್ರಯೋಗ ಇನ್ನೂ ಸಾಧ್ಯವಾಗಿರಲಿಲ್ಲ.

ಕನ್ನಡ ಸಾಹಿತ್ಯ, ಅದರಲ್ಲೂ ಕತೆ-ಕಾದಂಬರಿಗಳ ಪರಿಚಯವಿಲ್ಲದ ಟಿ.ವಿ. ಸಿಂಗ್ ಠಾಕೂರ್ ಅವರು ಕಾದಂಬರಿಯೊಂದನ್ನು ತೆರೆಗೆ ಅಳವಡಿಸುವ ಕಾರ್ಯಕ್ಕೆ ನೆರವಿಗೆ ಬಂದವರು ಅಯ್ಯರ್, ಭಗವಾನ್ ಮತ್ತು ಅವರ ಪತ್ನಿ ಲಲಿತಾಬಾಯಿ. ಕಾದಂಬರಿಗಳಲ್ಲಿ ಕತೆಗಳನ್ನು ಹುಡುಕುತ್ತಿರುವಾಗ ಕನ್ನಡ ಕಾದಂಬರಿಗಳನ್ನು ಓದುತ್ತಿದ್ದ ಅವರ ಪತ್ನಿಯವರು ಕೃಷ್ಣಮೂರ್ತಿ ಪುರಾಣಿಕರ 'ಧರ್ಮದೇವತೆ' ಕಾದಂಬರಿಯನ್ನು ಸಲಹೆ ಮಾಡಿದರಂತೆ. ಪತ್ನಿಯಿಂದ ಹಲವಾರು ಬಾರಿ ಓದಿಸಿ ಆ ಕೌಟುಂಬಿಕ ಕತೆಯಲ್ಲಿದ್ದ 'ಸಿನಿಮೀಯ' ಗುಣವನ್ನು ಮೆಚ್ಚಿಕೊಂಡರು. ಅಣ್ಣ ತಮ್ಮಂದಿರ ನಡುವಣ ಬಾಂಧವ್ಯ, ಮನೆಗೆ ಬಂದ 'ಓದಿದ' ಸೊಸೆಯೊಬ್ಬಳಿಂದ ಅಣ್ಣ ತಮ್ಮಂದಿರ ನಡುವಣ ಬಿರುಕು, ಅತಿಯಾದ ಪ್ರೀತಿಯಿಂದ ಅಡ್ಡದಾರಿ ಹಿಡಿದು ಕೊನೆಗೆ ಕಣ್ಣು ಕಳೆದುಕೊಳ್ಳುವ ಮಗ, ಕುಟುಂಬವು ಛಿದ್ರವಾಗುವುದನ್ನು ತಡೆಯಲು ಯತ್ನಿಸುವ ಹೆಣ್ಣುಮಕ್ಕಳು- ಹೀಗೆ, ಅಂದಿನ ಸಾಂಸಾರಿಕ ಚಿತ್ರವೊಂದರ ಆಕರ್ಷಣೆಗೆ ಅಗತ್ಯವಾದ ಎಲ್ಲ ಭಾವನಾತ್ಮಕ ಅಂಶಗಳು ಮತ್ತು ನಾಟಕೀಯ ತಿರುವುಗಳು ಕಾದಂಬರಿಯಲ್ಲಿದ್ದ ಕಾರಣ ಅದನ್ನು ತೆರೆಗೆ ತರಲು ನಿರ್ಧರಿಸಿದರು. ಆ ವೇಳೆಗೆ ಸ್ವತಂತ್ರವಾಗಿ ಚಿತ್ರ ನಿರ್ಮಾಣ ಮತ್ತು ನಿರ್ದೇಶನಕ್ಕೆ ಅಯ್ಯರ್ ಇಳಿದಿದ್ದರು. ಠಾಕೂರ್ ಮತ್ತು ಭಗವಾನರ ತಂಡವನ್ನು ನಿರ್ಮಾಪಕ ಎ.ಸಿ. ನರಸಿಂಹಮೂರ್ತಿ(ಶೈಲಶ್ರೀ ಪ್ರೊಡಕ್ಷನ್ಸ್) ಕೂಡಿಕೊಂಡರು. ಮುಂದೆ ಇದೇ ತಂಡ ಕುಲವಧು, ಮಂತ್ರಾಲಯ ಮಹಾತ್ಮೆ, ಕಲಾವತಿ, ಕವಲೆರಡು ಕುಲವೊಂದು ಚಿತ್ರಗಳನ್ನು ತಯಾರಿಸಿತು.

ಧರ್ಮದೇವತೆ ಕಾದಂಬರಿಯನ್ನು ಆಧರಿಸಿ ಚಲನಚಿತ್ರವಾಗಿ ರೂಪುಗೊಂಡು ೧೯೬೨ರಲ್ಲಿ ಬಿಡುಗಡೆಯಾದ 'ಕರುಣೆಯೇ ಕುಟುಂಬದ ಕಣ್ಣು' ಚಿತ್ರಕ್ಕೆ ತಯಾರಿಕೆಯ ಕಾಲದಲ್ಲೇ ವ್ಯಾಪಕ ಪ್ರಚಾರ ದೊರೆತಿತ್ತು. ಜಿ.ಕೆ. ವೆಂಕಟೇಶ್‌ರವರು ಚಿತ್ರದ ಹಾಡೊಂದರ ಸಂಯೋಜನೆಗೆ ದಾಖಲೆಯೆನಿಸಿದ್ದ ಎಂಬತ್ತು ವಾದ್ಯಗಾರರನ್ನು ಬಳಸಿಕೊಂಡಿದ್ದು ಸಹ ದೊಡ್ಡ ಸುದ್ದಿಯಾಗಿತ್ತು. 'ಕರುಣೆಯೇ ಕುಟುಂಬದ ಕಣ್ಣು' ಹೆಚ್ಚು ಕಡಿಮೆ ಮೂಲಕತೆಗೆ ನಿಷ್ಠವಾದ ಚಿತ್ರ. ಅಡ್ಡದಾರಿ ಹಿಡಿದ ಮಗ ಕುಮಾರ್ ಪಾತ್ರದಲ್ಲಿ ರಾಜ್‌ಕುಮಾರ್ ಅಭಿನಯ ಅವರ ಹಿಂದಿನ ಚಿತ್ರಗಳಿಗಿಂತ ಭಿನ್ನವಾಗಿತ್ತು. ವಿಚಿತ್ರವೆಂದರೆ ಚಿತ್ರ ಯಶಸ್ವಿಯಾದರೂ ಕಾದಂಬರಿಗಳನ್ನು ತೆರೆಗೆ ತರುವ ಸಾಹಸಕ್ಕೆ ಇತರ ನಿರ್ದೇಶಕರು ಕೈ ಹಾಕಲಿಲ್ಲ. ಬಳಿಕ ಮತ್ತೆ ಟಿ.ವಿ. ಸಿಂಗ್ ಠಾಕೂರ್ ಅವರ ಅದೇ ತಂಡವು ಪುರಾಣಿಕರ 'ಕುಲವಧು'(೧೯೬೩) ಕಾದಂಬರಿಯನ್ನು ತೆರೆಗೆ ಅಳವಡಿಸಿತು. ಆದರೂ ಬೇರೆಯವರು ಕಾದಂಬರಿ ಪ್ರಕಾರದ ಕಡೆ ಗಮನ ಹರಿಸಲಿಲ್ಲ. ಮತ್ತೆ ೧೯೬೪ರಲ್ಲಿ ತರಾಸು ಅವರ 'ಚಂದವಳ್ಳಿಯ ತೋಟ'ವನ್ನು ತೆರೆಗೆ ತರಲು ಸಿಂಗ್ ಠಾಕೂರ್‌ರವರೇ ಪ್ರಯತ್ನಪಡಬೇಕಾಯಿತು. ಇದು ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಒಂದು ಮೈಲುಗಲ್ಲೆನಿಸಿತು. 'ಚಂದವಳ್ಳಿಯ ತೋಟ' ಚಿತ್ರವು ಅನೇಕ ಪಾತ್ರಗಳನ್ನು ಆವರಿಸಿಕೊಂಡು ಸಾಂದ್ರವಾಗಿ ಕಥೆಯನ್ನು ಹೇಳಿದ ಮೊದಲ ಪ್ರಯತ್ನವಾಗಿ ಗಮನ ಸೆಳೆಯುತ್ತದೆ. ಗ್ರಾಮೀಣ ಬದುಕಿನ ಪಲ್ಲಟ, ಸಾಮಾಜಿಕ ಸಮಸ್ಯೆಗಳು, ಕೌಟುಂಬಿಕ ವಿಘಟನೆ, ವಿರಸ, ದ್ವೇಷ ತಲುಪುವ ದುರಂತ- ಹೀಗೆ ಅನೇಕ ಎಳೆಗಳನ್ನು ನೇಯ್ದು ಹುರಿಗೊಂಡ ಚಿತ್ರವಾಗಿತ್ತು. ಚಿತ್ರದ ಒಂದೊಂದು ಎಳೆಯೇ ಒಂದು ಪ್ರತ್ಯೇಕ ಚಿತ್ರವಾಗುವಷ್ಟು ಸಮರ್ಥವಾಗಿದ್ದು ಮುಂದೆ ಇದೇ ಆಧಾರದಲ್ಲಿ ಅನೇಕ ಚಿತ್ರಗಳು ತಯಾರಾದವು. ಕಾಕತಾಳೀಯವೆಂಬಂತೆ ಈ ಚಿತ್ರದ ಬಿಡುಗಡೆಯ ನಂತರ ಕನ್ನಡ ಚಿತ್ರ ನಿರ್ಮಾಣ



ರಾಜಕುಮಾರ್ ನಾಯಕರಾಗಿರುವ 'ಹರಿಭಕ್ತ'(ಮೈನಾವತಿ), 'ಕಣ್ತೆರೆದು ನೋಡು'(ಬಾಲಕೃಷ್ಣ), 'ಕರುಣೆಯೇ ಕುಟುಂಬದ ಕಣ್ಣು'(ಲೀಲಾವತಿ), 'ಚಂದವಳ್ಳಿಯ ತೋಟ' ಚಿತ್ರಗಳ ದೃಶ್ಯಗಳು

ಸಹ ಏರತೊಡಗಿತು. ಸತತ ಮೂರು ಕಾದಂಬರಿಗಳನ್ನು ತೆರೆಗೆ ಅಳವಡಿಸುವ ಮೂಲಕ ಅವರ ಕನ್ನಡದ ಕಥಾ ಕಣಜದ ಭಂಡಾರವನ್ನು ಒಡೆದು ತೋರಿಸಿದರು. ಅನಂತರ ಅದೊಂದು ಪರಂಪರೆಯಾಗಿ ಬೆಳೆದಿದ್ದು ಈಗ ಇತಿಹಾಸ.

ಚಂದವಳ್ಳಿಯ ತೋಟದ ನಂತರ ಸಂಗೀತಗಾರ ಮತ್ತು ನರ್ತಕಿ–ಗುರು ಶಿಷ್ಯೆಯ–ನಡುವಿನ ಸಂಬಂಧದ ಹುಡುಕಾಟವಿದ್ದ 'ಕಲಾವತಿ'(೧೯೬೪) ವಿಶಿಷ್ಟ ಪ್ರಯೋಗವಾದರೂ ಹೆಚ್ಚು ಯಶಸ್ಸು ಕಾಣಲಿಲ್ಲ. ನಂತರ ನಿರ್ದೇಶಿಸಿದ 'ಕವಲೆರಡು ಕುಲವೊಂದು' ಚಿತ್ರವು ಮುಂದೆ ಅದರ ಸೂತ್ರವನ್ನಾಧರಿಸಿ ಬಂದ ಸಾಲುಸಾಲು ಕತೆಗಳಿಗೆ ಸ್ಫೂರ್ತಿಯಾಯಿತು. ಚಿಕ್ಕಂದಿನಲ್ಲಿ ದೂರವಾಗುವ ಸೋದರರಲ್ಲಿ ಒಬ್ಬ ಕಳ್ಳನಾಗಿ ಕೊನೆಗೆ ಒಂದಾಗುವ ಕಥಾಹಂದರದ ಚಿತ್ರ. ಸಾಧಾರಣ ಯಶಸ್ಸಿನ ಈ ಚಿತ್ರದ ನಂತರ ಅವರು ರಾಘವೇಂದ್ರ ಯತಿಗಳ ಬದುಕನ್ನು ಆಧರಿಸಿದ ಕತೆಯ 'ಮಂತ್ರಾಲಯ ಮಹಾತ್ಮೆ'(೧೯೬೬) ನಿರ್ದೇಶಿಸಿದರು. ರಾಘವೇಂದ್ರಸ್ವಾಮಿಗಳ ಹುಟ್ಟು, ಸ್ವಾಮಿಗಳಾದ ನಂತರ ಪವಾಡ, ಮಹಿಮೆಯನ್ನು ಸಾರುವ ಚಿತ್ರವಾಗಿ ಗಮನ ಸೆಳೆಯಿತು. ನಿರ್ದೇಶಕ ಮತ್ತು ಮುಖ್ಯ ಕಲಾವಿದ ಇಬ್ಬರೂ ಶೂದ್ರರಾದ ಕಾರಣ ಆರಂಭದಲ್ಲಿ ಎದ್ದಿದ್ದ ವಿರೋಧ ಚಿತ್ರಬಿಡುಗಡೆಯಾದ ನಂತರ ಅಭಿಮಾನವಾಗಿ ಪರಿವರ್ತನೆಯಾಯ್ತು. ದೊರೆ ಭಗವಾನ್ ಜೊತೆಯಲ್ಲಿ ಠಾಕೂರರು ಸಹ ಈ ಚಿತ್ರದ ನಿರ್ಮಾಪಕರಾಗಿದ್ದರು. ತಮ್ಮ ಅಭಿನಯವನ್ನು ರಾಜ್ ಮೆಚ್ಚಿಕೊಂಡ ಚಿತ್ರ ಇದೊಂದೆ.


ಮಂತ್ರಾಲಯ ಮಹಾತ್ಮೆ ನಂತರ ಅವರು ನಿರ್ದೇಶಿಸಿದ ಭಾಗೀರಥಿ(೧೯೬೯), ಹಸಿರು ತೋರಣ(೧೯೭೦), ಹೂಬಿಸಿಲು(೧೯೭೧), ಭಾರತದ ರತ್ನ(೧೯೭೩ ಮತ್ತು ಸುಮಂಗಲಿ(೧೯೭೮)–ಈ ಐದು ಚಿತ್ರಗಳು ಕಲೆಯ ದೃಷ್ಟಿಯಿಂದ ಅಷ್ಟೇನೂ ಯಶಸ್ಸು ಕಾಣಲಿಲ್ಲ. ಬಹುಶ; ಆ ವೇಳೆಗೆ ದೊರೆ ಭಗವಾನ್, ಪುಟ್ಟಣ್ಣ ಕಣಗಾಲ್, ಸಿದ್ಧಲಿಂಗಯ್ಯ ಅವರಂಥ ಕ್ರಿಯಾಶೀಲ ನಿರ್ದೇಶಕರ ಚಿತ್ರಗಳಿಗೆ ಕನ್ನಡ ಪ್ರೇಕ್ಷಕರು ಸ್ವಾಗತಿಸತೊಡಗಿದ್ದರು. ಅಲ್ಲದೆ ತಮಗಿಂತ ಕಿರಿಯರಾದ ಜಿ.ವಿ.ಅಯ್ಯರ್ ಅವರ ಜೊತೆ, ಮೈಸೂರು ಟಾಂಗಾ, ನಾನೇ ಭಾಗ್ಯವತಿ ಹಾಗು ಸಂಕಲನಕಾರ ಎನ್.ಸಿ.ರಾಜನ್ ಜೊತೆ ಹೇಮರೆಡ್ಡಿ ಮಲ್ಲಮ್ಮ(೧೯೭೪) ಚಿತ್ರವನ್ನು ತಮ್ಮ ವೃತ್ತಿ ಬದುಕಿನ ಕೊನೆಯಲ್ಲಿ ನಿರ್ದೇಶಿಸಬೇಕಾಯಿತು. ಹಾಗಾಗಿ ಟಿ.ವಿ. ಸಿಂಗ್ ಠಾಕೂರ್ ಕ್ರಮೇಣ ನೇಪಥ್ಯಕ್ಕೆ ಸರಿದರು.

ಐವತ್ತು ಅರವತ್ತರ ದಶಕದ ಅನೇಕ ನಿರ್ದೇಶಕರು ಮತ್ತು ನಿರ್ಮಾಪಕರು (ಶಂಕರ ಸಿಂಗ್, ಗುಬ್ಬಿ ವೀರಣ್ಣ, ಬಿ.ಆರ್. ಪಂತುಲು ಇತ್ಯಾದಿ.,) ಹಲವು ಪ್ರತಿಭೆಗಳಿಗೆ ಅವಕಾಶ ನೀಡಿ ಬೆಳೆಸುವ ಸಂಸ್ಥೆಯಂತೆ ಕೆಲಸ ಮಾಡಿರುವುದನ್ನು ಗಮನಿಸಬಹುದು. ಟಿ.ವಿ. ಸಿಂಗ್ ಠಾಕೂರ್ ಇದಕ್ಕೆ ಹೊರತಲ್ಲ. ತಮ್ಮ ಚಿತ್ರಗಳ ಮೂಲಕ ಅನೇಕ ಪ್ರತಿಭೆಗಳಿಗೆ ಅವಕಾಶ ನೀಡಿದ ಕೀರ್ತಿ ಅವರದು. ಅವರು ನಿರ್ದೇಶಿಸಿದ ಮೊದಲ ಚಿತ್ರ 'ಸೋದರಿ' ಸಂಭಾಷಣೆಗಳನ್ನು ರಚಿಸಿದ ಜಿ ವಿ ಅಯ್ಯರ್ ಅವರಿಗೂ ಸಾಹಿತಿಯಾಗಿ ಮೊದಲ ಚಿತ್ರ. ಕನ್ನಡ ಚಿತ್ರಸಂಗೀತಕ್ಕೆ ಮುಂದೆ ದೊಡ್ಡ ತಿರುವು ನೀಡಿದ ಜಿ.ಕೆ. ವೆಂಕಟೇಶ್ ಅವರಿಗೂ ಇದು ಸಂಗೀತ ನಿರ್ದೇಶಕರಾಗಿ ಮೊದಲ ಅನುಭವ. ಮುಂದೆ ಜಿ.ಕೆ.ವೆಂಕಟೇಶ್ ಅವರು ಠಾಕೂರರ ಹನ್ನೊಂದು ಚಿತ್ರಗಳಿಗೆ ಸಂಗೀತ ಸಂಯೋಜಿಸಿ ಹಲವು ಸಾರ್ವಕಾಲಿಕ ಜನಪ್ರಿಯ ಗೀತೆಗಳನ್ನು ನೀಡಿದರು. ಓಹಿಲೇಶ್ವರ ಚಿತ್ರದಲ್ಲಿ ವಚನಗಳನ್ನು ಹಾಡುವ ಮೂಲಕ ರಾಜ್‌ಕುಮಾರ್ ಅವರ ಗಾಯನ ಪ್ರತಿಭೆಗೆ ಮೊದಲು ಅವಕಾಶ ದೊರೆಯಿತು. ಹಾಗೆಯೇ ಈ ಚಿತ್ರದಲ್ಲಿ ಪಿ.ಬಿ. ಶ್ರೀನಿವಾಸ್ ರಾಜ್ ಅವರಿಗೆ ಮೊದಲಬಾರಿಗೆ ಹಿನ್ನೆಲೆ ಗೀತೆ ಹಾಡಿದರು(ನಾ ಪಾಪವದೇನಾ ಮಾಡಿದನೋ). ಆ ಮೂಲಕ ಕಲಾವಿದನ ಶರೀರ ಮತ್ತು ಗಾಯಕನ ಶಾರೀರದ ಅಪೂರ್ವ ಸಂಗಮವೊಂದು ಜರುಗಿ ಮುಂದೆ ಇತಿಹಾಸವಾಯಿತು. ಕಲಾವತಿ ಚಿತ್ರದ ಮೂಲಕ ಗುಬ್ಬಿ ವೀರಣ್ಣ ಅವರ ಮಗಳು ಜಿ.ವಿ. ಲತಾ ಅವರನ್ನು ನಾಯಕಿಯಾಗಿ ಪರಿಚಯಿಸಿದ ಠಾಕೂರ್ ಅವರು, ಕವಲೆರಡು ಕುಲವೊಂದು ಚಿತ್ರದಿಂದ ನಟ ರಮೇಶ್ ಬೆಳಕಿಗೆ ಬಂದರು. ಇವರಲ್ಲಿ ರಮೇಶ್ ನಾಯಕರಾಗಿ, ಪೋಷಕ ನಟರಾಗಿ ಕನ್ನಡ ಚಿತ್ರರಂಗದಲ್ಲಿ ದೀರ್ಘಕಾಲ ಉಳಿದರು.

ಟಿ.ವಿ. ಸಿಂಗ್ ಠಾಕೂರ್ ಅವರು ಕನ್ನಡ ಚಿತ್ರಸಂಗೀತಕ್ಕೆ ಮತ್ತು ಕನ್ನಡ ಕವಿಗಳ ಜನಪ್ರಿಯತೆಗೆ ನೀಡಿದ ಮಹತ್ವದ ಕೊಡುಗೆಯನ್ನು ಸ್ಮರಿಸಲೇಬೇಕು. ಠಾಕೂರರಿಗೆ ಸಂಗೀತದಲ್ಲಿ ಪರಿಶ್ರಮವಿತ್ತು. ಅವರ ಪತ್ನಿ ಸಿತಾರ್ ನುಡಿಸಿದರೆ ಠಾಕೂರ್ ತಬಲಾ ಸಾಥ್ ನೀಡುತ್ತಿದ್ದರಂತೆ. ಈ ಹಿನ್ನೆಲೆಯಿಂದಾಗಿ ಅವರು ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಮತ್ತು ಟಿ.ಜಿ.ಲಿಂಗಪ್ಪ ಅವರ ಜೊತೆ ದೀರ್ಘಚರ್ಚೆ ನಡೆಸುತ್ತಿದ್ದರಂತೆ. ಅದರ ಫಲವಾಗಿಯೇ ಈಗಲೂ ಜನಪ್ರಿಯವಾಗಿರುವ 'ಈ ದೇಹದಿಂದ ದೂರನಾದೆ ಏಕೆ ಆತ್ಮನೆ'(ಓಹಿಲೇಶ್ವರ), ತಾಯಿ ತಂದೆಯ ಸೇವೆಯಾ ಯೋಗ..., ದೇವಾ ದರುಶನವ ನೀಡೆಯಾ...,(ಹರಿಭಕ್ತ), ಶರಣು ಕಾವೇರಿ ತಾಯೆ, ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಬಂಗಾರದೊಡವೆ ಬೇಕೆ ನೀರೆ...(ಕಣ್ತೆರದು ನೋಡು), ಜಗಜ್ಯೋತಿ ಬಸವೇಶ್ವರ ಚಿತ್ರದಲ್ಲಿ ಅಳವಡಿಸಿರುವ ವಚನಗಳು, ಪಿ ಕಾಳಿಂಗರಾಯರು ಹಾಡಿರುವ 'ಓಮ್ ನಮೋ ನಾರಾಯಣ...(ಕೈವಾರ ಮಹಾತ್ಮೆ), ಆಶಾಗಾನಾ ಮೋಹನಾ..., ನಿಜವೋ ಸುಳ್ಳೋ ನಿರ್ಧರಿಸಿ..,(ಕರುಣೆಯೇ ಕುಟುಂಬದ ಕಣ್ಣು), ಸುಮಬಾಲೆಯ ಪ್ರೇಮದ ಸಿರಿಯೇ, ಬಳ್ಳಿಯಂಗೇ ಬಳುಕುತಲಿ..., ಓ ನನ್ನ ಬಾಂದವರೇ... (ಚಂದವಳ್ಳಿಯ ತೋಟ), ಒಂದು ದಿನ ಎಲ್ಲಿಂದಲೋ ನೀ ಬಂದೆ..., ನೀ ಯಾರೂ ಏನೋ ಸಖ...(ಹಸಿರುತೋರಣ)– ಇತ್ಯಾದಿ ಹಾಡುಗಳಿಗೆ ಇಂದಿಗೂ ತಮ್ಮ ಕೇಳುಗರನ್ನು ಸೆರೆಹಿಡಿಯುವ ಗುಣವಿದೆ. ಕನ್ನಡದ ಆಧುನಿಕ ಕವಿಗಳ ಕವನಗಳನ್ನು ಚಿತ್ರದ ಸಂದರ್ಭಗಳಿಗೆ ಅಳವಡಿಸುವ ಕಾರ್ಯವನ್ನು ಉದ್ಘಾಟಿಸಿದ್ದು ಸಹ ಇವರ ಚಿತ್ರಗಳೇ ಎಂಬುದು ವಿಶೇಷ. ಕುಲವಧು ಚಿತ್ರವು ಬೇಂದ್ರೆ ಅವರ ಯುಗ ಯುಗಾದಿ ಕಳೆದರು, ಎಂ. ಗೋವಿಂದ ಪೈ ಅವರ 'ತಾಯೆ ಬಾರ ಮೊಗವ ತೋರ..,' ಮತ್ತು ವಿ. ಸೀ ಅವರ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು..' ಕವನಗಳನ್ನು ಅಳಡಿಸುವ ಮೂಲಕ ಈ ಪರಂಪರೆಗೆ ನಾಂದಿ ಹಾಡಿದರು. ಮುಂದೆ ಅವರು ಕಲಾವತಿ ಚಿತ್ರದಲ್ಲಿ ಕುವೆಂಪು ಅವರ ಕವನ 'ಕುಹು ಕುಹೂ ಕುಹೂ ಕುಹೂ ಎನ್ನುತ ಹಾಡುವ....ಕೋಗಿಲೆಯೇ' ಮನ್ನಾಡೆಯವರ ಕಂಠದಲ್ಲಿ ಅನುರಣಿಸಿತು. ಹಾಗೆ ನೋಡಿದರೆ ಜಿ.ವಿ. ಅಯ್ಯರ್ ಅವರ ಗೀತರಚನೆ ಪ್ರತಿಭೆಯು ಕಣ್ತೆರೆದು ನೋಡು ಚಿತ್ರದ ಮೂಲಕವೇ ದೊಡ್ಡ ಮಟ್ಟದಲ್ಲಿ ಪ್ರಕಾಶಿಸಿತು. ಅಲ್ಲಿಂದಾಚೆಗೆ ಅಯ್ಯರ್ ಅವರು ಬಹುಬೇಡಿಕೆಯ ಗೀತರಚನೆಕಾರರಾದರು.

ಕುಟುಂಬದ ಎಲ್ಲರೂ ಕೂತು ನೋಡಬಹುದಾದ ಸಿನಿಮಾಗಳನ್ನು ತೆಗೆಯಬೇಕೆಂಬ ಹಂಬಲವಿದ್ದವರು ಟಿ.ವಿ. ಸಿಂಗ್ ಠಾಕೂರ್. ಅದರಂತೆ ತಮ್ಮ ಹತ್ತೊಂಬತ್ತು ಚಿತ್ರಗಳನ್ನು ರೂಪಿಸಿದರು. ಪ್ರೇಕ್ಷಕನ ಹೃದಯವನ್ನು ತಟ್ಟುವಂತೆ ಕತೆಯನ್ನು ಹೇಳುವ ಕಲೆ ಅವರಿಗೆ ಚೆನ್ನಾಗಿ ತಿಳಿದಿತ್ತು. ಕಥಾ ಚಿತ್ರಗಳಲ್ಲಿನ ಸ್ಪಷ್ಟವಾದ ಪಾತ್ರ ಚಿತ್ರಣಕ್ಕೆ ಅವರು ಒತ್ತು ನೀಡಿದ್ದಾರೆ. ಇದಕ್ಕೆ 'ಚಂದವಳ್ಳಿಯ ತೋಟ', 'ಕರುಣೆಯೇ ಕುಟುಂಬದ ಕಣ್ಣು', 'ಜಗಜ್ಯೋತಿ ಬಸವೇಶ್ವರ', 'ಮಂತ್ರಾಲಯ ಮಹಾತ್ಮೆ' ಚಿತ್ರಗಳೇ ಸಾಕ್ಷಿ.

ಜಂಟಿಯಾಗಿ ನಿರ್ದೇಶಿಸಿದ ಮೂರು ಚಿತ್ರಗಳೂ ಸೇರಿದಂತೆ ಒಟ್ಟು ಇಪ್ಪತ್ತು ಚಿತ್ರಗಳನ್ನು ಎರಡು ದಶಕದ ಅವಧಿಯಲ್ಲಿ ನಿರ್ದೇಶಿಸಿದ, ೧೭ನೇ ನವೆಂಬರ್ ೧೯೭೯ರಂದು ನಿಧನರಾದ ಟಿ.ವಿ. ಸಿಂಗ್ ಠಾಕೂರ್, ಆರ್ಥಿಕವಾಗಿ ಶ್ರೀಮಂತರಾದವರಲ್ಲ. ಜಗಜ್ಯೋತಿ ಬಸವೇಶ್ವರ ಮತ್ತು ಚಂದವಳ್ಳಿಯ ತೋಟ ಚಿತ್ರಗಳು ರಾಷ್ಟ್ರಪ್ರಶಸ್ತಿ ಗಳಿಸಿದರೂ ಮಾಧ್ಯಮಗಳಲ್ಲಿ ಹೆಚ್ಚಿನ ಮನ್ನಣೆ ದೊರಕಲಿಲ್ಲ. ಆದರೆ ಅವರು ನೀಡಿರುವ ಹಲವು ಚಿತ್ರಗಳು, ಹತ್ತಾರು ಗೀತೆಗಳು ಕನ್ನಡ ಚಿತ್ರರಂಗ ಇರುವವರೆಗೂ ಉಳಿದಿರುತ್ತವೆ.



(ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ನಿವೃತ್ತ ಅಧಿಕಾರಿಯಾದ ಲೇಖಕರು ಕನ್ನಡ ಚಿತ್ರರಂಗದ ಇತಿಹಾಸ ಕುರಿತ ಅಪರೂಪದ ಸಂಪನ್ಮೂಲ ವ್ಯಕ್ತಿಯಾಗಿದ್ದು, ಇದೇ ಕ್ಷೇತ್ರ ಕುರಿತ ಇವರ 'ಸಿನಿಮಾಯಾನ' ಕೃತಿ ೨೦೧೧ರಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತವಾಗಿದೆ.)

ಹೊಸ ಮನುಷ್ಯದ ದಶವಾರ್ಷಿಕ ವಿಶೇಷ ಸಂಚಿಕೆ-೨೦೨೨ರ ಎಲ್ಲ ಓದುಗರಿಗೂ ಶುಭಾಶಯಗಳು



ಸಿ.ಎಂ. ಅಂಗಡಿ,
ನ್ಯಾಯವಾದಿಗಳು,
ಸುಪ್ರೀಂಕೋರ್ಟ್,
ದೆಹಲಿ
ಫೋ. ೯೮೧೧೧೧೮೩೩೪
cmangadi71@gmail.com

ಹೊಸ ಮನುಷ್ಯದ ದಶವಾರ್ಷಿಕ ವಿಶೇಷ ಸಂಚಿಕೆ-೨೦೨೨ರ ಎಲ್ಲ ಓದುಗರಿಗೂ ಶುಭಾಶಯಗಳು



Kriya
towards society

ಕ್ರಿಯಾ-ಸಮಾಜದೆಡೆಗೆ (ರಿ) ಮೈಸೂರು
ಸಮಾಜಸೇವೆಗೆ ಎಂದು ನಿರ್ಮಿತವಾದ ಯುವಸಂಘಟಕರ ಸೇವಾ ಸಂಸ್ಥೆ

ಪುಸ್ತಕಾವಲೋಕನ

ಪು: ಕನ್ನಡ ಪ್ರಜ್ಞೆಯ ಸುತ್ತಮುತ್ತ(ನಾಡು-ನುಡಿ-ಚಿಂತನೆ), ಸಂ: ಡಾ ಗೀತಾ ಡಿ.ಸಿ ಮತ್ತು ನಾಗರೇಖಾ ಗಾಂವಕರ, ಪ್ರ: ಕ್ರಿಯಾ ಮಾಧ್ಯಮ, ಬೆಂಗಳೂರು (೯೦೩೬೦೮೨೦೦೫), ಪು.೩೨೪, ಬೆಲೆ ರೂ.೪೦೦/-

ಕನ್ನಡ ನಾಡು-ನುಡಿ: ಹಲವು ನೋಟಕ್ರಮಗಳು



ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಸಾಧಕ ಬಾಧಕಗಳ ಮೇಲೆ ಬೆಳಕು ಚೆಲ್ಲುವ ಕೃತಿ ಡಾ.ಗೀತಾ ಡಿ.ಸಿ. ಮತ್ತು ನಾಗರೇಖಾ ಗಾಂವಕರ ಅವರು ಸಂಪಾದಿಸಿರುವ ಲೇಖನಗಳ ಗುಚ್ಛದ 'ಕನ್ನಡ ಪ್ರಜ್ಞೆಯ ಸುತ್ತಮುತ್ತ' ಕೃತಿಯನ್ನು ಬೆಂಗಳೂರಿನ ಕ್ರಿಯಾ ಮಾಧ್ಯಮ ಸಂಸ್ಥೆಯು ಪ್ರಕಟಿಸಿದೆ. ನಾಡಿನ ಹಿರಿಯ, ಕಿರಿಯ ಬರಹಗಾರರ ಲೇಖನ, ಕೆಲವು ಸಂದರ್ಶನ, ಕವಿತೆಗಳನ್ನು ಒಳಗೊಂಡಿರುವ ಕೃತಿ ಇದಾಗಿದೆ.

'ಕನ್ನಡ ಪ್ರಜ್ಞೆಯ ಸುತ್ತಮುತ್ತ' ಕೃತಿಯು ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತರಲು ಮುಂದಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಸಾಧಕ ಬಾಧಕಗಳ ಮೇಲೆ ಬೆಳಕು ಚೆಲ್ಲುವ ಬರಹಗಳನ್ನು ಅಧಿಕ ಸಂಖ್ಯೆಯಲ್ಲಿ ಹೊಂದಿದೆ. ಜೊತೆಗೆ ಶಿಕ್ಷಣದಲ್ಲಿ ಭಾಷಾ ಮಾಧ್ಯಮದ ಪ್ರಾಮುಖ್ಯತೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಬರೆದ ಲೇಖನಗಳೂ ಇದರಲ್ಲಿವೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪದವಿ ಶಿಕ್ಷಣದಲ್ಲಿ ಭಾಷೆಯ ಕಲಿಕೆಯ ಅವಧಿಯನ್ನು ಕಡಿತಗೊಳಿಸಿರುವುದು, ಪ್ರಾಥಮಿಕ ಶಿಕ್ಷಣದ ಹಂತದಲ್ಲಾದರೂ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಇಟ್ಟುಕೊಳ್ಳಲಾರದ ಸ್ಥಿತಿ ತಲುಪಿರುವುದು, ಭಾಷಾ ಪಠ್ಯವನ್ನು ಬದಿಗೊತ್ತಿ ಕೇವಲ ಸಂವಹನ ಕೌಶಲ್ಯಕ್ಕೆ ಒತ್ತು ನೀಡುವ ಶಿಕ್ಷಣ ನೀತಿ ಯಾವ ರೀತಿ ಮಕ್ಕಳ ಕ್ರಿಯಾಶೀಲತೆಯನ್ನು ಕಿತ್ತುಕೊಳ್ಳಬಹುದು ಎಂಬ ವಿಷಯ ಸೇರಿದಂತೆ ಇದಕ್ಕೆ ಸಂಬಂಧಪಟ್ಟ ಚರ್ಚೆಯ ಹಲವು ಮಗ್ಗುಲಗಳನ್ನು ಶೋಧಿಸುವ ಬರಹಗಳು ಕೃತಿಯ ಕೇಂದ್ರವಾಗಿದೆ.

ಪದವಿ ತರಗತಿಗಳಲ್ಲಿ ವಿದ್ಯಾರ್ಥಿಗಳ ಐಚ್ಛಿಕ ವಿಷಯಗಳು ಯಾವುದೆ ಆಗಿದ್ದರೂ ಅವುಗಳೊಂದಿಗೆ ಕಡ್ಡಾಯವಾಗಿ ಪ್ರತಿಯೊಂದು ಸೆಮಿಸ್ಟರ್ ನಲ್ಲೂ ಭಾಷಾ ಶಿಕ್ಷಣ ನೀಡಬೇಕು. ಏಕೆಂದರೆ ಭಾಷಾ ಪಠ್ಯಗಳು ಸಮಾಜದ ಆಗುಹೋಗುಗಳ ಹಾಗೂ ಸಾಂಸ್ಕೃತಿಕ ಚಿಂತನೆಗಳ ಬಗ್ಗೆ ಬೆಳಕು ಚೆಲ್ಲುವುದರಿಂದ ಅದು ವಿದ್ಯಾರ್ಥಿಗಳ ಚಿಂತನಾ ಸಾಮರ್ಥ್ಯವನ್ನು ವೃದ್ಧಿಸುತ್ತದೆ ಎಂಬ ಪ್ರತಿಪಾದನೆ ಕೃತಿಯಲ್ಲಿದೆ. ಕನ್ನಡದ ಉಳಿವಿನ ಮಾರ್ಗ ಕೂಡ ಶಿಕ್ಷಣದಲ್ಲಿ ಭಾಷಾ ಪಠ್ಯದ ಕಲಿಕೆಯನ್ನು ಉಳಿಸುವುದರಲ್ಲೆ ಅಡಗಿದೆ ಎಂಬ ಚಿಂತನೆಯನ್ನು ಇಲ್ಲಿನ ಬರಹಗಳು ಬಿತ್ತಿವೆ.

ನೂತನ ಶಿಕ್ಷಣ ನೀತಿಯಲ್ಲಿ ನಮ್ಮ ಪ್ರಮುಖ ಸಾಂವಿಧಾನಿಕ ಮೌಲ್ಯಗಳಾದ ಸಮಾನತೆ, ಸಾಮಾಜಿಕ ನ್ಯಾಯ, ಸಮ ಸಮಾಜದ ವ್ಯವಸ್ಥೆ ಕಟ್ಟಿಕೊಡುವ ಬಗ್ಗೆ ಖಾತರಿ ಇಲ್ಲ. ಈ ನೀತಿ ನವ ಉದಾರವಾದಿ ಮತ್ತು ಸ್ವಜನಪಕ್ಷಪಾತಿ ಬಂಡವಾಳಶಾಹಿ ವ್ಯವಸ್ಥೆಯ ಹಿತ ಕಾಪಾಡಲು ಮುಂದಾಗಿದೆ. ಈ ಮೂಲಕ ಸಂವಿಧಾನದ ಪ್ರಮುಖ ಆಶಯಗಳನ್ನೆ ಬುಡಮೇಲು ಮಾಡುವ ದೊಡ್ಡ ಅಜೆಂಡಾ ಅದರ ಒಡಲಿನಲ್ಲಿದೆ ಎಂಬ ಆತಂಕವನ್ನು ಇಲ್ಲಿನ ಲೇಖನಗಳು ವ್ಯಕ್ತಪಡಿಸಿವೆ.

ಕೌಶಲಾಭಿವೃದ್ಧಿ ಎಂಬುದನ್ನು ಪದವಿ ಹಂತದಲ್ಲಿ ವಿದ್ಯಾರ್ಥಿಗಳಿಗೆ ಪ್ರಮುಖ ಅಂಶವಾಗಿ ಪರಿಗಣಿಸುವುದು ಯುವಜನರನ್ನು ಖಾಸಗಿ ಕಂಪನಿಗಳಿಗೆ ಅಗ್ಗದ ದರದ ಕೆಲಸಗಾರರನ್ನಾಗಿ ಪೂರೈಸುವ ಹುನ್ನಾರವಿರಬಹುದು ಎಂಬ ಅನುಮಾನವೂ ಇಲ್ಲಿನ ಬರಹಗಳಲ್ಲಿ ಕಾಣಿಸಿಕೊಂಡಿದೆ. ಜಾತಿ ವ್ಯವಸ್ಥೆ ಬಲಪಡಿಸಿ ಕೌಟುಂಬಿಕ ವೃತ್ತಿಗಳಿಗೆ ದೂಡುವ ಸನ್ನಿವೇಶ ನಿರ್ಮಾಣವಾಗುವ ಅಪಾಯದ ಬಗ್ಗೆಯೂ ಎಚ್ಚರಿಸುವ ಬರಹವಿದೆ.

ಕೌಶಲಾಭಿವೃದ್ಧಿಗೆ ಒತ್ತು ನೀಡುವ ಮೂಲಕ ಶಿಕ್ಷಣ ನೀತಿಯು ದೊಡ್ಡ ಪ್ರಮಾಣದ ಪರಿವರ್ತನೆ, ಸುಧಾರಣೆಗೆ ದಾರಿ ಮಾಡಿಕೊಡಲಿದೆ ಎಂಬ ಅಭಿಪ್ರಾಯದ ಲೇಖನವನ್ನೂ ಕೃತಿ ಒಳಗೊಂಡಿದೆ. ಈ ಮೂಲಕ ೨೦೩೦ರ ಹೊತ್ತಿಗೆ ಸುಸ್ಥಿರ ಅಭಿವೃದ್ಧಿಯ ಹೊಸದೊಂದು ಕಾರ್ಯಸೂಚಿ ಮುನ್ನಲೆಗೆ ಬರಲಿದೆ ಎಂಬ ಆಶಾವಾದವನ್ನು ವ್ಯಕ್ತಪಡಿಸಲಾಗಿದೆ.

ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗಲೂ ಮಂಡಿಸಿದ ಶಿಕ್ಷಣ ನೀತಿಯು ಶಿಕ್ಷಣದಲ್ಲಿ ವಿದೇಶಿ ಬಂಡವಾಳ ಹರಿಯಬೇಕು ಎಂಬ ಒಲವು ವ್ಯಕ್ತಪಡಿಸಿದ್ದನ್ನು ಗುರುತಿಸುವ ಲೇಖನವೂ ಇಲ್ಲಿದೆ. ತನ್ಮೂಲಕ ಶಿಕ್ಷಣ ಹೇಗೆ ಉಳ್ಳವರ ಸ್ವತ್ತಾಗುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂಬುದರ ಪರಾಮರ್ಶೆ ನಡೆಸಲಾಗಿದೆ.

ಭಾಷೆ ಎಂದರೆ ಕೇವಲ ವಾಕ್ಯ ರಚನೆಯ ಕಸರತ್ತಷ್ಟೆ ಅಲ್ಲ. ಸಂವಹನಕ್ಕೆ ಸೀಮಿತವಾದದ್ದೂ ಅಲ್ಲ. ಅದು ಸಮಾಜಗಳು, ಸಮುದಾಯಗಳು ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಕಾಪಿಟ್ಟುಕೊಳ್ಳುವ ಕಣಜವೂ ಹೌದು ಎಂದು ವಿವರಿಸುವ ಕೃತಿಯಲ್ಲಿನ ಬರಹಗಳು ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಸ್ಥಳೀಯ ಭಾಷೆಗಳು ನಿಧಾನವಾಗಿ ಕಣ್ಮರೆಯಾಗುತ್ತಿರುವ ಪರಿಯನ್ನು ಕಟ್ಟಿಕೊಟ್ಟಿವೆ.

'ಮರೆಯಾಗುತ್ತಿರುವ ಜನಾಂಗದ ಪರಿಕರಗಳನ್ನು ಮ್ಯೂಸಿಯಂನಲ್ಲಿ ಸಂಗ್ರಹಿಸಿಡಬಹುದು. ಆದರೆ ಅವರ ಭಾಷೆ, ಗಾದೆ, ನಾಣ್ನುಡಿ, ನಿಸರ್ಗ ಜಾಣ್ಮೆ, ಬೈಗುಳ, ತತ್ವಾದರ್ಶಗಳನ್ನು ಎಲ್ಲಿ ಮತ್ತು ಹೇಗೆ ಪೇರಿಸಿಡುವುದು ಎಂಬ ಪ್ರಶ್ನೆಯನ್ನು ಈ ಕೃತಿ ಎತ್ತುತ್ತದೆ.


ಭಾಷಾ ಚಳವಳಿ ಸಾಗಬೇಕಾದ ಹಾದಿಯ ಕುರಿತು ಅವಲೋಕನ ನಡೆಸಿರುವ ಬರಹಗಳೂ ಕೃತಿಯಲ್ಲಿದೆ. 'ಭಾಷಾ ಚಳವಳಿಗೆ ಭಾವೋದ್ರೇಕವೆ ಮುಖ್ಯವಾಗಬಾರದು. ಸ್ವಾಯತ್ತತೆ ಮತ್ತು ಸಮಗ್ರತೆಗಳಲ್ಲಿ ಸಾವಯವ ಸಂಬಂಧ ತರುವ ಸೈದ್ಧಾಂತಿಕ ನೆಲೆಯೊಂದನ್ನು ಬೆಳೆಸಿದರೆ ಚಳವಳಿಗಳ ವ್ಯಾಪ್ತಿ ದೊಡ್ಡದಾಗುತ್ತದೆ' ಎಂಬ ಹೊಳಹು ಇಲ್ಲಿನ ಬರಹಗಳಲ್ಲಿದೆ.

ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯದ ಕುರಿತು ಚರ್ಚೆ ತೀವ್ರವಾಗಿ ನಡೆಯುವ ರೀತಿಯಲ್ಲಿ ಹಿನ್ನಡೆ ಅನುಭವಿಸುತ್ತಿರುವ ಕನ್ನಡ ಭಾಷೆಯ ಉಳಿಯುವಿಕೆಯ ಕುರಿತು ಯಾಕೆ ಸಂವಾದ ನಡೆಯುತ್ತಿಲ್ಲ ಎಂಬ ವಿಚಾರವನ್ನೂ ಕೃತಿ ಬಿತ್ತುತ್ತದೆ. ಹೀಗೆ ಕನ್ನಡ ನಾಡು, ನುಡಿ, ಸಂಸ್ಕೃತಿ, ರಾಷ್ಟ್ರೀಯ ಶಿಕ್ಷಣ ನೀತಿ, ಶಿಕ್ಷಣದಲ್ಲಿ ಕನ್ನಡ ಮಾಧ್ಯಮ, ಭಾಷಾ ಚಳವಳಿ ಕುರಿತು ವಿಭಿನ್ನವಾದ ದೃಷ್ಟಿಕೋನಗಳನ್ನು ಇಲ್ಲಿನ ಬರಹಗಳು ಹೊಂದಿರುವುದು ಕೃತಿಯ ವೈಶಿಷ್ಟ್ಯತೆಯಾಗಿದೆ.

-ಎಂ.ರಾಘವೇಂದ್ರ

ಪು: ವಿಧವಿಧ(ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಲೇಖನಗಳು, ಲೇ: ಡಿ.ಎಸ್.ನಾಗಭೂಷಣ, ಪ್ರ: ರೂಪ ಪ್ರಕಾಶನ, ಮೈಸೂರು(೯೩೪೨೨೭೪೩೩೧) ಪು.೩೨೦, ಬೆಲೆ ರೂ.೩೦೦/-

ವಾಗ್ವಾದಗಳನ್ನು ಹುಟ್ಟುಹಾಕುವ ಕೃತಿ



ವಿಧವಿಧ ಡಿ.ಎಸ್.ನಾಗಭೂಷಣರವರ ಹೊಸ ಪುಸ್ತಕ. ಈ ಪುಸ್ತಕದ ಮೊದಲ ಭಾಗ 'ರಾಜಕಾರಣ'ವಾಗಿದ್ದು ಇದರಲ್ಲಿ 21 ಲೇಖನಗಳಿವೆ. ಎರಡನೇ ಭಾಗವಾದ 'ಪರಿಸರ-ಶಿಕ್ಷಣ-ಸಂಸ್ಕೃತಿ'ಯಲ್ಲಿ 14 ಲೇಖನಗಳಿವೆ. 'ಸಾಹಿತ್ಯ' ಮೂರನೇ ಭಾಗವಾಗಿದ್ದು 10 ಲೇಖನಗಳಿವೆ. ಭಾಗ ನಾಲ್ಕರಲ್ಲಿ 13 ಲೇಖನಗಳಿದ್ದು ಅವು ಮಾಜಿ ಪ್ರಧಾನಿ ವಾಜಪೇಯಿಯವರ ನಿಧನದಿಂದ ತೊಡಗಿ ಜಿ ಕೆ ಗೋವಿಂದ ರಾವ್ ಅವರವರೆಗಿನ 'ಶ್ರದ್ಧಾಂಜಲಿ ಬರಹ'ಗಳಾಗಿವೆ. ಕೊನೆಯಲ್ಲಿರುವುದು ಜಿ. ಬ್ರಹ್ಮಪ್ಪ ಮತ್ತು ಸಿದ್ದಲಿಂಗಯ್ಯನವರ ಕುರಿತ 'ಅನುಬಂಧ'ದ ರೂಪದಲ್ಲಿರುವ ಲೇಖನಗಳು; ನಿಜ ಅರ್ಥದಲ್ಲಿ ಅನುಬಂಧವೇ ಆಗಿರುವ ಚೇತೋಹಾರಿ ಬರಹಗಳು.

ನಮ್ಮ ಕಾಲದ ಬಹುಮುಖ್ಯ ವಿದ್ಯಮಾನಗಳ ಕುರಿತ ಇಲ್ಲಿಯ ಲೇಖನಗಳನ್ನು ಡಿಎಸ್ಎನ್ ***ವಿಧವಿಧ*** ಎಂದು ಕರೆದು ನಿರಾಳರಾಗಿದ್ದಾರೆ. ಆದರೆ ಇವನ್ನು ಓದುವ ಯಾವ ಓದುಗನೂ ನಿರಾಳನಾಗಲು ಸಾಧ್ಯವಿಲ್ಲ. ಇಲ್ಲಿರುವ ಮುಖ್ಯ ಲೇಖನಗಳು ಯಾಕೆ ಮುಖ್ಯ ಎಂಬುದನ್ನು ಮತ್ತು ಅವುಗಳ ಹಿಂದಿರುವ ತಾತ್ವಿಕ ಚೌಕಟ್ಟನ್ನು ಈ ಪುಟ್ಟ ಪರಿಚಯದಲ್ಲಿ ಕಟೆದು ನಿಲ್ಲಿಸುವುದು ಕಷ್ಟ.

ಭಾರತದ ಪ್ರಸಕ್ತ ರಾಜಕಾರಣದ ಬಗ್ಗೆ ಡಿಎಸ್ಎನ್ ಮುಂದಿಡುವ ಮುನ್ನೋಟಗಳು ಬಹಳಬಹಳ ಮುಖ್ಯವಾದವುಗಳು. ಫಾದರ್ ಸ್ಟ್ಯಾನ್ ಸ್ವಾಮಿಯವರ ಯಾತನಾಮಯ ಸಾವಿನ ಕುರಿತ ***'ಇದೊಂದು ಅಕ್ಷಮ್ಯ ಅಮಾನವೀಯ ಸಾವು'*** – ಎಂಬ ಪುಟ್ಟ ಬರೆಹ ಸಹೃದಯೀ ಭಾರತ, ನಿರ್ದಯೀ ಭಾರತವಾಗಿ ಮತಾಂತರಗೊಳ್ಳುವುದನ್ನು ಕೆಲವೇ

ಪದಗಳಲ್ಲಿ ಅಡಕವಾಗಿ ಕಟ್ಟಿದೆ. ಶೋಕವೇ ಶ್ಲೋಕವಾಗಿ 'ರಾಮಾಯಣ' ರೂಪುಗೊಂಡ ನಮ್ಮ ಈ ಮಣ್ಣಿನಲ್ಲಿ ಆದಿವಾಸಿಗಳ ಮಾನವ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದ ಪಾರ್ಕಿನ್‌ಸನ್ ಪೀಡಿತ 84 ವರ್ಷದ ತಾತನ ಸಾವು ಹುಟ್ಟಿಸಬಹುದಾದ ಶೋಕಕ್ಕೆ ಮರುಗುವವರಿಲ್ಲ ಎಂಬ ಅಂಶವೇ, ನಾವು ಸಾಮುದಾಯಿಕ ವಿವೇಕವನ್ನು ಕಳೆದುಕೊಳ್ಳುತ್ತ ಬಲಿಷ್ಟ-ಗರ್ವಿಷ್ಠ ರಾಷ್ಟ್ರವಾಗುವುದರತ್ತ ನಡೆಯುತ್ತಿರುವುದನ್ನು ಈ ಲೇಖನ ಎತ್ತಿ ತೋರಿಸುತ್ತದೆ.

ಹಾಗೆಯೇ ***ಲೋಹಿಯಾ ಚಿಂತನೆಯ ಬೆಳಕಲ್ಲಿ ಇಂದಿನ ಮೋದಿ ವಿರೋಧಿ ಮೈತ್ರಿ ರಾಜಕಾರಣದತ್ತ ಒಂದು ನೋಟ*** ಎಂಬ ಲೇಖನ ಭಾರತದ ಸಂಸದೀಯ ಮತ್ತು ಚುನಾವಣಾ ರಾಜಕಾರಣಕ್ಕೆ ಬಡಿದಿರುವ ಅಪಸ್ಮಾರವನ್ನು ಪರಿಶೀಲಿಸುತ್ತದೆ. ಲೋಹಿಯಾ ಸತ್ವದ ಪುನರುಜ್ಜೀವನವನ್ನು ಬಯಸುವ ಡಿಎಸ್‌ಎನ್, ಅದು ಸಾಧ್ಯವಾಗದೇ ಹೋದರೆ **"ಮೋದಿ ಹೋದರೂ ಹೋಗಬಹುದು. ಆದರೆ ಅವರ ರಾಜಕಾರಣ ಹೋಗಲಾರದು. ಅದು ಮತ್ತೆಮತ್ತೆ ಮರುಕಳಿಸುವ, ಪ್ರತಿಬಾರಿ ಮರುಕಳಿಸಿದಾಗಲೂ ಹೆಚ್ಚು ವಿಕಾರವಾಗುತ್ತ ಹೋಗುವ ರಾಜಕಾರಣವಾಗಬಹುದು"** ಎಂಬ ಕಾಲಜ್ಞಾನದಂತಹ ಮಾತುಗಳನ್ನಾಡುತ್ತಾರೆ.

ಡಿಎಸ್‌ಎನ್, ಪ್ರಚಲಿತ ರಾಜಕಾರಣದ ಬಗ್ಗೆ ಬರೆವ ಯಾವುದೇ ಬರೆಹದಲ್ಲಿ ತಮಗೇ ವಿಶಿಷ್ಟವಾದ ರಾಜಕೀಯ ಮೀಮಾಂಸೆಯನ್ನು ನಡೆಸುತ್ತಾರೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿರುವ ರಾಜಕೀಯ ಶಾಸ್ತ್ರಗಳ ಪ್ರಾಧ್ಯಾಪಕರು 'ಪಕ್ಷ ರಾಜಕೀಯ'ದ ಗಾಸಿಪ್‌ಗಳನ್ನು ಚಪ್ಪರಿಸುವ 'ಮಾತುಗಾರಿಕೆ'ಯಲ್ಲಿ ಪಳಗಿರುವ ಹೊತ್ತಲ್ಲಿ ಡಿಎಸ್‌ಎನ್ ಆಳವಾದ 'ರಾಜಕೀಯ ಪ್ರಜ್ಞೆ'ಯಿರುವ ಪೊಲಿಟಿಕಲ್ ಫಿಲಸಾಫರ್‌ನಂತೆ ಮಾತಾಡುವುದು ನನಗೆ ಯಾವತ್ತೂ ಅಚ್ಚರಿಯಾಗಿ ಕಂಡಿದೆ. ಅವರ ನಿಷ್ಠುರ ರಾಜಕೀಯ ಪ್ರಜ್ಞೆಯನ್ನು ಪ್ರತಿಫಲಿಸುವಂತೆ ಮಾಡುವ ಇಲ್ಲಿಯ ಲೇಖನಗಳು ನಮ್ಮ ದೇಶ-ಕಾಲವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಂತೆ ಒತ್ತಾಯಿಸುತ್ತವೆ.

ರಾಜಕೀಯ ಶಾಸ್ತ್ರ ಮತ್ತು ಸಾಹಿತ್ಯದ ಗಂಭೀರ ವಿದ್ಯಾರ್ಥಿಯಾಗಿರುವ ಡಿಎಸ್‌ಎನ್ ಕೆಲವೊಂದು ಬೀಸು ಹೇಳಿಕೆಗಳನ್ನು ಕೊಡುವುದೂ ಇದೆ. ***ಕಾಂಗ್ರೆಸ್ ಮುಕ್ತ ಭಾರತ - ನಿಜವಾಗಿಯೂ ಹಾಗೆಂದರೇನು*** ಎಂಬ ಲೇಖನದ ಕೊನೆಯಲ್ಲಿ ಅವರು ಪರಿಹಾರವನ್ನು ಸೂಚಿಸುತ್ತ **"**ಪರಿಹಾರದ ಮೊದಲ ಮೂಲವನ್ನು ನಾನು ಕಾಣುವುದು ಹಲವಾರು ಕಾರಣಗಳಿಂದಾಗಿ ಭಾಜಪದಲ್ಲೇ ಸುಪ್ತವಾಗಿರುವ ಪ್ರಜಾಸತ್ತಾತ್ಮಕ ಶಕ್ತಿಗಳ ಜಾಗೃತಿ**"** (ಪು.22) ಎಂದು ಹೇಳಿ ಬೆಚ್ಚಿ ಬೀಳಿಸುತ್ತಾರೆ. ಈ ಹೇಳಿಕೆಯನ್ನು ಸಮರ್ಥಿಸುವ ಯಾವ ಆಧಾರವೂ ಲೇಖನದಲ್ಲಿಲ್ಲ. ಭಾಜಪದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳು ಇವೆ ಎಂದು ವಾದಕ್ಕಾಗಿ ಒಪ್ಪಿಕೊಂಡರೂ, ಅವು ಎಲ್ಲಿವೆ, ಯಾರಲ್ಲಿವೆ, ಅವನ್ನು ಜಾಗೃತಿಗೊಳಿಸುವುದು ಹೇಗೆ ಮತ್ತು ಜಾಗೃತಿಗೊಳಿಸುವವರು ಯಾರು ಇತ್ಯಾದಿ ಪ್ರಶ್ನೆಗಳನ್ನು ಡಿಎಸ್‌ಎನ್ ಇದಿರ್ಗೊಳ್ಳುವುದಿಲ್ಲ.

ಪರಿಸರ-ಶಿಕ್ಷಣ-ಸಂಸ್ಕೃತಿ ಎಂಬ ಭಾಗದಲ್ಲಿ ಡಿಎಸ್‌ಎನ್‌ರವರ ಒರಿಜಿನಲ್ ಆದ ಸಮಾಜವಾದೀ ಚಿಂತನೆಗಳು ಸ್ಫುಟವಾಗಿ ಎದ್ದು ಕಾಣುತ್ತವೆ. ಇಲ್ಲಿಯ ***ವಿಜ್ಞಾನವೆಂಬ ಅಜ್ಞಾನ*** ಎಂಬ ಲೇಖನ ಎಲ್ಲ ಜ್ಞಾನಶಿಸ್ತುಗಳ ವಿದ್ಯಾರ್ಥಿಗಳು ಓದಲೇಬೇಕಾದ ಲೇಖನವಾಗಿದೆ. ಯಾಕೆಂದರೆ ಕನ್ನಡದಲ್ಲಿ ಈ ವಿಷಯವನ್ನು ಇಷ್ಟು ಸರಳವಾಗಿ ಮನಂಬುಗುವಂತೆ ಬರೆದವರು ಯಾರೂ ಇಲ್ಲ. ಅಭಿವೃದ್ಧಿ, ಸೆಕ್ಯುಲರ್‌ವಾದ, ವಿಜ್ಞಾನ, ಆಧುನಿಕತೆ, ನಾಗರಿಕತೆ ಇತ್ಯಾದಿ ವಿದ್ಯಮಾನಗಳು ಡಿಎಸ್‌ಎನ್‌ರಿಗೆ ಬರೆಯುವುದಕ್ಕೆ ಅತ್ಯಂತ ಪ್ರಿಯವಾದ ವಿಷಯಗಳು. ಇವೆಲ್ಲವನ್ನು ಸಾರಾಸಗಟಾಗಿ ತಿರಸ್ಕರಿಸುವಂತೆಯೂ ಅವರು ಬರೆಯುತ್ತಾರೆ. ಆದರೆ ಅವು ಯಾಕೆ ತಿರಸ್ಕಾರಯೋಗ್ಯ ಎಂಬುದನ್ನು ವಿಮರ್ಶಾತ್ಮಕವಾಗಿ ಹೇಳುವ ಬೌದ್ಧಿಕ ಸೂಕ್ಷ್ಮತೆಗಳು ಈ ಲೇಖನಗಳಲ್ಲಿಲ್ಲ. ವಿಜ್ಞಾನ-ಆಧುನಿಕತೆಗಳನ್ನು ತಿರಸ್ಕರಿಸುವಂತೆ ಮಾತಾಡುವವರು ಯಾರ ವಿಜ್ಞಾನ, ಯಾವ ಆಧುನಿಕತೆ ಎಂಬ ಮೂಲಭೂತ ಪ್ರಶ್ನೆಗಳನ್ನೂ ಕೇಳದಿದ್ದರೆ ಆಗ ಇವು ನಿಯೋ ಕನ್‌ಸರ್ವೇಟಿಸಮ್‌ನ ಮಾತುಗಳಾಗುತ್ತವೆ.

ಈ ಕೃತಿಯಲ್ಲಿ ಟಿ ಅವಿನಾಶ್‌ರವರು ನಡೆಸಿರುವ ಸಂದರ್ಶನ ಡಿಎಸ್‌ಎನ್‌ರವರನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ನೆರವಾಗುವಂತಿದೆ. ತಿರುಳು ತಾನೇತಾನಾಗಿರುವ ಸಂದರ್ಶನವಿದು.

ಕೊನೆಯ ಮಾತು: ಈ ಪುಸ್ತಕದಲ್ಲಿ ದೊಡ್ಡಹುಲ್ಲೂರು ರುಕ್ಕೋಜಿಯವರ ರಾಜ್‌ಕುಮಾರ್ ಪುಸ್ತಕವನ್ನು ಡಿಎಸ್‌ಎನ್ ವಿಮರ್ಶೆ ಮಾಡಿದ ಲೇಖನವಿದೆ. ಈ ವಿಮರ್ಶೆ ಸೊಗಸಾಗಿಯೂ ಇದೆ. ಆದರೆ ಇಲ್ಲಿ ಗಿರೀಶ್ ಕಾಸರವಳ್ಳಿಯವರ ಮುನ್ನುಡಿಯ ಬಗ್ಗೆ ಬರೆದ ಸಾಲುಗಳು ಬಹಳಬಹಳ ಸಮಸ್ಯಾತ್ಮಕವಾಗಿವೆ. ರಾಜ್‌ಕುಮಾರ್ ಚಿತ್ರಗಳನ್ನು ನೋಡುವ **ಒಂದು** ಬಗೆ ಇದೆ. ಅದಕ್ಕಿಂತ ಭಿನ್ನವಾಗಿ ನೋಡುವ ಬಗೆ ಬೇಕಾಗಿಲ್ಲ ಎಂಬರ್ಥದ ಡಿಎಸ್‌ಎನ್ ಮಾತು ನನ್ನಲ್ಲಿ ಗಾಬರಿ-ಖೇದ ಹುಟ್ಟಿಸಿತು.

–ನಿತ್ಯಾನಂದ ಬಿ ಶೆಟ್ಟಿ

ಪು: ಜನಪದ ಲೋಕದೃಷ್ಟಿಯ ಮೂಲಕ ಕನಕ ಸಾಹಿತ್ಯ ಅಧ್ಯಯನ(ಸಂಶೋಧನಾ ಕೃತಿ) ಲೇ: ಸುರೇಶ ನಾಗಲಮಡಿಕೆ, ಪ್ರ: ದೀಪಂಕರ ಪ್ರಕಾಶನ, ಬೆಂಗಳೂರು(೯೮೮೬೨೭೯೪೪೧) ಪು.೧೭೮, ಬೆಲೆ ರೂ.೧೭೦/-

ದೇಸಿ ಜ್ಞಾನ ಮೂಲದ ವಿಭಿನ್ನ ಶೋಧ



ನಮ್ಮ ದೇಸೀ ಜ್ಞಾನ ಪರಂಪರೆಗೆ ತನ್ನದೆ ವಿಶೇಷವಾದ ಸಾಂಸ್ಕೃತಿಕ ಹಿರಿಮೆಯಿದೆ. ನಮ್ಮ ಸಂಶೋಧನೆಗಳಿಗೆ ಮೂಲ ಆಕರವಾಗಬೇಕಿದ್ದ ದೇಶೀ ನೆಲೆಯ ವಸ್ತು ಸಂಗತಿ ಅಧ್ಯಯನದ ಸಾಧ್ಯತೆಗಳನ್ನು ನಮ್ಮ ಯುವ ಸಂಶೋಧಕರು ನಿರ್ಲಕ್ಷಿಸುತ್ತಿರುವುದು ಗಂಭೀರವಾದ ಸಂಗತಿ. ಜಾಗತೀಕರಣ ಎನ್ನುವ ಪರಿಕಲ್ಪನೆ ಬಂದಾಗಿನಿಂದ ನಮ್ಮ ನೆಲ ಮೂಲ ಸಂಸ್ಕೃತಿಯ ಚಹರೆಗಳನ್ನು ಹೆಚ್ಚು ಅಧ್ಯಯನಾತ್ಮಕವಾಗಿ ಪರಿಗಣಿಸುವ ಸಾಹಿತ್ಯ ಮೀಮಾಂಸೆಯೊಂದು ನಮ್ಮ ನಡುವೆ ಹುಟ್ಟಬೇಕಾದ ಅನಿವಾರ್ಯತೆ ಬಂದೊದಗಿದೆ. ಈ ಹಿನ್ನಲೆಯಲ್ಲಿ ಗಮನಿಸಬಹುದಾದ ಒಂದು ಕೃತಿ ಸುರೇಶ್ ನಾಗಲಮಡಿಕೆಯವರ 'ಕನಕ ಸಾಹಿತ್ಯ ಅಧ್ಯಯನ'.

ಇದುವರೆಗೂ ಕನಕದಾಸರನ್ನು ಕುರಿತು ಸಾಕಷ್ಟು ಪ್ರೌಢ ಅಧ್ಯಯನಗಳು ನಡೆದಿವೆ. ದಾಸ ಸಾಹಿತ್ಯ, ಮಧ್ಯಕಾಲೀನ ಕನ್ನಡ ಸಾಹಿತ್ಯದ ಮತ್ತು ಚರಿತ್ರೆಯ ನೆಲೆಯ ಅಧ್ಯಯನ, ಷಟ್ಪದಿ, ಸಾಂಗತ್ಯ ಮೊದಲಾದ ಛಂದೋ ರೂಪಗಳ ಅಧ್ಯಯನ, ಜಾತಿ-ಕುಲ ಮೂಲೀಯ ಸಾಮಾಜಿಕ ಅಧ್ಯಯನ, ಜಾನಪದೀಯ ಅಧ್ಯಯನ, ಕರ್ನಾಟಕ ಸಂಗೀತ ಶಾಸ್ತ್ರವನ್ನು ಆಧರಿಸಿದ ಅಧ್ಯಯನ ಇತ್ಯಾದಿ ವಿವಿಧ ಬಗೆಯ ಅಧ್ಯಯನ ಶಿಸ್ತುಗಳು ಕನಕನನ್ನು ಅರ್ಥೈಸುವ ಪ್ರಯತ್ನವನ್ನು ಮಾಡಿವೆ. ವ್ಯಾಸ ಪರಂಪರೆಯ ಪಡಿಯಚ್ಚಿನಿಂದ ಜನ ಸಾಮಾನ್ಯರ ಕನಕನ್ನು ಹೊರತೆಗೆದು ತೋರುವ ಹೊಸ ಸಂಶೋಧನೆಗಳು ಕನ್ನಡದಲ್ಲಿ ಇತ್ತೀಚಿಗೆ ವಿಶೇಷವಾಗಿ ನಡೆದಿದೆ. ಬೆಂಗಳೂರಿನ ಕನಕದಾಸ ಸಂಶೋಧನ ಕೇಂದ್ರ ಇಂತಹ ಹಲವಾರು ವಿಷಯಗಳ ಮೇಲೆ ಸಂಶೋಧನೆ ನಡೆಸಲು ಅನುವು ಮಾಡಿಕೊಟ್ಟಿದೆ. ಸುರೇಶ್ ನಾಗಲಮಡಿಕೆಯವರ ಕೃತಿಯು ಜನಪದ ಲೋಕ ದೃಷ್ಟಿಯ ಮೂಲಕ ಕನಕನನ್ನು ನೋಡುವ ವಿಭಿನ್ನ ಕ್ರಮವನ್ನು ಅನುಸರಿಸಿದೆ. ಕರ್ನಾಟಕದ ಜನ ಸಂಸ್ಕೃತಿಯ ಬೇರುಗಳಲ್ಲಿ ಹುದುಗಿರುವ 'ಜನತೆಯ ತತ್ವಶಾಸ್ತ್ರ' ಈ ನೆಲದ ಆಚಾರ-ವಿಚಾರ, ಕಥೆ ಪುರಾಣ, ಐತಿಹ್ಯಗಳನ್ನು ತಮ್ಮದೆ ನೆಲೆಯಲ್ಲಿ ಕಟ್ಟಿಕೊಟ್ಟಿದೆ. ಅವುಗಳನ್ನು ಗಮನಿಸದೆ ಚರಿತ್ರೆಯ ಯಾವುದೆ ಸತ್ಯಕ್ಕೂ ಪೂರ್ಣತೆ ಲಭಿಸುವುದಿಲ್ಲ. ಜನಪದರ ಪುರಾಣ, ಧರ್ಮ, ದೇವರ ಪರಿಕಲ್ಪನೆಗೂ ಇರುವ ವ್ಯತ್ಯಾಸವನ್ನು ಆರಂಭದಲ್ಲೆ ಗುರುತಿಸುವ ಲೇಖಕರು, ಕನ್ನಡ ಜ್ಞಾನ ಪರಂಪರೆಯ ಶೋಧಗಳಿಗೆ ಇರುವ ಸಾಂಸ್ಕೃತಿಕ ಹಿರಿಮೆಯನ್ನು ಸಾಕಷ್ಟು ಅಧ್ಯಯನಗಳ ಹಿನ್ನಲೆಯಲ್ಲಿ ವಿಶ್ಲೇಷಿಸಿದ್ದಾರೆ. ಕನಕ ತಾನು ಪ್ರತಿನಿಧಿಸುವ ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ಪಡೆದಿರುವ ಸ್ಥಾನವನ್ನು ಗಂಭೀರವಾದ ಕೆಲವು ಪ್ರಶ್ನೆಗಳ ಮೂಲಕ ಜಿಜ್ಞಾಸೆಗೆ ತೊಡಗಿಕೊಳ್ಳುವಂತೆ ಮಾಡುವುದೂ ಈ ಕೃತಿಯ ವಿಶೇಷ. ಕನಕನಂತಹ ನಾಯಕನ್ನು ನಾವು ಸ್ವೀಕರಿಸಬೇಕಾದ ದಾರಿ ಯಾವುದು? ಎನ್ನುವ ತೊಡಕುಗಳಿಗೆ ಕುಲಮೂಲೀಯ ಸಾಂಸ್ಕೃತಿಕ ನಾಯಕರೊಂದಿಗೆ ಹೋಲಿಸಿ ಇಲ್ಲಿ ನೋಡಲಾಗಿದೆ.

ಕನಕನನ್ನು ಮಾಧ್ವ ತತ್ವಗಳಿಂದ ಬಿಡಿಸಿ ಅಪ್ಪಟ ಜಾನಪದ ಪ್ರತಿಭೆಯಾಗಿಯೇ ನೋಡಬೇಕು ಎನ್ನುವ ಈ ಸಂಶೋಧಕರ ನಿಲುವಿಗೆ ಸಾಕಷ್ಟು ಆಧಾರಗಳು ಕೃತಿಯಲ್ಲಿ ದೊರೆಯುತ್ತವೆ. ಕೆಲವು ಜನಪದ ಗೀತೆಗಳಿಗೂ ಕನಕ ಕೀರ್ತನೆಗಳಿಗೂ ಇರುವ ಸಾಮ್ಯತೆಯನ್ನು ಗಮನಿಸಿದರೆ ಈ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಕನಕ ಕೀರ್ತನೆಗಳ ಪ್ರಭಾವ ಜನಪದ ರಚನೆಗಳ ಮೇಲೂ ಆಗಿರಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಕನಕ ದಾಸರು ಜನ ಸಾಮಾನ್ಯರ ಗಾದೆ, ಒಗಟು, ಅಲ್ಲಿಯ ಎಷ್ಟೋ ಪರಿಭಾಷೆಗಳನ್ನು ತಮ್ಮ ಸಾಹಿತ್ಯದಲ್ಲಿ ಬಳಸಿದ್ದಾರೆ. ಡಾ. ಹಜರತ್ ಸಾಹೇಬ್ ನದಾಫ್ ಅವರ 'ಕನಕ ದಾಸರ ಕೃತಿಗಳು ಜಾನಪದೀಯ ಅಧ್ಯಯನ' ಎಂಬ ಸಂಶೋಧನ ಕೃತಿಯನ್ನು ಗಮನಿಸಬೇಕು.

ಒಟ್ಟಿನಲ್ಲಿ ಸುರೇಶ್ ನಾಗಲ ಮಡಿಕೆಯವರು 'ಜನಪದ' ಹಾಗೂ 'ಶಿಷ್ಟ' ಪರಂಪರೆಯ ಚೌಕಟ್ಟಿನಿಂದಾಚೆಯೂ ಕನಕದಾಸರನ್ನು, ಸೂಫಿ ಸಂತರನ್ನು, ತತ್ವಪದಕಾರರನ್ನು ನೋಡಬೇಕಾದ ಹೊಸ ಸಾಧ್ಯತೆಯೊಂದನ್ನು ಸಹ ಈ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ. ದೇಶೀ ಜ್ಞಾನ ಮೂಲಗಳು ಈ ಎಲ್ಲ ತಾತ್ವಿಕತೆಯನ್ನು ಒಳಗೊಂಡಿರುವುದರಿಂದ ನಮ್ಮೆಲ್ಲಾ ಸಾಹಿತ್ಯ ಮೂಲಗಳನ್ನು ಮರು ಶೋಧಿಸುವ, ಮರು ಓದುವ ಹೊಸ ಉಪಕ್ರಮಗಳು ಸೃಷ್ಟಿಯಾಗಬೇಕಾದ ಅನಿವಾರ್ಯತೆಯನ್ನು ಪ್ರಸ್ತುತ ಕೃತಿಯು ಎತ್ತಿ ಹಿಡಿಯುತ್ತದೆ.

–ಡಾ. ಶುಭಾ ಮರವಂತೆ,

ಪು: ಕವಿಜೋಡಿಯ ಆತ್ಮಗೀತ(ಕಥಾ ಕಾವ್ಯ) ಲೇ: ನಟರಾಜ್ ಹುಳಿಯಾರ್, ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ ಜಿ. (೮೮೮೦೦೮೭೩೩೨), ಪು.೧೮೯, ಬೆಲೆ ರೂ.೧೨೦/-

ಕವಿಜೋಡಿಯ ದುರಂತಗೀತ



ಪ್ರಸಿದ್ಧ ಕವಿಗಳಾದ ಸಿಲ್ವಿಯಾ ಪ್ಲಾತ್ ಹಾಗೂ ಟೆಡ್ ಹ್ಯೂಸ್ ಅವರ ಮೋಹಕವಾದ ಪ್ರೇಮ-ಕಾಮ, ಯಾತನಾಮಯ ದಾಂಪತ್ಯ, ದಾರುಣವಾದ ಅಂತ್ಯ ಇವೆಲ್ಲವುಗಳನ್ನೂ ಒಂದೇ ದಾರದಲ್ಲಿ ಹೆಣೆದಿರುವ ನಟರಾಜ ಹುಳಿಯಾರರ "ಕವಿ ಜೋಡಿಯ ಆತ್ಮಗೀತ" ಎಂಬ ಕಥಾಕಾವ್ಯವು, ಹಲವು ಪ್ರಕಾರಗಳ ನಡುವಲ್ಲಿ ಟಿಸಿಲೊಡೆದಿರುವ ಹೊಸಬಗೆಯ ಬರವಣಿಗೆಯಾಗಿದೆ. ಈ ನಿರೂಪಣೆಯಲ್ಲಿ ಕತೆ, ಆತ್ಮಕತೆ, ಮಹಾಕಾವ್ಯ, ಇಬ್ಬರು ಕವಿಗಳನ್ನೂ ಅರಿಯಲು ಬೇಕಾಗಿರುವ ಬಹಳ ಸೂಕ್ಷ್ಮವಾದ ವಿಮರ್ಶಾತ್ಮಕ ಓದು, ಒಂದು ಇನ್ನೊಂದರ ಮೇಲೆ ಆವರಿಸಿಕೊಳ್ಳದೆ ಹದವಾಗಿ ಬೆರೆತುಕೊಂಡಿವೆ. ಈಗಾಗಲೇ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಬರೆಯಲು ಪ್ರಯತ್ನಿಸಿರುವ ನಟರಾಜರು ಎಲ್ಲವನ್ನೂ ಬೆರೆಸಿ ಹೊಸಪೀಳಿಗೆಯ ಓದುಗರಿಗೆ ಹೊಸ ಓದಿನ ಕ್ರಮವನ್ನು ಕಲಿಸಿಕೊಟ್ಟಂತಿದೆ.

ಇಬ್ಬರು ಮಹಾಸಂವೇದನಾಶೀಲ ಕವಿಗಳ ಸಾಧನೆ, ಜೀವನದ ಏಳುಬೀಳಿನ ಕಥನವನ್ನು ಹೇಳುವಾಗ ನಟರಾಜರು ಕಾವ್ಯದ ತೆಳುಚಾದರದ ಮೇಲೆ ಹಬ್ಬಿಸಿರುವ ಪಾರಿಭಾಷಿಕಗಳಿಂದ ಭಾರವಾಗದ ಚೇತೋಹಾರಿ ಗದ್ಯವನ್ನೇ ಬಳಸುತ್ತಾರೆ. ಮನೋವಿಜ್ಞಾನಿಗಳಿಗೆ, ಆಧುನಿಕ ಸ್ತ್ರೀವಾದಿಗಳಿಗೆ, ಸರ್ವಾಧಿಕಾರಿ ಧೋರಣೆಯನ್ನು ವಿರೋಧಿ ಚಿಂತನೆಗಳಿಗೆ ಸಮರ್ಥ ರೂಪಕಗಳನ್ನು ಒದಗಿಸುವ ಕಾರಣಕ್ಕಾಗಿ ವಿಶ್ವಾದ್ಯಂತ ಅಪಾರ ಜನಮನ್ನಣೆ ಪಡೆದಿರುವ ಸಿಲ್ವಿಯಾ ಪ್ಲಾತ್ ಹಾಗೂ ಆಧುನಿಕ ಜಗತ್ತಿನ ಸಾಮಾಜಿಕ ರಾಜಕೀಯ ವಿಕಾರಗಳನ್ನು ಪ್ರಾಣಿಜಗತ್ತಿನ ರೂಪಕಗಳ ಮೂಲಕ ಅಭಿವ್ಯಕ್ತಗೊಳಿಸಿದ ಟೆಡ್ ಹ್ಯೂಸ್, ಇಬ್ಬರ ಅನನ್ಯ ಪ್ರತಿಭಾ ವಿಲಾಸವನ್ನು ಪರಿಚಯಿಸಿದಂತೆಯೇ ಅವರ ವ್ಯಕ್ತಿತ್ವದ ಕೊರಕಲುಗಳಾದ ವಿಕ್ಷಿಪ್ತತೆ, ಲಂಪಟತನ, ಹಠಮಾರಿತನ ಮೊದಲಾದ ಮನುಷ್ಯ ಸಹಜ ದೌರ್ಬಲ್ಯಗಳನ್ನೂ ಕಾಣಿಸುತ್ತಾರೆ. ಈ ಕಾರಣಕ್ಕಾಗಿಯೇ ನಟರಾಜರು ಸಿಲ್ವಿಯಾ ಮತ್ತು ಟೆಡ್ ಎಂಬ ಇಬ್ಬರು ಮಹಾಕವಿಗಳ ಆತ್ಮಕತೆಯನ್ನು ಹೇಳುತ್ತಲೇ ಮನುಷ್ಯಲೋಕದ ಅಪೂರ್ಣತೆಗಳ ಕಡೆಗೂ ಬೆಳಕು ಹಾಯಿಸುತ್ತಾರೆ. ಇಬ್ಬರು ಕವಿಗಳ ಕಾವ್ಯ, ಆತ್ಮಚರಿತ್ರೆಯ ಪುಟಗಳು, ವಿಮರ್ಶೆ ಮೊದಲಾದ ಆಕರಗಳಿಂದ ರೂಪಿತವಾಗಿರುವ ಈ ಬಗೆಯ ಬರವಣಿಗೆ ಸಾಹಿತ್ಯವಿಮರ್ಶೆಯ ಏರುಹುಬ್ಬಿನ ಶೈಲಿಯನ್ನು ಪಕ್ಕಕ್ಕೆ ಸರಿಸಿದಂತೆ ಕಾಣುತ್ತದೆ.

ಟೆಡ್-ಸಿಲ್ವಿಯಾ ಅವರ ಮೋಹಕ ಪ್ರೇಮ, ಮದುವೆ, ದಾಂಪತ್ಯದ ಕಲಹ ಹಾಗೂ ಮೂವತ್ತರ ಪ್ರಾಯದಲ್ಲಿಯೇ ಸಿಲ್ವಿಯಾಳ ದಾರುಣವಾದ ಆತ್ಮಹತ್ಯೆಯ ನಾಲ್ಕು ಕವಲುಗಳಲ್ಲಿ ಹರಡಿಕೊಂಡಿರುವ ಈ ಕಥನಕಾವ್ಯದ ಆರಂಭದಲ್ಲಿ ಇಬ್ಬರೂ ಕವಿಗಳ ಬಾಲ್ಯ ಮತ್ತು ಯೌವನದ ಆಪ್ತವಾದ ವಿವರಗಳಿವೆ. ಜರ್ಮನ್ ಹಿನ್ನೆಲೆಯ ತಂದೆ-ಜ್ಯೂಯಿಶ್/ಜಿಪ್ಸಿ ಮೂಲದ ತಾಯಿಯ ಮುದ್ದಿನ ಮಗಳಾಗಿ ಬೆಳೆದ ಸಿಲ್ವಿಯಾ ಒಂಬತ್ತರ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ಆ ಕಾರಣಕ್ಕಾಗಿಯೇ ತನ್ನ ಜೀವನದುದ್ದಕ್ಕೂ ವಿಚಿತ್ರವಾದ ಅಭದ್ರತೆ, ವ್ಯಗ್ರತೆ ಮತ್ತು ವಿಹ್ವಲತೆಯ ಗುಣಗಳನ್ನು ಬೆಳೆಸಿಕೊಂಡಿದ್ದನ್ನು ನಟರಾಜರು ಬಹಳ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಹಾಗೆಯೇ ಟೆಡ್ ನ ಜೀವನ ವಿವರಗಳನ್ನು ದಾಖಲಿಸುವಾಗಲೂ ಹಳ್ಳಿಹೈದನ ಒರಟುತನ, ಪೋಲಿ ಘಟಿಂಗತನಗಳನ್ನೂ ಕಾಣಿಸುತ್ತಾರೆ. ಅದೇನೇ ಇದ್ದರೂ ಇಬ್ಬರು ಕವಿಗಳು ತಮ್ಮೆಲ್ಲ ಮಿತಿಗಳ ಆಚೆಗೂ ಒಬ್ಬರು ಇನ್ನೊಬ್ಬರ ಕಾವ್ಯದ ಮಾಂತ್ರಿಕತೆಗೆ ಮೋಹಿತರಾಗುವುದು ಅವರಿಬ್ಬರ ತಾತ್ಕಾಲಿಕ ದೈಹಿಕ ಆಕರ್ಷಣೆಗಿಂತ ಮಿಗಿಲಾದದ್ದು ಎಂಬಂತೆ ನಿರೂಪಿತವಾಗಿರುವುದು ಈ ಕಥನದ ಶಕ್ತಿಯಾಗಿದೆ. ಒಬ್ಬರು ಇನ್ನೊಬ್ಬರ ಕವಿತೆಗಳನ್ನು ತಿದ್ದುತ್ತ, ಕವಿತೆಯ ವಸ್ತುಗಳನ್ನು, ಪ್ರತಿಮೆಗಳನ್ನು ಹಂಚಿಕೊಳ್ಳುತ್ತ ಒಬ್ಬರು ಇನ್ನೊಬ್ಬರೊಳಗೊಂದಾಗಿ ಬೆಳೆಯುವ ಅಪೂರ್ವ ಸಾಂಗತ್ಯದ ಮಾದರಿಯೇ ಇಂಥದೊಂದು ಆರ್ದ್ರ ಕಥನವನ್ನು ಬರೆಯಲು ನಟರಾಜರನ್ನು ಪ್ರೇರೇಪಿಸಿದಂತೆ ಕಾಣುತ್ತದೆ.

ಇದೇ ಕಾರಣಕ್ಕಾಗಿಯೇ ಕವಿಜೋಡಿಯ ದುರಂತ ಅಂತ್ಯವೂ ಬಹಳ ಪರಿಣಾಮಕಾರಿಯಾಗಿ ನಿರೂಪಿತವಾಗಿದೆ. ಕಾವ್ಯದೇವಿಯೇ ಹೇಳಿ ಮಾಡಿಸಿದಂಥ ಜೋಡಿಯೊಂದು ಪರಸ್ಪರರ ವಿಶ್ವಾಸ ನಂಬಿಕೆಗಳನ್ನು ಉಳಿಸಿಕೊಳ್ಳಲಾಗುವುದಿಲ್ಲ. ತನ್ನ ಗಂಡ ಆಸಿಯಾ ಎಂಬುವವಳ ಜೊತೆ ಸಲಿಗೆಯಿಂದ ಇರುವುದನ್ನು ಸಹಿಸಲಾಗದೆ ತಮ್ಮಿಬ್ಬರ ಪ್ರೇಮದ ಕುರುಹಾಗಿದ್ದ ಕವಿಕುಟೀರದಿಂದ ಅವನ ಕವಿತೆ-ಟಿಪ್ಪಣಿಗಳ ಪುಸ್ತಕವನ್ನು ಸುಟ್ಟು ಟೆಡ್ ನನ್ನು ಹೊರಹಾಕುವುದು, ಕೊನೆಗೆ ಸಿಲ್ವಿಯಾ ಗ್ಯಾಸ್ ಒಲೆಗೆ ತಲೆಯೊಡ್ಡಿ ಆತ್ಮಹತ್ಯೆ ಮಾಡಿಕೊಳ್ಳುವುದು ಗಾಢವಾದ ವಿಷಾದವನ್ನು ಉಂಟುಮಾಡುತ್ತದೆ.

ಹಾಗೆ ನೋಡಿದರೆ ಮನೋವಿಜ್ಞಾನ ಮತ್ತು ಸ್ತ್ರೀವಾದಿ ಸಂಕಥನದಲ್ಲಿ ಬಹಳ ವಿವಾದಾತ್ಮಕ ಚರ್ಚೆಗಳಿಗೆ ಈಡಾಗಿರುವ ಜೀವನಕಥನವನ್ನು ನಟರಾಜರು ಬಹಳ ಸಮತೂಕದಲ್ಲಿ ನಿರ್ವಹಿಸಿರುವುದು ಬರಹದ ಅಗ್ಗಳಿಕೆಯಾಗಿದೆ. ಇಬ್ಬರ ನಡುವೆ ಸ್ವಂತವನ್ನು ಮೀರುವ ಸಂತ ದನಿ ಮೂಡದೇ ಹೋಗಿದ್ದೇ ಅರ್ಥಪೂರ್ಣವಾಗಬಹುದಾಗಿದ್ದ ಕಾವ್ಯಜೀವನವೊಂದರ ನಾಶಕ್ಕೆ ವಾಯಿತು ಎಂದು ಕಥನಕಾರ ಒತ್ತಿ ಹೇಳುತ್ತಾನೆ. ಸ್ವಂತದನ್ನೆಲ್ಲ ಬರೆಯುವ ಕವಿಗಳಿಗೆ ಸ್ವಂತದ ತೀವ್ರಶೋಧವೂ ಕೂಡ ತಮ್ಮ ಗಂಭೀರ ಜವಾಬ್ದಾರಿಯಾಗಿರಬೇಕು ಎಂದು ಹೇಳುವ ಮೂಲಕ ತಮ್ಮ ಸಂವೇದನೆಯ ಹದ ಎಂಥದ್ದು ಎಂದು ತೋರಿಸುತ್ತಾರೆ. ನವ ಸ್ತ್ರೀವಾದಿಯುಗದ ಪ್ರತಿನಿಧಿಯಂತೆ ಉಲ್ಲೇಖಿಸಲಾಗುವ ಸಿಲ್ವಿಯಾಳನ್ನು ಕುರಿತು ಬರೆಯುವಾಗ, ಗಂಡಿನ ವಂಚನೆ-ಕಡಿವಾಣಗಳನ್ನು ಕಿತ್ತೊಗೆದು ಒಬ್ಬಂಟಿಯಾಗಿ ಬದುಕಿ ಬಾಳುವ ಹೊಸಯುಗದ ಸ್ತ್ರೀವಾದಿ ಛಲವನ್ನು ಯಾಕೆ ಆಕೆ ತನ್ನ ಜೀವನದಲ್ಲಿ ತೋರಲಿಲ್ಲ ಎಂಬ ಗಂಭೀರ ಪ್ರಶ್ನೆಯನ್ನು ಕಥನದ ಮೂಲಕ ಕೇಳುತ್ತಾರೆ.

-ಎಸ್. ಸಿರಾಜ್ ಅಹಮದ್

ನೆನಪಿನ ಬುತ್ತಿ

ಪ್ರಿಯ ಓದುಗರೇ,

ಕಳೆದ ಹತ್ತು ವರ್ಷಗಳ್ಲಿ ನಾವು 110 ಸಾಮಾನ್ಯ ಸಂಚಿಕೆಗಳನ್ನೂ, ಈ ಸಂಚಿಕೆಯೂ ಸೇರಿದಂತೆ ಹತ್ತು ವಿಶೇಷಾಂಕಗಳನ್ನೂ ನಿಮ್ಮ ಕೈಗಿತ್ತಿದ್ದೇವೆ. ಇವುಗಳ್ಲಿ ಹಲವು ಹತ್ತು ಜಾಗತಿಕ, ರಾಷ್ಟ್ರೀಯ ಮತ್ತು ಸ್ಥಳೀಯ ಮಹತ್ವದ, ಸಮಕಾಲೀನ ಮತ್ತು ಸರ್ವಕಾಲೀನವೆನ್ನದಾದ ವಸ್ತು ವಿಷಯಗಳನ್ನೊಳಗೊಂಡ್ಗ ವಿಶೇಷ ಬರಹಗಳನ್ನು ನೀಡಿದ್ದೇವೆ, ಈ ಹತ್ತನೇ ವರ್ಷಧ 'ನೆನಪಿನ ಬುತ್ತಿ'ಯಾಗಿ ಇಲ್ಲಿ ಇವುಗಳಿಂದಾಯ್ದ ಕೆಲವನ್ನು ನೀಡುತ್ತಿದ್ದೇವೆ. ಪರಾಂಬರಿಸುವುದು.-ಸಂಪಾದಕ


ದಾಖಲೆ

ಸಮಾಜವಾದಿಗಳೊಡನೆ ಮಹಾತ್ಮ ಗಾಂಧಿಯವರ ಮಾತುಕತೆ (ಭಾಗ-೧)

ಕಾಂಗ್ರೆಸ್ ನಾಯಕರು ರಾಷ್ಟ ವಿಭಜನೆಗೆ ಒಪ್ಪಿಗೆ ನೀಡಲು ಸಿದ್ಧರಾಗಿದ್ದಾರೆ ಎಂದು ಅರಿವಾದೊಡನೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಅಶೋಕ ಮೆಹ್ತಾ , ಅರುಣಾ ಅಸಿಫ್ ಆಲಿ, ಅಚ್ಯುತ ಪಟವರ್ಧನ್, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಸುಮಾರು ಹನ್ನೆರಡು ಮಂದಿ ಗಂಡ ು-ಹೆಣ್ಣು ಸಹ ವರ್ತಿಗಳಿಂದೊಡಗೂಡಿದ ತಂಡವೊಂದು ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಗಾಂದಿ ೀಜಿಯನ್ನು ಭೇಟಿ ಮಾಡಿ ಕಾಂಗ್ರೆಸ್ ಪಕ್ಷದ ನಾಯಕತ್ವದ ನಿಲುವಿನ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿತು. ಅಲ್ಲದೆ ಕಾಂಗ್ರೆಸ್ ಸಹವಾಸ ತೊರೆದು, ತಮ್ಮ ಪಕ್ಷದ ನೇತೃತ್ವ ವಹಿಸುವಂತೆ ಗಾಂಧೀಜಿಯನ್ನು ಕೋರಿತು. ೧೯೪೭ರ ಮೇ ೨೭ರ ಮಧ್ಯಾಹ್ನ ೨ರಿಂದ ೪ ಘಂಟೆಯವರೆಗೆ ನಡೆದ ಈ ಮಾತುಕತೆಯಲ್ಲಿ ಗಾಂಧಿ ಆಡಿದ ಮಾತುಗಳು ಈ ಮೊದಲ ಭಾಗದಲ್ಲಿವೆ. ಮುಂದಿನ ಭಾಗದಲ್ಲಿ ಅವರು ಸಮಾಜವಾದಿಗಳ ಪ್ರಶ್ನೆಗಳಿಗೆ ನೀಡಿದ ಉತ್ತರಗಳನ್ನು ಪ್ರಟಕಟಿಸಲಾಗುವುದು.

ಇಲ್ಲಿನ ಗಾಂಧೀಜಿ ಮಾತುಗಳನ್ನು ಅಂದಿನ ರಾಜಕೀಯ ಸಂದರ್ಭದಲ್ಲಿಟ್ಟು ಮತ್ತು ಒಂದು ವರ್ಷದ ನಂತರದಲ್ಲೇ ಅಂದಿನ ಕಾಂಗ್ರೆಸ್ ಆಡಳಿತ ಕುರಿತಂತೆ ಲೋಹಿಯಾ ಅವರೊಂದಿಗೆ ಆಡಿದ ವಿಷಾದಪೂರ್ಣ ಮಾತುಗಳೊಂದಿಗೆ ಅರ್ಥ ಮಾಡಿಕೊಂಡರೆ ಇಂದಿನ ನಮಗೆ -ಸಮಾಜವಾದದಲ್ಲಿ ಇನ್ನೂ ನಂಬಿಕೆ ಇಟ್ಟವರಿಗೆ- ಆಲೋಚನೆಯ ಹೊಸ ದಿಕ್ಕುಗಳು ತೆರೆದಾವು. ಜೊತೆಗೆ ಭಾರತದ ಸಮಾಜವಾದ ಗಾಂಧಿ ನಂತರದ ದಿನಗಳಲ್ಲಿ ದಾರಿ ತಪ್ಪಿದ್ದರೆ, ಅದಕ್ಕೆ ಕಾರಣಗಳೇನು ಎಂಬುದನ್ನು ಇಲ್ಲಿನ ಗಾಂಧೀಜಿಯ ಮಾತುಗಳಲ್ಲೇ ಗುರುತಿಸಬಹುದು.

ಈ ಮಾತುಕತೆಯನ್ನು ಗುಜರಾತಿಯಿಂದ ಇಂಗ್ಲಿಷಿಗೆ ತಂದವರು ಹಿರಿಯ ಸಮಾಜವಾದಿ ಕುರ್ಬಾನ್ ಅಲಿಯವರು. ಕೃಪೆ: 'ಜನತಾ' ಪತ್ರಿಕೆ -ಸಂ



ದೇಶವನ್ನು ಇಬ್ಭಾಗ ಮಾಡುವ ಯೋಚನೆಯೇ ದಿಗಿಲುಮೂಡಿಸುವಂತಹದ್ದು. ಏನಾದರೂ ಮಾಡಿ ಶಾಂತಿಯ ಮೂಲಕವೇ ವಿಭಜನೆಯನ್ನು ನಿಲ್ಲಿಸುವುದು ಮತ್ತು ಬ್ರಿಟಿಶರನ್ನು ಇಲ್ಲಿಂದ ಹೊರಗೋಡಿಸುವುದು ನಮ್ಮ ಉದ್ದೇಶವಾಗಿತ್ತು. ಒಂದು ಪಕ್ಷ ವಿಭಜನೆ ಆಗಿದ್ದೇ ಆದರೂ, ಅದು ಬ್ರಿಟಿಷರಿಂದ ಆಗುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಅಣ್ಣತಮ್ಮಂದಿರ ಜಗಳವನ್ನು ಬಗೆಹರಿಸಲು ಮೂರನೆಯವರೊಬ್ಬರು ಯಾಕೆ ಬರಬೇಕು? ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಾಮರ್ಥ್ಯ ನಮಗೆ ಇಲ್ಲವೆ? ಅದಕ್ಕಾಗಿಯೇ ನಾನು ಪ್ರತಿಪಾದಿಸುತ್ತಿರುವ ಅಹಿಂಸೆ ಬಲಶಾಲಿಗಳ ಅಸ್ತ್ರವಲ್ಲ; ಅದು ಬೇರೆಯೇ ಆಗಿದೆ ಎಂದು ನನಗೆ ಅನಿಸುತ್ತದೆ. ಆದರೆ ದೇವರು ನನಗೆ ಕಣ್ಣು ತೆರೆಯುವಂತೆ ಮಾಡಿದ. ಅಣ್ಣತಮ್ಮಂದಿರ ನಡುವಿನ ಜಗಳವನ್ನು ಬಗೆಹರಿಸಲು ನಾವು ಬ್ರಿಟಿಷರನ್ನು ಮಧ್ಯವರ್ತಿಗಳಾಗಿ ಕರೆದರೆ ಅದು ನಮ್ಮ ಉಜ್ವಲ ಚರಿತ್ರೆಗೆ ಅಪಚಾರ ಮಾಡಿದ ಹಾಗೆ. ಆದ್ದರಿಂದಲೇ ನಾನು ಇಂದಿನ ಪ್ರಾರ್ಥನಾ ಸಭೆಯಲ್ಲಿ ಹೇಳಿದೆ: ನಾವು ಇನ್ನು ಮುಂದೆ ಅನ್ಯೋನ್ಯವಾಗಿ ಬಾಳಲು ಆಗದಿದ್ದರೆ ಪರಸ್ಪರ ಮಾತುಕತೆ-ಒಪ್ಪಂದಗಳ ಮೂಲಕ ಇದನ್ನು ಬಗೆಹರಿಸಿಕೊಳ್ಳಬೇಕೇ ಹೊರತು ಮೂರನೆಯವರ ಮಧ್ಯಸ್ತಿಕೆಯಿಂದಲ್ಲ, ಅದನ್ನೇ ನಾನು ಇಂದು ವೈಸರಾಯ್‌ರಿಗೆ ತಿಳಿಸುತ್ತೇನೆ.ಈ ವೈಸ್‌ರಾಯ್ ಸಹ ಬಹಳ ಬುದ್ಧಿವಂತ ವ್ಯಕ್ತಿ. ಆತ ಯಾರಿಗೂ ನೋವು ಉಂಟುಮಾಡದಿದ್ದರೂ, ತನ್ನ ಮಾತು ಮಾತ್ರ ತಪ್ಪದೇ ನಡೆಯುವ ಹಾಗೆ ನೋಡಿಕೊಳ್ಳಬಲ್ಲ ಚಾಣಾಕ್ಷ. ಇದು ನಮಗೆ ಇರುವ ನಿಜವಾದ ಸವಾಲು. ಇದೇ ಹೊತ್ತಿನಲ್ಲಿ ಲಾರ್ಡ್‌ಮೌಂಟ್‌ಬ್ಯಾಟನ್ ಅವರು ನಮ್ಮ ಧೈರ್ಯ-ಚಾಣಾಕ್ಷತನದ ಪ್ರಮಾಣವನ್ನೂ ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ ಎಂಬುದು ನೆನಪಿರಲಿ! ಅದಕ್ಕಾಗಿಯೇ ಗೊತ್ತಿಲ್ಲದಿರುವ ಗೆಳೆಯನಿಗಿಂತ, ಗೊತ್ತಿರುವ ವೈರಿಯೇ ಲೇಸು ಎಂಬ ಗಾದೆ ಇಲ್ಲಿ ನೆನಪಾಗುತ್ತಿದೆ.ಲಾರ್ಡ್ ಲಿನ್‌ಲಿತ್‌ಗೋ ಅಥವಾ ಲಾರ್ಡ್ ವೇವೆಲ್ ಎಂಥವರು ಎಂದು ನಮಗೆ ಗೊತ್ತು. ಯಾಕೆಂದರೆ ಅವರ ರೀತಿನೀತಿಗಳೇನು ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಸಮಾಜದ ಜನಜೀವನದಲ್ಲಿ ಸಮಾನತೆ ತರಬೇಕೆನ್ನುವ ನಿಮ್ಮ ಹಂಬಲನೋಡಿದರೆ ನನಗೆ ಸಂತೋಷವಾಗುತ್ತದೆ. ನನಗೆ ಬೇಕಾಗಿರುವುದೂ ಅದೇ.ಆಧರೆ ಅದಕ್ಕಿಂತ ಮೊದಲು-ಏನು ಮಾಡಿದರೆ ಈ ದೇಶಕ್ಕೆ ಒಳ್ಳೆಯದಾಗಬಹುದು ಮತ್ತು ಇಲ್ಲಿಯ ಜನರನ್ನು ರಚನಾತ್ಮಕವಾದ ಕೆಲಸವೊಂದರಲ್ಲಿ ತೊಡಗಿಸಿಕೊಳ್ಳುವ ರೀತಿ ಯಾವುದು- ಎಂಬ ಬಗ್ಗೆ ಯೋಚಿಸಬೇಕಾಗಿದೆ. ನಮ್ಮ ಜನ ಕಳೆದ ೧೫೦ ವರ್ಷಗಳಿಂದ ಗುಲಾಮರಾಗಿ ಜೀವನ ನಡೆಸುತ್ತಿದ್ದಾರೆ. ಅವರಿಗೆ ಹೊಸದಾದ ಜೀವನ ಕ್ರಮವೊಂದನ್ನು ಕಲಿಸಿಕೊಡಬೇಕಾಗಿದೆ.ಇದು ಸಾಧ್ಯವಾಗುವುದು ನಮ್ಮ ಬಳಿ ಅಧಿಕಾರವಿದ್ದಾಗ ಮಾತ್ರ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ನಮಗೆ ಅಧಿಕಾರದ ಹಸ್ತಾಂತರವಾದ ನಂತರ ನಮ್ಮ ಹಲವಾರು ಸಮಸ್ಯೆಗಳು ಇಲ್ಲವಾಗುತ್ತವೆ ಎಂಬ ಮಾತು ಬೇರೆ.ಆದರೆ ಅದಕ್ಕಿಂತ ಮುಂಚೆ ನಾವು ಜನರ ಮಧ್ಯೆ ಹೋಗಿ ಬಹಳ ಮುಖ್ಯವಾದ ಕೆಲಸಗಳನ್ನು ಮಾಡಬೇಕಾಗಿದೆ.

ನೀವು ನನ್ನನ್ನು ಒಬ್ಬ ಮಾರ್ಗದರ್ಶಕ ಎಂದು ಭಾವಿಸಿರುವುದರಿಂದ ಹಾಗೂ ಇಂಥ ವಿಷಯಗಳಲ್ಲಿ ನಾನು ನಿಮಗೆ ·ಧಾರಾಳವಾಗಿ ಸಲಹೆಕೊಡಬಹುದೆಂಬ ಸಲಿಗೆಯಿಂದ ಹೇಳುತ್ತಿದ್ದೇನೆ: ಸಮಾಜವಾದವನ್ನು ನೆಲೆಗೊಳಿಸಬೇಕೆಂಬುದೇ ನಿಮ್ಮ ಗುರಿಯಾದರೆ ಅದಕ್ಕಿರುವುದು ಒಂದೇ ದಾರಿ: ಹೋಗಿ ಹಳ್ಳಿಗಾಡಿನ ಬಡವರ ಜೊತೆ ಬದುಕುವುದು. ಅವರೊಳಗೆ ಒಂದಾಗಿ ದಿನಕ್ಕೆ ಎಂಟು ಗಂಟೆ ಹೊಲಗದ್ದೆಗಳಲ್ಲಿ ದುಡಿಯುತ್ತ, ಹಳ್ಳಿಯಲ್ಲಿ ಸಿಗುವ ವಸ್ತುಗಳನ್ನೇ ದಿನನಿತ್ಯದ ಜೀವನದಲ್ಲಿ ಬಳಸುತ್ತ, ಅಲ್ಲಿರುವ ಅನಕ್ಷರತೆ, ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರಯತ್ನಮಾಡುತ್ತ, ಅಲ್ಲಿನ ಹೆಣ್ಣುಮಕ್ಕಳ ಸಮಾನತೆಗಾಗಿ ಹೋರಾಡುತ್ತ, ಅವರ ಹಾಗೆಯೇ ಇದ್ದುಬಿಡುವುದು.ಅವರೊಂದಿಗೆ

ನಮ್ಮ ಸಂಬಂಧ ಎಷ್ಟು ಆಳವಾಗಿ ನೆಲೆಯೂರಬೇಕೆಂದರೆ: ನಿಮ್ಮಲ್ಲಿ ಯಾರಾದರೂ ಮದುವೆಯಾಗದವರಿದ್ದರೆ ಅವರು ಮದುವೆಯಾಗುವ ಹೊತ್ತಿನಲ್ಲಿ ಆ ಹಳ್ಳಿಗಾಡಿನ ಹುಡುಗನೋ ಹುಡುಗಿಯನ್ನೋ ಮದುವೆಯಾಗಬೇಕು. ನಿಮ್ಮನ್ನು ಯಾರಾದರೂ ಇಂಥ ವಿಷಯಗಳ ಬಗ್ಗೆ ಸಲಹೆ ಕೇಳಿದರೆ ಅವರಿಗೂ ಇದೇ ಮಾತನ್ನು ನೀವು ಹೇಳಬೇಕು. ನಿಮ್ಮ ಜೀವನವನ್ನೇ ಬೇರೆಯವರ ಪಾಲಿಗೆ ಒಂದು ಆದರ್ಶದಂತೆ ರೂಪಿಸಬೇಕು.ನಿಮ್ಮ ಜೀವನದ ಎಲ್ಲ ನಡೆನುಡಿಗಳು ಪಾರದರ್ಶಕವಾಗಿದ್ದಾಗ ಮಾತ್ರ ಅದರ ಪ್ರಭಾವ ನೀವು ವಾಸಿಸುವ ದೇಶದ ಜನಜೀವನದ ಮೇಲೆ ಉಂಟಾಗಿ ಅದರಿಂದ ಹೊಸದೊಂದು ಚೇತನ ಜಾಗೃತವಾಗಬಹುದು.

ಬಹಳ ಬೇಗ ಕಾಂಗ್ರೆಸ್ಸಿನ ಕೈಗೆ ಅಧಿಕಾರ ದೊರಕಬಹುದು. ಆದರೆ ಕಾಂಗ್ರೆಸ್ ಎಂಬುದು ಅಂತಿಮವಾಗಿ ಯಾವುದೋ ಒಂದು ಪಕ್ಷಕ್ಕೆ, ಒಂದು ವಿಚಾರಧಾರೆಗೆ ಸೀಮಿತವಾದದ್ದೇನಲ್ಲ. ಎಲ್ಲ ಬಗೆಯ ಅಭಿಪ್ರಾಯ-ಮತಭೇದಗಳನ್ನು ಒಳಗೊಳ್ಳಬೇಕೆನ್ನುವುದು ಅದರ ತತ್ವವಾಗಿದೆ. ಆದರೆ, ಆಗಿಂದಾಗ್ಗೆ ಅದನ್ನು ಜಾರಿಗೊಳಿಸುವಾಗ ಆ ತತ್ವಕ್ಕೆ ಭಂಗಬಂದಿದೆ ಎಂಬುದೂ ನಿಜ. ಆದರೆ ನಾನು ನಿಮಗೆ ಈ ಬಗ್ಗೆ ಕೊಡುವ ಭರವಸೆಯೇನೆಂದರೆ- ನಿಮ್ಮ ಕಾರ್ಯಕರ್ತರು ಹಳ್ಳಿಗಳ ಉದ್ಧಾರಕ್ಕಾಗಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದು ಅದನ್ನು ನೆರವೇರಿಸಲಾಗದೆ ಅದು ಬರೀ ಕಾಗದದ ಮೇಲೆ ಉಳಿಯುವಂತಾಗಿದ್ದರೆ, ಆಗ ಅಧಿಕಾರದಲ್ಲಿರುವ ಕಾಂಗ್ರೆಸ್ ನಾಯಕರು ಆ ಕೆಲಸವನ್ನು ನೆರವೇರಿಸಲು ಖಂಡಿತಾ ಸಹಾಯ ಮಾಡಬಲ್ಲರು. ಜವಾಹರಲಾಲ್ ನೆಹರೂರವರು ಇದಕ್ಕಾಗಿ ನಿಮ್ಮನ್ನು ಮನಸಾರೆ ಅಭಿನಂದಿಸುವರು. ಇಂಥ ಕೆಲಸವನ್ನು ಮಾಡುವ ಪ್ರಯತ್ನ ಮಾಡದೆ, ನೀವು ಜನರನ್ನು ಕೆರಳಿಸುವ ಹಾಗೆ ಅವರು ಮುಷ್ಕರಕ್ಕೆ ಬರುವ ಹಾಗೆ ಪ್ರಚೋದಿಸುವುದನ್ನು ನೋಡಿ ನನಗೆ ನೋವಾಗಿದೆ. ಇದರ ನಡುವೆಯೇ ಕೋಮುವಾದಿ ಹಿಂಸೆಯ ಘಟನೆಗಳು ಸಹ ನಡೆಯುತ್ತಿವೆ.

ನೀವೆಲ್ಲರೂ ವಿದ್ಯೆ ಬುದ್ಧಿ ಇರುವ ಪ್ರಜ್ಞಾವಂತರು. ನೀವು ಮಾಡುತ್ತಿರುವ ಕೆಲಸದಿಂದ ಯಾರಿಗೆ ಹಾನಿಯಾಗುತ್ತಿದೆ ಎಂಬುದು ಯಾಕೆ ನಿಮ್ಮ ಅರಿವಿಗೆ ಬರುತ್ತಿಲ್ಲ?ಇಂಥ ಹೋರಾಟ ಬ್ರಿಟಿಷರ ವಿರುದ್ಧ ಮಾಡುವುದಾದರೆ ಅದು ಸರಿ. ಯಾಕೆಂದರೆ ಅವರು ಹೋಗುವುದು ನಮಗೆ ಬೇಕಾಗಿತ್ತು. ಆದರೆ ನೀವು ಈಗ ಯಾರನ್ನು ಹೊರಗೋಡಿಸಬೇಕೆಂದು ಯೋಚಿಸುತ್ತಿದ್ದೀರಿ? ನಿಮ್ಮ ದೇಶದವರ ವಿರುದ್ಧವೇ ಹೋರಾಡಿ ನೀವು ಏನನ್ನು ಸಾಧಿಸಬಲ್ಲಿರಿ? ನೀವೆಲ್ಲ ಉದಾರ ಮನಸ್ಸಿನವರಾಗಿ ದೇಶದ ಏಳಿಗೆಗಾಗಿ ನಿಮ್ಮ ಸಹಕಾರ ನೀಡುವ ಸಮಯ ಬಂದಿದೆ.ಅಧಿಕಾರದಲ್ಲಿರುವವರು ತಪ್ಪು ಮಾಡಿದರೆ ಅದನ್ನು ನಿಮ್ಮ ರಚನಾತ್ಮಕ ಕೆಲಸದ ಮೂಲಕ ತೋರಿಸಿ; ಬರೀ ಭಾಷಣ, ವಿಮರ್ಶೆ, ಮುಷ್ಕರಗಳಿಂದಲ್ಲ. ಹಳ್ಳಿಯ ಜನರಿಗೆ ನಿಮ್ಮ ಜ್ಞಾನ,ಕೌಶಲ್ಯ, ಒಳನೋಟ, ಚಿಂತನೆ, ರಚನಾತ್ಮಕ ತಿಳುವಳಿಕೆ ಮತ್ತು ದೇಶಭಕ್ತಿಯ ಪ್ರಯೋಜನ ಮಾಡಿಕೊಡಿ. ಜನರಿಗೆ ನಿಮ್ಮ ಬದುಕನ್ನೇ ಉದಾಹರಣೆಯನ್ನಾಗಿಸಿ ಅದರ ಮೂಲಕ ನಿಜವಾದ ಶಿಕ್ಷಣ ನೀಡಿ. ನಿಮ್ಮ ಎಲ್ಲ ಕೆಲಸಗಳು ಇಂಥ ಜನರ ಏಳಿಗೆಗೆ ಮೀಸಲಾಗಿರಲಿ.

ಇದನ್ನು ಮಾಡಲಾಗದಿದ್ದರೆ, ಜನರು ತಾಳ್ಮೆ ಕಳೆದುಕೊಂಡರೆ ನಮ್ಮ ಸ್ಥಿತಿ ಈಗಿರುವ ಗುಲಾಗಿರಿಯ ಅವಸ್ಥೆಗಿಂತ ಅನಾಹುತಕಾರಿಯಾಗಿರುತ್ತದೆ. ಜನ ವಿನಾಶಕಾರಿ ಮಾರ್ಗದತ್ತ ಹೋಗದೆ ಇರುವ ಹಾಗೆ ಮಾಡಬೇಕೆಂದರೆ, ಅವರಿಗಾಗಿ ನಾವು ರಚನಾತ್ಮಕವಾದ, ಬದುಕಿಗೆ ಹತ್ತಿರವಾದ ದಾರಿಯೊಂದನ್ನು ತೋರಿಸಬೇಕು. ಈ ಸಲಹೆಯನ್ನು ನಾನು ನಿಮಗೆ ಮಾತ್ರ ನೀಡುತ್ತಿಲ್ಲ. ಇದನ್ನೆಲ್ಲ ನಾನು ನಿಮಗೆ ಯಾಕೆ ವಿವರವಾಗಿ ಹೇಳುತ್ತಿದ್ದೇನೆಂದರೆ ನೀವು ನನ್ನ ಸಲಹೆಗಳನ್ನು ಕೇಳಲಿಕ್ಕಾಗಿಯೇ ಬಂದಿದ್ದೀರಿ. ಇಲ್ಲ ನಾನು ಹೇಳಿರುವುದು ಕಾಂಗ್ರೆಸ್ಸಿಗರಿಗೂ ಅನ್ವಯವಾಗುತ್ತದೆ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿಲ್ಲ. ಆದ್ದರಿಂದ ಎಲ್ಲ ಸಾಮಾಜಿಕ ಕಾರ್ಯಕರ್ತರು, ಸರ್ಕಾರಿ ಅಧಿಕಾರಿಗಳು ತಮ್ಮ ಜಗಳ, ಸೈದ್ಧಾಂತಿಕ ಮತಭೇದಗಳನ್ನು ಮರೆತು ನೂಲುವುದರಲ್ಲಿ, ಖಾದಿ ನೇಯುವುದರಲ್ಲಿ ಮತ್ತು ಗ್ರಾಮಕೈಗಾರಿಕೆಗಳಲ್ಲಿ ತೊಡಗಿಕೊಳ್ಳಬೇಕು. ಬ್ರಿಟಿಷರು ಇಲ್ಲಿಂದ ಹೋಗಿ, ಇಲ್ಲಿನ ಜನರಿಗೆ ನಾನು ಇಲ್ಲಿಯವರೆಗೆ ಹೇಳಿದ ಮಾದರಿಯ ಶಿಕ್ಷಣ ದೊರೆಯುವುದಾದರೆ, ಇನ್ನು ಐದು ವರ್ಷಗಳಲ್ಲಿ ಭಾರತವು ಏಶ್ಯಾದ ಬೇರೆಲ್ಲ ದೇಶಗಳ ಹೋಲಿಕೆಯಲ್ಲಿ ಮಂಚೂಣಿಯಲ್ಲಿ ನಿಂತಿರುತ್ತದೆ ಎಂಬ ಬಗ್ಗೆ ನನಗೇನೂ ಅನುಮಾನವಿಲ್ಲ.

(ಆಕರ: **ದಿ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮಾ ಗಾಂಧಿ**)
ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಎಸ್. ಸಿರಾಜ್ ಅಹಮದ್**)

ನವೆಂಬರ್, ೨೦೧೧

ಗಾಂಧೀಜಿಯೊಂದಿಗೆ ಸಮಾಜವಾದಿಗಳ ಮಾತುಕತೆ (ಭಾಗ-೨): ಪ್ರಶ್ನೋತ್ತರಗಳು

ಕಳೆದ ಸಂಚಿಕೆಯಲ್ಲಿ ಅರಂಭಿಸಿದ್ದ 'ದಾಖಲೆ'ಯ ಎರಡನೆಯ ಭಾಗವಿದು. ಮೊದಲ ಭಾಗದಲ್ಲಿ ಕಾಂಗ್ರೆಸ್ ರಾಷ್ಟ್ರ ವಿಭಜನೆಯನ್ನು ಒಪ್ಪಿಕೊಳ್ಳುವುದು ಖಚಿತವೆನಿಸಿದಾಗ ಸಮಾಜವಾದಿಗಳ ಗುಂಪೊಂದು ಗಾಂಧೀಜಿಯಲ್ಲಿ ತಮ್ಮ ಆತಂಕವನ್ನು ನಿವೇದಿಸಿಕೊಳ್ಳಲು ಹೋದ ಸಂದರ್ಭದಲ್ಲಿ ಗಾಂಧೀಜಿ ಅವರನ್ನು ಉದ್ದೇಶಿಸಿ ಆಡಿದ ಮಾತುಗಳನ್ನು ಪ್ರಕಟಿಸಲಾಗಿತ್ತು. ಈ ಎರಡನೇ ಮತ್ತು ಕೊನೆಯ ಭಾಗದಲ್ಲಿ ಸಮಾಜವಾದಿಗಳ ಪ್ರಶ್ನೆಗಳಿಗೆ ಗಾಂಧೀಜಿ ನೀಡಿದ ಉತ್ತರಗಳಿವೆ. ಅವುಗಳನ್ನು ಅಕ್ಷರಶಃ ಅರ್ಥ ಮಾಡಿಕೊಳ್ಳದೆ, ಆಧುನಿಕ ನಾಗರೀಕತೆ ಕುರಿತ ಅವರ ವಿಮರ್ಶೆಯ ಭಾಗವಾಗಿ ಗ್ರಹಿಸುವುದಾದರೆ ಅವುಗಳಿಂದ ಇಂದಿನ ಸಂದರ್ಭಕ್ಕೆ ಅಗತ್ಯವಾದ ಅಮೂಲ್ಯ ಹೊಳಹುಗಳನ್ನು ಪಡೆಯಬಹುದು. ಜೊತೆಗೆ ಸಮಾಜವಾದಿಗಳ ಬಗೆಗಿನ ಗಾಂಧೀಜಿಯ ನಿರೀಕ್ಷೆ-ನಿರಾಶೆಗಳನ್ನೂ ಇಲ್ಲಿ ಗುರುತಿಸಬಹುದು.-ಸಂ.

ಪ್ರಶ್ನೆ: ನೀವು ನಮ್ಮ ದೇಶದ ಕೈಗಾರಿಕೆಗಳು, ಯಂತ್ರಗಳ ಮೂಲಕ ಅಭಿವೃದ್ಧಿ ಹೊಂದುವುದನ್ನು ಯಾಕೆ ವಿರೋಧಿಸುತ್ತೀರಿ?

ನೀವು ಕಾರು, ಬಸ್ಸು, ಏರೋಪ್ಲೇನ್, ಎಂಜಿನ್ನುಗಳು ಮುಂತಾದವನ್ನು ತಯಾರಿಸಲು ಯಂತ್ರಗಳನ್ನು ಬಳಸುವುದಾದರೆ ಅದರ ಬಗ್ಗೆ ನನಗೇನೂ ತಕರಾರಿಲ್ಲ. ಆದರೆ ಕಾಳುಗಳನ್ನು ಬೀಸುವುದಕ್ಕೆ, ಬಟ್ಟೆ ನೇಯುವುದಕ್ಕೆ, ಭೂಮಿಯನ್ನು ಉಳುವುದಕ್ಕೆ ಯಂತ್ರಗಳನ್ನು ಬಳಸುವುದಾದರೆ ಅದಕ್ಕೆ ನನ್ನ ತೀವ್ರ ವಿರೋಧವಿದೆ. ಯಂತ್ರಗಳಿಂದ ಬೀಸಿ ತಯಾರಾದ ಹಿಟ್ಟು, ಎಲ್ಲ ಸತ್ವವನ್ನು ಕಳೆದುಕೊಂಡು ಅದರಲ್ಲಿರುವ ಎಲ್ಲ ವಿಟಮಿನ್ನುಗಳನ್ನು ನಾಶಮಾಡುತ್ತದೆ. ಹಿಂದಿನ ಕಾಲದಲ್ಲಿ ಕಾಥೇವಾರದಲ್ಲಿ ಎಲ್ಲಿಯೂ ನಲ್ಲಿನೀರು ಸಿಗುತ್ತಿರಲಿಲ್ಲ. ಹೆಂಗಸರು ಹತ್ತಿರದ ನದಿ, ಕೆರೆಗಳಿಂದ ಹೊಳೆಯುವ ಬಿಂದಿಗೆಗಳಲ್ಲಿ ನೀರನ್ನು ತುಂಬಿಕೊಂಡು ಬೆಳಗಿನ ಬಿಸಿಲಿನಲ್ಲಿ ತಲೆಯ ಮೇಲೆ ಹೊತ್ತುಕೊಂಡು ಬರುತ್ತಾ ಸೂರ್ಯಸ್ನಾನ ಮಾಡುತ್ತ ಆರೋಗ್ಯವಂತರಾಗಿದ್ದರು. ಬೆಳಗಿನ ಜಾವದಲ್ಲಿ ಅವರು ಕಾಳು ಬೀಸುತ್ತ ಭಜನೆಗಳನ್ನು ಹಾಡುತ್ತ ದೇವರಿಗೆ ತಮ್ಮ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಜೀವನಕ್ಕೆ ಬೇಕಾದ ನೀತಿಪಾಠಗಳನ್ನು ಒಳಗೊಂಡ ಅವರ ಸರಳ ಹಾಡುಗಳು ಅವರಿಗೆ ಏಕಕಾಲಕ್ಕೆ ಸಂಗಿತದ ಅಭಿರುಚಿಯನ್ನು, ದೇಹಕ್ಕೆ ಬೇಕಾದ ವ್ಯಾಯಾಮವನ್ನು ನೀಡುತ್ತಿದ್ದವು. ಇದಾದ ಮೇಲೆ ಕುಟುಂಬದ ಎಲ್ಲರೂ ಸೇರಿ ಹೊಲಗದ್ದೆಗಳಿಗೆ ಕೆಲಸ ಮಾಡಲು ಹೋಗುತ್ತಿದ್ದರು. ಇದರಿಂದ ಅವರಿಗೆ ರೋಗಗಳು ಬರುವುದಿರಲಿ, ಈಗ ಎಲ್ಲ ಕಡೆ ಹರಡಿರುವ ನೂರಾರು ರೋಗಗಳ ಹೆಸರೂ ಸಹ ಗೊತ್ತಿರಲಿಲ್ಲ. ಇಷ್ಟೊಂದು ಜನ ಸಂಪನ್ಮೂಲವಿರುವ ನಮ್ಮಂಥ ದೊಡ್ಡ ದೇಶ ಅಥವಾ ಕುಟುಂಬದಲ್ಲಿ ಯಂತ್ರಗಳ ಅಗತ್ಯವೇನು ಎಂಬ ಪ್ರಶ್ನೆ ನನ್ನನ್ನು ಕಾಡುತ್ತದೆ. ಯಂತ್ರಗಳು ಮನುಷ್ಯರು ಮಾಡುವ ಕೆಲಸವನ್ನು ಬಹಳ ಬೇಗ ಮಾಡಿ ಮುಗಿಸುವುದರಿಂದ ಜನರ ದೇಹಾರೋಗ್ಯಕ್ಕೆ, ದೇಶದ ಆರ್ಥಿಕತೆಗೆ ದೊಡ್ಡ ಅಪಾಯವುಂಟಾಗುತ್ತದೆ. ಇದೆಲ್ಲದರ ಪರಿಣಾಮವಾಗಿ ಜನರಿಗೆ ಭಾರೀ ವಿರಾಮ ದೊರೆತು ಏನು ಮಾಡಬೇಕೆಂಬುದೇ ತೋಚದಾಗಿ, ಅವರ ಮನಸ್ಸು ಎಲ್ಲ ದುಷ್ಟ ಯೋಚನೆಗಳ ಕಾರ್ಖಾನೆಯಾಗಿಬಿಡುತ್ತದೆ. ಅವರಲ್ಲಿ ಅನೇಕರು ಸಿನೆಮಾ-ನಾಟಕಗಳಲ್ಲಿ ಕಳೆದುಹೋಗುತ್ತಿದ್ದಾರೆ. ಬಹಳ ಜನ ಸಿನಿಮಾಗಳಲ್ಲಿ ಸಮಾಜವನ್ನು ಸರಿದಾರಿಗೆ ತರುವ ನೈತಿಕ ಗುಣವಿದೆ ಎಂದು ನನ್ನನ್ನು ಒಪ್ಪಿಸಲು ನೋಡುತ್ತಾರೆ. ಆದರೆ ಅವರ ಮಾತು ನನಗೇನೋ ಹಿಡಿಸುವುದಿಲ್ಲ.ನನಗೆ ಎಲ್ಲ ಬಾಗಿಲನ್ನು ಮುಚ್ಚಿದ ಥಿಯೇಟರ್‌ಗಳಿಗೆ ಹೋದರೆ ಉಸಿರು ಕಟ್ಟಿದಂತಾಗುತ್ತದೆ. ನಾನು ಸಣ್ಣವನಾಗಿದ್ದಾಗ ನಾನು ಇಂಥ ಥಿಯೇಟರ್‌ಗೆ ಒಂದು ಸಲ ಹೋಗಿದ್ದೆ. ನನಗೆ ಸಾಧ್ಯವಿದ್ದರೆ ದೇಶದ ಎಲ್ಲಾ ಥಿಯೇಟರ್‌ಗಳು ಹಾಗೂ ಸಿನೇಮಾ ಹಾಲ್‌ಗಳನ್ನು ನೂಲು ತಯಾರಿಸುವ, ಕರಕುಶಲ ಕೆಲಸಮಾಡುವ ಜಾಗಗಳನ್ನಾಗಿ ಮಾಡಿಬಿಡುತ್ತಿದ್ದೆ. ಈಚಿನ ದಿನಗಳಲ್ಲಿ ಜಾಹಿರಾತಿನ ನೆಪವನ್ನು ಮುಂದಿಟ್ಟುಕೊಂಡು ಎಷ್ಟು ಆಶ್ಲೀಲವಾದ ಗಂಡು-ಹೆಣ್ಣಿನ ಚಿತ್ರಗಳನ್ನು ಅಚ್ಚುಹಾಕುತ್ತಾರೆ ಎಂಬುದೇ ನನಗೆ ಸೋಜಿಗದ ಸಂಗತಿಯಾಗಿ ಕಾಣುತ್ತದೆ.ಅಷ್ಟಕ್ಕೂ ಈ ನಟ-ನಟಿಯರು ನಮ್ಮ ಅಣ್ಣ ತಮ್ಮಂದಿರಲ್ಲದೆ ಬೇರೆ ಯಾರೂ ಅಲ್ಲ. ಇದರಿಂದ ನಾವು ನಮ್ಮ ಹಣವನ್ನು ಹಾಳು ಮಾಡಿಕೊಳ್ಳುವುದಲ್ಲದೆ, ನಮ್ಮ ಸುತ್ತಲಿನ ಸಮಾಜವನ್ನೂ ಸಹ ನಾಶ ಪಡಿಸುತ್ತೇವೆ.

ನಾನೇನಾದರೂ ಪ್ರಧಾನ ಮಂತ್ರಿಯಾದರೆ ಎಲ್ಲ ಯಂತ್ರಚಾಲಿತ ಹಿಟ್ಟಿನ ಗಿರಣಿಗಳು ಹಾಗೂ ಎಣ್ಣೆ ಗಿರಣಿಗಳನ್ನು ನಿಲ್ಲಿಸಿ ಅವುಗಳ ಜಾಗದಲ್ಲಿ ದೇಶೀಯ ರೀತಿಯಲ್ಲಿ ಕೆಲಸಮಾಡುವ ಗಿರಣಿಗಳನ್ನು ಸ್ಥಾಪಿಸಿಬಿಡುತ್ತಿದ್ದೆ. ಜೊತೆಗೆ, ಇರುವ ಬಟ್ಟೆ ಗಿರಣಿಗಳನ್ನು ನಾಶಮಾಡುವುದಕ್ಕಾಗದಿದ್ದರೂ ಹೊಸ ಗಿರಣಿಗಳನ್ನು ಶುರುಮಾಡುವುದನ್ನಂತೂ ಖಂಡಿತಾ ತಡೆಯುತ್ತಿದ್ದೆ. ಈಗ ನಡೆಯುತ್ತಿರುವ ಎಲ್ಲ ಸಿನೆಮಾ, ಥಿಯೇಟರ್‌ಗಳನ್ನು ಮುಚ್ಚಿಸಿ, ಅಲ್ಲಿ ಪ್ರಕೃತಿ ಸೌಂದರ್ಯದ ಸಿನೆಮಾಗಳನ್ನು ಮಾತ್ರ ತೋರಿಸುವಂತೆ ಮಾಡುತ್ತಿದ್ದೆ. ಜೊತೆಗೆ ಹಾಡು,

ನೃತ್ಯಗಳನ್ನಂತೂ ಸಂಪೂರ್ಣ ನಿಲ್ಲಿಸುತ್ತಿದ್ದೆ. ಹಾಗೆ ನೋಡಿದರೆ ನನಗೆ ಸಂಗೀತ, ನೃತ್ಯಗಳ ಬಗ್ಗೆ ಬಹಳ ಆಸಕ್ತಿ ಇದೆ. ಸಂಗೀತದಲ್ಲಿ ನನಗೆ ಯಾವುದು ಒಳ್ಳೆಯದು-ಯಾವುದು ಅಲ್ಲ ಎಂಬ ತರತಮ ಜ್ಞಾನವೂ ಇದೆ. ಆದರೂ ಯುವಜನರ ಮನಸ್ಸನ್ನು ಹಾಳುಮಾಡುವ ಸಂಗೀತ-ನೃತ್ಯವನ್ನು ನಾನು ಖಂಡಿತಾ ನಿಲ್ಲಿಸಿಬಿಡುತ್ತಿದ್ದೆ. ಎಲ್ಲ ಕಡೆ ಸುಲಭವಾಗಿ ಬಿಕರಿಯಾಗುವ ಗ್ರಾಮಾಫೋನ್ ರೆಕಾರ್ಡ್‌ಗಳನ್ನು ನಿಲ್ಲಿಸುತ್ತಿದ್ದೆ. ಜೊತೆಗೆ ಇಂಥ ಜೀವಘಾತುಕ ಚಟುವಟಿಕೆಗಳಿಗೆ ಸರ್ಕಾರ ಅತಿ ಹೆಚ್ಚು ತೆರಿಗೆ ವಿಧಿಸುವಂತೆ ಶಿಫಾರಸು ಮಾಡುತ್ತಿದ್ದೆ. ಇದೇ ರೀತಿಯಲ್ಲಿ ಜನರ ಆರೋಗ್ಯಕ್ಕೆ ಹಾನಿಯುಂಟುಮಾಡುವ ಮದ್ಯ, ತಂಬಾಕು ಮತ್ತು ಟೀ ಉತ್ಪನ್ನಗಳಿಗೆ ಅತಿ ಹೆಚ್ಚು ತೆರಿಗೆ ವಿಧಿಸುವಂತೆ ಮಾಡಿ ಅವುಗಳ ಬಳಕೆ ಕಡಿಮೆಯಾಗುವಂತೆ ನೋಡಿಕೊಳ್ಳುತ್ತಿದ್ದೆ.

ಯಾವ ಹಳ್ಳಿಗಳಲ್ಲಿ ಒಂದೇ ಒಂದು ಹಿಟ್ಟಿನ ಯಂತ್ರವಿಲ್ಲದೇ, ತಮಗೆ ಬೇಕಾದಷ್ಟು ಹತ್ತಿಯನ್ನು ತಾವೇ ಬೆಳೆದು-ತಮ್ಮ ಬಟ್ಟೆಯನ್ನು ತಾವೇ ತಯಾರಿಸಿಕೊಳ್ಳುವ ಸ್ವಯಂಪೂರ್ಣ ಚಟುವಟಿಕೆಗಳು ನಡೆಯುತ್ತಿವೆಯೋ ಅಂಥ ಹಳ್ಳಿಗಳನ್ನು ಗುರುತಿಸಿ ಅವುಗಳಿಗೆ ವಿಶೇಷ ಬಹುಮಾನಗಳು, ತೆರಿಗೆ ವಿನಾಯಿತಿಯ ಸೌಲಭ್ಯಗಳು ದೊರಕುವಂತೆ ಮಾಡುತ್ತಿದ್ದೆ. ಅಂಥ ಆದರ್ಶಪೂರ್ಣ ಹಳ್ಳಿಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ತನಗೇ ತಾನೇ ಒಬ್ಬ ಪೊಲೀಸನಾಗಿ, ತನಗೆ ತಾನೇ ಒಬ್ಬ ವೈದ್ಯನಾಗಿ, ಸಮಾಜದ ಕಾವಲುಗಾರನಾಗಿ ರೂಪುಗೊಳ್ಳುವಂತೆ ಮಾಡಿ ಅಲ್ಲಿ ಪರಸ್ಪರ ಕಲಹ-ವೈಮನಸ್ಸುಗಳು ಇಲ್ಲದ ಹಾಗೆ ಮಾಡುತ್ತಿದ್ದೆ. ನೋಡಿ, ಇಷ್ಟು ಹೊತ್ತು ನಿಮ್ಮೊಂದಿಗೆ ಮಾತಾಡುತ್ತ ನನ್ನ ಕನಸಿನ ದೇಶ ಹೇಗಿರಬೇಕು ಎಂಬುದನ್ನು ವಿವರಿಸಿದ್ದೇನೆ. ಈ ಮಾತುಗಳನ್ನು ಆಡುವಾಗ ನನ್ನ ಹೃದಯ ತುಂಬಿ ಬಂದು ನನ್ನ ಎಲ್ಲ ಆಲೋಚನೆಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಆದರೂ ಇಲ್ಲಿಯವರೆಗೆ ನಾನು ಪ್ರಸ್ತಾಪಿಸಿರುವ ಸಂಗತಿಗಳು ನಿಜವಾಗುವ ಯಾವುದೇ ಸೂಚನೆಗಳಿಲ್ಲ ಎಂಬುದು ನನಗೆ ಗೊತ್ತಿದೆ.ಹಾಗಿದ್ದರೂ ನಾನು ಇಂಥ ಕನಸುಗಳನ್ನು ಕಾಣದೆ ಇರಲಾರೆ. ಅಲ್ಲದೆ ನಿಮ್ಮಂಥವರು ಬಂದು ಇಂಥ ವಿಚಾರಗಳ ಬಗ್ಗೆ ಕೇಳಿದಾಗ ನನ್ನ ಆಲೋಚನೆಗಳನ್ನು ಅದುಮಿಟ್ಟುಕೊಳ್ಳದೆ ಎಲ್ಲವನ್ನೂ ಹೇಳಿಬಿಟ್ಟಿದ್ದೇನೆ.

ಪ್ರಶ್ನೆ: ಆದರೆ ಬಾಪು, ನೀವು ಪ್ರಧಾನಿಯಾಗುವ ಸಾಧ್ಯತೆಯನ್ನು ತಡೆಯುವವರು ಯಾರಾದರೂ ಇದ್ದಾರಾ?

ಎಲ್ಲ ಬಗೆಯ ಹೊಣೆಗಾರಿಕೆಯನ್ನು ಹೊರಲು ಸಿದ್ಧವಾಗಿದ್ದರೆ, ಯಾರೊಬ್ಬರೂ ಈ ಸಾಧ್ಯತೆಯನ್ನು ತಿರಸ್ಕರಿಸುತ್ತಾರೆ ಎಂದು ನನಗೆ ಅನಿಸುವುದಿಲ್ಲ. ಹಾಗೆ ನೋಡಿದರೆ ನನ್ನ ಎದುರಾಳಿಗಳು ನೀವೇ. ಯಾಕೆಂದು ನೀವು ಕೇಳಬಹುದು. ನೀವು ನಾನು ಹೇಳಿದ ಮಾರ್ಗದಲ್ಲಿ ನಡೆದರೆ ನನ್ನ ಆಶಯಗಳೆಲ್ಲ ನಿಜವಾಗಿ ನನ್ನ ಕನಸುಗಳೆಲ್ಲ ಸಾಕಾರಗೊಳ್ಳುತ್ತವೆ. ನೀವು ಹೇಳುವ ಆರ್ಥಿಕ ಸಮಾನತೆಯನ್ನು ಸಾಧಿಸಬೇಕೆಂದರೆ ನನ್ನ ಹಾದಿಯಲ್ಲಿ ನೀವು ನಡೆಯಲೇಬೇಕು. ನನ್ನ ಮಾತುಗಳು ಬಹುಶಃ ಇವತ್ತು ನಿಮಗೆ ಅರ್ಥವಾಗುವುದಿಲ್ಲ. ಆದರೆ ನಿಮಗೆ ನೆನೆಪಿರಲಿ: ನಾನು ತೀರಿಹೋದ ಎಷ್ಟೋ ದಿನದ ಮೇಲೆ, ಒಂದು ದಿನ-ಈ ಎಪ್ಪತ್ತೈದು ವರ್ಷದ ಮುದುಕ ಹೇಳಿದ್ದು ಸರಿ ಎಂದು ನಿಮಗೆ ಅನಿಸುತ್ತದೆ. ಇದನ್ನು ನಾನು ನಿಮಗೆ ಭವಿಷ್ಯವಾಣಿಯಾಗಿ ಹೇಳುತ್ತಿಲ್ಲ, ಬದಲಾಗಿ ನನ್ನ ಜೀವನದ ಅನುಭವದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ.


ಮುಂದೊಂದು ದಿನ ಯಾರೂ ಸಹ ನಿಮ್ಮ ದೊಡ್ಡ ದೊಡ್ಡ ಭಾಷಣಗಳನ್ನು ಕೇಳುವುದಿಲ್ಲ. ಭಾಷಣ ಕೇಳುವುದಿರಲಿ ಜನ ನಿಮ್ಮ ಸಭೆಗಳಿಗೆ ಬರುವುದೇ ಇಲ್ಲ, ಏಕೆಂದರೆ ಬರೀ ಬಾಯಿ ಮಾತಿನಲ್ಲಿ ಆದರ್ಶಗಳನ್ನು ಹೇಳುತ್ತ ಅವುಗಳನ್ನು ಜೀವನದಲ್ಲಿ ಪಾಲಿಸದೆ ಹೋದರೆ ನಿಮ್ಮ ಮಾತುಗಳನ್ನು ಯಾರೂ ಕೇಳುವುದಿಲ್ಲ.ನಿಮ್ಮ ಮಾತನ್ನು ಕೇಳುವ ಮೊದಲು, ನೀವು ಹೇಳುವ ಆದರ್ಶಗಳನ್ನು ಕಾರ್ಯಗತಗೊಳಿಸಲು ನೀವೇನು ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಅವರು ಕೇಳುತ್ತಾರೆ.ಹಿಂದೂ-ಮುಸ್ಲಿಂ ಸಹಬಾಳ್ವೆಯನ್ನು ಸಾಕಾರಗೊಳಿಸಬೇಕಾದರೆ ಅದನ್ನು ನೀವು ಮೊದಲು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಲ್ಲಿಯವರೆಗೆ ನಾವು ಕುರುಡರ ಹಾಗೆ ಬ್ರಿಟಿಷರನ್ನು ಅನುಸರಿಸುತ್ತ ಕಾಲ ಕಳೆದಿದ್ದೇವೆ. ಈಗ ನಾವು ಕಣ್ತೆರೆದು ನಮ್ಮ ದಾರಿಯನ್ನು ನಾವು ಹುಡುಕಿಕೊಳ್ಳಬೇಕಾಗಿದೆ.ಈಗಲಾದರೂ ನೀವು ನಿಮ್ಮ ಹೆಜ್ಜೆಗಳನ್ನು ಸರಿಪಡಿಸಿಕೊಂಡು, ಸರಿಯಾದ ದಾರಿಯಲ್ಲಿ ನಡೆಯದಿದ್ದರೆ ಆಳವಾದ ಗುಂಡಿಯೊಳಗೆ ಬೀಳುವುದಂತೂ ಖಚಿತ. ಈಗ ನೀವು ಹೊರಡಿ. ನಾನೀಗ ವೈಸ್‌ರಾಯ್‌ರನ್ನು ಕಾಣಲು ಹೊರಡಬೇಕು.

(ಆಕರ: ದಿ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮಾ ಗಾಂಧಿ)
(ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಎಸ್. ಸಿರಾಜ್ ಅಹಮದ್**)

ಆಗಸ್ಟ್ ೨೦೧೪

ಆಧುನಿಕ ನಾಗರೀಕತೆಯೂ, ಈ ಭೂಮಿಯೂ...

ಮೂಲ: ರಸಲ್ ಮೀನ್ಸ್
ಕನ್ನಡಕ್ಕೆ: ರೇಖಾಂಬ ಟಿ.ಎಲ್



ಯೂರೋಪಿನಲ್ಲಿ ೧೪ರಿಂದ ೧೭ನೇ ಶತಮಾನದವರೆಗಿನ ಕಾಲಾವಧಿಯಲ್ಲಿ ತೆರೆದುಕೊಂಡಿತೆಂದು ಹೇಳಲಾದ 'ಜ್ಞಾನಯುಗ' (ಪುನರುಜ್ಜೀವನ ಯುಗ) ಧರ್ಮ, ವಿಜ್ಞಾನ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಮಾನವನ ಬದುಕಿನ ಗುಣಮಟ್ಟವನ್ನು ಬದಲಾಯಿಸಿತೆಂದು ನಾವು ನಂಬಿದ್ದೇವೆ ಅಥವಾ ನಮ್ಮನ್ನು ನಂಬಿಸಲಾಗಿದೆ. ಈ ಬದಲಾವಣೆಗಳೇ ಆಧುನಿಕ ಎಂದು ಹೇಳಲಾಗುತ್ತಿರುವ ನಾಗರೀಕತೆಯ ಆಧಾರ ಸ್ತಂಭಗಳೆಂದೂ ಹೇಳಲಾಗುತ್ತಿದೆ. ಆದರೆ ಯೂರೋಪ್(ಅರ್ಥಾತ್ ಪಶ್ಚಿಮ ಜಗತ್ತು) ಈ ನಾಗರಿಕ ಜಗತ್ತಿನ ಇತರ ದೇಶಗಳನ್ನು, ಅಲ್ಲಿನ ಜನಸಮುದಾಯಗಳನ್ನು ಏನು ಮಾಡಿವೆ? ಅವನ್ನು ಹಿಂದುಳಿದ ದೇಶಗಳೆಂದೂ, ಮೂಢ ಜನಸಮುದಾಯಗಳೆಂದೂ ಕರೆದು ಮತ್ತು ಸ್ವತಃ ಅವೂ ಹಾಗೆಂದು ಭಾವಿಸುವಂತೆ ಮಾಡಿ ಅವುಗಳ ಮೇಲೆ ಸವಾರಿ ಮಾಡಲು ದಾರಿ ಮಾಡಿಕೊಂಡಿತಷ್ಟೆ. ಇಂದು ವೈವಿಧ್ಯಮಯ ಅಧ್ಯಯನಗಳಿಗೆ ವಸ್ತುವಾಗಿರುವ ವಸಾಹತುಶಾಹಿಯ ಬೇರುಗಳು ಆರಂಭವಾಗುವುದು ಇಲ್ಲಿಯೇ. ಹಾಗಾಗಿಯೇ ಗಾಂಧಿ ಒಂದು ಶತಮಾನದ ಹಿಂದೆಯೇ ಆಧುನಿಕ ನಾಗರೀಕತೆ ಎಂದರೆ ಮತ್ತೇನಲ್ಲ, ಅದೊಂದು ವಸಾಹತುಶಾಹಿಯ ಉಪಕರಣ ಎಂದಿದ್ದರು.

ಈ ಉಪಕರಣ ಪರೋಕ್ಷವಾಗಿ ಕೆಲಸ ಮಾಡಿದ ಉತ್ತರ ಅಮೆರಿಕಾ 'ಜ್ಞಾನಯುಗ'ದ ವಿಚಾರ ಮತ್ತು ಸಾಧನ-ಸಲಕರಣೆಗಳೊಂದಿಗೆ ಅಲ್ಲಿಗೆ ಹೋದ ಯೂರೋಪಿಯನ್ನರು ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್‌ರನ್ನು(ಅವರು ತಮ್ಮನ್ನು ಅಮೆರಿಕನ್ ಇಂಡಿಯನ್‌ರೆಂದು ಕರೆದುಕೊಳ್ಳುವರು) ಬೇಟೆಯಾಡಿ, ಅಲ್ಲಿನ ನಿಸರ್ಗ ಸಂಪತ್ತನ್ನು ತಮ್ಮ ಸುಖ ಜೀವನ ಕಟ್ಟಿಕೊಳ್ಳುವ ಸಲುವಾಗಿ ಸೂರೆ ಮಾಡಿ 'ಆಧುನಿಕ ಅಮೆರಿಕಾ' ಎಂಬ ಮಾಯಾಜಿಂಕೆಯನ್ನು ಸೃಷ್ಟಿಸಿ ಜಗತ್ತಿನ ಮುಂದೆ ಆಡಬಿಟ್ಟಿದ್ದಾರೆ.

ಇದರ ವಿರುದ್ಧ ನಿಧಾನವಾಗಿ ಎಚ್ಚೆತ್ತುಕೊಂಡಿರುವ ರೆಡ್ ಇಂಡಿಯನ್ ಜನಸಮುದಾಯ ಇತ್ತೀಚಿನ ವರ್ಷಗಳಲ್ಲಿ ಸಂಘಟಿತರಾಗಿ ತನ್ನ ಜೀವನ ದೃಷ್ಟಿ, ಜೀವನ ವಿಧಾನ, ಜೀವನ ಮೌಲ್ಯಗಳು ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಪುನರನ್ವೇಷಿಸಿಕೊಂಡು ಕಾಪಾಡಿಕೊಳ್ಳಲು ಒಂದು ದೊಡ್ಡ ಆಂದೋಲನವನ್ನೇ ನಡೆಸಿದ್ದಾರೆ. ಅದರ ಒಬ್ಬ ಮುಂಚೂಣಿ ನಾಯಕನಾಗಿದ್ದವನೇ ರಸಲ್ ಮೀನ್ಸ್. ಈತ ಇಲ್ಲಿ ರೆಡ್ ಇಂಡಿಯನ್ನರ ಪರವಾಗಿ ಮಾತನಾಡುತ್ತಾ, ಹೇಗೆ ವೈಜ್ಞಾನಿಕತೆ ಎಂಬ ಐರೋಪ್ಯ ಲೋಕದೃಷ್ಟಿಯು ಆಧುನಿಕತೆಯ ಹೆಸರಿನಲ್ಲಿ ತಾನು ರೂಪಿಸಿಕೊಂಡ ಸಿದ್ಧಾಂತಗಳ ಮೂಲಕ ಇಡೀ ಜೀವ ಜಗತ್ತಿಗೆ ತಾಯಿ ಸಮಾನವಾಗಿರುವ ನಮ್ಮ ಭೂಮಿಯನ್ನು ನಾಶ ಮಾಡಿ ಮಾನವ ಜನಾಂಗವನ್ನು ಅಸಹಾಯಕತೆ ಮತ್ತು ಅತಂತ್ರಗಳೆಡೆಗೆ ದೂಡುತ್ತಿದೆ ಎಂಬುದನ್ನು ಸವಿವರವಾಗಿ ಹೇಳಿದ್ದಾನೆ. ಆದರೆ ಇದು ರೆಡ್ ಇಂಡಿಯನ್ನರ ಪರವಾಗಿ ಮಾತ್ರ ಆಡಿದ ಮಾತುಗಳಲ್ಲ. ಈ ಭೂಮಿ ತಾಯಿಯ, ಅದರ ಮೇಲಿನ ಜೀವಜಗತ್ತಿನ ನಾಶದ ಬಗ್ಗೆ ಆತಂಕಿತರಾಗಿರುವ ಎಲ್ಲರ ಪರವಾಗಿ ಆಡಲಾಗಿರುವ ಮಾತುಗಳಾಗಿವೆ.

ಇಲ್ಲಿನ ರಸಲ್‌ನ ಮಾತುಗಳು ಒಂದು ಅತಿಗೆ ಹೋಗಿ ಆಡಿರುವ ಮಾತುಗಳಂತೆ ಕೇಳಿಸಿದರೂ, ಈ ಭೂಮಿಯ ಮೇಲೆ ಈಗ ಆಧುನಿಕತೆಯ ಹುಚ್ಚಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಪ್ರೋತ್ಸಾಹಿಸಲಾಗುತ್ತಿರುವ ಬದುಕಿನ ಶೈಲಿ ಮತ್ತು ಗತಿಗಳಲ್ಲಿ ಏನೋ ಒಂದು ಮೂಲಭೂತ ದೋಷವಿದೆ ಎಂಬುದು ನಮಗೆ ಮನಗಾಣಿಸಬಲ್ಲುದಾಗಿದೆ. ಈತನ ಮಾತುಗಳಲ್ಲಿ ನಮ್ಮ ಬುದ್ಧ-ಗಾಂಧಿ-ಲೋಹಿಯಾರ ವಿಚಾರಗಳು ಅಲ್ಲಲ್ಲಿ ಹಣಕಿರುವುದನ್ನು ನಾವು ಗಮನಿಸಬಹುದು.

೧೯೮೦ರ ಜುಲೈ ತಿಂಗಳ ಬೇಸಿಗೆಯಲ್ಲಿ ದಕ್ಷಿಣ ಡಕೋಟದಲ್ಲಿ ಜಗತ್ತಿನ ಎಲ್ಲ ಕಡೆಗಳಿಂದ ಬಂದು ಸೇರಿದ್ದ ಸಾವಿರಾರು ಜನರ 'ಬ್ಲ್ಯಾಕ್ ಹಿಲ್ಸ್ ಇಂಟರ್‌ನ್ಯಾಷನಲ್ ಸರ್ವೈವಲ್' ಕೂಟದಲ್ಲಿ ರಸಲ್ ಮಾಡಿದ ಭಾಷಣವಿದು. ಸಹಜವಾಗಿಯೇ ಇದು ಈಗ ಯೂರೋಪಿನ ಚಿಂತನಾ ಕ್ರಮದ ವಾರಸುದಾರನಾಗಿರುವ ಅಮೆರಿಕನ್ ಪ್ರಭುತ್ವವನ್ನು ಕೆರಳಿಸಿತ್ತು. ಹಲವು ವರ್ಷಗಳ ಕಾಲ ಅಮೆರಿಕನ್ ಇಂಡಿಯನ್ ಚಳುವಳಿಯ ಮುಂಚೂಣಿಯಲ್ಲಿದ್ದ ಈ ರಸೆಲ್ ಮೀನ್ಸ್ ಒಬ್ಬ *ಒಗ್ಲಾಲ ಲಕೋಟ* ಬುಡಕಟ್ಟಿನವ. ೧೯೩೯ರಲ್ಲಿ ಹುಟ್ಟಿದ ಈತ ಹೋರಾಗಾರನಷ್ಟೇ ಅಲ್ಲದೆ ನಟ, ಸಂಗೀತಗಾರ ಮತ್ತು ಬರಹಗಾರ ಕೂಡ ಆಗಿದ್ದ-ಸಂಪಾದಕ

ನಾವು ಬದುಕಲು ಯೂರೋಪ್ ಸಾಯಬೇಕು!


ವಸ್ತುಸ್ಥಿತಿಯನ್ನು ವಿವರಿಸಲು ಈ ಮೇಲಿನ ಶೀರ್ಷಿಕೆಯ ರೀತಿಯ ಹೇಳಿಕೆ ನೀಡುವುದನ್ನು ಬಿಟ್ಟು ನನಗೆ ಬೇರೆ ದಾರಿಯಿರಲಿಲ್ಲ. ಏಕೆಂದರೆ ಬರೆಯುವುದನ್ನು ನಾನು ಸುತರಾಂ ಇಷ್ಟಪಡುವುದಿಲ್ಲ. ಈ 'ಬರವಣಿಗೆ'ಯೆಂಬ ಪ್ರಕ್ರಿಯೆಯೇ ಯೂರೋಪಿಯನ್ನರ 'ವೈಚಾರಿಕ ಚಿಂತನೆ' ಎಂಬ ಪರಿಕಲ್ಪನೆಯ ಕೂಸು. ಆಡುವ ಮಾತುಗಳಿಗೆ ಸಿಗದ ಮಹತ್ವ ಬರೆದದ್ದಕ್ಕೆ ಸಿಕ್ಕಿಬಿಡುತ್ತದೆ. ನನ್ನ ಸಂಸ್ಕೃತಿಯಾದ *ಲಕೋಟ* ಸಂಸ್ಕೃತಿಗೆ ಒಂದು ಮೌಖಿಕ ಪರಂಪರೆ ಇದೆ. ಆದ್ದರಿಂದಲೇ ಸಾಮಾನ್ಯವಾಗಿ ನಾನು ಬರೆಯುವ ಯೋಚನೆಯನ್ನು ತಳ್ಳಿಹಾಕಿಬಿಡುತ್ತೇನೆ. 'ಬರವಣಿಗೆ' ಅನ್ನುವುದು, ಬಿಳಿಯರಿಗೆ, ಬಿಳಿಯೇತರ ಜನರ ಸಂಸ್ಕೃತಿಯನ್ನು ನಾಶಮಾಡುವ, ಮಾತಿನ ಮೂಲಕವೇ ಕಟ್ಟಿಕೊಂಡ ಸಂಬಂಧಗಳ ಮೇಲೆ ಅಮೂರ್ತ ವಿಚಾರಗಳನ್ನು ಹೇರುವ ಒಂದು ಉಪಾಯ. ಆದ್ದರಿಂದ ನೀವೀಗ ಏನನ್ನು ಓದುತ್ತಿದ್ದೀರೋ ಅದು ನಾನು ಬರೆದದ್ದಲ್ಲ. ನಾನು ಹೇಳಿದ್ದನ್ನು ಬೇರೆಯವರು ಬರೆದುಕೊಂಡಿರುವುದು. ಬಿಳಿಯರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಿರುವ ಒಂದೇ ದಾರಿಯೆಂದರೆ ಈ ಜೀವವಿಲ್ಲದ ಒಣಗಿದ ಹಾಳೆಗಳ ಮೂಲಕ ಮಾತ್ರ. ಆದ್ದರಿಂದ ನನ್ನ ಮಾತುಗಳನ್ನು ದಾಖಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈ ನನ್ನ ಮಾತುಗಳು ಅವರನ್ನು ತಲುಪುತ್ತದೆಯೋ ಇಲ್ಲವೋ ಎಂದು ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ, ಅವರು ಯಾವುದನ್ನೂ ಕೇಳಿಸಿಕೊಳ್ಳಲಾರರು, ನೋಡಲಾರರು ಮತ್ತು ಕೇವಲ ಓದಬಲ್ಲರು ಎಂಬುದು ನಮಗೆ ಇತಿಹಾಸದುದ್ದಕ್ಕೂ ಗೊತ್ತಾಗುತ್ತಾ ಬಂದಿದೆ. (ಕೆಲವು ಅಪವಾದಗಳೇನೋ ಇವೆ. ಆದರೆ ಆ ಅಪವಾದಗಳೂ ನನ್ನ ವಾದವನ್ನೇ ಹೆಚ್ಚು ಬಲಪಡಿಸುತ್ತವೆ.)

ನನಗೆ ಹೆಚ್ಚು ಕಾಳಜಿ ಇರುವುದು ಅಮೆರಿಕನ್ ಇಂಡಿಯನ್ನರ ಬಗ್ಗೆ. ಅದರಲ್ಲೂ ಬಿಳಿಯರ ಯೂನಿವರ್ಸಿಟಿಗಳಿಗೆ ಮತ್ತು ಸಂಸ್ಥೆಗಳಿಗೆ ಸೇರಿಕೊಳ್ಳಲಾರಂಭಿಸಿರುವ ಅಮೆರಿಕನ್ ಇಂಡಿಯನ್ ವಿದ್ಯಾರ್ಥಿಗಳು, ಮತ್ತಿತರರ ಬಗ್ಗೆ. ಆದರೆ ಈ ನನ್ನ ಕಾಳಜಿಗೂ



ರೆಡ್ ಇಂಡಿಯನ್‌ರ ಮೂಲ ನೆಲೆಯಾದ ದ. ಡಕೋಟಾದ ಬ್ಲ್ಯಾಕ್ ಹಿಲ್ಸ್

ಮಿತಿಗಳಿವೆ. ಕೆಲವರು ರೆಡ್ ಇಂಡಿಯನ್ನರಾಗಿದ್ದೂ ಕೂಡ ಬಿಳಿಯ ಮನಸ್ಸನ್ನು ಬೆಳೆಸಿಕೊಂಡಿರುವ ಸಾಧ್ಯತೆಗಳಿವೆ. ಅದು ಅವರ ವೈಯಕ್ತಿಕ ಆಯ್ಕೆಯಾಗಿದ್ದರೆ, ಇರಲಿ. ಅವರಿಗೆ ನನ್ನಿಂದೇನೂ ಉಪಯೋಗವಿಲ್ಲ. ಇವತ್ತು ಇದು ಅಮೆರಿಕನ್ ಇಂಡಿಯನ್ನರ ಸಾಂಸ್ಕೃತಿಕ ಸರ್ವನಾಶಕ್ಕಾಗಿ ಯೂರೋಪಿಯನ್ನರು ರೂಪಿಸಿರುವ ಹುನ್ನಾರದ ಒಂದು ಭಾಗವಷ್ಟೆ. ಆದ್ದರಿಂದ ನಾನು ಹೆಚ್ಚು ಚಿಂತಿಸುತ್ತಿರುವುದು, ಈ ಸರ್ವನಾಶವನ್ನು ಪ್ರತಿರೋಧಿಸುವ ಮತ್ತು ಈ ಸಂಬಂಧವಾಗಿ ಹೇಗೆ ಮುಂದುವರಿಯಬೇಕೆಂಬ ವಿಷಯದಲ್ಲಿ ಗೊಂದಲಕ್ಕೊಳಗಾಗಿರುವ ನನ್ನ ಜನರ ಬಗ್ಗೆ.



ನ್ಯೂಟನ್ ಗೆಲಿಲಿಯೋ, ಅಡಂ ಸ್ಮಿತ್ ಹೆಗಲ್, ಮಾರ್ಕ್ಸ್

ಯೂರೋಪಿಯನ್ ಸಂಸ್ಕೃತಿಯ ಪ್ರಭಾವಕ್ಕೊಳಗಾಗದೇ ಇರಲು ಪ್ರತಿಯೊಬ್ಬ ಅಮೇರಿಕನ್ ಇಂಡಿಯನ್ನನೂ ಶಕ್ತಿ ಮೀರಿ ಪ್ರಯತ್ನಿಸಬೇಕಾಗುತ್ತದೆ. ಅದಕ್ಕೆ ಬೇಕಾಗಿರುವ ಶಕ್ತಿ, ನಮ್ಮ ಹಿರಿಯರು ಕಾಪಾಡಿಕೊಂಡು ಬಂದಿರುವ ಪರಂಪರಾಗತ ಮೌಲ್ಯಗಳಿಂದ ಬರಬೇಕು, ಭವಿಷ್ಯದ ಭರವಸೆಗಳಿಂದ ಬರಬೇಕು, ನಾಲ್ಕೂ ದಿಕ್ಕುಗಳಿಂದ ಮತ್ತು ಅವುಗಳೊಂದಿಗಿನ ನಮ್ಮ ಸಂಬಂಧಗಳಿಂದ ಬರಬೇಕೇ ಹೊರತು ಯಾವುದೋ ಒಂದು ಪುಸ್ತಕದ ಪುಟಗಳಿಂದಲ್ಲ ಅಥವಾ ನೂರಾರು ಪುಸ್ತಕಗಳನ್ನೋದುವುದರಿಂದಲೂ ಅಲ್ಲ. ಯಾವ ಯೂರೋಪಿಯನ್ನನೂ, ಒಬ್ಬ *ಲಕೋಟನಿಗೆ ಲಕೋಟನಾಗುವುದನ್ನು*, ಒಬ್ಬ *ಹೋಪಿಗೆ*(ಲಕೋಟ, ಹೋಪಿ-ಅಮೇರಿಕಾ ಮೂಲನಿವಾಸಿಗಳ ಬುಡಕಟ್ಟು ಪಂಗಡಗಳು) *ಹೋಪಿಯಾಗುವುದನ್ನು* ಕಲಿಸಲು ಸಾಧ್ಯವಿಲ್ಲ. ಬುಡಕಟ್ಟುಗಳ ವಿಷಯದಲ್ಲೋ ಅಥವಾ ಶಿಕ್ಷಣದ ವಿಷಯದಲ್ಲೋ ಅಥವಾ ಮತ್ತಾವುದೋ ವಿಷಯದಲ್ಲೋ ಪಡೆದ ಸ್ನಾತಕೋತ್ತರ ಪದವಿಯೂ ಕೂಡ ಒಬ್ಬ ವ್ಯಕ್ತಿಯನ್ನು ಮನುಷ್ಯನನ್ನಾಗಿ ಮಾಡಲು ಸಾಧ್ಯವಿಲ್ಲ ಅಥವಾ ಒಬ್ಬ ವ್ಯಕ್ತಿಗೆ ತನ್ನ ಪರಂಪರೆಯ ಅರಿವನ್ನು ಮೂಡಿಸಲು ಸಾಧ್ಯವಿಲ್ಲ. ಅದು ಅವನನ್ನು ಮಾನಸಿಕವಾಗಿ ಯೂರೋಪಿಯನ್‌ನನ್ನಾಗಿ, ತನ್ನ ಸಂಸ್ಕೃತಿಗೇ ಪರಕೀಯನನ್ನಾಗಿ ಮಾಡಬಹುದಷ್ಟೇ.

ಇಲ್ಲಿ ಸ್ವಲ್ಪ ಗೊಂದಲಗಳಿರುವಂತೆ ಕಾಣುತ್ತದೆ. ಆದ್ದರಿಂದ ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಬೇಕು. ಅದೇನೆಂದರೆ, ನಾನು ಯೂರೋಪಿಯನ್ ಅಥವಾ ಮಾನಸಿಕ ಯೂರೋಪಿಯನ್ ಎಂದು ಪ್ರಸ್ತಾಪಿಸುವಾಗ, ತಪ್ಪು ಕಲ್ಪನೆಗಳಿಗೆ ಅವಕಾಶವಾಗಬಾರದು. ಅಂದರೆ, ಒಂದು ಕಡೆ, ಸಾವಿರಾರು ವರ್ಷಗಳಿಂದ ನಡೆದ ನರಮೇಧದ(ಮೂಲನಿವಾಸಿ ರೆಡ್ ಇಂಡಿಯನ್ನರನ್ನು ಅಲ್ಲಿಗೆ ವಲಸೆ ಬಂದ ಬಿಳಿಯರು ನಾಗರೀಕತೆಯ ಹೆಸರಿನಲ್ಲಿ ನಡೆಸಿದ್ದು) ಪರಿಣಾಮಗಳು, ಅದರ ಭಾಗವಾಗಿ ಮೂಡಿದ ಪ್ರಗತಿ-ವಿರೋಧ ಮತ್ತು ಯೂರೋಪಿಯನ್ ವೈಚಾರಿಕತೆಯ ಬೆಳವಣಿಗೆಗಳು ಕೆಟ್ಟದ್ದೆಂದೂ, ಮತ್ತೊಂದು ಕಡೆ ಕೆಲವು ಹೊಸ ಕ್ರಾಂತಿಕಾರೀ ವಿಚಾರಗಳ ಬೆಳವಣಿಗೆಗಳು ಒಳ್ಳೆಯದೆಂದೂ ನಾನು ಹೇಳುತ್ತಿಲ್ಲ. ಇಲ್ಲಿ ಹೊಸ ಕ್ರಾಂತಿಕಾರೀ ವಿಚಾರಗಳೆಂದು ನಾನು ಸಾಮಾನ್ಯವಾಗಿ ಪ್ರಸ್ತಾಪಿಸುತ್ತಿರುವುದು ಮಾರ್ಕ್ಸ್‌ವಾದ, ಅರಾಜಕತಾವಾದ, ಎಡಪಂಥೀಯವಾದ ಇತ್ಯಾದಿಗಳನ್ನು. ಈ ಸಿದ್ಧಾಂತಗಳೆಲ್ಲ ಇತರ ಯೂರೋಪಿಯನ್ ಬೌದ್ಧಿಕ ಪರಂಪರೆಯಿಂದ ಪ್ರತ್ಯೇಕಿಸಿ ನೋಡಬಹುದು ಎಂದು ನಾನು ನಂಬುವುದಿಲ್ಲ. ಅದೇ ಹಾಡು, ಅದೇ ರಾಗ ಅಷ್ಟೇ.

ಈ 'ಕ್ರಾಂತಿಕಾರಿ ವಿಚಾರಧಾರೆ'ಯ ಪ್ರಕ್ರಿಯೆಯು ಬಹಳ ಹಿಂದೆಯೇ ಆರಂಭವಾಗಿದೆ. ಉದಾಹರಣೆಗೆ, ನ್ಯೂಟನ್ನನು ಇಡೀ ಬ್ರಹ್ಮಾಂಡವನ್ನೇ ಒಂದು ಸರಳ ಗಣಿತೀಯ ಸಮೀಕರಣಕ್ಕೆ ಇಳಿಸಿ ಭೌತಶಾಸ್ತ್ರ ಮತ್ತು ಇತರ ನೈಸರ್ಗಿಕ ವಿಜ್ಞಾನ ಶಾಸ್ತ್ರಗಳಲ್ಲಿ ಬಹುದೊಡ್ಡ ಕ್ರಾಂತಿಯನ್ನುಂಟು ಮಾಡಿದ. ಡಿಕಾರ್ಟನು ಸಂಸ್ಕೃತಿಯ ವಿಷಯದಲ್ಲಿ ಅಂಥದೇ ಕ್ರಾಂತಿಯನ್ನು ಮಾಡಿದ. ಜಾನ್ ಲಾಕ್ ರಾಜಕೀಯಶಾಸ್ತ್ರದಲ್ಲಿ, ಆಡಮ್ ಸ್ಮಿತ್ ಅರ್ಥಶಾಸ್ತ್ರದಲ್ಲಿ ಇದನ್ನೇ ಮಾಡಿದರು. ಈ ಪ್ರತಿಯೊಬ್ಬ ಚಿಂತಕನೂ ಮಾನವನ ಅಸ್ತಿತ್ವದ ಆಧ್ಯಾತ್ಮಿಕತೆಯ ಒಂದೊಂದು ಆಯಾಮವನ್ನು ತೆಗೆದುಕೊಂಡು ಅಮೂರ್ತ ಸಂಕೇತಗಳನ್ನಾಗಿ ಪರಿವರ್ತಿಸಿದರು. ಕ್ರಿಶ್ಚಿಯಾನಿಟಿ ಎಲ್ಲಿ ಕೊನೆಗೊಂಡಿತ್ತೋ ಅಲ್ಲಿಂದ ಇವರು ತಮ್ಮ 'ಕ್ರಾಂತಿಕಾರಿ ವಿಚಾರಧಾರೆ'ಯನ್ನು ಆರಂಭಿಸಿದರು-ಬುದ್ಧಿಜೀವಿಗಳ ಮಾತಿನಲ್ಲಿ ಹೇಳುವುದಾದರೆ ಕ್ರಿಶ್ಚಿಯನ್ ಮತವನ್ನು 'ಮತಾತೀತ'(secularise)ಗೊಳಿಸಿದರು- ಮತ್ತು ಹಾಗೆ ಮಾಡುವುದರ ಮೂಲಕ ಯೂರೋಪ್ ಮತ್ತಷ್ಟು ಪ್ರಬಲವಾಗಲು ಮತ್ತು ವಿಸ್ತರಣವಾದೀ ಸಂಸ್ಕೃತಿಯಾಗಿ ಬೆಳೆಯಲು ಅನುಕೂಲ ಮಾಡಿಕೊಟ್ಟರು. ಈ ಎಲ್ಲ ವೈಚಾರಿಕ ಕ್ರಾಂತಿಗಳು ಯೂರೋಪಿಯನ್ ಮನಸ್ಸನ್ನು ಇನ್ನಷ್ಟು ಅಮೂರ್ತಗಳಿಸುವುದರ ಜೊತೆಗೆ ಬ್ರಹ್ಮಾಂಡದ ಅದ್ಭುತವಾದ ಸಂಕೀರ್ಣತೆ ಮತ್ತು ಆಧ್ಯಾತ್ಮಿಕತೆಯನ್ನು ಅಳಿಸಿ ಹಾಕಿ, ಅದರ ಬದಲಿಗೆ ಎಲ್ಲವನ್ನೂ ತಾರ್ಕಿಕವಾಗಿ ಅಂಕಿ-ಅಂಶಗಳ ಆಧಾರದ ಮೇಲೆ ವಿವರಿಸುವ ಯಾಂತ್ರಿಕ ಮಾದರಿಯನ್ನು ಬೆಳೆಸಿದವು. ಇದೇ ಮುಂದೆ ಯೂರೋಪಿಯನ್ ಮನಸ್ಸಿನಲ್ಲಿ 'ದಕ್ಷತೆ' ಎನಿಸಿಕೊಂಡಿತು. ಯಾಂತ್ರಿಕವಾದದ್ದೆಲ್ಲವೂ ಪರಿಪೂರ್ಣ- ಆ ಕ್ಷಣದಲ್ಲಿ ಯಾಂತ್ರಿಕತೆಗೆ ಪೂರಕವಾಗಿ ಯಾವೆಲ್ಲ ಮಾದರಿಗಳು ಕೆಲಸ ಮಾಡುತ್ತವೋ-ಅವು ಸರಿಯಲ್ಲ ಎಂದು ಕಾಣುತ್ತಿದ್ದರೂ ಕೂಡ-ಅವುಗಳೇ ಸರಿ ಎಂದು ಪರಿಗಣಿಸಲಾಗುತ್ತಿತ್ತು. ಇದೇ ತತ್ಕಾಲೀನತೆಯ ಕಾರಣಕ್ಕೆ ಯೂರೋಪಿಯನ್ ಮನಸ್ಸಿನಲ್ಲಿ 'ಸತ್ಯ'ವು ಬಹಳ ವೇಗವಾಗಿ ಬದಲಾಗುತ್ತಿರುತ್ತದೆ. ಇಂಥಾ ಪ್ರಕ್ರಿಯೆಯ ಫಲಗಳೂ ಕೂಡ ತತ್ಕಾಲಿಕ ಅಥವಾ ಅಲ್ಪಕಾಲಿಕವಾಗಿರುತ್ತದೆ. ಆದ್ದರಿಂದ ಇದು ನಿರಂತರವಾಗಿ ಹಳೆಯ ಮಾದರಿಗಳನ್ನು ಕೈಬಿಡುತ್ತಾ, ಯಾಂತ್ರಿಕತೆಗೆ ಪೂರಕವಾದ ಹೊಸ ಮಾದರಿಗಳನ್ನು ಕಂಡುಹಿಡಿಯುತ್ತಾ, ಚಲಾವಣೆಯಲ್ಲಿಡುತ್ತಾ ಸಾಗುತ್ತಿರುತ್ತದೆ.

ನ್ಯೂಟನ್, ಡಿಕಾರ್ಟ್, ಲಾಕ್ ಮತ್ತು ಸ್ಮಿತ್‌ರ ಚಿಂತನೆಗಳಿಗೆ ಹೆಗೆಲ್ ಮತ್ತು ಮಾರ್ಕ್ಸ್ ವಾರಸುದಾರರಾದರು. ಹೆಗೆಲ್ ಮೊದಲು ದೈವಶಾಸ್ತ್ರಗಳನ್ನು ಮತಾತೀತಗೊಳಿಸುವ ಕೆಲಸವನ್ನು ಮಾಡಿದ-ಅವನ ಮಾತಿನಲ್ಲೇ ಹೇಳುವುದಾದರೆ-ಅವನು, ಯೂರೋಪ್ ಯಾವ ಮತೀಯ ಚಿಂತನೆಗಳ ಮೂಲಕ ಈ ಜಗತ್ತನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿತ್ತೋ ಆ ಚಿಂತನೆಗಳನ್ನು ಮತಾತೀತಗೊಳಿಸಿದ. ನಂತರ ಮಾರ್ಕ್ಸ್, ಹೆಗೆಲ್‌ನ ದರ್ಶನಗಳನ್ನು ಭೌತವಾದದ ಪರಿಭಾಷೆಯಲ್ಲಿ ಪ್ರಸ್ತುತಪಡಿಸಿದ. ಅಂದರೆ, ಮಾರ್ಕ್ಸ್ ತನ್ನದೇ ಶೈಲಿಯಲ್ಲಿ ಇಡಿಯಾಗಿ ಹೆಗೆಲ್‌ನ ದರ್ಶನಗಳಲ್ಲಿದ್ದ ಆಧ್ಯಾತ್ಮಿಕತೆಯನ್ನೇ ಕಳಚಿ ಹಾಕಿದ! ಈಗ ಇದನ್ನು ಯೂರೋಪ್‌ನ ಭವಿಷ್ಯದ ಕ್ರಾಂತಿಕಾರೀ ಶಕ್ತಿಯಾಗಿ ಕಾಣಲಾಗುತ್ತಿದೆ. ಇದು ಯೂರೋಪಿಯನ್ನರಿಗೆ ಕ್ರಾಂತಿಕಾರಿಯಾಗಿ ಕಾಣಬಹುದು. ಆದರೆ ಅಮೇರಿಕನ್ ಇಂಡಿಯನ್ನರಿಗೆ, ಇದು ಯೂರೋಪಿಯನ್ನರ 'ಇರುವುದು ಮತ್ತು ಪಡೆಯುವುದು'- ಈ ಎರಡರ ನಡುವಿನ ಆ ಅದೇ ಹಳೆಯ ಸಂಘರ್ಷದ ಇನ್ನಷ್ಟು ಉತ್ಕಟ ರೂಪವಷ್ಟೆ. ಯೂರೋಪಿಯನ್ ಸಾಮ್ರಾಜ್ಯಶಾಹಿಯ ಹೊಸ ಮಾರ್ಕ್ಸ್‌ವಾದಿ ರೂಪದ ಬೇರುಗಳು, ನ್ಯೂಟನ್, ಹೆಗೆಲ್ ಇತ್ಯಾದಿ ಚಿಂತಕರ ಪರಂಪರೆಯೊಂದಿಗೆ ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದಿಗಳು ಹೊಂದಿರುವ ಸಂಬಂಧಗಳಲ್ಲಿ ಕಾಣಸಿಗುತ್ತವೆ.

'ಇರುವು' ಒಂದು ಆಧ್ಯಾತ್ಮಿಕ ಪ್ರಶ್ನೆಯಾದರೆ 'ಗಳಿಸುವುದು' ಒಂದು ಲೌಕಿಕ ಪ್ರಶ್ನೆ. ಪರಂಪರಾಗತವಾಗಿ ಅಮೇರಿಕನ್ ಇಂಡಿಯನ್ನರು ಅತ್ಯುತ್ತಮ ರೀತಿಯಲ್ಲಿ ಬದುಕಲು ಸತತವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಸಂಪತ್ತನ್ನು ಕೊಟ್ಟುಬಿಡುವುದರ ಮೂಲಕ, ಬಿಟ್ಟುಬಿಡುವುದರ ಮೂಲಕ 'ಗಳಿಸದೇ ಇರುವುದು' ಈ ಆಧ್ಯಾತ್ಮಿಕ ಪ್ರಕ್ರಿಯೆಯ ಭಾಗವಾಗಿತ್ತು ಮತ್ತು ಆಗಿದೆ ಕೂಡ. ಲೌಕಿಕವಾಗಿ 'ಗಳಿಕೆ'ಯೆನ್ನುವುದು ಅಮೇರಿಕನ್ ಇಂಡಿಯನ್ ಸಾಂಪ್ರದಾಯಿಕರಿಗೆ ಬದುಕಿನ ಹುಸಿ ಸ್ಥಾನಮಾನದ ಸೂಚಕವಾಗಿದ್ದರೆ, ಯೂರೋಪಿಯನ್ನರಿಗೆ ಇದು 'ವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತಿರುವುದರ' ಸಂಕೇತ. ಸ್ಪಷ್ಟವಾಗಿಯೇ ಯೂರೋಪಿಯನ್ ಮತ್ತು ಅಮೇರಿಕನ್ ಇಂಡಿಯನ್ ಜೀವನ ದೃಷ್ಟಿಗಳು ಪರಸ್ಪರ ವಿರುದ್ಧವಾದವುಗಳು. ಮಾರ್ಕ್ಸಿಸಂ ಮತ್ತು ಅಮೇರಿಕನ್ ಇಂಡಿಯನ್ ದೃಷ್ಟಿಕೋನಗಳಂತೂ ಇನ್ನೂ ತದ್ವಿರುದ್ಧ. ಇದರ ಮುಖ್ಯ ಪರಿಣಾಮಗಳತ್ತ ನೋಡಿದಾಗ, ಇದೆಲ್ಲ ಬರೀ ಬೌದ್ಧಿಕ ಚರ್ಚೆಗೆ ದಕ್ಕುವ ಸಂಗತಿಯಲ್ಲ ಎಂಬುದು ಗೊತ್ತಾಗುತ್ತದೆ.

ಜಗತ್ತನ್ನು ಅನಾಧ್ಯಾತ್ಮೀಕರಿಸುವ(despiritualise) ಯೂರೋಪಿಯನ್ನರ ಭೌತವಾದಿ ಪರಂಪರೆಯು ಇನ್ನೊಬ್ಬ ಮನುಷ್ಯನನ್ನು ಅಮಾನವಗೊಳಿಸುವ(dehumanise) ಮಾನಸಿಕ ಪ್ರಕ್ರಿಯೆಗೆ ಸಮನಾದದ್ದು. ಇತರರನ್ನು ಅಮಾನವಗೊಳಿಸುವುದರಲ್ಲಿ ಯಾರು ನಿಷ್ಣಾತರು? ಯಾಕೆ? ಒಬ್ಬ ಸೈನಿಕ ಯುದ್ಧಕ್ಕೆ ಹೊರಡುವ ಮುನ್ನ ಅನೇಕ ಯುದ್ಧಗಳನ್ನು ನೋಡುವ ಮೂಲಕ ಇದನ್ನು ಕಲಿಯುತ್ತಾನೆ. ಕೊಲೆಗಡುಕನೊಬ್ಬ ಕೊಲೆ ಮಾಡುವುದಕ್ಕೆ ಮುಂಚೆ ಹಾಗೆ ತಯಾರಾಗುತ್ತಾನೆ. ನಾಝಿ ಪಡೆಗಳ ಖಖ ಗಾರ್ಡುಗಳು ಯಾತನಾಶಿಬಿರಗಳಲ್ಲಿನ ಸೆರೆಯಾಳುಗಳನ್ನು ಹಾಗೆ ಣುತ್ತಿದ್ದರು. ಪೋಲೀಸರೂ ಹಾಗೆ ಮಾಡುತ್ತಾರೆ. ಯುರೇನಿಯಂ ಗಣಿಗಳು ಮತ್ತು ಉಕ್ಕು ಕಾರ್ಖಾನೆಗಳಿಗೆ ಕೆಲಸಗಾರರನ್ನು ಕಳಿಸುವ ಮೊದಲು ಕಾರ್ಪೋರೇಷನ್ ಅಧಿಕಾರಿಗಳು ಇದನ್ನೇ ಮಾಡುತ್ತಾರೆ. ರಾಜಕಾರಣಿಗಳಂತೂ ಅವರ ಕಣ್ಣಿಗೆ ಬಿದ್ದವರೆಲ್ಲರಿಗೂ ಇದನ್ನೇ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಏನಾಗುತ್ತದೆಂದರೆ ಕೊಲ್ಲುವುದಾಗಲೀ, ಇತರರನ್ನು ನಾಶಮಾಡುವುದಾಗಲೀ ತಪ್ಪು ಎನಿಸುವುದಿಲ್ಲ. ಕ್ರಿಶ್ಚಿಯನ್ನರ ದೈವಾಜ್ಞೆಗಳಲ್ಲೊಂದು 'ನೀನು ಕೊಲ್ಲಕೂಡದು, ಕೊನೇ ಪಕ್ಷ ಮನುಷ್ಯರನ್ನು ಕೊಲ್ಲಕೂಡದು' ಎಂದು ಹೇಳುತ್ತದೆ. ಹಾಗಾಗಿ ಇವರ ಕುಟಿಲೋಪಾಯವೆಂದರೆ, ಇವರ ಉದ್ದೇಶ ಸಾಧನೆಗೆ ಸಿಕ್ಕ ಬಲಿಗಳನ್ನು ಮಾನಸಿಕವಾಗಿ ಅಮಾನವಗೊಳಿಸುವುದು. ಹೀಗಾಗಿ

ದೈವಾಜ್ಞೆಗಳ ಉಲ್ಲಂಘನೆಯೇ ಒಂದು ಹಿರಿಮೆಯೇ ಆಗಿ ಪರಿವರ್ತಿತವಾಗಿಬಿಡುತ್ತದೆ!

ವಿಶ್ವದ ಅನಾಧ್ಯಾತ್ಮೀಕರಣದ ಹಿನ್ನೆಲೆಯಲ್ಲಿ ಮಾನಸಿಕವಾಗಿ ಪರಿವರ್ತಿಸುವ ಪ್ರಕ್ರಿಯೆಯು ಕೆಲಸಮಾಡುತ್ತಾ ಇಡೀ ಭೂಗ್ರಹವನ್ನೇ ನಾಶಪಡಿಸುವುದೂ ಕೂಡ ಒಳ್ಳೆಯದೇ ಆಗಿಬಿಡುತ್ತದೆ. ಅಮಾನವಗೊಳಿಸುವ ಪ್ರಕ್ರಿಯೆಯಲ್ಲಿನ ಕ್ರೌರ್ಯವನ್ನು ಹೇಗೆ 'ವಿಜಯ ಮತ್ತು ಸ್ವಾತಂತ್ರ್ಯ' ಎಂಬ ಪದಗಳಿಂದ ಸಮರ್ಥಿಸಿಕೊಳ್ಳುತ್ತಾರೋ ಹಾಗೇ 'ಪ್ರಗತಿ ಮತ್ತು ಅಭಿವೃದ್ಧಿ' ಎಂಬ ಮಂತ್ರಗಳಿಂದ ಸರ್ವನಾಶವನ್ನು ಸಮರ್ಥಿಸಿಕೊಳ್ಳುತ್ತಾರೆ. ಉದಾಹರಣೆಗೆ, ರಿಯಲ್ ಎಸ್ಟೇಟ್ ದಂಧೆಕೋರನೊಬ್ಬ ಒಂದಷ್ಟು ಭೂಮಿಯನ್ನು 'ಅಭಿವೃದ್ಧಿ' ಪಡಿಸುವ ನೆಪದಲ್ಲಿ ಕಲ್ಲಿನ ಗಣಿಯನ್ನು ಆರಂಭಿಸಬಹುದು; ಇಲ್ಲಿ 'ಅಭಿವೃದ್ಧಿ' ಎಂದರೆ ಸಂಪೂರ್ಣ ನಾಶ, ಶಾಶ್ವತ ನಾಶ, ಭೂಮಿಯನ್ನೇ ಬಲಿಕೊಡುವ ನಾಶ. ರಸ್ತೆಗಳ ನಿರ್ಮಾಣದ ಮೂಲಕ ಹೆಚ್ಚೆಚ್ಚು ಪ್ರದೇಶಗಳನ್ನು ಅಭಿವೃದ್ಧಿ ಸಾಧ್ಯ ಎಂಬ ಈ ಯೂರೋಪಿಯನ್ ತರ್ಕ ಹಲವು ಟನ್ನು ಜಲ್ಲಿಯ ಭಾರವನ್ನು ಹೊತ್ತಿದೆಯಷ್ಟೆ. ಅಂತಿಮವಾಗಿ, ಯೂರೋಪಿಯನ್ ದೃಷ್ಟಿಯಲ್ಲಿ, ಈ ತರಹದ ಹುಚ್ಚಾಟಗಳಿಗೆ ಇಡೀ ವಿಶ್ವವೇ ತೆರೆದ ಆಟದ ಮೈದಾನವಾಗಿದೆ. ಇಲ್ಲಿ ಗಮನಿಸಬೇಕಾದ ತುಂಬಾ ಮುಖ್ಯವಾದ ಸಂಗತಿಯೇನೆಂದರೆ, ಬಹುಶಃ ಯೂರೋಪಿಯನ್ನರಿಗೆ ತಾವು ಇದರಲ್ಲೇನೋ ಕಳೆದುಕೊಳ್ಳುತ್ತಿದ್ದೇವೆ ಅಂತ ಅನ್ನಿಸುವುದೇ ಇಲ್ಲ ಎಂಬುದು. ಹೇಗೂ ಅವರ ತತ್ವಜ್ಞಾನಿಗಳು ವಿಶ್ವವನ್ನು ಅನಾಧ್ಯಾತ್ಮೀಕರಿಸಿಬಿಟ್ಟಿದ್ದಾರಲ್ಲಾ! ಹಾಗಾಗಿ ಅಗಾಧವಾದ ಬೆಟ್ಟಗಳ, ವಿಶಾಲವಾದ ಕೆರೆಗಳ ಅಥವಾ ಸುತ್ತಲಿನ ಜನ ಬದುಕು ಮಾಡುವ ಅದ್ಭುತ ಲೋಕವನ್ನು ಬೆರಗಿನಿಂದ ಗಮನಿಸುವುದರಲ್ಲಿ ಅವರಿಗೆ ಯಾವ ಆನಂದವೂ ಇಲ್ಲ. ಬದಲಾಗಿ ಹೆಚ್ಚೆಚ್ಚು ವಸ್ತುಗಳನ್ನು ಸಂಪಾದಿಸಿಟ್ಟುಕೊಳ್ಳುವುದರಲ್ಲಿ ತಮ್ಮ ಆನಂದವನ್ನು ಅಳೆದುಕೊಳ್ಳುತ್ತಾರೆ. ಆದ್ದರಿಂದ

. . . .

. . coolant)ದಂತೆ ಕಾಣುತ್ತದೆ. ಹಾಗೇ ಸಾಮಾನ್ಯ ಜನರನ್ನೂ ಕೂಡ ಅವರ ಶಾಲೆಗಳೆಂದು ಕರೆಯಲಾಗುವ ಅವರ ಸಿದ್ಧಾಂತಗಳ 'ಪ್ರಚಾರ ಗಿರಣಿ'ಗಳಿಗೆ ತುಂಬುವ ಮೂಲಕ ಮಾನಸಿಕ ಪರಿವರ್ತನ ಪ್ರಕ್ರಿಯೆಗೆ ಒಳಪಡಿಸುತ್ತಾರೆ.

ಬೇರ್ಪಡಿಸಲಾಗದು; ಅವರು ಒಂದೇ ಸಂಸ್ಕೃತಿಯ ಎರಡು ಮುಖಗಳು. ಆದ್ದರಿಂದ ತತ್ವ ಮತ್ತು ಆಚರಣೆಗಳಲ್ಲಿ, ಮಾರ್ಕ್ಸಿಸಂ ಕೂಡ ಮೌಲ್ಯಗಳನ್ನು, ಪರಂಪರೆಯನ್ನು, ಒಟ್ಟಾರೆಯಾಗಿ ಸಾಂಸ್ಕೃತಿಕ ಅಸ್ತಿತ್ವವನ್ನೇ ತ್ಯಜಿಸಿಬಿಡುವಂತೆ ಯುರೋಪಿಯನ್ನೇತರರನ್ನು ಒತ್ತಾಯಿಸುತ್ತದೆ. ಹಾಗೆ ಒತ್ತಾಯಕ್ಕೆ ಮಣಿದಿದ್ದೇ ಆದರೆ ಕೈಗಾರಿಕೀಕರಣಗೊಂಡ ಮಾರ್ಕ್ಸಿಸ್ಟ್ ಸಮಾಜದಲ್ಲಿ ನಾವು ಕೂಡ ವಿಜ್ಞಾನದ ವ್ಯಸನಿಗಳಾಗಿಬಿಡುತ್ತೇವೆ.

'ರಾಷ್ಟ್ರೀಯ ತ್ಯಾಗ ಜೀವಿ'ಗಳೆಂದು ಕರೆಸಿಕೊಂಡಿರುವ ನಮ್ಮ ಈ ಪರಿಸ್ಥಿತಿಗೆ ಬರೀ ಬಂಡವಾಳಶಾಹಿಗಳಷ್ಟೇ ಕಾರಣರೆಂದು ನಾನು ನಂಬುವುದಿಲ್ಲ. ಯೂರೋಪಿಯನ್ ಪರಂಪರೆ; ಯೂರೋಪಿಯನ್ ಸಂಸ್ಕೃತಿಯೇ ಇದಕ್ಕೆ ಕಾರಣ. ಮಾರ್ಕ್ಸಿಸಂ ಎನ್ನುವುದು ಈ ಪರಂಪರೆಯ ಇತ್ತೀಚಿನ ಮುಂದುವರಿಕೆ ಅಷ್ಟೇ. ನಮ್ಮ ಈ ಪರಿಸ್ಥಿತಿಗೆ ಪರಿಹಾರ ಅಲ್ಲ. ಮಾರ್ಕ್ಸಿಸಂ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದೆಂದರೆ, ನಮ್ಮನ್ನು ಬಲಿ ಹಾಕುವ ಅವೇ ಶಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಂತೆ!

ನಮಗೆ ಬೇರೊಂದು ದಾರಿಯಿದೆ. ಅದು ನಮ್ಮ *ಲಕೋಟ* ಪರಂಪರೆಯ ದಾರಿ ಮತ್ತು ಇತರ ಅಮೆರಿಕನ್ ಇಂಡಿಯನ್ ಜನರ ಬದುಕಿನ ದಾರಿಯೂ ಕೂಡ. ಈ ದಾರಿಯಲ್ಲಿ ಮನುಷ್ಯರಿಗೆ, ಭೂಮಿತಾಯಿಯನ್ನು ನಿಕೃಷ್ಟವಾಗಿ ಕಾಣುವ ಹಕ್ಕಿಲ್ಲ. ಎಲ್ಲವನ್ನೂ (ಯೂರೋಪಿಯನ್ ಕಲ್ಪನೆಗಳನ್ನೂ) ಮೀರಿದ ಶಕ್ತಿಗಳಿವೆ ಎಂಬುದು ಈ ದಾರಿಗೆ ಗೊತ್ತು. ಇಲ್ಲಿ ಎಲ್ಲ ಮನುಷ್ಯರೂ ಎಲ್ಲ ಸಂಬಂಧಗಳೊಂದಿಗೆ ಸಮರಸತೆಯನ್ನು ಸಾಧಿಸಬೇಕು. ಅಥವಾ ಇಂತಹ ಸಂಬಂಧಗಳೇ ಅ–ಸಾಮರಸ್ಯತೆಯನ್ನು ನಿವಾರಿಸುತ್ತದೆ ಎಂದು ಹೇಳಬಹುದು. ಯೂರೋಪಿಯನ್ನರು ತಾವು ಈ ಎಲ್ಲ ಸಂಬಂಧಗಳನ್ನೂ ಮೀರಿದವರು ಎಂಬ ಅಹಂಕಾರದಿಂದ ವರ್ತಿಸುವುದರಿಂದ, ಮನುಷ್ಯ ಮನುಷ್ಯರಲ್ಲೇ ಕೆಲವರಿಗೆ ಮಾತ್ರ ಹೆಚ್ಚು ಮಹತ್ವ ಸಿಕ್ಕಿದಂತಾಗಿ, ವ್ಯವಸ್ಥೆಯ ಸಮತೋಲನ ತಪ್ಪಿ ಎಲ್ಲವೂ ಏರುಪೇರಾಗುತ್ತದೆ. ಆಗ ನೈಸರ್ಗಿಕ ವ್ಯವಸ್ಥೆಯು ತನ್ನಿಂತಾನೇ ತನ್ನ ಸಮತೋಲನವನ್ನು ಕಂಡುಕೊಳ್ಳುತ್ತಾ ಮನುಷ್ಯನ ಅಹಂಕಾರವನ್ನು ಮಟ್ಟಹಾಕುತ್ತದೆ, ಅವನ ಗ್ರಹಿಕೆಯನ್ನು ಮೀರಿದ ವಾಸ್ತವದ ಕಟುರುಚಿಯನ್ನು ತೋರಿಸುತ್ತದೆ. ಹಾಗೇ ಸಾಮರಸ್ಯವನ್ನು ಪುನರ್ಸ್ಥಾಪಿಸುತ್ತದೆ. ಈ ಸಮತೋಲನ ಕ್ರಿಯೆಗೆ ಯಾವ ಕ್ರಾಂತಿಕಾರಿ ಸಿದ್ಧಾಂತವೂ ಬೇಕಿಲ್ಲ. ಅದು ಮನುಷ್ಯನ ನಿಯಂತ್ರಣವನ್ನು ಮೀರಿದ್ದು. ಪ್ರಕೃತಿಯೊಂದಿಗೆ ಸಹಜವಾಗಿ ಬದುಕುವವರಿಗೆಲ್ಲರಿಗೂ ಇದು ತಿಳಿದಿರುವುರಿಂದ ಅವರು ತತ್ವ ಸಿದ್ಧಾಂತಗಳನ್ನು ರೂಪಿಸುವುದಿಲ್ಲ. ಸಿದ್ಧಾಂತವು ಅಮೂರ್ತವಾದದ್ದು. ಅದರೆ ನಮ್ಮ ಜ್ಞಾನವು ಮೂರ್ತವಾದದ್ದು, ನಿಜವಾದದ್ದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯೂರೋಪಿಯನ್ ನಂಬಿಕೆಯು(ವಿಜ್ಞಾನದ ಮೇಲಿನ ಅದರ ಹೊಸ ನಂಬಿಕೆಯೂ ಸೇರಿ) ಮನುಷ್ಯನೇ ದೇವರು ಎಂಬ ನಂಬಿಕೆಗೆ ಸಮನಾದದ್ದು. ಅವರು ಯಾವಾಗಲೂ ಒಬ್ಬ ಉದ್ಧಾರಕನನ್ನು–ಜೀಸಸ್ ಕ್ರೈಸ್ಟ್‌ನನ್ನೋ, ಕಾರ್ಲ್‌ಮಾರ್ಕ್ಸ್‌ನನ್ನೋ ಅಥವಾ ಒಬ್ಬ ಐನ್‌ಸ್ಟೀನ್‌ನನ್ನೋ ಹುಡುಕುತ್ತಾರೆ. ಅಮೆರಿಕನ್ ಇಂಡಿಯನ್ನರಿಗೆ ಇದು ಅರ್ಥಹೀನ ಎಂಬುದು ತಿಳಿದಿದೆ. ಪ್ರಕೃತಿಯಲ್ಲಿ ಮನುಷ್ಯನೇ ಅತ್ಯಂತ ದುರ್ಬಲ ಪ್ರಾಣಿ. ಎಷ್ಟು ದುರ್ಬಲನೆಂದರೆ, ಅವನು ಬದುಕಲೆಂದು ಇತರೆ ಜೀವಿಗಳು ತಮ್ಮ ಮಾಂಸವನ್ನೇ ಅವನಿಗೆ ಆಹಾರವಾಗಿ ಬಿಟ್ಟುಕೊಡಲು ತಯಾರಿವೆ. ತನ್ನ ತರ್ಕಜ್ಞಾನದಿಂದ ಮಾತ್ರ ಮನುಷ್ಯ ಬದುಕುಳಿಯಲು ಸಾಧ್ಯವಾಗಿದೆ. ಏಕೆಂದರೆ, ಬೇರೆಲ್ಲ ಜೀವಿಗಳಂತೆ ಮನುಷ್ಯನಿಗೆ ಕೋರೆ ಹಲ್ಲು ಮತ್ತು ಉಗುರುಗಳಿಂದ ಆಹಾರವನ್ನು ಪಡೆದುಕೊಳ್ಳುವ ಶಕ್ತಿ ಇಲ್ಲ. ಈ ತರ್ಕಜ್ಞಾನವು ಮಾನವನಿಗೆ ಒಂದು ಶಾಪ. ಏಕೆಂದರೆ, ಅದು ನೈಸರ್ಗಿಕ ಕ್ರಮವನ್ನು ಮರೆಯುವಂತೆ ಮಾಡುತ್ತದೆ. ಇತರ ಜೀವಿಗಳು ಹಾಗೆ ಮರೆಯುವುದಿಲ್ಲ. ಉದಾಹರಣೆಗೆ ಒಂದು ತೋಳ ಎಂದಿಗೂ ನೈಸರ್ಗಿಕ ಕ್ರಮದಲ್ಲಿನ ತನ್ನ ಸ್ಥಾನವನ್ನು ಮರೆಯುವುದಿಲ್ಲ. ಅಮೆರಿಕನ್ ಇಂಡಿಯನ್ನರೂ ಕೆಲವೊಮ್ಮೆ ಮರೆತು ಬಿಡಬಹುದು. ಆದರೆ ಈ ಯೂರೋಪಿಯನ್ನರು ಸಾಮಾನ್ಯವಾಗಿ ಯಾವಾಗಲೂ ಅದನ್ನು ಮರೆಯುತ್ತಾರೆ. ನಮ್ಮ ಪ್ರಾರ್ಥನೆಗಳಲ್ಲಿ ಜಿಂಕೆಗಳಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ–ನಮ್ಮ ಮತ್ತು ಅವುಗಳ ಸಂಬಂಧಗಳಿಗಾಗಿ, ಅವುಗಳ ಮಾಂಸವನ್ನು ತಿಂದು ಬದುಕಲು ನಮಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ. ಅದೇ ಯೂರೋಪಿಯನ್ನರು ಜಿಂಕೆಗಳನ್ನು ಕೇವಲವಾಗಿ ಕಾಣುವುದಲ್ಲದೇ ತಮ್ಮ ನಾಲಿಗೆಯ ಚಪಲಕ್ಕಾಗಿ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂದು ತಿನ್ನುತ್ತಾರೆ. ಯೂರೋಪಿಯನ್ನರು ತಮ್ಮ ತಾರ್ಕಿಕತೆ ಮತ್ತು ವೈಜ್ಞಾನಿಕತೆಯ ಹಮ್ಮಿನಿಂದಾಗಿ ತಮ್ಮನ್ನು ತಾವು ದೇವರೆಂದು ಭಾವಿಸಿಕೊಳ್ಳುತ್ತಾರೆ! ಆದರೆ ದೇವರು ಸರ್ವೋಚ್ಚ, ಉಳಿದದ್ದೆಲ್ಲವೂ ನೀಚ.

ಮಾರ್ಕ್ಸ್‌ವಾದವನ್ನೊಳಗೊಂಡಂತೆ ಎಲ್ಲ ಯೂರೋಪಿಯನ್ ಪರಂಪರೆಗಳು ಈ ನೆಲದ ಮೇಲಿನ ಎಲ್ಲ ವಿಷಯಗಳ ನೈಸರ್ಗಿಕ ಕ್ರಮಗಳನ್ನು ಕೆಣಕಿವೆ. ತಾಯ್ನೆಲವನ್ನು, ಅದರ ಮೇಲಿನ ತಮ್ಮ ಹಕ್ಕನ್ನು-ದುರುಪಯೋಗಪಡಿಸಿಕೊಂಡಿವೆ. ಇದು ಹೀಗೇ ನಿರಂತರವಾಗಿ ಮುಂದುವರೆಯುವುದು ಸಾಧ್ಯವಿಲ್ಲ. ಈ ಸರಳವಾದ ಸತ್ಯವನ್ನು ಯಾವ ಸಿದ್ಧಾಂತವೂ ಬದಲಿಸಲು ಸಾಧ್ಯವಿಲ್ಲ. ಭೂಮಿತಾಯಿಯೇ ಪ್ರತೀಕಾರ ತಗೆದುಕೊಳ್ಳುತ್ತಾಳೆ, ಇಡೀ ಪರಿಸರವೇ ಸೇಡು ತೀರಿಸಿಕೊಳ್ಳುತ್ತದೆ. ತನ್ನನ್ನು ದುರುಪಯೋಗಪಡಿಸಿಕೊಂಡವರನ್ನೆಲ್ಲ ನಿರ್ನಾಮ ಮಾಡುತ್ತದೆ. ಇತಿಹಾಸ ಒಂದು ಸುತ್ತು ಬಂದು ಮೊದಲಿದ್ದಲ್ಲಿಗೆ ಬಂದು ನಿಲ್ಲುತ್ತದೆ. ಇದು ಕ್ರಾಂತಿ. ಇದು ನಮ್ಮ ಜನರ ದಿವ್ಯಜ್ಞಾನ. ನಮ್ಮ ಹೋಪಿ ಕುಲದವರ ಮತ್ತು ಸರಿಯಾಗಿ ಬದುಕುವ ಇನ್ನಿತರರ ಸಹಜ ಅರಿವು.

ಶತಶತಮಾನಗಳಿಂದಲೂ ನಾವು ಯೂರೋಪಿಯನ್ನರಿಗೆ ಇದನ್ನು ವಿವರಿಸಲು ಪ್ರಯತ್ನಿಸುತ್ತಾ ಬಂದಿದ್ದೇವೆ. ಮೊದಲೇ ಹೇಳಿದಂತೆ ಯೂರೋಪಿಯನ್ನರಿಗೆ ಇದನ್ನೆಲ್ಲ ಕೇಳಿಸಿಕೊಳ್ಳುವ ಕಿವಿ ತಮಗಿಲ್ಲ ಎಂದು ತೋರಿಸಿದ್ದಾರೆ. ನೈಸರ್ಗಿಕ ಕ್ರಮವು ಗೆದ್ದೇ ಗೆಲ್ಲುತ್ತದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಜಿಂಕೆಗಳ ಸಂತಾನ ಹೆಚ್ಚಾಗಿ ಪ್ರಕೃತಿಯ ಸಾಮರಸ್ಯ ಕೆಣಕಲ್ಪಟ್ಟಾಗ ಅವು ಯಾವ ರೀತಿ ದೊಡ್ಡ ಪ್ರಮಾಣದಲ್ಲಿ ಸಾವನ್ನು ಕಾಣುತ್ತವೆಯೋ ಅದೇ ರೀತಿ ನೈಸರ್ಗಿಕ ಕ್ರಮವನ್ನು ಕೆಣಕಿದವರೂ ಸಾಯುತ್ತಾರೆ. ಯೂರೋಪಿಯನ್ನರು ಯಾವುದನ್ನು 'ಜಾಗತಿಕ್ಡ ಪ್ರಮಾಣದ ಮಹಾ ದುರಂತ' ಕರೆಯುತ್ತಾರೋ ಅದು ಸಂಭವಿಸುವ ದಿನ ಬಹಳ ದೂರವಿಲ್ಲ. ಇದೆಲ್ಲದರ ನಡುವೆ ಅಮೆರಿಕನ್ ಇಂಡಿಯನ್ ಮತ್ತು ಇತರ ನೈಸರ್ಗಿಕ ಜೀವಿಗಳು ಬದುಕುಳಿಯುವುದೇ ದೊಡ್ಡ ಸವಾಲು. ಹಾಗೆ ಬದುಕುಳಿಯಲು ಮಾಡುತ್ತಿರುವ ಪ್ರಯತ್ನದ ಭಾಗವೇ ನಮ್ಮ ಈ ಪ್ರತಿರೋಧ, ಹೋರಾಟ. ನಾವು ಹೋರಾಡುತ್ತಿರುವುದು ಯಾವುದೋ ಸರ್ಕಾರವನ್ನು ಉರುಳಿಸುವುದಕ್ಕಾಗಲೀ ರಾಜಕೀಯ ಅಧಿಕಾರವನ್ನು ಪಡೆಯುವುದಕ್ಕಾಗಲೀ ಅಲ್ಲ. ಅಳಿಯುವುದನ್ನು ತಡೆಯುವುದಕ್ಕಾಗಿ ಮತ್ತು ಉಳಿಯುವುದಕ್ಕಾಗಿ ತೋರುವ ಸಹಜ ಪ್ರತಿರೋಧ. ನಮಗೆ ಬಿಳಿಯರ ಸಂಸ್ಥೆಗಳ ಅಧಿಕಾರ ಬೇಡ. ಬದಲಿಗೆ, ಬಿಳಿಯರ ಸಂಸ್ಥೆಗಳೇ ಇಲ್ಲವಾಗಿಬಿಡಬೇಕು. ಅದು ಕ್ರಾಂತಿ.

ವಾಸ್ತವದ ಅರಿವಿನ ಜೊತೆ ಜೊತೆಗೆ ನಮ್ಮ ಪೂರ್ವಿಕರ ಪರಂಪರೆ, ಕಾಲಜ್ಞಾನಗಳೊಂದಿಗೆ ನಮಗಿನ್ನೂ ಸಂಪರ್ಕವಿದೆ. ನಾವು ನಮ್ಮ ಹಿರಿಯರಿಂದ ಕಲಿಯುತ್ತೇವೆ, ಪ್ರಕೃತಿಯಿಂದ ಕಲಿಯುತ್ತೇವೆ, ಕಾಲಾತೀತ ಶಕ್ತಿಗಳಿಂದ ಕಲಿಯುತ್ತೇವೆ. ಮಹಾದುರಂತವು ಸಂಭವಿಸಿ ಎಲ್ಲ ಮುಗಿದ ಮೇಲೂ ನಾವು, ಅಮೆರಿಕನ್ ಇಂಡಿಯನ್ನರು, ಈ ನೆಲದ ಮೇಲೆ ವಾಸಿಸಲು ಬದುಕುಳಿದಿರುತ್ತೇವೆ. ಆಂಡಿಸ್ ಪರ್ವತಗಳ ಶಿಖರಗಳಲ್ಲಿ ಬೆರಳೆಣಿಕೆಯಷ್ಟು ಮಂದಿ ಬದುಕುಳಿದರೂ ಸಾಕು. ಇನ್ನುಳಿದದ್ದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಾವು ಬದುಕುಳಿದೇ ಉಳಿಯುತ್ತೇವೆ. ಪ್ರಕೃತಿಯೊಂದಿಗಿನ ಸಾಮರಸ್ಯ ಮರುಸ್ಥಾಪಿಸಲ್ಪಡುತ್ತದೆ. ಅದುವೇ ನಿಜದ ಕ್ರಾಂತಿ.

ಈ ಹಂತದಲ್ಲಿ ಇನ್ನೊಂದು ವಿಷಯವನ್ನು ನಾನು ಸ್ಪಷ್ಟಪಡಿಸಬೇಕು. ಈಗಾಗಲೇ ನನ್ನ ಮಾತುಗಳನ್ನು ಕೇಳಿ ನಿಮಗೆ ಅರ್ಥವಾಗಿರಬೇಕು. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ವಿಷಯಗಳಲ್ಲಿ ಗೊಂದಲಗಳುಂಟಾಗಿ ಬಹಳ ಬೇಗ ಮತ್ತಷ್ಟು ಗೊಂದಲಗಳನ್ನು ಹುಟ್ಟಿಸುತ್ತವೆ. ಆದ್ದರಿಂದ ಈ ವಿಷಯವನ್ನು ಒತ್ತಿ ಹೇಳುತ್ತಿದ್ದೇನೆ. ನಾನು 'ಯೂರೋಪಿಯನ್' ಎಂಬ ಪದ ಬಳಸುವಾಗ, ಚರ್ಮದ ಬಣ್ಣವನ್ನಾಗಲೀ ಅಥವಾ ಆನುವಂಶಿಕ–ದೈಹಿಕ ಚಹರೆಗಳನ್ನಾಗಲೀ ಮನಸ್ಸಿನಲ್ಲಿಟ್ಟುಕೊಂಡಿಲ್ಲ. ನಾನು ಪ್ರಸ್ತಾಪಿಸುತ್ತಿರುವುದು ಒಂದು ಮಾನಸಿಕ ಸ್ಥಿತಿಯನ್ನು, ಯೂರೋಪಿಯನ್ ಸಂಸ್ಕೃತಿಯ ಬೆಳವಣಿಗೆಯ ಫಲವಾದ ಒಂದು ಲೋಕದೃಷ್ಟಿಯನ್ನು. ಈ ಮನಃಸ್ಥಿತಿಯನ್ನು ಹೊಂದಿರುವವರು ಆನುವಂಶಿಕವಾಗಿ ಇಂಥದೇ ಬಾಹ್ಯರೂಪವನ್ನು ಹೊಂದಿರಬೇಕೆಂಬ ನಿಯಮವೇನೂ ಇಲ್ಲ. ಒಂದು ಸಾಂಸ್ಕೃತಿಕ ವಾತಾವರಣದಲ್ಲಿ ಬೆಳೆದಾಗ ಸಾಮಾನ್ಯವಾಗಿ

ಒಂದು ರೀತಿಯ ಮನಃಸ್ಥಿತಿಯನ್ನು ಹೊಂದಿರುತ್ತಾರಷ್ಟೇ. ಇದು ಅಮೆರಿಕನ್ ಇಂಡಿಯನ್ನರಿಗೂ ಇತರರಿಗೂ ಅನ್ವಯಿಸುತ್ತದೆ.

ಅಮೆರಿಕನ್ ಇಂಡಿಯನ್ನನೊಬ್ಬ ಯೂರೋಪಿಯನ್ ಮೌಲ್ಯಗಳನ್ನು, ಯೂರೋಪಿಯನ್ ಲೋಕದೃಷ್ಟಿಯನ್ನು ಹೊಂದಿರುವ ಸಾಧ್ಯತೆ ಇದೆ. ನಾವು ಅಂತಹವರನ್ನು 'apples'– ಹೊರಗಡೆ ಕೆಂಪಗಿದ್ದು(ಆನುವಂಶಿಕತೆ) ಒಳಗಡೆ ಬೆಳ್ಳಗಿರುವುದು(ಮೌಲ್ಯಗಳು)–ಎಂದು ಕರೆಯುತ್ತೇವೆ. ನಮ್ಮ ಬೇರೆ ಬೇರೆ ಪಂಗಡಗಳಲ್ಲಿ ಇದೇ ತರಹದ ಪದಗಳು ಚಾಲ್ತಿಯಲ್ಲಿವೆ. ಕಪ್ಪು ಜನರು ಇಂತಹವರನ್ನು 'orep' (ನಡುವೆ ಬಿಳಿ ಕೆನೆಯ ಪದರವಿರುವ ಕಪ್ಪು ಬಣ್ಣದ ಬಿಸ್ಕತ್ತು) ಎಂದೂ, hispano (ಸ್ಪಾನಿಷ್ ಮೂಲನಿವಾಸಿಗಳು) ಜನರು 'coconut' ಎಂದೂ ಕರೆಯುತ್ತಾರೆ. ಕೆಲವು ಅಪವಾದಗಳೆಂಬಂತೆ ಹೊರರೂಪದಲ್ಲಿ ಬಿಳಿಯರಾಗಿರುವ ಎಷ್ಟೋ ಬಿಳಿಯರು ಅಂತರಂಗದಲ್ಲಿ ಬಿಳಿಯರಲ್ಲ. ಅವರನ್ನು 'ಮನುಷ್ಯರು' ಎಂದು ಕರೆಯುವುದು ಬಿಟ್ಟು ನನಗೆ ಬೇರೇನೂ ಹೊಳೆಯುತ್ತಿಲ್ಲ. ನಾನು ನಿಮ್ಮ ಮುಂದಿಡುತ್ತಿರುವುದು ಜನಾಂಗೀಯ ಪ್ರತಿಪಾದನೆಯಲ್ಲ, ಸಾಂಸ್ಕೃತಿಕ ಪ್ರತಿಪಾದನೆ. ಅಂತಿಮವಾಗಿ ಯಾರು ಯೂರೋಪಿಯನ್ ಸಂಸ್ಕೃತಿ ಮತ್ತು ಕೈಗಾರಿಕೀಕರಣಗಳನ್ನು ರಕ್ಷಿಸಲು ಮುಂದಾಗುತ್ತಾರೋ ಅವರು ನನ್ನ ಶತ್ರುಗಳು. ಯಾರು ಅವುಗಳನ್ನು ವಿರೋಧಿಸುತ್ತಾರೋ ಅವರು ನನ್ನ ಮಿತ್ರರು. ಅಮೆರಿಕನ್ ಇಂಡಿಯನ್ನರ ಮಿತ್ರರು. ಅವರ ಚರ್ಮದ ಬಣ್ಣ ಯಾವುದಾರೂ ಸಹ.

ಬಿಳಿಯರಲ್ಲೇ ಅತಿಬಿಳಿಯರನ್ನು 'ಕಕೇಶಿಯನ್' (ಜಾರ್ಜಿಯಾದ ಕಾಕಾಸಸ್ ಪರ್ವತ ಪ್ರದೇಶದ ಜನರು) ಎಂದು ಯೂರೋಪಿಯನ್ನರು ಕರೆಯುತ್ತಾರೆ. ಯೂರೋಪಿಯನ್ ದೃಷ್ಟಿಕೋನವನ್ನು ಮಾತ್ರ ನಾನು ವಿರೋಧಿಸುತ್ತೇನೆಷ್ಟೇ. ವಿಯೆಟ್ನಾಮಿನ ಕಮ್ಯುನಿಷ್ಟರು ನಮಗೆ ಆನುವಂಶಿಕವಾಗಿ 'ಕಾಕೇಶಿಯನ್' ತರಹ ಕಂಡರೂ ಅವರು 'ಕಕೇಶಿಯನ್' ಅಲ್ಲ. ಆದರೂ ಈಗ ಅವರು ಬೌದ್ಧಿಕವಾಗಿ ಯೂರೋಪಿಯನ್ನರಂತೆಯೇ ವರ್ತಿಸುತ್ತಿದ್ದಾರೆ. ಚೀನಾದ ಕಮ್ಯುನಿಷ್ಟರಿಗೂ, ಜಪಾನಿನ ಬಂಡವಾಳಶಾಹಿಗಳಿಗೂ, ಬಂಟೂ ಕ್ಯಾಥೋಲಿಕ್‌ರಿಗೂ ಇದೇ ಮಾತು ಅನ್ವಯಿಸುತ್ತದೆ. ಮತ್ತೆ ಇದು ಜನಾಂಗೀಯ ವಾದವಲ್ಲ. ಯಾವ ಬುದ್ಧಿ ಭಾವಗಳಿಂದ ಸಂಸ್ಕೃತಿಯು ರೂಪುಗೊಂಡಿರುತ್ತದೋ ಅದನ್ನು ಗ್ರಹಿಸುವ–ಸ್ವೀಕರಿಸುವ ಬಗೆ ಅಷ್ಟೇ.

ಮಾರ್ಕ್ಸ್‌ವಾದದ ಪರಿಭಾಷೆಯಲ್ಲಿ ನಾನು ಒಬ್ಬ 'ಸಾಂಸ್ಕೃತಿಕ ರಾಷ್ಟ್ರೀಯವಾದಿ'. ನಾನು ಮೊದಲು ನನ್ನ ಜನರ ನಡುವೆ– ಸಾಂಪ್ರದಾಯಿಕ *ಲಕೋಟ* ಜನರ ನಡುವೆ–ಕೆಲಸ ಮಾಡುತ್ತೇನೆ. ನಮ್ಮ ನಡುವೆ ಸಮಾನ ಲೋಕದೃಷ್ಟಿ ಇರುವುದರಿಂದ ಮತ್ತು ಈ ಹೊತ್ತಿನ ತುರ್ತು ಹೋರಾಟ–ವಿಚಾರಗಳನ್ನು ಹಂಚಿಕೊಳ್ಳುವುದರಿಂದ *ಲಕೋಟ* ಜನರ ಜೊತೆಗೆ ಕೆಲಸ ಮಾಡುವುದು ನನ್ನ ಮೊದಲ ಆದ್ಯತೆ. ಇನ್ನೂ ಬೇರೆ ಬೇರೆ ಅಮೆರಿಕನ್ ಇಂಡಿಯನ್ ಕುಲಜನರ ಜೊತೆಗೂ ಕೆಲಸ ಮಾಡುತ್ತೇನೆ. ನಮ್ಮ ದೃಷ್ಟಿಕೋನದಲ್ಲಿನ ಸಾಮ್ಯತೆಯ ಕಾರಣವಾಗಿ ಮತ್ತು ಹೋರಾಟದ ರೂಪುರೇಷೆಗಳನ್ನು ಚರ್ಚಿಸುವ ಸಲುವಾಗಿ. ಇನ್ನೂ ಮುಂದೆ ಹೋಗಿ, ಯಾರು ಯೂರೋಪಿಯನ್ ವಸಾಹತುಶಾಹಿಯ ಒತ್ತಡಕ್ಕೊಳಗಾಗಿದ್ದಾರೋ, ಯಾರು ಯೂರೋಪಿಯನ್ ಸಂಸ್ಕೃತಿ ಮತ್ತು ಕೈಗಾರಿಕತೆಯ ಏಕಸ್ವಾಮ್ಯವನ್ನು ವಿರೋಧಿಸುತ್ತಾರೋ ಅವರ ಜೊತೆಗೂ ಕೆಲಸ ಮಾಡುತ್ತೇನೆ. ನಿಸ್ಸಂಶಯವಾಗಿ, ಪ್ರಬಲ ಯೂರೋಪಿಯನ್ ಸಂಸ್ಕೃತಿಯ ರೂಢಿಗತ ನಡವಳಿಕೆಯನ್ನು ಪ್ರತಿರೋಧಿಸುವ ಕಕೇಶಿಯನ್ ಜನರನ್ನೂ ಒಳಗೊಂಡು ಕೆಲಸ ಮಾಡುತ್ತಿದ್ದೇನೆ. Irish ಮತ್ತು basque ತಕ್ಷಣಕ್ಕೆ ನೆನಪಿಗೆ ಬರುತ್ತಿರುವ ಇತರ ಜೊತೆಗಾರರು. ಇನ್ನೂ ಬಹಳಷ್ಟು ಜೊತೆಗಾರರಿದ್ದಾರೆ.

ಪ್ರಾಥಮಿಕವಾಗಿ ನಾನು ನನ್ನ ಜನರೊಂದಿಗೆ, ನನ್ನ ಸಮುದಾಯದೊಂದಿಗೆ ಕೆಲಸ ಮಾಡುತ್ತೇನೆಂದು ಹೇಳಿದೆನಷ್ಟೇ. ಯೂರೋಪಿಯನ್ನೇತರ ದೃಷ್ಟಿಕೋನವನ್ನು ಹೊಂದಿರುವವರೆಲ್ಲರೂ ಇದನ್ನೇ ಮಾಡಬೇಕೆಂದು ಬಯಸುತ್ತೇನೆ. 'ನಿನ್ನ ಸೋದರನ ದೃಷ್ಟಿಯಲ್ಲಿ ವಿಶ್ವಾಸವಿಡು'(Trust your brother's vision) ಎಂಬದರಲ್ಲಿ ನನಗೆ ನಂಬಿಕೆ ಇದೆ. 'ಸೋದರಿ'ಯರನ್ನೂ ಸೇರಿಸಿಕೊಂಡೇ ಈ ಮಾತನ್ನು ಹೇಳುತ್ತಿದ್ದೇನೆ. ಸಹಜವಾಗಿ ಕೈಗಾರಿಕೀಕರಣವನ್ನು ಮತ್ತು ಮಾನವಕುಲದ ಅಳಿವನ್ನು ವಿರೋಧಿಸುವ, ಸಾಂಸ್ಕೃತಿಕ ದೃಷ್ಟಿಕೋನವುಳ್ಳ ಸಮುದಾಯಗಳಲ್ಲಿ ಮತ್ತು ಜನಾಂಗಗಳಲ್ಲಿ ನಾನು ವಿಶ್ವಾಸವಿಟ್ಟಿದ್ದೇನೆ. ಸ್ಪಷ್ಟವಾಗಿಯೇ, ಯೂರೋಪಿನ ಕೈಗಾರಿಕೆಗಳನ್ನು ಮುಂದುವರೆಸುವುದು ದೂರದೃಷ್ಟಿಯಲ್ಲ; ಬದಲಿಗೆ ಅದು ವಿಶಿಷ್ಟ ಜೀವಿ ಸಂಕುಲಗಳ ಹತ್ಯೆ ಎಂಬುದು ಯಾರ್‍ಯಾರಿಗೆ ಅರ್ಥವಾಗಿದೆಯೋ ಅಂಥ ಬಿಳಿಯರು ಕೂಡ ನನ್ನ ಹೋರಾಟದೊಂದಿಗೆ ಕೈಜೋಡಿಸಬಹುದು.

ಬಿಳಿಯ ಬಣ್ಣವು ಲಕೋಟ ಜನರಿಗೆ ಒಂದು ಪವಿತ್ರವಾದ ಬಣ್ಣ. ನಮ್ಮ ಪರಂಪರೆಯಲ್ಲಿ ನಾಲ್ಕು ಪವಿತ್ರ ಬಣ್ಣಗಳಾದ ಕೆಂಪು, ಹಳದಿ, ಬಿಳಿ ಮತ್ತು ಕಪ್ಪು ಬಣ್ಣಗಳು ನಾಲ್ಕು ದಿಕ್ಕುಗಳನ್ನೂ, ನಾಲ್ಕು ಋತುಮಾನಗಳನ್ನೂ, ಬದುಕಿನ ನಾಲ್ಕು ಹಂತಗಳನ್ನೂ, ಮಾನವಕುಲದ ನಾಲ್ಕು ಜನಾಂಗಗಳನ್ನೂ ಪ್ರತಿನಿಧಿಸುತ್ತವೆ. ಈ ನಾಲ್ಕು ಬಣ್ಣಗಳನ್ನು ಬೆರೆಸಿ ನಿಮಗೆ ಐದನೇ ಜನಾಂಗದ ಬಣ್ಣವಾದ ಕಂದು ಬಣ್ಣ ಸಿಗುತ್ತದೆ. ಇದು ಒಂದು ನೈಸರ್ಗಿಕ ಕ್ರಮ. ಆದ್ದರಿಂದ ನನಗೆ ಈ ಎಲ್ಲ ಜನಾಂಗಗಳ ನಡುವೆ ಕೆಲಸ ಮಾಡುವುದು ಅತ್ಯಂತ ಸಹಜವೇ ಆಗಿದೆ. ಪ್ರತಿಯೊಂದು ಜನಾಂಗವೂ ವಿಶಿಷ್ಟವಾದ ಸಂದೇಶ, ಅರ್ಥ ಮತ್ತು ಅಸ್ತಿತ್ವಗಳನ್ನು ಹೊಂದಿವೆ.

ಆದರೆ ಬಹಳಷ್ಟು ಕಕೇಶಿಯನ್ ಜನರಲ್ಲಿ ಒಂದು ವಿಲಕ್ಷಣ ವರ್ತನೆ ಕಾಣುತ್ತದೆ. ಯಾವಾಗ ನಾನು ಇತರ ಸಂಸ್ಕೃತಿಗಳ ಮೇಲೆ ಯೂರೋಪಿನ ಪ್ರಭಾವವಾಗುತ್ತಿರುವ ಬಗ್ಗೆ ಟೀಕೆ ಮಾಡುತ್ತೇನೋ ಆ ತಕ್ಷಣ ಅವರು ಯೂರೋಪ್ ಸಂಸ್ಕೃತಿಯ ಬಗೆಗೆ ರಕ್ಷಣಾತ್ಮಕ ನಿಲುವನ್ನು ತಾಳುತ್ತಾರೆ ಮತ್ತು ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಮುಂದಾಗುತ್ತಾರೆ. ಆದರೆ ನಾನು ಅವರನ್ನು ವೈಯಕ್ತಿಕವಾಗಿ ಟೀಕಿಸುತ್ತಿಲ್ಲ. ನಾನು ಕಟುವಾಗಿ ಟೀಕಿಸುತ್ತಿರುವುದು ಯೂರೋಪನ್ನು. ನಾನು ಇಡೀ ಯೂರೋಪನ್ನು ಗಮನದಲ್ಲಿಟ್ಟುಕೊಂಡು ಟೀಕಿಸುತ್ತಿರುವ ಅಂಶಗಳನ್ನು ವೈಯಕ್ತಿಕವಾಗಿ ಸ್ವೀಕರಿಸುವ ಮೂಲಕ ಅವರು ಯೂರೋಪಿಯನ್ ಸಂಸ್ಕೃತಿಯನ್ನು ವೈಯಕ್ತಿಕವಾಗಿ ಸ್ವೀಕರಿಸಿ ಅದರ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ಅಂತಿಮವಾಗಿ ಅವರು ಒಂದು ಮಾರಕ ಸಂಸ್ಕೃತಿಯೊಂದಿಗೆ ಗುರುತಿಸಿಕೊಂಡಂತಾಗುತ್ತದೆ. ಈ ಗೊಂದಲದಿಂದ ಅವರು ಹೊರ ಬರಲೇಬೇಕು ಮತ್ತು ಆದಷ್ಟು ಬೇಗ ಬರಬೇಕು. ತಪ್ಪು ದಾರಿಗೆಳೆಯುವ ಇಂಥ ಹುಸಿ ಹೋರಾಟಗಳಲ್ಲಿ ವ್ಯರ್ಥಮಾಡುವಷ್ಟು ಸಮಯ ಮತ್ತು ಶಕ್ತಿ ನಮಗ್ಯಾರಿಗೂ ಇಲ್ಲ. ಮಾನವಕುಲಕ್ಕೆ ಬಿಳಿಯ ಸಂಸ್ಕೃತಿಗಿಂತ ಹೆಚ್ಚಿನ ಒಳ್ಳೆಯ ಕಾಣ್ಕೆಗಳನ್ನು ಕೊಡುವ ಶಕ್ತಿ ಕಕೇಶಿಯನ್ನರಿಗಿದೆ ಎಂಬುದು ನನ್ನ ನಂಬಿಕೆ. ಅವರು ಯೂರೋಪ್ ಸಂಸ್ಕೃತಿಯ ಪ್ರಭಾವ ವಲಯದಿಂದ ಹೊರಗೆ ಬಂದು ಇತರರೊಂದಿಗೆ ಹೆಜ್ಜೆ ಹಾಕಿದಾಗ ಮಾತ್ರ ಯೂರೋಪ್ ಎಂದರೆ ಏನು, ಅದೇನು ಮಾಡುತ್ತಿದೆ ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು. ಬಂಡವಾಳವಾದ, ಮಾರ್ಕ್ಸ್‌ವಾದ ಮತ್ತಿತರ 'ವಾದ'ಗಳಿಗೆ ಜೋತುಬೀಳುವುದರಿಂದ ಅವರು ಒಂದಲ್ಲ ಒಂದು ರೀತಿಯಲ್ಲಿ ಯೂರೋಪಿಯನ್ ಸಂಸ್ಕೃತಿಯೊಳಗೇ ಹೊರಳಾಡುತ್ತಿರುತ್ತಾರಷ್ಟೇ. ಇದನ್ನು ಅವರು ನಿರ್ಲಕ್ಷಿಸುವಂತಿಲ್ಲ. ವಾಸ್ತವವಾಗಿ ಈಗ ಅವರಿಗೆ ಒಂದು ಆಯ್ಕೆಯ ಅವಕಾಶವಿದೆ. ಸಂಸ್ಕೃತಿಯ ಆಧಾರದ ಮೇಲೆ ಈ ಆಯ್ಕೆಯನ್ನು ಮಾಡಿಕೊಳ್ಳತಕ್ಕದ್ದು, ಜನಾಂಗೀಯವಾಗಿ ಅಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯಗಳ, ನಗರಗಳ ಕೊಳೆಗೇರಿಗಳ ಮತ್ತು ಯೂರೋಪಿಯನ್ ಸಂಸ್ಥೆಗಳ ಸೆಳೆತಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗುತ್ತಿರುವ ಅಮೆರಿಕನ್ ಇಂಡಿಯನ್ನರನ್ನು ಕುರಿತು ಕೆಲವು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ. – 'ನಿಮ್ಮನ್ನು ಶೋಷಿಸುವವರನ್ನು ನಿಮ್ಮ ಪರಂಪರೆಗನುಗುಣವಾದ ರೀತಿಯಲ್ಲಿ ವಿರೋಧಿಸುವುದನ್ನು ಕಲಿಯುವಿರಾದರೆ ಸರಿ. ಹೇಗೆ ಅದನ್ನು ನಿಭಾಯಿಸುತ್ತೀರೋ ನನಗೆ ಗೊತ್ತಿಲ್ಲ. ಬಹುಶಃ ನೀವು ಅದರಲ್ಲಿ ಸಫಲರಾಗಬಹುದು. ಆದರೆ ನಿಮ್ಮಲ್ಲಿರು ವಾಸ್ತವ ಪ್ರಜ್ಞೆಯನ್ನು ಕಳೆದುಕೊಳ್ಳಬೇಡಿ. ನಮ್ಮ ಸಮಸ್ಯೆಗಳನ್ನು ಪರಿಹರಿಸುತ್ತೇವೆಂದು ನಂಬಿಸುವ ಬಿಳಿಯ ಜಗತ್ತಿನ ಬಗೆಗೆ ಎಚ್ಚರಿಕೆಯಿಂದಿರಿ. ನಮ್ಮ ಮಾತುಗಳನ್ನು ತಮಗೆ ಅನುಕೂಲವಾಗುವಂತೆ ತಿರುಚುವ ಕಲೆ ಯೂರೋಪಿಯನ್ನರಿಗೆ ಸಿದ್ಧಿಸಿದೆ. ಇದು ನಿಜವೆಂದು ತಿಳಿಯಬೇಕಾದರೆ ನೀವು ಅಮೆರಿಕನ್ ಇಂಡಿಯನ್ ಮತ್ತು ವಿವಿಧ ಯೂರೋಪ್ ಸರ್ಕಾರಗಳ ನಡುವೆ ನಡೆದ ಒಪ್ಪಂದದ ದಾಖಲೆಗಳನ್ನು ತೆಗೆದು ನೋಡಿ. ನೀವು ಯಾರೆಂಬುದರ ಅರಿವಿನಿಂದ ಶಕ್ತಿಯನ್ನು ಪಡೆದುಕೊಳ್ಳಿ. ಯಾವ ಸಂಸ್ಕೃತಿಯು ನಿಮ್ಮಲ್ಲಿ ಆಗಾಗ್ಗೆ ಕ್ರಾಂತಿ ಮತ್ತು ಸಾತತ್ಯದ ನಡುವೆ ಗೊಂದಲಗಳನ್ನು ಉಂಟುಮಾಡುತ್ತದೋ; ವಿಜ್ಞಾನ ಮತ್ತು ಧರ್ಮಗಳ ನಡುವೆ ಗೊಂದಲವನ್ನು ಸೃಷ್ಟಿಸುತ್ತದೋ; ಬಂಡಾಯ ಮತ್ತು ಪ್ರತಿರೋಧದ ನಡುವೆ ಗೊಂದಲವನ್ನು ಹುಟ್ಟುಹಾಕುತ್ತದೋ ಅಂಥಾ ಸಂಸ್ಕೃತಿಯು ನಿಮಗೇನನ್ನೂ ಕೊಡುವುದಿಲ್ಲ. ಅಂಥ ಸಂಸ್ಕೃತಿಯಿಂದ ನೀವೇನನ್ನೂ ಕಲಿಯಲು ಸಾಧ್ಯವಿಲ್ಲ. ಬದುಕನ್ನು ರೂಪಿಸಿಕೊಳ್ಳಬಹುದಾದ ಯಾವುದೂ ಅದರಲ್ಲಿಲ್ಲ. ವಾಸ್ತವದೊಂದಿಗೆ ಅವರು ಸಂಪರ್ಕವನ್ನು ಯಾವತ್ತೋ ಕಡಿದುಕೊಂಡಿದ್ದಾರೆ. ಹಿಂದೆ ಯಾವಾಗಲೋ ಅವರಲ್ಲಿ ಅದು ಇತ್ತೆಂಬುದೂ ಅನುಮಾನ. ಅಗತ್ಯ ಕಂಡರೆ ಅವರ ಬಗ್ಗೆ ವಿಷಾದ ವ್ಯಕ್ತಪಡಿಸಿ. ಆದರೆ ನೀವು ಯಾರು ಎಂಬ ಅರಿವಿನೊಂದಿಗೆ–ಅಮೆರಿಕನ್ ಇಂಡಿಯನ್ನರಾಗಿ–ನೆಮ್ಮದಿಯಿಂದಿರಿ'.

ಇಷ್ಟು ಹೇಳಿ ನನ್ನ ಸುದೀರ್ಘವಾದ ಭಾಷಣಕ್ಕೆ ಮುಕ್ತಾಯ ಹಾಡುತ್ತೇನೆ. ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ, ಯಾರನ್ನಾದರೂ ಮಾರ್ಕ್ಸ್‌ವಾದದ ಕಡೆಗೆ ಸೆಳೆಯುವ ಪ್ರಯತ್ನವನ್ನು ನಾನು ಮಾಡುತ್ತಿಲ್ಲ. ಬಂಡವಾಳವಾದ ಮತ್ತು ಕ್ರಿಶ್ಚಿಯನ್ ಮತವಾದಗಳು ನನ್ನ ಸಂಸ್ಕೃತಿಗೆ ಎಷ್ಟು ದೂರವೋ ಅಷ್ಟೇ ದೂರ ಈ ಮಾರ್ಕ್ಸ್‌ವಾದವೂ ಕೂಡ. ನಿಜವಾಗಿ ನೋಡಿದರೆ ನಾನು ಯಾರನ್ನೂ ಯಾವುದರ ಕಡೆಗೂ ಸೆಳೆಯುವ ಪ್ರಯತ್ನ ಮಾಡುತ್ತಿಲ್ಲ. ಸ್ವಲ್ಪಮಟ್ಟಿಗೆ–ಅಮೆರಿಕನ್ ಇಂಡಿಯನ್ ಆಂದೋಲನವು ಇನ್ನೂ ಅಂಬೆಗಾಲಿಡುತ್ತಿದ್ದಾಗ–ಬಿಳಿಯ ಮಾಧ್ಯಮಗಳು ಗುರುತಿಸಲು ಇಚ್ಛಿಸಿದಂತೆ–ನಾನು ನಾಯಕನಾಗಲು ಪ್ರಯತ್ನಿಸಿದ್ದೆ. ಅದು ಕೂಡ ಆಗ ನಾನು ಗೊಂದಲದಲ್ಲಿದ್ದದ್ದರ ಪರಿಣಾಮ ಮಾತ್ರ ಅಷ್ಟೇ. ಈಗ ಆ ಗೊಂದಲಗಳಿಲ್ಲ. ನಾನಾಗಲೀ ನೀವಾಗಲೀ ಎಲ್ಲರಿಗೆ ಎಲ್ಲವೂ ಆಗಿರಲು ಸಾಧ್ಯವಿಲ್ಲ. ನನ್ನ ಶತ್ರುಗಳು ನನ್ನನ್ನು ಆ ರೀತಿ ನೋಡುವುದನ್ನೂ ನಾನು ಇಷ್ಟಪಡುವುದಿಲ್ಲ. ನಾನೊಬ್ಬ *ಒಗ್ಲಾಲ ಲಕೋಟ* ದೇಶಾಭಿಮಾನಿ. ಅಷ್ಟೇ ನಾನು ಬಯಸುವುದು ಮತ್ತು ಅಗತ್ಯವಾಗಿ ಆಗಬೇಕಿರುವುದು. ನಾನು ಯಾರೋ ಅದೇ ಆಗಿರುವುದರಲ್ಲಿ ನನಗೆ ಸಂತೃಪ್ತಿಯಿದೆ.

*****

ಇಸ್ಲಾಂಗೊಂದು 'ಪುನರುಜ್ಜೀವನ'ದ ಅಗತ್ಯವಿದೆ...

ಏಪ್ರಿಲ್, ೨೦೧೫

-ಹಸನ್ ಸುರೂರ್



ಇಸ್ಲಾಂ ಹೆಸರಿನಲ್ಲಿ ಜಗತ್ತಿನಾದ್ಯಂತ ನಿರಂತರವಾಗಿ ನಡೆದಿರುವ ಮೈನಡುಗಿಸುವಂತಹ ಶಿರಚ್ಛೇದ ಮತ್ತು ಮಾರಣಹೋಮಗಳು ಇಸ್ಲಾಮೀ ಚಿಂತಕರೂ ಸೇರಿದಂತೆ ಶಾಂತಿಯುತ ಮತ್ತು ಸೌಹಾರ್ದಯುತವಾದ ಜಗತ್ತನ್ನು ಬಯಸುವ ಮತ್ತು ಆ ದಿಸೆಯಲ್ಲಿ ಕ್ರಿಯಾಶೀಲರಾಗಿರುವ ನಾಯಕರನ್ನು ತಲ್ಲಣಗೊಳಿಸಿದೆ. ಯಾವ ಧರ್ಮ ಜನರ ನಡುವೆ ಸ್ನೇಹ ಸಂಬಂಧಗಳ ಸೇತುವೆಯಾಗಬೇಕಿತ್ತೋ ಆ ಧರ್ಮ ಅಸಹನೆಯ, ಕ್ರೋಧದ, ಬರ್ಬರ ಹಿಂಸೆಯ ಪ್ರತೀಕವಾಗುತ್ತಿರುವ ದುರಂತ ಇಸ್ಲಾಮನ್ನು ಒಂದು ಧರ್ಮವಾಗಿ ನೋಡುವ ಬಗೆಗಳ ಬಗ್ಗೆಯೇ ಇಂದು ಚರ್ಚೆಗಳು ಆರಂಭವಾಗಿವೆ. ನಿರ್ದಿಷ್ಟವಾಗಿ ಪ್ಯಾರಿಸ್ಸಿನ ಚಾರ್ಲಿ ಹೆಬ್ಡೋ ನರಹತ್ಯೆ, ಇವು ದಾರಿ ತಪ್ಪಿದ ಅಥವಾ ತಲೆಕೆಟ್ಟ ಕೆಲವು ಅನುಯಾಯಿಗಳು ಇಸ್ಲಾಂನ ಹೆಸರಿನಲ್ಲಿ ನಡೆಸುತ್ತಿರುವ ಹತ್ಯೆಗಳೋ ಅಥವಾ ಇಸ್ಲಾಂ ನಿರೂಪಿತವಾಗಿರುವ ಬಗೆಯೇ ಇವಕ್ಕೆ ಕಾರಣವೋ ಎಂಬ ಚರ್ಚೆ ಈಗ ಬಿರುಸಾಗಿ ನಡೆದಿದೆ.



ಜಾಗತಿಕ ಇಸ್ಲಾಂ ಕುರಿತು, ನಿರ್ದಿಷ್ಟವಾಗಿ ಭಾರತದ ಮುಸ್ಲಿಂ ಸಮಾಜ ಕುರಿತು ವಿಶೇಷ ಅಧ್ಯಯನ ಮಾಡಿರುವ ಹಸನ್ ಸುರೂರ್(ಇವರು 'ಭಾರತದ ಮುಸ್ಲಿಮರ ವಸಂತಕಾಲ' ಎಂಬ ಗಮನಾರ್ಹ ಪುಸ್ತಕದ ಲೇಖಕರೂ ಹೌದು) ಇಸ್ಲಾಂನ ಓರ್ವ ನಿಷ್ಠಾವಂತ ಅನುಯಾಯಿಯಾಗಿ, ಇಸ್ಲಾಂನ ಓರ್ವ ಧಾರ್ಮಿಕ ಪಂಡಿತರಾಗಿ ಮತ್ತು ಸಾರ್ವಜನಿಕ ಬುದ್ಧಿಜೀವಿಯಾಗಿ ಇಂದು ಯಾವುದನ್ನು ಇಸ್ಲಾಮೀ ಭಯೋತ್ಪಾದನೆ ಎಂದು ಕರೆಯಲಾಗುತ್ತಿದೆಯೇ, ಅದಕ್ಕೆ ಇಸ್ಲಾಂ ಸಾರ್ವಜನಿಕವಾಗಿ ಅಭಿವ್ಯಕ್ತಿಗೊಂಡಿರುವ ಬಗೆಗಳಲ್ಲೇ, ಅದರ ಚರಿತ್ರೆಯಲ್ಲೇ ತೊಂದರೆಗಳಿವೆಯೇ ಎಂಬ ಒಂದು ವಸ್ತುನಿಷ್ಠ ಮತ್ತು ದಿಟ್ಟ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಓದಿ ನಿಮಗೇನನ್ನಿಸಿತು ಬರೆಯಿರಿ-ಸಂ.

ಪ್ರತಿಯೊಂದು ಇಸ್ಲಾಮಿಕ್ ಭಯೋತ್ಪಾದನೆಯ ಕೃತ್ಯದ ನಂತರ, ಇಂಥ ಕೃತ್ಯ ಮಾಡುವವರೆಲ್ಲ ನಿಜವಾಗಿಯೂ ಮುಸ್ಲಿಮರಲ್ಲ, ಅವರದು ನಿಜ ಅರ್ಥದಲ್ಲಿ ಇಸ್ಲಾಮ್ ಆಗಲು ಸಾಧ್ಯವಿಲ್ಲ ಎಂದು ಮುಸ್ಲಿಮರೆಲ್ಲ ಹೇಳಿಕೆ ನೀಡುತ್ತಾರೆ. ನಿಜ, ಇಸ್ಲಾಮ್ ಶಾಂತಿಯನ್ನು ಪ್ರತಿಪಾದಿಸುತ್ತದೆ, ಹಿಂಸೆಯನ್ನಲ್ಲ ಎಂದು ವಿವರಿಸುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಕುರಾನಿನ ಸೂಕ್ತಿಗಳನ್ನು *ಹದೀಸ್*(ಪ್ರವಾದಿಯವರ ಉಪದೇಶ ಹಾಗೂ ಸಂದೇಶಗಳು) ನೀಡಿ ಅದು ಹೇಗೆ ಹಿಂಸೆಗೆ ವಿರುದ್ಧವಾಗಿದೆ ಎಂದು ತೋರಿಸುತ್ತಾರೆ.

ಚಾರ್ಲಿ ಹೆಬ್ಡೊ ಮಾರಣಹೋಮದ ಘಟನೆಯ ನಂತರ 'ಇದು ನೈಜ ಇಸ್ಲಾಮ್ ಅಲ್ಲ' ಎಂಬ ಮಾತುಗಳನ್ನು ಮತ್ತೆ ಮತ್ತೆ ಕೇಳತೊಡಗಿದ್ದೇವೆ. ಹಾಗಿದ್ದರೂ, ಪ್ರವಾದಿಯವರಿಗೆ ಆದ ಅವಮಾನಕ್ಕೆ ಪ್ರತೀಕಾರವಾಗಿ ರಕ್ತದೋಕುಳಿ ಹರಿಸಿದವರು ಬಂದೂಕುಗಳನ್ನು ಹಿಡಿದುಕೊಂಡು 'ಅಲ್ಲಾಹು ಅಕ್ಬರ್' ಎಂದು ಕೂಗುತ್ತಿದ್ದರು ಎಂಬುದನ್ನು ನಾವು ಮರೆಯಲು ಸಾಧ್ಯವಿಲ್ಲ. ಮುಸ್ಲಿಮ್ *ಬ್ರದರ್‌ಹುಡ್* ಸಂಘಟನೆಯ ಸ್ಥಾಪಕ ಹಸನ್ ಅಲ್ ಬಾನಾನ ಮೊಮ್ಮಗ ಹಾಗೂ ಖ್ಯಾತ ಮುಸ್ಲಿಮ್ ಚಿಂತಕ ತಾರೀಖ್ ರಹಮಾನ್ ಈ ಘಟನೆಯನ್ನು ಇಸ್ಲಾಮಿನ ಮೂಲ ತತ್ವಗಳಿಗೆ ಮಾಡಿದ ಮಹಾದ್ರೋಹ ಎಂಬ ಕಟು ಶಬ್ದಗಳಲ್ಲಿ ಖಂಡಿಸಿದ. ಸೌದಿ ಅರೇಬಿಯಾದಲ್ಲಿ ವಹಾಬಿ ಇಸ್ಲಾಮ್ ಎಂಬ ಉಗ್ರವಾದಿ ಸಂಘಟನೆಯು ಇದು ಹೇಡಿಗಳ ಕೃತ್ಯ ಎಂದು ಖಂಡಿಸಿತು.

ಆದರೆ ಇಂಥ ಘಟನೆಗಳನ್ನು ಸುಮ್ಮನೆ ತಳ್ಳಿಹಾಕಲು ಸಾಧ್ಯವಿಲ್ಲ. ಪ್ರಪಂಚದಾತ್ಯಂತ ಇರುವ ಕೋಟಿಗಟ್ಟಲೆ ಮುಸ್ಲಿಮರು ಶಾಂತಿಯಿಂದ ಬದುಕುತ್ತಿದ್ದಾರೆ ಎಂಬುದು ಸುಳ್ಳಲ್ಲ. ಅವರು ತಮ್ಮ ಮೇಲೆ ಆಗುತ್ತಿರುವ ನಿಜವಾದ-ಕಲ್ಪಿತ ದಬ್ಬಾಳಿಕೆಗಳ ಕಾರಣದಿಂದ ಇತರ ಧರ್ಮಗಳ ಮೇಲೆ ಪೂರ್ವಾಗ್ರಹಗಳನ್ನು ಸೃಷ್ಟಿಸಿಕೊಂಡು ಅವರೊಂದಿಗೆ ಬೆರೆತು ಬದುಕಲು ತಿರಸ್ಕರಿಸುತ್ತಿದ್ದರೂ ತಮ್ಮ ನಂಬಿಕೆಗಳಿಗೆ ವಿರುದ್ಧವಾಗಿರುವವರನ್ನೆಲ್ಲ ಕೊಂದು ಹಾಕಬೇಕು ಎಂದು ಹೇಳುವುದಿಲ್ಲ. ಬೇರೆಲ್ಲಾ ಧರ್ಮಗಳಂತೆ ಇಸ್ಲಾಮ್ ಸಹ ಹಿಂಸೆಯನ್ನು ಬೋಧಿಸುವುದಿಲ್ಲ. ಪ್ಯಾರಿಸ್ ಹತ್ಯಾಕಾಂಡವನ್ನು ಖಂಡಿಸುವ ಮುಸ್ಲಿಮರನ್ನು ಹುಡುಕಲು *ಫಾಕ್ಸ್ ನ್ಯೂಸ್* ಕಷ್ಟಪಟ್ಟರೂ ಪ್ರಪಂಚಾದ್ಯಂತ ಮುಸ್ಲಿಮರು ಈ ಘಟನೆಯನ್ನು ಖಂಡಿಸಿದರು. ಆದರೆ ಈ ಹಿಂದೆ ಇಂಥ ಖಂಡನೆಗಳು ಕೆಲವು ಷರತ್ತುಗಳಿಗೆ ಒಳಪಟ್ಟಿರುತ್ತಿದ್ದವು. ಅದಕ್ಕೆ ಹೋಲಿಸಿದರೆ ಇದು ಮುಸ್ಲಿಮ್ ಜನಾಂಗದ ದೃಷ್ಟಿಕೋನದಲ್ಲಿ ಆಗಿರುವ ಬಹಳ ದೊಡ್ಡ ಬದಲಾವಣೆಯನ್ನು ಸೂಚಿಸುತ್ತದೆ.

ಆದರೆ, ನಿಜ ಮುಸ್ಲಿಮರಲ್ಲದವರೆಂದು-ನಿಜ ಇಸ್ಲಾಮನ್ನು ಪ್ರತಿನಿಧಿಸದವರೆಂದು ಹೇಳಲಾಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಇಂಥವರ ಸಂಖ್ಯೆ ಪಶ್ಚಿಮ ಏಶ್ಯಾದಿಂದ ಹಿಡಿದು ಆಫ್ರಿಕಾ, ದಕ್ಷಿಣ ಏಶ್ಯಾ, ಯೂರೋಪ್, ಅಮೇರಿಕಾದವರೆಗೆ ಹೆಚ್ಚುತ್ತಲೇ ಇದೆ. ಅಷ್ಟೇ ಏಕೆ, ಭಾರತದ ಮುಸ್ಲಿಮ್ ಯುವಕರೂ ಸಹ 'ಜೆಹಾದ್'ನಲ್ಲಿ ಭಾಗಿಯಾಗತೊಡಗಿದ್ದಾರೆ. ೯/೧೧ನ ಸಂದರ್ಭದಲ್ಲಿ ಒಂದೇ ಒಂದು ಅಲ್ ಖೈದಾ ಇದ್ದರೂ ಅದು ಅಮೆರಿಕಾದ ರಾಕ್ಷಸ ರಾಜಕಾರಣದ ವಿರುದ್ಧ ಹೋರಾಡುತ್ತಿತ್ತೇ ಹೊರತು ಅದು ಇಸ್ಲಾಮಿನ ಹೆಸರಿನಲ್ಲಿ ಅಲ್ಲ.

ಆದರೆ ಇಂದು ಪ್ರಪಂಚದ ಎಲ್ಲ ಕಡೆ ಇಸ್ಲಾಮಿಕ್ ಉಗ್ರರ ಸಂಘಟನೆಗಳು ನಾಯಿಕೊಡೆಗಳಂತೆ ಬೆಳೆದಿವೆ. *ಬೋಕೋ ಹರಾಮ್*, *ಅಲ್ ಶಬಾಬ್*, *ಇಸ್ಲಾಮಿಕ್ ಸ್ಟೇಟ್*, *ಅಲ್ ಖೈದಾ*, ನೂರಾರು ತರಹದ *ತಾಲಿಬಾನ್*, ಸಾವಿರಾರು *ಲಷ್ಕರ್*‌ಗಳು, ಮಿಲಿಟರಿ ತುಕಡಿಗಳು-ಒಂದು ಇನ್ನೊಂದಕ್ಕಿಂತ ಭಯಾನಕವಾಗಿವೆ. ಕಳೆದ ಒಂದು ತಿಂಗಳಲ್ಲೇ ಇಸ್ಲಾಮಿಕ್ ಉಗ್ರರಿಂದ ಹರಿದ ರಕ್ತದ ಹೊಳೆ ಎಲ್ಲರನ್ನೂ ತತ್ತರಿಸುವಂತೆ ಮಾಡಿದೆ- ಪೇಶಾವರದಲ್ಲಿ ನಡೆದ ೧೩೨ ಮುಗ್ಧ ಮಕ್ಕಳ ಮಾರಣಹೋಮ, ಸಿಡ್ನಿ ಕೆಫೆಯ ಮುತ್ತಿಗೆ, ಯೆಮೆನ್ ಮತ್ತು ಇರಾಕ್‌ನಲ್ಲಿ ನಡೆದ ಸಾಲು ಸಾಲು ಆತ್ಮಹತ್ಯಾದಳದ ಪಾತಕಗಳು, ಫಿಲಿಪೈನ್ಸ್‌ನಲ್ಲಿ ಬಸ್ಸೊಂದರ ಮೇಲೆ ನಡೆದ ಬಾಂಬ್ ದಾಳಿ, ನೈಜೀರಿಯಾದ ಬಾಗಾ ಪಟ್ಟಣದಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚು ಜನರನ್ನು ಸಾಮೂಹಿಕವಾಗಿ ಕೊಂದ ದಾರುಣ ಘಟನೆ, ಐಸಿಸ್ ಉಗ್ರರಿಂದ ಇರಾಕ್-ಸಿರಿಯಾಗಳಲ್ಲಿ ನಡೆಯುತ್ತಿರುವ ನಿರಂತರ ಹತ್ಯಾಕಾಂಡಗಳು-ಹೀಗೆ ಹಿಂಸೆಗೆ ಕೊನೆಯೆಂಬುದೇ ಇಲ್ಲ.

ಒಂದು ಧರ್ಮದವರು ಇನ್ನೊಂದು ಧರ್ಮಕ್ಕೆ ಸೇರಿದವರನ್ನು ಹೀಗೆ ನಿರಂತರವಾಗಿ ಕೊಲ್ಲುತ್ತಿರುವ ಉದಾಹರಣೆಗಳು ಎಲ್ಲಿಯಾದರೂ ಇವೆಯೇ?

ಯಾಕೆ ಇಸ್ಲಾಮ್ ಇಂಥ ಮಹಾಪಾತಕಿಗಳ ಪಡೆಯನ್ನು ಸೃಷ್ಟಿಸುತ್ತಿದೆ?

"ಇಸ್ಲಾಮ್‌ನ ಈ ಸಮಸ್ಯೆಯನ್ನು ಬಡತನ, ಹತಾಶೆಗಳ ಕೂಪದಲ್ಲಿ ಮುಳುಗಿದ ಜನರ ಸಮಸ್ಯೆಯೆಂದು ವಿವರಿಸುವ ಲೆನಿನ್‌ವಾದಿ ಸಮಾಜಶಾಸ್ತ್ರಜ್ಞರೆಂಬ ಪ್ರಯೋಜನಕಾರಿ ಮೂರ್ಖರ ವ್ಯಾಖ್ಯಾನವನ್ನು ಅಲ್ಲಗೆಳೆಯಬೇಕಾದ ಸಮಯವೀಗ ಬಂದಿದೆ" ಎಂದು ಫ್ರೆಂಚ್ ಚಿಂತಕ ಬರ್ನಾಡ್ ಲೆವಿಯವರು *ಸಂಡೇ ಟೈಮ್ಸ್*‌ನಲ್ಲಿ ಬರೆದ ಮಾತುಗಳ ಬಗ್ಗೆ ಗಂಭೀರವಾಗಿ ಆಲೋಚಿಸುವ ಸಂದರ್ಭ ಬಂದಿದೆ.

ಚಾರ್ಲಿ ಹೆಬ್ಡೋ ಹತ್ಯಾಕಂಡದಲ್ಲಿ ಭಾಗಿಯಾದ ಇಬ್ಬರು ಸಹೋದರರ ಉದಾಹರಣೆಯನ್ನೇ ತೆಗೆದುಕೊಳ್ಳಿ. ಮುಖ್ಯವಾದ ಸಂಗತಿಯೇನೆಂದರೆ, ಇಸ್ಲಾಮಿನ ಪಾಲಕರಾದ ಅವರು ತಾವು ಹಿಂಸಾಕೃತ್ಯಗಳನ್ನು ನಡೆಸುವಾಗ *ಅಲ್ಲಾಹು ಅಕ್ಬರ್* ಎಂದು ಕೂಗುತ್ತ ಅದಕ್ಕೆ ಧಾರ್ಮಿಕ ಆಚರಣೆಯ ರೂಪ ನೀಡಿದ್ದಾರೆ. ಬಡ ಹಿಂದೂಗಳು, ಕ್ರಿಶ್ಚಿಯನ್ನರು, ಜ್ಯೂಗಳು ಸಹ ತಮ್ಮ ಕೃತ್ಯಗಳಿಗೆ ಧಾರ್ಮಿಕ ಸಮ್ಮತಿಯನ್ನಲ್ಲದಿದ್ದರೂ, ಧಾರ್ಮಿಕ ಪಠ್ಯವೊಂದರ ಸಮರ್ಥನೆಯನ್ನು ಮುಂದೊಡ್ಡಬಹುದು. ಆದರೆ ಈಗ ಏನಾಗುತ್ತಿದೆಯೋ ಅದು, ಪೂರ್ಣವಾಗಿ ಮುಸ್ಲಿಂ ಮತ್ತು ಇಸ್ಲಾಂನ ಸಮಸ್ಯೆ ಎಂಬ ಕಟು ಸತ್ಯವನ್ನು ಮುಸ್ಲಿಮರು ಈಗ ಎದುರಿಸಬೇಕಿದೆ.

"ನಾವು ಒಪ್ಪಲಿ ಬಿಡಲಿ ಉಗ್ರರಲ್ಲಿ ಬಹುಪಾಲು ಜನ ನಾವು ಮುಸ್ಲಿಮರು ಎಂದು ಗುರ್ತಿಸಿಕೊಳ್ಳುತ್ತಾರೆ. ಅಂಥವರನ್ನು ನಾವು ನಿಜ ಮುಸ್ಲಿಮರಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಯಾಕೆಂದರೆ ಅವರೇ ಹಾಗೆ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ" ಎಂದು ಬ್ರಿಟನ್ನಿನ ಸಂಸ್ಕೃತಿ ಕಾರ್ಯದರ್ಶಿ ಸಾಜಿದ್ ಜಾವಿದ್ ಇತ್ತೀಚೆಗೆ ಹೇಳಿರುವುದನ್ನು ಗಮನಿಸಬೇಕು.

ಮುಖ್ಯ ಸಂಗತಿಗೆ ಬರುವುದಾದರೆ: ಇಸ್ಲಾಮಿಕ್ ಉಗ್ರವಾದ ಕೆಲವೇ ಕೆಲವು ಮತಿಹೀನ ಮುಸ್ಲಿಮರ ಕೆಲಸವೇ? ಅಥವಾ ಅದಕ್ಕೂ ಇಸ್ಲಾಮಿಗೂ ಯಾವ ಸಂಬಂಧವೂ ಇಲ್ಲವೇ? ಅಥವಾ *ನ್ಯೂಯಾರ್ಕ್ ಟೈಮ್ಸ್*‌ನ ಉದಾರವಾದಿ ಅಂಕಣಕಾರ ನಿಕೊಲಸ್ ಕ್ರಿಸ್ಟೋಫ್ ಕೇಳಿದಂತೆ "ಹಿಂಸೆ, ಉಗ್ರವಾದ, ಮಹಿಳಾ ಶೋಷಣೆಗೆ ಕಾರಣವಾಗುವ ಅಂಶಗಳು ಇಸ್ಲಾಮಿನಲ್ಲೇ ಇವೆಯೇ?"

ಹಾಗಾದರೆ ಇಸ್ಲಾಮ್ ಅಂದರೆ ಏನು? ವಿಶ್ವಾದ್ಯಂತ ಶಾಂತಿಯ ಮಾರ್ಗದಲ್ಲಿ ನಡೆಯುವ ಉಮ್ಮಾ ಯಾವ ಇಸ್ಲಾಮಿನ ತತ್ವಗಳಿಂದ ಸ್ಫೂರ್ತಿ ಪಡೆದಿದೆಯೋ ಅದೇ ಮೂಲದಿಂದ ರಕ್ತಪಿಪಾಸುವಾದ ಅಬೂಬಕರ್ ಅಲ್ ಬಗ್ದಾದಿ ಎಂಬ *ಐಎಸ್‌ಐಎಸ್‌*ನ ಸ್ವಘೋಷಿತ ಖಲೀಫನೂ ಸ್ಫೂರ್ತಿ ಪಡೆದಿರುವಾಗ ಆತನನ್ನು ಮುಸ್ಲಿಂ ಅಲ್ಲ ಎಂದು ಹೇಳುವುದು ಹೇಗೆ? ಒಳ್ಳೆಯ ಹಾಗೂ ಕೆಟ್ಟ ಇಸ್ಲಾಮಿಕ್ ಮೂಲಭೂತವಾದಿಗಳಿಬ್ಬರೂ ಕುರಾನ್-ಹದೀಸ್‌ಗಳಿಂದಲೇ ಪ್ರೇರಣೆ ಪಡೆದಿದ್ದಾರೆ ಎಂದರೆ, ಸಮಸ್ಯೆಯಿರುವುದು ಅವುಗಳ ವ್ಯಾಖ್ಯಾನದಲ್ಲಿ ಹಾಗೂ ಇಂಥ ಸಂದಿಗ್ಧತೆಗಳೆಡೆ ಎಡೆ ಮಾಡಿಕೊಡುವ ಪವಿತ್ರ ಗ್ರಂಥಗಳಲ್ಲಿ.

ಕ್ರಿಸ್ಟೋಫ್‌ರ ಮಾತುಗಳನ್ನೇ ಉಲ್ಲೇಖಿಸುವುದಾದರೆ, "ಕೆಲವರು ಕುರಾನನ್ನು ಓದಿ ಹೆಣ್ಣುಮಕ್ಕಳ ಶಾಲೆಗಳನ್ನು ನಾಶಮಾಡಿದರೆ, ಇನ್ನು ಕೆಲವರು ಅದನ್ನು ಓದಿ ಹೆಣ್ಣುಮಕ್ಕಳ ಶಾಲೆಗಳನ್ನು ಕಟ್ಟಿಸಿದ್ದಾರೆ. ತಾಲಿಬಾನ್‌ಗಳು ಇಸ್ಲಾಮಿನ ಒಂದು ಮುಖವನ್ನು ಪ್ರತಿನಿಧಿಸಿದರೆ, ಅದಕ್ಕೆ ಸಂಪೂರ್ಣ ವಿರುದ್ಧವಾದುದನ್ನು ಮಲಾಲಾ ಮಾಡಿತೋರಿಸುತ್ತಾಳೆ."

ಕುರಾನ್‌ನಲ್ಲಿರುವ ಹಲವು ಭಾಗಗಳು ಕೆಲವೊಮ್ಮೆ ಒಂದೇ ವಿಷಯದ ಬಗ್ಗೆ ಪರಸ್ಪರ ವಿರೋಧಾಭಾಸದ ಹಾಗೂ ಅಸ್ಪಷ್ಟವಾಗಿರುವುದರಿಂದ ಸಾಮಾನ್ಯ ಮನುಷ್ಯನಿಗೆ

ಇದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಇದರಿಂದ ಕೆಲವರು ತಮಗೆ ಅನುಕೂಲವಾದ ರೀತಿಯಲ್ಲಿ ಅದನ್ನು ವ್ಯಾಖ್ಯಾನಿಸುವ ಸಾಧ್ಯತೆ ಇದೆ. ಜೆಹಾದ್ ಅನ್ನು ಕುರಿತು ಏಕಕಾಲಕ್ಕೆ ಧರ್ಮಭ್ರಷ್ಟರು–ನೀಚರ ವಿರುದ್ಧ ಸಾರಬೇಕಾದ 'ಸಶಸ್ತ್ರ ಹೋರಾಟ ಎಂದು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಅದನ್ನು ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ನಡೆಯುವ ಶಾಂತಿಯುತ ಆಧ್ಯಾತ್ಮಿಕ ಸಂಘರ್ಷ ಎಂದೂ ಸಹ ಬಣ್ಣಿಸಲಾಗಿದೆ.

ಅಂದರೆ, ಇಸ್ಲಾಮ್ ಹೇಳಿದ ವಿಚಾರಗಳನ್ನೇ ಜೆಹಾದಿಗಳು ಕಾರ್ಯಗತಗೊಳಿಸುತ್ತಿರುವುದಾಗಿ ಹೇಳಿಕೊಳ್ಳುವುದರಿಂದ ಅವರು ಮಾಡುತ್ತಿರುವುದು ಅಕ್ಷರಶಃ ತಪ್ಪಲ್ಲ ಮತ್ತು ಹಾಗೆಯೇ ಅದೊಂದು ಆಂತರಿಕ ಆಧ್ಯಾತ್ಮಿಕ ಸಂಘರ್ಷವೆನ್ನುವವರ ವ್ಯಾಖ್ಯಾನವೂ ಸರಿಯೇ. ಇಬ್ಬರೂ ಸಹ ತಮಗೆ ಬೇಕಾದ ಹಾಗೆ ಕುರಾನನ್ನು ವ್ಯಾಖ್ಯಾನಿಸಿಕೊಂಡು ಅದರ ಮೂಲ ಆಶಯವನ್ನು ಮರೆಮಾಚುತ್ತಾರೆ. ಹಾಗಾಗಿ ಇಸ್ಲಾಮ್ ಎಲ್ಲ ನಂಬಿಕೆಗಳು–ಧರ್ಮಗಳಿಗೆ ಸಮಾನ ಗೌರವ ನೀಡುತ್ತದೆ ಎಂಬ ಮಾತನ್ನು ಒಪ್ಪುವುದು ಕಷ್ಟ. ಉದಾಹರಣೆಗೆ ಅಲ್ ಬಖ್ರಾದ ಅಧ್ಯಾಯದಲ್ಲಿ ದೈವ ವಿಶ್ವಾಸಿಗಳು ವಿಶ್ವಾಸಿಗಳಲ್ಲದವರ ನಡುವಿನ ವ್ಯತ್ಯಾಸವನ್ನು ಸ್ಪಷ್ಟಗೊಳಿಸಿದರೆ, ನಂತರ ಅವರಿಗೆ ಅಂತಿಮ ತೀರ್ಮಾನದ ದಿನ ದೊಡ್ಡ ಶಿಕ್ಷೆಯೊಂದು ಕಾದಿದೆ ಎಂಬೆಚ್ಚರಿಕೆಯೂ ಇದೆ. ಮಂದೆ, ದೇವರಿಗೆ ಮಾತ್ರ ಯಾರು ಶಿಕ್ಷಾರ್ಹರು ಎಂದು ನಿರ್ಧರಿಸುವ ಅಧಿಕಾರವಿದೆಯೇ ಹೊರತು ಹುಲುಮಾನವರಿಗೆ ಅಲ್ಲ ಎಂಬ ಮಾತುಗಳು ಇವೆ. ಹಾಗಾಗಿ ಉಗ್ರರು ಹಾಗೂ ಶಾಂತಿಪ್ರಿಯರು ಇಬ್ಬರೂ ಸಹ ತಮಗೆ ಬೇಕಾದ ಹಾಗೆ ಇಂಥ ಉಲ್ಲೇಖಗಳನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ.

ಅದರಂತೆ, ಹೆಣ್ಣಿನ ಸ್ಥಾನಮಾನದ ಕುರಿತು, ಅಲ್ ನಿಸಾದ ಆಧ್ಯಾಯದಲ್ಲಿ ಅವರಿಗೆ ಸಮಾನ ಗೌರವವನ್ನು ನೀಡಬೇಕೆನ್ನುವ ಉಲ್ಲೇಖಗಳು ಇದ್ದರೂ ಅದಕ್ಕೆ ಹೊಂದಿಕೊಂಡಂತೆಯೇ ಹೆಣ್ಣು ಗಂಡಿಗೆ ಸರಿಸಮಾನಳಲ್ಲ ಎಂಬ ಅಭಿಪ್ರಾಯಗಳೂ ಸಹ ದೊರೆಯುತ್ತವೆ. ಗಂಡಿಗೆ ಹೋಲಿಸಿದರೆ, ಅವಳಿಗೆ ದೊರೆಯುವ ಆಸ್ತಿಯ ಪಾಲು ಕಡಿಮೆ ಮತ್ತು ಅವಳ ಹೇಳುವ ಸಾಕ್ಷ್ಯಕ್ಕೆ ಅಷ್ಟು ಬೆಲೆ ನೀಡಬಾರದು ಹಾಗೆಯೇ ವ್ಯಭಿಚಾರದ ಸಂದರ್ಭದಲ್ಲಿ ಆಕೆಗೆ ಗಂಡಿಗಿಂತ ಹೆಚ್ಚಿನ ಶಿಕ್ಷೆ ದೊರೆಯಬೇಕು ಎಂಬ ಮಾತುಗಳು ದೊರೆಯುತ್ತವೆ.

ನಿಜವಾಗಿ, ಕುರಾನಿನ ಸೂಕ್ತಿಗಳನ್ನು ಯಾವುದೇ ಸಂದರ್ಭಕ್ಕೆ ಅನ್ವಯವಾಗುವ ಹಾಗೆ ವಿವಿಧ ಅಧ್ಯಾಯಗಳಲ್ಲಿ ಜೋಡಿಸಿರುವ ಕ್ರಮದಲ್ಲಿಯೇ ಸಮಸ್ಯೆಯಿದೆ. ಹಾಗಾಗಿ ಅವುಗಳನ್ನು ಬಿಡಿಬಿಡಿಯಾಗಿ ಓದಿದಾಗ ಅವು ಪರಸ್ಪರ ವಿರೋಧಾಭಾಸದ ವ್ಯಾಖ್ಯಾನಗಳಿಗೆ ಕಾರಣವಾಗುತ್ತವೆ.

ಭಾರತದ ಬಹಳ ಮುಖ್ಯ ಇಸ್ಲಾಮಿಕ್ ಚಿಂತಕರಾದ ಮೌಲಾನಾ ವಹೀದುದ್ದೀನ್ ಖಾನ್ ಅವರು ಕುರಾನಿನ ಇಂಗ್ಲಿಶ್ ಅನುವಾದಕ್ಕೆ ಬರೆದ ಮುನ್ನುಡಿಯ ಪ್ರಕಾರ "ಮುಖ್ಯವಾದ ಸಂಗತಿಯೇನೆಂದರೆ, ಈಗ ದೊರಕುವ ಕುರಾನ್ ಪೂರ್ಣಪ್ರಮಾಣದಲ್ಲಿ ಒಮ್ಮೆಗೇ ಅವತೀರ್ಣಗೊಳ್ಳಲಿಲ್ಲ. ಅದು ಕಾಲಕಾಲಕ್ಕೆ ವಿವಿಧ ಸಂದರ್ಭಗಳಲ್ಲಿ ಸುಮಾರು ೨೩ವರ್ಷಗಳ ಅವಧಿಯಲ್ಲಿ ಅವತೀರ್ಣಗೊಂಡಿತು". ಅವರ ಪ್ರಕಾರ "ಕುರಾನ್ ಇತರ ಧಾರ್ಮಿಕ ಪಠ್ಯಗಳಂತೆ ಒಂದು ನಿರ್ದಿಷ್ಟ ಸ್ವರೂಪವನ್ನು ಹೊಂದಿರದೆ, ಅದು ಬಿಡಿಬಿಡಿಯಾದ ಹೇಳಿಕೆಗಳನ್ನೊಳಗೊಂಡ ಸಂಗ್ರಹವಾಗಿದೆ. ಓದುಗರು ಈ ಗ್ರಂಥದ ಬಿಡಿ ಪುಟಗಳು, ಸೂಕ್ತಿಗಳನ್ನು ಓದಿಕೊಳ್ಳಲು ಅನುಕೂಲವಾಗುವಂತೆ ಅದರ ಸ್ವರೂಪವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ".

ಪ್ರವಾದಿಯವರ ಉಪದೇಶಗಳು–ಸಂದೇಶಗಳನ್ನೊಳಗೊಂಡ ಹದೀಸ್‌ನ ಸಮಸ್ಯೆಯೂ ಇದೇ ಆಗಿದೆ. ಈ ಸಂದೇಶಗಳು ಹಲವು ರೂಪಗಳಲ್ಲಿ, ಅವುಗಳು ಹಲವು ಸಂದರ್ಭಗಳಿಗೆ ಸಂಬಂಧಿಸಿದ್ದು ಅವುಗಳನ್ನು ಪ್ರವಾದಿಯವರ ಸಾವಿನ ಹಲವು ವರ್ಷಗಳ ನಂತರ ಸಂಗ್ರಹಿಸಲಾಯಿತು. ಅವುಗಳ ಮೂಲ ಅರ್ಥ ಅನುವಾದ ಮಾಡುವಾಗ ಕಳೆದುಹೋಗಿದೆ. ಆದರೂ ಮೂಲಸಂದರ್ಭವನ್ನು ಕಡೆಗಣಿಸಿ ಅವುಗಳನ್ನು ಬಹಳ ಸಡಿಲವಾಗಿ ಉಲ್ಲೇಖಿಸಲಾಗುತ್ತದೆ. ನಿಜವಾಗಿ ಪ್ರವಾದಿಯವರಿಗೆ ಸಂಬಂಧಿಸದೇ ಇರುವ ಹಲವು ಹದೀಸ್‌ಗಳೂ ಸಹ ಬಳಕೆಯಲ್ಲಿವೆ.

ಮುಖ್ಯವಾದ ಸಂಗತಿಯೇನೆಂದರೆ, ಉಗ್ರರು ತಾವು ಮಾಡುತ್ತಿರುವ ಕೆಲಸಗಳಿಗೆ ಸಮರ್ಥನೆಯಾಗಿ ಇಸ್ಲಾಮ್‌ನ ಹೊಸದೊಂದು ಅವೃತ್ತಿಯನ್ನು ಹುಡುಕಬೇಕಾಗಿ ಬರಲಿಲ್ಲ ಎನ್ನುವುದು. ಅಂಥ ಅಂಶಗಳನ್ನು ಅವರು ಈಗಾಗಲೇ ಇಸ್ಲಾಮಿನಲ್ಲಿ ಹುಡುಕಿಕೊಂಡಿದ್ದರು. ಹಾಗೆ ಅಲ್ಲಿ ಇಲ್ಲಿ ಚದುರಿದಂತಿದ್ದ ಅಂಶಗಳನ್ನು ಅವರು ತಮ್ಮ ಅಜೆಂಡಾಗೆ ಸರಿಯಾಗಿ ಹೊಂದಿಸಿಕೊಂಡು ಅದನ್ನೇ ನೈಜ ಇಸ್ಲಾಮ್ ಎಂದು ಪ್ರತಿಪಾದಿಸಿದರು.

ಮುಸ್ಲಿಮರಿಗೆ ಈ ಸಮಸ್ಯೆಯ ಅರಿವಿದೆಯಾದರೂ, ಅದರ ಜೊತೆಗೇ ಅವರು ಕುರಾನ್ ಯಾವ ಬದಲಾವಣೆಗೂ ಒಳಪಡಿಸಬಾರದ, ಯಾವ ಹಸ್ತಕ್ಷೇಪಕ್ಕೂ ಒಳಗಾಗಕೂಡದ ಗ್ರಂಥ ಎಂದು ಹೇಳಲು ಹಿಂಜರಿಯುವುದಿಲ್ಲ. ಕುರಾನ್ ಸಹ ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತದೆ "ಯಾರಿಗಾಗಿ ಈ ಪುಸ್ತಕವನ್ನು ನೀಡಲಾಗಿದೆಯೋ ಅವರು ಅದನ್ನು ಪಾಲಿಸಬೇಕು. ಅದರಲ್ಲಿ ನಂಬಿಕೆಯಿಡುವವರು ಗೆಲ್ಲುವರು, ನಂಬಿಕೆಯಿಲ್ಲದವರು ಸೋಲುವರು".

ಹೀಗಿರುವಾಗ ಕುರಾನಿನ ಸೂಕ್ತಿಗಳನ್ನು ಸಂದರ್ಭಾನ್ವಯಗೊಳಿಸಿ ಮರುಜೋಡಿಸುವ ಯಾವುದೇ ಪ್ರಯತ್ನವನ್ನು ಧರ್ಮಪಾತಕ ಪ್ರಯತ್ನವೆಂದು ತಿರಸ್ಕರಿಸಲಾಗುತ್ತದೆ. ಹೊಸ ಒಡಂಬಡಿಕೆಯ ಹಾಗೆ ಇಸ್ಲಾಮಿನಲ್ಲೂ ಮರುನಿರೂಪಣೆಯ ಅಗತ್ಯವಿದೆ ಎಂಬ ಮಾತನ್ನು ನಾನು ಲೇಖನವೊಂದರಲ್ಲಿ ಬರೆದಾಗ, ಕೆಲವರು ಇದೇ ಮಾತನ್ನು ಇಸ್ಲಾಮಿಕ್ ದೇಶವೊಂದರಲ್ಲಿ ಹೇಳಿದ್ದರೆ ಧರ್ಮದ್ರೋಹದ ಆಪಾದನೆಯನ್ನು ಎದುರಿಸಬೇಕಾಗಿತ್ತು ಎಂದು ನನಗೆ ಎಚ್ಚರ ನೀಡಿದರು. ಈ ರೀತಿಯ ಸಂಪ್ರದಾಯಸ್ಥ, ಹಿಂಸಾತ್ಮಕವಾದ ಪ್ರತಿಕ್ರಿಯೆಗಳು ಇಸ್ಲಾಮಿಗೆ ಹೊಸದೇನಲ್ಲ. ಕ್ರಿಶ್ಚಿಯಾನಿಟಿಯಲ್ಲಿಯೂ ಒಮ್ಮೆ ಇಂಥ ಬೆಳವಣಿಗೆ ಉಂಟಾಗಿತ್ತು. ಮಧ್ಯಯುಗದಲ್ಲಿ *ಪೇಗನ್* ಸಂಪ್ರದಾಯಕ್ಕೆ ಸೇರಿದ ಯೂರೋಪನ್ನು ಕ್ರಿಶ್ಚಿಯನೀಕರಣಗೊಳಿಸುವಾಗ ಅದಕ್ಕೆ ಹಿಂಸಾತ್ಮಕವಾದ ಪ್ರತಿಕ್ರಿಯೆಗಳು, ಕ್ರುಸೇಡ್‌ಗಳು ನಡೆದವು. ಕ್ರಿಶ್ಚಿಯಾನಿಟಿ ಇದನ್ನು ನಿಯಂತ್ರಿಸಿತಾದರೆ, ಇಸ್ಲಾಂ ಈಗ ಹಾಗೆ ಮಾಡಲು ವಿಫಲವಾಗಿದೆ. ಜ್ಞಾನೋದಯ (Enlightnment) ಮತ್ತು ಪುನರುಜ್ಜೀವನ(Renaissance) ಎಂಬ ಶಬ್ದಗಳಿಗೆ ಸಮಾನ ಆಧುನಿಕ ಇಸ್ಲಾಮೀ ಶಬ್ದಗಳೇ ಇಲ್ಲ. ಅದು ಇಂದಿಗೂ ಆಧುನಿಕತೆಯ ವಿರುದ್ಧ ಹೆಜ್ಜೆ ಹಾಕಿ ಗಾಬರಿ ಹುಟ್ಟಿಸುತ್ತಿದೆ.

ಇಂಥ ವೈಚಾರಿಕ ಪ್ರಯತ್ನಗಳಿಗೆ ಇಂಬುನೀಡುವ *ಮುತಜಿಲ್ಲಾ* ಚಳುವಳಿಯನ್ನು ಮೂಲಭೂತವಾದಿ ಮುಸ್ಲಿಮರು ನಾಶಮಾಡಿದರು. *ಮುತಜಿಲ್ಲಾ* ಚಳುವಳಿಯು ಇಂದಿನ ಜೀವನದ ಅಗತ್ಯಗಳಿಗೆ ಸ್ಪಂದಿಸುವಂತಹ ರೀತಿಯಲ್ಲಿ ಕುರಾನನ್ನು ಒಂದು ಜೀವಂತ ಪಠ್ಯವಾಗಿ ಮಾಡುವ ಅಗತ್ಯವನ್ನು ಒತ್ತಿಹೇಳಿತ್ತು.

ಅದಕ್ಕಾಗಿಯೇ "ನಾವು ೩ನೆಯ ಅಥವಾ ೪ನೆಯ ಶತಮಾನದಲ್ಲಿಯೋ ಬದುಕುತ್ತಿಲ್ಲ. ಮನುಷ್ಯನ ಪ್ರಜ್ಞೆ–ವೈಚಾರಿಕತೆಗಳು ಬಹಳ ವ್ಯಾಪಕವಾಗಿ ಬದಲಾವಣೆ ಹೊಂದಿದ್ದು ನಾವು ದೇವರು ದಯಪಾಲಿಸಿರುವ ವಿವೇಚನಾಶಕ್ತಿಯನ್ನು ಇನ್ನಷ್ಟು ನಿಜವಾದ ಸಂಗತಿಗಳನ್ನು ಹುಡುಕಲು ಬಳಸಿಕೊಳ್ಳಬೇಕಾಗಿದೆ" ಎಂದು ದೆಹಲಿಯ ಮಹಮ್ಮದ್ ಯೂನುಸ್ ಎಂಬ ಇಸ್ಲಾಮಿಕ್ ಚಿಂತಕರು ಹೇಳಿದ್ದು ಬಹಳ ಪ್ರಸ್ತುತವಾಗಿದೆ.

ಈ ಮಧ್ಯೆ ಈಜಿಪ್ಟ್‌ನ ಅಧ್ಯಕ್ಷ ಅಬ್ದೆಲ್ ಫತಾ ಅಲ್ ಸಿಸಿ ಇಸ್ಲಾಮನ್ನು ಉಗ್ರರ ಹಾವಳಿಯಿಂದ ರಕ್ಷಿಸಲು ಧಾರ್ಮಿಕ ಕ್ರಾಂತಿಗೆ ಅಣಿಯಾಗಬೇಕೆಂದು ಕರೆ ನೀಡಿದ್ದಾನೆ. ಸುನ್ನಿ ಜ್ಞಾನ ಆಧ್ಯಯನಕ್ಕೆ ಮೀಸಲಾಗಿರುವ *ಅಲ್ ಅಜರ್* ವಿಶ್ವವಿದ್ಯಾನಿಲಯದ ಪಂಡಿತರನ್ನು ಕುರಿತು ಮಾತನಾಡುತ್ತ ಆತ ಹೇಳಿದ: "ನಮಗೀಗ ಧಾರ್ಮಿಕ ಕ್ರಾಂತಿಯೊಂದರ ಅಗತ್ಯವಿದೆ ಎಂಬುದನ್ನು ಸಾರಿ ಸಾರಿ ಹೇಳಬೇಕಾಗಿದೆ. ನೀವು ಇಮಾಂಗಳು ದೇವರಿಗೆ ಜವಾಬ್ದಾರರು. ಇಸ್ಲಾಮಿಕ್ ಪ್ರಪಂಚವು ತನ್ನೊಳಗೆ ತಾನೇ ಛಿದ್ರಗೊಳ್ಳುತ್ತ, ದಿನೇ ದಿನೇ ನಮ್ಮವರಿಂದಲೇ ನಾಶವಾಗುತ್ತಿರುವುದನ್ನು ಪ್ರಪಂಚ ನೋಡುತ್ತಿದೆ".

ವ್ಯಂಗ್ಯವೇನೆಂದರೆ ಇಂಥ ಮಾತುಗಳನ್ನು ಆಡುತ್ತಿರುವ ಹೊತ್ತಿನಲ್ಲಿಯೇ ಈಜಿಪ್ಟ್‌ನ ನ್ಯಾಯಾಲಯವೊಂದು ಕರೀಮ್ ಅಲ್ ಬನ್ನಾ ಎಂಬ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಫೇಸ್‌ಬುಕ್‌ನಲ್ಲಿ ತನಗೆ ಧರ್ಮಗಳಲ್ಲಿ ನಂಬಿಕೆ ಇಲ್ಲ ಎಂದು ಬರೆದದ್ದನ್ನು ಇಸ್ಲಾಮ್‌ಗೆ ಅಗೌರವ ಎಂದು ಪರಿಗಣಿಸಿ ಮೂರು ವರ್ಷಗಳ ಶಿಕ್ಷೆ ವಿಧಿಸಿದೆ. ಫಾತಿಮಾ ನೌತ್ ಎಂಬ ಲೇಖಕಿ ಈದ್‌ನ ಸಂದರ್ಭದಲ್ಲಿ ಕುರಿಗಳನ್ನು ಬಲಿ ನೀಡುವ ಪದ್ಧತಿಯನ್ನು ವಿರೋಧಿಸಿದ್ದಕ್ಕೆ ಆಕೆಯ ಮೇಲೆ ಮೊಕದ್ದಮೆಯೊಂದನ್ನು ಹೂಡಲಾಗಿದೆ. ಕವಿ ಕರೀಮ್ ಸಬ್ರೆ 'ದೇವರು ಎಲ್ಲಿದ್ದಾನೆ?' ಎಂಬ ಕತೆಯೊಂದನ್ನು ಬರೆದಿದ್ದಕ್ಕಾಗಿ ಜೈಲಿನಲ್ಲಿದ್ದಾನೆ.

ಸರಿಯಾಗಿ ಗುರಿ ಇಟ್ಟು ಹೇಳುವುದಾದರೆ, ಇಸ್ಲಾಮ್‌ನ ಈ ಬಿಕ್ಕಟ್ಟನ್ನು ದಿಟ್ಟವಾಗಿ ಎದುರಿಸುವ ಕಾಲ ಮುಸ್ಲಿಮರಿಗೆ ಈಗ ಎದುರಾಗಿದೆ. ಇಲ್ಲದಿದ್ದರೆ, ೯/೧೧ ಸಂದರ್ಭದಲ್ಲಿ ಇರ್ಶಾದ್ ಮಾಂಝಿ ಎಂಬ ಕೆನಡಿಯನ್ ಮಹಿಳೆ ೨೦೦೩ರಲ್ಲಿ ಬರೆದ 'ದ ಟ್ರಬಲ್ ವಿತ್ ಇಸ್ಲಾಮ್ ಟುಡೇ' ಎಂಬ ಪುಸ್ತಕದಲ್ಲಿನ ಮಾತುಗಳನ್ನು ಬಳಸಿ ಹೇಳುವುದಾದರೆ ಪ್ಯಾರಿಸ್ ಹಂತಕರು 'ತಮ್ಮ ಪ್ರದರ್ಶನ ಕೊಟ್ಟು ಹಾಯಾಗಿ ಹೋಗಿಬಿಡುತ್ತಾರೆ' 'ಸಹಧರ್ಮೀಯ ಮುಸ್ಲಿಮರು ತಾವು ನಿರ್ಯೋಚನೆಯಿಂದ ಸಮರ್ಥಿಸುವ ಇಸ್ಲಾಂ ಬಗ್ಗೆ ಪುನರಾವಲೋಕನ ಮಾಡುವ' ಸವಾಲಿದೆ ಎನ್ನುವ ಅವರು, 'ಇಸ್ಲಾಂನಲ್ಲಿ ಯಾವ ಸಮಸ್ಯೆಯೂ ಇಲ್ಲ ಎನ್ನುವವರು ವಾಸ್ತವವನ್ನು ಚಾಪೆಯ ಕೆಳಕ್ಕೆ ಗುಡಿಸುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟು 'ನಮ್ಮ ಆತ್ಮದ್ರೋಹದಿಂದ ನಾವು ಹೊರಬರಬೇಕಿದೆ' ಎಂದು ಆಗ್ರಹಿಸಿದ್ದಾರೆ. ಇಂತಹ ವಿಮರ್ಶಾತ್ಮಕ ಸಾಲುಗಳನ್ನು ಬರೆದಿದ್ದಕ್ಕಾಗಿ ಆಕೆಯನ್ನು 'ಸ್ಕರ್ಟ್ ತೊಟ್ಟ ಸಲ್ಮಾನ್ ರಶ್ದಿ' ಎಂದು ಹೀಗಳೆಯಲಾಗಿದೆ.

ಚಾರ್ಲಿ ಹೆಬ್ಡೋ ಘಟನೆಯ ನಂತರ ಇದು ಬಹಳ ದಿನ ಹೀಗೇ ಮುಂದುವರೆಯಲಾರದು ಎಂದು ಮುಸ್ಲಿಮರಿಗೆ ಮನವರಿಕೆಯಾಗಿದೆ. ಆದರೂ, ಧೈರ್ಯವಾಗಿ ಮಾತಾಡಲು ಅವರು ಇನ್ನು ಹಿಂಜರಿಯುತ್ತಿದ್ದಾರೆ; ಈ ಹಿಂಜರಿಕೆ ಮುಂದುವರೆದಷ್ಟೂ ಇಸ್ಲಾಂಗೆ ಅಪಾಯ ಹೆಚ್ಚುತ್ತಾ ಹೋಗುತ್ತದೆ. ಇಸ್ಲಾಮನ್ನು ಕುರಿತು ಈ ಬಗೆಯ ಪ್ರಶ್ನೆಗಳನ್ನು ಕೇಳದಿದ್ದರೆ ಮತ್ತು ಕೇಳಲು ಎಷ್ಟು ವಿಳಂಬ ಮಾಡಲಾಗುತ್ತದೋ ಅದರಿಂದ ಅಷ್ಟೂ ಹೆಚ್ಚು ಹಾನಿಯಾಗಲಿದೆ ಎಂಬುದನ್ನು ಅರಿಯಬೇಕಾಗಿದೆ. ಒಂದು ಇಸ್ಲಾಮೀ ಪುನರುಜ್ಜೀವನ ಬಯಸುವವರು ಯಾರಾದರೂ ಇದ್ದಾರಾ?

ಕನ್ನಡಕ್ಕೆ: ಡಾ. ಎಸ್. ಸಿರಾಜ್ ಅಹಮದ್

ಕೃಪೆ: ***ಔಟ್‌ಲುಕ್*, ೨೬ ಜನವರಿ, ೨೦೧೫)**


ಆತ್ಮಸಾಕ್ಷಿಯೇ ಭಿನ್ನಮತದ ಮೂಲ

ಅಕ್ಟೋಬರ್-ಡಿಸೆಂಬರ್, ೨೦೧೬

ಇಂಗ್ಲಿಷ್‌ಮೂಲ : ತ್ರಿದಿಪ್ ಸುಹೃದ್
ಕನ್ನಡಕ್ಕೆ: ಎಂ. ರಾಜು

ಗಾಂಧಿ ಒಮ್ಮೆ ಹೇಳಿದ್ದರು: 'ನಾನು ಧರ್ಮ ಮತ್ತು ನೀತಿಗಳ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭವೇನಾದರೂ ಬಂದರೆ ನಾನು ನೀತಿಯನ್ನೇ ಆಯ್ದುಕೊಂಡೇನು'. ಗಾಂಧೀಜಿಯ ಈ ಮಾತು ಅವರ ಚಿಂತನೆಯ ಹಿಂದಿನ ಅಧ್ಯಾತ್ಮದ ಸ್ವರೂಪವನ್ನೇ ವಿಶಿಷ್ಟಗೊಳಿಸುತ್ತದೆ ಮತ್ತು ಅವರ ಚಿಂತನೆಯ ಆಧಾರಶಿಲೆಯಂತಿದ್ದ ಅಹಿಂಸೆಯ ಮೀಮಾಂಸೆಯನ್ನು (ಸಾಂಪ್ರದಾಯಿಕ ಅರ್ಥದ) ಧರ್ಮದ ಪರಿಧಿಯಿಂದ ಹೊರತಂದು ನೀತಿಯ ವಿಷಯವನ್ನಾಗಿ ಮಾಡಿ ಅದನ್ನು ಜನಸಾಮಾನ್ಯರ ಧರ್ಮವನ್ನಾಗಿ ಮಾಡುವ ಕ್ರಾಂತಿಕಾರಕ ಪ್ರಯತ್ನವನ್ನು ಕಾಣುತ್ತೇವೆ. ಏಕೆಂದರೆ ನೀತಿ ಎಂದರೆ ಗಾಂಧಿ ಪ್ರಕಾರ ನೆರೆಹೊರೆ(ಅದರಲ್ಲಿನ ಸಕಲ ಜೀವ ಪರಿಸರವೂ ಸೇರಿದಂತೆ)ಯನ್ನು ಕುರಿತ ಕರ್ತವ್ಯ ಪ್ರಜ್ಞೆ. ಹಾಗಾಗಿಯೇ ಆತ್ಮಸಾಕ್ಷಿ ಎಂಬುದು ಈ ಕರ್ತವ್ಯ ಪ್ರಜ್ಞೆಯನ್ನು ಪ್ರಚೋದಿಸುವ ಇಡೀ ಗಾಂಧಿ ಚಿಂತನೆಯ-ಅಹಿಂಸಾ ಮೀಮಾಂಸೆಯ-ಕೇಂದ್ರ ಪ್ರಜ್ಞೆಯಾಗುತ್ತದೆ ಮತ್ತು ಇದರ ಸುತ್ತಲೇ ಕಟ್ಟಲ್ಪಟ್ಟ ಅವರ ರಾಜಕಾರಣವೂ ಧರ್ಮದ ಹೊಸ ಆವೃತ್ತಿಯೇ ಆಗುತ್ತದೆ. ಮತ್ತು ಅಚಿತಿಮವಾಗಿಗೆ ಅದು ಅವರ ಹತ್ಯೆಗೂ ಕಾರಣವಾಗುತ್ತದೆ ಎಂದೂ ಹೇಳಬಹುದು.

ಈ ಲೇಖನ ಆತ್ಮಸಾಕ್ಷಿ ಎಂಬ ಕೇಂದ್ರ ಪ್ರಜ್ಞೆಯ ಸುತ್ತ ಗಾಂಧಿ ಕಟ್ಟಿದ ಅಹಿಂಸೆಯ ರಾಜಕಾರಣವೆಂಬ ಹೊಸ ಧರ್ಮದ ಹೊಳಹುಗಳನ್ನು ಮಂಡಿಸುವ ಪ್ರಯತ್ನ ಮಾಡುತ್ತದೆ-ಸಂ.



ಆತ್ಮಸಾಕ್ಷಿಯೇ ಭಿನ್ನಮತದ ಮೂಲ ಎಂಬುದಾಗಿ ಗಾಂಧಿ ಪ್ರತಿಪಾದಿಸುತ್ತಾರೆ. ಯಾವುದೋ ಒಂದು ವಿಚಾರ ನಮ್ಮ ಆತ್ಮಸಾಕ್ಷಿಗೆ ಅಸಹ್ಯ ಉಂಟುಮಾಡಿದರೆ ನಾವು ಅದನ್ನು ನಿರಾಕರಿಸುತ್ತೇವೆ. ಈ ನಿರಾಕರಣೆ ನಮ್ಮ ಕರ್ತವ್ಯದಿಂದ ಹುಟ್ಟಿರುತ್ತದೆ. ನಮಗೆ ಅಸಹ್ಯ ಹುಟ್ಟಿಸುವ ಯಾವುದನ್ನೇ ಆದರೂ ನಿರಾಕರಿಸುವುದು ನಮ್ಮ ಕರ್ತವ್ಯವಾಗುತ್ತದೆ. ಹಾಗೆ ಮಾಡುವುದರಿಂದ ನಾವು ಸತ್ಯಾಗ್ರಹಿಗಳಾಗುತ್ತೇವೆ. ಕರ್ತವ್ಯಕ್ಕಾಗಿ ನಿರಾಕರಿಸುವುದಕ್ಕಾಗಿ ಅಂದರೆ ಅವಿಧೇಯರಾಗಿರುವುದಕ್ಕಾಗಿ ನಮ್ಮನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. ಆತ್ಮಸಾಕ್ಷಿಯ ಪಾರಮ್ಯವನ್ನು ನಾವು ಗುರುತಿಸಬೇಕಾಗುತ್ತದೆ. ಆತ್ಮಸಾಕ್ಷಿಯ ಕ್ಷೀಣ ದನಿಯನ್ನಾದರೂ ಕೇಳಿಸಿಕೊಳ್ಳಬೇಕಾಗುತ್ತದೆ ಮತ್ತು ಆತ್ಮಸಾಕ್ಷಿಯ ಆದೇಶಗಳಿಗೆ ಬದ್ಧರಾಗಿರಬೇಕಾಗುತ್ತದೆ. ಈ ಸ್ಥಿತಿಯನ್ನ ಗೀತೆಯಲ್ಲಿ ಸಕಲರಿಗೂ ರಾತ್ರಿಯಾದಾಗ ಶಿಕ್ಷಿತ ಆತ್ಮವು ಎಚ್ಚರವಾಗಿರುತ್ತದೆ ಎಂಬುದಾಗಿ ವಿವರಿಸಲಾಗಿದೆ.

ಗಾಂಧಿಯವರ ಪ್ರಕಾರ ವ್ಯಕ್ತಿಯೊಬ್ಬನ ಅಹಂ ಶೂನ್ಯ ಮಟ್ಟವನ್ನು ತಲುಪಿದಾಗ ಮಾತ್ರ ಆತ ಈ ದನಿಯನ್ನು ಕೇಳಿಸಿಕೊಳ್ಳುವ ಸಾಮರ್ಥ್ಯವನ್ನು ಗಳಿಸುತ್ತಾನೆ. ಅಹಂ ಅನ್ನು ಶೂನ್ಯ ಮಟ್ಟಕ್ಕೆ ಇಳಿಸಿಕೊಳ್ಳುವುದು ಗಾಂಧೀಜಿಯವರ ಪ್ರಕಾರ ಸತ್ಯನಾರಾಯಣನಿಗೆ ಶರಣಾಗುವುದು. ಸ್ವಾಯತ್ತತೆಯನ್ನು, ಮನುಷ್ಯ ಸಂಕಲ್ಪವನ್ನು ನಿಗ್ರಹಿಸುವುದು, ಈ ರೀತಿಯ ಶರಣಾಗತಿಗೆ ಅಗತ್ಯವಾಗುತ್ತದೆ. ಆತ್ಮಸಾಕ್ಷಿಯು ವಿಧೇಯ ನಡವಳಿಕೆಯೇ ಹೊರತು ಅದು ಬುದ್ಧಿಪೂರ್ವಕವಾದುದಲ್ಲ. ಅವರು ಹೇಳುತ್ತಾರೆ; ಬುದ್ಧಿ ಪೂರ್ವಕ ಎಂಬುದು ಆತ್ಮಸಾಕ್ಷಿಯಲ್ಲ, ಆತ್ಮಸಾಕ್ಷಿಯು ಕಠಿಣ ಶಿಸ್ತಿನ ಫಲ, ಆತ್ಮಸಾಕ್ಷಿಯು ಅತಿ ಸೂಕ್ಷ್ಮವಾಗಿ ಶೃತಿಗೊಂಡ ಎದೆಯಲ್ಲಿ ಮಾತ್ರವೇ ಇರಬಲ್ಲದು.

ಆತ್ಮಸಾಕ್ಷಿಯುಳ್ಳ ಮನುಷ್ಯನೊಬ್ಬ ಯಾವ ರೀತಿ ಇರಬಲ್ಲ ಎಂಬುದು ಗಾಂಧೀಜಿಗೆ ತಿಳಿದಿತ್ತು. ಆತ್ಮಸಾಕ್ಷಿಯುಳ್ಳ ಮನುಷ್ಯನೊಬ್ಬ ಸ್ವಸಮರ್ಥನೆಗೆ ಹಿಂಜರಿಯುತ್ತಾನೆ. ಆತ ಸದಾ ನಮ್ರನಾಗಿರುತ್ತಾನೆ. ಆತ ಎಂದೂ ಅಬ್ಬರ ಮಾಡಲಾರ. ಆತ ಹೊಂದಾಣಿಕೆಗೆ ಸಿದ್ಧನಾಗಿರುತ್ತಾನೆ. ಕೇಳಿಸಿಕೊಳ್ಳಲು ಸಿದ್ಧವಾಗಿರುತ್ತಾನೆ. ತನ್ನ ತಪ್ಪುಗಳನ್ನು ಒಪ್ಪಿಕೊಳ್ಳಲು ಸಿದ್ಧನಾಗಿರುವುದಷ್ಟೇ ಅಲ್ಲ ಅದಕ್ಕಾಗಿ ಅವನು ಕಾತುರನಾಗಿರುತ್ತಾನೆ. ಮನಸ್ಸಾಕ್ಷಿಯ ಕಾರ್ಯಗಳಿಗೆ ಸೂಕ್ಷ್ಮವಾಗಿ ಶೃತಿಯಾಗದ ಹೃದಯವುಳ್ಳ ಮನುಷ್ಯ ತನ್ನ ಅಂತರಂಗದ ದನಿಯನ್ನು ಕೇಳಿಸಿಕೊಳ್ಳಲಾರ, ಅಥವಾ ಅದಕ್ಕಿಂತಲೂ ಹೆಚ್ಚು ಅಪಾಯಕರ ರೀತಿಯಲ್ಲಿ ಆತ ತನ್ನ ಅಹಂನ ದನಿಯನ್ನು ಮಾತ್ರ ಕೇಳಿಸಿಕೊಳ್ಳಬಹುದು. ಈ ಸಾಮರ್ಥ್ಯವು ಒಂದು ಸಹಜ ಕೊಡುಗೆಯಾಗಿ ಎಲ್ಲರಿಗೂ ದೊರೆಯಲಾರದು ಅಥವಾ ಅದೇ ಪ್ರಮಾಣದಲ್ಲಿ ಅದೊಂದು ಹಕ್ಕಾಗಿಯೂ ಎಲ್ಲರಿಗೂ ದೊರೆಯದು. ತನಗೆ ಕೇಳಿಸುವ ಅಂತರಂಗದ ದನಿ ರಾಮನ ದನಿಯೋ ಅಥವಾ ರಾವಣನ ದನಿಯೋ ಎಂಬುದನ್ನು ಒಬ್ಬ ಮನುಷ್ಯ ಸದಾಕಾಲವೂ ಅರಿಯಲಾರನಾದ್ದರಿಂದ, ತನ್ನ ಅಂತರಂಗದ ದನಿಯನ್ನು ಅಹಂನ ದನಿಯಿಂದ ಬೇರ್ಪಡಿಸಿ ಗುರುತಿಸಿಕೊಳ್ಳುವುದು ಆತನಿಗೆ ಬಹಳ ಮುಖ್ಯವಾಗುತ್ತದೆ.

ಗಾಂಧೀಜಿಯವರ ತಿಳಿವಿನಲ್ಲಿ ನಿರಾಕರಣೆ ಎಂಬುದು ಅದರ ಮೂಲಭೂತ ಅರ್ಥದಲ್ಲಿ ವ್ಯಕ್ತಿಯೊಬ್ಬ ತನ್ನ ಸಂಕಲ್ಪವನ್ನು ಆತ್ಮಸಾಕ್ಷಿಗೆ ಶರಣಾಗಿಸುವುದೇ ಹೊರತು ಅದೊಂದು ಸ್ವತಂತ್ರ ಸಂಕಲ್ಪದ ಕಾರ್ಯವಲ್ಲ. ಈ ಶರಣಾಗತಿಯು ಒಬ್ಬ ಮನುಷ್ಯನಿಗೆ ವಿಚಾರಗಳ, ಆಚರಣೆಗಳ, ಸೂತ್ರಗಳ, ಮೂಲಭೂತ ವಿನ್ಯಾಸವನ್ನು ಪ್ರಶ್ನಿಸುವ, ನಿರಾಕರಿಸುವ ಸಾಮರ್ಥ್ಯವನ್ನು ತಂದುಕೊಡುತ್ತದೆ. ಅಂತಹ ಒಂದು ನಿರಾಕರಣೆಯ ಕೃತ್ಯವನ್ನು ಪರಿಶೀಲಿಸುವ ಪ್ರಯತ್ನವೇ ಈ ಪ್ರಬಂಧ.

ಗಾಂಧೀಜಿಯವರಿಗೆ ಗೀತೆಯು ಮನುಷ್ಯನ ವರ್ತನೆಯ ಬಗೆಗಿನ ಒಂದು ಕೈಪಿಡಿ. ಗೀತೆ ಅವರಿಗೆ ಕಂಠಪಾಠವಾಗಿಹೋಗಿತ್ತು. ಇತರ ಆಶ್ರಮವಾಸಿಗಳ ಜೊತೆಗೂಡಿ ಗಾಂಧೀಜಿ ಗೀತೆಯನ್ನು ನಿತ್ಯವೂ ಪಠಿಸುತ್ತಿದ್ದರು. ಗೀತೆಯು ಒಂದು ದೈವೀಕ ಸ್ಫೂರ್ತಿಯ ಧರ್ಮಗ್ರಂಥ ಎಂಬುದಾಗಿ ಪರಿಗಣಿಸಲು ಅವರು ಒಪ್ಪುತ್ತಿರಲಿಲ್ಲ. ಮಹಾಭಾರತದ ಐತಿಹಾಸಿಕತೆಯನ್ನು ನಂಬಲೂ ಸಹ ಅವರು ಸಿದ್ಧರಿರಲಿಲ್ಲ. ಗೀತೆಯ ಕೃಷ್ಣನನ್ನು ಒಬ್ಬ ಐತಿಹಾಸಿಕ ಪುರುಷನೆಂಬುದನ್ನು ನಂಬಲು ಅವರು ನಿರಾಕರಿಸುತ್ತಿದ್ದುದು ಇನ್ನೂ ಹೆಚ್ಚು ಅರ್ಥಪೂರ್ಣವಾದ ಸಂಗತಿ. ಜನರು ಆರಾಧಿಸುವ ಕೃಷ್ಣ ಎಂದೂ ಇರಲಿಲ್ಲ ಎಂದು ಅವರು ಹೇಳಲಿಲ್ಲ. ಗೀತೆಯಲ್ಲಿ ಬರುವ ಕೃಷ್ಣನದು ಒಂದು ಅರ್ಥದಲ್ಲಿ, ಹಿಂದೂ ನಂಬಿಕೆಗಳಿಗೆ ವಿರುದ್ಧವಾದ ಒಂದು ಅವತಾರ. ಗಾಂಧೀಜಿಯವರ ಮಟ್ಟಿಗೆ ಅವತಾರವೆಂಬುದು ಒಂದು ಪರಿಪೂರ್ಣ ಮತ್ತು ಸರಿಯಾದ ಜ್ಞಾನದ ಮೂರ್ತರೂಪ; ಆದರೆ ಚಿತ್ರಗಳು ಕಾಲ್ಪನಿಕ. ಹಲವಾರು ಕೃಷ್ಣ ಚರಿತ್ರೆಗಳು, ಕೃಷ್ಣನು ನಡೆಸಿದನೆಂದು ಹೇಳುವ ಕೃತ್ಯಗಳನ್ನು ಗಾಂಧೀಜಿ ಒಪ್ಪುವುದು ಸಾಧ್ಯವಿರಲಿಲ್ಲ. ಕೃಷ್ಣ ನಡೆಸಿದನೆಂದು ಹೇಳಲಾಗುವ ಹಲವು ಕೃತ್ಯಗಳನ್ನು ಗಾಂಧೀಜಿ ಸ್ಪಷ್ಟ ಮಾತುಗಳಲ್ಲಿ ನಿರಾಕರಿಸಿದರು. "ಮಹಾಭಾರತದ ಕೃಷ್ಣನು ಎಂದಾದರೂ ಬದುಕಿದ್ದಿರಬಹುದು ಎಂಬುದು ನನಗೆ ತಿಳಿದಿಲ್ಲ. ನನ್ನ ಕೃಷ್ಣನಿಗೆ ಐತಿಹಾಸಿಕ ವ್ಯಕ್ತಿಯೊಂದಿಗೆ ಯಾವ ಸಂಬಂಧವೂ ಇಲ್ಲ. ತನ್ನ ಘನತೆಗೆ ಕುಂದುಂಟಾಯಿತು ಎಂಬ ಕಾರಣಕ್ಕೆ ಯಾರನ್ನಾದರೂ ಕೊಲ್ಲಬಲ್ಲ ಕೃಷ್ಣನಿಗೆ, ಅಥವಾ ಹಿಂದೂಗಳಲ್ಲದವರು ಚಿತ್ರಿಸುವಂತಹ ದುರ್ವ್ಯಸನಿಯಾದ ಕೃಷ್ಣನಿಗೂ ನಾನು ನಮಸ್ಕರಿಸಲಾರೆ. ಪರಿಪೂರ್ಣ ಅವತಾರಿಯಾದ, ಪ್ರತಿಯೊಂದು ವಿಚಾರದಲ್ಲೂ ನಿಷ್ಕಳಂಕವಾದ, ಗೀತೆಗೆ ಸ್ಫೂರ್ತಿಯಾದ ಕೋಟ್ಯಂತರ ಜನರ ಬದುಕಿಗೆ ಸ್ಫೂರ್ತಿಯಾದ ನನ್ನ ಕಲ್ಪನೆಯ ಕೃಷ್ಣನನ್ನು ನಾನು ನಂಬುತ್ತೇನೆ. ಆದರೆ ಇಂದು ಆಧುನಿಕ ಐತಿಹಾಸಿಕ ಪುಸ್ತಕಗಳು ಹೇಳುವ ಅರ್ಥದಲ್ಲಿ ಮಹಾಭಾರತದ ಪ್ರತಿಯೊಂದು ಪದವೂ ಅಧಿಕೃತ ಇತಿಹಾಸ, ಅಲ್ಲಿರುವ ಕೃಷ್ಣ, ಆತನಿಗೆ ಆರೋಪಿಸಲ್ಪಟ್ಟಿರುವ ಕೃತ್ಯಗಳನ್ನು ನಡೆಸಿರುವುದು ನಿಜ ಎಂದು ಯಾರಾದರೂ ನಿರೂಪಿಸಿದರೆ, ಹಿಂದೂ ಧರ್ಮದಿಂದ ಬಹಿಷ್ಕರಿಸಲ್ಪಡುವ ಅಪಾಯವನ್ನು ಎದುರಿಸಿದರೂ ಸರಿ, ನಾನು ಕೃಷ್ಣನನ್ನು ದೇವರ ಅವತಾರವೆಂದು ನಂಬಲು ನಿರಾಕರಿಸುತ್ತೇನೆ."

ಗಾಂಧೀಜಿಯವರ ಪ್ರಕಾರ ಅವರು ಪ್ರಥಮ ತತ್ವ ಎಂದು ವಿವರಿಸುವ 'ನೈತಿಕ ನಡವಳಿಕೆ'ಗೆ ಧರ್ಮ ಗ್ರಂಥಗಳೂ ಬದ್ಧವಾಗಬೇಕು. ನೈತಿಕ ನಡವಳಿಕೆಯ ಪ್ರಥಮ ತತ್ವಕ್ಕೆ ಒಳಪಡದ ಯಾವುದೇ ಆದರೂ ಅವರ ಪ್ರಕಾರ ಶಾಸ್ತ್ರದ ಅಧಿಕಾರವನ್ನು ಹೊಂದಿರುವುದು ಸಾಧ್ಯವಿಲ್ಲ. ಶಾಸ್ತ್ರಗಳು ಈ ಪ್ರಥಮ ತತ್ವವನ್ನು ಕಡೆಗಣಿಸುವುದಕ್ಕಾಗಿ ರಚಿಸಲ್ಪಟ್ಟಿಲ್ಲ. ಅವು ರಚಿಸಲ್ಪಟ್ಟಿರುವುದು ಇದನ್ನು ಸುಸ್ಥಿರಗೊಳಿಸುವುದಕ್ಕೆ ಎಂಬುದಾಗಿ ಗಾಂಧೀಜಿ ಹೇಳುತ್ತಿದ್ದರು. ಇದರಿಂದಾಗಿ ಧರ್ಮಗ್ರಂಥಗಳೂ ಸಹ ತರ್ಕಕ್ಕೆ ಮುಕ್ತಗೊಂಡಂತಾಯಿತು. ಒಬ್ಬ ಕ್ರಿಶ್ಚಿಯನ್ ಸಂದರ್ಶಕರು ಒಮ್ಮೆ ಅವರನ್ನು "ನಿಮ್ಮ ಅಧಿಕಾರ ಸ್ಥಾನವನ್ನು ನೀವು ಎಲ್ಲಿ ಕಾಣುತ್ತೀರಿ?" ಎಂದು ಪ್ರಶ್ನಿಸಿದಾಗ ಅವರು ತಮ್ಮ

ಹೃದಯವನ್ನು ತೋರಿಸಿ ಹೇಳುತ್ತಾರೆ "ಅದು ಇರುವುದು ಇಲ್ಲಿ. ಗೀತೆಯೂ ಸೇರಿದಂತೆ ಪ್ರತಿಯೊಂದು ಧರ್ಮಗ್ರಂಥದ ಬಗೆಗೂ ನಾನು ನನ್ನ ನಿರ್ಣಯವನ್ನು ಬಳಸುತ್ತೇನೆ. ಗ್ರಂಥಗಳು ನನ್ನ ತರ್ಕವನ್ನು ಅತಿಕ್ರಮಿಸಲು ನಾನು ಬಿಡುವುದಿಲ್ಲ. ಮುಖ್ಯವಾದ ಎಲ್ಲ ಪುಸ್ತಕಗಳೂ ಪ್ರೇರೇಪಣೆ ಪಡೆದಂತಹವು. ಅವುಗಳಲ್ಲಿ ಯಾವುದೂ ನೇರವಾಗಿ ದೇವರಿಂದ ಬರುವುದಿಲ್ಲ ಎಂದು ನಂಬುವುದರಿಂದ, ದಿವ್ಯಜ್ಞಾನಕ್ಕೆ ನನ್ನ ಸಮ್ಮತಿ ಸೂಚಿಸುವಾಗ ನನ್ನ ತರ್ಕವನ್ನು ನಾನು ಬಿಟ್ಟುಕೊಡಲಾರೆ."

1928 ರ ಸೆಪ್ಟೆಂಬರ್ 25–30 ರ ನಡುವೆ ಒಮ್ಮೆ ಗಾಂಧೀಜಿಯವರ ಒತ್ತಾಯದ ಮೇರೆಗೆ, ಅವರ ಉಪಸ್ಥಿತಿಯಲ್ಲಿ ವೈದ್ಯರೊಬ್ಬರು, ಅಹಮದಾಬಾದ್‌ನ ಸತ್ಯಾಗ್ರಹ ಆಶ್ರಮದಲ್ಲಿ, ಮಾರಣಾಂತಿಕವಾಗಿ ಕಾಯಿಲೆಯಾಗಿದ್ದ ಕರುವೊಂದಕ್ಕೆ ಚುಚ್ಚುಮದ್ದಿನ ಮೂಲಕ ಜೀವನ್ಮುಕ್ತಿ ನೀಡಿದರು. 18 ನೆಯ ಶತಮಾನದ ಗುಜರಾತಿ ಕವಿ ಪ್ರೀತಮ್ (1718–1798) ಅವರ ಒಂದು ಸಾಲನ್ನು ಉಲ್ಲೇಖಿಸಿ 'ಪಾವಕ್ ನಿ ಜ್ವಾಲಾ' ಎಂದು ತಮ್ಮ ತಪ್ಪೊಪ್ಪಿಗೆಯನ್ನು 'ನವಜೀವನದಲ್ಲಿ' ಗಾಂಧೀಜಿ ಬರೆದರು. ಪ್ಯಾರೇಲಾಲರು ಅದನ್ನು ಯಂಗ್ ಇಂಡಿಯಾದಲ್ಲಿ 'ಜ್ವಲಂತ ಅಗ್ನಿಪರೀಕ್ಷೆ'(Fiery ordeal) ಎಂಬುದಾಗಿ ಅನುವಾದಿಸಿದರು. ಸಂಪೂರ್ಣ ಅಹಿಂಸೆಯ ಮಾರ್ಗದಿಂದಲೇ ಸತ್ಯವನ್ನು ಕಂಡುಕೊಳ್ಳಬೇಕೆಂಬ ಆಶ್ರಮದ ಆದರ್ಶದಿಂದಾಗಿ ಜೀವನದಲ್ಲಿ ದ್ವಂದ್ವಗಳು ಹುಟ್ಟುತ್ತವೆ ಎಂದು ಹೇಳುವ ಮೂಲಕ ಗಾಂಧೀಜಿ ಪ್ರಾರಂಭಿಸಿದರು.

ಗಾಂಧೀಜಿ ಕರುವಿನ ಸ್ಥಿತಿಯನ್ನು, "ಅದು ಊನಗೊಂಡು ಹಲವಾರು ದಿನಗಳಿಂದ ಮಾರಣಾಂತಿಕವಾದ ನೋವನ್ನು ಅನುಭವಿಸುತ್ತಿತ್ತು. ಅದಕ್ಕೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರು, ಯಾವ ರೀತಿಯಲ್ಲೂ ಸಹಾಯ ಮಾಡಲಾಗದ ಯಾವ ನಂಬಿಕೆಯೂ ಇಲ್ಲದ ಸ್ಥಿತಿ ಅದರದ್ದು ಎಂದು ತಿಳಿಸಿದರು. ಆ ಕರುವಿಗೆ ನೀಡಬಹುದಾದ ಉಪಚಾರ, ಚಿಕಿತ್ಸೆಯನ್ನೆಲ್ಲಾ ನೀಡಲಾಯಿತು. ಆದರೂ ಆ ಕರುವಿನ ಸ್ಥಿತಿ ಯಾವ ರೀತಿಯಲ್ಲಿತ್ತೆಂದರೆ ಅದಕ್ಕೆ ಸಹಿಸಲಸಾಧ್ಯವಾದ ನೋವು ಉಂಟುಮಾಡದೆ ಅದರ ಮಗ್ಗುಲು ಬದಲಾಯಿಸುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅದರ ಜೀವವನ್ನು ಕೊನೆಗೊಳಿಸುವುದರ ಮೂಲಕ ಅದರ ನೋವಿಗೆ ಮುಕ್ತಿ ನೀಡಬೇಕಾದುದು ಮಾನವೀಯತೆ ಎಂದು ನನಗನ್ನಿಸಿತು" ಎಂದು ವಿವರಿಸಿದರು.

'ಮಾನವೀಯತೆ' ಎಂಬ ಪದವು ಅದರ ಇಂಗ್ಲಿಷ್ ಅವತರಣಿಕೆಗಿಂತ ಹೆಚ್ಚು ಮಹತ್ವದ ಎರಡು ಅರ್ಥಗಳನ್ನು ಧ್ವನಿಸುತ್ತದೆ. ಗುಜರಾತಿ ಮೂಲದಲ್ಲಿ ಗಾಂಧೀಜಿ 'ಧರ್ಮ' ಮತ್ತು 'ಅಹಿಂಸೆ' ಎಂಬ ಪದಗಳನ್ನು ಬಳಸುತ್ತಾರೆ. 'ಮನುಷ್ಯತ್ವ' ಎಂಬ ಪದವು 'ಕರ್ತವ್ಯ' ಮತ್ತು 'ಅಹಿಂಸೆ'ಯ ಕಲ್ಪನೆಯನ್ನು ಸರಿಯಾಗಿ ಗ್ರಹಿಸುವುದಿಲ್ಲ.

'ಮಾನವೀಯತೆ' ಎಂಬ ಪದವು ವ್ಯಕ್ತಿಗೆ, ಪ್ರಸ್ತುತ ಸಂದರ್ಭದಲ್ಲಿ ಗಾಂಧೀಜಿಯವರಿಗೆ ಒಂದು ಸೂಕ್ತ ಮಾಧ್ಯಮವನ್ನು ಒದಗಿಸುತ್ತದೆ. ಕರ್ತವ್ಯದ ಕಲ್ಪನೆಯು ಸಾಧನೆಯನ್ನು ಕಡ್ಡಾಯಗೊಳಿಸಿ, ಗಾಂಧೀಜಿ ಥರದವರಿಗೆ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಮಾನವೀಯತೆ ಎಂಬ ಅರ್ಥದಲ್ಲಿ ಬಳಸಿದಾಗ ಅಹಿಂಸೆ ಎಂಬ ಪದವು ಅಪಾರದರ್ಶಕವಾಗಿ ಉಳಿದುಬಿಡುತ್ತದೆ. ವಾಸ್ತವದಲ್ಲಿ ಅಹಿಂಸೆ ಎಂಬ ಪದವನ್ನು ಇಂಗ್ಲಿಷ್‌ನಲ್ಲಿ ಸೂಕ್ತ ರೀತಿಯಲ್ಲಿ ಅನುವಾದಿಸಿದರೆ ಅದು 'ಪ್ರೀತಿ' ಎಂಬ ಅರ್ಥವನ್ನು ನೀಡಬೇಕು. ಕೇವಲ ಹಿಂಸೆಯಲ್ಲದಿರುವಿಕೆ ಎಂದಲ್ಲ. 'ಕರ್ತವ್ಯ' ಮತ್ತು ಪ್ರೀತಿಯನ್ನು ಅನುವಾದಿಸಿ ಅರ್ಥಮಾಡಿಕೊಂಡಾಗ ಗಾಂಧೀಜಿಯವರ ತರ್ಕವು ನಮಗೆ ಗ್ರಾಹ್ಯವಾಗುತ್ತದೆ.

ವಿಚಾರವನ್ನು ಇಡೀ ಆಶ್ರಮದ ಪರಿವಾರದ ಮುಂದೆ ಇರಿಸಿದಾಗ ಒಬ್ಬ ಸದಸ್ಯರು ಕರುವಿನ ನೋವನ್ನು ಕೊನೆಗಾಣಿಸಲಿಕ್ಕಾದರೂ ಅದರ ಜೀವವನ್ನು ಕೊನೆಗೊಳಿಸುವ ವಿಚಾರವನ್ನು ವಿರೋಧಿಸುತ್ತಾರೆ. ಕೆಲವು ಹೆಣ್ಣು ಮಕ್ಕಳೂ ಸೇರಿದಂತೆ ಅವರು ಕರುವನ್ನು ಉಪಚರಿಸಲು ಮುಂದೆ ಬರುತ್ತಾರೆ. ನೊಣಗಳನ್ನು ಓಡಿಸುವುದಕ್ಕಾಗಿ ಮತ್ತು ಹಾಲು ಕುಡಿಸುವುದಕ್ಕಾಗಿ ರಾತ್ರಿಯೆಲ್ಲಾ ಎಚ್ಚರವಿರುವುದೂ ಸಹ ಆ ಕರುವಿನ ಉಪಚಾರದ ಭಾಗವಾಗಿರುತ್ತದೆ. ಜೀವವನ್ನು ಕೊಡುವುದು ಸಾಧ್ಯವಿಲ್ಲದಿರುವಾಗ ಅದನ್ನು ತೆಗೆಯುವ ಹಕ್ಕೂ ಮನುಷ್ಯರಿಗೆ ಇಲ್ಲ ಎಂಬುದು ಅವರ ವಾದವಾಗಿತ್ತು. ಈ ವಾದವು ಗಾಂಧೀಜಿಗೆ ಅರ್ಥಹೀನವೆನಿಸಿತು. ಅವರು ಪೂರ್ಣ ವಿನಯದೊಂದಿಗೆ, ಆದರೆ ಸ್ಪಷ್ಟವಾದ ನಂಬಿಕೆಯೊಂದಿಗೆ, ತಮ್ಮ ಉಪಸ್ಥಿತಿಯಲ್ಲೇ ಕರುವಿಗೆ ಮುಕ್ತಿಯನ್ನು ಕೊಡಿಸುತ್ತಾರೆ.

ಆಶ್ರಮವಾಸಿಗಳ ವಾದವನ್ನು ಗಾಂಧೀಜಿ ಅರ್ಥಹೀನ ಎನ್ನುತ್ತಾರೆ. ಕರುವಿನ ಜೀವ ತೆಗೆಯುವುದರಲ್ಲಿ ಯಾವುದಾದರೂ ಸ್ವಹಿತಾಸಕ್ತಿ ಅಡಗಿದ್ದರೆ ಆ ವಾದಕ್ಕೆ ಅರ್ಥವಿರುತ್ತಿತ್ತು. ಒಂದು ಕೃತ್ಯದ ಹಿಂದಿನ 'ಉದ್ದೇಶ', 'ಪ್ರೇರಣೆ' ಮತ್ತು 'ಕೃತ್ಯದ ಸ್ವರೂಪ'ಗಳನ್ನು ತೀರ್ಪುಗಾರರನ್ನಾಗಿ ಗಾಂಧೀಜಿ ಪರಿಚಯಿಸುತ್ತಾರೆ. ಒಂದು ಕೃತ್ಯದ ಹಿಂದೆ ಯಾವುದೇ ಸ್ವಹಿತಾಸಕ್ತಿ ಇಲ್ಲದಿದ್ದರೆ, ಅದು ನಿರ್ಲಿಪ್ತ ಅಂದರೆ ನಿಷ್ಕಾಮವಾಗಿದ್ದರೆ, ಕರ್ತವ್ಯ ನಿರ್ವಹಣೆಯಾಗುತ್ತದೆ. ಕರುವಿನ ಪ್ರಾಣವನ್ನು ತೆಗೆಯುವ ಕೆಲಸವೂ ಸಹ ಕರ್ತವ್ಯ ನಿರ್ವಹಣೆ ಮತ್ತು ಅಮಿತ ಪ್ರೀತಿಯ ಕಾರ್ಯವಾಗುತ್ತದೆ. ಅವುಗಳಲ್ಲದಿದ್ದಲ್ಲಿ ಅದೊಂದು ಹಿಂಸೆಯ ಕ್ರಿಯೆಯಾಗುತ್ತದೆ. ಅಹಿಂಸೆಯ ಕೃತ್ಯವಾಗಿ ಅದು ಸರಿಯಾದುದೇ ಆಗುತ್ತದೆ.

ಸಾರ್ವಜನಿಕ ಅಭಿಪ್ರಾಯವು ಅವರ ಕಾರ್ಯವನ್ನು ಒಪ್ಪುವುದಿಲ್ಲ. ಅದನ್ನೊಂದು ಹಿಂಸೆ ಎಂದೇ ಪರಿಗಣಿಸಲಾಗುವುದು ಎಂಬುದು ಗಾಂಧೀಜಿಗೆ ತಿಳಿದಿತ್ತು. ಇತರರಿಗೆ ಮಾತ್ರವಲ್ಲದೆ ತಮಗೇನೇ ಹಿಂದಿರುಗಿ ನೋಡಿದಾಗ ಒಂದು ಕೃತ್ಯವು ತಪ್ಪು ಎಂಬಂತೆ ಕಂಡರೂ ಕರ್ತವ್ಯದ ನಿರ್ವಹಣೆಯು ಸಾರ್ವಜನಿಕ ಅಭಿಪ್ರಾಯವನ್ನು ಅವಲಂಬಿಸಬಾರದು. ಆತ್ಮಸಾಕ್ಷಿಯ ಒಂದು ಕಾರ್ಯವು ಸಾರ್ವಜನಿಕ ಅಭಿಪ್ರಾಯದಿಂದ ಮುಕ್ತವಾಗಿರಬೇಕು. ಸಾರ್ವಜನಿಕ ಅಭಿಪ್ರಾಯಕ್ಕೆ ಹೆದರಿ, ಅಥವಾ ಮತ್ತಾವುದೋ ಒತ್ತಡಕ್ಕೆ ಒಳಗಾಗಿ ಒಬ್ಬ ಮನುಷ್ಯ ತನ್ನೊಳಗಿನ ಬೆಳಕನ್ನು ಅನುಸರಿಸಲು ಸಾಧ್ಯವಾಗದಿದ್ದಲ್ಲಿ ಆತನಿಗೆ ಯಾವುದು ಸರಿ, ಯಾವುದು ತಪ್ಪು ಎಂಬುದೂ ತಿಳಿಯಲಾರದು. ಅಂತಿಮವಾಗಿ ಆತ ಈ ಎರಡರ ನಡುವಿನ ವ್ಯತ್ಯಾಸವನ್ನು ಅರಿಯುವ ಸೂಕ್ಷ್ಮ ಪ್ರಜ್ಞೆಯನ್ನು ಕಳೆದುಕೊಂಡುಬಿಡುತ್ತಾನೆ ಎಂಬುದು ಗಾಂಧೀಜಿಯವರ ನಂಬಿಕೆಯಾಗಿತ್ತು.

ಕರುವಿನ ವಿಚಾರದಲ್ಲಿ ರೂಪಿಸಿಕೊಂಡ ತತ್ವವನ್ನು ಒಬ್ಬ ಮನುಷ್ಯನಿಗೂ ಅನ್ವಯಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಅವರಿಗೆ ನ್ಯಾಯವಾಗಿಯೇ ಕೇಳಬಹುದು. ತಮ್ಮ ವೈಯಕ್ತಿಕ ವಿಚಾರದಲ್ಲೂ ಅವರು ಈ ತತ್ವವನ್ನು ಅನ್ವಯಿಸುವುದಕ್ಕೆ ಒಪ್ಪಬಹುದೇ? ಎಂಬ ಪ್ರಶ್ನೆಗೆ "ಹೌದು ಎಂಬುದೇ ನನ್ನ ಉತ್ತರ; ಒಂದೇ ನಿಯಮ ಈ ಎರಡೂ ಸಂದರ್ಭಗಳಿಗೂ ಅನ್ವಯವಾಗಬೇಕು. ಯಥಾ ಪಂಡೇ ತಥಾ ಬ್ರಹಿ ಮುಂಡೇ ಎಂಬುದೇ ನಿಯಮ (ಅಂದರೆ ಒಬ್ಬರಿಗೆ ಅನ್ವಯವಾಗುವಂಥದು ಸರ್ವರಿಗೂ ಅನ್ವಯವಾಗಬೇಕು) ಅದಕ್ಕೆ ಯಾವ ವಿನಾಯಿತಿಗಳೂ ಬೇಕಿಲ್ಲ. ಒಂದು ಕರುವಿಗೆ ಜೀವನ್ಮುಕ್ತಿ ನೀಡುವುದು ಪ್ಪೂ ಅಲ್ಲ. ಹಿಂಸೆಯೂ ಅಲ್ಲ. ನನ್ನ ಸ್ನೇಹಿತನೊಬ್ಬನಿಗೆ ಕಾಯಿಲೆಯಾಗಿದ್ದು, ಆತನಿಗೆ ಯಾವ ರೀತಿಯಲ್ಲೂ ಸಹಾಯ ಮಾಡುವುದು ಸಾಧ್ಯವಿಲ್ಲದಿದ್ದಾಗ, ಆತ ಗುಣಮುಖನಾಗುವುದು ಅಸಾಧ್ಯವಾಗಿದ್ದಾಗ, ಭಯಾನಕ ಯಾತನೆಯಿಂದ ಆತ ಪ್ರಜ್ಞೆ ಕಳೆದುಕೊಂಡಿದ್ದರೆ ಆಗ, ಜೀವನ್ಮುಕ್ತಿಯ ಮೂಲಕ ಆತನ ಯಾತನೆಯನ್ನು ಕೊನೆಗೊಳಿಸುವುದರಲ್ಲಿ ನನಗೆ ಯಾವ ಹಿಂಸೆಯೂ ಕಾಣುವುದಿಲ್ಲ" ಎಂದು ಗಾಂಧಿ ಉತ್ತರಿಸುತ್ತಾರೆ.

ನೋವು ಅನುಭವಿಸುವವನ ಒಳಿತಿಗಾಗಿ ಕೆಲವು ತುರ್ತು ಸಂದರ್ಭಗಳಲ್ಲಿ ದೇಹದಿಂದ ಪ್ರಾಣವನ್ನು ಬೇರ್ಪಡಿಸುವುದು ಅಗತ್ಯವಾಗಬಹುದು ಎಂಬುದಾಗಿ ಗಾಂಧೀಜಿ ವಾದಿಸುತ್ತಿದ್ದರು. ಸಾಮಾನ್ಯವಾಗಿ ಇದನ್ನು ಅಹಿಂಸೆ ಎಂದು ಗುರುತಿಸಲಾಗುತ್ತಿಲ್ಲ. ಏಕೆಂದರೆ ಅಹಿಂಸೆಯ ಪ್ರತಿಪಾದಕರು ಕೇವಲ ಕೊಲ್ಲದಿರುವುದು ಮಾತ್ರವೇ ಅಹಿಂಸೆ ಎಂಬ ಅಂಧಶ್ರದ್ಧೆಯನ್ನು ನಿರ್ಮಿಸಿದ್ದಾರೆ. ಹಾಗೆ ಮಾಡುವ ಮೂಲಕ ನಿಜವಾದ ಅಹಿಂಸೆಯನ್ನು ಪ್ರಚಾರ ಮಾಡುವುದಕ್ಕೆ ಅಡ್ಡಿ ಉಂಟುಮಾಡುತ್ತಾರೆ ಎಂದು ಅವರು ಅಭಿಪ್ರಾಯ ಪಡುತ್ತಿದ್ದರು.

ಕೇವಲ ಕೊಲ್ಲುವುದನ್ನು ಮಾತ್ರವೇ ಹಿಂಸೆಯ ಪ್ರಾಥಮಿಕ ರೂಪವೆಂದು ಪರಿಗಣಿಸುವ ಅಹಿಂಸೆಯ ಬಗೆಗಿನ ತಪ್ಪು ಗ್ರಹಿಕೆಯು ಮನುಷ್ಯರ ಆತ್ಮಸಾಕ್ಷಿಯನ್ನು ಅಚೇತನಗೊಳಿಸಿ, ಅವರನ್ನು ಇನ್ನೂ ಹೆಚ್ಚು ಅಗೋಚರ ರೂಪದ ಹಿಂಸೆಗಳಿಗೆ ಸ್ಪಂದಿಸಲು ಸಾಧ್ಯವಾಗದಂತೆ ಮಾಡಿದೆ ಎಂಬುದಾಗಿ ಗಾಂಧೀಜಿ ವಾದಿಸುತ್ತಾರೆ. ಅಹಿಂಸೆಯ ಸ್ವರೂಪ ಮತ್ತು ವ್ಯಾಪ್ತಿಯ ಬಗೆಗೆ ಮೂಲಭೂತವಾದ ತಪ್ಪುಗ್ರಹಿಕೆ ಇದೆ ಎಂಬುದಾಗಿ ಅವರು ಹೇಳುತ್ತಾರೆ. ಕೊಲ್ಲುವುದರ ಮತ್ತು ಕೊಲ್ಲದಿರುವುದರ ನಡುವಿನ ಸಾಪೇಕ್ಷ ಮೌಲ್ಯದಲ್ಲಿ ಈ ತಪ್ಪುಗ್ರಹಿಕೆಯ ಮೂಲ ಇದೆ. ಈ ಎರಡರ ನಡುವಿನ ಭಿನ್ನತೆಯನ್ನು ಗುರುತಿಸುವುದು ಸಾಧ್ಯವಾಗದಂತೆ ಮಾಡಿರುವ ಅಸಾಮರ್ಥ್ಯವು ನೈತಿಕ ಧೈರ್ಯದ ಕೊರತೆಯ ಲಕ್ಷಣ ಎಂಬುದು ಗಾಂಧೀಜಿಯ ಅಭಿಪ್ರಾಯ. ಅವರ ಪ್ರಕಾರ ನಮ್ಮ ಆಧ್ಯಾತ್ಮಿಕ ನಿಷ್ಕ್ರಿಯತೆ, ನೈತಿಕ ಧೈರ್ಯದ ಕೊರತೆ, ವಸ್ತುಸ್ಥಿತಿಯನ್ನು ನೇರವಾಗಿ ನೋಡಲು ನೈತಿಕ ಧೈರ್ಯವಿಲ್ಲದಿರುವುದೇ ಇಂಥ ಶೋಚನೀಯ ಸ್ಥಿತಿಗೆ ಕಾರಣ.

ಈ ಬಗೆಯ ನಿವೇದನೆ ಮತ್ತು ತಮ್ಮ ಕೃತ್ಯವನ್ನು ಶುದ್ಧ ಅಹಿಂಸೆ ಎಂದು ಪರಿಗಣಿಸಬೇಕು ಎಂಬ ಅವರ ಆಗ್ರಹಗಳು ಹಲವರನ್ನು ಗೊಂದಲಗೊಳಿಸಿದವು. ಗಾಂಧೀಜಿಯವರಿಗೆ ಹಲವಾರು ಆಕ್ರೋಶದ ಮತ್ತು ನೋವಿನ ಪತ್ರಗಳು ಬಂದವು. ಅವಕ್ಕೆಲ್ಲಾ ಗಾಂಧೀಜಿ 'ನವಜೀವನ' ದಲ್ಲಿನ ತಮ್ಮ ಲೇಖನಗಳ ಸರಣಿಯ ಮೂಲಕ ಉತ್ತರ ನೀಡಿದರು. ಹಲವಾರು ಪತ್ರಗಳು ಬರೆದವರ ಅಳವಿಲ್ಲದ, ಕಟು ಟೀಕೆಯ ಲಾವಾವನ್ನೇ ಗಾಂಧೀಜಿಯ ಮೇಲೆ ಹರಿಸಿದವು. ಈ ಕಟುವಾದ ಪತ್ರಗಳು ಒಂದು ಉದ್ದೇಶಕ್ಕೆ ಉಪಯುಕ್ತವಾಗಬಲ್ಲವು, ಅದೆಂದರೆ ಸ್ಯೆರಣೆ ಮತ್ತು ಅಹಿಂಸೆಯ ವಿಚಾರದಲ್ಲಿ ಇನ್ನೂ ಹೆಚ್ಚಿನ ಸಾಧನೆಗೆ ಇವು ಉಪಯೋಗವಾಗುವುವು ಎಂದು ಗಾಂಧೀಜಿ ಪ್ರತಿಕ್ರಿಯಿಸಿದರು. ಗಾಂಧೀಜಿಯ ಕಡೆಯಿಂದ ಆದ ಈ ರೀತಿಯ ನಿಯಮಭಂಗದಿಂದ ಆಳವಾಗಿ ದುಃಖಿತರಾದ ನೊಂದ ಜನ ಇವರು. ಗಾಂಧೀಜಿಯವರ ನಡೆ ಮತ್ತು ಅದನ್ನವರು ಅಹಿಂಸೆ ಎಂದು ವಾದಿಸಿದ್ದರ ಬಗ್ಗೆ ಜೈನ ಸಮುದಾಯವು

ಕ್ಷೋಭೆಗೊಳಗಾಯಿತು. ಅವರು ಗಾಂಧೀಜಿಗೆ ಕಠಿಣ ಪ್ರಶ್ನೆಗಳ ಸರಮಾಲೆಯನ್ನೇ ಒಡ್ಡಿದರು. ಗಾಂಧೀಜಿ ಇವಕ್ಕೆಲ್ಲ 'ಜೈನ ಅಹಿಂಸೆ'? ಎಂಬ ತಮ್ಮ ಪ್ರತ್ಯೇಕ ಲೇಖನದಲ್ಲಿ ಉತ್ತರ ನೀಡಿದರು.

ಪ್ರಶ್ನೆಗಳಲ್ಲಿ ಮೊದಲನೆಯದು ಅಹಿಂಸೆಯ ವ್ಯಾಖ್ಯಾನದ ಬಗೆಗಿನದಾಗಿತ್ತು. ಸಾಮಾನ್ಯ ಅರ್ಥದಲ್ಲಿ ಹಿಂಸೆಯೆಂದರೆ ದೇಹದಿಂದ ಜೀವವನ್ನು ಬೇರ್ಪಡಿಸುವುದು. ಗಾಯಗೊಳಿಸುವುದು ಮತ್ತು ನೋವುಂಟುಮಾಡುವುದರ ಮೇಲಿನ ನಿಷೇಧವು ಈ ಅರ್ಥದ ವಿಸ್ತರಣೆಯಾಗಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಜೀವವನ್ನು ತೆಗೆಯುವುದು ತಪ್ಪು ಎಂದು ಹೇಳಲಾಗದು. ಆದರೆ ಅದನ್ನು ಅಹಿಂಸೆ ಎಂದು ವರ್ಗೀಕರಣ ಮಾಡುವುದು ಮಾತ್ರ ತಪ್ಪು ಎಂದು ಪತ್ರವ್ಯವಹಾರಿಯೊಬ್ಬರು ವಾದಿಸುತ್ತಾರೆ. ಯಾವುದೇ ರೀತಿಯ ನೀತಿ ತತ್ವವನ್ನೂ ಪರಿಪೂರ್ಣವೆಂದು ಪರಿಗಣಿಸಲಾಗದು ಮತ್ತು ಅದಕ್ಕೆ ಯಾವುದೇ ವಿನಾಯ್ತಿಯನ್ನೂ ಒಪ್ಪಲಾಗದು. 'ಅಹಿಂಸೆ ಎಂಬುದು ಅತ್ಯುನ್ನತ ಸರ್ವಶ್ರೇಷ್ಠ ಕರ್ತವ್ಯ' ಎಂಬ ಸೂಕ್ತಿಯು ಬಹಳ ದೊಡ್ಡ ಮೂಲಭೂತ ಸತ್ಯವನ್ನು ಒಳಗೊಳ್ಳುತ್ತದೆ. ಆದರೆ ಅದು ಮಾನವ ಕರ್ತವ್ಯದ ಒಟ್ಟು ಮೊತ್ತಕ್ಕೂ ಅನ್ವಯಿಸುವುದಿಲ್ಲ. 'ಅಹಿಂಸಾತ್ಮಕ ಹತ್ಯೆ' ಎಂದು ನೀವು ಯಾವುದನ್ನು ಕರೆಯುತ್ತೀರೋ ಅದು ಸರಿಯೇ ಆಗಿರಬಹುದು. ಆದರೆ ಅದನ್ನು ಅಹಿಂಸೆಯೆನ್ನಲಾಗದು ಎಂದು ಅವರು ಬರೆಯುತ್ತಾರೆ.

ಜೀವನವೆಂಬುದು ಹೇಗೆ ಬದಲಾವಣೆಗೆ ಬದ್ಧವಾದದ್ದೋ ಹಾಗೆಯೇ ಪದಗಳಿಗೆ ಅನ್ವಯವಾಗುವ ಅರ್ಥಗಳೂ ಕೂಡ ಎಂದು ಗಾಂಧೀಜಿ ವಾದಿಸಿದರು. ಅಹಿಂಸೆಯ ಅಂತರಾರ್ಥಗಳನ್ನು ಪೂರ್ಣವಾಗಿ ಸ್ಪಷ್ಟಪಡಿಸಿಕೊಳ್ಳಬಯಸಿದರೆ, ತತ್ವಗಳ ಬಗೆಗಿನ ಹೊಸ ಅಂತರಾರ್ಥಗಳ ಹುಡುಕಾಟದ ಬಗೆಗೂ ನಾವು ಮುಕ್ತ ಮನಸ್ಸುಳ್ಳವರಾಗಿರಬೇಕು. ಅಹಿಂಸೆಯೆಂಬುದು ಅತ್ಯುನ್ನತ ಅಥವಾ ಪರಮೋಚ್ಚ ಕರ್ತವ್ಯ. ಅದನ್ನು ನಾವು ಇನ್ನೂ ಉತ್ತಮಪಡಿಸಲಾಗದು. ಆದರೆ ನಮ್ಮ ಆಧ್ಯಾತ್ಮಿಕ ವಾರಸುದಾರಿಕೆಯನ್ನು ಉಳಿಸಿಕೊಳ್ಳಬೇಕೆಂದರೆ ನಾವು ನಿಯಮಗಳ ಅಂತರಾರ್ಥಗಳನ್ನೂ ಪರಿಶೋಧಿಸಬೇಕು. ತಮ್ಮ ಕೃತ್ಯವನ್ನು ಕರ್ತವ್ಯಬದ್ಧ, ಮತ್ತು ನ್ಯಾಯಪರ ಎಂದು ಒಪ್ಪಿಕೊಂಡರೆ, ತಮ್ಮ ಕೃತ್ಯವನ್ನು ಅಹಿಂಸಾತ್ಮಕವಲ್ಲ ಎಂದು ಜೈನರು ಪರಿಗಣಿಸಬಹುದು ಎಂದು ಜೈನರ ಮತನಿಷ್ಠ ವಾದವನ್ನು ಒಪ್ಪಲು ಗಾಂಧೀಜಿ ಸಮ್ಮತಿಸಿದರು. ಹೆಸರುಗಳ ವಿಚಾರದಲ್ಲಿ ನಾನು ನಿರ್ದಿಷ್ಟ ಅಲ್ಲ. ನಾನು ಕೈಗೊಂಡ ಕೃತ್ಯವು, ಅಂದರೆ ನಾನು ವಿವರಿಸಿದಂತಹ ಒಂದು ಪರಿಸ್ಥಿತಿಯಲ್ಲಿ ಒಂದು ಜೀವಕ್ಕೆ ಮುಕ್ತಿ ನೀಡುವ ಕಾರ್ಯವನ್ನು ಅಹಿಂಸೆಯೆಂದೋ ಅಥವಾ ಅಲ್ಲವೆಂದೋ ಕರೆಯುವ ಬಗ್ಗೆ ನನ್ನ ಆಕ್ಷೇಪಣೆಯಿಲ್ಲ ಎಂದು ಗಾಂಧೀಜಿ ತಿಳಿಸುತ್ತಾರೆ. ಅವರು ನೀಡಿದ ಒಂದು ವಿನಾಯ್ತಿ ಇದು ಎಂಬಂತೆ ಕಾಣುತ್ತದೆ. ಅಷ್ಟಾದರೂ ಅದು ಹಾಗಿರಲಾರದು. 'ಋಜುತ್ವ' ಎಂಬ ಪದವು 'ಧರ್ಮ್ಯ', 'ಕರ್ತವ್ಯಬದ್ಧ' ಎಂಬ ಅರ್ಥವನ್ನು ನೀಡುತ್ತವೆ.

ನಿರಾಕರಣೆ ಅಥವಾ ಅಸಮ್ಮತಿ ಎಂಬುದನ್ನು ಈ ರೀತಿಯಲ್ಲಿ ಪರಿಗಣಿಸಿದರೆ ಅಸಮ್ಮತಿ ಎಂಬುದು ಅತ್ಯಂತ ವೈಯಕ್ತಿಕವಾದ ಒಂದು ವರ್ಗ ಮತ್ತು ಆಚರಣೆ ಎಂಬ ಅರ್ಥವನ್ನು ನೀಡುತ್ತದೆ. ಅದರ ರಾಜಕಾರಣವು ಧರ್ಮ್ಯ ಎಂಬ ಅದರ ಲಕ್ಷಣದಿಂದ ಮೂಡುತ್ತದೆ. ಅದು ತನ್ನತನ, ರಾಜಕಾರಣ ಮತ್ತು ಅಧಿಕಾರ ಇವುಗಳೆಲ್ಲಕ್ಕಿಂತ ಉನ್ನತವಾದ ಒಂದು ತತ್ವಕ್ಕೆ ಕಡ್ಡಾಯವಾದ ವಿಧೇಯತೆಯನ್ನು ಬೇಡುತ್ತದೆ. ಆ ತತ್ವ ಧರ್ಮಗ್ರಥಸ್ಥವಾಗಿರಬಹುದು ಅಥವಾ ಐಹಿಕವಾಗಿರಬಹುದು. ಇತರರಿಂದ ಉಪದೇಶಿಸಲ್ಪಡುವ ಸಾಧ್ಯತೆಯುಳ್ಳದ್ದು ಎಂಬ ಅರ್ಥದಲ್ಲಿ ಈ ರೀತಿಯ ಅಸಮ್ಮತಿಗೆ ಬೋಧನೀಯತೆ ಎಂಬುದಿಲ್ಲ. ಧರ್ಮ್ಯ ಅವಿಧೇಯತೆ ಒಂದು ಆಚರಣೆ. ಅದು ಸಾರ್ವಜನಿಕ ಸ್ವಭಾವ ಉಳ್ಳದ್ದಾಗಿದ್ದರೂ, ಅದು ಬಲವಾಗಿ ಹಿಡಿದಿಡಲ್ಪಟ್ಟ ಮತ್ತು ಸಂರಕ್ಷಿಸಲ್ಪಟ್ಟ ಒಂದು ಖಾಸಗೀ ಕ್ಷೇತ್ರದ ಒಳಗೇ ಉಳಿದುಕೊಳ್ಳುತ್ತದೆ. ಆತ್ಮಸಾಕ್ಷಿಯಲ್ಲಿ ತನ್ನ ಮೂಲವನ್ನು ಹೊಂದಿರುವ ಅದು, ತನ್ನ ಆತ್ಯಂತಿಕ ನಿದರ್ಶನದಲ್ಲಿ ತರ್ಕದ ಆಚೆಗೆ, ಆದ್ದರಿಂದ ಸಂವಾದದ ಆಚೆಗೆ ಇರಬಲ್ಲದು. ಒಂದು ಅಸಂವಾದಿಕ, ಆದರೂ ಕರ್ತವ್ಯಬದ್ಧ ಮತ್ತು ನ್ಯಾಯಬದ್ಧ ಕ್ರಿಯೆಯು ಅಧಿಕಾರವನ್ನು ಚಲಾಯಿಸಬಲ್ಲ ಮತ್ತು ನಿರಂಕುಶಾಧಿಕಾರದ ಸಾಮರ್ಥ್ಯದ ಪ್ರವೃತ್ತಿಯನ್ನು ಹೊಂದಿರಬಲ್ಲದು.



(ಇತ್ತೀಚಿನವರೆಗೂ ಅಹಮದಾಬಾದ್‌ನ ಸಬರ್ಮತಿ ಆಶ್ರಮದ ನಿರ್ದೇಶಕರಾಗಿದ್ದ ತ್ರಿದಿಪ್ ಸುಹೃದ್ ಈಗ ಅದೇ ಊರಿನ ಪರಿಸರ ಆಯೋಜನೆ ಮತ್ತು ತಂತ್ರಜ್ಞಾನ ಕೇಂದ್ರದ ಪ್ರಾಕ್ತನ ವಿಭಾಗದ ನಿರ್ದೇಶಕ ಮತ್ತು ಪ್ರಾಧ್ಯಾಪಕ ಆಗಿದ್ದಾರೆ)

ಜುಲೈ, ೨೦೧೮

ದ್ವಿ-ರಾಷ್ಟ್ರ ಸಿದ್ಧಾಂತ: ಹಿಂದುತ್ವವಾದಿಗಳಿಂದ ಕಡ ತಂದ ಜಿನ್ನಾ

ಪ್ರೊ. ಶಂಸುಲ್ ಇಸ್ಲಾಮ್



ಇಂದೂ ದೇಶವನ್ನು ಹಲವು ರೀತಿಗಳಲ್ಲಿ ಕಾಡುತ್ತಿರುವ ರಾಷ್ಟ್ರವಿಭಜನೆಗೆ ನಿರ್ಣಾಯಕವಾಗಿ ಕಾರಣರಾದ್ದು ಮಹಮ್ಮದಾಲಿ ಜಿನ್ನಾ ಅವರೇ ಆದರೂ, ಹಿಂದೂ-ಮುಸ್ಲಿಮರಿಗೆ ಒಂದೇ ಸಾಮಾನ್ಯ ರಾಷ್ಟ್ರ ಸಲ್ಲದು ಎಂಬ ದ್ವಿ-ರಾಷ್ಟ್ರ ಸಿದ್ಧಾಂತವನ್ನು ಜಿನ್ನಾ ಅವರಿಗಿಂತ ಬಹುಮುನ್ನವೇ ಮಂಡಿಸಿದ್ದಷ್ಟೇ ಅಲ್ಲದೆ ಅದರ ವಿವರಗಳನ್ನೂ ಸಿದ್ಧಪಡಿಸಿದ್ದವರೂ ಹಿಂದೂ ರಾಷ್ಟ್ರೀವಾದಿ ನಾಯಕರೇ ಎಂಬುದು ಚರಿತ್ರೆಯ ದಾಖಲೆಗಳು ಸ್ಪಷ್ಟವಾಗಿ ಹೇಳುತ್ತವೆ. ಹಾಗೆ ನೋಡಿದರೆ ತನ್ನ ಹುಟ್ಟು ಧರ್ಮ ಇಸ್ಲಾಂ ಬಗೆಗೆ ಕಿಂಚಿತ್ತೂ ಶ್ರದ್ಧೆ ಇಲ್ಲದೆ ಕಟ್ಟಾ 'ಸೆಕ್ಯುಲರ್' ಆಗಿದ್ದ ಜಿನ್ನಾ ಇಸ್ಲಾಂ ರಾಷ್ಟ್ರವಾದಿಯಾಗಿ ಪರಿವರ್ತಿತವಾದ ಪ್ರಕ್ರಿಯೆ ಕುತೂಹಲಕಾರಿಯಾದದ್ದು. ಈ ಪ್ರಕ್ರಿಯೆಯ ಒಂದು ಹಿನ್ನೆಲೆಯನ್ನು ಒದಗಿಸುತ್ತದೆ ಈ ಲೇಖನ.-ಸಂ.

೨೦೦೨ರಲ್ಲಿ ಗುಜರಾತಿನಲ್ಲಿ ಮುಸ್ಲಿಮರ ಮಾರಣಹೋಮ ನಡೆದಾಗ ಪ್ರಸಿದ್ಧ ಇಂಗ್ಲಿಶ್ ಪತ್ರಿಕೆಯೊಂದು ಆರ್ ಎಸ್ ಎಸ್ ನ ಬಗ್ಗೆ ಬರೆಯುವಾಗ ಜಾರ್ಜ್ ಆರ್ವೆಲ್ ಹೇಳುವ 'ಎರಡು ನಾಲಿಗೆಯ ಮಾತನ್ನು' ಕುರಿತು ಪ್ರಸ್ತಾಪ ಮಾಡಿತ್ತು (*ಟೈಂಸ್ ಆಫ್ ಇಂಡಿಯಾ , ೧೬ ಆಗಸ್ಟ್, ೨೦೦೨*). ಅದು ಬಹುಪಾಲು ಸರಿಯಾಗಿತ್ತು. ಅದರಲ್ಲೂ ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು, ಆರ್ ಎಸ್ ಎಸ್ ನ ಸಂಚುಕೋರತನದ ಬಗ್ಗೆ ದೇಶದ ಮೊದಲ ಗೃಹ ಮಂತ್ರಿ ಸರದಾರ್ ಪಟೇಲ್ ಅವರಿಗೆ ಹೀಗೆ ಬರೆದಿದ್ದರು: "ಆರ್‌ಎಸ್‌ಎಸ್‌ನವರು ಗಲಾಟೆ ಮಾಡುತ್ತಾರೆಂದು ನನಗೆ ಮಾಹಿತಿ ಬಂದಿದೆ. ಮುಸ್ಲಿಮರಂತೆ ಕಾಣುವ ಅವರಲ್ಲಿ ಕೆಲವರು ಅವರಂತೆ ಬಟ್ಟೆ ಹಾಕಿಕೊಂಡು ಹಿಂದುಗಳ ಮೇಲೆ ಹಲ್ಲೆ ಮಾಡಿ ದೊಂಬಿ ಎಬ್ಬಿಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇನ್ನೂ ಕೆಲವರು ಹಿಂದುಗಳು ಮುಸ್ಲಿಮರ ಮೇಲೆ ಹಲ್ಲೆ ಮಾಡಿ ಮುಸ್ಲಿಮರನ್ನು ಪ್ರಚೋದಿಸಲು ಕಾದಿದ್ದಾರೆ. ಇದರಿಂದ ಹಿಂದು-ಮುಸ್ಲಿಮರ ನಡುವೆ ದೊಡ್ಡ ದಳ್ಳುರಿಯೊಂದು ಹತ್ತಿಕೊಳ್ಳಲಿದೆ".[*'ರಾಜೇಂದ್ರ ಪ್ರಸಾದ್-ನೆಹರು: ಅಗ್ರಿಮೆಂಟ್ ವಿತಿನ್ ಡಿಫರೆನ್ಸ್- ಸೆಲೆಕ್ಟ್ ಕರೆಸ್ಪಾಂಡೆನ್ಸ್ ೧೯೩೪-೧೯೫೦'(ನೀರಜಾ ಸಿಂಗ್ ಸಂ. ೧೯೯೮), ಎನ್‌ಬಿಟಿ ಪು ೪೩*]

ಅಲಿಗಡ್ ಮುಸ್ಲಿಮ್ ವಿಶ್ವವಿದ್ಯಾಲಯದಲ್ಲಿ ಜಿನ್ನಾ ಅವರ ಭಾವಚಿತ್ರವನ್ನು ಕುರಿತ ವಿವಾದವನ್ನು ಗಮನಿಸಿದರೆ, ಅದು ಇದೇ ಪುಂಡರ ಕಾರಸ್ಥಾನ ಎಂಬುದು ಗೊತ್ತಾಗುತ್ತದೆ. ಮಾಜಿ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು (AMUSU) ಉದ್ದೇಶಿಸಿ ಮಾತಾಡುವವರಿದ್ದರು. ಶಿಷ್ಟಾಚಾರದ ನಿಯಮಗಳ ಪ್ರಕಾರ ಈ ಕಾರ್ಯಕ್ರಮಕ್ಕೆ ಪೋಲಿಸ್ ಮತ್ತಿತರ ಇಲಾಖೆಗಳ ಅನುಮತಿ ಇತ್ತು. ಅದರಂತೆ ಸೂಕ್ತ ಭದ್ರತೆ ಹಾಗೂ ಸಿಬ್ಬಂದಿಯನ್ನು ಒದಗಿಸಲಾಗಿತ್ತು.

ಆದರೂ ಸಹ, ಅನ್ಸಾರಿಯವರ ಹೇಳಿಕೆಯಂತೆ ಅವರು ತಂಗಿದ್ದ " ಅತಿಥಿ ಗೃಹಕ್ಕೆ ಪುಂಡರು ಹೇಗೆ ನುಗ್ಗಿಬಂದರು ಎಂಬುದು ನಿಗೂಢ ಸಂಗತಿಯಾಗಿದೆ".(*ಇಂಡಿಯನ್ ಎಕ್ಸ್‌ಪ್ರೆಸ್ ಮೇ ೧೩, ೨೦೧೮*). ವಿದ್ಯಾರ್ಥಿ ಸಂಘದ ಸಭೆಯಲ್ಲಿ ಜಿನ್ನಾ ಅವರ ಫೋಟೋವನ್ನು ಹಾಕಲಾಗಿತ್ತು ಎಂಬ ಕಾರಣಕ್ಕೆ, ಪುಂಡು ಹಿಂದುತ್ವವಾದಿ ಪಡೆಯವರು ತಮ್ಮ ದಾಳಿಯನ್ನು ಸಮರ್ಥಿಸಿಕೊಂಡರು. ಜಿನ್ನಾರಿಗೆ ೧೯೩೮ರಲ್ಲಿ ವಿದ್ಯಾರ್ಥಿ ಸಂಘದ ಆಜೀವ ಸದಸ್ಯತ್ವ ನೀಡಿದ ಕಾರಣಕ್ಕೆ ಬಹಳ ವರ್ಷಗಳಿಂದ ಅವರ ಫೋಟೋವನ್ನು ಹಾಕಲಾಗಿತ್ತು. ಅದರ ಬಗ್ಗೆ ಸುಮಾರು ೮೦ ವರ್ಷಗಳ ಕಾಲ ಹಿಂದುತ್ವ ಗುಂಪುಗಳಿಗೆ ಯಾವ ತಕರಾರೂ ಇರಲಿಲ್ಲ. ಆದರೆ ಉತ್ತರ ಪ್ರದೇಶದ ಉಪಚುನಾವಣೆಗಳಲ್ಲಿ ಹಿಂದುತ್ವವಾದಿ ಗುಂಪುಗಳಿಗೆ ಯಾವಾಗ ಸೋಲುಂಟಾಯಿತೋ ಆಗ ಇದು ಮುಖ್ಯ ವಿಷಯವಾಗಿಬಿಟ್ಟಿತು. ಜಿನ್ನಾರ ಫೋಟೋ ತೆಗೆಯಲು ಗಲಭೆ ಎಬ್ಬಿಸಿದ ಗುಂಪುಗಳಿಗೆ, ಪಾಕಿಸ್ತಾನದ ಸ್ಥಾಪಕರಾದ ಜಿನ್ನಾರವರು ೧೯೪೨-೪೩ರಲ್ಲಿ *ಹಿಂದೂ ಮಹಾಸಭಾದ* ಜೊತೆಗೂಡಿ ಸಮ್ಮಿಶ್ರ ಸರ್ಕಾರವನ್ನು ರಚಿಸಿದ್ದರು ಎಂಬುದು, ಮರೆತು ಹೋದಂತೆ ಕಾಣುತ್ತದೆ.

ಜಿನ್ನಾರ ಕುರಿತು ಕೆಲವು ಮುಖ್ಯ ಸಂಗತಿಗಳು

ಜಿನ್ನಾರವರು ವಿಭಜನೆಯ ಪಿತಾಮಹನಾಗುವದಕ್ಕಿಂತ ಮೊದಲಿನ ಇತಿಹಾಸವನ್ನು ಅರಿತರೆ, ಅವರ ಬಗ್ಗೆ ಸರಿಯಾದ ಚಿತ್ರಣ ದೊರೆಯುತ್ತದೆ. ೨೦ನೇ ಶತಮಾನದ ಆರಂಭದಲ್ಲಿ ಅವರು ಕಟ್ಟಾ ಸೆಕ್ಯುಲರಿಸ್ಟರಾಗಿ; ದಾದಾಭಾಯಿ ನವರೋಜಿ, ಗೋಖಲೆ, ಅನಿಬೆಸೆಂಟ್,ಗಾಂಧಿ, ಮೋತಿಲಾಲ್ ನೆಹರು, ಮೌಲಾನಾ ಆಜಾದ್, ಸರ್ದಾರ್ ಪಟೇಲ್ ಮೊದಲಾದ ಮಂಚೂಣಿ ಕಾಂಗ್ರೆಸ್ ನಾಯಕರಂತೆಯೇ ಬ್ರಿಟಿಶರ ವಿರುದ್ಧ ಹೋರಾಟ ನಡೆಸಿದ್ದರು. ಆ ದಿನಗಳಲ್ಲಿ ಅವರು ಹಿಂದೂ-ಮುಸ್ಲಿಮ್ ಐಕ್ಯತೆ ಹಾಗೂ ಭಾರತದ ಸ್ವಾತಂತ್ರ್ಯ-ಐಕ್ಯತೆಯ ಹರಿಕಾರರಲ್ಲಿ ಒಬ್ಬರಾಗಿದ್ದರು. ಅವರನ್ನು ಹಿಂದುತ್ವ ಗುಂಪುಗಳು ಗಾಂಧಿ, ಮೋತಿಲಾಲ ನೆಹರೂ, ಆಜಾದರ ಗುಂಪಿಗೆ ಸೇರಿಸಿ ಹೀಗಳೆಯುತ್ತಿದ್ದರು.

ಜಿನ್ನಾ ಅವರು ಬ್ರಿಟಿಶರ ವಿರುದ್ಧ ಹಿಂಸಾತ್ಮಕ ಹೋರಾಟವನ್ನು ಬೆಂಬಲಿಸಿರಲಿಲ್ಲ. ಆದರೆ ಯಾವಾಗ ಬ್ರಿಟಿಶ್ ಸರ್ಕಾರವು ಭಗತ್ ಸಿಂಗ್‌ರನ್ನು ಬಂಧಿಸಿ ಅವರನ್ನು ನ್ಯಾಯಾಂಗದ ಮೂಲಕವೇ ಕೊಲ್ಲಲು ಉದ್ದೇಶಿಸಿತೋ(ಆರೋಪಿಯು ಕೋರ್ಟಿನಲ್ಲಿ ಹಾಜರಿಲ್ಲದಿದ್ದರೂ ಅವನ ವಿರುದ್ಧ ಮೊಕದ್ದಮೆ ನಡೆಯಲು ಅವಕಾಶ ಮಾಡಿಕೊಡುವ ಮಸೂದೆಯನ್ನು ತರುವ ಮೂಲಕ), ಆಗ ಸೆಪ್ಟೆಂಬರ್ ೧೨, ೧೯೨೯ರಂದು ಜಿನ್ನಾ ಕೇಂದ್ರ ಶಾಸನಸಭೆಯಲ್ಲಿ ಬಹಳ ತೀಕ್ಷ್ಣವಾದ ಭಾಷಣ ಮಾಡಿದರು. "ಉಪವಾಸ ಸತ್ಯಾಗ್ರಹ ಮಾಡುವ ವ್ಯಕ್ತಿಗೆ ಒಂದು ಆತ್ಮವಿದೆ. ಅವನಿಗೆ ನ್ಯಾಯದ ಬಗ್ಗೆ ಕಾಳಜಿಯಿದೆ. ಆತ ಯಾವುದೋ ಪಾತಕ ಮಾಡಿರುವ ಮಾಮೂಲಿ ಕ್ರಿಮಿನಲ್ ಅಲ್ಲ. ನಾನು ಭಗತ್ ಸಿಂಗ್ ವಿರುದ್ಧ ಕೈಗೊಂಡಿರುವ ಕ್ರಮವನ್ನು ವಿರೋಧಿಸುತ್ತೇನೆ. ವಿಷಾದದ ಸಂಗತಿಯೆಂದರೆ, ಇಂದಿನ ಯುವ ಜನತೆ-ಸರಿಯೋ ತಪ್ಪೋ ಗೊತ್ತಿಲ್ಲ-ಇದರಿಂದ ಜಾಗೃತವಾಗಿದೆ. ನೀವು ಅವರನ್ನು ಎಷ್ಟೇ ದೂಷಿಸಿದರೂ, ದಾರಿ ತಪ್ಪಿದವರು ಎಂದು ಹೀಯಾಳಿಸಿದರೂ ಅವರು ಈ ವಿನಾಶಕಾರಿ ಆಡಳಿತ ವ್ಯವಸ್ಥೆಯಿಂದ ರೋಸಿ ಹೋಗಿ ಅದರ ವಿರುದ್ಧ ಸೆಟೆದು ನಿಂತಿದ್ದಾರೆ"(*ಎಜಿ.ನೂರಾನಿ, ದಿ ಟ್ರಯಲ್ ಆಫ್ ಭಗತ್ ಸಿಂಗ್*)

ಇದಕ್ಕಿಂತ ಮುಂಚೆ, ೧೯೧೬ರಲ್ಲಿ ಬಾಲಗಂಗಾಧರ ತಿಲಕ(ಹಿಂದುತ್ವವಾದಿಗಳ ಕಣ್ಮಣಿ)ರ ವಿರುದ್ಧದ ರಾಜದ್ರೋಹದ ಕೇಸಿನಲ್ಲಿ, ಜಿನ್ನಾ ತಿಲಕರ ವಕೀಲರಾಗಿದ್ದರು. ಮರಣ ದಂಡನೆಯ ಶಿಕ್ಷೆಗೆ ಗುರಿಯಾಗಬಹುದಾಗಿದ್ದ ಈ ಚರಿತ್ರಾರ್ಹ ಮೊಕದ್ದಮೆಯನ್ನು ಜಿನ್ನಾರವರು ಗೆದ್ದು ಬ್ರಿಟಿಶರಿಗೆ ಭಾರೀ ಮುಖಭಂಗವನ್ನುಂಟುಮಾಡಿದ್ದರು. ೧೯೩೫ರಲ್ಲಿ ಲಾಹೋರ್‌ನ ಮುಸ್ಲಿಮರು ಹಾಗೂ ಸಿಖ್ಖರ ನಡುವೆ ಧಾರ್ಮಿಕ ಸ್ಥಳವೊಂದರ ಕುರಿತ ವಿವಾದ ಉಂಟಾಯಿತು. ಮುಸ್ಲಿಮರು ಈ ಪ್ರಕರಣದಲ್ಲಿ ತಮ್ಮ ವಕಾಲತ್ತು ವಹಿಸಲು ಜಿನ್ನಾರನ್ನು ಕೇಳಿದಾಗ ಅವರು ಅದನ್ನು ತಿರಸ್ಕರಿಸಿ ಅದರಿಂದ ದೂರ ಉಳಿದರು.

ಗಾಂಧಿಯವರ ಸಮೂಹ ಹೋರಾಟವನ್ನು ವಿರೋಧಿಸಿ, ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಯ ಹೋರಾಟದಲ್ಲಿ ಧಾರ್ಮಿಕ ನಾಯಕರನ್ನು ಬಳಸಿಕೊಳ್ಳುವುದನ್ನು ವಿರೋಧಿಸಿ, ೧೯೨೦-೨೧ರಲ್ಲಿ ಜಿನ್ನಾ ಗಾಂಧಿಯವರಿಂದ ದೂರವಾದರು. ಕಾಂಗ್ರೆಸ್ ಅವರನ್ನು ದೂರವಾಗಿಡಲು ಪ್ರಯತ್ನಿಸಿದಾಗ ಅದನ್ನು ವಿರೋಧಿಸುವ ಬದಲು ಜಿನ್ನಾ-ಈ ಮೊದಲು ತಾವೇ ಭೂಮಾಲೀಕ, ಶ್ರೀಮಂತ ಹಾಗೂ ಜಮೀನ್ದಾರಿ ವರ್ಗಗಳ ಪ್ರತಿನಿಧಿ ಎಂದು ಕರೆಯುತ್ತಿದ್ದ-ಮುಸ್ಲಿಂ ಲೀಗ್‌ನತ್ತ ಚವಾಲಿದರು.. ಹಾಗೆ ನೋಡಿದರೆ ಆಚಾರಣೆಗಳ್ಲಾಗಲೀ, ಧಾರ್ಮಿಕ ನಂಬಿಕೆಗಳ ಹಿನ್ನೆಲೆಯಲ್ಲಿ ಅವರೊಬ್ಬ ಶ್ರದ್ಧಾವಂತ ಮುಸ್ಲಿಮನಾಗಿರಲಿಲ್ಲ. ಇಂಗ್ಲಿಶ್-ಗುಜರಾತಿಗಳನ್ನು ಚೆನ್ನಾಗಿ ಬಲ್ಲ ಅವರಿಗೆ ಉರ್ದು ಓದಲು ಬರೆಯಲು ಬರುತ್ತಿರಲಿಲ್ಲ.

ದ್ವಿ-ರಾಷ್ಟ್ರ ಪ್ರತಿಪಾದನೆ ಜಿನ್ನಾರಿಂದ ಅಲ್ಲ

ದ್ವಿರಾಷ್ಟ್ರ ಸಿದ್ಧಾಂತದ ಪರಿಕಲ್ಪನೆಯನ್ನು ಮುಸ್ಲಿಮರು ಪ್ರತಿಪಾದಿಸುವ ಮುಂಚೆಯೇ ಹಿಂದೂ ರಾಷ್ಟ್ರೀಯವಾದಿಗಳು ಪ್ರತಿಪಾದಿಸಿದ್ದರು. ಮುಸ್ಲಿಮ್ ಲೀಗ್‌ನವರು ಈ ಸಿದ್ಧಾಂತವನ್ನು ಎತ್ತಿ ಹಿಡಿದಿದ್ದು ಬಹಳ ತಡವಾಗಿ. ಮುಖ್ಯವಾಗಿ ಈ ಪರಿಕಲ್ಪನೆಯೇ ಹಿಂದುತ್ವವಾದಿ ಚಿಂತನೆಗಳ ಪಕ್ವಫಲವಾಗಿತ್ತು.

೧೯ನೇ ಶತಮಾನದ ಬಂಗಾಳದಲ್ಲಿ ಹಿಂದೂ ರಾಷ್ಟ್ರೀಯವಾದಿಗಳು ಇದಕ್ಕೆ ನಾಂದಿ ಹಾಡಿದರು. ಮುಖ್ಯವಾಗಿ, ಅರಬಿಂದೋ ಘೋಶ್‌ರ ತಾಯಿಯ ಮುತ್ತಾತ ರಾಜ ನಾರಾಯಣ ಬಸು(೧೮೨೬-೧೮೯೯) ಮತ್ತು ಅವರ ಅನುಯಾಯಿ ನಭಾ ಗೋಪಾಲ್ ಮಿತ್ರಾ(೧೮೪೦-೯೪) ಅವರನ್ನು ದ್ವಿರಾಷ್ಟ್ರ ಸಿದ್ಧಾಂತ ಹಾಗೂ ಹಿಂದೂ ರಾಷ್ಟ್ರೀಯವಾದದ ಮಹಾ ಪೋಷಕರೆಂದು ಗುರುತಿಸಬಹುದು. ಬಸು ಅವರು ಓದುಬರಹ ಕಲಿತವರಲ್ಲಿ ರಾಷ್ಟ್ರೀಯವಾದಿ ಚಿಂತನೆಗಳನ್ನು ಉದ್ದೀಪಿಸಲು ಆರಂಭಿಸಿದ ಸಂಘವೊಂದು ಕ್ರಮೇಣ ಹಿಂದೂಗಳ ಶ್ರೇಷ್ಠತೆಯನ್ನು ಎತ್ತಿಹಿಡಿಯಲು ಅವಕಾಶ ಕಲ್ಪಿಸಿತು. ಹಿಂದೂ ಧರ್ಮದಲ್ಲಿ ಜಾತಿ ಪದ್ಧತಿಯ ಆಚರಣೆಯ ಹೊರತಾಗಿಯೂ, ಕ್ರೈಸ್ತ ಅಥವಾ ಇಸ್ಲಾಮ್ ಧರ್ಮಗಳಿಗಿಂತ ಉನ್ನತವಾದ ಸಾಮಾಜಿಕ ಆದರ್ಶಗಳಿವೆ ಎಂದು ಅವರು ಸಂಘದ ಸಭೆಗಳಲ್ಲಿ ಬಲವಾಗಿ ಪ್ರತಿಪಾದಿಸಿದರು.

ಬಸು ಅವರು ಹಿಂದೂ ಧರ್ಮ ಇತರ ಧರ್ಮಗಳಿಗಿಂತ ಶ್ರೇಷ್ಠ ಎಂದು ಪ್ರತಿಪಾದಿಸುವುದಕ್ಕಿಂತ ಹೆಚ್ಚಾಗಿ ಇಲ್ಲಿನ ಜಾತಿ ಪದ್ಧತಿಯ ಬಲವಾದ ಸಮರ್ಥಕರಾಗಿದ್ದರು. ಅವರು 'ಮಹಾ ಹಿಂದೂ ಸಮಿತಿ' ಎಂಬ ಕಲ್ಪನೆಯನ್ನು ಬಿತ್ತಿದವರಲ್ಲಿ ಮೊದಲಿಗರಷ್ಟೇ ಅಲ್ಲ, *ಹಿಂದೂ ಮಹಾ ಸಭಾದ* ಸ್ಥಾಪನೆಗೆ ಅಡಿಪಾಯವನ್ನು ಒದಗಿಸಿದ 'ಭಾರತ ಧರ್ಮ ಮಹಾಮಂಡಲ'ದ ಸಂಸ್ಥಾಪಕರೂ ಆಗಿದ್ದರು. ಅದರ ಮೂಲಕ ಹಿಂದೂಗಳು ಭಾರತದಲ್ಲಿ ಆರ್ಯ ದೇಶವೊಂದನ್ನು ಸ್ಥಾಪಿಸಲು ಸಾಧ್ಯ ಎಂದು ನಂಬಿದ್ದರು. ಅವರು "ಉನ್ನತ ಪಂಕ್ತಿಯಲ್ಲಿರುವ ಬಲಿಷ್ಠ ಭಾರತವು ಗಾಢ ನಿದ್ದೆಯಿಂದ ಎಚ್ಚೆತ್ತು ತನ್ನ ದಿವ್ಯ

ಶಕ್ತಿಯಿಂದ ಪ್ರಗತಿ ಪಥದ ಕಡೆ ಮುನ್ನುಗ್ಗುತ್ತದೆ. ಹೀಗೆ ಪುನರುಜ್ಜೀವನಗೊಂಡ ಭಾರತವು ತನ್ನ ಜ್ಞಾನ, ಆಧ್ಯಾತ್ಮಿಕತೆ ಹಾಗು ಸಂಸ್ಕೃತಿಗಳ ಸಮಾಗಮದಿಂದ ಇಡೀ ಭೂಮಂಡಲದಲ್ಲಿ ಜಾಜ್ವಲ್ಯಮಾನವಾಗಿ ಕಂಗೊಳಿಸುತ್ತದೆ" ಎಂದು ಅವರು ನಂಬಿದ್ದರು *(ಆರ್ ಸಿ ಮುಜುಮ್‌ದಾರ್, ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಇಂಡಿಯಾ ಸಂ ೧, ಕಲ್ಕತ್ತಾ ೧೯೭೧ ಪು೨೯೫-೨೯೬)*

ನಭಾ ಗೋಪಾಲ್ ಮಿತ್ರಾ ಅವರು ವಾರ್ಷಿಕ ಹಿಂದೂ ಮೇಳಗಳನ್ನು ಆರಂಭಿಸಿದರು. ಬಂಗಾಳಿ ವರ್ಷದ ಕೊನೆಯ ದಿನದಂದು ಆಚರಿಸಲಾಗುತ್ತಿದ್ದ ಈ ಮೇಳದಲ್ಲಿ ಬಂಗಾಳಿ ಜನ ಜೀವನ-ಆಚರಣೆಗಳಲ್ಲಿರುವ ಹಿಂದೂ ಅಂಶಗಳನ್ನು ಎತ್ತಿ ಹಿಡಿಯಲಾಗುತ್ತಿತ್ತು. ಇದು ೧೮೬೭ರಿಂದ ೧೮೮೦ರವರೆಗೆ ಅನೂಚಾನವಾಗಿ ನಡೆದು ಬಂತು. ಮಿತ್ರಾ ಅವರು ಹಿಂದೂಗಳಲ್ಲಿ ರಾಷ್ಟ್ರೀಯತಾವಾದಿ ಚಿಂತನೆಗಳನ್ನು ಗಟ್ಟಿಗೊಳಿಸಲು ಒಂದು ರಾಷ್ಟ್ರೀಯ ಸಂಘ ಹಾಗೂ ಒಂದು ರಾಷ್ಟ್ರೀಯ ದಿನಪತ್ರಿಕೆಯನ್ನು ಆರಂಭಿಸಿದರು. ತಮ್ಮ ಪತ್ರಿಕೆಯಲ್ಲಿ ಹಿಂದೂಗಳು ಸಹಜವಾಗಿ ರಾಷ್ಟ್ರವೊಂದನ್ನು ರೂಪಿಸಬಲ್ಲರು ಎಂದು ಪ್ರತಿಪಾದಿಸಿದರು. ಅವರ ಪ್ರಕಾರ "ಈ ದೇಶದಲ್ಲಿ ರಾಷ್ಟ್ರೀಯ ಐಕ್ಯತೆ ಸಾಧ್ಯವಾಗುವುದು ಹಿಂದೂ ಧರ್ಮದ ಆಧಾರದ ಮೇಲೆಯೇ. ಹಿಂದೂ ರಾಷ್ಟ್ರೀಯತೆಯು-ಯಾರು ಯಾವುದೇ ಪ್ರದೇಶ, ಭಾಷೆಗೆ ಸೇರಿರಲಿ-ಎಲ್ಲರನ್ನೂ ತನ್ನ ತೆಕ್ಕೆಗೆ ಒಳಗೊಳ್ಳುವ ಶಕ್ತಿಯನ್ನು ಪಡೆದಿದೆ" *(ಆರ್ ಸಿ ಮುಜುಮ್‌ದಾರ್, ತ್ರೀ ಫೇಸಸ್ ಆಫ್ ಸ್ಟ್ರಗಲ್ ಫಾರ್ ಫ್ರೀಡಂ, ಭಾರತೀಯ ವಿದ್ಯಾಭವನ, ಮುಂಬಯಿ ೧೯೬೧ ಪು.೮)*

ಹಿಂದು ರಾಷ್ಟ್ರೀಯವಾದ ಬಂಗಾಳದಲ್ಲಿ ಹೇಗೆ ಹುಟ್ಟಿತು ಎಂಬುದನ್ನು ಆಳವಾಗಿ ಅಧ್ಯಯನ ಮಾಡಿರುವ ಆರ್‌ಸಿ ಮುಜುಮ್‌ದಾರ್ ಅವರ ಪ್ರಕಾರ "ಜಿನ್ನಾ ಅವರು ದ್ವಿ ರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸುವ ೫೦ ವರ್ಷಗಳ ಮುಂಚೆಯೇ ಅದಕ್ಕೆ ಮುನ್ನುಡಿಯನ್ನು ನಭಾ ಗೋಪಾಲರು ಬರೆದಿದ್ದರು. ಅಲ್ಲಿಂದ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ, ರಾಷ್ಟ್ರೀಯತೆಯ ಚರ್ಚೆಯಲ್ಲಿ ಹಿಂದುತ್ವದ ಅಂಶಗಳು ಅವಿಭಾಜ್ಯ ಅಂಗವಾಗಿಬಿಟ್ಟವು" *(ತ್ರೀ ಫೇಸಸ್ ಆಫ್ ಸ್ಟ್ರಗಲ್ ಫಾರ್ ಫ್ರೀಡಂ, ಪು.೮)*

ಆರ್ಯ ಸಮಾಜದ ಪಾತ್ರ

ಆರ್ಯಸಮಾಜವು ಉತ್ತರ ಭಾರತದಲ್ಲಿ ಹಿಂದೂ ಮುಸ್ಲಿಮ್ ಸಮುದಾಯಗಳು ಎರಡು ಭಿನ್ನ ರಾಷ್ಟ್ರಗಳು ಎಂದು ತೀವ್ರವಾಗಿ ಪ್ರತಿಪಾದಿಸಿತು. ಆರ್ಯ ಸಮಾಜದ ಹಾಗೆಯೇ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾದ ಪ್ರಮುಖ ನಾಯಕರೆಂದು ಗುರುತಿಸಲ್ಪಟ್ಟ ಭಾಯಿ ಪರಮಾನಂದ್(೧೮೭೬-೧೯೪೭) ಅಪಾರ ಪ್ರಮಾಣದ ಮುಸ್ಲಿಮ್ ವಿರೋಧಿ ಸಾಹಿತ್ಯವನ್ನು ಸೃಷ್ಟಿಸಿ ಅದರ ಮೂಲಕ ಭಾರತವು ಹಿಂದೂಗಳ ದೇಶ, ಹಾಗಾಗಿ ಮುಸ್ಲಿಮರು ಇಲ್ಲಿಂದ ಸ್ಥಳಾಂತರಗೊಳ್ಳಬೇಕು ಎಂದು ಪ್ರತಿಪಾದಿಸಿದರು.

ವಿ.ಡಿ. ಸಾವರ್ಕರ್ (೧೮೮೩-೧೯೬೬) ಹಾಗೂ ಎಂ ಎಸ್ ಗೋಲ್ವಾಲ್ಕರ್ (೧೯೦೬-೭೩) ಅವರುಗಳು ಹಿಂದೂ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನವಿಲ್ಲ ಎಂದು ಮಾತಾಡುವ ಮೊದಲೇ, ೨೦ನೇ ಶತಮಾನದ ಆರಂಭದಲ್ಲಿ ಭಾಯಿ ಪರಮಾನಂದರು ಮುಸ್ಲಿಮರು ಅರೇಬಿಯಾ ದೇಶದ ಧರ್ಮದ ಪರಿಪಾಲಕರಾಗಿರುವ ಕಾರಣದಿಂದ ಹಿಂದೂಗಳು ಹಾಗೂ ಮುಸ್ಲಿಮರು ಸಂಪೂರ್ಣವಾಗಿ ಬೇರೆ ಬೇರೆ ಎಂದು ಘೋಷಿಸಿದ್ದರು. ಉರ್ದು ಭಾಷೆಯಲ್ಲಿ ಬರೆದ ಜನಪ್ರಿಯ ಸಾಹಿತ್ಯದ ಮೂಲಕ ಪರಮಾನಂದರು, ಹಿಂದೂಗಳು ಮಾತ್ರ ಇಲ್ಲಿನ ಮಣ್ಣಿನ ಮಕ್ಕಳು, ಮುಸ್ಲಿಮರು ಹೊರಗಿನವರು ಎಂದು ಸಾರಿ ಹೇಳಿದರು. ೧೯೦೮-೦೯ರಲ್ಲಿಯೇ ಅವರು ಹಿಂದೂ ಮುಸ್ಲಿಮ್ ಜನವಸತಿಗಳನ್ನು ಎರಡು ಪ್ರತ್ಯೇಕ ಸ್ಥಳಗಳಿಗೆ ಸ್ಥಳಾಂತರಿಸಬೇಕು ಎಂದು ಕರೆ ನೀಡಿದ್ದರು. ಈ ಕುರಿತು ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆದಿದ್ದಾರೆ. " ಸಿಂಧ್ ಪ್ರಾಂತ್ಯದ ಆಚೆಗಿರುವ ಆಫ್ಘಾನಿಸ್ತಾನ ಹಾಗೂ ವಾಯುವ್ಯ ಗಡಿ ಪ್ರಾಂತ್ಯಗಳನ್ನು ಒಗ್ಗೂಡಿಸಿ ಮಹಾ ಮುಸ್ಲಿಮ್ ಸಾಮ್ರಾಜ್ಯವನ್ನು ಸೃಷ್ಟಿಸಬೇಕು. ಅಲ್ಲಿರುವ ಹಿಂದೂಗಳು ಸ್ಥಳಾಂತರಗೊಂಡು, ಅದೇ ರೀತಿ ದೇಶದಲ್ಲಿರುವ ಮುಸ್ಲಿಮರೆಲ್ಲ ಅಲ್ಲಿಗೆ ಹೋಗಿ ನೆಲೆಸಬೇಕು" *('ದಿ ಹಿಂದೂ ನ್ಯಾಶನಲ್ ಮೂವ್‌ಮೆಂಟ್' ಎಂಬ ಭಾಯಿ ಪರಮಾನಂದರ ಕರಪತ್ರ- ಬಿ ಆರ್ ಅಂಬೇಡ್ಕರ್‌ರ 'ಪಾಕಿಸ್ತಾನ್ ಆರ್ ದಿ ಪಾರ್ಟಿಶನ್ ಆಫ್ ಇಂಡಿಯಾ' ೧೯೪೦ ಪು ೩೫-೩೬ರಲ್ಲಿ ಉದ್ಧೃತ).*

ಕಾಂಗ್ರೆಸ್, ಹಿಂದೂ ಮಹಾಸಭಾ ಮತ್ತು ಆರ್ಯ ಸಮಾಜದ ಹಿರಿಯ ನಾಯಕರಾದ ಲಾಲಾ ಲಜಪತ್ ರಾಯ್(೧೮೬೫-೧೯೨೮) ಅವರು ಮತ್ತೊಬ್ಬ ಪ್ರಮುಖ ದ್ವಿ-ರಾಷ್ಟ್ರ ಸಿದ್ಧಾಂತದ ಪ್ರತಿಪಾದಕರಾಗಿದ್ದರು. ಎಜಿ ನೂರಾನಿಯವರ ಪ್ರಕಾರ "ಜಿನ್ನಾರವರು ೧೯೩೯ರಲ್ಲಿ ದ್ವಿ ರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿ ೧೯೪೦ರಲ್ಲಿ ಭಾರತದ ಆತ್ಮಭೇದಕ್ಕೆ ಕಾರಣವಾದ ದೇಶವಿಭಜನೆ ನಡೆಯುವ ಮೊದಲೇ ಮಹಾಸಭಾದ ನಾಯಕರಾದ ಲಜಪತ್ ರಾಯ್ ಹಾಗೂ ಸಾವರ್ಕರ್ ಅವರು ಅದಕ್ಕೆ ಬೇಕಾದ ತಾತ್ವಿಕತೆಯನ್ನು ಸೃಷ್ಟಿಸಿದ್ದರು" *('ಪರಿವಾರ್ ಅಂಡ್ ಪಾರ್ಟಿಶನ್' ಫ್ರಂಟ್ ಲೈನ್, ಆಗಸ್ಟ್ ೨೨ ೨೦೧೪).*

೧೮೯೯ರಲ್ಲಿ ಲಜಪತ್ ರಾಯ್ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅನ್ನು ಕುರಿತು ಬರೆಯುತ್ತ "ಹಿಂದೂಗಳು ಪ್ರತ್ಯೇಕವಾದ ನಾಗರಿಕತೆಯನ್ನು ಪ್ರತಿನಿಧಿಸುವುದರಿಂದ ಅವರು ತಮ್ಮದೇ ಆದ ರಾಷ್ಟ್ರವನ್ನು ಹೊಂದಬೇಕು" ಎಂದಿದ್ದರು *(ನೂರಾನಿ 'ಪರಿವಾರ್ ಅಂಡ್ ಪಾರ್ಟಿಶನ್' ಲೇಖನದಲ್ಲಿ).* ೧೯೨೪ರ ವೇಳೆಗೆ ಇನ್ನೂ ಸ್ಪಷ್ಟವಾಗಿ ಅದನ್ನು ಹೀಗೆ ವಿವರಿಸಿದರು. "ನನ್ನ ಯೋಜನೆಯ ಪ್ರಕಾರ ಮುಸ್ಲಿಮರು ನಾಲ್ಕು ಪ್ರತ್ಯೇಕ ರಾಜ್ಯಗಳನ್ನು ಪಡೆಯಬಹುದು. ೧. ವಾಯುವ್ಯ ಗಡಿ ಪ್ರಾಂತ್ಯಗಳಲ್ಲಿನನ ಪಠಾಣ್ ಪ್ರಾಂತ್ಯ ೨. ಪಶ್ಚಿಮ ಪಂಜಾಬ್ ೩. ಸಿಂಧ್ ಪ್ರಾಂತ್ಯ ೪. ಪೂರ್ವ ಬಂಗಾಳ. ಭಾರತದ ಇನ್ನಾವುದೇ ಪ್ರದೇಶದಲ್ಲಿ ಒಂದು ಪ್ರಾಂತ್ಯವನ್ನು ಸ್ಥಾಪಿಸುವಷ್ಟು ಸಂಖ್ಯೆಯಲ್ಲಿ ಮುಸ್ಲಿಮ್ ಜನಸಂಖ್ಯೆ ಇದ್ದರೆ ಅಲ್ಲಿ ಇದೇ ಮಾದರಿಯನ್ನು ಅನುಸರಿಸಬೇಕು. ಆದರೆ ಆ ಪ್ರದೇಶವನ್ನು ಬಹಳ ಸ್ಪಷ್ಟವಾಗಿ ಭಾರತಕ್ಕೆ ಸೇರದ ಪ್ರಾಂತ್ಯವೆಂದು ಸೂಚಿಸಬೇಕು. ಹೀಗೆ ಬಹಳ ನಿರ್ದಿಷ್ಟವಾಗಿ ಭಾರತವನ್ನು ಮುಸ್ಲಿಮರಿಂದ ಪ್ರತ್ಯೇಕಿಸಬೇಕು" *('ಹಿಂದೂ-ಮುಸ್ಲಿಮ್ ಪ್ರಾಬ್ಲಮ್ ೧೧'; ದಿ ಟ್ರಿಬ್ಯೂನ್ ೧೪ ಡಿಸೆಂಬರ್ ೧೯೨೪ ಪು.೮)*

ಲಜಪತ್ ರಾಯ್ ಅವರು ಪಂಜಾಬ್‌ನ ವಿಭಜನೆಯನ್ನು ಸಹ ಹೀಗೆ ವಿವರಿಸಿದ್ದರು : "ಇಲ್ಲಿನ ಸಮಸ್ಯೆಗೆ ಪರಿಹಾರವೇನೆಂದರೆ, ಹಿಂದೂಗಳು ಹಾಗೂ ಸಿಖ್ಖರ ಭಾವನೆಗಳಿಗೆ ಧಕ್ಕೆ ಉಂಟು ಮಾಡದಂತೆ ಮುಸ್ಲಿಮ್ ಬಾಹುಳ್ಯದ ಪ್ರದೇಶವನ್ನು ಹೊಂದಬೇಕು. ನನ್ನ ಸಲಹೆಯೇನೆಂದರೆ, ಪಂಜಾಬನ್ನು ಎರಡು ಪ್ರಾಂತ್ಯಗಳಾಗಿ ವಿಭಜಿಸಬೇಕು. ಮುಸ್ಲಿಮ್ ಬಾಹುಳ್ಯವಿರುವ ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಮ್ ಆಡಳಿತವಿರುವ ಪ್ರಾಂತ್ಯವೊಂದು ಸೃಷ್ಟಿಯಾದರೆ, ಹಿಂದೂ-ಸಿಖ್ ಬಾಹುಳ್ಯವಿರುವ ಪೂರ್ವ ಪಂಜಾಬಿನಲ್ಲಿ ಮುಸ್ಲಿಮೇತರ ಆಡಳಿತವಿರುವ ಪ್ರಾಂತ್ಯ ರಚನೆಯಾಗಬೇಕು"*(ನೂರಾನಿ " ಪರಿವಾರ್ ಅಂಡ್ ಪಾರ್ಟಿಶನ್' ಲೇಖನದಲ್ಲಿ)*

ದ್ವಿ ರಾಷ್ಟ್ರ ಸಿದ್ಧಾಂತವನ್ನು ಎತ್ತಿ ಹಿಡಿದ ಮುಸ್ಲಿಮ್ ನಾಯಕರು ಲಜಪತ್ ರಾಯ್ ಮೊದಲಾದ ಹಿಂದೂ ನಾಯಕರು ಪ್ರತಿಪಾದಿಸಿದ ವಿಚಾರ ಧಾರೆಗಳ ನಿಕಟ ಪರಿಚಯ ಹೊಂದಿದ್ದರು. ದುರದೃಷ್ಟದ ಸಂಗತಿಯೇನೆಂದರೆ, ಇದನ್ನು ಅವರು ರಾಷ್ಟ್ರವಿರೋಧಿ, ಮುಸ್ಲಿಮ್ ವಿರೋಧಿ ಸಿದ್ಧಾಂತವೆಂದು ತಿರಸ್ಕರಿಸದೆ ಎಲ್ಲವನ್ನೂ ಕಾಪಿ ಮಾಡಿ ದುರಂತಗಳ ಸರಮಾಲೆಯನ್ನು ಆರಂಭಿಸಿದರು.



(ಲೇಖಕ ಪ್ರೊ. ಶಂಸುಲ್ ಇಸ್ಲಾಂ ದೆಹಲಿ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಶಾಸ್ತ್ರದ ಪ್ರಾಧ್ಯಾಪಕರು, ಹಿರಿಯ ರಾಜಕೀಯ ವಿಶ್ಲೇಷಕರು ಮತ್ತು ರಂಗಕರ್ಮಿ)

(ಲೇಖನ ಕೃಪೆ: **ಜನತಾ**, ಮೇ ೨೬, ೨೦೧೮

ಕನ್ನಡಕ್ಕೆ : **ಡಾ. ಎಸ್. ಸಿರಾಜ್ ಅಹಮದ್**)

ಡಿಸೆಂಬರ್, ೨೦೧೮

ಅಂಬೇಡ್ಕರ್ ಮತ್ತು ನವ ಉದಾರವಾದಿ ಆರ್ಥಿಕ ನೀತಿ

–ಆನಂದ್ ತೇಲ್ತುಂಬ್ಡೆ



"ದಲಿತ ಮಾನಸದಲ್ಲಿ ಅಂಬೇಡ್ಕರ್ ಅವರಿಗೆ ವಿಶಿಷ್ಟ ಸ್ಥಾನವಿದೆ. ದಲಿತರ ಆದರ್ಶ, ತಾತ್ವಿಕತೆ, ಆಶಯಗಳೆಲ್ಲದರ ಪ್ರತಿನಿಧಿ ಅವರು. ಅಂಬೇಡ್ಕರ್ ಅವರಿಗೆ ಹೊಂದಿಕೆಯಾಗದ ಯಾವುದೂ ದಲಿತರಿಗೆ ಸಹ್ಯವಾಗದು. ಅದರೆ ಈ ಭಾವನೆಯನ್ನು ಸ್ಥಾಪಿತ ಹಿತಾಸಕ್ತಿಗಳು ವಿಕೃತಗೊಳಿಸಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ. ಜಾಗತೀಕರಣವು ಸುಮಾರು ಮೂರು ದಶಕಗಳಿಂದ ಭಾರತದಲ್ಲಿ ಅನುಷ್ಠಾನಗೊಳ್ಳುತ್ತಿದೆ, ದಲಿತರು ಅದರ ಪರಿಣಾಮಗಳಿಂದ ನೊಂದಿದ್ದಾರೆ. ಆದರೂ ಅದರ ಬಗ್ಗೆ ದಲಿತರಲ್ಲಿ ಇರಬೇಕಾದ ಅಸಹ್ಯವಿಲ್ಲ ಏಕೆಂದರೆ ಅವರ ದೃಷ್ಟಿಯಲ್ಲಿ ಅಂಬೇಡ್ಕರ್ ಅವರು ಇದ್ದಿದ್ದರೆ ಜಾಗತೀಕರಣವನ್ನು ಅವರು ಬೆಂಬಲಿಸುತ್ತಿದ್ದರು ಎಂಬ ಕಲ್ಪನೆಯನ್ನು ಬಿತ್ತಲಾಗಿದೆ. ಆದರೆ ಒಬ್ಬ ತೀವ್ರವಾದಿಯಾಗಿದ್ದ ಅಂಬೇಡ್ಕರ್ ಸದಾಕಾಲ ಸತ್ಯವನ್ನು, ಸುಸ್ಥಿರತೆಯನ್ನು ಹುಡುಕುತ್ತಿದ್ದರು. ಅವರೊಬ್ಬ ಸಮಾಜವಾದಿಯಾಗಿದ್ದರು. ದಲಿತರಿಗೆ ಇದು ಅರ್ಥವಾದರೆ ಅವರು ಸ್ಥಾಪಿತ ಹಿತಾಸಕ್ತಿಗಳು ಉಂಟುಮಾಡಿರುವ ಪ್ರತಿಗಾಮೀ ಹುದಲಿನಿಂದ ಅವರನ್ನು ಹೊರತರುತ್ತಿದ್ದರು."

೧೯೯೧ರ ಜುಲೈನಲ್ಲಿ ನರಸಿಂಹರಾವ್ ಸರ್ಕಾರವು ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ನಿರ್ದೇಶಿತ ನವ ಉದಾರವಾದೀ ಆರ್ಥಿಕ ಪ್ಯಾಕೇಜ್‌ನ್ನು, ಅವು ಬೇರೆ ಪರ್ಯಾಯವಿಲ್ಲದೆ ರೂಪಿಸಿಕೊಂಡ ನಮ್ಮವೇ ಆರ್ಥಿಕ ಸುಧಾರಣೆಗಳು ಎಂಬ ಸುಳ್ಳಿನೊಂದಿಗೆ ಅಳವಡಿಸಿಕೊಂಡಾಗ, ಎಷ್ಟೋ ಜನ ಬುದ್ಧಿಜೀವಿಗಳು ಸರ್ಕಾರದ ಕೃಪೆಗಾಗಿ ಈ ನವ ಅರ್ಥಿಕ ನೀತಿಯನ್ನು ಬೆಂಬಲಿಸಿದರು. ಇನ್ನು ದಲಿತ ಬೌದ್ಧಿಕ ಲೋಕಕ್ಕೆ ಅರ್ಥಶಾಸ್ತ್ರವೆಂದರೇ ಆಗದು! ಇದಕ್ಕೆ ಕಾರಣ, ಅದು ಭೌತಲೋಕಕ್ಕೆ ಸಂಬಂಧಿಸಿದ್ದರಿಂದ ಅದು ಅಂಬೇಡ್ಕರ್ ವಿರೋಧಿಸಿದ ಕಮ್ಯೂನಿಸ್ಟರ ಭೌತವಾದಿ ತರ್ಕದ ಉತ್ಪನ್ನವಾಗಿದೆ ಎಂಬ ಪಟ್ಟಭದ್ರ ಹಿತಾಸಕ್ತಿಗಳ ಅಪಪ್ರಚಾರ. ನಮ್ಮ ಹೋರಾಟವು ಕೇವಲ ರೊಟ್ಟಿಗಾಗಿ ಅಲ್ಲ, ಅದು ಘನತೆಗಾಗಿ ಎಂದು ಘೋಷಿಸಿಕೊಂಡದ್ದರಿಂದ ಆರ್ಥಿಕ ಚಿಂತನೆಯು ದಲಿತ ಚಿಂತನೆಯ ಭಾಗವಾಗಲೇ ಇಲ್ಲ. ಆದರೂ ದಲಿತರಲ್ಲಿಯ ಕೆಲವು ಮಹತ್ವಾಕಾಂಕ್ಷೀ ಶಕ್ತಿಗಳು ಈ ಜನವಿರೋಧಿ ಆರ್ಥಿಕ ನೀತಿಯ ಪರವಾಗಿ ಮಾತನಾಡಿ ಸರ್ಕಾರದ ಮನ್ನಣೆ ಗಳಿಸಿದವು. ನಾನದನ್ನು ಒಂದು ಅವಕಾಶವಾದಿತನವೆಂದು ಮಾತ್ರ ಪರಿಗಣಿಸಿದ್ದೆ. ಅದರೆ ಮುಂದೆ ಈ ವಿಚಾರಗಳು ತೀವ್ರತೆಯನ್ನು ಪಡೆದುಕೊಂಡು ದಲಿತ ವಾಣಿಜ್ಯ ಮಂಡಳಿ ಎಂಬುದೊಂದು ರಚನೆಯಾಗಿ ಅದು ಪ್ರತಿಪಾದಿಸಿದ ದಲಿತ ಬಂಡವಾಳಶಾಹಿ ಎಂಬ ಪರಿಕಲ್ಪನೆಯ ಮೂಲಕ ಹೆಚ್ಚು ಉಗ್ರವಾಗಿ ಮೂಡಿಬರತೊಡಗಿದವು. ಇದಕ್ಕೆ ಕೆಲ ಅಂತಾರಾಷ್ಟ್ರೀಯ ಅರ್ಥಶಾಸ್ತ್ರ ಅಧ್ಯಯನ ಸಂಸ್ಥೆಗಳ ಮನ್ನಣೆಯೂ ದೊರೆತು ಅಂಬೇಡ್ಕರರನ್ನು ಒಬ್ಬ ಮುಕ್ತ ಮಾರುಕಟ್ಟೆಯ ಪ್ರತಿಪಾದಕರೆಂಬಂತೆ ಬಿಂಬಿಸುವ ಪ್ರಯತ್ನವೊಂದು ಆರಂಭವಾಯಿತು. ಇದು ಅವರಿಗೆ ಮಾಡುವ ಅವಮಾನವೇ ಸರಿ.

'ಸಮಸ್ಯೆ'ಯ ಅಪ ಓದು

ಅಂಬೇಡ್ಕರ್ ಅವರ 'ರೂಪಾಯಿಯ ಸಮಸ್ಯೆ' (The problem of rupee) ಎಂಬ ತಲೆಬರಹದ ಅವರ ಡಿ.ಎಸ್ಸಿ. ಪ್ರಬಂಧದ ತಪ್ಪು ಓದು ಅಥವಾ ದುರುದ್ದೇಶಪೂರಿತ ಓದು ಅಂಬೇಡ್ಕರ್ ಅವರನ್ನು ಒಬ್ಬ ಮುಕ್ತಮಾರುಕಟ್ಟೆಯ ಪ್ರತಿಪಾದಕ ಎಂಬಂತೆ ಬಿಂಬಿಸಲು ಬಳಸಲ್ಪಡುತ್ತಿರುವ ಏಕೈಕ ಆಕರವಾಗಿದೆ. ಈ ಪ್ರಬಂಧದಲ್ಲಿ ಅವರು ಅಂದಿನ ಹಣಕಾಸು ಪದ್ಧತಿಗಳ, ಅಂದರೆ ಚಿನ್ನದ ಮಾನಕ (gold standard) ಮತ್ತು ಚಿನ್ನದ ವಿನಿಮಯ ಪ್ರಮಾಣೀಕರಣಗಳ ವಿಶ್ಲೇಷಣೆ ಮಾಡುತ್ತಾರೆ. ಅಲ್ಲಿ ಅವರು, ಬೆಲೆಗಳ ಸ್ಥಿರತೆಗಾಗಿ, ಚಿನ್ನ ಆಧಾರಿತ ಮೌಲ್ಯಮಾಪನ ಪದ್ಧತಿಯನ್ನು ಪ್ರತಿಪಾದಿಸುತ್ತಾರೆ. ಅಸ್ಥಿರ ಹಣವು ಅನಿಯಂತ್ರಿತ ಬೆಲೆಯೇರಿಕೆಗೆ ಕಾರಣವಾಗಿ ಬಡಜನರ ಮೇಲೆ ಅಸಮಪ್ರಮಾಣದಲ್ಲಿ ಹೊರೆಯಾಗುವುದು ಎಂಬುದು ಅವರ ವಾದದ ತಿರುಳಾಗಿತ್ತಷ್ಟೆ. ಅದರಲ್ಲಿ ಖಾಸಗಿ ಏಜೆಂಟರಿಗೆ ಹೋಲಿಸಿದಲ್ಲಿ ಸರ್ಕಾರಿ ಅಧಿಕಾರಿಗಳ ದುಂದು, ಮೌಲ್ಯನಿರ್ಣಯಕ್ಕಾಗಿ ಸ್ವತಂತ್ರ ಮಾರುಕಟ್ಟೆ ವ್ಯವಸ್ಥೆ ಮುಂತಾದ ಮಾತುಗಳು ಪ್ರಾಸಂಗಿಕವಾಗಿ ಬಂದು ಹೋಗುತ್ತವೆ. ಪ್ರಬಂಧದ ಕೇಂದ್ರ ದೃಷ್ಟಿ ತನ್ನ ಕಾಲದ ಪರಿಸ್ಥಿತಿಯ ವಿಶ್ಲೇಷಣೆ ಮಾತ್ರವಾಗಿರುವುದರಿಂದ ಅದರಲ್ಲಿ ಸಮಾಜವಾದದ ಪರವಾದ ಅಥವಾ ವಿರುದ್ಧವಾದ ತಾತ್ವಿಕ ನಿಲುವುಗಳನ್ನು ಹುಡುಕುವುದು ಸೂಕ್ತವಲ್ಲ.

ಕೊಲಂಬಿಯಾದಲ್ಲಿ ಅಂಬೇಡ್ಕರ್ ಅವರ ಕೆಲವು ಪ್ರಾಧ್ಯಾಪಕರು ಫೇಬಿಯನ್ನ(ಹಂತಾನುಹಂತ ಪರಿವರ್ತನಾವಾದಿ)ರಾಗಿದ್ದರು. ಅಂಬೇಡ್ಕರ್ ಅವರ ಮೇಲೆ ಇಂತಹ ಫೇಬಿಯನ್ನರಲ್ಲಿ ಪ್ರಮುಖರಾಗಿದ್ದ ಜಾನ್ ಡ್ಯೂವೆಯವರ ಪ್ರಭಾವ ಯಾವ ಮಟ್ಟದ್ದಾಗಿತ್ತೆಂದರೆ ೧೯೫೨ನೇ ಇಸವಿಯಲ್ಲೂ ಕೂಡ ಅವರು ತಮ್ಮ ಮೇಲೆ ಅವರ ಪ್ರಭಾವ ಇರುವುದನ್ನು ಸ್ಮರಿಸುತ್ತಾರೆ.

ಫೇಬಿಯನ್ ಸೊಸೈಟಿ ಎಂಬುದು ಒಂದು ಬ್ರಿಟಿಷ್ ಸಮಾಜವಾದಿ ಚಳುವಳಿ. ಜನತಾಂತ್ರಿಕ ಸಮಾಜವಾದದ ನೀತಿಗಳನ್ನು ಪ್ರಚುರಪಡಿಸುವುದು ಇವರ ಧ್ಯೇಯವಾಗಿತ್ತು. ಫೇಬಿಯನ್ನರು ಮೂಲದಲ್ಲಿ ಸಮಾಜವಾದಿಗಳಾಗಿದ್ದರೂ ಅವರು ಮಾರ್ಕ್ಸ್‌ನ ಕ್ರಾಂತಿಕಾರಿ ಸಿದ್ಧಾಂತಗಳಲ್ಲಿ ನಂಬಿಕೆ ಹೊಂದಿರಲಿಲ್ಲ. ಅಂಬೇಡ್ಕರ್ ಅವರು ಅಧ್ಯಯನ ಮಾಡಿದ 'ರೂಪಾಯಿಯ ಸಮಸ್ಯೆ' ಎಂಬ ಪ್ರಬಂಧವನ್ನು ಬರೆದ *ದಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್* ಫೇಬಿಯನಿಸಂನ ಭದ್ರ ಕೋಟೆಯಾಗಿತ್ತು ಹಾಗಾಗಿ ಅಂಬೇಡ್ಕರ್ ಅವರು ತಮ್ಮ ಸಂಶೋಧನೆಯನ್ನು ಕೈಗೊಂಡ ಬೌದ್ಧಿಕ ಪರಿಸರವು ಕೂಡ ಒಂದು ಸಮಾಜವಾದಿ ಪರಿಸರವಾಗಿತ್ತು. ಅವರು ತಮ್ಮ 'ಬಹಿಷ್ಕೃತ ಭಾರತ'ದ ಧ್ಯೇಯವಾಕ್ಯವಾಗಿ ಬಳಸಿದ, ಮುಂದಿನ ದಿನಗಳಲ್ಲಿ ತಮ್ಮ ಅನುಯಾಯಿಗಳಿಗೆ ಒಂದು ಮಂತ್ರವೆಂದು ನೀಡಿದ "ವಿದ್ಯಾವಂತನಾಗು, ಜಿಜ್ಞಾಸುವಾಗು, ಸಂಘಟಿತನಾಗು" (Educate, agitate, organize) ಎಂಬ ಘೋಷಣೆಯು ವಾಸ್ತವದಲ್ಲಿ ಒಂದು ಫೇಬಿಯನ್ ಘೋಷಣೆಯೇ. ೧೯೬೦ರ ಹೊತ್ತಿಗೆ ಅಂದರೆ ಅಂಬೇಡ್ಕರ್ ಅವರು ಗತಿಸಿದ ನಾಲ್ಕು ವರ್ಷಗಳ ನಂತರ, ಅಧಿಕೃತವಾಗಿ ಪ್ರಚಾರಕ್ಕೆ ಬಂದ 'ಹಣಕಾಸುವಾದ'ವನ್ನು(monetarism)ಅವರ ಪ್ರಬಂಧದಲ್ಲಿ ಹುಡುಕುವುದು ಒಂದು ಅಸಂಬದ್ಧ ಪ್ರಯತ್ನ.

ಪಕ್ಕಾ ಸಮಾಜವಾದಿ

'ನನ್ನ ಸಾಮಾಜಿಕ ತತ್ವವು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ, ಎಂಬ ಮೂರು ಪದಗಳಲ್ಲಿ ಅಡಕವಾಗಿದೆ. ನನ್ನ ತಾತ್ವಿಕತೆಯು ಧರ್ಮದಲ್ಲಿ ತನ್ನ ಮೂಲಬೇರನ್ನು ಹೊಂದಿದೆಯೇ ಹೊರತು ರಾಜ್ಯ ಶಾಸ್ತ್ರದಲ್ಲಲ್ಲ. ಅವನ್ನು ನನ್ನ ಗುರುವಾದ ಬುದ್ಧನ ಉಪದೇಶಗಳಿಂದ ಪಡೆದಿದ್ದೇನೆ ಎಂದು ಸ್ವತಃ ಅಂಬೇಡ್ಕರ್ ಅವರೇ ಹೇಳಿಕೊಂಡಿರುವುದು ಅವರ ಬಗ್ಗೆ ತುಸುವಾದರೂ ಪರಿಚಯವಿರುವ ಯಾರಿಗಾದರೂ ತಿಳಿದಿರುವ ಸತ್ಯ.

ವಾಸ್ತವದಲ್ಲಿ ಅಂಬೇಡ್ಕರ್ ಅವರ ಧ್ಯೇಯ ವಾಕ್ಯದಲ್ಲಿರುವ ಮೂರು ಪದಗಳು ಮನುಷ್ಯನ ವಿಧಿಯ ಬಗೆಗಿನ ಅವರ ಕಾಣ್ಕೆಯ ತಾತ್ಪರ್ಯ ಮತ್ತು ಮತ್ತು ಬೌದ್ಧ ಧರ್ಮಕ್ಕೆ ಅವರ ಮತಾಂತರದ ಹಿಂದಿನ ಸ್ಫೂರ್ತಿ ಎನ್ನಬಹುದು. ಆದರೆ ಈ ಪದಗಳು ಫ್ರೆಂಚ್ ಕ್ರಾಂತಿಯ ಘೋಷಣೆಯಾಗಿದ್ದುದು ಮತ್ತು ಅವು ಬೌದ್ಧ ಧರ್ಮದ ಯಾವ ಆಕರಗಳಲ್ಲೂ ಕಾಣುವುದಿಲ್ಲ ಎಂಬುದು ಜಗತ್ತಿಗೇ ತಿಳಿದಿರುವ ಸಂಗತಿ. ಫ್ರೆಂಚ್ ಕ್ರಾಂತಿಯಲ್ಲಿ ಈ ಹೇಳಿಕೆ ಒಂದು ಬೂರ್ಷ್ವಾ ಘೋಷಣೆ ಮಾತ್ರವಾಗಿ ಉಳಿದಿದ್ದರೆ ಬೌದ್ಧ ಧರ್ಮದ ತಿರುಳಿನಲ್ಲಿ, ಅದರ ಅಂತಿಮ ಕನಸಾಗಿ ವ್ಯಕ್ತವಾಗಿದೆ ಎಂಬುದೇ ಅಂಬೇಡ್ಕರ್ ಅವರ ಈ ಹೇಳಿಕೆಯ ಅರ್ಥ. ಮಾನವ ಸಮುದಾಯವು ಅವನ್ನು ಪೂರ್ಣವಾಗಿ ಅಭಿವ್ಯಕ್ತಿಸುವಂತಾಗಬೇಕೆಂಬುದು ಅಂಬೇಡ್ಕರ್ ಕನಸು. ಮಾರ್ಕ್ಸ್ ಆದರೂ ಮನುಷ್ಯನ ಅಂತಿಮ ನೆಲೆಯನ್ನು ಕಮ್ಯೂನಿಸಂ ಎಂಬ, ಅಂದರೆ ಪ್ರತಿಯೊಬ್ಬ ಮನುಷ್ಯನೂ ತನಗೆ ಬೇಕಾದಷ್ಟನ್ನು ಮಾತ್ರ ಪಡೆದು ತನಗೆ ಸಾಧ್ಯವಿದ್ದಷ್ಟನ್ನೂ ಸಮುದಾಯಕ್ಕೆ ನೀಡುವ ಮಹಾ ಕನಸಿನ (ಯುಟೋಪಿಯನ್) ಕಲ್ಪನೆಯಲ್ಲೇ ಕಂಡುಕೊಂಡನು.

ಇಬ್ಬರ ಈ ಕಾಣ್ಕೆಗಳು ತಾಳೆಯಾಗುವುದಿಲ್ಲವೇ? ಮಾರ್ಕ್ಸ್‌ವಾದವು ನಮಗೆ ತಿಳಿಸುವಂತೆ ಸಮಾಜವಾದವು ಕಮ್ಯೂನಿಸಂನ ಹಿಂದಿನ ಹಂತ. ಹಾಗಾಗಿ ಅಂಬೇಡ್ಕರ್ ಅವರ ತಾತ್ವಿಕ ನಿಲುವು ಸಮಾಜವಾದವನ್ನು ಮೀರಿ ನಿಲ್ಲುವಂತಹದು ಎಂದು ಗುರುತಿಸಬೇಕಾಗುವುದು.

ಅಂಬೇಡ್ಕರ್ ಅವರಿಗೆ ಕಮ್ಯೂನಿಸಂ ಮತ್ತು ಕಮ್ಯೂನಿಸ್ಟರ ಜೊತೆಗೆ ಇದ್ದ ಭಿನ್ನಾಭಿಪ್ರಾಯದ ಲಾಭ ಪಡೆಯಬಯಸುವ ಎಲ್ಲರೂ ಅವರನ್ನು ಮಾರ್ಕ್ಸ್ ವಿರೋಧಿ, ಮಾರ್ಕ್ಸ್‌ನ ಎಲ್ಲ ನಿಲುವುಗಳ ವಿರೋಧಿ ಎಂಬಂತೆ ಚಿತ್ರಿಸುತ್ತಾರೆ. ಹಾಗೆ ಮಾಡುವ ಮೂಲಕ ಅಂಬೇಡ್ಕರ್ ಅವರನ್ನು ಅವರ ಶತ್ರುಪಾಳೆಯಕ್ಕೆ ದೂಡುವುದಕ್ಕೂ ಹೇಸುವುದಿಲ್ಲ. ಅಂಬೇಡ್ಕರ್ ಅವರನ್ನು ಬಂಡವಾಳಶಾಹಿ ಪರ, ಜಾಗತೀಕರಣದ ಪರ, ಮುಕ್ತಮಾರುಕಟ್ಟೆಯ ಪರ ಎಂದು ಹೇಳುವುದು ಈ ಬಗೆಯ ದುಷ್ಕೃತ್ಯವೇ. ಮೇಲೆ ವಿವರಿಸಿದ ಹಾಗೆ ಪ್ರಭಾವಿಸಲ್ಪಡಲು ಅವಕಾಶವಿರುವ ಒಂದು ಅವಧಿಯಲ್ಲಿ ಅಂಬೇಡ್ಕರ್ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಮತ್ತು 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನಲ್ಲಿ ತಮ್ಮ ಪ್ರಾಧ್ಯಾಪಕ ವೃಂದದ ಪ್ರಭಾವಕ್ಕೆ ಒಳಗಾಗಿದ್ದರು. ಅವರು ಸಮಾಜವಾದವನ್ನು ಬಯಸಿದರೂ, ಕ್ರಾಂತಿಯ ಬಗೆಗೆ ಮಾರ್ಕ್ಸ್‌ನ ನಿಲುವಿನ ಬಗೆಗೆ ತಮ್ಮದೇ ಆದ ಭಿನ್ನ ನಿಲುವನ್ನು ಹೊಂದಿದ್ದರು.

ಅದನ್ನು ಅವರು ತಮ್ಮ ವಿಧಾನಗಳ ಶ್ರೇಷ್ಠತೆಯನ್ನು ನಿರೂಪಿಸಲಷ್ಟೇ ಬಳಸಿದರು. ಹಾಗಾಗಿ ಅವರೊಬ್ಬ ಸಮಾಜವಾದಿ ಎಂಬುದರ ಬಗ್ಗೆ ಸಂಶಯಕ್ಕೆ ಯಾವುದೇ ಎಡೆಯಂತೂ ಇಲ್ಲ. ಕೇವಲ ತಾತ್ವಿಕ ನಿಲುವಿನ ದೃಷ್ಟಿಯಿಂದ ಮಾತ್ರವಲ್ಲದೆ, ಅಚರಣೆಯ ವಿಚಾರದಲ್ಲೂ ಅವರು ತಮ್ಮ ಜೀವನ ಪರ್ಯಂತ ಸಮಾಜವಾದಿ ಉದ್ದೇಶಗಳನ್ನೇ ಹೊಂದಿದ್ದರು. ಅವರ ಪ್ರಥಮ ರಾಜಕೀಯ ಪಕ್ಷವಾದ, ಸ್ವತಂತ್ರ ಕಾರ್ಮಿಕ ಪಕ್ಷವನ್ನು (ಇಂಡಿಪೆಂಡೆಟ್ ಲೇಬರ್ ಪಾರ್ಟಿ: ಐ.ಎಲ್.ಪಿ.) ಫೇಬಿಯನ್ ರಾಜಕೀಯ ಗುಂಪಾದ ಇಂಗ್ಲೆಂಡ್‌ನ ಲೇಬರ್ ಪಕ್ಷದ ಮಾದರಿಯಲ್ಲೇ ರೂಪುಗೊಳಿಸಲಾಗಿತ್ತು. ಅದಕ್ಕೂ ಮೊದಲೇ ಅವರು ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿಯನ್ನು ಅಸ್ಪೃಶ್ಯರ ಎರಡು ಶತ್ರುಗಳೆಂದು ಗುರುತಿಸಿದ್ದರು. ಐ.ಎಲ್.ಪಿ.ಯು ಸಮಾಜವಾದದಿಂದ ಸ್ಫೂರ್ತಿಗೊಂಡು ಕೆಂಪು ಬಾವುಟವನ್ನು ಹೊಂದಿದ್ದ ಒಂದು ಕಾರ್ಮಿಕ ಪಕ್ಷ ಎಂಬುದು ನಿರಾಕರಿಸಲಾಗದ ಸತ್ಯವಂತೂ ಹೌದು. ವರ್ಗ ಮತ್ತು ಜಾತಿಗಳು ಹೇಗೆ ಮಿಳಿತವಾಗಿ ಒಂದು ಹೋರಾಟವನ್ನು ರೂಪಿಸಬಹುದು ಎಂಬುದನ್ನು ಬೀದಿಗಳಲ್ಲಿ ತೋರಿಸಿಕೊಟ್ಟಿದ್ದು ಐ.ಎಲ್.ಪಿ.

ತನ್ನ ಯಶಸ್ಸಿನ ಹೊರತಾಗಿಯೂ, ಆ ಕಾಲದ ರಾಜಕಾರಣವು ಮತೀಯ ತಿರುವುಗಳನ್ನು ಪಡೆದುಕೊಳ್ಳುತ್ತಿದ್ದುದರಿಂದ ಐ.ಎಲ್.ಪಿ.ಯ ಬಹಿರಂಗ ಎಡಪಂಥೀಯ ರಾಜಕಾರಣವನ್ನು ಅಂಬೇಡ್ಕರ್ ತ್ಯಜಿಸಬೇಕಾಯಿತು. ೧೯೪೨ರ ಫೆಬ್ರವರಿಯಲ್ಲಿ ಪ್ರಕಟವಾದ ಕ್ರಿಪ್ಸ್ ಮಿಷನ್ ವರದಿಯು ಇತರೆ ಅಲ್ಪ ಸಂಖ್ಯಾತರ ಬಹುಪಾಲು ಬೇಡಿಕೆಗಳನ್ನು ಒಪ್ಪಿಕೊಂಡರೂ, ಅಸ್ಪೃಶ್ಯರ ಬೇಡಿಕೆಗಳನ್ನು ಮಾತ್ರ ನಿರ್ಲಕ್ಷಿಸಿದ್ದುದರಿಂದ ಅಂಬೇಡ್ಕರ್ ಕ್ಷಿಪ್ರ ಕಾರ್ಯಾಚರಣೆಯೊಂದಕ್ಕೆ ಸಿದ್ಧವಾಗಬೇಕಾಯಿತು. ತಮ್ಮ ಕಾರ್ಯತಂತ್ರವನ್ನು ಬದಲಿಸಿ, ಐ.ಎಲ್.ಪಿ.ಯನ್ನು ಬರಕಾಸ್ತು ಮಾಡುವುದು ಮತ್ತು ಮೇಲ್ನೋಟಕ್ಕೆ ಜಾತಿ ಅಧಾರಿತವೆಂದು ಕಾಣುವ ಪರಿಶಿಷ್ಟ ಜಾತಿಗಳ ಒಕ್ಕೂಟ(ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ : ಎಸ್.ಸಿ..ಎಫ್.)ವನ್ನು ೧೯೪೨ರ ಜೂನ್‌ನಲ್ಲಿ ಸ್ಥಾಪಿಸುವುದು ಅವರಿಗೆ ಅನಿವಾರ್ಯವಾಯಿತು. ಅದೇ ಕಾಲಕ್ಕೆ ವೈಸ್‌ರಾಯ್ ಅವರ ಕಾರ್ಯಕಾರಿ ಮಂಡಳಿಗೆ ಅವರ ಸೇರ್ಪಡೆಯೂ ನಡೆಯಿತು. ಮತೀಯ ಭಾವನೆ ತುಂಬಿದ ಅಂದಿನ ಸಮಾಜದಲ್ಲಿ ಅಸ್ಪೃಶ್ಯರ ವಿಮೋಚನೆಗೆ ಅವರು ಪ್ರಯತ್ನಿಸಿದರು. ಸಂವಿಧಾನ ಸಮಿತಿಗೆ ಎಸ್.ಸಿ.ಎಫ್. ಪರವಾಗಿ ಒಂದು ವಿಜ್ಞಾಪನಪತ್ರವನ್ನು ಅವರು ಸಿದ್ದಪಡಿಸಿದರು. ನಂತರದಲ್ಲಿ 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಎಂಬ ತಮ್ಮದೆ ವ್ಯಾಖ್ಯಾನದಲ್ಲಿ ಪ್ರಕಟವಾದ ಈ ದಾಖಲೆಯು ವಸಾಹತೋತ್ತರ ಭಾರತದಲ್ಲಿ 'ಪ್ರಭುತ್ವ ಸಮಾಜವಾಜ'(State Socialism)ವನ್ನು ಪ್ರತಿಪಾದಿಸಿತು.

ಸಂವಿಧಾನ-ಸಮಾಜವಾದ-ಅಂಬೇಡ್ಕರ್

ಅಂಬೇಡ್ಕರ್ ಅವರನ್ನು ಒಬ್ಬ ಮುಕ್ತಮಾರುಕಟ್ಟೆ ಅರ್ಥಶಾಸ್ತ್ರಜ್ಞ ಎಂದು ಕರೆದು ಅವರ ಹೆಸರು ಕೆಡಿಸಿದ 'ವಿದ್ವಾಂಸ'ರು ಅವರು ಹೇಗೆ ಸಮಾಜವಾದಕ್ಕೆ ವಿರೋಧವಾಗಿದ್ದರು ಎಂಬ ತಮ್ಮ ವಾದಕ್ಕೆ ಆಧಾರವಾಗಿ ಅವರು ಸಂವಿಧಾನದಲ್ಲಿ ಸಮಾಜವಾದ ಎಂಬ ಪದವನ್ನು ಬಳಸುವುದಕ್ಕೆ ವಿರೋಧವಾಗಿದ್ದರು ಎಂದು ಪ್ರತಿಪಾದಿಸುತ್ತಾರೆ. ಇವರು ಸಂವಿಧಾನವೆಂಬುದು ಅಂಬೇಡ್ಕರ್ ಅವರು ಬರೆದ ಪುಸ್ತಕವಲ್ಲ; ಅದು ಸಂವಿಧಾನ ಸಮಿತಿಯ ಸರ್ವಸಮ್ಮತಿಯ ಒಂದು ದಾಖಲೆ ಎಂಬುದನ್ನು ಅರಿಯಬೇಕಾಗಿತ್ತು. ಆ ಸಮ್ಮತಿಯನ್ನು ಉಂಟುಮಾಡುವುದು ಅವರ ಜವಾಬ್ದಾರಿಯಾಗಿತ್ತು. ಸಂವಿಧಾನ ಸಮಿತಿಯಲ್ಲಿನ ಅವರ ಎಲ್ಲಾ ವಾದಗಳನ್ನೂ ಈ ಚೌಕಟ್ಟಿನೊಳಗೇ ಪರಿಗಣಿಸಬೇಕು. ಸಮಾಜವಾದ ಎಂಬ ಪದವನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡುವ ವಿಚಾರದಲ್ಲಿ ಅವರ ನೇರವಾದ ಹೇಳಿಕೆಯೊಂದಿದೆ, ಅದು ಈ ಬಗೆಯ ಸಂಶಯಗಳನ್ನೆಲ್ಲಾ ತೊಡೆಯುವಂತಹದು:

'ರಾಜ್ಯದ ನೀತಿಯು ಏನಾಗಿರಬೇಕು. ಸಮಾಜವನ್ನು ಯಾವ ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ರೂಪಿಸಬೇಕು ಎಂಬ ವಿಚಾರಗಳು ಕಾಲ ಮತ್ತು ಪರಿಸ್ಥಿತಿಗನುಗುಣವಾಗಿ ಜನರಿಂದಲೇ ನಿರ್ಧರಿಸಲ್ಪಡಬೇಕು. ಅದನ್ನು ಸಂವಿಧಾನದಲ್ಲಿ ಬರೆದಿಡಲಾಗದು. ಏಕೆಂದರೆ ಅದು ಪ್ರಜಾಪ್ರಭುತ್ವವನ್ನೇ ಸಂಪೂರ್ಣವಾಗಿ ನಾಶಮಾಡಿದಂತೆ. ರಾಜ್ಯದ ಸಾಮಾಜಿಕ ವ್ಯವಸ್ಥೆ ಒಂದು ನಿರ್ದಿಷ್ಟ ರೂಪದಲ್ಲಿರಬೇಕು ಎಂಬುದನ್ನು ನೀವು ಸಂವಿಧಾನದಲ್ಲೇ ನಮೂದಿಸಿದರೆ ಆಗ ನನ್ನ ಅಭಿಪ್ರಾಯದಲ್ಲಿ, ತಾವು ಬದುಕಬಯಸುವ ಸಾಮಾಜಿಕ ವ್ಯವಸ್ಥೆ ಹೇಗಿರಬೇಕು ಎಂಬುದನ್ನು ನಿರ್ಧರಿಸುವ ಜನರ ಸ್ವಾತಂತ್ರ್ಯವನ್ನೇ ನೀವು ಕಿತ್ತುಕೊಂಡಂತೆ. ಇಂದು ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಗಿಂತ ಸಮಾಜವಾದಿ ಸಾಮಾಜಿಕ ವ್ಯವಸ್ಥೆಯೇ ಉತ್ತಮ ಎಂದು ಜನ ನಿರ್ಧರಿಸುವುದು ಖಂಡಿತ ಸಾಧ್ಯ. ಅದರೆ ಇಂದಿನ ಅಥವಾ ನಾಳಿನ ಸಮಾಜವಾದಿ ವ್ಯವಸ್ಥೆಗಿಂತಲೂ ಉತ್ತಮವಾದ ಬೇರೊಂದು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದೂ ಸಹ ಯೋಚಿಸಬಲ್ಲ ಜನರಿಗೆ ಖಂಡಿತಾ ಸಾಧ್ಯ. ಆದ್ದರಿಂದ ತಾವು ಯಾವ ರೀತಿಯ ವ್ಯವಸ್ಥೆಯಲ್ಲಿ ಬದುಕಬೇಕೆಂಬ ನಿರ್ಧಾರವನ್ನು ಜನರಿಗೇ ಬಿಡದೆ ಅವರು ಒಂದು ನಿರ್ದಿಷ್ಟ ರೀತಿಯ ವ್ಯವಸ್ಥೆಯಲ್ಲಿ ಬದುಕಬೇಕೆಂದು ಸಂವಿಧಾನವು ಏಕೆ ನಿರ್ಬಂಧಿಸಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. [*ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು. ಸಂ ೧೩ ಪುಟ೩೨೬*]

ಅಂಬೇಡ್ಕರ್ ಅವರ ಕೊನೆಯ ಕೆಲವೇ ಕೆಲವು ಸಾರ್ವಜನಿಕ ಭಾಷಣಗಳಲ್ಲೊಂದಾದ ಕಠ್ಮಂಡು ಭಾಷಣದಲ್ಲಿ ಅಂಬೇಡ್ಕರ್ ಅವರು ಮಾರ್ಕ್ಸ್‌ವಾದವನ್ನು ಬೌದ್ಧ ಧರ್ಮದೊಂದಿಗೆ ಹೋಲಿಸುತ್ತಾರೆ. ಬುದ್ಧನ ವಿಧಿಗಳು ಮಾರ್ಕ್ಸ್‌ನದ್ದಕ್ಕಿಂತ ಉತ್ತಮ; ಏಕೆಂದರೆ ಅಲ್ಲಿ ಪ್ರಜಾಪ್ರಭುತ್ವವಿದೆ, ಅಹಿಂಸೆ ಇದೆ ಎನ್ನುವರಾದರೂ ಅಂತಿಮವಾಗಿ ಈ ಎರಡರ ಗುರಿಯೂ ಒಂದೇ ಆಗಿರುವುದರಿಂದ ಮಾರ್ಕ್ಸ್‌ವಾದ ಎರಡನೇ ಅತ್ಯುತ್ತಮ ಮಾರ್ಗವೆಂದು ಮಾನ್ಯ ಮಾಡುತ್ತಾರೆ. ಎಷ್ಟಾದರೂ, ಅವರ ಪ್ರಕಾರ ದಮನ ಮತ್ತು ಶೋಷಣೆಯಿಲ್ಲದ ಸಮಾಜ ಸಾಧ್ಯವಾಗುವುದು ಒಂದು ಸಮಾಜವಾದಿ ಸಮಾಜದಲ್ಲಿ ಮಾತ್ರ.

ಹಾಗೆ ನೋಡಿದರೆ ಮಾರ್ಕ್ಸ್ ಮತ್ತು ಅಂಬೇಡ್ಕರ್ ಇಬ್ಬರೂ ಸಮಾಜವಾದದ ಆಚೆಗೂ ಹೋಗಿ ಒಂದು ಪರಿಪೂರ್ಣ ಸಮಾಜವನ್ನು ಹುಡುಕಿದರು. ಕೇವಲ ಮಾನವನ ದುರಾಸೆಯಿಂದ ಪ್ರೇರೇಪಿಸಲ್ಪಟ್ಟ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಸಾಧ್ಯವೇ ಇಲ್ಲ. ಬಂಡವಾಳಶಾಹಿಯಾಗಲಿ ಅಥವಾ ಮುಕ್ತ ಮಾರುಕಟ್ಟೆಯನ್ನು ಪ್ರತಿಪಾದಿಸುವ ಅದರ ನವ ಉದಾರವಾದವಾಗಲಿ ತೋರಿಕೆಗಾದರೂ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದಿಲ್ಲ. ಪ್ರತಿಯಾಗಿ ಸಾಮಾಜಿಕ ಶ್ರೇಣೀಕರಣ ರೂಪದ ಅಸಮಾನತೆಯು ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಕೆಲಸ ಮಾಡುತ್ತದೆ ಎನ್ನುವ ಮೂಲಕ ಅದು ಅನ್ಯಾಯವನ್ನು ಸಮರ್ಥಿಸುತ್ತದೆ. ಅಂಬೇಡ್ಕರ್ ಇಂತಹ ಬಂಡವಾಳಶಾಹಿ ಅಥವಾ ನವ ಉದಾರವಾದವನ್ನು ಬೆಂಬಲಿಸಿದರು ಎಂದು ಹೇಳುವುದಕ್ಕಿಂತ ಹೆಚ್ಚಿನ ಭಂಡವಾದ ಬೇರೊಂದಿರಲಾರದು. ಜಾತ್ಯಾಧಾರಿತ ಊಳಿಗಮಾನ್ಯತೆಗಿಂತ ಬಂಡವಾಳಶಾಹಿಯು ಉತ್ತಮ; ಏಕೆಂದರೆ ಅದು ಮಾರ್ಕ್ಸ್ ಕೂಡ ಶ್ರಮಿಕರನ್ನು ಜೀತದಿಂದ ಬಿಡುಗಡೆ ಮಾಡಿ ಭಾರತದಲ್ಲಿ ಬಂಡವಾಳಶಾಹಿಯ ಆಗಮನವು ಜಾತಿಪದ್ಧತಿಯನ್ನು ನಾಶಪಡಿಸುವುದು ಎಂದು ಭವಿಷ್ಯ ನುಡಿಯುವಂತೆ ಪ್ರೇರೇಪಿಸಿದ ಮಾತಿಗೂ ಆಧಾರವಿಲ್ಲ. ಏಕೆಂದರೆ ಅಂಬೇಡ್ಕರ್, ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿಗಳು ಸಹವರ್ತಿಗಳು ಮಾತ್ರವಲ್ಲ, ಅವು ಪರಸ್ಪರ ಪೂರಕವಾದ ಸಹಜೀವಿಗಳು ಎಂಬುದನ್ನು ಅರಿತಿದ್ದರು. ತಾವೊಬ್ಬ ಸಮಾಜವಾದಿ ಎಂಬುದನ್ನು ಅಂಬೇಡ್ಕರ್ ಹಲವು ಸಲ ಸ್ಪಷ್ಟವಾಗಿ ಹೇಳಿದ್ದಾರೆ.

ಜಾಗತೀಕರಣ ಮತ್ತು ಅಂಬೇಡ್ಕರ್

ಮೊದಲನೆಯದಾಗಿ ಜಾಗತಿಕ ಬಂಡವಾಳಶಾಹಿಯ ತೀವ್ರರೂಪವಾದ ಜಾಗತೀಕರಣಕ್ಕೂ, ಅಂಬೇಡ್ಕರ್ ಅವರಿಗೂ ಸಂಬಂಧ ಕಲ್ಪಿಸಿ ಮಾತನಾಡುವುದು ಕೇವಲ ಊಹಾತ್ಮಕ. ಜಾಗತೀಕರಣಕ್ಕೆ ತಮ್ಮ ಬೆಂಬಲವನ್ನು ತಾರ್ಕಿಕವಾಗಿ ಸಮರ್ಥಿಸಿಕೊಳ್ಳಲಾರದ ಜನ ಅಂಬೇಡ್ಕರ್ ಅವರು ಬದುಕಿದ್ದರೆ ಅವರು ಜಾಗತೀಕರಣವನ್ನು ಬೆಂಬಲಿಸುತ್ತಿದ್ದರು ಎನ್ನುತ್ತಾ ಅವರ ಹೆಸರನ್ನು ತಮ್ಮ ಈ ಅಸಾಮರ್ಥ್ಯವನ್ನು ಮರೆಮಾಚಿಕೊಳ್ಳಲು ಬಳಸಿಕೊಳ್ಳುತ್ತಿದ್ದಾರೆ. ಜಾಗತೀಕರಣ ಎಂದರೆ ಏನು ಎಂಬುದನ್ನು ಅರ್ಥ ಮಾಡಿಕೊಂಡರೆ, ಜಾಗತೀಕರಣಕ್ಕೆ ಸಂಬಂಧಿಸಿದಂತೆ ಅಂಬೇಡ್ಕರ್ ಅವರ ನಿಲುವು ಏನಾಗಿರುತ್ತಿತ್ತು ಎಂಬುದನ್ನು ನಾವು ನಿರ್ಧರಿಸಬಹುದು.

ಜಾಗತೀಕರಣವೆಂಬುದು ಕಮ್ಯೂನಿಸ್ಟರಿಂದ ಮತ್ತು ಆರ್ಥಿಕ ಸಂಕಷ್ಟದ ಸಂದರ್ಭಗಳಲ್ಲಿ ಜನರ ಪರವಾಗಿ ಪ್ರಭುತ್ವ ಮಧ್ಯಪ್ರವೇಶಿಸಬೇಕೆಂದು ಪ್ರತಿಪಾದಿಸುವ ಸೌಮ್ಯ ಸಮಾಜವಾದಿಗಳಿಂದಾಗಿ ಶತಮಾನಗಳ ಕಾಲ ಅಂಚಿಗೆ ತಳ್ಳಲ್ಪಟ್ಟಿದ್ದಕ್ಕೆ ಪ್ರತಿಕಾರಾತ್ಮಕವಾಗಿ ಪುನರುತ್ಥಾನಗೊಂಡಿರುವ ಉದಾರವಾದದ ತೀವ್ರತರ ಆವೃತ್ತಿ. ಅದು ಮೂಲಭೂತವಾಗಿ ಅತಿಯಾದ ವ್ಯಕ್ತಿವಾದವನ್ನು ಅವಲಂಬಿಸಿದೆ. ಸ್ಪರ್ಧೆಯೇ ಅಭಿವೃದ್ಧಿಯ ಚಾಲಕ ಶಕ್ತಿ, ಮುಕ್ತಮಾರುಕಟ್ಟೆಯೇ ಇದರ ಮಾದರಿ. ಪ್ರತಿಯೊಬ್ಬ ವ್ಯಕ್ತಿಯನ್ನೂ ಉಳಿದ ಜಗತ್ತಿನೊಂದಿಗೆ ಸ್ಪರ್ಧೆಗೆ ದೂಡಿ, ಅಸಮಾನತೆ, ಶೋಷಣೆ ಮತ್ತು ಸಾಮಾಜಿಕ ಅನ್ಯಾಯಗಳಿಗೆ ಡಾರ್ವಿನ್‌ವಾದಿ ಸಮಜಾಯಿಷಿಯನ್ನು –ಸಮರ್ಥರು ಉಳಿಯುತ್ತಾರೆ–ಅದು ನೀಡುತ್ತದೆ. ಆರ್ಥಿಕ ನೀತಿಯು ಒಂದು ಪ್ಯಾಕೇಜ್ ಆಗಿ ರೂಪಾಂತರವಾದಾಗ ಅದು ಬಡವರ ಮತ್ತು ದಮನಿತರ ಬಗ್ಗೆ ಯಾವುದೇ ಕಾಳಜಿ ಇಲ್ಲದೆ ಖಾಸಗೀಕರಣ, ನಿಯಂತ್ರಣವಿಲ್ಲದ ಉದಾರೀಕರಣ ಎಂದು ಕರೆಸಿಕೊಳ್ಳುತ್ತದೆ. ಜಾಗತಿಕ ಬಂಡವಾಳದ ಈ ಕಾರ್ಯತಂತ್ರವು ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳಿಂದ ಸಾಧ್ಯವಾಗಿಸಲ್ಪಟ್ಟದ್ದು, ಸೋವಿಯತ್ ರಷ್ಯಾದ ಅಳಿವಿನಿಂದ ಇದು ತನ್ನ ಬಲವನ್ನು ಹೆಚ್ಚಿಸಿಕೊಂಡಿತು. ರಾಜ್ಯವು ಈ ದೋಚುವ ಪ್ರಕ್ರಿಯೆಗೆ ಸಹಾಯಕವಾಗಿ ಜಾಗತಿಕ ಬಂಡವಾಳದ ಕ್ರೋಢೀಕರಣಕ್ಕೆ ಕಾರಣವಾಗುತ್ತಿದೆ. ಶಿಕ್ಷಣ, ಅರೋಗ್ಯ ಮುಂತಾದ ಸಾಮಾಜಿಕ ಸೇವೆಗಳನ್ನು ಒದಗಿಸುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ.

ಜಾಗತೀಕರಣ ಮತ್ತು ದಲಿತರು

ಇದು ಜಾಗತೀಕರಣದ ಲಕ್ಷಣ ಎಂದಾದರೆ, ಮಾನವ ಭವಿಷ್ಯವನ್ನು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳಂತಹ ಆದರ್ಶಗಳಲ್ಲಿ ಕಾಣಬಯಸಿದ ಅಂಬೇಡ್ಕರ್ ಇಂತಹ ಜಾಗತೀಕರಣವನ್ನು ಬೆಂಬಲಿಸುವುದು ಸಾಧ್ಯವಿತ್ತೆ? ಒಂದು ದೇಶವು ಅನುಸರಿಸುವ ಮುಕ್ತ ಮಾರುಕಟ್ಟೆ ನೀತಿಯ ಪ್ರಮಾಣಕ್ಕನುಸಾರವಾಗಿ ಜನರ ನಡುವೆ ಆರ್ಥಿಕ ಅಸಮಾನತೆ ಹಿಂದೆಂದೂ ಕಾಣದ ಮಟ್ಟದಲ್ಲಿ ಹೆಚ್ಚಿದೆ. ಉದ್ಯೋಗ, ಪ್ರಜಾಪ್ರಭುತ್ವಾತ್ಮಕ ಅವಕಾಶ, ಪರಿಸರ ಇತ್ಯಾದಿಗಳು ನಷ್ಟವಾಗುತ್ತಿವೆ ಎಂಬುದು ಕಣ್ಣಿಗೆ ಕಂಡರೂ, ಅಸ್ಮಿತೆಯ ಗೀಳಿಗೆ ಸಿಲುಕಿರುವ ದಲಿತರು ಇದನ್ನು ಕಾಣಲಾರರು, ಜಾತಿಯೆಂಬ ವಿಶಿಷ್ಟ ಸಮಸ್ಯೆಯ ಬಲಿಪಶುಗಳು ತಾವು, ಎಂದುಕೊಳ್ಳುವ ಅವರು ಇದಕ್ಕೆ ವಿರುದ್ಧವಾದ ಸಾಕ್ಷ್ಯಗಳನ್ನು ಗಮನಿಸಲಾರರು. ದಲಿತರು ತಮ್ಮ ಧೋರಣೆಯಲ್ಲಿ ಇಷ್ಟೊಂದು ಪಂಗಡವಾದಿಗಳಾಗಿರುವುದು ವಿಷಾದನೀಯ.

ನೀವು ಹೆಚ್ಚು ದುರ್ಬಲರಾಗಿದ್ದಷ್ಟೂ ಬಾಧೆ ಹೆಚ್ಚುತ್ತಾ ಹೋಗುವುದು ಜಾಗತೀಕರಣದ ಗುಣವಾಗಿದೆ. ದಲಿತರು ಇದರಿಂದ ಹೆಚ್ಚು ಬಾಧಿಸಲ್ಪಟ್ಟಿರುವುದು ಅರಿವಿಗೆ ಬಂದಿದ್ದರೂ, ಅದು ಅವರಿಗೆ ಒಂದು ಮೇಲ್ಮೈ ಅನುಭವವಾಗಿ ಮಾತ್ರ ಕಂಡಿರುವಂತಿದೆ. ಆದ್ದರಿಂದ ನಾನು ವ್ಯಕ್ತಿಗತ, ಸಮಾಜೋ-ಆರ್ಥಿಕ, ಸಮಾಜೋ-ರಾಜಕೀಯ, ಸಮಾಜೋ-ಸಾಂಸ್ಕೃತಿಕ ವಲಯಗಳಲ್ಲಿನ ಸಬಲೀಕರಣಗಳ ಸೂಚ್ಯಂಕಗಳ ನೆಲೆಯಲ್ಲಿ ಇದನ್ನು ಪರಿಶೀಲಿಸಬಯಸುತ್ತೇನೆ. ಸಾರ್ವಜನಿಕ ವ್ಯವಸ್ಥೆಯಾಗಿದ್ದ, ಶಿಕ್ಷಣ, ಆರೋಗ್ಯಗಳಂತಹ ಕ್ಷೇತ್ರಗಳಿಂದ ಪ್ರಭುತ್ವವು ಹಿಂದೆ ಸರಿದು ಅವನ್ನು ಖಾಸಗಿಯವರ ಕೈಗೊಪ್ಪಿಸುವುದರಿಂದ ದಲಿತರ ಸಶಕ್ತೀಕರಣಕ್ಕೆ ಬಹುಮುಖ್ಯವಾದ ಶಿಕ್ಷಣವು ಶಿಕ್ಷಣ ಸಂಸ್ಥೆಗಳ ಗುಣಮಟ್ಟದ ಶ್ರೇಣೀಕರಣವು ಹಿಂದಿನ ಜಾತಿಶ್ರೇಣೀಕರಣಕ್ಕೆ ಸಂವಾದಿಯಾಗಿ ಅವರಿಗೆ ದುರ್ಲಭವಾಗುತ್ತಿದೆ. ಆರೋಗ್ಯಸೇವೆಗಳಂತೂ ಸಾರ್ವಜನಿಕ ಕ್ಷೇತ್ರದಿಂದ ಈಗಾಗಲೇ ಮಾಯವಾಗಿ ಹೋಗಿದೆ. ಸಮಾಜೋ-ಆರ್ಥಿಕ ಸಬಲೀಕರಣಕ್ಕೆ ಮುಖ್ಯವಾದ ಭೂಸುಧಾರಣೆಯ ವಿಚಾರಗಳು ಸಾರ್ವಜನಿಕ ಚರ್ಚೆಯ ಕ್ಷೇತ್ರದಿಂದ ಮಾಯವಾಗಿ ಕಾರ್ಪೋರೇಟ್ ಭೂಕಬಳಿಕೆಗೆ ದಾರಿಮಾಡಿಕೊಟ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿ ದಲಿತರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಮೀಸಲಾತಿಯ ಕಾರಣದಿಂದ ದಲಿತರಿಗೆ ದೊರೆಯುತ್ತಿದ್ದ ಸಾರ್ವಜನಿಕ ಕ್ಷೇತ್ರದ ಉದ್ಯೋಗಗಳು ಕಣ್ಮರೆಯಾಗುತ್ತಾ, ಮೀಸಲಾತಿಯೇ ನಿಷ್ಫಲವಾಗುವ ಕಾಲ ದೂರವಿಲ್ಲದಾಗಿದೆ. ಪ್ರಜಾಪ್ರಭುತ್ವೀಕರಣದ ವಿಚಾರವಾದರೂ ಅಷ್ಟೆ, ಅದು ಚುನಾವಣೆಗಳ ರೂಪದಲ್ಲಿ ಕೇವಲ ಸಾಂಕೇತಿಕ ಮಟ್ಟದಲ್ಲಿ ಉಳಿದಿದೆ. ಜನರಿಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶಗಳು ಕ್ಷೀಣಿಸುತ್ತಿವೆ. ವ್ಯವಸ್ಥೆಯ ವಿರುದ್ಧದ ಸಣ್ಣ ಭಿನ್ನಾಭಿಪ್ರಾಯಗಳಿಗೂ ನಕ್ಸಲ್, ಮಾವೋವಾದಗಳ ಹಣೆಪಟ್ಟಿ ಕಟ್ಟಿ ದಲಿತ ಯುವಕರನ್ನು ಹಣಿಯಲಾಗುತ್ತಿದೆ.

ಹಳೆಯ ಪ್ರವೃತ್ತಿಗಳನ್ನು ದಾಟುವ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯಾದ ಆಧುನಿಕತೆಯ ಮೇಲೆ ಜಾಗತೀಕರಣದ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ.ಜಾಗತೀಕರಣವನ್ನು ವಿಶ್ವಾತ್ಮಕ ಸಾಂಸ್ಕೃತಿಕತೆ ಎಂದು ಗುರುತಿಸುವ ಪ್ರಬಲ ವಾದವೀಗ ಕೇಳಿಬರುತ್ತಿದೆ. ಆದರೆ ಇದು ನಿಜವಲ್ಲ. ನಿಜವಾಗಿ ಈಗ ನಡೆದಿರುವುದು ಹೈಬ್ರಿಡೀಕರಣ, ಗ್ಲೋಕಲೀಕರಣ ಜಾಗತೀಕರಣ+ಸ್ಥಳೀಕರಣ). ಅಂದರೆ ಜಾಗತೀಕರಣವು ಸ್ಥಳೀಯ ಪ್ರತಿಷ್ಠಿತವರ್ಗವು ಮಾನ್ಯಮಾಡುವ ಸಂಗತಿಗಳನ್ನು ಪ್ರಮುಖ ಜಾಗತಿಕ ಸಾಂಸ್ಕೃತಿಕ ಸಂಪನ್ಮೂಲಗಳ ಜೊತೆ ಅನುಸಂಧಾನ ಮಾಡಿಬಿಡುವುದೇ ಆಗಿದೆ. ಹಾಗಾಗಿ ಜಾತಿಗಳನ್ನೂ ಒಳಗೊಂಡಂತೆ ಎಲ್ಲ ಹಿಂದೂ ಸಂಪ್ರದಾಯ ಆಚರಣೆಗಳು- ೧೯೮೦ರವರೆಗೂ ಯಾವ ಆಚರಣೆಗಳ ಬಗ್ಗೆ ಅಳುಕಿನಿಂದ ಮಾತನಾಡಲಾಗುತ್ತಿತ್ತೊ ಅವೆಲ್ಲವೂ- ಈಗ ಪ್ರತೀಕಾರದೊಂದಿಗೆ ಮತ್ತೆ ತಲೆಎತ್ತಿವೆ. ಆಧುನಿಕ ನವಉದಾರವಾದೀ ತಲೆಮಾರುಗಳು ಅವುಗಳ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತವೆ. ಜಾತಿ ದೌರ್ಜನ್ಯಗಳನ್ನು ಜಾತೀಯತೆಯ ಸೂಚನೆಯೆಂದು ಪರಿಗಣಿಸುವುದಾದರೆ ಜಾಗತೀಕರಣದೊಂದಿಗೆ ಜಾತೀಯತೆಯೂ ಖಂಡಿತ ಹೆಚ್ಚುತ್ತಿದೆ.

ಜಾಗತೀಕರಣವು ರಾಚನಿಕವಾಗಿ ಅಲ್ಲಿ ಇಲ್ಲಿ ಒಬ್ಬಿಬ್ಬರಿಗೆ ಅನುಕೂಲ ಮಾಡಿ ಸ್ಪರ್ಧಾತ್ಮಕ ಶಕ್ತಿ, ಯೋಗ್ಯತೆಯಿದ್ದವರೆಲ್ಲರೂ ಮುಂದೆ ಬರಬಹುದೆಂಬ ಭ್ರಮೆಯನ್ನು ಸೃಷ್ಟಿ ಮಾಡುವ ರೀತಿಯಲ್ಲಿ ರೂಪುಗೊಂಡಿರುತ್ತದೆ. ದಲಿತ ಬಂಡವಾಳಶಾಹಿಯ ಪ್ರತಿಪಾದಕರಿಗೆ ಇದರ ಅರಿವಿಲ್ಲ.

ಉಪಸಂಹಾರ


ದಲಿತಮಾನಸದಲ್ಲಿ ಅಂಬೇಡ್ಕರ್ ಅವರಿಗೆ ವಿಶಿಷ್ಟ ಸ್ಥಾನವಿದೆ. ದಲಿತರ ಆದರ್ಶ, ತಾತ್ವಿಕತೆ, ಆಶಯಗಳೆಲ್ಲದರ ಪ್ರತಿನಿಧಿ ಅವರು. ಅಂಬೇಡ್ಕರ್ ಅವರಿಗೆ ಹೊಂದಿಕೆಯಾಗದ ಯಾವುದೂ ದಲಿತರಿಗೆ ಸಹ್ಯವಾಗದು. ಅದರೆ ಈ ಭಾವನೆಯನ್ನು ಸ್ಥಾಪಿತ ಹಿತಾಸಕ್ತಿಗಳು ವಿಕೃತಗೊಳಿಸಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ. ಜಾಗತೀಕರಣವು ಸುಮಾರು ಮೂರು ದಶಕಗಳಿಂದ ಭಾರತದಲ್ಲಿ ಅನುಷ್ಠಾನಗೊಳ್ಳುತ್ತಿದೆ, ದಲಿತರು ಅದರ ಪರಿಣಾಮಗಳಿಂದ ನೊಂದಿದ್ದಾರೆ. ಆದರೂ ಅದರ ಬಗ್ಗೆ ದಲಿತರಲ್ಲಿ ಇರಬೇಕಾದ ಅಸಹ್ಯವಿಲ್ಲ. ಏಕೆಂದರೆ ಅವರ ದೃಷ್ಟಿಯಲ್ಲಿ ಅಂಬೇಡ್ಕರ್ ಅವರು ಇದ್ದಿದ್ದರೆ ಜಾಗತೀಕರಣವನ್ನು ಅವರು ಬೆಂಬಲಿಸುತ್ತಿದ್ದರು ಎಂಬ ಕಲ್ಪನೆಯನ್ನು ಬಿತ್ತಲಾಗಿದೆ. ಆದರೆ ಒಬ್ಬ ತೀವ್ರವಾದಿಯಾಗಿದ್ದ ಅಂಬೇಡ್ಕರ್ ಸದಾಕಾಲ ಸತ್ಯವನ್ನು, ಸುಸ್ಥಿರತೆಯನ್ನು ಹುಡುಕುತ್ತಿದ್ದರು ಅವರೊಬ್ಬ ಸಮಾಜವಾದಿಯಾಗಿದ್ದರು. ದಲಿತರಿಗೆ ಇದು ಅರ್ಥವಾದರೆ ಅವರು ಸ್ಥಾಪಿತ ಹಿತಾಸಕ್ತಿಗಳು ಉಂಟುಮಾಡಿರುವ ಪ್ರತಿಗಾಮೀ ಹುದುಲಿನಿಂದ ಅವರನ್ನು ಹೊರತರುತ್ತಿದ್ದರು

ಜಾಗತೀಕರಣವೆಂಬುದು ಜಾಗತಿಕ ಬಂಡವಾಳಕ್ಕೆ ಸಾಮ್ರಾಜ್ಯಶಾಹಿಗಳಿಂದ ಪ್ರದಾನವಾಗಿರುವ ಸೌಮ್ಯೋಕ್ತಿ ಮಾತ್ರ. ಸಾರದಲ್ಲಿ ಅದು ಬಂಡವಾಳವಾದ ಮಾತ್ರ. ಅದರೆ ಅದು ಅತಿರೇಕದ ಬಂಡವಾಳವಾದ, ಮಿತಿಯಿಲ್ಲದ ಲಾಭದ ಹಿಂದೆ ಬಿದ್ದು ತನ್ನ ಸುಸ್ಥಿರತೆಯನ್ನೇ ಕಡೆಗಣಿಸುವ ಅತಿರೇಕ. ಬಂಡವಾಳಶಾಹಿಗಾದರೂ ದುಡಿಮೆಗಾರನಿಂದ 'ಹೆಚ್ಚುವರಿ ಮೌಲ್ಯ'ವನ್ನು ಸುಲಿಯುವ ವಿಷಯದಲ್ಲಿ ಒಂದು ಮಿತಿಯಿತ್ತು. ಏಕೆಂದರೆ ಅವನ ಸಂತತಿ ಹೆಚ್ಚು ಬೆಳೆದು ತನ್ನ ಉತ್ಪನ್ನಗಳನ್ನು ಕೊಳ್ಳುವ ಶಕ್ತಿಯನ್ನು ಅವನಲ್ಲಿ ಉಳಿಸಬೇಕಿತ್ತು. ಆದರೆ ಈ ಜಾಗತೀಕರಣವು ತಂತ್ರಜ್ಞಾನದ ಮತ್ತಿನಲ್ಲಿ, ಮಾನವ ಶ್ರಮವನ್ನು ಬೇಡದ ವಸ್ತುವಸ್ತುವನ್ನಾಗಿಸ ಹೊರಟಿದ್ದು ಶ್ರಮಿಕ ವರ್ಗದ ಅಳಿದುಳಿದಿದ್ದ ಎಲ್ಲವನ್ನೂ ಕಿತ್ತುಕೊಳ್ಳಲಾರಂಭಿಸಿದೆ. ಏಕೆಂದರೆ ಶ್ರಮಿಕರು ಮಾರುಕಟ್ಟೆಯಿಂದ ಬಹಿಷ್ಕೃತರಾಗಿದ್ದಾರೆ. ಅವರು ಭೂಮಿಯ ಮೇಲಿರುವ ಪ್ರಾಕೃತಿಕ ಸಂಪತ್ತನ್ನು ಕಬಳಿಸುತ್ತಿರುವ ಪರೋಪಜೀವಿ ಸಮುದಾಯವಾಗಿದ್ದು ಅದನ್ನು ಬಹುಬೇಗ ನಿವಾರಿಸಿಕೊಳ್ಳಬೇಕಿದೆ.



(ಎಡಪಂಥೀಯ ಚಿಂತಕರಾದ ಲೇಖಕರು ಗೋವಾ ವಿಶ್ವವಿದ್ಯಾಲಯದಲ್ಲಿ ಮ್ಯಾನೇಜ್‌ಮೆಂಟ್ ವಿಷಯದ ಪ್ರಾಧ್ಯಾಪಕರು)

ಕನ್ನಡಕ್ಕೆ: ಎಂ.ರಾಜು



'ನಿಧಾನಿಸಿ' ಅದಕ್ಕಿದು, ಇದು ಸಕಾಲ...

-ಪೆಗ್ಗಿ ಮೋಹನ್

ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಕರೋನಾ ಮತ್ತು ಅಭಿವೃದ್ಧಿ ಮಾದರಿಯ ಸಂಬಂಧ ಕುರಿತಂತೆ ಉಲ್ಲೇಖಿತವಾಗಿದ್ದ, ನಮ್ಮ ಪತ್ರಿಕೆಯ ೨೦೨೦ರ ಮೇ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಈ ಲೇಖನವನ್ನು ಹಲವು ಓದುಗರ, ವಿಶೇಷವಾಗಿ ನಮ್ಮ ಹೊಸ ಓದುಗರ ಕೋರಿಕೆಯ ಮೇರೆಗೆ ಇಲ್ಲಿ ಮರು ಮುದ್ರಿಸುತ್ತಿದ್ದೇವೆ. ಇದರ (ಮರು) ಓದು ಮುಂದಿನ ಪುಟಗಳಲ್ಲಿನ 'ಇನ್ನು ಸಾಕು ಈ ಅಭಿವೃದ್ಧಿ' ಶೀರ್ಷಿಕೆಯಡಿಯ ಲೇಖನಗಳ ಬಗ್ಗೆ ವಿಸ್ತಾರವಾಗಿ ಚಿಂತಿಸಲು ನೆರವಾಗಬಹದು.-ಸಂ,

ಒಂದು ಹಿತವಾದ ವಸಂತಕಾಲದ ದಿನ. ಅಕಾಲಿಕ ಮಳೆ, ಕಾಲ ನಿಶ್ಚಲವಾಗಿ ನಿಂತಿದೆ. ಚಳಿಗಾಲದಲ್ಲಿ ಸ್ಥಗಿತಗೊಂಡಿದ್ದ ತಲೆ ಮೇಲಿನ ಪಂಖಗಳು ನಿಧಾನವಾಗಿ ರೆಕ್ಕೆ ಬಿಚ್ಚಿಕೊಳ್ಳುತ್ತಿವೆ. ನಾವಾದರೋ ಗೃಹಬಂಧನದಲ್ಲಿದ್ದೇವೆ. ಕಿವಿಗಳನ್ನು ನಿಮಿರಿಸಿ ಅದರ ತಾರ್ಕಿಕ ಅಂತ್ಯವೊಂದರ ಸದ್ದಿಗಾಗಿ–ಅದು ಅಂತ್ಯಗೊಳ್ಳುವುದೇ ಆದರೆ–ಕಾಯುತ್ತಾ ಇದ್ದೇವೆ. ಈ ಕಾಲದ ಆಚೆಗಿನ ಲೋಕದಲ್ಲಿ, ನಾವೆಲ್ಲರೂ, 'ನಮ್ಮ ಹಿತಕ್ಕಾಗಿ' ಮನೆಯೊಳಗೆ ಕೂರಿಸಲ್ಪಟ್ಟಿರುವಾಗ, ಮನುಕುಲವೇ ನಿಲುಗಡೆ ಸೂಚಕ ಕೆಂಪು ದೀಪದ ಕಡೆಗೆ ಧಾವಿಸುತ್ತಿರುವಾಗ, ಇದ್ದಕ್ಕಿದ್ದಂತೆ ನಿರ್ಣಾಯಕ ಬದಲಾವಣೆಯ ಕ್ಷಣವೊಂದು ಧುತ್ತನೆ ಬಂದು ಬ್ರೇಕನ್ನು ತುಳಿಯುವ; ಈ ಹುಚ್ಚಾಟಕ್ಕೆ ಒಂದು ತಡೆ ಬಂದು, ಬಚಾವಾಗುವ ಅವಕಾಶವೊಂದು ಭೂಗ್ರಹಕ್ಕೆ ದೊರೆಯುವ ದೃಶ್ಯವನ್ನು ನಾನು ಬಹಳ ದಿನಗಳಿಂದಲೂ ಕಲ್ಪಿಸಿಕೊಳ್ಳುತ್ತಿದ್ದೇನೆ.

ಮುಕ್ತಾಯದ ಆಟ ಆರಂಭವಾಗುತ್ತಿರುವ ಸೂಚನೆಗಳು ಇದ್ದವು. ಅವನ್ನು ಗಮನಿಸುವಷ್ಟು ವ್ಯವಧಾನವಿದ್ದವರಿಗೆ, ಹವಾಮಾನ ವಿಜ್ಞಾನಿಗಳ ಎಚ್ಚರಿಕೆಗಳನ್ನು ಅರಿಯಲಾಗದವರಿಗೆ ತಿಳಿಹೇಳಬಲ್ಲ ಹದಿಹರೆಯದ ಕಾರ್ಯಕರ್ತರ ಪಡೆಯೊಂದೂ ನಿರ್ಮಾಣಗೊಂಡಿತ್ತು. ನಾವು ವೇಗವನ್ನು ಕಡಿತಗೊಳಿಸಬೇಕು, ಕೆಲವರನ್ನು ಅಸಾಧ್ಯ ಮತ್ತು ಅಸಹ್ಯಕರ ಶ್ರೀಮಂತರನ್ನಾಗಿಸಿ ನಮ್ಮ ಭೂಗ್ರಹವನ್ನೇ ನಿರ್ನಾಮ ಮಾಡುವಂತಹ ವ್ಯವಸ್ಥೆಯನ್ನು ತ್ಯಜಿಸಿ, ಹೊಸ ಜೀವನ ವಿಧಾನಗಳಿಗೆ ಬದಲಾಗಬೇಕು ಎಂಬುದನ್ನು ಹೇಳುವ ಸಾಕಷ್ಟು ಮುನ್ಸೂಚನೆಗಳಿದ್ದವು. ಆದರೆ ನಾವು ಒಂದು ಯಶಸ್ಸಿನ ಉನ್ಮಾದದ ದಾರಿಯಲ್ಲಿದ್ದೆವು, ಸೋಲಲು ತಯಾರಿಲ್ಲದ ಮಾರಣಾಂತಿಕ ಆಟದಲ್ಲಿ ತೊಡಗಿದ್ದೆವು. ಎದುರಿನಿಂದ ನುಗ್ಗಿ ಬರುತ್ತಿರುವ ಕಾರಿಗೆ ನೇರವಾಗಿ ನಮ್ಮ ಹೆಡ್‌ಲೈಟನ್ನು ತಿರುಗಿಸಿ ಆಕ್ಸಿಲರೇಟರನ್ನು ಪೂರ್ಣ ಒತ್ತಿದ್ದೆವು. ಎದುರಾಳಿಯು ಮೊದಲು ಜಾಗ ಬಿಟ್ಟುಕೊಡುತ್ತಾನೆ ನಾವು ಗೆಲ್ಲುತ್ತೇವೆ ಎಂದು ಭಾವಿಸಿದ್ದೆವು.

ಅಗತ್ಯವಿದ್ದ ಪೆಟ್ಟೊಂದನ್ನು ಕೊಡಬಲ್ಲ ಏಕೈಕ ವಸ್ತು ಕಣ್ಣು ಮಿಟುಕಿಸುವಷ್ಟರಲ್ಲಿ ಭಯಾನಕ ರೋಗವನ್ನು ತಂದೊಡ್ಡಬಲ್ಲ ಒಂದು ಸೂಕ್ಷ್ಮಾಣುವಾಗಿತ್ತು. ಏಕೆಂದರೆ, ಮನುಷ್ಯರು ತಮ್ಮಷ್ಟಕ್ಕೇ ಬಿಟ್ಟರೆ ಆಲಸ್ಯದಿಂದಾಗಿ, ಮೇಲಕ್ಕೆದ್ದು ಮಾಡಬೇಕಿರುವ ಕಾರ್ಯವನ್ನು ಮಾಡುವುದಿಲ್ಲ. ನಾವು ಸುಮ್ಮನೆ ಕಾಯುತ್ತಾ ಕುಳಿತರೆ ಈ ಕಾಯುವ ದೀರ್ಘ ಕಾಲದಲ್ಲಿ ಪ್ರಕೃತಿಯೇ ಎದ್ದು ಕ್ರಿಯಾಶೀಲವಾಗುತ್ತದೆ. ಕ್ಷಿಪ್ರವಾಗಿ ಯಾವ ನೆದರೂ ಇಲ್ಲದೆ ನಮ್ಮನ್ನು ನಿಷ್ಕರುಣೆಯಿಂದ ಚೆಲ್ಲಾಪಿಲ್ಲಿ ಮಾಡಿಬಿಡುತ್ತದೆ. ಆಗ ಸಾಮಾನ್ಯವಾಗಿ ತೊಂದರೆಗೆ ಒಳಗಾಗುವವರು ಬಡವರೇ. ಆದರೆ ಈ ಸಲ ಆಘಾತಕ್ಕೆ ಗುರಿಯಾಗಿರುವವರು ವಿಮಾನಗಳಲ್ಲಿ ತಿರುಗಾಡುವ ದೊಡ್ಡ ಬಳಕೆದಾರರು. ಈ ಹೊಸ ವೈರಸ್ ಜಗತ್ತಿನ ಅತಿ ದೊಡ್ಡ ಕೈಗಾರಿಕಾ ವ್ಯವಸ್ಥೆಯ ಕೇಂದ್ರದಲ್ಲೇ ಹುಟ್ಟಿ ವುಹಾನ್ ನಗರದ ಜೊತೆ ದೈನಂದಿನ ಸಂಪರ್ಕದಲ್ಲಿದ್ದ ಸ್ಥಳಗಳಿಗೆ ಹರಡಿತು. ಡೇವಿಡ್ ಕಮ್ಮೆನ್, ೨೦೧೨ರಲ್ಲಿ ಪ್ರಕಟವಾದ ತಮ್ಮ 'ತುಳುಕಿ ಚೆಲ್ಲಾಟ: ಪ್ರಾಣಿಗಳ ಸೋಂಕು ಮತ್ತು ಮುಂದಿನ ಮಾನವ ಸಾಂಕ್ರಾಮಿಕ ರೋಗ' (spillover: animal infections and the next human pandemic) ಎಂಬ ಪುಸ್ತಕದಲ್ಲಿ ಇಂತಹ ಸೂಕ್ಷ್ಮಾಣುವೊಂದು ಬರುವ ಸಾಧ್ಯತೆಯನ್ನು ಕಂಡಿದ್ದರು. ನಾವು ಶೀಘ್ರದಲ್ಲೇ ಒಂದು ವೈರಸ್‌ನೊಂದಿಗೆ ಸೆಣಸಬೇಕಾಗಬಹುದು ಮತ್ತು ಅದು ಬಹುತೇಕ ಒಂದು ಬಾವಲಿಯ ಮೂಲಕ ಬರುವುದು, ಅದರ ವಾಸಸ್ಥಾನವನ್ನು ನಾವು ನಾಶ ಮಾಡಿಬಿಟ್ಟಿದ್ದೇವೆ ಎಂದು ಅವರು ಖಚಿತವಾಗಿ ನುಡಿದಿದ್ದರು.

ಆದರೆ ಅದರೊಂದಿಗೆ ಬಂದಿರುವ ಭೀತಿಯಿಂದ ಮಿಕ್ಕೆಲ್ಲವೂ ಮರೆಯಾಗಿ ವೈರಸ್ ಮಾತ್ರವೇ ಗಮನಕ್ಕೆ ಒಳಗಾಗಿದೆ. ಚೀನಾ ಇಟಲಿ ಮತ್ತು ಈಗ ಇರಾನ್ (ಮತ್ತು ಅಮೆರಿಕಾ) ದೇಶಗಳು ಭಾರಿ ಪ್ರಮಾಣದ ಸಾವುಗಳಿಂದ ಹಾನಿಗೊಳಗಾಗಿವೆ, ಜಗತ್ತಿನಾದ್ಯಂತ ಜನರು ಏಕಾಂತಕ್ಕೆ ದೂಡಲ್ಪಟ್ಟಿದ್ದಾರೆ. ಇದರಿಂದ ಉಂಟಾಗಿರುವ ತಕ್ಷಣದ ಪರಿಣಾಮವೆಂದರೆ ಮಾನವರ ಎಂತಹ ಸಂಕಲ್ಪವೂ ಈವರೆಗೆ ಸಾಧಿಸಲಾಗದ ರೀತಿಯಲ್ಲಿ ವಾತಾವರಣದ ಮಾಲಿನ್ಯವು ತಾತ್ಕಾಲಿಕವಾಗಿಯಾದರೂ ತಡೆಹಿಡಿಯಲ್ಪಟ್ಟಿದೆ. ಚೀನಾದ ಕಲುಷಿತ ವಾತಾವರಣ ತುಸು ಸ್ವಚ್ಛಗೊಂಡಿದೆ. ವಸ್ತು ವಿನ್ಯಾಸಕಿ ಮತ್ತು ಮುನ್ಸೂಚನಾ ಶಾಸ್ತ್ರಜ್ಞೆ ಲಿ ಎಡೆಲ್ಕೂರ್ಟ್ ಈ ಕಾಲವನ್ನು 'ಬಳಕೆದಾರಿಕೆಯ ಕ್ವಾರಂಟೈನ್' ಎಂದು ಕರೆದಿದ್ದಾರೆ. ಆಕೆಯ ಅಂದಾಜಿನಂತೆ ಇದು ಹಿಂದೆಂದೂ ಕಂಡಿರದ ಪ್ರಮಾಣದ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುವುದು. ಇದು ಮನುಷ್ಯಕುಲ ತನ್ನ ಮೌಲ್ಯವ್ಯವಸ್ಥೆಯನ್ನು ಮರುರೂಪಿಸಿಕೊಳ್ಳುವಂತೆ ಮಾಡುವುದು. ಇರಬಹುದು; ಆದರೆ ನಾವೀಗ ನೋಡುತ್ತಿರುವುದು ವಿಭಿನ್ನ ಕಾರ್ಯಸೂಚಿಯ ಎರಡು ವಿರುದ್ಧ ಮುಖಗಳು ಮುಖಾಮುಖಿಯಾಗಿರುವುದನ್ನು: ಇದರಲ್ಲಿ ದೊಡ್ಡ ಪಕ್ಷ, ಶಸ್ತ್ರಸಜ್ಜಿತರೂ, ಹಣವುಳ್ಳವರೂ ಆಗಿದ್ದು ಇನ್ನೂ ಹೆಚ್ಚು ಬಲವಾಗಿ ನೆಲೆಯೂರಬಯಸುವವರದ್ದು ಮತ್ತು ಎರಡನೆಯದು ಇನ್ನೂ ತುಸು ಉತ್ತಮ ಪ್ರಪಂಚವನ್ನು ಬಯಸುವ, ರಕ್ಷಣೆಯಿಲ್ಲದ, ಅಸಂಘಟಿತ – ಸಾಮಾನ್ಯ ಜನರದ್ದು.

ನಾನು ಇದನ್ನು ಬರೆಯುತ್ತಿರುವ ಹೊತ್ತಿನಲ್ಲಿ ಆಗಬೇಕಾದದ್ದು ಅರ್ಧದಷ್ಟೆ ಆಗಿದೆ. ನಾವು ಈ ಸಾಂಕ್ರಾಮಿಕ ರೋಗವನ್ನು ಕಂಡು ವಾರಗಳೇ ಕಳೆದಿವೆ. ಆದರೂ ಚೀನಾದವರು ಇಟಾಲಿಯನ್ನರು ಇರಾನ್‌ನವರು ಅನುಭವಿಸಿದಂತಹ ವಿಪತ್ತನ್ನು ಭಾರತವಿನ್ನೂ ಕಂಡಿಲ್ಲ. ಪ್ರತಿದಿನವೂ ಭಯ ಹುಟ್ಟಿಸುವ ರೀತಿಯ ವರದಿಗಳು ಸೂಚಿಸುತ್ತಿರುವ ಮಟ್ಟದಲ್ಲಿ ಆಸ್ಪತ್ರೆಗಳಿಗೆ ಬರುವ ಜನರ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ. ಬಹುಶಃ ನಾವು ಅದೃಷ್ಟವಂತರಿರಬಹುದು, ನಾವದರಿಂದ ತಪ್ಪಿಸಿಕೊಳ್ಳಬಹುದು. ಆದರೆ ನಮಗೆ ಅದು ಖಚಿತವಾಗಿ ತಿಳಿಯುವವರೆಗೆ, ತನ್ನ ಆಗಮನಕ್ಕಾಗಿ ಸಮಯ ಕಾಯುತ್ತಿರುವ ಮತ್ತು ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಲೂಬಹುದಾದ ಒಂದು ಸುನಾಮಿಗಾಗಿ ನಾವು ತಯಾರಾಗುತ್ತಿದ್ದೇವೆನ್ನಬಹುದು.

ಯಾರಿಗೆ ಗೊತ್ತು, ನಾವು ಈಗಾಗಲೇ ಬಹು ಕಾಲದಿಂದ ಈ ವೈರಸ್ಸಿನ ಜೊತೆಗೇ ಬದುಕಿರಬಹುದು. ಭಾರತವು ಚೀನಾ ಇಟಲಿ ಅಥವಾ ಇತರೆ ಯೂರೋಪಿನ ವೈರಸ್ ಪೀಡಿತ ಯಾವುದೇ ದೇಶಗಳ ಜೊತೆ ಸಂಪರ್ಕವಿಲ್ಲದೇ ಬಹುಕಾಲವನ್ನೇನೂ ನಾವು ಕಳೆದಿಲ್ಲ. ನಮ್ಮಲ್ಲಿ ಹಲವರು ಜನವರಿ ಫೆಬ್ರವರಿ ತಿಂಗಳಲ್ಲಿ ೧೦ ದಿನಗಳ ಭಯಂಕರ ಫ್ಲೂನಿಂದ ಪೀಡಿತರಾದುದು ನಮ್ಮ ಜೀವನದ ಕೆಟ್ಟ ಬಹುಕೆಟ್ಟ ಕಾಲವೆನ್ನಬಹುದು. ಇದರಿಂದ ನಮ್ಮ ಹಿರಿಯ ವಯಸ್ಕ ಬಂಧುಗಳು ಎಷ್ಟೋ ಜನ ನ್ಯುಮೋನಿಯಾಕ್ಕೆ ತುತ್ತಾಗಿ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ಸೇರಬೇಕಾಯಿತು. ನಮ್ಮಲ್ಲಿ ಎಷ್ಟೋ ಜನಕ್ಕೆ ಈ ಖಾಯಿಲೆ ಬಂದೂ ಇರಬಹುದು. ಅದು ತಾನು ಯಾರು ಎಂಬುದನ್ನು ತೋರಿಸಿಕೊಳ್ಳದೆ ಹೋಗಿದ್ದರಿಂದ ನಾವು ಅದೊಂದು ಯಃಕಶ್ಚಿತ್ ಕ್ರಿಮಿ ಎಂದುಕೊಂಡಿರಬಹುದು. ಭಾರತದ ೧೩೦ ಕೋಟಿ ಜನಸಂಖ್ಯೆಯಲ್ಲಿ ಪ್ರತಿ ದಿನ ೨೫೦೦೦ ಜನ ಸಾಯುತ್ತಲೇ ಇರುತ್ತಾರೆ, ೧೦೦೦ ಕ್ಕೂ ಹೆಚ್ಚು ಜನ (೨೦೧೮ ರಲ್ಲಿ ೪ ಲಕ್ಷ) ಕ್ಷಯದಿಂದ ಸಾಯುತ್ತಾರೆ. ಕ್ಷಯಕ್ಕೆ ನಮ್ಮಲ್ಲಿ ಔಷಧಿ ಇದೆ, ಆದರೂ ಅದನ್ನು ನಿರ್ನಾಮ ಮಾಡಿಲ್ಲ. ಏಕೆಂದರೆ ಅದು ಬಾಧಿಸುವುದು ಬಡವರನ್ನು ಮಾತ್ರ. ಪ್ರತಿದಿನ ಇತರೆ ಒಂದು ಸಾವಿರ ಮಂದಿ ಭಾರತೀಯರು, ಇವರಲ್ಲಿ ಬಹುತೇಕ ಮಕ್ಕಳು, ಉಸಿರಾಟದ ತೊಂದರೆಯಿಂದ ಸಾವನ್ನಪ್ಪುತ್ತಿದ್ದಾರೆ ಮತ್ತು ಮಲೇರಿಯಾದಿಂದ ೫೦೦ ಜನ ಸಾವನ್ನಪ್ಪುತ್ತಿದ್ದಾರೆ.

ಆದರೆ ನಮ್ಮಲ್ಲಿ ಬಹಳಷ್ಟು ಜನ ಕೋವಿಡ್-೧೯ ನಂತಹ ಕೆಟ್ಟ ವೈರಸ್ ಸೋಂಕಿನಿಂದಲೂ ಬಚಾವಾಗುತ್ತೇವೆ. ನಮ್ಮ ಜೀವನಗಳಲ್ಲಿ ಇದನ್ನೊಂದು ಪ್ರಮುಖ ಮೈಲುಗಲ್ಲಾಗಿ ಪರಿಗಣಿಸಿ ನಮ್ಮ ಅನುಭವಗಳನ್ನು ದಾಖಲಿಸಲು ಬದುಕುಳಿಯುತ್ತೇವೆ.

ಆದರೂ ಹಿಂದೆಂದೂ ಕಾಣದಂತಹ ಭೀತಿ ಈಗ ಏಕೆ? ತಪ್ಪು ಮಾಡಿದ ಶಾಲಾ ಮಕ್ಕಳನ್ನು ಶಿಕ್ಷಿಸುವಂತೆ, ಕೈಯಲ್ಲಿ ಲಾಠಿ ಹಿಡಿದ ಪೊಲೀಸರು ಅದೃಷ್ಟಹೀನ ವಲಸೆ ಕೆಲಸಗಾರರನ್ನು ಕಪ್ಪೆಗಳ ಥರ ಕುಪ್ಪಳಿಸುತ್ತಾ ಓಡುವಂತೆ ಮಾಡುವ ದೃಶ್ಯಗಳು ಏಕೆ? ವಿದೇಶಗಳಲ್ಲಿ ಸಿಕ್ಕು ಹಾಕಿಕೊಂಡ ಭಾರತೀಯರನ್ನು ವಾಪಸ್ಸು ಕರೆತರುವುದರಲ್ಲಿ ಸರ್ಕಾರಗಳು ನಿರತರಾಗಿದ್ದಾಗ ಗಂಡಸರು, ಹೆಂಗಸರು, ಮಕ್ಕಳು ಹೆದ್ದಾರಿಗಳಲ್ಲಿ ತಮ್ಮ ಊರುಗಳಿಗೆ ತಲುಪುವುದಕ್ಕಾಗಿ ತಮ್ಮ ಬೊಬ್ಬೆಯೆದ್ದ ಕಾಲುಗಳಲ್ಲೇ ನಡೆಯುವಂತಾಗಿದ್ದು ಏಕೆ? ಒಂದು ರಾತ್ರಿ ವಾರ್ತಾಪ್ರಸಾರವೊಂದರಲ್ಲಿ ಇಡೀ ಪ್ರದೇಶವೊಂದರಲ್ಲಿ ಎಷ್ಟೋ ಜನ ಕ್ಯಾಮರಾವನ್ನು ದೃಷ್ಟಿಸುತ್ತಾ ಆಹಾರಕ್ಕಾಗಿ ಬೇಡುತ್ತಿದ್ದುದನ್ನು ತೋರಿಸಲಾಯಿತು. ಇದಕ್ಕೊಂದು ಕ್ರೂರ ವೈರುಧ್ಯವೆಂಬಂತೆ ಒಬ್ಬ ಶಾಸಕ ಕರ್ಫ್ಯೂ ನಿಯಮಗಳನ್ನು ಉಲ್ಲಂಘಿಸಿದವರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಬೇಕೆಂದು ಹೇಳುತ್ತಿದ್ದ ದೃಶ್ಯವೂ ಕಂಡುಬಂತು. ಗುಂಡಿಕ್ಕಿ ಕೊಲ್ಲಲಾಗದಿದ್ದರೆ ಕೊನೇ ಪಕ್ಷ ಅಂತಹವರ ಕಾಲುಗಳನ್ನಾದರೂ ಮುರಿದ ಪೊಲೀಸರಿಗೆ ಹಣದ ಬಹುಮಾನ ನೀಡುವುದಾಗಿ ಆತ ಹೇಳುತ್ತಿದ್ದ.

ಅಂದಿನ ಬೆಳಿಗ್ಗೆ ನಮ್ಮ ಮನೆಯ ಸುತ್ತಲ ರಸ್ತೆಗಳು ಬಹುಮಟ್ಟಿಗೆ

ನಿರ್ಜನವಾಗಿದ್ದವು, ಕೆಲವೇ ಕಾರುಗಳು ಸ್ಕೂಟರ್‌ಗಳು ಕೆಲವು ಸೈಕಲ್‌ಗಳು ಕಂಡವು. ಆದರೆ ನಡೆದು ಹೋಗುತ್ತಿದ್ದ ಒಬ್ಬರಾದರೂ ಕಾಣಲಿಲ್ಲ. ದೆಹಲಿಯ IIT ಕ್ಯಾಂಪಸ್ಸಿನ ಒಳಗೆ, ಗಸ್ತು ತಿರುಗುವ ಕಾವಲಿನವರ ಭಯವಿಲ್ಲದ ಸುರಕ್ಷಿತ ಸ್ಥಳದಲ್ಲೂ ಕೂಡ ಯಾರೂ ನಡೆದಾಡುತ್ತಿರಲಿಲ್ಲ. ಸದಾ ಅಲ್ಲಲ್ಲಿ ಕುಳಿತಿರುತ್ತಿದ್ದ ಜನರೂ ಕೂಡ ಕಾಣಲಿಲ್ಲ. ಮನೆಗಳ ಬಾಲ್ಕನಿಗಳಲ್ಲೂ ಜನ ಕಾಣುತ್ತಿರಲಿಲ್ಲ. ಒಂದು ಪ್ರಮುಖ ಕ್ಷಣದಲ್ಲಿ ನಮ್ಮ ದಾರಿಗಳನ್ನು ಹೇಗೆ ಬದಲಾಯಿಸಿಕೊಳ್ಳಬಹುದು, ಒಂದು ಜೀವನ ಕ್ರಮವಾಗಿ ಮತಿಹೀನ ಅಭಿವೃದ್ಧಿಯನ್ನು ತಡೆಯುವ ಬಗ್ಗೆ ಮತ್ತು ಅವಪ್ರಗತಿಯ (degrowth) ಕಡೆಗೆ ಸುಲಭವಾಗಿ ಬದಲಾಗುವ ಬಗ್ಗೆ ಯೋಚಿಸಬಹುದಾದ ಕಾಲದಲ್ಲಿ ನಾವು ಹೆಪ್ಪುಗಟ್ಟಿದ್ದೇವೆ. ಹಿಂದೆಂದಿಗಿಂತಲೂ ಹೆಚ್ಚಾಗಿ ಪರಸ್ಪರ ದೂರಾಗಿದ್ದೇವೆ. ಒಂದು ಮರುಚಿಂತನೆಯನ್ನು ಸಾಧ್ಯವಾಗಿಸಬಹುದಾಗಿದ್ದ, ಹೊಸ ಚಿಂತನೆಗಳ ಹುಟ್ಟಿನ ವಸಂತವೊಂದು ಪುನಃ ಪ್ರಾರಂಭಗೊಳ್ಳಲು ಅವಕಾಶವೊಂದನ್ನು ಸಾಧ್ಯಗೊಳಿಸಬಲ್ಲ, ಪ್ರಕೃತಿಯೇ ಕಲ್ಪಿಸಿರುವ ವೇಗದ ಈ ತಡೆಯು ಅವಕಾಶ ವ್ಯರ್ಥವಾಗಿ ಹೋಗಬಹುದೇನೋ..... ಜಗತ್ತು ಪುನಃ ತನ್ನ ಎಂದಿನ–ಹಿಂದಿನ–ವ್ಯವಹಾರದಲ್ಲಿ ತೊಡಗುತ್ತದೆ; ಅದೇ ಹಳೆಯ ಚಿಂತನೆ, ಅದೇ ಕೊನೆಗೊಂಡ ದಾರಿಯಲ್ಲೇ ಓಟ. ಜಾಗತಿಕ ಆರ್ಥಿಕತೆಗೆ ಏಟು ಬಿದ್ದಿರುವುದರಿಂದ ಅದೇ ಅವಪ್ರಗತಿ ಮುಂದುವರೆಯುತ್ತದೆ. ಆದರೆ ಬೆಳವಣಿಗೆಯ ಯಂತ್ರವು ಕೀಲೆಣ್ಣೆ ಹಚ್ಚಿಕೊಂಡು ಪುನಃ ಚಲಿಸಲಾರಂಭಿಸಿದರೂ ಕಳೆದುಹೋಗಿರುವ ಬಡಜನರ ಉದ್ಯೋಗಗಳು ಬಹುಶಃ ಮತ್ತೆ ಮರಳಲಾರವು.

ಈ ಸಂಕಷ್ಟವು ಕಥೆಯ ಅಂತ್ಯವಲ್ಲ, ಭವಿಷ್ಯಕ್ಕಾಗಿ ನಾವು ನಮ್ಮ ದಾರಿಯನ್ನು ಸರಿಪಡಿಸಿಕೊಳ್ಳಬೇಕಾದ ಗಂಭೀರ ಮುನ್ನೆಚ್ಚರಿಕೆ. ಏಕೆಂದರೆ ಜಗತ್ತು ಹೆಚ್ಚು ಸಂಪರ್ಕ ಪಡೆದಂತೆ ಮತ್ತು ವಾಸ್ತವ ನೆಲೆಯಿಂದ ದೂರಾದಂತೆಲ್ಲಾ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತವೆ. ಒಂದು ಕಾಲಕ್ಕೆ ಆಫ್ರಿಕಾದ ದಟ್ಟ ಕಾನನಗಳಲ್ಲಿ ಇದ್ದ ಎಬೋಲಾ ರೋಗಾಣುಗಳು ನಗರಗಳನ್ನು ತಲುಪಿದಾಗ ಒಂದು ಹೊಸ ವಿಪತ್ತಿನ ಹಂತವನ್ನು ತಲುಪುತ್ತವೆ. ಇದನ್ನೆಲ್ಲಾ ನಾವು ಒಂದೆರಡು ದಿನಗಳಲ್ಲಿ ಕಲಿಯಬೇಕೆಂಬುದು ಅತಿಯಾದ ನಿರೀಕ್ಷೆಯಾದೀತು. ಆದರೆ ನಾವೀಗ ಅಚ್ಚರಿಗಳು ಕಾದಿರುವ ಒಂದು ಹೊಸ ಜಗತ್ತಿನಲ್ಲಿದ್ದೇವೆ. ಹೊಸ ಕಾಲವೊಂದರ ಅನುಭವವನ್ನು ಪಡೆಯುತ್ತಾ ಮನೆಯೊಳಗೆ ಹೆಚ್ಚು ಕಾಲ ಕಳೆಯಬೇಕಿದೆ. ಆಗಲೇ ಕೊನೆಯಿಲ್ಲದ ಅಭಿವೃದ್ಧಿಯ ಮಾದರಿಗೆ ಕೊನೆ ಹಾಡಿ, ನಾವೀಗ ಸಂಪೂರ್ಣವಾಗಿ ಬೆಳೆದಿದ್ದೇವೆ, ನಾವೀಗ ಮಾಡಬೇಕಿರುವುದು ಬೆಳವಣಿಗೆಯನ್ನು ನಿಧಾನಗೊಳಿಸಿ ಸುಸ್ಥಿರತೆ ಸಾಧ್ಯವಾಗುವಂತೆ ಮಾಡುವುದು ಎಂಬ ಅರಿವಿಗೆ ಬರುವಂತಾಗುವುದು.



(ಮೂಲತಃ ಟ್ರಿನಿಡಾಡ್‌ನ ಭಾರತೀಯ ಸಂಜಾತೆಯಾದ ಲೇಖಕಿ, ಈಗ ದೆಹಲಿಯಲ್ಲಿ ವಾಸವಾಗಿರುವ ಭಾಷಾಶಾಸ್ತ್ರಜ್ಞೆ)

(ಕೃಪೆ: *ಔಟ್‌ಲುಕ್*, ೧೩ ಏಪ್ರಿಲ್, ೨೦೨೦

ಕನ್ನಡಕ್ಕೆ: ಎಂ ರಾಜು)

Regd. Newspaper RNI No.KARKAN/2012/47568 Rgd. No. KA/SMG-1209/2022-24

"ಹೊಸ ಮನುಷ್ಯ" ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

ಹಲ್‌ಕುಲ್ ಮುನಿಸ್ವಾಮಪ್ಪ ಮುನಿವೆಂಕಟಮ್ಮ ಧರ್ಮದತ್ತಿ (ರಿ)

- ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ
- ಶ್ರೀ ಶಾರದಾದೇವಿ ಪದವಿಪೂರ್ವ ಕಾಲೇಜು
- ಸ್ವಾಮಿ ವಿವೇಕಾನಂದ ಶೈಕ್ಷಣಿಕ ಅನುಸಂಧಾನ
- ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ, ಬೆಂಗಳೂರು
- ಮೆ|| ಎಂ. ಮುನಿಸ್ವಾಮಿ ಅಂಡ್ ಸನ್ಸ್, ಪ್ರಕಾಶಕರು ಮತ್ತು ವಿತರಕರು
- ಎಂ. ಚಂದ್ರಶೇಖರ್ ಪ್ರತಿಷ್ಠಾನ



ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 83